ಜನಪ್ರಿಯ
ಪುಸ್ತಕ ಮಾಲೆ

ಬಾಳಸಂಜೆಯ ಹಿನ್ನೋಟ

(ಆತ್ಮ ಚರಿತ್ರೆ)

ಡಾ|| ಸಿಂಪಿ ಲಿಂಗಣ್ಣ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಬಾಳಸಂಜೆಯ ಹಿನ್ನೋಟ

(ಆತ್ಮಚರಿತ್ರೆ)

ಡಾ। ಸಿಂಪಿ ಲಿಂಗಣ್ಣ

ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮

BALASANJEYA HINNOTA -An autobiography by Dr. Simpi Linganna, Published by Kannada Pustaka Pradhikara, Pampamahakavi Road, Chamarajapet, Bangalore - 560 018

First Impression: 1998
ಪ್ರಥಮ ಮುದ್ರಣ: ೧೯೯೮

No. of Copies: 1100
ಪ್ರತಿಗಳು: ೧೧೦೦

Pages: 360 + VIII
ಪುಟಗಳು: ೩೬೦ + VIII

Price: Rs. 80-00
ಬೆಲೆ: ೮೦.೦೦ ರೂ.

Cover Design: Chandrakant Pattan

Printed at:
Satyasri Printers Pvt. Ltd.
164, 5th Main, Chamarajpet
Bangalore - 560 018
Phone: 625736

ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರೀ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಆತ್ಮಾಕರ್ಷಕವೂ, ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನವೂ, ಬುದ್ಧಿ ಮನಸ್ಸುಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನಕಾರಿಯಾದ ಉತ್ತಮ ಜ್ಞಾನ ಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರಂಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯ ಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಯ್ಯ ಅವರಿಗೆ ಸಲ್ಲಬೇಕು. ಕನ್ನಡದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸ್ತುತ್ಯ ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸುತ್ತಿದ್ದ ಇಂಥ ಪ್ರಾಚೀನ ಹಾಗೂ ಆಧುನಿಕ ಜನಪ್ರಿಯ ಪುಸ್ತಕಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾಗಿರುವ ಹಾಗೂ ಬಹುಬೇಡಿಕೆಯ, ಸಾಹಿತ್ಯ ಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡಿರುವ ಕೃತಿಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕನ್ನಡ ಸಹೃದಯರಿಗೆ ನೀಡುವುದೇ ಈ 'ಜನಪ್ರಿಯ ಪುಸ್ತಕ ಮಾಲೆ'ಯ ಮುಖ್ಯೋದ್ದೇಶ.

ಈ ಮಾಲೆಯಲ್ಲಿ ಇದೀಗ ಶಿಕ್ಷಣ ಮತ್ತು ಕನ್ನಡ ಜಾನಪದ ಲೋಕದಲ್ಲಿ ಅತ್ಯಂತ ಪ್ರಾಮಾಣಿಕವೂ, ಅರ್ಪಣಾತ್ಮಕವೂ ಆದ ನಿಷ್ಠ ಸೇವೆಯನ್ನು ಸಲ್ಲಿಸಿ

ಖ್ಯಾತರಾದ ಹಿರಿಯ ಚೇತನ ದಿವಂಗತ ಶ್ರೀ ಸಿಂಪಿ ಲಿಂಗಣ್ಣ ಅವರ ಆತ್ಮಕಥೆ "ಬಾಳ ಸಂಜೆಯ ಹಿನ್ನೋಟ" ಪ್ರಕಟವಾಗುತ್ತಿದೆ. ದಟ್ಟ ಬಡತನದ, ಆದರೆ ಸುಸಂಸ್ಕೃತ, ಮುಗ್ಧ ಗ್ರಾಮೀಣ ಕುಟುಂಬದಲ್ಲಿ ಹುಟ್ಟಿದ ಲಿಂಗಣ್ಣನವರು ತಮ್ಮ ವಿದ್ಯಾರ್ಥಿ ಪ್ರೇಮ, ಸಾಹಿತ್ಯ ಮತ್ತು ಸಂಸ್ಕೃತಿಗಳ ಬಗೆಗಿನ ಅನನ್ಯ ಶ್ರದ್ಧೆ, ದಣಿವರಿಯದ ದುಡಿಮೆ, ಸರಳ ಸೌಜನ್ಯ ವಿದ್ವತ್ತಿನಿಂದ ಹಾಗೂ ವ್ಯಕ್ತಿತ್ವದಿಂದ ಸಾರಸ್ವತ ಲೋಕದ ಹಿರಿಯರ ಸ್ನೇಹ ಗೌರವಗಳಿಗೆ ಪಾತ್ರರಾದವರು. ವಿದ್ಯಾರ್ಥಿಗಳ ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಸಾಂಸ್ಕೃತಿಕ ಬುನಾದಿಯನ್ನು ಭದ್ರವಾಗಿ ಹಾಕಿದ ಸಿಂಪಿಯವರು ಆ ವೃತ್ತಿಗೆ ಹಿರಿಮೆ ಗರಿಮೆಗಳನ್ನು ತಂದುಕೊಟ್ಟವರು. ಶಿಕ್ಷಣ ಸೇವೆ ಮತ್ತು ಸಮಾಜ ಸೇವೆಗಳ ಜೊತೆ ಜೊತೆಗೆ ಅವರು ಮಾಡಿದ ಸಾಹಿತ್ಯ ಸೇವೆ ತುಂಬ ಮೌಲಿಕವಾದದ್ದು. ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಶ್ರೀಮಂತಿಕೆಯನ್ನು ಅದರೆಲ್ಲಾ ವೈಶಿಷ್ಟ್ಯಗಳೊಡನೆ ಕನ್ನಡ ಲೋಕಕ್ಕೆ ಪರಿಚಯಿಸಿದ ಮೊದಲಿಗರಲ್ಲಿ ಅವರು ಒಬ್ಬರು, ಮಾತ್ರವಲ್ಲ ಅಗ್ರಮಾನ್ಯರು. ಅವರುತಮ್ಮ ಸ್ನೇಹಿತರೊಡಗೂಡಿ ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಿದ ಜನಪದ ಗೀತ ಸಂಕಲನಗಳು ಇಂದಿಗೂ ಕನ್ನಡ ಜನಪದ ಕಾವ್ಯದ ಉಜ್ವಲ ರತ್ನಗಳಾಗಿವೆ. ಇದಲ್ಲದೆ ಜನಪದದ ಪ್ರಸಾರಕ್ಕೆ ತಮ್ಮ ಸಂಪೂರ್ಣ ಜೀವನವನ್ನು ಮುಡಿಪಾಗಿ ಇಟ್ಟವರು ಅವರು. ಹೀಗೆ ಹಲವು ಕ್ಷೇತ್ರಗಳಲ್ಲಿ ವಿಶಿಷ್ಟ ಹೆಜ್ಜೆ ಗುರುತುಗಳನ್ನು ಮೂಡಿಸಿದ ಸಿಂಪಿಯವರ ಆಕರ್ಷಕ ಮತ್ತು ಅನುಭವಶೀಲ ಆತ್ಮಕಥನ ಇದು. ಇದರ ಪುಟಗಳನ್ನು ತೆರೆಯುತ್ತ ಹೋದಂತೆ ಉತ್ತರ ಕರ್ನಾಟಕದ ಗ್ರಾಮೀಣ ಜನ ಜೀವನದ ಅನೇಕ ಸ್ತರದ ಮುಖಗಳು ಅತ್ಯಂತ ಸಹಜವಾಗಿ ಬಿಚ್ಚಿಕೊಳ್ಳುತ್ತವೆ. ಸಿಂಪಿಯವರಂತೆಯೇ ಸರಳವಾದ ಸರಾಗವಾದ ಶೈಲಿ ಈ ಆತ್ಮಕಥನಕ್ಕೆ ಅಕೃತಕತೆಯ ಚೌಕಟ್ಟನ್ನು ನಿರ್ಮಿಸಿದೆ. ಉತ್ತರ ಕರ್ನಾಟಕದ ಒಂದು ತಲೆಮಾರಿನ ಸಾಂಸ್ಕೃತಿಕವಾದ ಅನನ್ಯ ದಾಖಲೆ ಇಲ್ಲಿ ದೊರೆಯುತ್ತದೆ. ಇಂಥದೊಂದು ಕೃತಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಲು ಅವಕಾಶವಿತ್ತ ಪ್ರೊ. ವೀರೇಂದ್ರ ಸಿಂಪಿ ಅವರಿಗೆ ಮತ್ತು ಇದನ್ನು ಅಂದವಾಗಿ ಮುದ್ರಿಸಿಕೊಟ್ಟ ಸತ್ಯಶ್ರೀ ಪ್ರಿಂಟರ್ಸ್ ಮಾಲೀಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಪ್ರಾಧಿಕಾರ ಋಣಿಯಾಗಿದೆ. ಈ ಕಾರ್ಯದಲ್ಲಿ ನೆರವಾದ ಪ್ರಾಧಿಕಾರದ ಸನ್ಮಾನ್ಯ ಸದಸ್ಯರಿಗೆ ಕೃತಜ್ಞತೆಗಳು.

೧೯-೮-೧೯೯೮
ಬೆಂಗಳೂರು

ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ಪ್ರಸ್ತಾವನೆ

ನಮ್ಮ ತಂದೆ ಡಾ। ಸಿಂಪಿಲಿಂಗಣ್ಣನವರ ಆತ್ಮಕಥೆ 'ಬಾಳಸಂಜೆಯ ಹಿನ್ನೋಟ' ವೀಗ ಪ್ರಕಟವಾಗುತ್ತಿದೆ. 'ಬಾಳಸಂಜೆಯ ಹಿನ್ನೋಟ' ನಮ್ಮ ತಂದೆಯವರ ಕೊನೆಯ ಸಾಹಿತ್ಯಕೃತಿ. ತಮ್ಮ ಬಾಳಪುಟಗಳನ್ನೇ ಇಲ್ಲಿ ಓದುಗರಿಗಾಗಿ ತೆರೆದಿರಿಸಿದ್ದಾರೆ. ಒಂದು ದೃಷ್ಟಿಯಲ್ಲಿ ಈ ಗ್ರಂಥ ಅವರ ಜೀವನದ ಸಾಹಿತ್ಯದ ಸಾರಸಂಗ್ರಹವೇ ಆಗಿದೆ.

ನಮ್ಮ ತಂದೆಯವರ ಜೀವನ ಅತ್ಯಂತ ಕ್ರಿಯಾಶೀಲವಾದುದೆಂಬುದನ್ನು ಈ ಆತ್ಮಕಥೆ ಸ್ಪಷ್ಟಪಡಿಸುತ್ತದೆ (ಬಡತನದ ಪರಿಸರದಲ್ಲಿ ಹುಟ್ಟಿ ಬೆಳೆದು, ಬಾಲ್ಯದಲ್ಲಿಯೇ ತಾಯಿತಂದೆಗಳನ್ನು ಕಳೆದುಕೊಂಡು ಶಬ್ದಶಃ ಪರದೇಶಿಯಾಗಿ, ಅಣ್ಣ ಅತ್ತಿಗೆಯರ ಆಳಾಗಿ ಮನೆಯಲ್ಲಿ ಕಸಮುಸುರೆ ತೊಳೆದು, ನೀರುಹೊತ್ತು, ಸಂತೆಯಲ್ಲಿ ಧಾನ್ಯದ ದೊಡ್ಡ ದೊಡ್ಡ ಚೀಲಗಳನ್ನೂ ಹೊತ್ತು ಚಾಕರಿ ಮಾಡುತ್ತ ಬಾಲ್ಯಕಳೆದರು. ಇಂಥ ಬಡತನದ ದುಃಖದುಮ್ಮಾನದ ಪರಿಸರದ ಮಧ್ಯದಲ್ಲಿಯೂ ಒಂದು ನಿಶ್ಚಿತ ಗುರಿಯಿರಿಸಿಕೊಂಡು ಬಾಳಿದ ಅವರ ಜೀವನಕಥೆ ಇಂದಿಗೂ ಬಹಳಷ್ಟು ಓದುಗರಿಗೆ ಸ್ಫೂರ್ತಿಯ ಸೆಲೆಯಾಗಬಲ್ಲದು. ಪ್ರಾಮಾಣಿಕ ಜೀವನ ನಡೆಸಬೇಕೆನ್ನುವವರಿಗೆ ಒಂದು ಮಾದರಿಯೂ ಆಗಬಲ್ಲದು.

'ಶೂನ್ಯಾಂಶದಿಂದ ಮೇಲಕ್ಕೆ' ಎನ್ನುವದು ಅವರ ಆತ್ಮಕಥೆಯ ಪ್ರಮುಖ ಆಶಯವಾಗಿದೆ. ಉತ್ತರ ಕರ್ನಾಟಕದ ಚಡಚಣದಂತಹ ಒಂದು ಹಳ್ಳಿಯ, ಬಡನೇಕಾರ ಮನೆತನದಲ್ಲಿ ಹುಟ್ಟಿದ ಡಾ। ಸಿಂಪಿಲಿಂಗಣ್ಣನವರು ಸ್ವಸಾಮರ್ಥ್ಯದಿಂದ, ಸಂಕಲ್ಪ ಬಲದಿಂದ ಶ್ರೀ ಅರವಿಂದಾಶ್ರಮದ ಶ್ರೀಮಾತೆಯವರ ಆಶೀರ್ವಾದದಿಂದ ಒಂದೆಡೆ ಆದರ್ಶ ಶಿಕ್ಷಕರೆಂದು ರಾಷ್ಟ್ರಾಧ್ಯಕ್ಷರಿಂದ ಸನ್ಮಾನಿತರಾದಂತೆ, ಇನ್ನೊಂದೆಡೆ ನೂರು ಗ್ರಂಥಗಳ ಲೇಖಕರಾಗಿ, ಆರುಗ್ರಂಥಗಳಿಗೆ ಕರ್ನಾಟಕರಾಜ್ಯ ಸರಕಾರದ, ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದು ಕೊನೆಗೂ ಪ್ರಾಥಮಿಕ ಶಾಲಾ ಶಿಕ್ಷಕರಂಥ ವೃತ್ತಿಯಲ್ಲಿದ್ದೂ ಕೊಪ್ಪಳದಲ್ಲಿ ನಡೆದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಜನಮನವನ್ನು ಸೂರೆಗೊಂಡರು. ಆ ಸಾಹಸದ ಕಥೆಯನ್ನೂ 'ಬಾಳಸಂಜೆಯ ಹಿನ್ನೋಟ' ವಿನಮ್ರವಾಗಿ ಚಿತ್ರಿಸುತ್ತದೆ.

ಡಾ। ಸಿಂಪಿಲಿಂಗಣ್ಣನವರು ಬಡತನದಿಂದ ಬೆಂದುಹೋದರೂ ತಮ್ಮ ತಂದೆ, ಅಣ್ಣಂದಿರಿಂದ ಜನಪದ ಕಲೆ ಹಾಗೂ ರಸಿಕತನಗಳನ್ನು ಮಾತ್ರ ಬಳುವಳಿಯನ್ನಾಗಿ ಪಡೆದು ತಾವಿದ್ದ ಹಳ್ಳಿಯ ಸೀಮಿತ ಪರಿಸರದಲ್ಲಿಯೇ ಪ್ರಾಥಮಿಕ ಶಿಕ್ಷಣದವರೆಗಿನ ಅಲ್ಪ ಶಿಕ್ಷಣಹೊಂದಿ, ನಟರಾಗಿ, ನಾಟಕಕಾರಾಗಿ, ಹಾಸ್ಯ ವಿನೋದಗಳನ್ನು ಜೀವನ

ದಲ್ಲಿ ಅಳವಡಿಸಿಕೊಂಡು, ರಸಿಕರಾಗಿ, ಕುಣಿದು, ಹಾಡಿ ತಾರುಣ್ಯದಲ್ಲೇ ವಾಚನಾಲಯ ತೆರೆದು, ಜನರಲ್ಲಿ ಓದುವ ಅಭಿರುಚಿ ಹುಟ್ಟಿಸಿ, ಕೈಬರಹದ ಕಾವ್ಯಪತ್ರಿಕೆ ಪ್ರಾರಂಭಿಸಿ, ಮಧುರಚೆನ್ನ, ಕಾಪಸೆರೇವಪ್ಪ, ಪಿ. ಧೂಲಾರೊಂದಿಗೆ ಹಲಸಂಗಿಯಲ್ಲಿ ಗೆಳೆಯರ ಗುಂಪನ್ನೊಂದು ಕಟ್ಟಿ ನಾಡಹಬ್ಬ ಆಚರಿಸುತ್ತ, ಶ್ರೀ ರಾಮಕೃಷ್ಣಪರಮಹಂಸರ ಶತಮಾನೋತ್ಸವ ಹಮ್ಮಿಕೊಂಡು, ಶಿಕ್ಷಕವೃತ್ತಿಯಲ್ಲಿದ್ದು ರಾಷ್ಟ್ರಪ್ರೇಮ ಪ್ರಚೋದಿಸುವ ಲಾವಣಿ ಹಾಡುಗಳನ್ನು ಬರೆದು, ದೇಶಭಕ್ತರ ಕತೆಗಳನ್ನೂ ಪ್ರಕಟಿಸಿ ಕ್ರಮೇಣ ಶ್ರೀ ಅರವಿಂದ ಗ್ರಂಥಮಾಲೆಯ ಪ್ರಕಾಶಕರಾಗಿ ಉತ್ತಮ ಗ್ರಂಥಗಳನ್ನು ಪ್ರಕಟಿಸಿ ನಾಡಿಗೆ ಅರ್ಪಿಸಿದ ಧೀಮಂತರಾದರು. ತಮ್ಮ ಗೆಳೆಯರೊಂದಿಗೆ ಜನಪದ ಗೀತಗಳ ಸಂಗ್ರಹಮಾಡಿ, ವಿವೇಚನೆ ಮಾಡಿ ಕರ್ನಾಟಕದ ಜನಪದ ಸಾಹಿತ್ಯ ಸಂಗ್ರಾಹಕ ವಿಮರ್ಶಕರಲ್ಲಿಯೇ ಆದ್ಯರಲ್ಲಿ ಒಬ್ಬರೆನಿಸಿ ದರು. (ಶಿಕ್ಷಕರಾಗಿ ಲೇಖಕರಾಗಿ, ಭಾಷಣಕಾರರಾಗಿ, ಪ್ರಕಾಶಕರಾಗಿ ಶ್ರೀ ಅರವಿಂದರ ಅನುಯಾಯಿಗಳಾಗಿ ತಮ್ಮ ಬಹುಮುಖ ಪ್ರತಿಭೆಯನ್ನು ಮೆರೆದರು) ಅವರ ಜೀವನದ ಎಲ್ಲ ವಿವರಗಳೂ ಇಲ್ಲಿ ವಸ್ತುನಿಷ್ಠವಾಗಿ ಮೂಡಿವೆ.

ಡಾ। ಸಿಂಪಿಲಿಂಗಣ್ಣನವರ ಜೀವನದೊಂದಿಗೆ ಈ ಶತಮಾನದ ಪ್ರಾರಂಭದ ಉತ್ತರ ಕರ್ನಾಟಕದ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಜೀವನದ ಒಳನೋಟಗಳೂ ಇಲ್ಲಿ ಒಡಮೂಡಿವೆ. ಧಾರವಾಡದ ಗೆಳೆಯರ ಗುಂಪಿನ, ಹಲಸಂಗಿ ಗೆಳೆಯರ ಗುಂಪಿನ ಇತಿಹಾಸದ ಒಂದು ನೋಟವೂ ಇಲ್ಲಿ ದೊರೆಯುತ್ತದೆ. ಅಚ್ಚಗನ್ನಡ ಶೈಲಿಯ ಸುಭಗತೆಯೂ ಈ ಆತ್ಮಕತೆಯಲ್ಲಿ ಮೂಡಿದೆ. ಅದರಂತೆ ಅಂದು ಪ್ರಚಲಿತವಿದ್ದು, ಇಂದು ಮರೆಯಾದ ಹಳ್ಳಿಯ ಹಲವಾರು ವೃತ್ತಿಗಳ ವಿವರಗಳೊಂದಿಗೆ ಆ ವೃತ್ತಿಗಳಿಗೆ ಸಂಬಂಧಿಸಿದ ಅಪರೂಪದ ಸುಂದರ ಪದಗಳ ಸಾಲೇ ಇಲ್ಲಿ ಕಂಗೊಳಿಸುತ್ತದೆ.

ಈ ಗ್ರಂಥವನ್ನು ತುಂಬ ಪ್ರೀತಿಯಿಂದ ಪ್ರಕಟಿಸಲು ಮುಂದೆ ಬಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ಲೀಲಾದೇವಿ ಪ್ರಸಾದ್ ಅವರಿಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ನೆಲಮನೆ ದೇವೇಗೌಡರಿಗೂ, ಪ್ರಾಧಿಕಾರದ ಇನ್ನಿತರ ಸದಸ್ಯರಿಗೂ ನನ್ನ ಕೃತಜ್ಞತೆಗಳನ್ನೂ ಸಲ್ಲಿಸುತ್ತೇನೆ.

೭.೧.೧೯೯೮ ವೀರೇಂದ್ರ ಸಿಂಪಿ

ಪರಿವಿಡಿ

ವಿಷಯ ಪ್ರವೇಶ

"ಅರವಿಂದನಾಭನ ಪಾದಾರವಿಂದಕೆ ಹಸ್ತಾರವಿಂದವು ಬಾಗುತಿರೆ।
ನಯನಾರವಿಂದವು ಮುಚ್ಚಿಕೊಂಡಿರುವಾಗ ಹೃದಯಾರವಿಂದವು ಅರಳಿಲಿರೆ॥
ಆಸ್ಯಾರವಿಂದವು ನಲಿವನು ಸೂಸುವ ತೆರ ನಿನಗೆ ಸೂಸಲಿ ಮಂಗಲವು।
ಎಂದಿತು ಅರವಿಂದ ಪದಬೃಂಗ ಅರುವಿಂದು ಅರವಿಂದ
ಮಯವಾದ ಮಾನಸವು॥"

ಹೈದ್ರಾಬಾದ ಕರ್ನಾಟಕಕ್ಕೆ ಸೇರಿದ ದಂಡಾವತಿ (ದಂಡೋತಿ) ಗ್ರಾಮದಿಂದ, ಒಂದು ನಾಗಲಿಕ ಮನೆತನವು ಅದಾವುದೋ ಕಾರಣದಿಂದಲೋ ಕಂಬಿಕಿತ್ತಿ ಶಹಾಬಾದ ಗ್ರಾಮಕ್ಕೆ ಬಂದು ನೆಲೆಸಿತು. ಆದರೆ ಅಲ್ಲಿಯೂ ಸ್ಥಿರಗೊಳ್ಳದೆ ಚಡಚಣ ಗ್ರಾಮವನ್ನು ಹುಡುಕಿಕೊಂಡು ಬಂದು ಬೀಡುಬಿಟ್ಟಿತೆಂದು ಹೇಳಲಾಗುತ್ತದೆ. ಆ ಸಮಾಜವು ಶಂಕರದಾಸಿಮಯ್ಯ ಪರಂಪರೆಯ ಸೂಜಿ ಕಾಯಕ ನಿರ್ವಹಿಸುತ್ತಿದ್ದುದರಿಂದ ಅದಕ್ಕೆ ಸಿಂಪಿ ಎಂಬ ಅಡ್ಡ ಹೆಸರು ಬಂದಿತು.

ಚಡಚಣದ ವಾತಾವರಣವು ಸಿಂಪಿ ಮನೆತನಕ್ಕೆ ಬೇರೊಂದು ಉದ್ಯೋಗವು ಆಕರ್ಷಿಸುವಂತೆ ಮಾಡಿತು. ಆ ಉದ್ಯೋಗವೆಂದರೆ ನೂಲಿಗೆ ಬಣ್ಣಹಾಕುವುದು. ಅದರಿಂದ ಕಾರ್ಯಕ್ಷೇತ್ರವು ವಿಸ್ತಾರಗೊಂಡಿತು. ಅಂದಿನ ಕಾಲದಲ್ಲಿ ಸಂತೆಯ ದಿವಸ ಮಾರಾಟಕ್ಕೆ ಬಂದ ನೂಲಿನ ಕುಕ್ಕುಡಿಗಳನ್ನು ಖರೀದಿಸುವುದು, ಸೀಳು ಹಾಕಿಸುವುದು, ಬಳಿಕ ಬಣ್ಣಕ್ಕೆ ಅಣಿಗೊಳಿಸುವುದು, ತರ್ವಾಯ ಬಣ್ಣ ಹಾಕುವುದು - ಈ ಎಲ್ಲ ವಿಧಾನಗಳು ಮುಗಿದಮೇಲೆ

ಆ ನೂಲನ್ನು ಸ್ಥಳೀಯ ನೇಕಾರರಿಗೆ ಮಾರುವುದಲ್ಲದೆ, ದೂರಿನ ಮೋರಟಗಿ, ಶಹಾಪುರ, ಗೋಗಿ ಮುಂತಾದ ಸ್ಥಳಗಳಿಗೆ ಒಯ್ದು ಮಾರುವುದು.

ಈ ಎಲ್ಲ ಕಾರ್ಯವೈವಿಧ್ಯಗಳನ್ನು ನಿರ್ವಹಿಸುವುದಕ್ಕೆ ಆ ಮನೆತನವು ಹಲವಾರು ಮನೆಗಳನ್ನು ಕಟ್ಟಿಕೊಂಡಿತು. ನೂಲನ್ನು ಬಣ್ಣಕ್ಕೆ ಹದಗೊಳಿಸಲು ಸುಗಮವಾಗುವುದಕ್ಕೆ ಊರ ಮುಂದಿನ ದೊಡ್ಡ ಹಳ್ಳದ ಆಚೆಯ ತೀರದಲ್ಲಿ ಪಡಂಗಗಳನ್ನು ಕಟ್ಟಿಕೊಂಡಿತು. ಬದಿಯ ದೊಡ್ಡದೊಡ್ಡ ರಂಜಣಿಗಳನ್ನು ಹುಗಿದು ನಿಲ್ಲಿಸಿಕೊಂಡಿತು. ತಮ್ಮ ಮನೆಗಳಲ್ಲಿ ನಾಲ್ಕಾರು ಕಡೆಗೆ ಖಡೇ ಕಟ್ಟಿಗಳನ್ನು ನಿರ್ಮಿಸಿಕೊಂಡಿತು. ಅಲ್ಲಿ ನೂಲಿಗೆ ಬಣ್ಣ ಹಾಕಿ ರಂಜಣಿಗೆಗಳಲ್ಲಿ ನೆನೆಯಿಟ್ಟು ೩-೪ ದಿನಗಳ ತರುವಾಯ ಅದಕ್ಕಾಗಿ ಸಿದ್ಧಗೊಳಿಸಿದ ಒಲೆಯ ಮೇಲಿನ ಕಡಾಯಿಯಲ್ಲಿ ಕುದಿಸಿ, ಮರುದಿನ ಹಳ್ಳದಲ್ಲಿ ಹರಹಿನಿಂತ ಉಸುಕಿನ ಹಾಸಿಗೆಯ ಮೇಲೆ ಒಣಗಿಸಿಕೊಂಡು, ಅಚ್ಚುಕಟ್ಟಾಗಿ ಗಂಟುಕಟ್ಟಿದರೆ, ವ್ಯಾಪಾರಕ್ಕೆ ಅಣಿಗೊಂಡಂತಾಯಿತು.

ನೂಲಿನ ಗಂಟುಗಳನ್ನು ಹೊರುವ ಕೆಲಸಕ್ಕಾಗಿ ಆನೆಯೆತ್ತರದ ಕೋಣಗಳನ್ನು ಕಟ್ಟಬೇಕಾಯಿತು. ನೂಲ ಹೊತ್ತ ಕೋಣಗಳು ಅಗಸೆಯಲ್ಲಿ ಹಾಯುವುದೇ ಒಂದು ಬಿಕ್ಕಟ್ಟು. ಅದಕ್ಕೆ ಕೋಣಹೊತ್ತ ನೂಲು ಗಂಟುಗಳ ಎತ್ತರವೇ ಕಾರಣ. ಅಂಥ ಮೂರುನಾಲ್ಕು ಕೋಣಗಳು ಒಜ್ಜೆ ಹೊತ್ತು ನೂರಾರು ಹರದಾರಿ ನಡೆದು ದೂರಿನ ಸ್ಥಳಕ್ಕೆ ಹೋಗಬೇಕಾಗುತ್ತಿತ್ತು. ಅಲ್ಲಿ ವ್ಯಾಪಾರ ಮುಗಿಸಿಕೊಂಡು ಮರಳಿ ಬರುವುದಕ್ಕೆ ನಾಲ್ಕಾರು ವಾರಗಳೇ ಬೇಕಾಗುತ್ತಿದ್ದವು.

ಮನೆತನದ ತರುಣರು-ಯುವಕರು, ಸಂಬಳದ ನೌಕರರು ಆ ಕೆಲಸವನ್ನು ನಿರ್ವಹಿಸುತ್ತಿದ್ದರು. ಕೆಲವರು ವ್ಯಾಪಾರ ವಿಭಾಗದಲ್ಲಿ, ಹಲವರು ಬಣ್ಣ ಹಾಕುವ ವಿಭಾಗದಲ್ಲಿ ತೊಡಗುತ್ತಿದ್ದರು. ಈ ಎಲ್ಲ ಕೆಲಸಗಳು ಸುಗಮಗೊಳ್ಳುವುದಕ್ಕೆ ನಾಲ್ಕಾರು ಜನರು ಮೇಲ್ವಿಚಾರಕರಾಗಿ ನಿಲ್ಲಬೇಕಾಗುತ್ತಿತ್ತು.

ಮನೆಕೆಲಸ ನೋಡಿಕೊಂಡು ಹೆಣ್ಣುಮಕ್ಕಳು ಸೀಳು ಹಾಕುವುದು, ಅಣಿಕಟ್ಟುವುದು, ನೀರುಹೊತ್ತು ತಂದು ಲಂದೆ ಎಂಬ ಮಣ್ಣಿನ ಪಾತ್ರೆಗಳಲ್ಲಿ ತುಂಬುವುದು, ಕಸುಬೆಯ ಹಿಂಡಿಯನ್ನು ಒಡೆದು ಬುಕುಣಿ ಮಾಡಿ ಬುಟ್ಟಿಗಳಲ್ಲಿ ತುಂಬಿ ಕೋಣಗಳ ಮುಂದಿಡುವುದು, ಮೊದಲಾದ ಕಾಯಕಗಳಲ್ಲಿ ನಿರತರಾದ ಈ ಜನರಿಗೆ ಹೊತ್ತು ಹೋದದ್ದೇ ತಿಳಿಯುತ್ತಿರಲಿಲ್ಲ.

ಸಿಂಪಿ ಅವರ ಮನೆತನವು ಕಟ್ಟಿಕೊಂಡ ಹಲವಾರು ಮನೆಗಳ ಹೆಸರು ಹೇಳಿದರೆ ಅಚ್ಚರಿಯಾಗುವುದು -

ಹಳೆಮನೆ, ಹೊಸಮನೆ, ಹಾದೀಮನೆ, ಭಾವೀಮನೆ, ಕಡೆಕಟ್ಟೆಯ ಮನೆ ಇತ್ಯಾದಿ.

ಆ ಭರಾಟೆಯ ಕಾಲ ಸರಿದು ನೂರಿನ್ನೂರು ವರ್ಷಗಳಾಗಿದ್ದರೂ ಒಂದೊಂದು ಮನೆಯಲ್ಲಿರುವ ಕೋಣೆ, ಮಾಡ, ಅಂಗಳಗಳಿಗೆ ಇದ್ದ ಅಂದಿನ ಹೆಸರುಗಳೇ ಇಂದಿಗೂ ಉಳಿದು ಬಂದಿವೆ. ಹೇಗೆಂದರೆ -

ಬಣ್ಣದ (ರಾಡಿಯ) ಕೋಣೆ, ಹಿಂಡೀ ಮಾಡ, ದೀಪಹಚ್ಚುವ ಮಾಡ (ಕೋಣನ) ಮುಟ್ಟಿಡುವ ಕಟ್ಟೆ, ಹಣತಿಯ ಗೊಬ್ಬಿ ಇತ್ಯಾದಿ.

ಸಿಂಪಿ ಮನೆತನದ ಮಹಾಮನೆಗೆ ಹಲವಾರು ಟಿಸಿಲುಗಳು ಕಾಣಿಸಿಕೊಂಡು ಚಾಚಿನಿಂತವು. ಅಂಥ ಒಂದು ಟಿಸಿಲು ಮನೆತನದಲ್ಲಿ ಕಾಶಪ್ಪನೆಂಬುವನು ಖ್ಯಾತನಾಗಿದ್ದನು. ಅವನ ಮಗ ನಾಗಪ್ಪ, ನಾಗಪ್ಪನ ಮಗ ಶಿವಯೋಗಿ, ಶಿವಯೋಗಿಯ ಹೊಟ್ಟೆಯಲ್ಲಿ ಹುಟ್ಟಿಬಂದ ಇಬ್ಬರು ಮಕ್ಕಳ ಹೆಸರು ಕ್ರಮವಾಗಿ ಈರಪ್ಪ, ನಾಗಪ್ಪ. ಒಬ್ಬ ಹೆಣ್ಣು ಮಗಳೂ ಹುಟ್ಟಿದ್ದಳು. ಆದರೆ ಪ್ರಾಯಕ್ಕೆ ಬರುವಷ್ಟರಲ್ಲಿ ತೀರಿಕೊಂಡಳು.

ಆ ಕಾಶಪ್ಪನ ಮಗ ನಾಗಪ್ಪ, ಆ ನಾಗಪ್ಪನ ಮಗ ಶಿವಯೋಗಿ, ಆ ಶಿವಯೋಗಿಯ ಮಗ ಈರಪ್ಪ ಇವರಿಗೆಲ್ಲ ಸಿಂಪಿ ಎಂಬ ಅಡ್ಡ ಹೆಸರು ಇದ್ದರೂ, ವ್ಯಕ್ತಿ ಪ್ರಭಾವದಿಂದ 'ಕಾಶಪ್ಪಗೋಳ' ಎಂಬುದೇ ಅಡ್ಡ ಹೆಸರಿನ

ಕೆಲಸ ನಿಸ್ತರಿಸುತ್ತಿತ್ತು, ನಾಗಪ್ಪ ಕಾಶಪ್ಪಗೋಳ ಶಿವಯೋಗಿ ಕಾಶಪ್ಪಗೋಳ ಈರಪ್ಪ ಕಾಶಪ್ಪಗೋಳ - ಎಂಬುದಾಗಿ.

ದಿನಬಳಕೆಯಲ್ಲಿ ಅಡ್ಡ ಹೆಸರಾಗಿ ಕಾಶಪ್ಪಗೋಳ ಉಳಿಯಿತಲ್ಲದೆ ಸಿಂಪಿ ಎನ್ನುವುದು ಹಿಂಬದಿಗೆ ಸರಿಯಿತು.

ನೂಲಿಗೆ ಬಣ್ಣ ಹಾಕುವ ಒಂದು ಮಹಾ ಮನೆತನವು ಒಡೆದು ಹಲವಾರು ಚಿಕ್ಕಪುಟ್ಟ ಮನೆತನಗಳಾಗಿ ನಿಂತವು. ಹಾದಿಮನೆ, ಹೊಸಮನೆ, ಹಳೆಮನೆ, ಭಾವೀಮನೆಗಳಲ್ಲಿ ನಿಂತವರಿಗೆ ಕ್ರಮವಾಗಿ ಹಾದಿಮನೆ, ಹೊಸಮನೆ, ಹಳೆಮನೆ, ಭಾವಿಮನೆ ಅಡ್ಡಹೆಸರುಗಳಾದವು. ಆದರೆ ಅವರೆಲ್ಲರೂ ಸಿಂಪಿಯವರೇ ಆಗಿದ್ದರು. ಆದರೆ ಅವರಿಗೆಲ್ಲ ನೂಲಿಗೆ ಬಣ್ಣ ಹಾಕುವ ದುಡಿಮೆಯೇ ಉದ್ಯೋಗವಾಯಿತು. ಸೂಜಿಕಾಯಕವು ಸಿಂಪಿ ಎಂಬ ಅಡ್ಡಹೆಸರು ನೀಡಿದಂತೆ ನೂಲಿಗೆ ಬಣ್ಣ ಹಾಕುವ ಕಾಯಕವು ಅವರಿಗೆ ಬಣಗಾರ ಎಂಬ ಅಡ್ಡಹೆಸರು ನೀಡಿತು.

ಉದರಪೋಷಣೆಗೆ ಬಣ್ಣಗಾರಿಕೆ ದಾರಿಯಾದಂತೆ, ಮನರಂಜನೆ ಹಾಗೂ ಸಾರ್ವಜನಿಕ ಜೀವನದ ಹವ್ಯಾಸವಾಗಿ ಬಯಲಾಟ, ಕರಡಿ ಮಜಲು, ಇವು ತರುಣರಲ್ಲಿ ಮೊಳೆದವು. ಭಜನೆ ಮಾಡುವ ಒಲವು ಇಳಿವಯಸ್ಸಿನವರಲ್ಲಿ ಮೊಗದೋರಿತು. ಕಾಯಕ ಮತ್ತು ಹವ್ಯಾಸ ಇವು ಶ್ರೀಮಂತಿಕೆಯನ್ನು ತಂದುಕೊಂಡಿದ್ದರೂ ಸಮಾಧಾನ ಹಾಗೂ ಆನಂದಗಳನ್ನು ಮಾತ್ರ ಧಾರಾಳವಾಗಿ ಒದಗಿಸಿದ್ದೇನೂ ಸುಳ್ಳಲ್ಲ.

ಕಾಶಪ್ಪನ ಮಗ ನಾಗಪ್ಪ ಮತ್ತು ಅವನ ಹೆಂಡತಿ ದಾನಮ್ಮ ಎಂಬ ದಂಪತಿಗಳ ಹೊಟ್ಟೆಯಲ್ಲಿ ಶಿವಯೋಗಿ ಜನ್ಮ ತಳೆದದ್ದು ೧೮೭೦ರ ಸುಮಾರಿಗೆ. ಆತನ ಮದುವೆ, ವಿಜಾಪುರದ ಜೋರಾಪುರ ಪೇಟೆಯಲ್ಲಿರುವ ಗಿಡವೀರ ಎಂಬ ಮನೆತನದ ಗುರುಪಾದಪ್ಪ-ದಾನವ್ವ ದಂಪತಿಗಳ ಮಗಳಾಗಿ ಹುಟ್ಟಿದ ಸಾವಿತ್ರಿ ಎಂಬ ಕನ್ಯೆಯೊಡನೆ ಜರುಗಿತು. ಆ ಸಾವಿತ್ರಿಯ ಚೊಚ್ಚಿಲ ಮಗನೇ ಈರಪ್ಪ. ಮರುಚಲ ಹೆರಿಗೆಯಲ್ಲಿ ಹುಟ್ಟಿದ ಹೆಣ್ಣು ಹತ್ತೆಂಟು ವರುಷ ಬದುಕಿ ತೀರಿಕೊಂಡಿದ್ದಕ್ಕೆ ಸಾವಿತ್ರಿ ಬಹುದುಃಖಿತಳಾದಳೆಂದು ತಿಳಿಯುತ್ತದೆ.

ಮೂರನೇ ಹೆರಿಗೆಯಲ್ಲಿ ಜನ್ಮ ತಳೆದ ಶಿಶುವಿಗೆ ಅಜ್ಜನ ಹೆಸರು ಅಂದರೆ ನಾಗಪ್ಪ ಎಂಬ ಹೆಸರು ಇಡಲಾಯಿತು. ನಾಗಪ್ಪ ಹುಟ್ಟಿ ಬಂದು ತಾಯಿಯ ದುಃಖವನ್ನು ಮಾಣಿಸಿದನಂತೆ. ಆ ಬಳಿಕ ಎರಡು ವರುಷ ತುಂಬುವಷ್ಟರಲ್ಲಿ ಹುಟ್ಟಿದ ಹೆಣ್ಣು ಕೂಸು ತಾನೂ ಗತಿಸಿ, ತಾಯಿಯನ್ನೂ ಕರೆದೊಯ್ಯಿತು. ಹೀಗೆ ಶಿವಯೋಗಿಗೆ ಇಬ್ಬರು ಗಂಡು ಮಕ್ಕಳು ಮಾತ್ರ. ಅವರೇ ಈರಪ್ಪ ಮತ್ತು ನಾಗಪ್ಪ.

ಹೀಗಾಗಿ ಆ ಮನೆತನವೆಂದರೆ ಶಿವಯೋಗಿ ಹಾಗೂ ಆತನ ಇಬ್ಬರು ಮಕ್ಕಳು; ಮತ್ತು ಆತನ ಮುಪ್ಪಿನ ತಾಯಿ ದಾನವ್ವ. ಆವಾಗ ೨ನೇ ಮಗು ನಾಗಪ್ಪನಿಗೆ ಇನ್ನೂ ಎರಡು ವರುಷ ತುಂಬಿರಲಿಲ್ಲ.

ನಾಗಪ್ಪನೆಂದರೆ ಅಂಬಲ ಮೈಕಟ್ಟಿನ ಚುರುಕು ಬುದ್ಧಿಯ ಕೂಸು. ಕಸೂತಿ ಬಿಡಿಸಿದ ಕರಿಯಂಗಿ ಮೈಯಲ್ಲಿ. ತಲೆ ತುಂಬ ಜಾವುಳ. ನೋಡಿದ ಹೆಣ್ಣುಮಕ್ಕಳಿಗೆ ಬಸುರಿನ ಬಯಕೆ ಹತ್ತಬೇಕು!

ಸಾವಿತ್ರಿ ತಾಯಿಯು ೪ನೇ ಹೆರಿಗೆಯ ಕಾಲಕ್ಕೆ ಬಾಣಂತಿಯಾಗಿದ್ದಾಗ ಕೈಕಾಲಿಗೆಂದು ಕಂಬಳಿ ಮುಸುಕಿನಲ್ಲಿ ದಡ್ಡಿಗೆ ಹೋಗಿ ಬರುವಾಗ, ನಾಗಪ್ಪ ಮಾಳಿಗೆಯೇರುವ ಪಾವಟಿಗೆಗಳನ್ನು ಹತ್ತುತ್ತ ಮಣ್ಣು ಬಳೆಯುವ ಆಟ ಆಡುತ್ತಿದ್ದುದನ್ನು ಕಂಡು, ತಾಯಿ ಒಂದರೆ ನಿಮಿಷ ನಿಂತು, ಅವನನ್ನು ಮಾತಾಡಿಸಿದಳಂತೆ. ಆಗ ಹೊರಳಿ ನೋಡಿದಾಗ, ನಾಗನಿಗೆ ತಾಯಿಯ ಮುಖ ಕಾಣಿಸಿತು. ಅದು ನಗು ಮುಖವೂ ಆಗಿತ್ತು, ತಾನೂ ನಕ್ಕನು. ತಾಯ ಪರಿಚಯದ ಇಷ್ಟು ನೆನಪು ಮಾತ್ರ ಅವನಿಗೆ ಉಳಿಯಿತು.

ಒಮ್ಮೆ ನಾಗನನ್ನು ಎತ್ತಿಕೊಂಡು ಬಾಣಂತಿ ಕೋಣೆಗೆ ಹೋಗಿ ಅದೇ ಹುಟ್ಟಿದ ಆತನ ತಂಗಿಯನ್ನು ತೋರಿಸಿದ್ದುಂಟು. ತಂಗಿ ಬಹಳ ಚಿಕ್ಕದಿತ್ತೆಂದು ಹೇಳುವ ಮಟ್ಟಿಗೆ ಮಾತ್ರ ಆ ವಿಷಯ ನೆನಪಾಗಿ ಅವನಲ್ಲಿ ಉಳಿಯಿತು.

ಶಿವಯೋಗಿಯ ತಾಯಿ ದಾನವ್ವ, ಮಗು ನಾಗನಿಗೆ ನಾಗಲಿಂಗ ಎಂದು ಕರೆಯುತ್ತಿದ್ದಳು. ಗಂಡನ ಹೆಸರು ಹಿಡಿದು ಕರೆದಂತಾಗುವುದೆಂದು ಆಕೆ ಬರಿ ನಾಗಪ್ಪನೆನ್ನದೆ ನಾಗಲಿಂಗ ಎಂದಳು. ಅದರಿಂದ ಆಕೆಯ ಗಂಡನ ಹೆಸರು ಅರ್ಧಮಾತ್ರ ಮರೆಯಾದಂತಾಯಿತು.

೨. ನಾಗಲಿಂಗನ ಶೈಶವ

ಶಿವಯೋಗಿ ದಿನಾಲು ನಸುಕಿನಲ್ಲೆದ್ದವನೇ ಬಣ್ಣಗಾರಿಕೆಯ ಕೆಲಸಕ್ಕಾಗಿ ಹಳ್ಳಕ್ಕೋ ಕಡಾಯಿಕಟ್ಟೆಗೋ ಹೋಗಲೇಬೇಕಾಗುತ್ತಿತ್ತು. ಆ ಮನೆತನಕ್ಕೆ ಅದೇ ಉದರ ನಿರ್ವಾಹದ ದಾರಿ.

ಮನೆಯಲ್ಲಿ ಉಳಿದವರೆಂದರೆ ದಾನಮ್ಮಜ್ಜಿ ಮತ್ತು ನಾಗಲಿಂಗ. ಈರಪ್ಪ ಶಾಲೆಗೆ ಹೋಗುವ ಬಾಲಕ. ಆದರೆ ನಾಗಲಿಂಗನನ್ನು ಸಂಬಾಳಿಸುವ ಕೆಲಸದಲ್ಲಿ ಅಜ್ಜಿಗೆ ಸಹಾಯಕನೆಂದು ಒಮ್ಮೊಮ್ಮೆ ಶಾಲೆ ತಪ್ಪಿಸಿ ಆತನು ಮನೆಯಲ್ಲಿಯೇ ಉಳಿದುಕೊಳ್ಳಬೇಕಾಗುತ್ತಿತ್ತು. ಅಂಥ ಪ್ರಸಂಗಗಳು ಅವನಿಗೆ ಮೇಲಿಂದ ಮೇಲೆ ಬರುತ್ತಿದ್ದವು.

ದಾನಮ್ಮಜ್ಜಿ ಬೆಳಗಾಗುವುಷ್ಟರಲ್ಲಿ ಎದ್ದಳೆಂದರೆ, ಕಸ-ಮುಸುರೆ ಮುಗಿಸಿ ಮಾಡುವ ಮೊದಲ ಕೆಲಸವೇನೆಂದರೆ - ಒಲೆ ಹೊತ್ತಿಸಿ ಅನ್ನಕ್ಕಿಡುವುದು ಮತ್ತು ಹಸಿದ ನಾಗಲಿಂಗನಿಗೆ ಉಣಬಡಿಸುವುದು.

ಅಂದಿನ ಕಾಲಕ್ಕೆ ಜವಾರಿ ಅಕ್ಕಿ ವಿಪುಲವಾಗಿ ಸಿಗುತ್ತಿತ್ತು. ಜವಾರಿ ಅಕ್ಕಿಯೆಂದರೆ ನಸುಗೆಂಪು ಬಣ್ಣದ ಹಾಗೂ ಸುವಾಸನೆ ಬೀರುವ ಬದುಕು. ನಮ್ಮ ಹೊಲಗಳಲ್ಲಿ ಅದು ವಿಪುಲವಾಗಿ ಬೆಳೆಯುತ್ತಿತ್ತು. ಬಿಜವಾಡ ಅಕ್ಕಿಯಾಗಲಿ ರಂಗೂನ ಅಕ್ಕಿಯಾಗಲಿ ಈ ಭಾಗಕ್ಕೆ ಹಣಿಕೆ ಹಾಕುತ್ತಿರಲಿಲ್ಲ. ಜವಾರಿ ಅಕ್ಕಿಯನ್ನು ಬೊಗೋಣಿಯಲ್ಲಿ ಚೆನ್ನಾಗಿ ತೊಳೆದು ಒಲೆಯ ಮೇಲಿಟ್ಟರೆ, ಕುದಿ ಹತ್ತುವುದೇ ತಡ, ಪಡಸಾಲೆಯಲ್ಲಿದ್ದವರಿಗೆ ಕಂಪು

ವಾಸನೆ ಬರಲು ಆರಂಭಿಸುವದು. ಮೆತ್ತಗಿನ ಅನ್ನವನ್ನು ಗುಂಡಗಿನ ಬಟ್ಟಲಲ್ಲಿ ಹಾಕಿ, ಅದರಲ್ಲಿ ನವಣೆ ನುಚ್ಚಿನಂತಹ ಹೆರತುಪ್ಪ ಹಾಕಿದರೆ ಸಾಕು, ಬಾಯಿ ನೀರೊಡೆಯುವದು. ದಾನಮ್ಮಜ್ಜಿಯಾಗಲಿ ಈರಪ್ಪನಾಗಲಿ ಅನ್ನ ಬಡಿಸಿದ ಬಟ್ಟಲವನ್ನು ಕೈಗೆತ್ತಿಕೊಂಡು ನಾಗಲಿಂಗನಿಗೆ ತುತ್ತುಮಾಡಿ ಉಣಿಸುವುದು ವಾಡಿಕೆ.

ಒಮ್ಮೆ ದಾನಮ್ಮಜ್ಜಿ ಉಣಿಸುತ್ತಿರುವಾಗ ನಾಗಲಿಂಗ ಇದ್ದಕ್ಕಿದ್ದ ಹಾಗೆ ಮುನಿಸುಗೊಂಡು ಹೊರಳಿ ಕುಳಿತನು. ಅಜ್ಜಿ ಎದ್ದು ಬಂದು ಆತನ ಮುಂದೆ ಕುಳಿತು, ಆತನ ಬಾಯಿ ಬಳಿಗೆ ತುತ್ತು ಒಯ್ದರೆ, ಅದನ್ನು ಕಂಡ ನಾಗಲಿಂಗ ಮತ್ತೆ ಸರಕ್ಕನೆ ಮುಖದಿರುಹಿ ಕುಳಿತುಕೊಳ್ಳುವನು. ಈ ಕ್ರಮ ಹಲವು ಸಾರೆ ನಡೆಯಿತು. ಅಜ್ಜಿಗದರರ್ಥವಾಗಲಿಲ್ಲ, ಕೇಳಿದಳು -

"ಏನು ಬೇಕೋ ನಿನಗೆ?"

ನಿರುತ್ತರ.

"ಉಪ್ಪಿನಕಾಯಿ ಬೇಕೇ? ಇನ್ನಿಷ್ಟು ತುಪ್ಪಬೇಕೇ?"

ಏನು ಕೇಳಿದರೂ ನಾಗಲಿಂಗನ ಉತ್ತವೆಂದರೆ ಊಂಹೂಂ.

"ನಾನು ಉಣಿಸಬೇಡವೇ? ಈರಣ್ಣ ಉಣಿಸಬೇಕೇ?" ಎಂದು ಕೇಳಿದರೆ ಅದಕ್ಕೂ ಊಂಹೂಂ ಎಂದೇ ಉತ್ತರ.

ಬಹಳ ರಂಬಿಸಿ ಕೇಳಿದಾಗ ನಾಗಲಿಂಗ ಹೇಳಿದನು - "ದೊಡ್ಡ ತುತ್ತು ಬೇಕು"

ಆಗ ಅಜ್ಜಿ ಹಾಳತವಾದ ತುತ್ತು ಮಾಡಿ ಆತನ ಬಾಯಬಳಿ ಒಯ್ದಾಗ ನಾಗಲಿಂಗ ಅದನ್ನು ಒಲ್ಲಗಳೆದು - "ನೀನು ಸಣ್ಣ ತುತ್ತು ಹಾಕುತ್ತೀ, ಆದ್ದರಿಂದ ನಾನೇ ಉಣ್ಣುತ್ತೇನೆ" ಎಂದು ಇಂಗಿತವನ್ನು ತಿಳಿಸಿದನು.

ಅಜ್ಜಿ ನಾಗಲಿಂಗನ ಮುಂದೆ ಅನ್ನದ ಬಟ್ಟಲು ಕುಕ್ಕರಿಸಿ, 'ಅರೆ! ನೀನೇ ಅರೆ!' ಎಂದು ಹಿಂದೆ ಸರಿದಳು.

ನಾಗಲಿಂಗನ ಇಚ್ಛೆ ಕೈಗೂಡಿತು. ಚಪಗಾಲು ಹಾಕಿ ಕುಳಿತು, ಅನ್ನದ ಬಟ್ಟಲು ಹಿಡಿದೆತ್ತಿ, ದೊಡ್ಡದೊಂದು ತುತ್ತು ಮಾಡಿ ಬಾಯಲ್ಲಿ ತುರುಕಿ ಕೊಂಡನು. ಮರುಕ್ಷಣದಲ್ಲಿಯೇ ಆ ತುತ್ತು ಗಂಟಲಲ್ಲಿ ಸಿಕ್ಕು ಓಕರಿಸ ತೊಡಗಿದನು. ಅದನ್ನು ಕಂಡು ಅಜ್ಜಿ - "ಸತ್ತೀಯೋ ಖೋಡೀ" ಎಂದವಳೇ ಗಂಟಲು ಹಿಡಿದು ಆ ತುತ್ತನ್ನು ಹೊರ ಬೀಳಿಸಿದಳು.

ಅಂತೂ ನಾಗಲಿಂಗನ ಊಟ ಹಾಗೂ ಹೀಗೂ ಕೊನೆಗೊಂಡಿತು.

ಕರಡಿ ಮಜಲಿನ ಮಿತ್ರರು ದಿನಾಲು ಮೂರು ಸಂಜೆಗೆ ಬಂದು ತಂತಮ್ಮ ವಾದ್ಯಗಳನ್ನು ಬಾರಿಸುತ್ತ ಹೊಂದಾಣಿಕೆ ಮಾಡಿಕೊಳ್ಳುವುದನ್ನು ನಾಗಲಿಂಗನು ಸ್ವಸ್ಥಚಿತ್ತನಾಗಿ ಕುಳಿತು ಕೇಳುವನು, ತಲೆದೂಗುವನು, ಚಪ್ಪಳಿಕ್ಕುವನು.

ಅದಾವುದೋ ಉತ್ಸವದಲ್ಲಿ ಕರಡಿ ಮಜಲಿನವರು, ಸನಾದಿ ಯವರೊಡನೆ ಬಾರಿಸುತ್ತ ಕಲಾಲೋಲರಾಗಿದ್ದಾಗ, ನಾಗಲಿಂಗ ತಂದೆಯ ಹೆಗಲ ಮೇಲೋ ಅಥವಾ ಇನ್ನಾರದೋ ಬಗಲಲ್ಲೋ ಕುಳಿತುಕೊಂಡು ಮಜಲಿನ ಗತ್ತನ್ನು ಆಸ್ಥೆಯಿಂದ ಕೇಳುತ್ತಿದ್ದನು. ಕೂಟ ದಾರಿಯಲ್ಲಿ ಬಯಲು ಲಾವಣಿ ಹಾಡುವುದನ್ನು ಕೇಳುವನು, ಕುಣಿತದ ಕಾಲಕ್ಕೆ ಕಾಲಗೆಜ್ಜೆಯ ಉಲುಹು ಕೇಳಿ ಹರ್ಷಿಸುವನು.

ಹೀಗೆ ದಿನಗಳು ಸಾಲು ಹಿಡಿದು ಸಾಗಿರುವಾಗ ಇದ್ದಕ್ಕಿದ್ದ ಹಾಗೆ ದಾನಮ್ಮಜ್ಜಿ ಕಣ್ಣುಮುಚ್ಚಿದಳು.

ಶಿವಯೋಗಿಯ ಮನೆಗೆ ಅದೇ ಊರಿಲ್ಲಿದ್ದ ಆತನ ಅಕ್ಕ-ಈರವ್ವ ಬಂದು ನಿಂತುಕೊಂಡು ಮನೆಯ ಕೆಲಸವನ್ನು ನಿರ್ವಹಿಸತೊಡಗಿದಳು. ಆಕೆ ಈರಪ್ಪ ಮತ್ತು ನಾಗಲಿಂಗರಿಗೆ ಸೋದರತ್ತೆ, ಆಕೆಗೆ ಇಬ್ಬರು ಮಕ್ಕಳು.

ಮಗನ ಹೆಂಡತಿ ನಡೆಯಲಿಕ್ಕೆ ಬಂದಿದ್ದಳು, ಮಗಳನ್ನು ನೆರೆಯೂರಿಗೆ ಕೊಟ್ಟಿತ್ತು, ಆಕೆಯೂ ನಡೆಯಲಿಕ್ಕೆ ಹೋಗಿದ್ದಳು.

ಇಬ್ಬರು ಮಕ್ಕಳು ಈರವ್ವನಿಗಿದ್ದರೂ ಆಕೆಯ ಎಳೆತವೆಲ್ಲ ಮಗಳ ಕಡೆಗೇ ಇತ್ತು. ಮಗನ ಮನೆಯಲ್ಲಿ ನಿಂತುಕೊಂಡು, ಕಾಳುಕಡ್ಡಿ ಕಳವಿನಿಂದ ಮಾರಿಕೊಂಡು ಅಥವಾ ಏತೇತಕ್ಕೋ ಖರ್ಚಾಯಿತೆಂದು, ರೊಕ್ಕ ಇಸಗೊಂಡು ಅದನ್ನೆಲ್ಲ ನೆರೆಹಳ್ಳಿಯಲ್ಲಿದ್ದ ಮಗಳಿಗೆ ಕಳಿಸುತ್ತಿದ್ದಳು. ಆಕೆಯ ಮಗನು ತಾಯಿಯ ಕಳ್ಳಹೆಜ್ಜೆಯನ್ನು ಗುರುತಿಸಿದ್ದನು. ಆದ್ದರಿಂದ ತಾಳತಪ್ಪಿದಲ್ಲೆಲ್ಲ ಅವ್ವನಿಗೆ ತೋರಿಸಿಕೊಡುತ್ತಿದ್ದನು. ಆ ಕಾರಣದಿಂದ ಆಕೆಗೆ ಮಗನ ಮನೆ ಸಾಕೆನಿಸಿತ್ತು, ಮಗನಿಗೂ ತಾಯಿ ಬೇಡವಾಗಿದ್ದಳು.

ಶಿವಯೋಗಿಯ ಮಗ ಈರಪ್ಪನಿಗೆ ಸೋದರತ್ತೆಯ ಕವಡು ಸರಿ ಬರುತ್ತಿರಲಿಲ್ಲ. ಆದರೆ ತಂದೆಯ ಮುಖ ನೋಡಿ, ಪರಿಸ್ಥಿತಿಯನ್ನು ಅರಿತು, ತುತ್ತಿನೊಡನೆ ಅತ್ತೆಯ ತಪ್ಪನ್ನೂ ನುಂಗುತ್ತಿದ್ದನು. ಆದರೆ ಎಲ್ಲಿಯವರೆಗೆ? ಈರಪ್ಪನ ಹೆಂಡತಿ ಬರುವವರೆಗೆ, ಕಡದಾಗಲಿ ಬಳದಾಗಲಿ ಸಾಗಿಸಿಕೊಂಡು ಹೋಗುವುದು ಅನಿವಾರ್ಯವೇ ಆಗಿತ್ತು.

ಹಾದೀಮನಿ ಬಸಪ್ಪ ಸಿಂಪಿ ಅವರ ಹಿರೇಮಗ ವಿರೂಪಾಕ್ಷಿ ಮನೆಯಿಂದ ಹೊರಬಿದ್ದು, ಇಬ್ಬರು ಹೆಂಡಿರೊಡನೆ ಶಿವಯೋಗಿ ಕಕ್ಕನ ಮನೆ ಭಾಗದಲ್ಲಿ ಒಳಒಕ್ಕಲಾಗಿದ್ದನು. ತಂದೆಯಿಂದ ಹೊರಹಾಕಲ್ಪಟ್ಟ ವಿರೂಪಾಕ್ಷಿಯ ಸಂಸಾರವು ಶಿವಯೋಗಿ ಕಕ್ಕನ ಮೇಲ್ವಿಚಾರಣೆಯಲ್ಲಿ ಚೆನ್ನಾಗಿ ವರ್ಧಿತವಾಯಿತು.

ಸಾವಿತ್ರಿಬಾಯಿ ದೇಹವಿಡುವ ಮುಂಚೆ, ವಿರೂಪಾಕ್ಷಿಯ ಹಿರಿಯ ಹೆಂಡತಿ ದಾನಮ್ಮನನ್ನು ಹತ್ತಿರ ಕರೆದು - "ಇನ್ನು ಮುಂದೆ ನೀನೇ ನೋಡವ್ವಾ ನಮ್ಮ ನಿಂಗನ ತಾಯಿ" ಎಂದು ಹೇಳಿ ಕಣ್ಣುಮುಚ್ಚಿದಳು. ಕೂಡಿದವರು ಕಣ್ಣೀರ್ಗರೆದರು. ಅಂದಿನಿಂದ ನಾಗಲಿಂಗ ಬರೇ ಲಿಂಗನಾದನು, ನಾಗಪ್ಪ. ನಾಗಲಿಂಗ, ಲಿಂಗ ಅಂದಿನಿಂದ ಓಣಿಯ ಕೂಸಾಗಿ ಬೆಳೆದನು.

ಮುಂದೆ ದಾನಮ್ಮ ಹಡೆದ ಗಂಡು ಕೂಸಿಗೆ ಶಿವಲಿಂಗ ಎಂದು ಹೆಸರಿಟ್ಟರು. ಆದರೆ ಅವನನ್ನು ಕರೆಯುವುದು ಲಿಂಗ ಎಂದೇ. ಅದು ನಾಗಲಿಂಗನ ಹೆಸರು.

ವಿರೂಪಾಕ್ಷಿಯ ವ್ಯವಹಾರ ವಿಸ್ತಾರಗೊಂಡಿದ್ದರಿಂದ ಅವನು ಕಕ್ಕನ ಮನೆ ಬಿಟ್ಟು ಬೇರೊಂದು ದೊಡ್ಡ ಮನೆಯನ್ನು ಬಾಡಿಗೆಯಿಂದ ಹಿಡಿದು ಅಲ್ಲಿರತೊಡಗಿದನು. ಆದರೆ ನಿಂಗನ ಸಲುವಾಗಿ ದಾನಮ್ಮನ ಕರುಳು ಎಳೆಯುತ್ತಿತ್ತು. ಅವಕಾಶ ಮಾಡಿಕೊಂಡು ಬಂದು, ಲಿಂಗನನ್ನು ಎತ್ತಾಡಿ ಮುದ್ದಿಸಿ, ದುಡ್ಡೆರಡು ದುಡ್ಡುಗಳನ್ನು ಆತನ ಕೈಗೆ ಕೊಟ್ಟು ತೆರಳುವಳು. ಆದರೆ ಹೊಲ, ಮನೆಗಳ ಜಂಜಾಟದಲ್ಲಿ ನಿಂಗನ ಕಡೆಗೆ ಬರುವುದು ದುಸ್ಸಾಧ್ಯವಾಗತೊಡಗಿತು. ಆದರೆ ನಿಂಗನ ನೆನಪಾಗಿ ಮನಸ್ಸು ಕಳವಳಿಸುತ್ತಲೇ ಇತ್ತು, ತನ್ನ ಮಗ ಶಿವಲಿಂಗನನ್ನು ನಿಂಗ ಎಂದು ಬಗೆದು ಭಾವಿಸಿ ಮುದ್ದಿಟ್ಟು ತೃಪ್ತಳಾಗುವಳು. ಇತ್ತ ನಿಂಗನೂ ತನ್ನ ಪರಿಸರಕ್ಕೆ ಹೊಂದಿಕೊಂಡು ಬೆಳೆಯತೊಡಗಿದನು.

೩. ವಿದ್ಯಾಭ್ಯಾಸದ ದಾರಿಯಲ್ಲಿ

ನಾಗಪ್ಪನನ್ನು ಹಡೆದ ಸಾವಿತ್ರಿಬಾಯಿ ಗತಿಸಿದಳು, ದಾನಮ್ಮಜ್ಜಿ ಕಣ್ಮುಚ್ಚಿದ್ದಳು. ಆ ಮನೆತನದ ಪಾರುಪತ್ಯ ಶಿವಯೋಗಿಗೆ ಸೇರಿದ ವಿಷಯವಾಯಿತು. ನಾಗಪ್ಪ-ನಾಗಲಿಂಗ-ಲಿಂಗ ಎಂದು ಹೆಸರು ಬದಲಾಗುತ್ತ ಬಂದರೂ ವ್ಯಕ್ತಿ ಒಬ್ಬನೇ. ನಾನೇ ಆ ವ್ಯಕ್ತಿ. ಆದ್ದರಿಂದ ನನ್ನ ಕಥೆಯನ್ನು ಇನ್ನು ಮುಂದೆ ನಾನೇ ಹೇಳುತ್ತ ಹೋಗುವೆನು.

ಗುಂಬನ್ನಬಟ್ಟಲಲ್ಲಿ ಜವಾರಿ ಅಕ್ಕಿಯ ಅನ್ನ, ಹೆತ್ತುಪ್ಪ ಊಟ ಮಾಡುತ್ತಿದ್ದ ನಾನು ರೊಟ್ಟಿ, ಬಳ್ಳೊಳ್ಳಿಯ ಚಟಣಿ, ಗಾಣದೆಣ್ಣೆ ಇವುಗಳ ಸ್ವಾರಸ್ಯವನ್ನು ಸವಿಯುವ ರಸಿಕನಾದೆನು.

ನನ್ನ ತಂದೆ ಕಕ್ಕುಲತೆಯಿಂದ ನನಗೆ ದಿನಾಲು ಒಂದು ದುಡ್ಡು ಕೊಡುವನು. ಏತಕ್ಕೆಂದು ಕೇಳುವ ಕಾರಣವೇ ಇಲ್ಲ. ಪೇಡೆ ಕೊಂಡು ತಿನ್ನಲಿಕ್ಕೆಂದು ಹೇಳಿಬಿಟ್ಟರೆ ಸಾಕು. ದುಡ್ಡು ಅಂದರೆ ಇಂದಿನ ೧ ೧/೨ನಯೆ ಪೈಸೆ. ಇಂದು ನಾಲ್ವತ್ತು ಪೈಸೆಗೆ ಸಿಗುವಷ್ಟು ಪೇಡೆ ಅಂದು ಒಂದೇ ದುಡ್ಡಿಗೆ ಸಿಗುತ್ತಿತ್ತು. ಆದರೆ ಸಾಕಾಗುವಷ್ಟು ಸಿಗುತ್ತಿತ್ತೆಂದು ಹೇಳಲಿಕ್ಕಾಗದು.

೧೯೧೦ನೇ ವರುಷ-ಶಾಲೆಯಲ್ಲಿ ನನ್ನ ಹೆಸರು ಇನ್ನೂ ಹಚ್ಚಿರಲಿಲ್ಲ. ಆದರೆ ಗಾವಠಿಶಾಲೆ ನಡೆಸುವ ರಾಘೂಪಂತ ಭಿಡೆ ಮತ್ತು ಸಂಗಯ್ಯ ಸೊನಗಿ ಅವರು ನಡೆಸುವ ಶಾಲೆಗೆ ದಿನಾಲು ಹೋಗಿ ಬರುತ್ತಲಿದ್ದೆ. ಗಾವಠಿ ಶಾಲೆಯಲ್ಲಿ ಮರಾಠಿ ಕಲಿಸುತ್ತಿರಲಿಲ್ಲ. ಕನ್ನಡವನ್ನೇ ಕಲಿಸುತ್ತಿದ್ದರು. ಆದರೆ ತಿಂಗಳ ಫೀ ಮಾತ್ರ ದುಬಾರಿ.

ಒಂದು ದಿನ ನಾನು ಶಾಲೆಗೆ ಹೊರಟಾಗ ಗುಜ್ಜರ ಮನೆಯ ಮುಂದೆ ಜನ ನೆರೆದಿತ್ತು. ಇಂಡಿಯಿಂದ ಬಂದ ಜಯಪ್ಪ ಎಂಬುವರು ಕ್ಯಾಮರಾ ತಂದಿದ್ದರು. ಹೊಸದಾಗಿ ಫೋಟೋ ತೆಗೆಸಿಕೊಳ್ಳುವ ಹವ್ಯಾಸದವರು, ಓಡಾಡುತ್ತಿದ್ದರು, ಅಂಥ ಸಮಯದಲ್ಲಿ ಜಯಪ್ಪನು ನನ್ನನ್ನು ಕಂಡು ಮುಂದಕ್ಕೆ ಕರೆದನು. ನಾನು ಹೆದರದೆ, ನಾಚದೆ ಮುಂದೆ ಹೋದೆನು. ನನ್ನ ಲವಲವಿಕೆಯ ಲಕ್ಷಣ ಹಾಗೂ ನಗೆಮುಖದ ಕಳೆ ನೋಡಿ, ನನ್ನ ಫೋಟೋ ತೆಗೆದುಕೊಂಡನು. ಅದರಿಂದ ನನಗೆ ಕೆಲವು ಹೊಸಗೆಳೆಯರು ಸಿಕ್ಕರು.

ಅಷ್ಟೊಂದು ಚಿಕ್ಕ ವಯಸ್ಸಿನಲ್ಲಿಯೂ ಎರಡು ಮುಳ್ಳು ಮೊಳಕೆಗಳು ಕಾಣಿಸಿಕೊಂಡಿದ್ದರ ನೆನಪು ನನ್ನಲ್ಲಿ ಇಂದಿಗೂ ಅಚ್ಚರಿಯನ್ನು ಉಂಟು ಮಾಡುತ್ತಿದೆ -

ಒಂದನೆಯದಾಗಿ ಅಂದು ದಾನಮ್ಮ ಅತ್ತಿಗೆ ಬಾಣಂತಿಯಾಗಿ ಬಚ್ಚಲಕ್ಕೆ ಹೋದಾಗ ಆ ಬತ್ತಲೆ ಮೈಯನ್ನು ನೋಡುವ ಹವ್ಯಾಸ ಹುಟ್ಟಿದ್ದರಿಂದ ಕದ್ದು ಹಣಿಕೆ ಹಾಕಿದ್ದು. ಇನ್ನೊಂದು ಯಾವುದೆಂದರೆ -

ಸಂಗಯ್ಯ ಮಾಸ್ತರರ ಸ್ಟೂಲ್ ಮೇಲಿನ ಚವಲಿ ಎಂಬ ಬೆಳ್ಳಿಯ ನಾಣ್ಯವನ್ನು ಕಿಸೆಗೆ ಸೇರಿಸಿದ್ದು. ಆದರೆ ಆ ನಾಣ್ಯ ಸಿಕ್ಕಲಿಲ್ಲ. ಚೌಕಸಿಗೆ ನಿಂತಾಗ ತೆಗೆದುಕೊಟ್ಟೆ. ಇಂಥ ಮುಳ್ಳುಗಳ ಮಧ್ಯದಲ್ಲಿಯೂ ಕಂಪಿನ ಪಕಳೆಗಳನ್ನುಟ್ಟ ಗುಲಾಬಿ ಹೂವಿದ್ದುದು ಕಂಡುಬರುತ್ತದೆ.

ಚಡಚಣಕ್ಕೆ ನೆರೆಹಳ್ಳಿಯಾದ ಗೋಡಿಹಾಳವೆಂದರೆ ಚಡಚಣದ ಒಂದು ಓಣಿಯಂತೆಯೇ ಆಗಿತ್ತು. ಊರತುಂಬ ನೇಕಾರಿಕೆಯ ಉದ್ದಿಮೆ ದಾರರಿದ್ದರು. ಅವರು ಬಯಲಾಟ - ಕರಡಿ ಮಜಲಿನ ಹವ್ಯಾಸ ಬೆಳೆಸಿ ಕೊಂಡಿದ್ದರು. ಇಷ್ಟೇ ಅಲ್ಲ ೧೯೧೦ನೇ ವರ್ಷ ಕಾಲಿಡುವಷ್ಟರಲ್ಲಿ ಅವರು, ಬಯಲಾಟದ ಸ್ಥಳದಲ್ಲಿ ನಾಟಕಗಳನ್ನು ಬರಮಾಡಿಕೊಂಡಿದ್ದರು. ಅವರು ಮೊದಲಿಗೆ ಎರಡು ನಾಟಕಗಳನ್ನು ಮಾತ್ರ ಕಲಿತುಕೊಂಡರು "ಮಧುಮಿತ್ರ ಮಂದಾರ ಮಾಲಿನೀ" ಮತ್ತು "ಮದನ ಮೋಹನ ದಿವ್ಯಸುಂದರಿ".

ಕಲಿತ ಅವೆರಡು ನಾಟಕಗಳನ್ನು ಮೊದಲು ಗೋಡಿಹಾಳದಲ್ಲಿ ಪ್ರಯೋಗಿಸಿ ನೋಡಿದ ಬಳಿಕ, ಕಂಪನಿಯನ್ನು ಚಡಚಣಕ್ಕೆ ತಂದರು. ವಿರಕ್ತ ಮಠದ ಬಯಲಲ್ಲಿ ಥೇಟರ್ ರಚಿಸಿ ರಂಗಭೂಮಿಯ ಏರ್ಪಾಡು ಮಾಡಿದರು.

ಆ ಕಂಪನಿಯವರಿಗೆ ಚಡಚಣದ ಹಲವಾರು ಪ್ರಮುಖ ಸದ್ಗೃಹಸ್ಥರು ಬೇಕಾದವರಿದ್ದರು. ಅವರಲ್ಲಿ ನಮ್ಮ ತಂದೆಯೂ ಒಬ್ಬರೆಂದು ಹೇಳಬಹುದು. ಆ ಕಾರಣದಿಂದ ನಾನು ಎಲ್ಲರಿಗಿಂತ ಮೊದಲು ಮತ್ತು ಮುಂದೆ ಹೋಗಿ ಕುಳಿತು ನಾಟಕ ನೋಡುವುದಕ್ಕೆ ಅವಕಾಶ ದೊರೆಯಿತು.

'ಶ್ರೀ ಗುರು ಪೊರೆಯ್ಯೆ ಯೋಗಿವರ್ಯನೇ' ಎಂಬ ಪ್ರಾರ್ಥನೆ ನಡೆದಾಗ ಪರದೆ ಎತ್ತಲಾಯಿತು. ಅಲ್ಲಿ ಮೂವರು ಬಣ್ಣ ಬಳಕೊಂಡವರು ನಿಂತು ಕೈಮುಗಿದು ಪ್ರಾರ್ಥಿಸುತ್ತಿದ್ದರು. ಪ್ರಾರ್ಥನೆ ಮುಗಿದ ಬಳಿಕ ಎಡಬಲದಲ್ಲಿ ನಿಂತವರಿಬ್ಬರು ಕೈಮುಗಿದು ಒಳಗೆ ತೆರಳಿದರು. ನಿಂತವನೇ ಸೂತ್ರಧಾರನೆಂದು ತಿಳಿಯಿತು.

ಹೊಸ ನಾಟಕ ಅಭಿನಯಿಸಬೇಕೆಂದು ಆಶಿಸಿ, ಸಹಾಯಕ್ಕೆ ನಟಿಯನ್ನು ಕರೆಯುತ್ತಾನೆ - "ಬಾರೇ ನೀರೆ ಸುಂದರೀ। ಪೂರಿಯಾನಂದವ ಬೀರುತ ಬಾರೆಸಖಿ, ಬಾರೆ ನೀರೆ ಸುಂದರೀ"

ಸೂತ್ರಧಾರನ ಆ ಕರೆಗೆ ಓಗೊಟ್ಟ ನಟಿಯು ಮೆಲ್ಲನೆ ಪ್ರವೇಶಿಸುವಳು - "ತ್ವರದಿಂದ ಬಂದಿಹೆನ್ನೈ ಪ್ರಿಯಾ! ನಿಯೋಜಿಪುದೇನು ಆಜ್ಞೆ ಮಾನ್ಯ ತಾನೆ ಪ್ರಿಯಾ, ತ್ವರದಿಂದ ಬಂದಿಹೆನ್ನೈ ಪ್ರಿಯಾ!"

ನಟಿಯ ಹಾಡು ಮುಗಿಯುವಷ್ಟರಲ್ಲಿ ನನ್ನ ತೂಕಡಿಕೆ ನಿದ್ರೆಯಾಗಿ ಮಾರ್ಪಾಟುಗೊಂಡು ಕುಳಿತಲ್ಲಿಯೇ ನನ್ನನ್ನು ಉರುಳಿಸಿಬಿಡುತ್ತಿತ್ತು. ಮುಂದೇನಾಯಿತೋ, ನಾಟಕದ ಕಥೆ ಎಂಥದಿತ್ತೋ ಒಂದೂ ತಿಳಿಯದು. ನಾಟಕ ಮುಗಿದ ಬಳಿಕ ನನ್ನ ತಂದೆ ನನ್ನನ್ನು ಹೊತ್ತೊಯ್ದು ಮನೆಯಲ್ಲಿ ಮಲಗಿಸಿಬಿಡುತ್ತಿದ್ದನು. ಎಚ್ಚರಗೊಂಡಾಗಲೇ ಎಲ್ಲವೂ ಸಾಲಾಗಿ ನೆನಪಿಗೆ ಬರುತ್ತಿದ್ದವು.

ಗೋಡಿಹಾಳದ ನಾಟ್ಯ ಕಂಪನಿಯವರು ನಾಟಕಗಳ ಪ್ರಯೋಗ ಮಾಡುತ್ತ ಹೋದಾಗಲೇ ಊರೊಳಗಿನ ಹಲವಾರು ಮನೆಗಳಲ್ಲಿ ಇಲಿಗಳು ಬೀಳಹತ್ತಿವೆಯೆಂಬ ಸುದ್ದಿ ಹರಡಿತು. ಅದು ಚಡಚಣಕ್ಕೆ ೨ನೇ ಸಾರೆ ಬಂದ ಗಂಟು ಬೇನೆಯ ಹಾವಳಿ. ಅದಕ್ಕೆ ಪ್ಲೇಗ್ ಎಂದೂ ಹೆಸರು.

ಬೇನೆಯ ಹಾವಳಿಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಊರವರೆಲ್ಲ ಅಡವಿಯಲ್ಲಿ ಗುಡಿಸಲು ಕಟ್ಟಿಕೊಂಡು ಮೂರು ತಿಂಗಳು ಕಳೆಯ ಬೇಕಾಗುತ್ತಿತ್ತು. ಬಹುತರ ಗುಡಿಸಲುಗಳು ಊರಿನ ಪಶ್ಚಿಮ ನಿಟ್ಟಿನಲ್ಲಿ ಗೋಚರಿಸುತ್ತಿದ್ದವು.

ಸಾಮಾಜಿಕರು ವನವಾಸಿಗಳಾದರೂ ನೂರಾರು ಜನರು ಗಂಟು ಬೇನೆಗೀಡಾಗುವದು ತಪ್ಪಲಿಲ್ಲ. ಊರಲ್ಲಿ ಹಾದು ಬಂದರೆ ಸಾಕು, ಚಿಕ್ಕಾಡುಗಳ ಕಡಿತದಿಂದ ಬಗಲಲ್ಲಿಯೋ ತೊಡೆಯಸಂದಿನಲ್ಲಿಯೋ ಒಂದು ಗಂಟು ಏಳುವದು. ಅದು ಉಲ್ಬಣಗೊಂಡು ಪ್ರಾಣಾಹುತಿ ತೆಗೆದುಕೊಳ್ಳುವುದಕ್ಕೆ ಹತ್ತೆಂಟು ದಿನಗಳಾದರೂ ಬೇಕಾಗುತ್ತಿದ್ದವು.

ಎರಡು ತಿಂಗಳ ತರುವಾಯ ಬೇನೆಯ ಅಬ್ಬರವು ಕಡಿಮೆ ಆಗ ತೊಡಗಿದಾಗ ಚಡಚಣದಲ್ಲಿ ಒಂದು ಉತ್ಸವ ನಡೆಯಿತು. ಅದು ಯಾವುದೆಂದರೆ - ಪಂಚಮ ಜಾರ್ಜ್ ಬಾದಶಹರ ಪಟ್ಟಾಭಿಷೇಕ ಮಹೋತ್ಸವ.

ಗ್ರಾಮಾಧಿಕಾರಿಗಳು ಆ ಉತ್ಸವವನ್ನು ಗ್ರಾಮ ಪ್ರಮುಖರೊಂದಿಗೆ ಚಡಚಣದ ಪಶ್ಚಿಮ ನಿಟ್ಟಿನಲ್ಲಿರುವ ಪರಮಾನಂದ ದೇವಾಲಯದಲ್ಲಿ ಹಮ್ಮಿದರು.

ಪಲ್ಲಕ್ಕಿಯಲ್ಲಿ ಪಂಚಮ ಜಾರ್ಜ್‌ಬಾದಶಹರ ಬಣ್ಣದ ಭಾವಚಿತ್ರವನ್ನು ಇರಿಸಿ ಜೊಳ್ಳುಪಲಿಗೆ ಕೊಂಬುಗಳ ವಾದ್ಯ ಹಾಗೂ ಧಡಲ್ ಬಾಜೀ ವೈಭವಗಳೊಂದಿಗೆ ದೇವಾಲಯದತ್ತ ಹೊರಟಿತು. ಸಾವಿರಾರು ಜನರು ಉತ್ಸವದಲ್ಲಿ ಭಾಗಿಗಳಾಗಿದ್ದರು. ಶಾಲೆಯ ಬಾಲಕರಿಗೆಲ್ಲ ಒಂದೊಂದು ಪದಕ ಕೊಡಲಾಗುವದೆಂದು ತಿಳಿದಿತ್ತು. ಅಲ್ಲಲ್ಲಿ ವಾದ್ಯಗಳನ್ನು ಸ್ಥಗಿತಗೊಳಿಸಿ

ಪಂಚಮ ಜಾರ್ಜ್ ಬಾದಶಹಾಕೀ, ಜಯ್ ಎಂಬ ಉದ್ಘೋಷವು ನಿನಾದಿಸುತ್ತಲೇ ಇತ್ತು.

ಅಂಥ ಒಂದು ಸಂದರ್ಭದಲ್ಲಿ ಜನಜಂಗುಳಿಯೊಳಗಿನಿಂದ ಬೇರೊಂದು ಘೋಷಣೆ ಹೊರಬಿದ್ದುದು ಕೇಳಿಸಿತು, ಅದು ಯಾವುದೆಂದರೆ - "ಟಿಳಕ ಮಹಾರಾಜಕೀ ಜಯ್"

ಆ ಅಪಸ್ವರವನ್ನು ಕೇಳಿ ಗ್ರಾಮದ ಪ್ರಮುಖರು ಕಕ್ಕಾಬಿಕ್ಕಿಯಾಗಿ ಸಿಟ್ಟಿನಿಂದ ಸುತ್ತಲೆಲ್ಲ ನೋಡಿದರು. "ಅವರನ್ನು ಹಿಡಿದು ತನ್ನಿರೋ" ಎನ್ನುವುದೇ ತಡ, ಶಾಂತಪ್ಪ ಮುತ್ತೀನ ಎಂಬ ತರುಣನು ನಾಗಾಲೋಟದಲ್ಲಿ ಓಡಿ ಹೋಗಿದ್ದರಿಂದ ಅವನು ಕೈಗೆ ಸಿಕ್ಕಲಿಲ್ಲ. ಇನ್ನೊಬ್ಬನೆಂದರೆ ವಿರೂಪಾಕ್ಷಿ ಸಿಂಪಿ ಕುಂಟನಾಗಿದ್ದರಿಂದ ಓಡಿ ಹೋಗಲಿಕ್ಕಾಗದೆ ಸಿಕ್ಕುಬಿದ್ದನು. ಅವನನ್ನು ಗ್ರಾಮಸ್ಥರ ಬಳಿಗೆ ತಂದರು. ಗ್ರಾಮಸ್ಥರು ಅವಡುಗಚ್ಚಿ ಅವನ ಬೆನ್ನ ಮೇಲೆ ಬೆತ್ತಿನಿಂದ ಒಳಿತಾಗಿ ಥಳಿಸಿದರು.

ಟಿಳಕರ ಜಯಜಯಕಾರ ಮಾಡಿ ಧೈರ್ಯ ತೋರಿಸಿದ ಶಾಂತಪ್ಪ ಮುತ್ತೀನ ಮತ್ತು ವಿರೂಪಾಕ್ಷಿ ಸಿಂಪಿ ಉಭಯರೂ ವಿಜಾಪುರ ಸರ್ಕಾರಿ ಹೈಸ್ಕೂಲಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು. ಪ್ಲೇಗ್ ಸೂಟಿಗಾಗಿ ಊರಿಗೆ ಬಂದಿದ್ದರು. ಜನರ ಗುಂಪಿನಲ್ಲಿ ಟಿಳಕರ ಹೆಸರುಗೊಂಡು ಮೊಟ್ಟಮೊದಲು ಜಯಜಯಕಾರವನ್ನು ಮಾಡಿ, ಚಡಚಣದಲ್ಲಿ ದಿಟ್ಟತನ ತೋರಿದವರೊಳಗೆ ಅವರೇ ಮೊದಲಿಗರು-ಎಂದು ಹೇಳಬಹುದು.

ಪಾಂಡವರ ಅಜ್ಞಾತವಾಸದಂತಿರುವ ಆ ಕಠೋರ ಪ್ಲೇಗ್ ಬೇನೆಯಿಂದ ತಪ್ಪಿಸಿಕೊಳ್ಳಲು ಮೂರು ತಿಂಗಳು ಗುಡಿಸಲ ವಾಸವನ್ನು ಮಾಡಿದ ಜನರೆಲ್ಲರೂ ಮರಳಿ ಊರು ಸೇರಿದರು. ಶಾಲೆಗಳು ಆರಂಭಗೊಂಡವು.

ಆವಾಗ ನನ್ನ ಹೆಸರು ಹಚ್ಚಿಸಿ ನನ್ನನ್ನು ಶಾಲೆಗೆ ಕಳುಹಿಸಿದರು. ಆ ಕಾಲಕ್ಕೆ ಪ್ರಾಥಮಿಕ ಶಾಲೆಯಲ್ಲಿ ೭ ತರಗತಿಗಳನ್ನು ದಾಟುವ ಮೊದಲು ಸಣ್ಣ ಬಿನ್ ಇಯತ್ತೆ, ದೊಡ್ಡ ಬಿನ್ ಇಯತ್ತೆ ಎಂಬ ವರ್ಗಗಳಿದ್ದವು.

ಆ ವರ್ಗಗಳಲ್ಲಿ ಕಲಿಸುವ ಗಸಣೆಯಿರಲಿಲ್ಲ. ದಿನಾಲು ಎರಡೂ ಹೊತ್ತು ಶಾಲೆಗೆ ಬರುವ ಹಾಗೂ ಮನೆಗೆ ಹೋಗುವ ರೂಢಿಮಾತ್ರ ಆಗುತ್ತಿತ್ತು. ಮೊದಲನೇ ತರಗತಿಗೆ ಸೇರುವಷ್ಟರಲ್ಲಿ ಅಕ್ಷರಗಳ ಹಾಗೂ ಅಂಕಿಗಳ ಜ್ಞಾನ ಮಾತ್ರ ಬಹುತರ ಆಗುತ್ತಿತ್ತು. ಬಾಲಬೋಧಿನಿ ಎಂಬ ಪುಸ್ತಕ ಓದಲಿಕ್ಕೆ ಬಂದರೆ ಸಾಕು, ನೂರರವರೆಗೆ ಅಂಕಿ ಸಂಖ್ಯೆ ಮತ್ತು ೨ರಿಂದ ೨೦ರವರೆಗೆ ಮಗ್ಗಿಗಳನ್ನು ಬರೆಯಲ್ಲಿಕ್ಕೂ ಓದಲಿಕ್ಕೂ ಬಂದರೆ ಸಾಕು.

ಕಲಿಯುವ ಅಕ್ಷರ ಕನ್ನಡವಿದ್ದಂತೆ, ಅಂಕಿ-ಅಂಕಿಮಗ್ಗಿಗಳು ಮಾತ್ರ ಕನ್ನಡವಾಗಿರಲಿಲ್ಲ. ಏಕ, ದೋನ, ತೀನ ಎಂದು ಮರಾಠಿಯಲ್ಲಿ ಓದಿ ಬೈಯಕ್ಕೊ ಬೈಯ್, ಬೇದುಗುಣೆ ಚಾರಿ ಬೇತಿರಕಾ ಸಹಾ ಎಂದು ಮರಾಠಿಯಲ್ಲಿ ಓದಬೇಕಾಗುತ್ತಿತ್ತು.

ನಮ್ಮಪ್ಪನ ಗೆಳೆಯರಾದ ಶಂಕರಕಾಕಾ ಕುಲಕರ್ಣಿಯವರು ನನಗೆ ಕನ್ನಡ ಅಂಕಿಗಳನ್ನು ಮಾತ್ರ ಹೇಳಿಕೊಟ್ಟರು. ಕನ್ನಡದಲ್ಲಿ ಮಗ್ಗಿಗಳನ್ನು ಬರೆದು ಕನ್ನಡದಲ್ಲಿಯೇ ಓದುವ ರೂಢಿಯು ಎರಡೋ ಮೂರೋ ವರ್ಷಗಳ ತರುವಾಯ ಬಳಕೆಯಲ್ಲಿ ಬಂತು.

ಚಡಚಣದ ಜನಸಂಖ್ಯೆ ಆಗ ಮೂರುವರೆ ಸಾವಿರದಷ್ಟು. ಶಾಲೆಗೆ ಹೋಗುವ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ ೧೨೦. ಅದನ್ನು ದಾಟುತ್ತಲೇ ಇರಲಿಲ್ಲ. ಬಿನ್ ಇರುತ್ತೆ ಮೊದಲು ಮಾಡಿ, ೬ನೇ ತರಗತಿಗೆ ಬರುವಷ್ಟರಲ್ಲಿ ಮೂರು ನಾಲ್ಕು ಜನ ವಿದ್ಯಾರ್ಥಿಗಳು ಮಾತ್ರ ಉಳಿಯುತ್ತಿದ್ದರು.

ನಾಲ್ವರು ಶಿಕ್ಷಕರಲ್ಲಿ ಅನ್‌ಪಾಸ್, ಪಾಸ್, ಟ್ರೇಂಡ್ ಎಂದು ಶಿಕ್ಷಕರಲ್ಲಿ ಮೂರು ಪ್ರಕಾರಗಳನ್ನು ಮಾಡಬಹುದಾಗಿತ್ತು. ಮುಖ್ಯ ಶಿಕ್ಷಕರು ಟ್ರೇಂಡರು, ಟ್ರೇಂಡರಲ್ಲಿಯೂ ಮೂರು ಪ್ರಕಾರಗಳು, ೧ನೇ ವರ್ಷದ ಟ್ರೇಂಡ್, ಎರಡನೇ ವರ್ಷದ ಟ್ರೇಂಡ್, ಮೂರನೇ ವರ್ಷದ ಟ್ರೇಂಡ್, ಚಡಚಣದಂಥ ದೊಡ್ಡ ಗ್ರಾಮದ ಶಾಲೆಯ ಮುಖ್ಯ ಗುರುಗಳು

ಬಹುತರವಾಗಿ ೩ನೇ ವರ್ಷದ ಟ್ರೇಂಡರಾಗಿರುತ್ತಿದ್ದರು. ಅವರ ತಿಂಗಳ ಸಂಬಳ ೪೦-೪೫ ರೂಪಾಯಿ ಎಂದು ಹೇಳಬಹುದಾಗಿತ್ತು.

ಪಾಸ್ ಶಿಕ್ಷಕರೆಂದರೆ ಮುಲಕೀ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು. ಅವರ ತಿಂಗಳ ಸಂಬಳ ರೂ. ಒಂಬತ್ತು ಮಾತ್ರ. ಇನ್ನು ಮುಲಕೀ ಪರೀಕ್ಷೆಯನ್ನು ಸಹ ಮುಗಿಸದವರು ಶಿಕ್ಷಕರಾದರೆ ಅವರಿಗೆ ಅನ್‌ಪಾಸ್ ಶಿಕ್ಷಕರು ಎಂದು ಹೇಳುತ್ತಿದ್ದರು. ಅವರ ಸಂಬಳ ತಿಂಗಳಿಗೆ ಆರು ಅಥವಾ ಏಳು ರೂ. ಮಾತ್ರ.

ಶಾಲೆಯಲ್ಲಿ ವಿದ್ಯಾರ್ಥಿಯಾಗಿ ಪ್ರವೇಶಿಸಿ, ನಾನು ಮೂರನೇ ತರಗತಿ ಮುಗಿಸುವುದಕ್ಕೆ ನಾಲ್ಕು ವರ್ಷಗಳು ಗತಿಸಿದವು. ಆ ಅವಧಿಯಲ್ಲಿ ಅಂದರೆ ನಾಲ್ಕು ವರ್ಷಗಳ ಶಿಕ್ಷಣವನ್ನು ನಮಗೆ ಪೂರಯಿಸಿದವರು ಒಂದಂಕಿ ಸಂಬಳದ ಶಿಕ್ಷಕರೇ ಆಗಿದ್ದರು.

ಬಿನ್ ಹಾಗೂ ೧ನೇ ತರಗತಿಗಳನ್ನು ಸಂಗಯ್ಯಸೊನಗಿ ಮಾಸ್ತರರು ಕಲಿಸಿದರು. ಅವರು ಅನ್‌ಪಾಸ್ ಶಿಕ್ಷಕರು. ಆ ಬಳಿಕ ನಾನು ೨ನೇ ತರಗತಿಯ ವಿದ್ಯಾರ್ಥಿ. ನಮ್ಮಂಥವರನ್ನು ಕಲಿಸಲು ಪಾಸ್ ಶಿಕ್ಷಕರು ದೊರೆತರು. ಅವರೇ ಹುಸೇನಿ ಮಾಸ್ತರರು. ಹುಸೇನಿ ಅಲ್ಲಾಉದ್ದೀನ ಅತ್ತಾರ - ಎನ್ನುವುದು ಅವರ ಪೂರ್ಣ ಹೆಸರು. ಅವರು ಚಡಚಣ ಗ್ರಾಮವಾಸಿಗಳೇ ಆಗಿದ್ದು, ಎಲೆಗಾರ ಎಂಬ ದೊಡ್ಡ ಮನೆತನದಲ್ಲಿ ಅಂದರೆ ಬಹುಸಂಖ್ಯೆಯ ಆಪ್ತ ಜನರಿದ್ದ ಕುಟುಂಬದಲ್ಲಿ ಒಬ್ಬರಾಗಿದ್ದರು. ದೊಡ್ಡ ಮನೆತನವೆನ್ನುವುದಕ್ಕೆ ಬಹುಸಂಖ್ಯೆಯೇ ಕಾರಣವಲ್ಲದೆ ಇನ್ನೇನೂ ಇರಲಿಲ್ಲ.

ಅಲ್ಲಾಉದ್ದೀನ ಮತ್ತು ಹೀರಾ ಎಂಬ ದಂಪತಿಗಳಿಗೆ ಆರು ಜನ ಹೆಣ್ಣುಮಕ್ಕಳು, ಐದು ಜನ ಗಂಡು ಮಕ್ಕಳು ಇದ್ದರು. ಮೂವರು ಸೊಸೆಯಂದಿರು ಇನ್ನುಳಿದ ೪-೫ ಹುಡುಗರು ಮೊಮ್ಮಕ್ಕಳಾಗಿದ್ದರು.

ಇಷ್ಟೊಂದು ಜನರ ವಾಸ್ತವ್ಯಕ್ಕೆ ಒಂದು ಮುರುಕು ಮನೆ, ಎಲ್ಲ ಸೇರಿ ನಾಲ್ಕಾರು ಅಂಕಣದಷ್ಟು ಆಸರವೋ ಅವಸರವೋ ಆಗಿತ್ತು. ಆ ಗಂಡು ಬಳಗವೆಲ್ಲ ಊಟಕ್ಕೆ ಮಾತ್ರ ಮನೆಗೆ ಬರುವುದು, ರಾತ್ರಿ ತಂಗಲು, ಅದೆಂಥದೋ ಅಂಗಡಿಯ ಮಳಿಗೆಯನ್ನು ಆಶ್ರಯಿಸುತ್ತಿದ್ದರು.

ಮುಂಜಾನೆ ಬಯಲಿಗೆ ಹೋಗಬೇಕೆಂದರೆ ತಂಬಿಗೆಗಾಗಿ ಪಾಳಿ ಹಚ್ಚಬೇಕಾಗುತ್ತಿತ್ತು. ಪಾಳಿ ಬೇಡವೆಂದರೆ ತಂಬಿಗೆಯಿಲ್ಲದೆ ಬಯಲಿಗೆ ಮಾತ್ರ ಹೋಗಬೇಕಾಗುತ್ತಿತ್ತು. ಅಂಥ ಪ್ರಸಂಗವು ಹುಸೇನಿ ಮಾಸ್ತರರಿಗೂ ಒಮ್ಮೊಮ್ಮೆ ಬರುತ್ತಲಿತ್ತು.

ಅನಿವಾರ್ಯವಾಗಿ ಕೈಬೀಸುತ್ತ ಹಳ್ಳದ ಕಡೆಗೆ ಹೋಗಿ ಕೆಲಸ ತೀರಿಸಿಕೊಂಡು ಬರುತ್ತಿದ್ದರು.

ಒಮ್ಮೆ ನಾನು, ದಾರಿಯಲ್ಲಿ ಎದುರಿಗೆ ಬರುತ್ತಿದ್ದ ಗುರುಗಳಿಗೆ ಕೇಳಿದೆ - "ಬಯಲ ಕಡೆಗೆ ಹೋಗಿದ್ದಿರಾ - ತಂಬಿಗೆಯೆಲ್ಲಿದೆ?"

ಆ ಮಾತಿಗೆ ನಸುನಕ್ಕಂತೆ ಮಾಡಿ - "ಶಾಲೆಗೆ ಬಾ, ತೋರಿಸುತ್ತೇನೆ" ಎನ್ನುವಷ್ಟರಲ್ಲಿ ನಾನು ಅಷ್ಟು ದೂರ ಮುಂದೆ ಹೋಗಿದ್ದೆ.

ಒಂದರ್ಧ ರೊಟ್ಟಿ ತಿಂದು ಮುಂಜಾವಿನ ಶಾಲೆಗೆ ಹೋಗಬೇಕೆಂದರೆ ಬಹಳ ಸಾರೆ ಹುಸೇನಿ ಮಾಸ್ತರರ ಮನೆಯಲ್ಲಿ ತಂಗುಳ ತುಣುಕು ಸಹ ಇರುತ್ತಿರಲಿಲ್ಲ. ತಾಯಿಯಾದವಳು ಕಕ್ಕುಲತೆ ಪಟ್ಟು, ಚಿಕ್ಕ ಸೊಸೆಯನ್ನು ಕರೆದು, ಹತ್ತೆಂಟು ವೀಳ್ಯದೆಲೆಗಳನ್ನು ಕೊಟ್ಟು ಹೇಳುವಳು -

"ಹಳೆಮನೆಯವರ ಮನೆಗೆ ಹೋಗಿ ಒಂದರ್ಧ ರೊಟ್ಟಿ ಇಸಗೊಂಡು ಬಾ" ಅತ್ತೆಯ ಆದೇಶದಂತೆ ಆ ಸೊಸೆ ತಂದ ತಂಗಳು ರೊಟ್ಟಿ ತಿಂದು ಮಾಸ್ತರರು ಮುಂಜಾವಿನ ಉಪವಾಸ ಮುರಿಯುತ್ತಿದ್ದರು. ಆ ಬಳಿಕ ಶಾಲೆಗೆ ಹೋಗುವುದು.

೨ನೇ ೩ನೇ ತರಗತಿಗಳನ್ನು ನಮಗೆ ಕಲಿಸಿದವರು ಆ ಹುಸೇನಿ ಮಾಸ್ತರರೇ. ಓದು-ಬರಹ, ಶುದ್ಧ ಬರಹ, ಉಕ್ತಲೇಖನ, ಅಂಕಿ ಮಗ್ಗಿ, ಬಾಯಿ ಲೆಕ್ಕ, ಗಣಿತ, ಭೂಗೋಳ - ಯಾವುದನ್ನು ಕೇಳಿದರೂ ವರ್ಗದೊಳಗಿನ ವಿದ್ಯಾರ್ಥಿಗಳೆಲ್ಲರೂ ತಪ್ಪದೆ ಉತ್ತರ ಕೊಡುತ್ತಿದ್ದರು. ಇಂಡಿ ತಾಲೂಕು, ವಿಜಾಪುರ ಜಿಲ್ಲೆಗಳ ಮಾಹಿತಿಯನ್ನೆಲ್ಲ ತಮಗೆ ತಿಳಿದ ಮಟ್ಟಿಗೆ ಹೇಳಿ ಮನನ ಮಾಡಿಸಿದ್ದರು.

ಅವರು ತೊಟ್ಟುಕೊಳ್ಳುವ ಅಂಗಿಯಾಗಲಿ, ಸುತ್ತಿಕೊಳ್ಳುವ ರುಮಾಲವಾಗಲಿ ಒಂದೊಂದೇ; ಉಟ್ಟುಕೊಳ್ಳುವ ಧೋತರ ಮಾತ್ರ ಎರಡು, ಹಾಸಿಕೊಳ್ಳಲು ಸಿಂದಿಯ ಚಾಪಿ, ಅಂಗಿ ರುಮಾಲು ಮಾಸಿದರೆ, ಒಗೆಯಿಸಿ ಒಣಗಿಸಿ ಧರಿಸುವರು. ಕಾಲ್ಮರೆ ಕಂಡಿದ್ದು ನೆನಪಿಲ್ಲ, ಆದರೆ ಮೇಳದವರು ತೇರದಾಳ ರಾಧಾ - ಎಂಬ ಸಣ್ಣಾಟ ಮಾಡಿದಾಗ ಅದರಲ್ಲಿ ನಮ್ಮ ಮಾಸ್ತರರು ಗಲಪೋಜ (ಗೋಪಾಲಕೃಷ್ಣ) ಪಾತ್ರಧಾರಿಯಾಗಿ ಅಸ್ಖಲಿತವಾಗಿ ಮಾತಾಡುವುದು ನಮ್ಮ ತಂದೆಯವರಿಗೆ ತುಂಬ ಮೆಚ್ಚಿಗೆಯಾಗಿತ್ತು.

ಚಡಚಣದಲ್ಲಿ ಸೇರೆಯುವ ವಾರದ ಸಂತೆಯಲ್ಲಿ ಮತ್ತು ನೆರೆ ಹಳ್ಳಿಗಳಲ್ಲಿ ವಾರ್ಷಿಕ ಜಾತ್ರೆಯ ಕಾಲಕ್ಕೆ ತಂಬಾಕು ಮಾರಿ ಹತ್ತಿಪ್ಪತ್ತು ರೂಪಾಯಿ ಗಳಿಸುತ್ತಿದ್ದರು. ಮನೆಯೊಳಗಿನ ಹೆಣ್ಣುಮಕ್ಕಳು, ಜಾಚೇಲಿ-ಗುಲಾಲ-ಬುಕ್ಕಿಟ್ಟುಗಳನ್ನು ಬುಟ್ಟಿಯಲ್ಲಿರಿಸಿಕೊಂಡು ಓಣಿ ಓಣಿ ತಿರುಗಿ ಮಾರುತ್ತಿದ್ದರು. ಅದರಿಂದ ಬರುವ ಧಾನ್ಯ, ದುಡ್ಡು ಪ್ರಪಂಚಕ್ಕೆ ಸಹಾಯವಾಗುತ್ತಿತ್ತು.

ನಾಲ್ಕನೇ ಅಯ್ದನೇ ತರಗತಿಗಳಲ್ಲಿ ನಮ್ಮನ್ನು ತರಬೇತಿಗೊಳಿಸಿದವರು ಟ್ರೆಂಡ್ ಶಿಕ್ಷಕರು - ತಿಮ್ಮಾಜಿ ವೆಂಕಟೇಶ್ ಕುಲಕರ್ಣಿ ಎಂಬುವರು ಸಿಂದಗಿ ತಾಲೂಕಿನ ಜಾಲವಾದಿ ಗ್ರಾಮದವರು. ಎರಡು ವರ್ಷ ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ಇದ್ದುಕೊಂಡು, ಮೇಲ್ತರಗತಿಯಲ್ಲಿ ತೇರ್ಗಡೆ ಹೊಂದಿ ಬಂದವರು. ಅವರ ಮುಖಕ್ಷೌರ, ನೆಕ್‌ಟಾಯ್, ಬಿಳಿಜರದ ರುಮಾಲ ನೋಡಿ ನಾವೆಲ್ಲರೂ ತೆಪ್ಪಗಾಗುತ್ತಿದ್ದೆವು. ಅವರು ಹೇಳಿಕೊಟ್ಟ ವ್ಯಾಕರಣದ ಸಂಧಿ, ಸಮಾಸ, ಶುದ್ಧ ಲೇಖನ, ಗಣಿತ ಬಿಡಿಸುವ ಸುಗಮ ರೀತಿಗಳು ನಮಗೆ ಸುಗಮವಾಗಿ ಪಚನವಾದವು.

ಆ ಕಾಲಕ್ಕೆ ಅವರು ಸ್ಥಳೀಯ ಹವ್ಯಾಸಿ ನಾಟಕ ಮಂಡಳಿಯವರಿಗೆ ದಾಮಾಜಿ, ಪುಂಡಲೀಕ, ತುಕಾರಾಮ ಎಂಬ ಮರಾಠಿ ನಾಟಕಗಳನ್ನು ತದ್ರೂಪವಾಗಿ ಕನ್ನಡಿಸಿಕೊಟ್ಟಿದ್ದುಂಟು.

ಓಣಿಯಲ್ಲಿ ಅಲೆಯುವ, ಅಪಶಬ್ದಗಳನ್ನು ಕೂಗಾಡುವ ಹುಡುಗರು ಯಾವ ತರಗತಿಯವರೆಂಬುದನ್ನು ಗ್ರಹಿಸಿ ಶಾಲೆಯಲ್ಲಿ ಅವರಿಗೆ ತಕ್ಕ ಪಾರುಪತ್ಯವನ್ನು ಒದಗಿಸುತ್ತಿದ್ದರು.

ಆ ಕಾಲಕ್ಕೆ ಕಲ್ಲೋ ಜೀವಾಜಿ ಕುಲಕರ್ಣಿ ಎಂಬುವರು ಮುಖ್ಯ ಗುರುಗಳಾಗಿದ್ದರು. ಅವರು ಭೂಗೋಲ ವಿದ್ಯೆಯನ್ನು ಚೆನ್ನಾಗಿ ಅಭ್ಯಸಿಸಿದವರು. ಪೃಥಿವೀ ನಕಾಶೆಯನ್ನು ಸರ್ಕಾರದವರಿಗೆ ತೆಗೆದುಕೊಟ್ಟು ಬಹುಮಾನ ಪಡೆದಿದ್ದರು. ಪ್ರಾಯದ ವಿದ್ಯಾರ್ಥಿಗಳನ್ನು ಕಂಡು ಅವರು ಹರ್ಷಿತರಾಗುವರು. ಹತ್ತಿರ ಕರೆದು ಮುದ್ದಿಡುವರು, ಗಟ್ಟಿಯಾಗಿ ಅಪ್ಪಿಕೊಳ್ಳುವರು. ಅದರರ್ಥ ಸಾರ್ವಜನಿಕರಿಗೆ ತಿರುಗುಮುರುಗು ಕಂಡಿತು. ಪರಿಣಾಮ ವಿರಸವಾಯಿತು.

೧೯೧೦-೧೧ನೇ ವರ್ಷದಲ್ಲಿ ಬಂದ ಪ್ಲೇಗು, ೧೯೧೪ರಲ್ಲಿ ಪುನಃ ಕಾಣಿಸಿಕೊಂಡಿತು. ಆಗ ನಾನು ಅಯ್ದನೇ ತರಗತಿಯ ವಿದ್ಯಾರ್ಥಿ. ಮನೆಯೊಳಗಿದ್ದ ನಮ್ಮ ಸೋದರತ್ತೆಗೆ ಪ್ಲೇಗು ಬರಲು, ನಮ್ಮ ತಂದೆ ತನ್ನಕ್ಕನ ಆರಯಿಕೆಯನ್ನು ಚೆನ್ನಾಗಿ ಮಾಡಿದ್ದರ ಪರಿಣಾಮವಾಗಿ ಆಕೆ ಬದುಕಿ ಉಳಿದಳು.

ಮುಂದೆ ೩-೪ ದಿನ ಕಳೆಯುವಷ್ಟರಲ್ಲಿ ನಮ್ಮ ತಂದೆ ಅದೇ ಜಡ್ಡಿನಿಂದ ಹಾಸಿಗೆ ಹಿಡಿದರು. ಏಳಲೇ ಇಲ್ಲ. ಅಕ್ಕ ಈರವ್ವನ ಮಗ ಹಾಗೂ ತನ್ನಳಿಯ ಸಿದರಾಯನನ್ನು ಕರೆಯಿಸಿ - "ನೀನು ನನಗೆ ಸೋದರಳಿಯ. ಆದರೆ ಈರಪ್ಪ ಮತ್ತು ನಿಂಗನಿಗೆ ಸೋದರಮಾವ. ನಾನು ನಡೆದೆ. ಈ ಮನೆ ನಿಲ್ಲಿಸುವ ಕೆಲಸ ನೀನು ಮಾಡಬೇಕು. ಆ ಪಕರೀ ಗುರುವಿ ನಿನ್ನ ತಂಗಿ. ಆಕೆಯನ್ನು ಈರಪ್ಪನಿಗೆ ತಂದುಕೊಳ್ಳುವ ಕೆಲಸ ನಿನ್ನದು, ಆಯ್ತು, ಇಷ್ಟೇ ಹೋಗಿಬರುವೆ" ಎಂದು ಕಣ್ಣುಮುಚ್ಚಿದವರು ತೆರೆಯಲೇ ಇಲ್ಲ.

ಮೂರು ತಿಂಗಳ ಹಿಂದೆ, ಮನೆಯಿಂದ ಅರಣ್ಯ ವಾಸಕ್ಕೆ ಹೋಗುವಾಗ ನಾಲ್ವರಿದ್ದವರು, ಮರಳಿ ಮನೆಗೆ ಬರುವಾಗ ಮೂವರು ಮಾತ್ರ. ಅಣ್ಣ ಈರಪ್ಪ, ತಮ್ಮ ನಿಂಗಪ್ಪ ಹಾಗೂ ಅತ್ತೆ ಈರವ್ವ. ಆದರೆ

ಮೂವರಾದರೂ ಉಳಿಯುವ ಭರವಸೆಯಿರಲಿಲ್ಲ. ಈರವ್ವ ಅತ್ತೆಯ ತಗಲುತಿಪಲಿನ ವ್ಯವಹಾರ ಈರಪ್ಪನಿಗೆ ಆಗಿ ಬರುತ್ತಿರಲಿಲ್ಲ. ಇಂದೊ ನಾಳೆಯೋ, ಈಗಲೋ ಇಷ್ಟರಲ್ಲೋ ಎಂಬುವುದಕ್ಕೂ ಅವಕಾಶವಿರಲಿಲ್ಲ.

ಇದ್ದಕ್ಕಿದ್ದ ಹಾಗೆ ಅತ್ತೆ ಹೊರಟು ಹೋದಳು. ಎಲ್ಲಿಗೆ? ಮಗನ ಮನೆಗಂತೂ ಹೋಗುವಂತಿರಲಿಲ್ಲ. ಹೋದರೆ ಮಗಳ ಮನೆಗೆ. ಅದಕ್ಕಾಗಿ ಉಮದಿ ಗ್ರಾಮಕ್ಕೆ ನಡೆದುಕೊಂಡು ಹೋದಳು.

ಮನೆಯಲ್ಲಿ ಉಳಿದವರು ನಾವಿಬ್ಬರೇ.

ಈರಪ್ಪನ ಮದುವೆ ಎಂದೋ ಆಗಿತ್ತು. ನಮ್ಮವ್ವ ನನ್ನನ್ನು ಇನ್ನೂ ಹಡೆದಿರಲಿಲ್ಲ. ಅಂದ ಬಳಿಕ ಮದುವೆಯಾಗಿದ್ದ ಸುದ್ದಿಯಲ್ಲದೆ ನನಗೆ ಬೇರೆ ಇನ್ನೇನು ತಿಳಿದೀತು!

ಇದ್ದೂರಿನ ನಂಟುತನ. ಗಿಡವೀರ ಎಂಬ ಮನೆತನದವರೊಂದಿಗೆ ಹೊಂದಿಕೊಂಡು ಹೋಗಲು ಯಾರಿಗೂ ಸಾಧ್ಯವಿರಲಿಲ್ಲ. ಅಂಥ ತಂಟಲ ಮಾರಿ ಜನರು, ಜಗಳಗಂಟ ಜಾತಿ. ಆ ನಂಟುತನವನ್ನು ಮುಂದುವರಿಸಿಕೊಂಡು ಹೋಗುವುದು ಉಭಯರಿಗೂ ಬೇಕಿರಲಿಲ್ಲ. ಆದ್ದರಿಂದ ಆ ದಾರಿಗೆ ಮುಳ್ಳು ಬಡಿಯಲಾಯಿತು. ಮುಂದೆ? ಮುಂದೇನು, ಹೊತ್ತು ಬಂದಂತೆ ಕೊಡೆ ಹಿಡಿಯುವುದು!

ಅಣ್ಣ ಈರಪ್ಪ ನನಗಿಂತ ಹತ್ತು ವರ್ಷಗಳಿಗಿಂತ ಹಿರಿಯ, ತಾರುಣ್ಯ ಹಣಕಿಹಾಕುತ್ತಿತ್ತು, ಆಗಾಗ ಹೊರಚೆಲ್ಲುತ್ತಲೂ ಇತ್ತೆಂದು ತೋರುತ್ತದೆ. ನಾನಿನ್ನೂ ಬಾಲಕ-ವಿದ್ಯಾರ್ಥಿ ನಮ್ಮ ಮುಂದೆ ಎರಡು ಸಮಸ್ಯೆಗಳು ಎದ್ದು ನಿಂತವು - ಇಬ್ಬರ ಹೊಟ್ಟೆಗೂ ಸಾಕಾಗುವಷ್ಟು ಗಳಿಸುವುದು ಮತ್ತು ಕುದಿಸಿಕೊಂಡೋ, ಬೇಯಿಸಿಕೊಂಡೋ ತಿನ್ನುವುದು.

ಹಾಗೂ ಹೀಗೂ ಮಾಡಿ ಗಳಿಸುವ ಕೆಲಸವನ್ನು ಅಣ್ಣನು ಅಣೆಗೊಳಿಸಿದನು. ಕಿರಣೆ ಅಂದರೆ ಚಿಕ್ಕವರುಡುವ ಸೀರೆ ನೇಯಲಿಕ್ಕೆ ನಿಂತನು. ಒಂದು ಕಿರಣೆ ನೇದು ಮುಗಿಸಿದರೆ ಆರಾಣೆ ಕೂಲಿ. ಅಂದರೆ

ಇಂದಿನ ೩೭ ೧/೨ ನಯೆಪೈಸೆ. ಆರಂಭದ ಒಂದೆರಡು ತಿಂಗಳು ವಾರಕ್ಕೆ ನಾಲ್ಕು ಕಿರಣೆಗಳನ್ನು ಮಾತ್ರ ನೇದು ಮುಗಿಸಲು ಸಾಧ್ಯವಾಯಿತು. ಅದರಿಂದ ವಾರಕ್ಕೆ ೧ ೧/೨ ರೂ. ಕೂಲಿ ಬರತೊಡಗಿತು.

ದಿನ ಕಳೆದಂತೆ ನೇಯುವ ಕೆಲಸ ಒತ್ತರವಾಗುತ್ತ ಸಾಗಿತು. ಆದ್ದರಿಂದ ವಾರಕ್ಕೆ ಆರು ಕಿರಣೆಗಳ ಕೂಲಿ ಅಂದರೆ ೨ ೧/೪ ರೂ. ಬರಹತ್ತಿತು. ಗಳಿಕೆಗೂ ಖರ್ಚಿಗೂ ಮೇಳು, ಉಳಿಯುವುದೂ ಇಲ್ಲ, ಕಡಿಮೆ ಬೀಳುವುದೂ ಇಲ್ಲ.

ಈರಪ್ಪಣ್ಣನು ಸಂತೆಯ ದಿನ ಅಪ್ಪನಂತೆ ಉಪ್ಪುಮಾರಿ ಹತ್ತೆಂಟು ಆಣೆ ಮತ್ತು ಒಂದು ಖಾಲೀಚೀಲ ಉಳಿತಾಯವಾಗ ತೊಡಗಿತು. ಆ ಚೀಲ ಮಾರಿದರೆ ೬ ಆಣೆ ರೊಕ್ಕ ಬರುತ್ತಿತ್ತು.

ನಮ್ಮಿಬ್ಬರಿಗೂ ಕೂಡಿ, ವಾರಕ್ಕೆ ಬೇಕಾಗುವಷ್ಟು ಜೋಳ, ಗೋಧಿ, ಅಕ್ಕಿ, ಬೇಳೆ, ಮೆಣಸಿನ ಕಾಯಿ, ಉಳ್ಳೆಗಡ್ಡಿ, ಬಳೊಳ್ಳಿ, ಕಾಯಿಪಲ್ಲೆ ಎಲ್ಲ ತಂದರೂ ಖರ್ಚಾಗುವ ಹಣ ಹನ್ನೆರಡಾಣೆ ಮಾತ್ರ.

ಅಡ್ಡ ವಾರದಲ್ಲಿ ತರುವ ಜೀನಸೆಂದರೆ- ಮೊಸರು, ಬೆಲ್ಲ, ಒಳ್ಳೆಣ್ಣೆ, ಚಿಮಣಿ ಎಣ್ಣೆ ಇಷ್ಟಾದರೆ ಮುಗಿಯಿತು. ಹಾಲು ತುಪ್ಪಗಳ ಗೋಜಿಗೆ ಹೋಗುತ್ತಿರಲಿಲ್ಲ. ಇನ್ನು ಅರಿವೆಯ ಖರ್ಚು - ಅದು ಸಹ ತೀರ ಲೆಕ್ಕವಿಡಿದು ಸಾಗಬೇಕು.

ನನಗೆ ಬೇಕಾಗುವ ವರ್ಷದ ಬಟ್ಟೆಗಳೆಂದರೆ - ಒಂದೇ ಒಂದು ಅಂಗಿ, ಒಂದು ಬಡಿಗೆ ರುಮಾಲು, ಎರಡು ವರ್ಷ ಬಾಳುತ್ತಿದ್ದವು - ಒಂದು ಜೋಡು ದೋತರಗಳು, ಆದರೆ ಈರಪ್ಪಣ್ಣನ ವೇಷ ಭೂಷಣಕ್ಕೆ ಹೆಚ್ಚು ಹಣ ಬೇಕಾಗುತ್ತಿತ್ತು. ನಾನು ಚಿಕ್ಕವನಾಗಿದ್ದರೂ ಅತ್ತ ಗಮನಿಸುತ್ತಲೇ ಇರಲಿಲ್ಲ.

ಹಬ್ಬ ಹುಣ್ಣಿಮೆಯ ದಿನ ತೊಟ್ಟುಬಿಟ್ಟು ಕೊಳ್ಳುವ ಬಟ್ಟೆಗಳ ಸಲುವಾಗಿ ೪-೬ರೂ. ಖರ್ಚು ಮಾಡಿದರೆ ಸಾಕು. ಮುಗಿಲು ಮುಟ್ಟುವುದಕ್ಕೆ ನನಗೆ ಮೂರೇ ಗೇಣು ಉಳಿಯುತ್ತಿತ್ತು.

ನಾವಿಬ್ಬರೂ ಕಾಲ್ಮರೆ ಕೊಂಡವರಲ್ಲ. ಬರಿಗಾಲಿನ ವ್ರತವನ್ನು ನಾನು ೨೦ ವಯಸ್ಸು ತುಂಬಿದ ಬಳಿಕ ಬಿಟ್ಟೆ. ಅಣ್ಣನಿಗೆ ಈ ವ್ರತವೇನೂ ಇರಲಿಲ್ಲ. ಒಂದು ಜೊತೆ ಕಾಲ್ಮರೆ ಮಾತ್ರ ಇದ್ದವು. ಅವು ಎಲ್ಲಿಯೋ ಸಿಕ್ಕಿದ್ದವಂತೆ.

ಇನ್ನು ಅಡಿಗೆ ಮನೆಯ ಸುದ್ದಿ ಹೇಳಬೇಕೇ? ಅಲ್ಲಿ ಏನಾದರೂ ಚಲನವಲನ ನಡೆದಾಗಲೇ ಒಂದಿಷ್ಟು ಸುದ್ದಿ.

ಈರಪ್ಪನಿಗೆ ಒಬ್ಬ ಸ್ನೇಹಿತನಿದ್ದನು. ಅವನ ಹೆಸರು ಕಲ್ಲಪ್ಪ. ಜೇಡರ ಘನಶಾಮನ ಹಿರೇಮಗ, ಅವನದು ತುಂಬ ಮೃದು ಹೃದಯ, ಹೆಣ್ಣು ಹೃದಯವೆಂದರೆ ಒಳಿತಾಗಿ ಒಪ್ಪುತ್ತದೆ. ಆತನು ಅಡಿಗೆ ಮಾಡ ಬಲ್ಲವನಾಗಿದ್ದನು. ಮನೆಯಲ್ಲಿ ಮಾಡುವ ನೇಕಾರಿಕೆಗೆ ಸಂಬಂಧಿಸಿದ ಕೆಲಸಗಳನ್ನೆಲ್ಲ ಸಹಜವಾಗಿ ನಿಸ್ತರಿಸುತ್ತಿದ್ದನು.

ಅವನು ವಾರದಲ್ಲಿ ಒಂದೆರಡು ಸಾರೆ ಅವಕಾಶ ಮಾಡಿಕೊಂಡು ನಮ್ಮ ಮನೆಗೆ ಬಂದು ಹೋಗುತ್ತಿದ್ದನು. ಏತಕ್ಕೆಂದರೆ - ಬಂದವನೇ ಒಲೆ ಹೊತ್ತಿಸಿ, ೨-೩ ದಿವಸ ಇಬ್ಬರಿಗೂ ಸಾಲುವಷ್ಟು ರೊಟ್ಟಿ ಮಾಡಿಡುತ್ತಿದ್ದನು. ಬೇಳೆ ಕುದಿಸಿ ಮುಗುಚುವುದೂ, ಬಳ್ಳೊಳ್ಳಿಯ ಚಟಣಿ ಕುಟ್ಟುವುದೂ ನನ್ನ ಕೆಲಸ.

ಸೋಮವಾರ ಮತ್ತು ಗುರುವಾರಕ್ಕೊಮ್ಮೆ ಅಕ್ಕಿಯ ಅನ್ನ, ಎಂದೋ ಖರೀದಿಸಿದ ತುಪ್ಪ, ಹಾದಿಮನೆಯವರ ಮನೆಯಲ್ಲೋ, ಕೇಶೆಟ್ಟಿಯವರ ಮನೆಯಲ್ಲೋ ಇಸಗೊಂಡು ತಂದ ಮಜ್ಜಿಗೆ. ಇದೇ ನಮ್ಮ ವಿಶೇಷದ ಊಟ. ಬದಲಾವಣೆಯೂ ಅದೇ.

ಮಜ್ಜಿಗೆ ಶಿವದಾನವೆನಿಸಿದ್ದರಿಂದ ಉಳ್ಳವರು ಅದನ್ನು ಪುಕ್ಕಟೆಯಾಗಿ ಕೊಡುತ್ತಿದ್ದರು.

ಹಬ್ಬಹುಣ್ಣಿಮೆ ಬಂದಾಗ ನೆರೆಹೊರೆಯೆನ್ನದೆ ಎಲ್ಲಿ ನೋಡಿದಲ್ಲಿ ಉತ್ಸಾಹ ಶೃಂಗಾರಗಳು ಕಂಗೊಳಿಸುತ್ತಿರುವುದನ್ನು ಕಣ್ಣಾರೆ ಕಂಡು ನಾನು

ಮನೆಗೆ ಬಂದರೆ ಭಣಭಣ. ನಿರ್ಜನಶಾಂತಿ. ಅಣ್ಣನ ಮುಖ ನೋಡಿ ನಾನು, ನನ್ನ ಮುಖ ನೋಡಿ ಅಣ್ಣ ಒಳಗೊಳಗೇ ಮಿಡುಕುತ್ತಿದ್ದದ್ದು ತಿಳಿದರೂ ತಿಳಿಯದಂತೆ ಇರುತ್ತಿದ್ದೆವು. ಅದೊಂದು ಮೂಕಶೋಕ!

ಒಂದು ಹಬ್ಬದ ದಿವಸ ಊರ ಹುಡುಗರು, ಅದರಲ್ಲಿಯೂ ಸರಿವರೆಯರು ತೋರುವ ಆನಂದೋಲ್ಲಾಸಗಳ ಸುದ್ದಿಯನ್ನು ಅಣ್ಣನ ಮುಂದೆ ತೆಗೆದೆ. ಅವನು ಅದರರ್ಥ ಮಾಡಿಕೊಳ್ಳದೆ, ಏನೋ ಬೇಡುತ್ತಾನೆಂದು ಬಗೆದು, ಬ್ಯಂದವನೇ ಅಂಗಳದಲ್ಲಿ ನಿಂತ ನನ್ನನ್ನು ಎತ್ತಿ ಪಡಸಾಲೆಯಲ್ಲಿ ಒಗೆದುಬಿಟ್ಟನು. ಕೈಕಾಲು ತಲೆಗಳು ಪೆಟ್ಟುತಿಂದವು.

ಆ ಬಳಿಕ ಅದರ ಅರಿವು ಅವನಿಗಾಯಿತೇನೋ, ಕುಳಿತು ಅತ್ತು ಬಿಟ್ಟನು. ಅದನ್ನು ಕಂಡು ನಾನು, ಪೆಟ್ಟು ಹತ್ತಿಯೇ ಇಲ್ಲವೆನ್ನುವಂತೆ ಅವನನ್ನು ಸಂತೈಸಲು ಯತ್ನಿಸಿದೆ.

ಶರಣರಿಗೆ ನಿತ್ಯ ದೀಪಾವಳಿ, ನಿತ್ಯ ಶಿವರಾತ್ರಿ ಪರಿಣಮಿಸುತ್ತಿದ್ದವಂತೆ. ನಮಗೆ ನಿತ್ಯವೂ ಶಿವರಾತ್ರಿಯ ಉಪವಾಸ ಮತ್ತು ಹೋಳಿ ಹುಣ್ಣಿಮೆಯ ಬೊಬ್ಬೆ ಬೆಂಬಳಿಸಿದವು. ಹಬ್ಬದ ದಿನ ತಮ್ಮ ಮನೆಯ ಕೆಲಸ ಬಿಟ್ಟು ನಮ್ಮ ಅಡಿಗೆ ಯಾರು ಮಾಡಿಕೊಡುವರು? ಅದರಲ್ಲಿಯೂ ಹಬ್ಬದ ಅಡಿಗೆ ಮಾಡಿಕೊಡುವ ಗೊಡವೆಗೆ ಯಾರು ಹೋದಾರು?

ಇಂಥ ಪರಿಸ್ಥಿತಿಯಿದ್ದರೂ ನಾನು ಶಾಲೆ ತಪ್ಪಿಸುತ್ತಿರಲಿಲ್ಲ. ಮನೆಯಿಂದ ಹೊರಬಿದ್ದ ಕೂಡಲೇ ಮುಖದ ಕಳೆಯೇ ಬದಲಾಗುತ್ತಿತ್ತು. ಮನೆಯಲ್ಲಿ ಇವನ ಸ್ಥಿತಿ-ಗತಿ ಹೀಗೆಂದು ಯಾರಿಗೂ ತೋರುತ್ತಿರಲಿಲ್ಲ.

ಚಡಚಣದಲ್ಲಿ ನಮ್ಮ ಆಪ್ತ ಬಂಧುಗಳ ಮನೆತನಗಳು ಐವತ್ತರಷ್ಟಿದ್ದವು. ಯಾರ ಸಹಾಯ ಹಸ್ತವೂ ಚಾಚಿ ಬರುತ್ತಿರಲಿಲ್ಲ. ಹಾಗಾಗುವುದಕ್ಕೆ ಅವರಷ್ಟೇ ಕಾರಣರಲ್ಲ, ನಾವೂ ಕಾರಣರಾಗಿದ್ದೆವು. ನನ್ನ ಹಾಗೂ ನನ್ನಣ್ಣನ ಗೆಳೆಯರೆಲ್ಲ ಜೇಡರೇ ಆಗಿದ್ದರು, ನೇಕಾರರ ಮಕ್ಕಳೇ ಆಗಿದ್ದರು. ಬಣ್ಣಗಾರರ ಸಂಬಂಧವೇ ತಪ್ಪಿ ಹೋಗಿತ್ತು. ಆದ್ದರಿಂದ ಹುಟ್ಟಾ

ಪರದೇಶಿಗಳಂತಿದ್ದ ನಮ್ಮ ಕ್ಷೇಮ ಸಮಾಚಾರವನ್ನು ಅರಿತುಕೊಂಡು ಸಹಕಾರ ಹಸ್ತವನ್ನು ನೀಡುವವರು ನೇಕಾರ ಮಕ್ಕಳೇ ಆಗಿದ್ದರು.

ಶಂಕರದಾಸಿಮಯ್ಯನ ಸಂತಾನವೆನಿಸಿದ ನಮ್ಮನ್ನು ಸೋದರ ಭಾವದಿಂದ ಕಾಣುವವರು, ದೇವರದಾಸಿಮಯ್ಯನ ಸಂತಾನವದವರೇ ಆಗಿದ್ದರೆಂದು ನಿಚ್ಚಳವಾಗಿ ಹೇಳಬಹುದಾಗಿದೆ.

ನಮ್ಮ ಸೋದರತ್ತೆಯ ಮಗನಾದ ಸಿದರಾಯನೇ ನಮಗೆ ಉಳಿದೆಲ್ಲರಿಗಿಂತ ಹತ್ತಿರದವನು. ಇದ್ದಕ್ಕಿದ್ದ ಹಾಗೆ ಅವನ ಇಬ್ಬರು ಗಂಡು ಮಕ್ಕಳು ಅಸುನೀಗಿದರು. ಅವರ ಅಂತ್ಯಕ್ರಿಯೆ ಮುಗಿಸಿ, ಮನೆಗೆ ಬರುವ ಮೊದಲೇ ಕುಲಕರ್ಣಿಯವರ ಮನೆಯಿಂದ ಕರೆಬಂದಿತ್ತು. ಅದನ್ನು ಕೇಳಿ ಸಿದರಾಯ ನೇರವಾಗಿ ಕುಲಕರ್ಣಿಯವರ ಮನೆಗೆ ತೆರಳಿದನು.

ಅಲ್ಲಿಯ ಕೆಲಸವೆಂದರೆ, ತಂಗಿ ಗುರಮ್ಮನ ಗಂಡನಿಂದ ತ್ಯಾಗಪತ್ರ ತರುವುದು. ಆ ವಿಷಯವನ್ನು ಇಲ್ಲಿ ಒಂದಿಷ್ಟು ಸ್ಪಷ್ಟಗೊಳಿಸಬೇಕು.

ಶಹಾಪುರದ ಶೀಲವಂತನೆಂಬವನು ಸಿದರಾಯನ ತಂಗಿ ಗುರಮ್ಮನ ಸೋದರಮಾವ. ಅಂದರೆ ತಾಯಿಯ ತಮ್ಮ. ಬಹಳ ಚಿಕ್ಕಂದಿನಲ್ಲಿಯೇ ಶೀಲವಂತನಿಗೆ ಗುರಮ್ಮನನ್ನು ಕೊಟ್ಟು ಲಗ್ನ ಮಾಡಿದ್ದರು. ಆ ಬಳಿಕ ಬಹುತರ ವರ್ಷಗಳನ್ನೆಲ್ಲ ಶೀಲವಂತನು ಮೊಗಲಾಯಿಯ ಜೇಲಿನಲ್ಲಿಯೇ ಕಳೆಯುತ್ತ ಬಂದವನು. ಈಗ ಹೆಂಡತಿಯನ್ನು ಕರೆದೊಯ್ಯಬೇಕು ಇಲ್ಲವೆ ಪರಲು ಹರಕೊಂಡು ಹೋಗಬೇಕು ಎಂಬ ಉದ್ದೇಶದಿಂದ ಶೀಲವಂತನು ಚಡಚಣಕ್ಕೆ ಬಂದಿದ್ದನು.

ಅಣ್ಣ ತಂಗಿಯರು ಅಂದರೆ ಸಿದರಾಯ ಮತ್ತು ಗುರಮ್ಮ ಮಾತಾಡಿ ಕೊಂಡು ಒಂದು ನಿರ್ಧಾರಕ್ಕೆ ಬಂದರು. ಪರಲು ಹರಕೊಳ್ಳುವುದೇ ಒಳ್ಳೆಯದೆಂದು ತೀರ್ಮಾನಿಸಿದ್ದರಿಂದ, ಅವನಿಗೆ ಒಂದಿಷ್ಟು ಹಣಕೊಟ್ಟು, ತ್ಯಾಗಪತ್ರ ಬರೆಯಿಸಿಕೊಳ್ಳಬೇಕಾಗಿತ್ತು. ಆ ತ್ಯಾಗಪತ್ರವು ಸಿದರಾಯನ ಕೈಗೆ ಬಂದೊಡನೆ ಮನೆಗೆ ಬಂದು, ಮೂವರ ಹೆಸರಿನಲ್ಲಿ ಸ್ನಾನ

ಮಾಡಿದನು. ಇಬ್ಬರು ಗಂಡುಮಕ್ಕಳು, ತಂಗಿಯ ಗಂಡ ಒಬ್ಬ ಹೀಗೆ ಮೂವರು ಮರಣಗಳು ಒಂದೇ ದಿನ ಘಟಿಸಿದವೆಂದು ಭಾವಿಸಿದನು ಆ ಸಿದರಾಯ.

ನಮ್ಮ ತಂದೆ ತಾನು ದೇಹಬಿಡುವ ಕಾಲಕ್ಕೆ ಸಿದರಾಯನಿಗೆ ಹೇಳಿದ ಕೊನೆಯಪೇಕ್ಷೆಯಂತೆ ತಂಗಿ ಗುರಮ್ಮನನ್ನು ಈರಪ್ಪನಿಗೆ ಕೊಟ್ಟು ಪುನರ್ವಿವಾಹ ಮಾಡುವ ಕೆಲಸ ಸುಗಮಗೊಂಡಿತು.

ಗುರಮ್ಮನ ತಂದೆ ಮತ್ತು ತಮ್ಮ ನೂಲಿನ ವ್ಯವಹಾರಕ್ಕೆಂದು ಮೊಗಲಾಯಿ ನಾಡಿನಲ್ಲಿ ಅಲೆಯುತ್ತ ಹೋಗಿದ್ದರಿಂದ ಆ ಪುನರ್ವಿವಾಹ ಕಾರ್ಯವನ್ನು ಮುಂದೆರಡು ದಿನಗಳಲ್ಲಿ ಸಿದರಾಯ ಮುಗಿಸಿಬಿಟ್ಟನು.

ಈರಪ್ಪ ಹಾಗೂ ಗುರಮ್ಮ ಇವರ ದಾಂಪತ್ಯವೆಂದರೆ ಹಾಲಲ್ಲಿ ತುಪ್ಪ ತೇಲಿ ನಿಂತಂತೆ ಎಂದು ಬಂಧುಮಿತ್ರರು ಉಗ್ಗಡಿಸಿದರು.

ಈ ಏರ್ಪಾಡಿನಿಂದ ನನಗೆ ದಿನದ ಕೂಳು ದಿನಕ್ಕೆ ಸಿಗತೊಡಗಿತು. ಆ ಕಾರಣ ನನ್ನ ಶಾಲೆಯ ಅಭ್ಯಾಸವು ಸುಗಮಗೊಳ್ಳತೊಡಗಿತು. ಆ ವರುಷದ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ತರಗತಿಯಲ್ಲಿ ತೇರ್ಗಡೆ ಹೊಂದಿ, ೬ನೇ ತರಗತಿಯ ವಿದ್ಯಾರ್ಥಿಯಾಗಲು ಸಾಧ್ಯವಾಯಿತು.

ಬಹುವರ್ಷಗಳಿಂದ ನಮ್ಮ ಮನೆ ಗಂಡುಪಾಗಾ ಆಗಿ, ಗಂಡು ರೊಟ್ಟಿ ತಿನ್ನುತ್ತ ದಿನಕಳೆಯುತ್ತಿತ್ತು. ಈಗ ಗುರಮ್ಮನ ಕಾಲ್ಗುಣದಿಂದ ಮನೆಗೆ ಶೋಭೆ ಸೌಭಾಗ್ಯಗಳು ಉಂಟಾದವು.

ತಾಯಿ-ಅಜ್ಜಿಯರನ್ನು ಕಳೆದುಕೊಂಡಿದ್ದ ಹಾಗೂ ಹುಟ್ಟಾ ಅಕ್ಕ ತಂಗಿಯರ ಅಕ್ಕರೆಯನ್ನು ಕಾಣದ ನನ್ನ ಬಾಳಿಗೆ ಹಸಿರು ಸಿರಿ ಬಂದ ಹಾಗಾಯಿತು.

ಹಿರಿಹಿರಿ ಹಿಗ್ಗಿದೆನು. ನನ್ನಂತೆ ನನ್ನಣ್ಣನಿಗೂ ಒಂದು ಗಟ್ಟಿಯಾದ ಆಧಾರ ದೊರಕೊಂಡಂತಾಯಿತು.

ಆತನ ಮದುವೆಯ ಹೆಂಡತಿ ಚಡಚಣದ ಬೇರೊಂದು ಓಣಿಯಲ್ಲಿ ಬೆಳೆದು ನಿಂತಿದ್ದಳು.

ಗುರಮ್ಮನ ತಂಗಿ ಭವರಮ್ಮನನ್ನು ಕರೆತಂದು ಅಕ್ಕ-ತಂಗಿಯರಂತೆ ನಾವಿರೋಣ ಎಂದು ಆ ದಿಶೆಯಲ್ಲಿ ಪ್ರಯತ್ನಪಟ್ಟಳು. ಆದರೆ ಆ ಗಿಡವೀರ ಮನೆತನದವರು ಭವರಮ್ಮನನ್ನು ಕಳಿಸಲಿಲ್ಲ. ಆಕೆ ಮೈನರೆದು ದೊಡ್ಡವಳಾಗಿ ಮುಂದೆ ನಾಲ್ಕೆಂಟು ತಿಂಗಳಲ್ಲಿ ದೇಹವಿಟ್ಟಳು.

೪. ಮನೆ-ಮಲ್ಲಶಾಲೆ

"ಬೇಡಿ ಉಣ್ಣು ನೀಡಿದಷ್ಟು" ಎಂಬುದು ತುಸು ಮಾರ್ಪಾಟುಗೊಂಡರೆ, "ಬೇಡದೆ ಉಣ್ಣು ನೀಡಿದ್ದನ್ನು" ಎಂಬಂತಾದೀತೆಂದು ನಾನೆಣಿಸಿರಲಿಲ್ಲ.

ಆಗಲಿ, ಪಾಲಿಗೆ ಬಂದುದು ಪಂಚಾಮೃತವೇ.

ನನ್ನ ಈ ನುಡಿಯಲ್ಲಿ ತುಸು ಅಪಸ್ವರ ಕೇಳಿಬರತ್ತದೆ ಅಹುದು.

ಅಣ್ಣನ ಉದ್ಯೋಗ ನೇಯುವುದು. ಅದೂ ಕೂಲಿಯಿಂದ. ಕಿರಣೆಯಿಂದ ಆರಂಭಗೊಂಡ ಅವನ ನೆಯ್ಗೆಯ ಕಾರ್ಯದಲ್ಲಿ ಪ್ರಗತಿಯಾಗಿ ಸೀರೆ ನೆಯ್ಯುವವನಾಗಿದ್ದಾನೆ. ದಿನಾಲು ತಪ್ಪದೆ ಒಂದು ಸೀರೆ ನೆಯ್ದು ಮುಗಿಸುತ್ತಾನೆ, ಕೈಮಗ್ಗದಲ್ಲಿ ಕುಳಿತು. ಸಟೇಲ ಮಗ್ಗವಲ್ಲ.

ಕೂಲಿ ಒಂದು ಸೀರೆಗೆ ಹತ್ತಾಣೆ, ಆರು ದಿವಸ ಪೂರ್ತಿ ಕೆಲಸ ಮಾಡಿದರೆ ವಾರಕ್ಕೆ ೧೨ ಆಣೆ ಬರುತ್ತದೆ. ಉತ್ಪನ್ನ ತುಸು ಹೆಚ್ಚಾಯಿತು. ಆದರೆ ಅದಕ್ಕಿಂತ ಖರ್ಚು ಬೆಳೆದಿತ್ತಲ್ಲವೇ? ಗಳಕೆ-ಬಳಕೆಗಳಿಗೆ ತಾಳಮೇಳ ಇದ್ದರಲ್ಲವೆ ಸುಖ ಹಾಗೂ ನೆಮ್ಮದಿ. ತಾಳ ಮೇಳ ಇಲ್ಲದಿದ್ದರೆ ತಾಕುಂತಳಬೇಕು ಎಂದು ದಾಸವರ್ಯರು ಹಾಡಿದ್ದಾರೆ.

ಗುರಮ್ಮ ವ್ಯವಹಾರ ಚತುರೆ, ಚಡಚಣದ ಸಂತೆಯೆಂದರೆ ವ್ಯವಹಾರ ಕಲಿಸುವ ಟ್ರೇನಿಂಗ್ ಕಾಲೇಜ, ಒಂದೆರಡು ವರುಷ ಗುರಮ್ಮ ಆ ತರಬೇತಿ ಪಡೆದಿದ್ದಳು. ಗಳಿಸುವ ಹದ, ಹವಣು ಆಕೆಗೆ ಅವಗತವಾಗಿದೆ. ಗಳಿಕೆಯ

ಸವಿಗಂಡ ಗುರಮ್ಮ ಗಂಡನ ಮನವೊಲಿಸತೊಡಗಿದಳು - ಸಂತೆಯ ವ್ಯಾಪಾರದಲ್ಲಿ ತೊಡಗೋಣ ಎಂದು. ಕಾಂತೆಯ ಮಾತು ಕಾಂತಿ ಯುತವಾಗಿ ಕಂಡಿತು. ಈರಪ್ಪನು ತಲೆದೂಗುವಂತೆ ಮಾಡಿತು. ಆಮೇಲೆ ಬುಧವಾರ ಬರುವುದಕ್ಕೆ ತಡವಾಗಲಿಲ್ಲ.

ನಮ್ಮೂರ ಸಂತೆಯೆಂದರೆ ಹಣ ಗಳಿಸುವ ವಿದ್ಯೆಯಲ್ಲಿ ನಿಪುಣರನ್ನಾಗಿ ಮಾಡಬಲ್ಲ ತರಬೇತಿ ಕೇಂದ್ರವೆಂದು ಈಗಾಗಲೇ ಹೇಳಿದ್ದೇನೆ. ಆ ಕೇಂದ್ರದಲ್ಲಿ ಅಭ್ಯಸಿಸಿ ರ್‍ಯಾಂಕು ಪಡೆದು ತೇರ್ಗಡೆಯಾದ ಹೆಣ್ಣುಮಕ್ಕಳಲ್ಲಿ ನಮ್ಮ ಅತ್ತಿಗೆ ಗುರುಮ್ಮನಿಗೆ ಪ್ರಥಮ ವರ್ಗದ ಪ್ರಥಮ ಸ್ಥಾನ ಕೊಡುವಂಥಾದಾಗಿತ್ತು. ಆಕೆಯ ನೆರಳು ಬಡಿದವರು ಸಹ ಆ ಧನ ಸಂಪಾದನೆಯ ವಿದ್ಯೆಯಲ್ಲಿ ಪಿಎಚ್.ಡಿ. ಪಡೆದವರ ಸಾಲಿನಲ್ಲಿ ಸೇರ್ಪಡೆ ಆಗುತ್ತಿದ್ದರು. ಇರಲಿ.

ಕಾಳಿನ ವ್ಯಾಪಾರ. ಠೋಕು ಧಾರಣೆಯಿಂದ ಕೊಂಡು, ಕಿರುಕುಳ ಧಾರಣೆಯಿಂದ ಮಾರುವುದು. ಸಂತೆಯ ದಿನ ಒಂದಿಷ್ಟು ಶ್ರಮಿಸಿದರೆ ೮-೧೦ರೂ.ಗಳು ಸಹಜವಾಗಿ ಉಳಿಯುವವು. ಆ ಯುಕ್ತಿ ಯಾರಿಗೆ ಬೇಡವೆನಿಸೀತು? ಬುಧವಾರದ ಸಂತೆಯ ಸಿದ್ಧತೆ ಮಂಗಳವಾರದಿವಂಲೇ ಆರಂಭಗೊಳ್ಳುವದು. ಬುಧವಾರವಂತೂ ಹೇಳಿಕೇಳಿ, ಮದುವೆಯ ನಂದಮಕ (ನಂದಿಮುಖ)ವಿದ್ದಂತೆ.

ಅಂದು ನಮ್ಮ ಶಾಲೆ ಬಿಡುವವಷ್ಟರಲ್ಲಿ ನಮ್ಮ ಅತ್ತಿಗೆ-ಅಣ್ಣ ಇಬ್ಬರೂ ಸಂತೆಯಲ್ಲಿ ಸಹಭಾಗಿ ಆಗುವರು. ಅಕ್ಕಿ, ಬೇಳೆ, ಗೋದಿ ಮೊದಲಾ ದವುಗಳನ್ನು ಒಟ್ಟುಗಾರರಲ್ಲಿ ಸಾಕಷ್ಟು ಖರೀದಿಸಿ, ತಾವು ಮಾರಾಟ ಮಾಡುವ ಸ್ಥಳಕ್ಕೆ ತಂದು ದೊಳ್ಳಿಡಿಗೆ (ಬುಟ್ಟಿ)ಯಲ್ಲಿ ತುಂಬಿಡುವರು. ಅದೇ ಹೊತ್ತಿಗೆ ಹಳ್ಳಿಯಿಂದ ಬಂದ ಧಾನ್ಯದ ತಲೆಗಂಟುಗಳನ್ನು ಬಿಚ್ಚಿನೋಡಿ ಖರೀದಿಸುವುದು ಮತ್ತು ತಮ್ಮ ವಶದಲ್ಲಿ ಇರಿಸಿಕೊಳ್ಳುವುದು.

ಈವರೆಗೆ ಮಾಡಿದ್ದು ಧಾನ್ಯಸಂಗ್ರಹ, ಆ ಬಳಿಕ ಧಾನ್ಯದ ವಿತರಣಕ್ಕೆ ಆರಂಭ. ಸೊಲಗಿ, ಅದ್ದನಗಿ, ಗಿದ್ದನಗಿ, ಕೊಳವಿ ಎಂಬ ಮಾಪುಗಳನ್ನು

ಬಳಸಲಾಗುತ್ತಿತ್ತು. ಖರೀದಿಸುವಾಗ ಉಪಯೋಗಿಸುವ ಮಾಪು ಬೇರೆ. ಮಾರಾಟ ಮಾಡುವಾಗ ಉಪಯೋಗಿಸುವ ಮಾಪು ಬೇರೆ. ಆದರಂತೆ ಖರೀದಿಸುವ ಧಾರಣೆ ಕಡಿಮೆ, ವಿಕ್ರಯಿಸುವ ಧಾರಣೆ ಹೆಚ್ಚಿಗೆ. ಕೊಂಡ ಬೆಲೆ ಕೊಂಡು ಮಾರುವ ಬೆಲೆ ಒಮ್ಮೊಮ್ಮೆ ಕಡಿಮೆ ಆಗುವುದುಂಟು, ಆಗ ಉಪಯೋಗಿಸುವ ಮಾಪುಗಳೆಂದರೆ ಬುಡಬಡಿದಿಟ್ಟವುಗಳೇ ಆಗಬೇಕಲ್ಲವೇ?

ಈ ಹೊಸ ವ್ಯಾಪಾರವು ನಮ್ಮ ಅತ್ತಿಗೆ ಅಣ್ಣಂದಿರಿಗೆ ಬಹು ಪ್ರಯೋಜನಕಾರಿಯೆನಿಸಿತು.

ನಮ್ಮ ಶಾಲೆ ಸಂತೆಯ ದಿನ ಒಪ್ಪತ್ತು ಮಾತ್ರ ನಡೆಯುವದು. ಮಧ್ಯಾಹ್ನ ಸೂಟಿ. ನಾನು ಶಾಲೆ ಬಿಟ್ಟ ಬಳಿಕ ಮನೆಗೆ ಹೋಗಿ, ಅವಸರದಿಂದ ಊಟ ಮುಗಿಸಿ ಸಂತೆಗೆ ಓಡುತ್ತಿದ್ದೆ. ಅತ್ತಿಗೆಯು ನನಗಾಗಿ ೧ ೧/೨ ರೊಟ್ಟಿಗೆ ಸಾಧನೆ ಹಾಕಿ ಸಿದ್ಧಗೊಳಿಸಿಯೇ ಇಟ್ಟಿರುತ್ತಿದ್ದಳು.

ಮಾರಾಟಕ್ಕೆ ಕುಳಿತು ಅಣ್ಣನಿಗೆ ನೆರವಾಗುವುದೇ ನನ್ನ ಮುಖ್ಯ ಕೆಲಸ. ಅತ್ತಿಗೆಯು ತಲೆ ಗಂಟುಗಳ ವಿಭಾಗಕ್ಕೆ ಹೋಗಿ, ಕಾಳು ಖರೀದಿಸುವ ಎತ್ತುಗಡೆ ನಡೆಸುವಳು. ಸಂಜೆಯ ೫ ಗಂಟೆಯವರೆಗೆ ವ್ಯಾಪಾರ ಭರಾಟೆಯಿಂದ ನಡೆದರು. ಮರುಗಳಿಗೆಯಲ್ಲಿ ಒಟ್ಟುಗಾರರು ವಸೂಲಿಗೆ ಬರತೊಡಗುವರು.

ಒಟ್ಟುಗಾರರೆಂದರೆ ಚಡಚಣದವರಿಗಿಂತ ಇಂಡಿ-ಬಳ್ಳೊಳ್ಳಿಯ ಶೇಟ-ಶೆಟ್ಟರೇ ಹೆಚ್ಚು ಅನ್ನಬಹುದು. ಯಾವ ಕಲಮೂ ಬೇಬಾಕಿ ಆಗುತ್ತಿರಲಿಲ್ಲ. ಸಂಜೆಯ ದೀಪ ಹಚ್ಚುವ ವೇಳೆಗೆ ನಮ್ಮ ಬದುಕು ಮನೆಗೆ ಬರತೊಡಗುವುದು. ಆ ಕೆಲಸವನ್ನು ಹಮಾಲರ ಕಡೆಯಿಂದ ಮಾಡಿಸ ಬಹುದಾಗಿತ್ತು. ಆದರೆ ಆ ಹಣವನ್ನು ಉಳಿಸಿಕೊಳ್ಳುವುದು ಜಾಣತನ. ಅದಕ್ಕಾಗಿ ನಾನು ಬಹು ಶ್ರಮದಾನ ಮಾಡಬೇಕಾಗುತ್ತಿತ್ತು.

ಧಾನ್ಯಕಾಳಿನ ಸಣ್ಣ ದೊಡ್ಡ ಚುಂಗಡಿ ಮಾಡಿ ಹೊತ್ತೊಯ್ದು ಮನೆಗೆ ಹಾಕುವ ಕೆಲಸ ಕಲಿತು ಪಳಗತೊಡಗಿದೆನು. ಅಣ್ಣನೂ ಆ ಕೆಲಸಕ್ಕೆ

ಹಿಂಜರಿದವನಲ್ಲ. ಮಾರದೆ ಉಳಿದ ಬದುಕೆಲ್ಲ ಮನೆಗೆ ಬಂದು ಹತ್ತುವುದಕ್ಕೆ ೨ ತಾಸು ರಾತ್ರಿ ಆಗುತ್ತಿತ್ತು. ಮನೆಯವರೆಲ್ಲ ದಣಿದು ಹೆಣವಾಗುತ್ತಿದ್ದೆವು. ಅರ್ಧಮರ್ಧ ಎಚ್ಚರಿಕೆಯಲ್ಲಿ ಕೈ ತುತ್ತು ಬಾಯ್ತುತ್ತು ತಿಂದು ಅಲ್ಲಿಯೇ ಉರುಳುತ್ತಿದ್ದೆವು. ಬೆಳಗಾಗುವವರೆಗೆ ಎಚ್ಚತ್ತರೆ ಆಣೆ.

ಮೊದಲಿಗೆ ಎಚ್ಚರಾಗುವುದು ನನಗೇ. ಯಾಕಂದರೆ ಮುಂಜಾವಿನ ಶಾಲೆ ೭ ಗಂಟೆಗಲ್ಲವೇ? ಎದ್ದ ಕೂಡಲೇ ಬಚ್ಚಲ ಮನೆ ಹೊಕ್ಕು, ಮುಖದ ಮೇಲೆ ನೀರುಗ್ಗೈ ಎಳೆದುಕೊಂಡು, ಉಟ್ಟಿರುವ ಧೋತರದಿಂದಲೇ ಅದನ್ನೊರಿಸಿಕೊಳ್ಳುತ್ತ ಪುಸ್ತಕ ಪಾಟಿಗಳನ್ನು ಎತ್ತಿಕೊಂಡು ಸದ್ದು ಮಾಡದೆ ಹೊರಬೀಳುತ್ತಿದ್ದೆ.

ಆಗ ನಾನು ೫ನೇ ತರಗತಿಯ ವಿದ್ಯಾರ್ಥಿ. ನೆಚ್ಚಿನ ಗುರುಗಳಿಗೆ ಅಚ್ಚುಮೆಚ್ಚಿನ ವಿದ್ಯಾರ್ಥಿ ನಾನು. ಮನೆಯ ಪರಿಸ್ಥಿತಿ, ಅಲ್ಲಿ ನಾನು ಮಾಡುವ ಕಾರ್ಯಕಲಾಪ ಇವಾವವೂ ಅವರಿಗೆ ಗೊತ್ತಾಗಗೊಡದೆ, ಸುಖದ ಸುಪ್ಪತ್ತಿಗೆಯಿಂದ ಎದ್ದು ಬಂದ ರಾಜ ಪಿಂಡದ ವಿದ್ಯಾರ್ಥಿಯೆಂದೇ ತೋರಿಸಿಕೊಳ್ಳುತ್ತಿದ್ದೆ. ಶಾಲೆಯಿಂದ ಮನೆಗೆ ಹೊರಟಾಗ ಆ ಗುರುಗಳು ಅತ್ಯಂತ ಆತ್ಮೀಯತೆಯಿಂದ ನನ್ನ ಹೆಗಲಮೇಲೆ ಕೈಯಿಟ್ಟು ಮೆಲ್ಲಡಿಯಿಡುತ್ತ ನನ್ನ ಮನೆ ವಾರ್ತೆ, ಕುಶಲ ಸಮಾಚಾರಗಳನ್ನು ಕೇಳಿಕೊಳ್ಳುತ್ತಿದ್ದರು. ಅವರಿಗಿತ್ತ ಪಡಿನುಡಿಗಳಲ್ಲಿ ಬಹುಶಃ ಸುಳ್ಳಿನ ಕಂತೆಯೇ ಆಗಿರುತ್ತಿತ್ತು.

ಅವೆಷ್ಟೇ ತೊಂದರೆಗಳು ನನಗಿದ್ದರೂ ನಾನು ಅವುಗಳನ್ನೆಲ್ಲ ನುಂಗಿ ಕೊಂಡು ಮುಂದುವರಿದಿದ್ದೆನು. ನೋಡಿದವರಿಗೆ ನಾನು ನಿಶ್ಚಿಂತ ಬಾಲಕನಂತೆಯೇ ತೋರುತ್ತಿತ್ತು.

ಬುಧುವಾರ ಸಂತೆ, ಗುರುವಾರ-ಶುಕ್ರವಾರ ಉದ್ರೀ ವಸೂಲಿ. ಶನಿವಾರ-ರವಿವಾರ ವಸೂಲಾಗಿ ಬಂದ ಹಣಕ್ಕೆ ಕೈಗಡ ಬಾಯಿಗಡ ಹಣಸೇರಿಸಿ ಒಟ್ಟುಗಾರರಿಗೆ ಮುಟ್ಟಿಸುವ ಕೆಲಸ ನಿರ್ವಹಿಸಲಾಗುತ್ತಿತ್ತು. ಯಾಕೆಂದರೆ ಅಂದು ಒಟ್ಟುಗಾರರು ಸೊಲ್ಲಾಪುರಕ್ಕೋ ಪಂಢರಪುರಕ್ಕೋ ಹೋಗಿ, ಬುಧವಾರ ಸಂತೆಗಾಗಿ ಹೊಸ ಬದುಕು ತರಬೇಕಾಗುತ್ತಿತ್ತು. ಆ ಕಾಲಕ್ಕೆ ಎತ್ತಿನ ಬಂಡಿಯೇ ಪ್ರವಾಸ ಸಾಧನವಾಗಿತ್ತು.

ಆ ಬಳಿಕ ಬರುವುದು ಸೋಮವಾರ. ಅದೊಂದು ದಿನವನ್ನು ನಿಶ್ಚಿಂತೆ ಕಳೆಯುವಷ್ಟರಲ್ಲಿ ಮಂಗಳವಾರ ಹಣಿಕೆ ಹಾಕುತ್ತಿತ್ತು ಮರುದಿನವೇ ಸಂತೆ-ಬುಧವಾರ ಅಲ್ಲವೇ?

ಶಾಲೆಗೆ ದಿನಾಲು ಎರಡೂ ಹೊತ್ತು ತಪ್ಪದೆ ಹೋಗುವುದಕ್ಕೆ ಯಾವ ತಡೆಯೂ ಉಂಟಾಗದಂತೆ ಅವೆಷ್ಟೋ ಮನೆಗೆಲಸಗಳನ್ನು ಸಕಾಲಕ್ಕೆ ನಿರ್ವಹಿಸಲು ನಿಶ್ಚಯಿಸಿದೆನು, ಹೇಗೆಂದರೆ-

ಅತ್ತಿಗೆ-ಅಣ್ಣ ಅವರಿನ್ನೂ ನಿದ್ರೆ ಮಾಡುತ್ತಿರುವಾಗ ನಾನೆದ್ದು, ಬಳಕೆಯ ನೀರು ೬-೮ ಕೊಡ ತಂದು ತಪ್ಪೇಲಿ ಹಂಡೆ ತುಂಬಿದ ಬಳಿಕ ೨ ಕೊಡ ಕುಡಿಯುವ ನೀರು ತಂದಿಟ್ಟು, ಬಳಿಕ ಕೈಕಾಲು ತೊಳಕೊಂಡು ಶಾಲೆಗೆ ಹೋಗಿ ನಂಬರು ಹಚ್ಚುತ್ತಿದ್ದೆ. ಪ್ರಾರ್ಥನೆ ಕವಾಯತ ಮುಗಿಸಿ ಪಾಠಗಳಲ್ಲಿ ಆಸಕ್ತಿ ವಹಿಸುತ್ತಿದ್ದೆವು. ಆ ಕ್ರಮ ಹತ್ತುವರೆ ಗಂಟೆಯವರೆಗೆ ಸಾಗುತ್ತಿತ್ತು.

ಹನ್ನೊಂದು ಗಂಟೆಗೆ ಮನೆಗೆ ಬಂದು, ಜಳಕಕ್ಕೆಂದು ಹಳ್ಳಕ್ಕೆ ಹೋಗುತ್ತಿದ್ದೆ. ದೇವರ ಪೂಜೆ ಮಾಡಿದ ಬಳಿಕ ಊಟ. ಅತ್ತಿಗೆ ಮಾಡಿದ ರೊಟ್ಟಿ ಒಂದರಿಂದ ನನ್ನ ಹೊಟ್ಟೆ ತುಂಬುತ್ತಿತ್ತು. ಮೇಲೆ ಜೋಳದ ನುಚ್ಚು-ಮಜ್ಜಿಗೆ. ಮಜ್ಜಿಗೆಯಿಲ್ಲದಿದ್ದರೆ ಸೌಟು ಒಳ್ಳೆಣ್ಣೆಯಾದರೆ ಹೊಟ್ಟೆ ತುಂಬಿದ ಸುದ್ದಿ ಹೇಳುವ ಒಂದೆರಡು ಡರಿಗಳು ಬರುವವು.

ತರುವಾಯ ಮಧ್ಯಾಹ್ನ ಶಾಲೆಯ ಅಭ್ಯಾಸ ಸಿದ್ಧತೆ.

ಮನೆಯ ಕೆಲಸಕ್ಕೆ ನಾನು ಸಾಕಷ್ಟು ನೆರವು ನೀಡುತ್ತಿದ್ದೆ. ಅದಿಲ್ಲದಿದ್ದರೆ ನಾನು ನಿಯಮಿತವಾಗಿ ಶಾಲೆಗೆ ಹೋಗುವುದು ಸಾಧ್ಯವೇ ಇರಲಿಲ್ಲ. ಬಳಕೆಯ ನೀರು, ಕುಡಿಯುವ ನೀರು ತರುವ ಕೆಲಸವಲ್ಲದೆ, ಇನ್ನೇನಾದರೂ ಮಾಡಲು ಸಾಧ್ಯವಿದೆಯೇ ಎಂದು ಯೋಚಿಸತೊಡಗಿದೆನು. ಯಾಕೆಂದರೆ ಈವರೆಗೆ ನಾನು ನೀಡುತ್ತ ಬಂದ ನೆರವಿನಿಂದ ಅತ್ತಿಗೆಗೆ ತೃಪ್ತಿಯಾದಂತೆ ಕಂಡುಬರಲಿಲ್ಲ.

ಮಳೆಗಾಲ-ಚಳಿಗಾಲವೆನ್ನದೆ ನಸುಕಿನಲ್ಲೆದ್ದು ಹತ್ತೆಂಟು ಕೊಡ ನೀರು ತರುವುದು ತುಸು ತೊಂದರೆಯ ಕೆಲಸವೆ ಆಗಿತ್ತು. ಒಮ್ಮೊಮ್ಮೆ ಬಳಕೆಯ ನೀರು ತಂದು ತುಂಬುವಷ್ಟರಲ್ಲಿ ಶಾಲೆಗೆ ಹೋಗುವುದಕ್ಕೆ ತಡವಾಗುವುದೆಂದು, ಕೊಡಗಳನ್ನು ಬೂದಿ ಹಚ್ಚಿ ಬೆಳಗಿ, ಬಳಕೆಯ ನೀರನ್ನೇ ತುಂಬಿದ್ದು ಕುಡಿಯುವ ನೀರಿನಂತೇ ಕಾಣುತ್ತಿತ್ತು. ವೇಳೆ ಉಳಿಸಿಕೊಳ್ಳುವ ಉಪಾಯ ಮಾಡುವಷ್ಟರಲ್ಲೆ ಮೋಸ ಬಯಲಿಗೆ ಬರುವುದಕ್ಕೆ ತಡವಾಗಲಿಲ್ಲ. ಆದರಿಂದ ತಲೆ ತಗ್ಗಿಸುವಂತಾಯಿತು. ಆದ್ದರಿಂದ ಆ ದಾರಿ ಬಿಟ್ಟುಕೊಟ್ಟೆನು.

ಇನ್ನಾವ ಹೆಚ್ಚಿನ ಕೆಲಸ ನಿರ್ವಹಿಸಿ ಅತ್ತಿಗೆಯನ್ನು ಪ್ರಸನ್ನಗೊಳಸಲಿ ಎಂದು ಯೋಚಿಸುತ್ತಿರುವಾಗ ಒಂದು ವಿಷಯ ಹೊಳೆಯಿತು -

ದಿನಕ್ಕಿಂತ ಅರ್ಧತಾಸು ಮುಂಚಿತವಾಗಿ ಏಳಬೇಕು. ಅಡಿಗೆಮನೆ, ಪಡಸಾಲೆ, ಅಂಗಳ ಹಾಗೂ ತಲೆಬಾಗಿಲು ಮುಂದಿರುವ ಬಯಲು ಇವುಗಳ ಕಸಹೊಡೆದು, ಬಚ್ಚಲಕ್ಕೆ ಹೋಗಿ ಮುಸುರೆಯ ಗಡಿಗೆ ಭಾಂಡೆಗಳನ್ನೆಲ್ಲ ಬೆಳಗಿ ತೊಳೆಯಬೇಕು, ಬಳಿಕ ವಾಡಿಕೆಯಂತೆ ನೀರು ತರುವ ಕೆಲಸ.

ಈ ಯೋಚನೆಯು ಒಂದೆರಡು ದಿನಗಳಲ್ಲಿಯೇ ಕಾರ್ಯರೂಪದಲ್ಲಿ ಬಂತು. ಆದರೆ ಅದನ್ನು ಕಂಡು ಅತ್ತಿಗೆಯೇನೂ ಹಿಗ್ಗಲಿಲ್ಲ. ಸಮಧಾನಪಡಲಿಲ್ಲ.

"ಪುರಕ್ ಪುರಕ್ ಕಸಾಹೊಡೆದು, ಎರಡುಗಡಿಗೆ ಎರಡು ತಾಬಾಣ ತೊಳೆಯುವ ಕಟ್ರಮುಟ್ರ (ಕಸಮುಸರಿ) ಮಾಡಿದರೆ ಏನು ಗಳಿಸಿದಂತಾಯಿತು? ಇವನ ಓರಗೆಯವರು ವಾರಕ್ಕೆ ೪ ರೂ. ಪಗಾರ ತರುತ್ತಾರೆ, ಶಾಲೆ ಕಲಿತರೆ ನಮಗೆ ಬಂದದ್ದೇನು?" ಎಂದು ಕರ್ಕಶ ನುಡಿಯುವಳು.

ಆ ಮಾತು ಕೇಳಿ ನನ್ನ ಕೈಕಾಲು ತಣ್ಣಗಾದವು. ನಿಂತನಿಂತಲ್ಲಿಯೇ ಗಂಟಲು ಹಿಸುಕಿಕೊಳ್ಳಬೇಕೆನಿಸಿತು. ಆದರೆ ಆ ಧೈರ್ಯ ನನಗೆಲ್ಲಿ? ಬಡಿದತ್ತ ಬೆನ್ನು ಕೊಡುವ ಹೇಡಿಯಾಗುವುದೇ ಸದ್ಯ ಸ್ಥಿತಿಗೆ ಯೋಗ್ಯವೆನಿಸಿತು. ಒಂದು ದಿನ ಶುಕ್ರವಾರ ಬೆಳಗಿಗೆ ನಿದ್ರೆ ತಿಳಿದು ಎದ್ದೆನು. ಇನ್ನೇನು?

ಕಸಮುಸರಿ, ನೀರು ತುಂಬುವುದು, ಆ ಬಳಿಕ ಶಾಲೆಗೆ ಹೋಗುವುದು, ಆದರೆ ಅದೆಲ್ಲ ಬೇಡವಾಯಿತು, ಎಲ್ಲಿಯಾದರೂ ಹೋಗಿಬಿಡಬೇಕು! ಇಲ್ಲಿರಲೇಬಾರದು! ಎಂದವನೇ ಎದ್ದು ಹೊರಟೆ. ತಲೆಬಾಗಿಲ ಕದವನ್ನು ಮೆಲ್ಲನೆ ತೆಗೆದು ಹೊರಬಿದ್ದೆ. ಹತ್ತಿಪ್ಪತ್ತು ಹೆಜ್ಜೆ ಸಾಗುವಷ್ಟರಲ್ಲಿ ಊರ ಅಗಸೆ ಬಾಗಿಲು. ಅದನ್ನು ದಾಟಿ ಬಲಕ್ಕೆ ನೋಡಿದೆ, ಹಳ್ಳ ಹರಿಯುತ್ತಿತ್ತು. ಅಲ್ಲಿಗೆ ಹೋಗಿ ಮೊದಲು ನೀರು ಕುಡಿಯೋಣ ಎಂದು, ಹಳ್ಳದೇರಿಯ ಪಾವಟಿಗೆಗಳನ್ನಿಳಿದು, ಉಸುಕಿನಲ್ಲಿ ಕಿತ್ತೆಜ್ಜೆಯಿಡುತ್ತ ನೀರ ಪ್ರವಾಹದಲ್ಲಿ ಕಾಲಿಟ್ಟೆ. ನಾಲ್ಕು ಹೆಜ್ಜೆಯಿಡುವಷ್ಟರಲ್ಲಿ ನೀರು ತೊಡೆಗೆ ಬಂದವು. ಉಟ್ಟ ಧೋತರ ತೋಯಿತು. ಆದರೂ ಬೊಗ್ಗಿ ಎರಡು ಬೊಗಸಿ ನೀರು ಕುಡಿದೆ.

ಮುಂದಿನ ದಾರಿ ನಿಂಬರಗಿಯವರೆಗೆ ಹೋಗುವುದೆಂದು ನೆನಪಿಗೆ ಬಂತು. ನಿಂಬರಿಗಿಯೂ ಬಂತು. ಮುಂದಿನ ದಾರಿ ಕೇಳಿ ತಿಳಕೊಳ್ಳಬೇಕು. ಅಷ್ಟರಲ್ಲಿ ೨ ತಾಸು ಹೊತ್ತೇರಿತ್ತು. ನಿಂಬರಗಿ ದಾಟಿ ಜಿಗಜವಣಿ ದಾರಿ ಹಿಡಿದೆ. ಅದೂ ಬಂತು, ಇನ್ನೆಲ್ಲಿಯವರೆಗೆ ಪ್ರಯಾಣ?

ಇಂಚಗೇರಿಯವರೆಗೆ ಹೋದರೆ ಅಲ್ಲಿ ನನ್ನ ಸಹಪಾಠಿಯಾದ ಭೀಮಾಜಿ ಜೀವಾಜಿ ಇದ್ದಾನೆ. ಅವನ ಮನೆಗೆ ಹೋದರೆ ಅವನು ನನ್ನನ್ನು ಉಣ್ಣಿಸದೆ ಬಿಡುವುದಿಲ್ಲ. ಆದರೆ ಮುಂದೇನು? ಮುಂದೆಲ್ಲಿಗೆ? ಆ ದಾರಿ ವಿಜಾಪುರವನ್ನು ತಲುಪಿಸುವುದೆಂದು ಕೇಳಿ ತಿಳಕೊಂಡೆ, ಎಲ್ಲ ಬಿಟ್ಟು ವಿಜಾಪುರಕ್ಕಂತೂ ಹೋಗೋಣ ಎನಿಸಿತು.

ವಿಜಾಪುರವು ನನ್ನ ಸೋದರಮಾವನ ಊರು. ಜೋರಾಪುರದಲ್ಲಿ ಅವರ ಮನೆಯಿದೆ ಕೇಳುತ್ತ ಹೋದರಾಯಿತು. ಮುಂದಿನ ವಿಚಾರ ಮುಂದೆ. ನಾನು ನಿರೀಕ್ಷಿಸಿದಂತೆ ಇಂಚಗೇರಿಯಲ್ಲಿ ಭೀಮಾಜಿ ಇರಲಿಲ್ಲ. ಮುಂದಿನ ದಾರಿ ಮಾತ್ರ ಇತ್ತು. ಅದು ಕನ್ನೂರಿಗೆ ಹೋಗುವುದೆಂದು ಭೂಗೋಲದಲ್ಲಿ ಕಲಿತ ವಿಷಯ.

ಹೊಟ್ಟೆಯಲ್ಲಿ ಡೊಂಬರಾಟ ನಡೆಯಿತು. ಹಸಿವೆ ಕಂಗೆಡಿಸಿತು. ಸದ್ಯಕ್ಕೆ ಕುಡಿಯಲು ನೀರು ಸಿಕ್ಕರೂ ಸಾಕೆನಿಸಿತು, ದಾರಿಯ ಬದಿಗೆ

ತೋಟವಿದ್ದರೆ ಹೋಗಿ ಬಾವಿಯಲ್ಲಿ ನೀರು ಕುಡಿದರಾಯಿತು ಎಂದು ಕೊಂಡೆ.

ಕನ್ನೂರು ಹರದಾರಿ ಉಳಿದಿತ್ತು - ಅಗೋ ಕುದುರೆಗಳ ಸಾಲು! ಒಂದಲ್ಲ ಎರಡಲ್ಲ ನಾಲ್ಕು ಕುದುರೆಗಳು! ಮಧ್ಯಮ ವೇಗದಿಂದ ಇದಿರಿಗೇ ಬಂದವು. ಅದನ್ನು ತಪ್ಪಿಸಬೇಕೆಂದು ಅಡ್ಡ ದಾರಿಹಾಕಿದೆ ಅಷ್ಟರಲ್ಲಿ ಕುದುರೆಗಳಲ್ಲಿ ಒಂದರ ಹಿಂದೆ ಒಂದರಂತೆ ನನ್ನ ಬಳಿಗೇ ಬಂದು ನನ್ನನ್ನು ತರುಬಿದವು.

ಅವೆಲ್ಲ ಚಡಚಣ ವ್ಯಾಪಾರಿಗಳ ಕುದುರೆಗಳು. ಗುರುವಾರ ಕನ್ನೂರಿನ ಸಂತೆ ತೀರಿಸಿಕೊಂಡು ಮರುಳಿ ಚಡಚಣದತ್ತ ಸಾಗಿದ್ದವು.

"ಎಲ್ಲಿಗೆ ಹೊರಟೆ?" ಎಂದು ಕೇಳಲಾಯಿತು ನನಗೆ.

"ವಿಜಾಪುರಕ್ಕೆ ಹೊರಟ್ಟಿದ್ದೇನೆ. ಮಾವನ ಮನೆಗೆ" ಎಂದೆ.

"ನಡೆಯುತ್ತಲೇ ಹೊರಟಿರುವಿಯಲ್ಲ ಬರಿಗಾಲಲ್ಲಿ! ಮನೆಯಲ್ಲೇನು ಜಗಳಾಡಿರುವೆಯಾ?"

"ಇಲ್ಲ, ಮಾವನ ಭೆಟ್ಟಿಗೆ ಹೊರಟಿದ್ದೇನೆ" ಎಂದು ಹೇಳುವಷ್ಟರಲ್ಲಿ ಗಂಟಲು ಶಿರಬಿಗಿದು ಪಳಕ್ಕನೆ ಕಣ್ಣೀರು ಸಿಡಿದವು.

"ತಿಳಿಯಿತು ಊಟ ಮಾಡು ಮೊದಲು. ರೊಟ್ಟಿ ಕೊಡುತ್ತೇನೆ." ಎಂದವನೇ ಕುದುರೆಯಿಂದಿಳಿದು, ನನ್ನ ರಟ್ಟೆ ಹಿಡಿದು ತೋಟದತ್ತ ಎಳೆದೊಯ್ದನು. ಕೈಕಾಲು ಮೋರೆ ತೊಳೆಯಿಸಿ ೨ ರೊಟ್ಟಿ, ಪಲ್ಲೆ, ಮೊಸರನ್ನ, ಸೇಂಗಾದ ಹಿಂಡಿ ಕೊಟ್ಟನು. ಉಂಡು, ನೀರು ಕುಡಿದೆ.

ಹೀಗೆ ಗುರುತಿಸಿ ರೊಟ್ಟಿ ಕೊಟ್ಟವನು ಶಿವಲಿಂಗಪ್ಪ ಸರಸಂಬಿ ಎಂಬುವನು. ಅವನು ಚಡಚಣದ ಕಪ್ಪಡ ವ್ಯಾಪಾರಿ. ನಡೆಪಥದಲ್ಲಿ ನನಗೆ ಮುಂದೆ ಮಾವನೇ ಆದನು.

ಜುಲುಮೆಯಿಂದ ಕುದುರೆ ಹತ್ತಿಸಿ, ಆ ಮಾವನು ನನ್ನ ಹಿಂದೆ ತಾನೂ ಕುಳಿತುಕೊಂಡನು. ಮುಂದೆ ಹೋದ ಕುದುರೆಗಳು ಕಾಣಿಸಹತ್ತಿದವು.

ಕುದುರೆಯ ಮೇಲೆ ಕುಳಿತಲ್ಲಿಯೇ ನನಗೆ ತೂಕಡಿಕೆ, ಅದನ್ನು ಹಿಂಬಾಲಿಸಿದ್ದೆ. ಸಾಕಷ್ಟು ದಣಿದಿದ್ದೆ, ಎಚ್ಚರವೇ ಇಲ್ಲ, ಇಂಚಗೇರಿ, ಜಿಗಜಿವಣಿ ದಾಟಿದ್ದು ನನಗೆ ಗೊತ್ತಾಗಲೇ ಇಲ್ಲ. ನಿಂಬರಗಿಗೆ ಬರುವಷ್ಟರಲ್ಲಿ ಬಿಸಿಲು ತಗ್ಗಿತು. ಹಡಪಿನಲ್ಲಿ ಹಾಕಿಟ್ಟ ಬಾಳೆಹಣ್ಣು ತೆಗೆದು ಮಾವನು ನನಗೆರಡು ಕೊಟ್ಟು ತಾನೂ ಎರಡು ಹಣ್ಣು ತಿಂದನು. ಆಮೇಲೆ ಬಾವಿಗಿಳಿದು ಎರಡು ಬೊಗಸೆ ನೀರು ಕುಡಿದೆವು. ಮತ್ತೆ ಪ್ರಯಾಣದ ಆರಂಭ.

ಸೂರ್ಯ ಮುಳುಗುವ ಹೊತ್ತಿಗೆ ಚಡಚಣದ ಹಳ್ಳ ದಾಟುತ್ತಿದ್ದೆವು. ಕುದುರೆಗಳು ಅಗಸೆಗೆ ಬರುವುದಕ್ಕೆ ನಮ್ಮಣ್ಣ ಈರಪ್ಪ ಎದುರಾದನು. ಆತನಿಗೆ ನನ್ನನ್ನೊಪ್ಪಿಸಿ, ಮಾವನು ನಡೆದ ಸಂಗತಿಯನ್ನೆಲ್ಲ ಸಂಕ್ಷಿಪ್ತವಾಗಿ ತಿಳಿಸಿದನು.

ಅಣ್ಣನು ನನ್ನನ್ನು ಮನೆಗೆ ಕರೆತಂದು, ಪಡಸಾಲೆಯಲ್ಲಿ ದೀಪ ಹಚ್ಚಿದನು. ಅತ್ತಿಗೆ ಮನೆಯಲ್ಲಿರಲಿಲ್ಲ. ಆತನೇ ನನ್ನನ್ನು ಉಣ್ಣಿಸುವ ಎತ್ತಗಡೆ ನಡೆಸಿದನು. ಠಾಣಾ ದೀವಿಗೆಯ ಮುಂದೆ ಕುಳ್ಳಿರಿಸಿ, ರೊಟ್ಟಿಗೆ ಒಣಗಿಹಚ್ಚಿ ತಾಬಾಣದಲ್ಲಿ ತಂದು ನನ್ನ ಮುಂದಿಟ್ಟನು.

ಅದನ್ನುಣ್ಣುವುದು ಕಠಿಣವಾದಂತೆ, ಬಿಡುವುದೂ ಕಠಿಣವೇ ಆಯಿತು. ಬಹಳ ಹೊತ್ತಿಗೆ ಅತ್ತಿಗೆ ಬಂದಳು, ತುಸು ಅಬ್ಬರಿಸಿದಳು, ಉಬ್ಬರಿಸಿದಳು. ನಾನು ಸುಮ್ಮನೆ ಕುಳಿತೆನು, ಒಂದೂ ಮಾತನಾಡಲಿಲ್ಲ. ಮಲಗಲಿಕ್ಕೆ ಹಾಸಿಗೆ ಸಿಕ್ಕರೆ ಸಾಕಾಗಿತ್ತು. ಗಾಢ ನಿದ್ರೆ, ಗಡದು ನಿದ್ರೆ ಎಲ್ಲಾ ಮುಗಿದು ಎಚ್ಚರಾಗುವ ಹೊತ್ತಿಗೆ ಬೆಳಗಾಗಿತ್ತು.

ಮತ್ತೆ ಶ್ರೀಗಣೇಶಾಯ ನಮಃ

ಹೆತ್ತಾಯಿಗೆ ಸಮಾನಳಾದ ಅತ್ತಿಗೆ ಅಂದು ಮನೆಗೆಲಸಗಳನ್ನೆಲ್ಲ ತಾನೇ ಮಾಡಿಕೊಂಡಳು. ಅಣ್ಣನು ಬಾವಿಯಿಂದ ನೀರು ತಂದನು.

"ಇಂದಾದರೂ ಶಾಲೆಗೆ ಹೋಗುವಿಯೋ ಮತ್ತೆ ಯಾವೂರಿಗಾದರೂ ಹೋಗಬೇಕಾಗಿದೆಯೋ?" ಎಂದು ಅಣ್ಣ ಕೊಂಕು ನುಡಿದನು.

"ಶಾಲೆಗೆ ಹೋಗುವೆನು" ಎಂದು ಕೆಳ ದನಿಯಲ್ಲಿ ಮರು ನುಡಿದೆನು.

ಅಂದು ಅಣ್ಣನು ನನ್ನನ್ನು ಶಾಲೆಗೆ ಕರೆದೊಯ್ದು ಮಾಸ್ತರರ ಮುಂದೆ ನಡೆದ ಸಂಗತಿಯನ್ನೆಲ್ಲ ಹೇಳಿದ್ದಲ್ಲದೆ ಇನ್ನೊಮ್ಮೆ ಹೀಗೆ ಮಾಡದಂತೆ ತಿಳಿಹೇಳಿರೆಂದು ಕೈಮುಗಿದು ಮನೆಯ ದಾರಿ ಹಿಡಿದನು.

ಗುರುಗಳು ನನ್ನನ್ನು ಹತ್ತಿರ ಕರೆದು, ಬೆನ್ನಮೇಲೆ ಕೈಯಾಡಿಸುತ್ತ ನಡೆದ ಸಂಗತಿಯನ್ನೆಲ್ಲ ಕೇಳಿಕೊಂಡರು. ಅದರಿಂದ ಅವರಿಗೆ ವಾಸ್ತವಿಕ ಸಂಗತಿಯೆಲ್ಲ ತಿಳಿದಂತಾಯಿತು, ಅಣ್ಣನು ನನ್ನ ಸಲುವಾಗಿ ಶಿಕ್ಷಕರಿಗೆ ಮೊರೆಹೊಕ್ಕಂತೆ ನನ್ನ ತಂದೆಯೂ ೨ ವರ್ಷಗಳ ಹಿಂದೆ ಅದೇ ಶಿಕ್ಷಕರಿಗೆ ಮೊರೆಹೊಕ್ಕ ಕಥೆ ರೋಚಕವಾಗಿದೆ. ಅದನ್ನಿಷ್ಟು ಇಲ್ಲಿ ಸಂಕ್ಷೇಪವಾಗಿ ಹೇಳಿಯೇ ಮುಂದೆ ಸಾಗುವೆನು. ಆ ರೋಚಕ ಸಂಗತಿ ಯಾವುದೆಂದರೆ-

ಹುಸೇನಿ ಮಾಸ್ತರರು ವರ್ಗಕ್ಕೆ ಪಾಠ ಹೇಳುತ್ತಿದ್ದರು. ನಾವೆಲ್ಲರೂ ಆಸ್ಥೆ ವಹಿಸಿ ಕೇಳುತ್ತಿದ್ದೆವು. ಇದ್ದಕ್ಕಿದ್ದ ಹಾಗೆ ಮಾಸ್ತರರು ಎದ್ದು ನಿಂತು ಬಠ್ರೀ ಕಾಕಾ ಎಂದು ಕರೆದು, ಅವರಿಗೆ ತಮ್ಮ ಆಸನ ಬಿಟ್ಟರು. ಆ ಕಾಕಾ ಯಾರೆಂದು ನೋಡಿದರೆ ನಮ್ಮ ತಂದೆ.

"ನಮ್ಮ ನಿಂಗನಿಗೆ ರಾತ್ರಿ ತುಸು ಮೈಕಾದಿತ್ತು, ಈ ಹೊತ್ತು ಶಾಲೆಗೆ ಹೋಗುವುದು ಬೇಡ ಎಂದಿದ್ದೆ, ಅಂತೂ ಬಂದಿದ್ದಾನಲ್ಲ?" ಎಂದು ನಮ್ಮ ತಂದೆ ನುಡಿದನು.

"ನಿಂಗ ಸುಮ್ಮಸುಮ್ಮನೆ ಶಾಲೆ ತಪ್ಪಿಸುವವನಲ್ಲ, ಆದರೆ ತುಸು ಕೀಟಕತನ ಮತ್ತು ತುಂಟತನ ಮಾಡುತ್ತಾನೆ" ಎಂದರು ಮಾಸ್ತರರು.

"ಅವನಿಗೆ ಸಡಿಲು ಬಿಡಬೇಡಿರಿ. ಸಾಲೆಯಲ್ಲಾದರೂ ಅವನಿಗೆ ಹೆದರಿಕೆ ಇರಲಿ" ಎಂದನು ನಮ್ಮ ತಂದೆ.

"ಸಾಲೆಯಲ್ಲಿ ನಾವೇನು ಸಡಿಲು ಬಿಡುವದಿಲ್ಲ, ಮನೆಯಲ್ಲಿ ಅವನು ನಿಮ್ಮನ್ನು ಬಹುತರವಾಗಿ ಕಾಡುತ್ತಿರಬೇಕು. ತಾಯಿಯಿಲ್ಲದ ಮಗನೆಂದು ನೀವೂ ಸಂಬಾಳಿಸುತ್ತೀರಿ, ಏನಾದರೂ ಬೇಡಿ ಹಟ ಮಾಡುವನೇ?"

ನಮ್ಮ ತಂದೆ ಹೇಳಿದರು - ಹಾಗೇನೂ ಇಲ್ಲ ಪ್ರತಿದಿನ ಒಂದು ದುಡ್ಡು ಮಾತ್ರ ಅವನಿಗೆ ಕೊಡುತ್ತಲೆ ಬಂದಿದ್ದೇನೆ. ದುಡ್ಡು ಕೈಗೆ ಬರುತ್ತಲೆ ಅಂಗಡಿಗೆ ಜಿಗಿದು ಪೇಡೆ ಕೊಂಡು ಕೊಂಡು, ಅದನ್ನು ಹಾದಿಯಲ್ಲಿಯೇ ತಿಂದು ಕೈಜಾಡಿಸುತ್ತ ಬರುತ್ತಾನೆ. ಒಮ್ಮೊಮ್ಮೆ ನನ್ನ ಕಿಸೆಯಲ್ಲಿಯೂ ದುಡ್ಡು ಇರುವುದಿಲ್ಲ. ಆಗ ಕಾಲು ಹೊಸೆದು ಹಟ ಮಾಡುವನು, ಈಗಲೇ ಬೇಕೆಂದು. ಹಾಗೆ ಮಾಡುವುದನ್ನು ಒಂದಿಷ್ಟು ಬಿಡಿಸಿದರೆ ಒಳ್ಳೆಯದಾಗುವದು.

ಮಾಸ್ತರರಿಗೆ ಒಂದು ಸುಸಂಧಿ ಸಿಕ್ಕಂತಾಯಿತು. ನನಗೆ ಗಂಟು ಬಿದ್ದರು - "ಇನ್ನು ಮೇಲೆ ನೀನು ನಿನ್ನ ತಂದೆಯವರಿಗೆ ದುಡ್ಡೇ ಕೇಳಬಾರದು."

"ತಾವಾಗಿಯೇ ಕೊಟ್ಟಾಗ ತಕ್ಕೊಳ್ಳಬಾರದೇ?" ಎಂದು ನಾನು ಕೇಳಿದೆ.

"ಅದಕ್ಕೇನೂ ಅಡ್ಡಿಯಿಲ್ಲ. ಆದರೆ ಕಾಕಾ ಅವರೇ, ನೀವಾದರೂ ಅವನಿಗೆ ಕೊಡುವುದೇಕೆ - ಅವನೇ ಕೇಳದಿದ್ದರೆ?" ಸದ್ಯಕ್ಕಂತೂ ಅವನು ದಿನನಿತ್ಯ ದುಡ್ಡು ಕೇಳುವುದಿಲ್ಲವೆಂದು ಈ ಪುಸ್ತಕ ಮುಟ್ಟಿ ಹೇಳಬೇಕು.

ನಾನು ಬಲು ತಿಗಟೆಯಲ್ಲಿ ಸಿಕ್ಕು ಬಿದ್ದಂತಾಯಿತು. ಗುರುಗಳೂ ಸಡಿಲುಬಿಡಲೇ ಇಲ್ಲ. "ದಿನಾಲು ಅಪ್ಪನಿಗೆ ದುಡ್ಡು ಕೇಳುವದಿಲ್ಲೆಂದು ಈ ಸರಸ್ವತಿಯನ್ನು ಮುಟ್ಟಿ ಹೇಳು ಎಂದರು" ನಾನು ಜುಕ್ಕುಜುಲುಮೆಯಿಂದ ನನ್ನ ಪುಸ್ತಕ ಮುಟ್ಟಿ ಹೇಳಿದೆನು.

ತಂದೆ ಮುಗುಳುನಕ್ಕನು, ಗುರುಗಳು ಗೆದ್ದೆನೆಂದರು.

ಆ ಬಳಿಕ ನಾನು ಗಟ್ಟಿ ಜೀವಮಾಡಿ, ತಂದೆಗೆ ದುಡ್ಡು ಕೇಳುವುದನ್ನು ಬಿಟ್ಟುಬಿಟ್ಟೆ. ಆದರೆ ಪೇಡೆಯ ಹಂಬಲವನ್ನು ಸರಸ್ವತಿ ದೇವಿಯ ಅಂಜಿಕೆಯಿಂದ ತಡಕೊಳ್ಳತೊಡಗಿದೆನು.

ದಿನಾಲು ತಂದೆಯೊಡನೆ ಮಧ್ಯಾಹ್ನದ ಊಟ ಮುಗಿದ ಬಳಿಕ, ತಂದೆಯು ತನ್ನ ಬಗಲಗಸಿ ಅಂಗಿಯನ್ನು ಕೈಗೆತ್ತಿಕೊಂಡು, ಕಿಸೆಯಲ್ಲಿ ಕೈಹಾಕಿ ಅಡಕಿಹೋಳು ಬಾಯಿಗಿಟ್ಟುಕೊಳ್ಳುತ್ತಿದ್ದನು. ಆ ಕಿಸೆಯಲ್ಲಿ ಮತ್ತೇನಿದೆ - ನೋಡುವಂತೆ ಕೈಹಾಕಿದರೆ ಒಂದೆರಡು ದುಡ್ಡುಗಳು ಸಿಗುತ್ತಿದ್ದವು. ಅವುಗಳನ್ನು ಎಣಿಸೆಣಿಸಿ ಇಡುವಾಗ, ತಂದೆಯ ಲಕ್ಷ್ಯಕ್ಕೆ ಬಂದು ತಾನಾಗಿ ನನಗೊಂದು ದುಡ್ಡು ಕೊಟ್ಟಾನೆಂದು ತಿಳಿಕೊಂಡಿದ್ದು ವ್ಯರ್ಥವಾಗುತ್ತಿತ್ತು.

ಈ ಕ್ರಮ ೨-೩ ತಿಂಗಳು ಸಾಗಿತೇನೋ. ನಾನು ದುಡ್ಡು ಬೇಡಲಿಲ್ಲ ತಂದೆ ತಾನಾಗಿ ದುಡ್ಡು ಕೊಡಲಿಲ್ಲ. ಕೊನೆಗೊಂದು ದಿವಸ ತಂದೆಗೆ ಕನಿಕರವೆನಿಸಿ ತಗೋ, ತಾನಾಗಿ ಕೈಮುಟ್ಟಿ ಒಂದು ದುಡ್ಡು ಕೊಟ್ಟು ಬೋಳಯಿಸಿದನು.

ನಾನು ಕತ್ತೆತ್ತಿ ನೋಡಿದಾಗ ಅವನ ಕಣ್ಣು ಹಸಿ ಆಗಿದ್ದವು.

ಆ ಬಳಿಕ ತಂದೆ ದಿನಾಲು ಒಂದೊಂದು ದುಡ್ಡು ಕರೆದು ಕೊಡುತ್ತಲೇ ಬಂದನು. ನಾನು ದಿನಾಲು ತಪ್ಪದೆ ಪೇಡೆ ಕೊಂಡು ತಿನ್ನುತ್ತಲೇ ಬಂದೆನು.

ತಂದೆ, ಮಾಸ್ತರರು ಮತ್ತು ನಾನು ಈ ಮೂವರಲ್ಲಿ ಯಾರೂ ಸೋಲಲಿಲ್ಲ. ಮೂವರಿಗೂ ಗೆಲುವಾಯಿತೆಂದೂ ಈಗಲೂ ಅನಿಸುತ್ತದೆ.

೫. ನಾನೊಂದು ಕಾಲಚಂಡು ಆದೆ

ಅತ್ತ ನನ್ನನ್ನು ಶಾಲೆ ಕೈ ಮಾಡಿ ಕರೆಯುತ್ತಿತ್ತು.

ಇತ್ತ ಮನೆ ನನ್ನನ್ನು ಕತ್ತು ಹಿಡಿದು ದಬ್ಬುತ್ತಿತ್ತು. ಶಾಲೆಯತ್ತ ಉಣ್ಣದೆ ಹೋಗಲಿಕ್ಕಾಗುವದೇ? ಉಣ್ಣಬೇಕಾದರೆ ಅದಕ್ಕೆ ತಕ್ಕ ಶ್ರಮದಾನ ಮಾಡಬೇಡವೇ? ಮನೆಯಲ್ಲಿ ಶ್ರಮದಾನ ಮಾಡಿದರೆ, ಶಾಲೆಯಲ್ಲಿ ಗುರುಗಳು ಮಾಡಿದ ವಿದ್ಯಾದಾನ ದಕ್ಕುತ್ತದೆ.

ಈ ವಿಷಯವನ್ನು ನನ್ನ ಜೀವ ಸಣ್ಣದಾದರೂ ಬಹಳ ಯೋಚಿಸಿದೆ. ಎಲ್ಲಿಯಾದರೂ ಓಡಿ ಹೋಗದೆ ಹೇಡಿಯಂತೆ ಮನೆ ಹಿಡಿದು ಕುಳಿತೆನೇ? ಪರಸ್ಥಳಕ್ಕೆ ಹೋಗಿ ಯಾರಾರದೋ ಒಂದು ತುತ್ತು ರೊಟ್ಟಿಗಾಗಿ ಶ್ರಮದಾನ ಮಾಡಲೇಬೇಕಲ್ಲವೇ? ಅದು ತಪ್ಪಿದ್ದಲ್ಲ, ಆ ತ್ಯಾಗ ಮನೆಯಲ್ಲಿಯೇ ಮಾಡೋಣ, ಮನೆಯವರಿಗಾಗಿಯೇ ಮಾಡುವುದು ಸರಿಯಲ್ಲವೇ ಎಂದು ಕೇಳಿತು ವಿವೇಕ. ಹೀಗೆ ಹಗ್ಗ ಹರಿಯದ, ಕೋಲು ಮುರಿಯದ ಪ್ರಸಂಗವು ನನ್ನನ್ನು ಆವರಿಸಿತ್ತು.

ಒಮ್ಮೆ ಬೆಳಗು ಮುಂಜಾನೆ ನೀರ ಕೊಡ ಹೊತ್ತು ಮನೆಗೆ ಬರುತ್ತಿರುವಾಗ ಕಿವಿಯಲ್ಲೇನೋ ತನನವೆಂದಿತು. ಅದು ಮತ್ತೇನೂ ಆಗಿರದೆ ಕರ್ಬಲ್ ಹಾಡು ಎಂದೋ ಕೇಳಿದ್ದು ಸುಪ್ತಗೊಂಡಿತ್ತು, ಈಗದು ತಾನಾಗಿ ಹಣಿಕೆ ಹಾಕುತ್ತಿದೆಯಲ್ಲ -

"ಭಾಳಬೆಳಕಾ। ಮಾಡಿ ಸುಳಕಾ
ಅಂತಾನಲ್ಲಾ! ಇವನೀಗ ಬಿಡೂದಿಲ್ಲ
ಎಂದೀಗಿ ಬಿಡೂದಿಲ್ಲ ಪರೀಕ್ಷಾ ಆಗುತನಕ"

ಇಲ್ಲಿ ಆಗಬೇಕಾದ ಪರೀಕ್ಷೆ ಯಾವುದು? ಎಂಥದು? ಮನೆಯಲ್ಲಿ ವ್ಯಕ್ತಿ ಪರೀಕ್ಷೆ, ಶಾಲೆಯಲ್ಲಿ ವಿದ್ಯಾಪರೀಕ್ಷೆ - ಎನ್ನಬಹುದೇ? "ಎಂದೀಗಿ ಬಿಡೂದಿಲ್ಲ ಪರೀಕ್ಷಾ ಆಗೂತನಕಾ"

ಆ ಪ್ರಸಂಗವನ್ನು ಕುರಿತು ಈಗ ಹೇಳಬಹುದಾದರೆ, ಬಸವಣ್ಣನವರ ಭಾಷೆಯಲ್ಲಿಯೇ ಹೇಳಬೇಕಾಗುತ್ತದೆ -

"ಉರಿಬರಲಿ, ಸಿರಿಬರಲಿ ಇದಕಾರು ಅಂಜುವರು? ನಾಳೆ ಬಪ್ಪುದು ನಮಗೆ ಇಂದೇ ಬರಲಿ, ಇಂದೆ ಬಪ್ಪುದು ನಮಗೆ ಈಗಲೇ ಬರಲಿ." ಕೇಡು ಬರುವುದಾದರೆ ನಾಳೆ ಬೇಡ, ಇಂದೇ ಬರಲಿ ಈಗಲೆ ಬರಲಿ. ತೀವ್ರ ಮುಗಿದು ಹೋಗಲಿ ಮುಷ್ಟಿ ಯುದ್ಧದ ಗಸಣೆ ತಪ್ಪುವದು. ಕೊಲುವೆನೆಂಬ ಭಾಷೆ ದೇವನದಿದ್ದರೂ, ಭಕ್ತರಾದ ನಮ್ಮದು ಗೆಲುವೆನೆಂಬ ಭಾಷೆ ದೃಢತರವಾಗುತ್ತಲೇ ಇರುತ್ತದೆ.

ಕೈಯಿಂದ ಪುಟಿಸಿದರೇನು, ಕಾಲಿನಿಂದ ದಬ್ಬಿದರೇನು ಚಂಡು ತನ್ನ ಉತ್ಸಾಹವನ್ನೇ ತೋರುವುದು. ಆ ಉತ್ಸಾಹದ ಒಳಮುಗ್ಗುಲಿನಲ್ಲಿ ನೋವು ಹೆಪ್ಪುಗಟ್ಟಿ ನಿಂತಿರುತ್ತದೆ.

ಅತ್ತಿಗೆಯ ಕಾಲುಗುಣದಿಂದ ಮನೆಯಲ್ಲಿ ಅನ್ನಪೂರ್ಣೆ ಪ್ರಸನ್ನಳಾದಳು. ಆಕೆ ಹೊಸ್ತಿಲಿಗೆ ಮಂಗಲ ಬರೆದಳು. ಆದರೆ ಆಕೆ ಹೂಡಿದ ವ್ಯಾಪಾರ ಮಾತ್ರ ಮನೆಯವರೆಲ್ಲರಿಗೂ ಏಳು ಕೆರೆಯ ನೀರು ಕುಡಿಸುತ್ತಲೇ ಬಂದಿದೆ. ಗಳಿಕೆ! ಗಳಿಕೆ!! ಎದ್ದರೆ ಗಳಿಕೆ! ಕುಳಿತರೆ ಗಳಿಕೆ! ನಿದ್ರೆಯಲ್ಲಿಯೂ ಗಳಿಕೆಯ ಕನಸೇ ಕಾಣಬೇಕೇ?

ಗಳಿಕೆಯ ಇನ್ನೊಂದು ರೂಪವೆಂದರೆ ಉಳಿಕೆ, ಉಳಿತಾಯ ಉಪವಾಸವೊಂದು ಅನ್ನದ ಉಳಿತಾಯಕ್ಕೆ ದಾರಿಯಾಗಬಾರದು. ಕಡಿಮೆ

ಬೆಲೆ ಕೊಟ್ಟು, ಇಲ್ಲವೆ ಪುಕ್ಕಟೆ ದೊರಕಿಸಿದ್ದು ತೃಪ್ತಿಕರವಾದ ಉಳಿತಾಯವೆಂದು ನಮ್ಮ ಅತ್ತಿಗೆ ತಿಳಿದಂತಿದೆ. ಆ ವಿಷಯವನ್ನು ಆಕೆ ತನ್ನ ಗಂಡನಿಗೂ ಅಂದರೆ ನಮ್ಮಣ್ಣನಿಗೂ ಮನಗಾಣಿಸಿ ಕೊಟ್ಟಿದ್ದಾಳೆ. ಆದರೆ ನನಗದು ಸಮ್ಮತವಿಲ್ಲ. ಆದರೂ ಅದನ್ನು ಕಾರ್ಯರೂಪದಲ್ಲಿ ತರುವುದು ಅನಿವಾರ್ಯವಾಗಿದೆ.

ಮನೆಯಿದ್ದಲ್ಲಿ ಒಲೆ, ಒಲೆಯಿದ್ದಲ್ಲಿ ಉರುವಲು ಇರುವುದು ವಾಸ್ತವಿಕ, ಉರುವಲವನ್ನು ಕೊಂಡುಕೊಳ್ಳುವುದಕ್ಕಿಂತ ಪುಕ್ಕಟೆಯಾಗಿ ಸಂಪಾದಿಸುವುದು ಗಳಿಕೆಯೂ ಅಹುದು, ಉಳಿತಾಯವೂ ಅಹುದು.

ಚಡಚಣದಿಂದ ಪೂರ್ವನಿಟ್ಟಿಗೆ ಹೋಗುವ ರಾಜಮಾರ್ಗದ ಗುಂಟ ೨ ಮೈಲು ಸಾಗಿದರೆ ಎಡಮಗ್ಗುಲಲ್ಲಿ ಒಂದು ದೊಡ್ಡ ಹೊಲ ಕಾಣಿಸುವದು. ಅದು ಒಬ್ಬ ನಿವೃತ್ತ ಜಮಾದಾರರದು. ನಮ್ಮ ಅತ್ತಿಗೆಯೆಂದರೆ ಜಮಾದಾರ್ತಿಗೆ ಅಚ್ಚುಮೆಚ್ಚಿನ ಚೊಚ್ಚಿಲ ಮಗಳು ಸಾಹೇಬರು ಮುಸ್ಲಿಂ ಪಂಥದವರು. ಆದರೆ ಅವರ ಶ್ರೀಮತಿಯವರದು ಜೈನಧರ್ಮ. ಅವರ ಅಡಿಗೆ ಮನೆ ಬಹು ಜನ ಆಪ್ತೇಷ್ಟರನ್ನು ಗಳಿಸಿಕೊಂಡಿತ್ತು. ಅಂಥ ಆಪ್ತೇಷ್ಟರಲ್ಲಿ ನಮ್ಮ ಅತ್ತಿಗೆಯದು ಅಗ್ರಸ್ಥಾನ.

ಅವರ ಹೊಲದಲ್ಲಿ ಹತ್ತಿ ಬಿತ್ತಿ ಬೆಳೆ ತೆಗೆದುಕೊಂಡಿದ್ದರು. ಅಲ್ಲಿ ಎದೆಯೆತ್ತರದ ಒಣಗು ಗಿಡಗಳು ನಿಂತಿದ್ದವು. ಅವುಗಳನ್ನು ಕಿತ್ತಿ, ಹೊರೆಕಟ್ಟಿ ಹೊತ್ತುಕೊಂಡು ಮನೆಗೆ ತಂದುಹಾಕಿದರೆ, ಒಲೆಗೆ ೨ ತಿಂಗಳ ಅನ್ನವಾಗುವದು - ಎಂಬ ಅರ್ಥಶಾಸ್ತ್ರವನ್ನು ಗ್ರಹಿಸಿ ನಾನು ಮತ್ತು ನಮ್ಮಣ್ಣ ಇಬ್ಬರೂ ಆ ಹೊಲಕ್ಕೆ ಹೊರಟೆವು.

ಹೋಗುವಾಗ ಮುಂಜಾವಿನ ಬಿಸಿಲು, ಲಿಂಗಪೂಜೆಯಂತೆ ಸುಗಮಸುಖಕರ. ಆದರೆ ಬರುವಾಗ ಮಧ್ಯಾಹ್ನದ ಬಿಸಿಲು, ಜಂಗಮ ಪೂಜೆಯಂತೆ ಬಿಗಿಯಾದದ್ದು ಮತ್ತು ಬಿಕ್ಕಟ್ಟಿನದು.

ಅಣ್ಣ ಕಾಲ್ಮರೆ ಮೆಟ್ಟಿದವನು, ನಾನು ಬರಿಗಾಲಿನವನು, ಮೆಟ್ಟು ನಟ್ಟು ಅಣ್ಣನ ಕಾಲಿಗೆ ಗುಳ್ಳೆ ಬಂದವು. ಬರಿಗಾಲಿನ ರೂಢಿಯು, ನನ್ನ ಅಂಗಾಲು

ದಡ್ಡುಗಟ್ಟುವಂತೆ ಮಾಡಿತು. ಕಟ್ಟಿಗೆಯ ೨ ಹೊರೆಗಳು ಅರ್ಥ ಅಂಗಳವನ್ನೇ ಮುಟ್ಟುಗೋಲು ಹಾಕಿದವು.

ನಾಲ್ಕಾರು ದಿನ ಕಳೆದ ಬಳಿಕ ಮತ್ತೊಮ್ಮೆ ಆ ದಾರಿಯಲ್ಲಿ ಪ್ರಯತ್ನಿಸಿದರೂ ವ್ಯರ್ಥವಾಯಿತು. ಆ ಕಟ್ಟಿಗೆಗಳನ್ನು ಯಾರೋ ಕಿತ್ತು ಕೊಂಡು ಹೋಗಿದ್ದರು. ನಾವು ಹೋದ ದಾರಿಯಿಂದಲೇ ಹೊರಳಿ ಬಂದೆವು.

"ತೀವ್ರ ಹೋಗಿದ್ದರೆ ನಿರಾಶೆಯಾಗುತ್ತಿರಲಿಲ್ಲ" ಎಂದು ಅತ್ತಿಗೆಯವರು ತಮ್ಮ ಮುಕ್ತಾಯ ಭಾಷಣ ಮಾಡಿದರು.

ಪ್ರಪಂಚಕ್ಕೆ ಬೇಕಾಗುವ ಇಂಧನವನ್ನು ಸುಲಭ ಶ್ರಮದಿಂದ ದೊರಕಿಸುವ ಯೋಜನೆಯಂತೆ, ಆಕೆಯ ಯುಕ್ತಿಯು ಹಾಲುಹಯನದ ವಿಷಯವಾಗಿಯೂ ನಮ್ಮಲ್ಲಿ ಹೊಸ ಉತ್ಪಾದನೆಯ ದಾರಿಯನ್ನು ಹಾಕಿಕೊಟ್ಟಿತು. ಹಾಲು ಹಯನಿನ ವಿಷಯವೆಂದರೆ ಎಮ್ಮೆ ಅಲ್ಲ, ಆಕಳು ಅಲ್ಲ. ಆಡು ಕಟ್ಟುವುದು ಅಂದಿನ ಕಾಲದಲ್ಲಿ ೧೦ ರೂ. ಕೊಟ್ಟರೆ ಒಂದು ಆಡು ಬರುತ್ತಿತ್ತು. ಅದರ ಕೆಚ್ಚಲಲ್ಲಿ ಎರಡೇ ಮೊಲೆಗಳಿದ್ದರೂ, ಮರಿಗಳು ಎರಡಿದ್ದರೂ ಅವುಗಳಿಗೆ ಉಣಿಸಿ ಅರ್ಧ ತಂಬಿಗೆ ಹಾಲು ಕೊಡುವದು. ಅದನ್ನು ಕಾಯ್ದುಕೊಂಡು ಬರುವವರು ಅಂದರೆ, ಅಡವಿಗೊಯ್ದು ಮೇಯಿಸಿಕೊಂಡು ಬರುವವರು, ತಿಂಗಳೊಂದಕ್ಕೆ ೧ ರೂಪಾಯಿ ಇಲ್ಲವೆ ೧ ೧/೨ ರೂ. ಕೊಟ್ಟರೆ ಹಾರಾಡುವರು. ಮನೆಯಲ್ಲಿ ಅದಕ್ಕೆ ಮೇವು ಹಾಕುವ ಕಾರಣವಿಲ್ಲ. ಹಾಕಿದರೂ ಸುಲಭವಾಗಿ ಸಿಗುವ ಜಾಲೀಕಾಯಿ, ಚೊಗಚೆ ತಪ್ಪಲು, ಹುಣಸಿನ ತೊಂಗಲು ದಿನಾಲು ಸಹಜವಾಗಿ ದೊರಕಿಸಲು ಸಾಧ್ಯವಿದೆ.

ಆಡು ವರ್ಷದಲ್ಲಿ ಎರಡು ಸಾರೆ ಈದು ನಾಲ್ಕು ಮರಿಗಳನ್ನು ಕೊಡಬಹುದು. ತುಸು ದೊಡ್ಡದಾದ ಕೂಡಲೇ ಅವುಗಳನ್ನು ಮಾರಿಬಿಟ್ಟರೆ, ಆಡಿನ ಬೆಲೆ ಬಂದು ಬಿಡುವದು.

ಅರ್ಥಶಾಸ್ತ್ರದ ಈ ರಹಸ್ಯವನ್ನೆಲ್ಲ ಒಮ್ಮೆ ಅಲ್ಲ, ಇನ್ನೊಮ್ಮೆ ಅಲ್ಲ ಹಲವು ಸಾರೆ ಹೇಳಿಹೇಳಿ ತಲೆದೂಗುವಂತೆ ಮಾಡಿದಳು ನಮ್ಮ ಅತ್ತಿಗೆ.

ಒಂದು ಬುಧವಾರ ಸಂತೆಯ ದಿನ ಆಡುಕಟ್ಟುವ ಉದ್ಘಾಟನೆ ನಡೆದು ಬಿಟ್ಟಿತು. ನಾಲ್ಕೆಂಟು ದಿನಗಳಲ್ಲಿ ಈಯಬಹುದೆಂದು ಬಲ್ಲವರು ಹೇಳಿದರು. ಆದರೆ ಅದು ಕಾರ್ಯರೂಪದಲ್ಲಿ ಬರುವುದಕ್ಕೆ ಒಂದು ತಿಂಗಳೇ ಕಳೆಯಿತು. ಪುಣ್ಯಕ್ಕೆ ಒಂದೇ ಮರಿಯನ್ನು ಕೊಟ್ಟಿತು. ಅದೂ ಹೋತು ಮರಿ, ಶುಭವೆಂದೇ ತಿಳಿದೆವು. ನಮ್ಮಣ್ಣನಿಗೆ ಮುಂಜಾವಿನಲ್ಲಿ ಒಂದು ನೂತನ ಕೆಲಸವೇ ದೊರಕೊಂಡಂತಾಯಿತು.

ಆಡು ಕಾಯುವವರಿಗೆ ಕಾಯುಕೂಲಿಯೆಂದು ತಿಂಗಳಿಗೆ ೧ ರೂಪಾಯಿ ಕೊಡಬೇಕೆಂದು ಕೇಳಿದರು. ಆಡು ಕಾಯುವವನ ಆ ಹಿಂಡಿನಲ್ಲಿ ಮೂವತ್ತರಷ್ಟು ಆಡುಗಳಿದ್ದವೆಂದು ತಿಳಿಯಿತು. ಆ ಹಿಂಡು ಮೇಯುವುದಕ್ಕೆ ಅವನಿಗೆ ಅಡವಿಯೇ ಇರಲಿಲ್ಲ. ಎಲ್ಲಿಯೋ ಹಳ್ಳದ ದಂಡೆಯಲ್ಲಿ ತರುಬಿಕೊಂಡು ಸಂಜೆಯಹೊತ್ತಿಗೆ ಆಡು ತಂದು ಮನೆಗೆ ಹಚ್ಚಿದರೆ ತೀರಿತು ಅವನ ಕೆಲಸ.

ಈ ಕ್ರಮ ನಮ್ಮ ಅತ್ತಿಗೆಯವರಿಗೆ ಪಡಿತರ ಬೀಳಲಿಲ್ಲ. ಆ ಕಾಯು ಕೂಲಿಯನ್ನು ಸುಲಭವಾಗಿ ಉಳಿಸುವ ಯುಕ್ತಿಯನ್ನು ತಟ್ಟನೆ ಕಂಡು ಹಿಡಿದರು, ಆದಾವುದೆಂದರೆ -

ಶಾಲೆ ಬಿಡಿಸಿ ನಿಂಗನನ್ನು (ನನ್ನನ್ನು) ಆಡು ಕಾಯಲು ಅಡವಿಗೆ ಕಳಿಸುವದು. ಆ ತುರ್ತು ಪರಿಸ್ಥಿತಿಯು ನಿತ್ಯ ವ್ಯವಹಾರದಲ್ಲಿ ಬರಲು ತಡವೇ ಆಗಲಿಲ್ಲ.

ಆಡಿನ ಕೊರಳಕಾಂಡಕ್ಕೆ ಬೆರಳು ಗಾತ್ರದ ಹಗ್ಗ ಕಟ್ಟಿ ಮುಂದೆ ಸಾಗಿ ಎಳೆದುಕೊಂಡು ಹೋಗಬೇಕು. ಇಲ್ಲವೆ ಮುಂದೆ ಹಾಕಿಕೊಂಡು ಚಬಕದಿಂದ ಹೊಡೆಯುತ್ತ ಬೆಂಬಲಿಸಬೇಕು.

ಊರು ದಾಟುವುದೇ ತಡ, ಮೊದಲ ದಿನವೇ ನನಗೆ ಒಬ್ಬಿಬ್ಬರು ಜೊತೆಗಾರರು ಸಿಕ್ಕರು, ಅವರಿಗೂ ನನಗೂ ಇರುವ ಭೇದವೆಂದರೆ, ಅವರ ಕಾಲಲ್ಲಿ ಕೆರವು, ತಲೆಯ ಮೇಲೆ ಬುತ್ತಿಯ ಗಂಟು ಇದ್ದವು. ಅವೆರಡೂ ನನಗಿರಲಿಲ್ಲ. ಬರಿಗಾಲಿನಿಂದ ಹೊರಟವರಿಗೆ ಬರಿಹೊಟ್ಟೆಯೆನ್ನುವುದು ಸಹಜಕ್ರಮವೇ ಅಲ್ಲವೇ?

ಆಡು ಮೇಯಿಸುವುದೆಲ್ಲಿ? ಗೌಡರ ದೋಯಿಗೆಂದು ಜೊತೆಗಾರರು ಒಂದೇ ಉಸಿರಿನಿಂದ ಹೇಳಿದರು. ಆ ದಾರಿ ನನಗೆ ಹೊಸದು. ಅವರು ಮುಂದೆ, ಮುಂದೆ, ನಾನು ಹಿಂದೆ ಹಿಂದೆ. ಬಂದು ಬಿಟ್ಟಿತು ಗೌಡರ ದೋಯಿ, ನಾನಾತರದ ಕಂಟಿಗಳು ಹಸಿರು ಮುರಿಯುತ್ತಿದ್ದವು. ಅಲ್ಲಲ್ಲಿ ಹುಲ್ಲಿನ ಹರಹುಗಳೂ ಕಾಣಿಸಿದವು. ನಮ್ಮ ಆಡು ಕೊಸರಿಕೊಂಡು ಮುಂದೆ ಓಡಬೇಕೆಂದು ಜೋರಿನಿಂದ ಎಳೆಯತೊಡಗಿತು. ಕೈಯೊಳಗಿನ ಹಗ್ಗ ಬಿಟ್ಟರೆ ಓಡಿಹೋದ ಆಡು ಕೈಗೆ ಸಿಗಲಿಕ್ಕಿಲ್ಲ ಎಂಬ ಅನುಮಾನದಲ್ಲಿ ಹಗ್ಗವನ್ನು ಗಟ್ಟಿಯಾಗಿ ಹಿಡಿದುಕೊಂಡೆ. ಅಡು ನನ್ನನ್ನು ಮುಂದೆಳೆದುಕೊಂಡು ಸಾಗಿತು.

ಕಾಲಕೆಳಗಿನ ದಾರಿ ಮುಗಿಯಿತು. ಹೆಜ್ಜೆಯಿಟ್ಟಿದ್ದೇ ದಾರಿ, ಅಡವಿಯೆಲ್ಲ ನೆಗ್ಗಿನ ಮುಳ್ಳಿನ ಹಾಸಿಗೆ, ಎಡಗಾಲಿನ ಮುಳ್ಳುಗಳನ್ನು ತೆಗೆದು ಹಾಕುವಷ್ಟರಲ್ಲಿ ಆಡಿನ ಎಳೆತ, ಬಲಗಾಲಿನ ಮುಳ್ಳು ತೆಗೆದು ಹಾಕಲು ಅವಕಾಶವಿಲ್ಲ. ಬರಿಗಾಲಿನ ಬಂಟನಾದ ನಾನು, ಮುಳ್ಳಿಲ್ಲದ ಸ್ಥಳಕ್ಕೆ ಹೋಗಬೇಕೆಂದರೆ, ಆ ದೋಯಿಯಿಂದ ಕಡೆಗಾಗುವ ಬಗೆಯೇನು? ಸತ್ತುಹುಟ್ಟಿದ್ದೆಲ್ಲ ನೆನಪಿಗೆ ಬಂದಂತಾಯಿತು.

ಮಾಡುವುದೇನು? ಆಡಿನ ಮೇಲೆ ಸಿಟ್ಟು ಬಂತು, ಎಳೆದೊಯ್ಯುವು ದೆಂದು ಆಗ ಕೈಯೊಳಗಿನ ಹಗ್ಗವನ್ನು ಜೋಡುಪದರು ಮಾಡಿ, ಆಡಿನ ಬೆನ್ನ ಮೇಲೆ ಒಳಿತಾಗಿ ಬಾರಿಸಿದೆ, ಆ ನೋವು ತಾಳಲಾರದೆ ಅದು ಆಕ್ರಂದನ ಮಾಡಿತು. ತಾನು ಕಟುಕರ ಮನೆಗೇ ಬಂದೆನೇನೋ ಎನಿಸಿರಬೇಕು ಅದಕ್ಕೆ.

ಆ ಹೊತ್ತು ಸಂಜೆಯವರೆಗೆ ಆಡಿನೊಂದಿಗೆ ಗುದುಮುರಿಗೆ ನಡೆಯಿತು. ಎಷ್ಟು ಮೇವು ಮುಂದೆ ಹರಡಿದ್ದರೂ ನಾನದಕ್ಕೆ ಮೇಯಗೊಡಲಿಲ್ಲ. ಹಸಿದು ಕಂಗಾಲಾದ ನಾನು ಉಣ್ಣಬೇಕೆಂದರೆ ಬಳಿಯಲ್ಲಿ ರೊಟ್ಟಿಯಿರಲಿಲ್ಲ. ಉಗುಳು ನುಂಗಿ ಢರಿ (ತೇಗು) ಬಿಡಬೇಕೆಂದರೆ ಗಂಟಲು ಆರಿಹೋಗಿತ್ತು. ಆ ಕಥೆಯನ್ನು ಯಾರ ಮುಂದೆ ಹೇಳಿ ಕಳವಳವನ್ನು ಕಳಕೊಳ್ಳಲಿ?

ದೀಪಹಚ್ಚುವ ವೇಳೆಗೆ ಆಡಿನೊಡನೆ ಮನೆಗೆ ಬಂದರೆ, ಆಡು ಮೇದೇ ಇಲ್ಲವೆಂದು ಅತ್ತಿಗೆ ಶಂಕಿಸಿದರು. ಅದೊಂದು ನನ್ನ ಪಾಲಿಗೆ ವಾಗ್ಬಾಣವಾಗಿ ಪರಿಣಮಿಸಿತು. ಶಾಲೆಯೇನೋ ತಪ್ಪಿಸಿದ್ದಾಯಿತು. ಆಡು ಮಾತ್ರ ಮೇಯಲಿಲ್ಲ ಎಂಬ ಅನುಭವವು ನಿಚ್ಚಳವಾಯಿತು. ಆ ಬಳಿಕ ಘಟಿಸಿದ ಸಂಗತಿಗಳು ಆಡಾಡುತ್ತ ಆಡಿನ ಹವ್ಯಾಸವನ್ನು ಅಣ್ಣ ಅತ್ತಿಗೆಯರಿಂದ ತೊಲಗಿಸಿದವು. ಅದಕ್ಕಾಗಿ ಯಾವ ದೇವರಿಗೆ ತೆಂಗು ಒಡೆಯಬೇಕೋ ತಿಳಿಯದಾಯಿತು.

ನಾನು ಹೇಳುವ ವಿಷಯಗಳಲ್ಲಿ ಒಂದೊಂದನ್ನು ಮಾತ್ರ ಮಾದರಿಯಾಗಿ ಆಯ್ದುಕೊಂಡು ಹೇಳುತ್ತಿದ್ದೇನೆ. ಹಣ ಉಳಿಸುವ ಇನ್ನೊಂದು ಮಾದರಿಯ ವ್ಯವಹಾರ ಕಥೆಯನ್ನು ಹೇಳದೆ ಬಿಡಲಿಕ್ಕಾಗದು, ಆ ಕಥೆ ಚಿಲುಮೆಯದು.

ನಮ್ಮಣ್ಣ ಅತ್ತಿಗೆಯರು ಸಂತೆ ನೆರೆಯುವದಕ್ಕಿಂತ ಮುಂಚಿತವಾಗಿ ಹೋಗಿ ಏನಾದರೂ ಹೊಸಬದುಕು ಬಂದಿದ್ದರೆ ಅದನ್ನು ಖರೀದಿಸುವುದು ವಾಡಿಕೆ. ಆ ಮೇಲೆ ಮಾರಾಟದ ಏರ್ಪಾಡು ಮಾಡುವುದು. ಎಷ್ಟೋ ಸಾರೆ ತಲೆಗಂಟಿನವರು ಬಂದು ಬಂದು ರೊಕ್ಕ ಕೇಳುವರು. ಅವರಿಗೆ ಸ್ವಲ್ಪ ತಡೆಯಿರಿ, ಇಷ್ಟರಲ್ಲಿ ಕೊಟ್ಟು ಬಿಡುವೆವು ಎಂದು ಸಮಾಧಾನ ಹೇಳಿ ಕಳಿಸುವರು.

ಒಂದು ಸಾರೆ ಪೇಟೆಗೆ ಯಾವುದೋ ಹಳ್ಳಿಯವನು, ಒಂದು ಬುಟ್ಟಿ ಚಿಲುಮೆ ತಂದಿದ್ದನು. ಅವನನ್ನು ಯಾರೂ ಮಾತಾಡಿಸಿರಲಿಲ್ಲ. ಆದರೆ ನಮ್ಮ ಅತ್ತಿಗೆ ಆತನ ಕ್ಷೇಮ ಸಮಾಚಾರ ಕೇಳಿದರು. ತೋಳಿನಿಂದ ಒಂದು ಕಟ್ಟಿದ ರೂಪಾಯಿ ತೆಗೆದುಕೊಟ್ಟುಬಿಟ್ಟಳು. ಬುಟ್ಟಿ ಸಹಿತ ಬದುಕು ವಶಕ್ಕೆ ಬಂತು. ಆ ಬುಟ್ಟಿಯನ್ನು ಎಲ್ಲಿಟ್ಟು ಮಾರುವುದು? ಯಾರು ಮಾರುವರು? ಮುಂತಾದ ಯೋಚನೆ ಮಾಡಿದರೆ, ಅದನ್ನು ನಿರ್ವಹಿಸುವದಕ್ಕೆ ನಮ್ಮ ನಿಂಗನಿದ್ದಾನೆಂದು ಹೊಳೆಯಿತು.

ತತ್‌ಕ್ಷಣವೇ ನಾನು ಆ ಬುಟ್ಟಿಯ ಮುಂದೆ ಕುಳಿತು ಮಾರುವ ವನಾದೆ. ಆದರೆ ಯಾರೂ ಕೇಳಲಿಲ್ಲ, ತಂಬಾಕು ಸೇದಲು ಕುಳಿತವರು,

ಚಪಟಿ ಬೀಡಿ ಕೊಂಡುಕೊಳ್ಳುತ್ತಿದ್ದರು. ಈ ಚಿಲುಮೆ ಕೊಂಡು, ತಂಬಾಕು, ಚಕಮಕಿ ದೊರಕಿಸಬೇಕಲ್ಲ! ಆ ಜಂಜಾಟದ ನೆನಪಾಗಿ ಚಿಲುಮೆಯ ಉಸಾಬರಿ ಯಾರೂ ಮಾಡಲಿಲ್ಲ.

ನಾನು ಸಂಜೆಯವರೆಗೆ ಮುಂದೆ ಹಾದು ಹೋಗುವವರ ಮುಖವನ್ನು ಆಸೆಕಣ್ಣಿನಿಂದ ನೋಡುತ್ತ ಹೊತ್ತುಗಳೆದದ್ದೇ ಆಯಿತು. ಒಂದು ಚಿಲುಮೆಯೂ ಮಾರಲಿಲ್ಲ.

ಇದೇ ಕ್ರಮ ೩-೪ ವಾರ ಸಾಗಿತ್ತು. ಪುಕ್ಕಟೆಯಾದರೂ ಕೊಡಬೇಕೆಂದರೆ ಯಾರೂ ಒಪ್ಪಲಿಲ್ಲ. ಸಾಯಂಕಾಲಕ್ಕೆ ಆ ಬುಟ್ಟಿ ಹೊತ್ತು ತಂದು ಮನೆಯಲ್ಲಿ ಇಳಿಸಿದೆ. ಆ ಚಿಲುಮೆಗಳು ಮುಂದೆ ಎಷ್ಟೋ ವರುಷ ನಮ್ಮ ಮನೆಯಲ್ಲಿ ತಂಗಿ ಉರುಳಾಡಿದವು.

ಅನರ್ಥ ಶಾಸ್ತ್ರದ ಇಂಥ ಅನೇಕ ಪಾಠಗಳನ್ನು ಕಲಿತೆ. ಆ ಜ್ಞಾನವು ನನ್ನ ಇಡಿಯ ಜೀವನದಲ್ಲಿ ಬುದ್ಧಿವಂತಿಕೆಯಿಂದ ನಡೆದುಕೊಳ್ಳುವುದಕ್ಕೆ ಸಹಾಯ ನೀಡಿತು. ಕೆಲವಂ ಬಲ್ಲವರಿಂದ ಕಲ್ತುದೇ ಯಥೇಷ್ಟವಾದ ಪ್ರಮೋಶನ್ ಕೊಡಮಾಡಿತು. ಅದಕ್ಕಾಗಿ ಯಾರ ಉಪಕಾರ ನೆನೆಸಬೇಕು? ನಾನು ಶಾಲೆಯಲ್ಲಿ ಹಲವು ವಿಷಯಗಳನ್ನು ಕಲಿತು ಕೊಂಡಂತೆ, ಮನೆಯೇ ಪಾಠಶಾಲೆಯಾಗಿ ನೂರಾರು ತಿಳುವಳಿಕೆಗಳನ್ನು ನೀಡಿತೆನ್ನುವುದು ಸಂಪೂರ್ಣ ಸತ್ಯವಾಗಿದೆ.

ಈವರೆಗೆ ಉಪ್ಪಿನಕಾಯಿ ಹೋಳುಗಾಯಿಗಳ ಸ್ವಾರಸ್ಯವನ್ನು ಗ್ರಹಿಸಿದವರಿಗೆ ಪರಿಪಕ್ವ ಫಲದ ಮಾಧುರ್ಯವನ್ನು ಉಣಿಸದೆ ಬಿಡಲಿಕ್ಕಾಗದು. ಅದೇನೆಂದರೆ -

ನಮ್ಮತ್ತಿಗೆಯ ಹಿರೆಮಗ ಬಸವರಾಜನಿಗೆ ಗುರುಪಾದನೆಂಬುವನು ಜೀವದ ಗೆಳೆಯನಾಗಿದ್ದನು. ಅವರಿಬ್ಬರೂ ಕಲಿಯುವ ಶಾಲೆ ಒಂದೇ, ವರ್ಗವೂ ಒಂದೇ. ರಾತ್ರಿ ಓದಲಿಕ್ಕೆ ಅನುಕೂಲವಾದ ಕೋಣೆಯೂ ಒಂದೇ. ನಮ್ಮತ್ತಿಗೆಗೆ ಬಸವರಾಜ ಬೇರೆ, ಗುರುಪಾದ ಬೇರೆ ಎಂದು ಎಂದೂ ಅನಿಸಿರಲಿಲ್ಲ.

ಗುರುಪಾದ ವಿದ್ಯಾರ್ಥಿಯಾಗಿದ್ದಾಗಲೇ ಅವನು ತಂದೆಯನ್ನು ಕಳಕೊಂಡನು. ಪ್ರಪಂಚದ ಭಾರವೆಲ್ಲ ಆತನ ಮೇಲೆಯೇ ಬಿತ್ತು. ತಂದೆ ಸೀರೆಯ ವ್ಯವಹಾರವನ್ನು ಮುಂದುವರಿಸಿದನು. ರಬಕವಿ, ಬನಹಟ್ಟಿ ಇಳಕಲ್ಲ ಮೊದಲಾದ ಸ್ಥಳಗಳಿಂದ ಸೀರೆಗಳನ್ನು ಖರೀದಿಸಿ, ಲಾಭದಾಯಕ ವ್ಯಾಪಾರ ಮಾಡುವಷ್ಟರಲ್ಲಿ ಕುಳಗಳಿಂದ ಬರಬೇಕಾದ ಉದ್ದರೀ ಬಾಕಿ ವಸೂಲಾಗಲೇ ಇಲ್ಲ.

ಕೈಅಡಚಣೆ ಆಯಿತು, ವ್ಯಾಪಾರ ನೆಲ ಹಿಡಿಯಿತು ಒಟ್ಟುಗಾರರಿಗೆ ಕಾಲಕಾಲಕ್ಕೆ ಹಣ ಮರಳಿಸಲಿಕ್ಕಾಗಲಿಲ್ಲ. ಆಯಾ ಶ್ರೀಮಂತರು ತಮ್ಮ ಬಾಕಿ ವಸೂಲಿಗಾಗಿ ಅವನ ಹೊಲ ಮನೆಗಳ ಮೇಲೆ ದಾವೆ ತಂದರು. ಆ ಪ್ರಸಂಗದಲ್ಲಿ ನಮ್ಮ ಅತ್ತಿಗೆಯು, ಮಗನ ಸ್ನೇಹಿತನೆಂದು ಗುರುಪಾದನಿಗೆ ೬-೮ ನೂರು ರೂ.ಗಳನ್ನು ಕೈಗಡವೋ ಬಾಯಿಗಡವೋ ಕೊಟ್ಟು ಪ್ರಾಮೇಸರಿ ನೋಟು ಬರೆಸಿಕೊಂಡಳು. ಆದರೆ ಬರಬೇಕಾದ ಹಣ ಬರಲಿಲ್ಲ. ಬಡ್ಡಿ ಸಹ ಬರಲಿಲ್ಲ.

ಅಕ್ಕರೆಯ ಮಗನ ಜೀವದ ಗೆಳೆಯನನ್ನು ತೊಂದರೆಗೀಡು ಮಾಡುವುದೂ ತಪ್ಪು. ಆ ಹಾದಿ ಹಿಡಿಯದೆ ಹಣ ಕಳಕೊಳ್ಳುವುದೂ ತಪ್ಪು - ಏನು ಮಾಡಬೇಕು?

ನಾನು ಬಡಪ್ರಾಣಿ, ಎಬಡ ಮಾಸ್ತರ ನನ್ನದೂ ಕರುಣಾಜನಕ ಸ್ಥಿತಿ, ಅತ್ತಿಗೆಯಾದವಳು ನನ್ನನ್ನು ಹತ್ತಿರ ಕುಳ್ಳಿರಿಸಿಕೊಂಡು, ಹಿತನುಡಿಗಳಿಂದ ನನ್ನ ಮನವೊಲಿಸಿದಳು -

"ಕಾಗದ ಬರೆಸಿಕೊಂಡು ಗುರುಪಾದನಿಗೆ ೪ ನೂರು ರೂಪಾಯಿ ಕೊಡು, ಈಗ ಅಡಚಣೆಯಲ್ಲಿದ್ದಾನೆ. ನಾನು ಈಗಾಗಲೆ ೬-೮ ನೂರು ಕೊಟ್ಟಿದ್ದೇನೆ. ನೀನು ಹಿಂಜರಿಯದೆ ಅವನಿಗೆ ಹಣಕೊಡು. ಎಲ್ಲಿ ಹೋಗುತ್ತಾನೆ, ಅವನಿಗೆ ಹೊಲ ಮನೆಗಳಿವೆ" ನನಗೂ ಆಶೆ ಹುಟ್ಟಿತು ಬಡ್ಡಿಯ ಆಶೆ ಬಾಯಲ್ಲಿ ನೀರೂರಿಸಿತು.

ಶಿಕ್ಷಕರ ಸಹಕಾರಿ ಸಂಘದಲ್ಲಿ ಯಾರದೋ ಜಾಮೀನು ಕೊಟ್ಟು ೪ ನೂರು ರೂ. ಸಾಲ ತಂದು, ಅತ್ತಿಗೆಯ ಮುಖಾಂತರ ಗುರುಪಾದನಿಗೆ ಒಪ್ಪಿಸಿದೆನು. ಆತನು ನನಗೆ ಪ್ರಮಾಣ ಪತ್ರ ಬರೆದುಕೊಟ್ಟನು. ನಾಲ್ಕು, ಆರು, ಎಂಟು ತಿಂಗಳು ಅಸ್ನತ್ತ ೨ ವರುಷಗಳೇ ಕಳೆದವು. ಕವಣೆ-ಕಲ್ಲು ಎರಡೂ ಕೈಬಿಟ್ಟವು.

ನಾನು ಕೊಟ್ಟ ೪೦೦ ರೂ.ಗಳಲ್ಲಿ ತನಗೆ ಬರಬೇಕಾದ ಬಡ್ಡಿಯ ಹಣವನ್ನು ಮುರಕೊಂಡು ಅತ್ತಿಗೆ ಉಳಿದ ಹಣವನ್ನು ಆತನಿಗೆ ಕೊಟ್ಟಳೆಂದು ಹಿಂದಿನಿಂದ ತಿಳಿಯಿತು. ತನ್ನ ಹೆಸರಿನಲ್ಲಿ ಬರಕೊಟ್ಟ ಕಾಗದದಲ್ಲಿ ಕಾಣಿಸಿದ ಹಣವನ್ನು, ನಾನು ಕೊಟ್ಟ ೪ ನೂರು ಹಣವನ್ನು ಕೂಡಿಸಿ ಒಟ್ಟು ಹಣದ ಕಾಗದವನ್ನು ನನ್ನ ಹೆಸರಿನಿಂದ ಬರೆಯಿಸಿದಳು.

ಮುಂದೆ, ಆ ಹಣದ ಸಲುವಾಗಿ ದಾವೆ ಮಾಡಲೇಬೇಕಾಯಿತು. ಯಾರು? ನಾನೇ ಮತ್ತಾರು ಮಾಡಬೇಕು. ದಾವೆಯ ಖರ್ಚು, ಕೋರ್ಟಿಗೆ ಎಡತಾಕುವ ಶ್ರಮ, ಖರ್ಚೂ ನಾನೇ ವಹಿಸಬೇಕಾಯಿತು. ತೀರ್ಪು ಮಾತ್ರ ನಮ್ಮಂತಾಯಿತು. ಆಗ ದೊರೆತ ಹಣದೊಳಗಿಂದ ತನ್ನ ಗಂಟು, ಬಡ್ಡಿ, ಚಕ್ರಬಡ್ಡಿ ತೆಗೆದುಕೊಂಡು, ಉಳಿದಷ್ಟು ನನಗೆ ಕೊಟ್ಟಳು, ಅದರಿಂದ ನನ್ನ ಗಂಟಿನ ಅರ್ಧದಷ್ಟೂ ಬರಲಿಲ್ಲ.

ಅಡಿಗೆಮನೆ ಹೊಕ್ಕ ಬೆಕ್ಕು ಬೆಣ್ಣೆಯನ್ನೆಲ್ಲ ಕಬಳಿಸಿ, ಹೊರಬೀಳುವಾಗ ಅಂಗಳದಲ್ಲಿ ಕಟ್ಟಿದ ಹೋತಿನ ಮುಖಕ್ಕೆ ಒರೆಸಿತು. ಎಂಜಲ ಬೆಣ್ಣೆ ಹತ್ತಿದ್ದಕ್ಕೆ ಹೋತ ಸಾಕಿದವನಿಂದ ದೊಣ್ಣೆಯೇಟು ತಿಂದು ತೆಪ್ಪಗೆ ಕುಳಿತುಕೊಂಡಿತು. ಈರಪ್ಪನು ನನಗೆ ಅಣ್ಣ ಅಹುದು, ಆದರೆ ಹೆಚ್ಚಾಗಿ ಅತ್ತಿಗೆಯ ಗಂಡ ಮಾತ್ರ ಆಗಿದ್ದನೆಂದು ವಿಷಾದದಿಂದ ಹೇಳಬೇಕಾಗಿದೆ.

೬. ಚೆನ್ನಮಲ್ಲಪ್ಪ ಹಲಸಂಗಿ ಅವರ ಸಂಬಂಧ

೧೯೧೨ನೇ ಇಸವಿ ನಾನು ೭ ವರುಷದ ಬಾಲಕ. ೨ನೇ ತರಗತಿಯ ವಿದ್ಯಾರ್ಥಿ. ಆ ಸಂದರ್ಭದಲ್ಲಿ ನಮ್ಮ ಮನೆಯ ಒಂದು ಭಾಗದಲ್ಲಿ ಸರಸಂಬಿ ಗುರುಬಾಳಪ್ಪನವರು ಬಾಡಿಗೆದಾರರಾಗಿದ್ದರು. ಅವರ ಮನೆತನದಲ್ಲಿ ಮೂರೇಮೂರು ಜನ, ಗುರುಬಾಳಪ್ಪ ಆತನ ಪತ್ನಿ ಭವರಮ್ಮ ಮತ್ತು ಒಬ್ಬನೇ ಒಬ್ಬನಾದ ಮಗ ಬಸಣ್ಣ.

ಶ್ರೀಮತಿ ಭವರಮ್ಮನವರ ತವರೂರು ಹಲಸಂಗಿ. ಆಕೆಯ ಅಣ್ಣನ ಮಗನೇ ಚೆನ್ನಮಲ್ಲಪ್ಪ ಗಲಗಲಿ (ಮಧುರಚೆನ್ನ ಕವಿ) ಸರಸಂಬಿ ಬಸಣ್ಣ ಮತ್ತು ಚೆನ್ನಮಲ್ಲಪ್ಪ ಗಲಗಲಿ ಸಮವಯಸ್ಕರು, ಅಂದರೆ ೯ ವಯಸ್ಸಿನ ಬಾಲಕರು. ಅವರಿಬ್ಬರೂ ನನಗಿಂತ ಎರಡು ವರ್ಷಗಳಿಂದ ಹಿರಿಯರು ಅವರು ೩ನೇ ತರಗತಿಯಲ್ಲಿ ಓದುವ ವಿದ್ಯಾರ್ಥಿಗಳು.

ಸೋದರತ್ತೆಯ ಸಲುವಾಗಿ ಚೆನ್ನಮಲ್ಲಪ್ಪ ಚಡಚಣಕ್ಕೆ ಬಂದನು. ಅವನು ಆಗ ಶಿವಲೀಲಾಮೃತದೊಳಗಿನ ಕಥೆಗಳನ್ನು ಬಹು ಸ್ವಾರಸ್ಯವಾಗಿ ಹೇಳುತ್ತಿದ್ದನು. ಸೌ|| ಭವರಮ್ಮನವರೂ ನಮಗೆ ಹಲವಾರು ಕಥೆಗಳನ್ನು ಕೇಳಿಸಿದ್ದುಂಟು. ಅಂದು ಅವರು ಹೇಳಿದ ಜನಪದ ಕಥೆಗಳು ಇಂದಿಗೂ ನೆನಪಿನಲ್ಲಿವೆ.

ನಾವು ನಮ್ಮ ತಂದೆಯ ಬಾಯಿಂದ ರಾಮ-ಲಕ್ಷ್ಮಣರ ಕಥೆ ಕೇಳಿ ತಿಳಿದಿದ್ದೆವು. ಅಂದು ರಾಮಲಕ್ಷ್ಮಣರು, ರಾವಣನನ್ನು ಸೀತಾಪಹರಣ ಕಾರಣಕ್ಕಾಗಿ ಕೊಂದರೆಂದೂ, ಆ ರಾವಣನ ಹೆಣವು ಇಂದಿಗೂ ಉರಿಯುತ್ತಿದೆಯೆಂದು ಹೇಳಿದರು. ಅಲ್ಲದೆ, ನಾವು ನಮ್ಮ ಎರಡೂ ಕಿವಿಯಲ್ಲಿ ಬೊಟ್ಟು ಹಾಕಿ ಕೇಳಿದರೆ ಇಂದಿಗೂ ಧನ್‌ಧಸ್ ಎಂಬ ಸದ್ದು ಕೇಳಿಸುತ್ತದೆಂದೂ ತಿಳಿಸಲು ನಾವು ಕಿವಿಯಲ್ಲಿ ಬೊಟ್ಟು ಹಾಕಿಕೊಂಡು ಆ ದಹನ ಸದ್ದುಕೇಳಿ ಖಾತ್ರಿ ಮಾಡಿಕೊಂಡೆವು. ಆ ಅದ್ಭುತವಾದ ಕಥೆಯನ್ನು ಬಯಲಾಟದ ರೀತಿಯಲ್ಲಿ ನಾನು ಮತ್ತು ಬಸಣ್ಣ ಕಲಿತೆವು.

ತೇರದಾಳ ರಾಧಾ ಎಂಬ ಸಣ್ಣಾಟದೊಳಗೆ ಬರುವ ಶ್ರೀಮಂತ ಮತ್ತು ಸನ್ಯಾಸಿ ಎಂಬ ಸಂದರ್ಭವನ್ನು ಅಭಿನಯಿಸಲು ಕಲಿತಿದ್ದೆವು. ಬಸಣ್ಣನು ಶ್ರೀಮಂತನ ಪಾತ್ರ, ನನ್ನದು ಸನ್ಯಾಸಿಯ ಪಾತ್ರ, "ದಾನ ಕೊಡು ಅಂದರೆ ಹೀನವಾಗಿ ಬೊಗಳುವೆ" ಎಂಬ ಹಾಡಿನ ಚುಟಿಕೆ ಇಂದಿಗೂ ನೆನಪಿನಲ್ಲಿದೆ.

ರಾಮಲಕ್ಷ್ಮಣರ ಕಥಾಸಂದರ್ಭವನ್ನು ನಾವೇ ನಮಗೆ ಸರಿದೋರಿದಂತೆ ಬಯಲಾಟದ ರೀತಿಯಲ್ಲಿ ಅಳವಡಿಸಿಕೊಂಡಿದ್ದೇವು. ಪಾತ್ರಗಳ ವಿವರ ಇಂತಿದೆ.

ಬಸಣ್ಣ ರಾಮನ ಪಾತ್ರ ವಹಿಸಿದರೆ, ತೆಲಸಂಗಚೆನ್ನಪ್ಪ ಲಕ್ಷ್ಮಣ ಪಾತ್ರ, ಕೇಶೆಟ್ಟಿ ಮಲ್ಲಪ್ಪ ಸೀತಾ ಆಗಿದ್ದರೆ ನಾನು ಹನುಮಂತನ ಪಾತ್ರ ವಹಿಸಿದೆನು, ಆದರೆ ರಾವಣನ ಪಾತ್ರ ಯಾರಿಗೆ? ನಿರ್ಧಾರವಾಗಲಿಲ್ಲ.

ಸೀತೆಯನ್ನು (ದಂಡಕಾರಣ್ಯದಲ್ಲಿದ್ದಾಗ) ಅಪಹರಿಸಿಕೊಂಡು ಹೋಗುವ ಕಾಲಕ್ಕೆ ರಾವಣನು ಸನ್ಯಾಸಿಯ ವೇಷ ತಳೆದಿದ್ದನು. ಸನ್ಯಾಸಿಯ ಪಾತ್ರಕ್ಕೆ ಮುಖ್ಯವಾದ ವಸ್ತು ಯಾವುದೆಂದರೆ - ಹಸರು ಪಟಿಕಾ ಸುತ್ತುವುದು. ಅಂಥ ಪಟಕಾ ಧಿಗಂಬರ ಸಿದ್ದನದಿತ್ತು. ಅವನೂ ೩ನೇ ತರಗತಿಯಲ್ಲಿ ವಿದ್ಯಾರ್ಥಿಯಾಗಿದ್ದನು.

ಚೆನ್ನಮಲ್ಲಪ್ಪನವರ ಮುಂದೆ ಶ್ರೀಮಂತ-ಸನ್ಯಾಸಿ ಎಂಬ ಸಂದರ್ಭವನ್ನು ನಟಿಸಿ ತೋರಿಸಿದೆವು. ಇನ್ನು ರಾಮಸೀತೆಯರ ಕಥಾ ಸಂದರ್ಭವನ್ನು ಆಡಿತೋರಿಸಬೇಕು.

ನಮ್ಮ ಪಾತ್ರಧಾರಿ ವಿದ್ಯಾರ್ಥಿ ಮಿತ್ರರೆಲ್ಲ ಬಂದರು. ನಮಗೆ ತಿಳಿದಂತೆ ನಾವು ಪಾತ್ರ ಸಿದ್ಧತೆ ಮಾಡಿಕೊಂಡೆವು, ಇನ್ನು ಆಡುವುದೆಲ್ಲಿ?

ಅಗೋ, ಬಳ್ಳೊಳ್ಳಿ ರುದ್ರಪ್ಪನ ಅಂಗಳ ವಿಸ್ತಾರವಾಗಿತ್ತು! ರುದ್ರಪ್ಪ ಸೇಕಾರನಾದ್ದರಿಂದ ಆ ಅಂಗಳವನ್ನು ಉಂಕಿಯಸಪೆಯಾಗಿ ಮಾಡಿಕೊಂಡಿದ್ದನು, ಉಂಕಿಯ ಕೋಲುಗಳು ನಮ್ಮ ವಾನರ ಸೇನೆಯವರಿಗೆ ಆಯುಧವಾಗಿಬಿಟ್ಟವು.

ಕಥೆ ಆರಂಭವಾದದ್ದು ಯಾವ ಮಾರ್ಪಾಡು ಇಲ್ಲದೆ ಮುಂದುವರಿಯಿತು. ಹತ್ತೆಂಟು ಸಾರೆ ರೂಢಿ ಮಾಡಿಕೊಂಡಿದ್ದರಿಂದ ನಿರರ್ಗಳವಾಗಿ ಸಾಗಿತ್ತು. ಇನ್ನು ಉಳಿದದ್ದು ರಾಮರಾವಣರ ಯುದ್ಧ. ಅತ್ತ ರಾಕ್ಷಸರ ಸೇನೆ, ಇತ್ತ ವಾನರರ ಸೇನೆ, ಯುದ್ಧ ಸಜ್ಜಿತವಾಗಿ ಉಭಯ ಸೇನೆಗಳು ಕಣಗುಣಿತ ನಡೆಸಿದವು. ವೀರ ಕುಣಿತವು ದ್ವಿಗುಣ ಚೌಗುಣವಲ್ಲಿ ಮುಂದುವರಿದು ಸಾಯಬೇಕಾದ ರಾಕ್ಷಸರೆಲ್ಲ ಸತ್ತು ಬಿದ್ದರು. ಆದರೆ -

ನಮ್ಮ ರಾವಣ ಮಾತ್ರ ರಾಮ-ಲಕ್ಷ್ಮಣ-ಹನುಮಂತರಿಗಿಂತ ತುಂಬಾ ಬಲಿಷ್ಠನಾಗಿದ್ದನು. ಪ್ರತಿಯೊಬ್ಬನನ್ನು ಕೆಳಗೆ ಕೆಡವಿ ಅವರ ಎದೆಯ ಮೇಲೆ ಕುಳಿತು "ವಾಹವ್ವಾ! ವಾಹವ್ವಾ!" ಎಂದು ಆರ್ಭಟಿಸತೊಡಗಿದನು. ನಾವು ಬಿದ್ದಲ್ಲಿಂದಲೇ ಅವನಿಗೆ ಹೇಳಿದೆವು -

"ಹಾಗೆ ಮಾಡಬಾರದೋ ಸಿದ್ದಾ, ರಾವಣನಾದ ನೀನು ನೆಲಕ್ಕೆ ಬೀಳಬೇಕು ಮತ್ತು ರಾಮಲಕ್ಷ್ಮಣ ಹನುಮಂತರಾದ ನಾವು ನಿನ್ನ ಎದೆಯ ಮೇಲೆ ಕುಳಿತುಕೊಳ್ಳಬೇಕು" ಎಂದು ಕಣ್ಣೀವುಟಿ ಹೇಳಿದೆವು. ಸಿದ್ದನು ನಮ್ಮ ವಿನಂತಿಯನ್ನು ಕಿವಿಯಲ್ಲಿ ಹಾಕಿಕೊಳ್ಳಲೇ ಇಲ್ಲ. ತಿರುಗಿ ಹೀಗೆ ಹೇಳಿದನು-

"ನಿಮ್ಮ ಕಥೆ ನಿಮಗೆ, ನಮ್ಮ ಕಥೆ ನಮಗೆ! ಬೀಳುವವರು ನೀವು, ಬೀಳಿಸುವವರು ನಾವು"

ಹೀಗೆ ನಮ್ಮ ಬಯಲಾಟವು ದುರಂತವಾಗಿ ಮುಗಿಯಿತು. ಅಲ್ಲ ಮುಗಿಸಲ್ಪಟ್ಟಿತು. ಏನೇ ಆಗಲಿ ಚೆನ್ನಮಲ್ಲಪ್ಪ ಮಾತ್ರ ನಮ್ಮ ನಾಟ್ಯ ಕಲೆಯನ್ನು ಮೆಚ್ಚಿದನೆಂದೇ ಹೇಳಬೇಕು.

ಅಂದು ನಮ್ಮಿಬ್ಬರಿಗೆ ಆದ ಪರಸ್ಪರ ದರ್ಶನವು ಹೇಗೆ ಬೆಳೆದು ಬಂತೆಂಬುದನ್ನು ದಿ. ಶಾಂತಕವಿಗಳ ಕವಿವಾಣಿಯಲ್ಲಿ ಹೇಳಿ ಮುಗಿಸುವೆನು.

ದರುಶನದಿಂದಲಿ ಪರಿಚಯವಪ್ಪುದು
ಪರಿಚಯದಿಂ ಸಂಭಾಷಣವು
ಭಾಷಣದಿಂ ಸಹವಾಸವಹುದು
ಸಹವಾಸದಿಂದಲಕ್ಕುಂಸಖ್ಯಂ
ಸಖ್ಯದಿಂದ ಕೇಳ್ ಒಕ್ಕಟ್ಟಾಗಲು
ದೊಕ್ಕಟ್ಟಿಂದೇ ಮಹಾಕೃತಿಯು

ಇದರ ಸ್ಪಷ್ಟೀಕರಣವನ್ನು ಮುಂದಿನ ಪುಟಗಳಲ್ಲಿ ಸಂಕ್ಷೇಪವಾಗಿ ಕಾಣುವಿರಿ.

೭. ಮಹಾಕೃತಿಯಿಂ ಸುಹಿತವು ದೇಶಕೆ

ನಮ್ಮುಭಯರ ಪರಿಚಯವು ದೇಶಕ್ಕೆ ಸುಹಿತ ಸಾಧಿಸುವದೆಂದು ಶಾಂತಕವಿಗಳು ನಮಗಾಗಿಯೇ ಆ ಕವನ ರಚಿಸಿದರೋ ಅನ್ನುವಂತಿದೆ. ಆ ಬಳಿಕ ನಮ್ಮಿಬ್ಬರಲ್ಲಿ ನಡೆದ ಪತ್ರ ವ್ಯವಹಾರವೇ ಸಾಕ್ಷಿಯೆನ್ನಬೇಕಾಗುತ್ತದೆ.

ಸೀರೆ ಕುಪ್ಪಸ ಮಾರುವ ಚೆಟ್ಟಿಯರು ಚಡಚಣದಿಂದ ಹಲಸಂಗಿಗೆ ಹೋಗುತ್ತಿದ್ದರು. ಅದರಂತೆ ಹಲಸಂಗಿಯ ಚೆಟ್ಟಿಯರು ಕಪ್ಪಡ ಮಾರಲು ಚಡಚಣಕ್ಕೆ ಬರುತ್ತಿದ್ದರು. ಬುಧವಾರ ಚಡಚಣ ಸಂತೆ, ಗುರುವಾರ ಹಲಸಂಗಿಯ ಸಂತೆ.

ನಮ್ಮ ಪತ್ರಗಳು ಅಂಚೆವೆಚ್ಚವಿಲ್ಲದೆ, ಮಿಸ್ಸೆಂಟಾಗಿ ಎಲ್ಲಿಯೋ ಹೋಗಿ ಎಲ್ಲಿಂದಲೋ ಮರಳಿ ಬರದೆ ನೇರವಾಗಿ ಹೋಗಿ ನೇರವಾಗಿ ಬರುತ್ತಿದ್ದವು.

ಚೆನ್ನಮಲ್ಲಪ್ಪ ನನಗಿಂತ ಒಂದು ತರಗತಿಯಲ್ಲಿ ಮುಂದೆ ಇದ್ದವರು ಮುಲಕೀ ಪರೀಕ್ಷೆ ಕೂಡ ಅದೇ ಅಂತರದಲ್ಲಿ ಇಬ್ಬರದೂ ಮುಗಿಯಿತು.

ದಿ. ಸಿದ್ದಪ್ಪ ಚಂದ್ರಾಮಪ್ಪ ಜಗತಿ ಎಂಬ ಶಿಕ್ಷಕರು ಸಿಂದಗಿ ತಾಲೂಕಿನ ಯರಗಲ್ಲ ಗ್ರಾಮದವರು. ಚಡಚಣದ ಗಂಡು ಮಕ್ಕಳ ಶಾಲೆಗೆ ಮೊದಲನೇ ಶಿಕ್ಷಕರಾಗಿ ಬಂದರು. ಅವರ ಸೇವೆ ಆರಂಭಗೊಂಡಿದ್ದು ಚಡಚಣದಲ್ಲಿಯೇ, ಅವರು ೬ನೇ ತರಗತಿಯ ಶಿಕ್ಷಕರಾದರು. ನಾನು ಅದೇ ತರಗತಿಯ ವಿದ್ಯಾರ್ಥಿ.

ಅವರು ಪಾಠ ಹೇಳುವ ಕ್ರಮವನ್ನು ತುಸು ಹೇಳಬೇಕೆನಿಸುತ್ತದೆ -

"ರೊಟ್ಟೀ ಕುಡಿ, ನೀರು ತಿನ್ನು" ಎಂಬರ್ಥದ ಇಂಗ್ಲಿಷ ಗಾದೆಯಂತೆ ಅವರು ಕಲಿಸುವ ಪದ್ಧತಿಯೂ ಇತ್ತೆಂದು ಹೇಳಬಹುದು. ಒಂದೇ ಮಾತಿನಲ್ಲಿ ಪದ್ಯ ರೊಟ್ಟಿಯಿದ್ದಂತೆ ಗದ್ಯ ನೀರು ಇದ್ದಂತೆ ಪದ್ಯವನ್ನು ಅರೆದರೆದು ತಿಳಿಮಾಡಿ ಗಟಗಟ ಕುಡಿಸುವರು. ಗದ್ಯವು ನೀರಿನಂತಿದ್ದರೂ ಅದನ್ನು ಆಣೆಕಲ್ಲು ಮಾಡಿ ತಿನ್ನಿಸುತ್ತಿದ್ದರು.

ನಿಬಂಧ ಬರಹಕ್ಕೆ ಹೊಸ ಕ್ರಮವನ್ನೇ ಅನುಸರಿಸಿದರೆಂದು ಹೇಳಬಹುದು. ಬೇರೆಬೇರೆ ತಲೆಕಟ್ಟಿನ ಹಲವು ನಿಬಂಧಗಳನ್ನು ಬರೆಸುವುದಕ್ಕಿಂತ ಒಂದೇ ನಿಬಂಧವನ್ನು ಹಲವು ಸಾರೆ ಬರೆಸುವ ಕ್ರಮವು ಹೆಚ್ಚು ಪ್ರಯೋಜನಕರವಾಗಿತ್ತು. ಉಗಿಬಂಡಿ ಎಂಬ ವಿಷಯವನ್ನು ಸಾಧ್ಯವಾದ ಹಲವು ಸಂಗತಿಗಳ ಮುಖಾಂತರ ತಿಳಿಸಿ ಆಮೇಲೆ ಸಂಗತಿಗಳನ್ನು ಕ್ರಮಗೊಳಿಸುತ್ತಿದ್ದರು. ಹೀಗೆ ಉಗಿಬಂಡಿ ಎಂಬ ನಿಬಂಧವನ್ನು ನಮ್ಮಿಂದ ಹಲವು ಸಾರೆ ಬರೆಯಿಸಿದ್ದು ನೆನಪಿದೆ. ಅದರಿಂದ ಕೊಟ್ಟ ವಿಷಯದಲ್ಲಿ ಯಾವ ಯಾವ ವಿಭಾಗ ಮಾಡಿಕೊಂಡರೆ, ವಿಷಯ ಸುಗುಮವಾಗುವದು ಎಂಬುದನ್ನು ನಿರೀಕ್ಷಿಸುತ್ತಿದ್ದರು.

೬ನೇ ತರಗತಿಯಲ್ಲಿ ನಾನಿದ್ದಾಗ ಚಡಚಣ ಶಾಲೆಯ ವಾರ್ಷಿಕ ಪರೀಕ್ಷೆಯನ್ನು ಜಿಲ್ಲೆಯ ಹಿರಿಯ ಶಿಕ್ಷಣಾಧಿಕಾರಿಗಳೇ ಇರಿಸಿಕೊಂಡಿದ್ದರು. ೧೯೧೮. ವಾಡಿಕೆಯಂತೆ ಕರಂದೀಕರರೆಂಬ ಸಾಹೇಬರು ಬಂದರು, ಪರೀಕ್ಷೆ ಆರಂಭಿಸಿದರು. ೬ನೇ ತರಗತಿಯ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳು ನಾಲ್ವರೇ ಇದ್ದೆವು. ३-೪ ವಿಷಯಗಳನ್ನು ಕೊಟ್ಟು, ಅವುಗಳಲ್ಲಿ ಬೇಕಾದ ಒಂದನ್ನು ಕುರಿತು ನಿಬಂಧ ಬರೆಯಲು ತಿಳಿಸಿದರು. ನಾನು 'ಪ್ರಾಮಾಣಿಕತನ' ಎಂಬ ವಿಷಯಕ್ಕೆ ನಿಬಂಧ ಬರೆದು ಒಪ್ಪಿಸಿದೆನು.

ಮರುದಿನ ಬೆಳಗಿನ ಹೊತ್ತಿಗೆ ಸಾಹೇಬರು ನನ್ನನ್ನೂ, ಮುಖ್ಯ ಗುರುಗಳನ್ನೂ ವರ್ಗದ ಶಿಕ್ಷಕರನ್ನೂ ಕರೆಯಿಸಿ, ನಾನು ಬರೆದ ನಿಬಂಧದ ವಿಷಯವಾಗಿ ಬಹಳವಾಗಿ ಪ್ರಶಂಸಿಸಿದರು - "ಈ ನಿಬಂಧ ಲೇಖನವನ್ನು

ನಾನು ನನ್ನ ದಫ್ತರಿನಲ್ಲಿರಿಸಿಕೊಂಡು ಹೋದಲ್ಲೆಲ್ಲ ತೋರಿಸುವೆನು" ಎಂದು ನನ್ನ ಬೆನ್ನು ಚಪ್ಪರಿಸಿದರು.

ಸಾಹೇಬರು ಚಡಚಣದ ಮುಕ್ಕಾಮಿನಲ್ಲಿಯೇ ನೆರೆಹಳ್ಳಿಯ ಶಾಲೆಗಳನ್ನು ಸಂದರ್ಶಿಸಿದರು. ಆ ಕಾಲಕ್ಕೆ ನನ್ನನ್ನೂ, ನನ್ನ ಗುರುಗಳನ್ನೂ ಜೊತೆಗೆ ಕರೆದೊಯ್ದು ಅಲ್ಲಿಯ ಶಿಕ್ಷಕರಿಗೂ ಊರ ಪ್ರಮುಖರಿಗೂ ಹೇಳಿಕೊಟ್ಟರು. ಅಲ್ಲಿಯ ಶಿಕ್ಷಕರಂತೂ ನನ್ನನ್ನು ತಮ್ಮ ಮನೆಗೆ ಕರೆದೊಯ್ದು ಉಂಡಿಯನ್ನು ತಿನ್ನಲು ಕೊಟ್ಟರು.

ಸಾಹೇಬರಿಗೆ ನೀರು ಕುಡಿಯಬೇಕೆಂದು ಶಿಕ್ಷಕರು ವಿನಂತಿಸಿಕೊಂಡಾಗ ಅವರು ನನ್ನನ್ನು ತೋರಿಸಿ ಈ ಬಾಲಕನನ್ನು ಮಾತ್ರ ಕರೆದೊಯ್ಯಿರೆಂದು ಹೇಳುತ್ತಿದ್ದರು.

೧೯೧೮ನೇ ಇಸವಿಯಲ್ಲಿಯೇ ನನ್ನ ೬ನೇ ತರಗತಿ ಮುಗಿದಿದ್ದರೂ ನನ್ನ ಮುಲಕೀ ಪರೀಕ್ಷೆ ೧೯೨೨ರಲ್ಲಿ ಆಗುವುದಕ್ಕೆ ಎರಡು ಕಾರಣಗಳಿದ್ದವು. ೭ನೇ ತರಗತಿ ಕಲಿಸುವ ಏರ್ಪಾಡು ಆಗುವಂತಿದ್ದರೂ ಕಲಿಯುವ ೪-೬ ವಿದ್ಯಾರ್ಥಿಗಳೂ ದೊರೆಯಲಿಲ್ಲ. ಹೀಗಾಗಿ ಊರುಕೋಳಿಗಳ ಕೂಡ ನೀರಕೋಳಿ ಸತ್ತಿತು ಎನ್ನುವಂತಾಯಿತು.

೬ನೇ ತರಗತಿ ಮುಗಿಸಿದ ನಾನು ಮುಂದಿನ ೩ ವರ್ಷಗಳಲ್ಲಿ ಪೋಲಿಯಾಗಿ ತಿರುಗಿದೆನೆಂದು ತಿಳಿಯಬಾರದು. ನೆಯ್ಗೆ, ಜೇಡಿಕೆ ಕಲಿಯುವುದರಲ್ಲಿ ಹಾಗೂ ನಾಟಕ ಮಾಡಿ ಪಾತ್ರ ವಹಿಸುವುದರಲ್ಲಿ ದಿನ ಕಳೆದರೂ ಅವು ಮುಂಬರುವ ಜೀವನಕ್ಕೆ ಪರಮೋಪಕಾರಿಯಾಗಿ ಪರಿಣಮಿಸಿದವೆಂದು ಹೇಳಬಹುದು.

೧೯೨೧ರಲ್ಲಿ ೭ನೇ ತರಗತಿಯಿಡುವ ಭರವಸೆಯಿತ್ತು. ನಿಂಬರಗಿ ಗ್ರಾಮದವರಾದ ದಿ. ಸಂ.ಭೀ. ಪಾಟೀಲರು ಗಣಿತ ಭಾಷಾ ವಿಷಯಗಳಲ್ಲಿ ಆಳವಾದ ಪಾಂಡಿತ್ಯ ಗಳಿಸಿದ್ದರು. ಅವರೇ ನಮ್ಮ ಶಾಲೆಯ ಮುಖ್ಯ ಶಿಕ್ಷಕರು. ಅವರು ತಮ್ಮ ಪಾಂಡಿತ್ಯವನ್ನು ವಿದ್ಯಾರ್ಥಿಗಳಿಗೆ ಧಾರೆಯೆರೆದು ಕೃತಾರ್ಥರಾಗಬೇಕೆಂದು ಹಂಬಲವನ್ನೂ ಇರಿಸಿಕೊಂಡಿದ್ದರು.

ನಾವು ೭ನೇ ತರಗತಿಯಲ್ಲಿ ಓದುತ್ತಿರುವಾಗಲೇ ಹಲಸಂಗಿಯ ಚೆನ್ನಮಲ್ಲಪ್ಪನವರು ಮುಲಕೀ ಪರೀಕ್ಷೆಯಲ್ಲಿ ಜಿಲ್ಲೆಗೇ ಪ್ರಥಮ ಸ್ಥಾನ ಪಡೆದು ಬಂದರೆಂಬ ಸಂಗತಿ ತಿಳಿಯಿತು ಅದನ್ನು ಕೇಳಿ ಪಾಟೀಲ ಗುರುಗಳು, ಚೆನ್ನಮಲ್ಲಪ್ಪನನ್ನು ಕರೆಸಿಕೊಂಡು ತಮ್ಮ ೭ನೇ ತರಗತಿಯ ವಿದ್ಯಾರ್ಥಿಗಳಿಗೆ ಭೆಟ್ಟಿ ಮಾಡಿಸಬೇಕೆಂದು ಯೋಚಿಸಿದರು. ಒಬ್ಬಿಬ್ಬರು ಊರ ಪ್ರಮುಖರ ಸಹಕಾರದಿಂದ ಅವರನ್ನು ಹಲಸಂಗಿಯಿಂದ ಬರಮಾಡಿಕೊಂಡು ೭ನೇ ತರಗತಿಯ ವಿದ್ಯಾರ್ಥಿಗಳಿಗೆ ಅವರ ಪರಿಚಯ ಮಾಡಿಕೊಟ್ಟರು. ಆ ಕಾಲಕ್ಕೆ ಅವರು ಸಂದರ್ಭೋಚಿತವಾಗಿ ನಾಲ್ಕು ಮಾತುಗಳನ್ನು ಚೆನ್ನಾಗಿ ಹೇಳಿದರು. ಅವರ ಜೊತೆಗೆ ಬಂದ ಹಲಸಂಗಿಯ ಧೂಲಾಸಾಹೇಬ ಅಗರಖೇಡದ ಅ.ಮ. ಪಾಟೀಲರೂ ಮಾತಾಡಿದರು. ಅದು ವಿದ್ಯಾರ್ಥಿಗಳಲ್ಲಿ ಅಭಿಮಾನ ಕೆರಳಿಸಲು ಸಹಾಯ ನೀಡಿತು.

ಮರುವರ್ಷ ನನ್ನ ಮುಲಕೀ ಪರೀಕ್ಷೆಯೂ ಮುಗಿಯಿತು. ಮೊದಲ ನಂಬರು ಪಡೆದು ತೇರ್ಗಡೆಯಾದದ್ದು ತಿಳಿಯಿತು. ನನಗೆ ಆ ಸಂಗತಿಯನ್ನು ಮೊಟ್ಟಮೊದಲು ತಿಳಿಸಿಕೊಟ್ಟವರು ಹಲಸಂಗಿಯ ಪಿ. ಧೂಲಾಸಾಹೇಬರು.

೮. ನಿಂಬರಗಿ ಜಾತ್ರೆ

ನಿಂಬರಗಿ ಎಂಬ ಗ್ರಾಮವು ಚಡಚಣದಿಂದ ದಕ್ಷಿಣಕ್ಕೆ ೫ ಮೈಲು ದೂರದಲ್ಲಿದೆ. ಅದು ಎಳನಿಂಬರಗಿಯೂ ಅಲ್ಲ, ಕಪ್ಪ ನಿಂಬರಗಿಯೂ ಅಲ್ಲ, ದೇವ ನಿಂಬರಗಿ ಮಾತ್ರ ಅಹುದು. ಬಹು ಪುರಾತನ ಕಾಲದಿಂದ ನಿಂಬರಗಿ ಜಾತ್ರೆ ಪ್ರಖ್ಯಾತವಾಗಿದೆ. ಪ್ರತಿ ವರ್ಷ ಚೈತ್ರಶುದ್ಧ ದಶಮಿಯಿಂದ ೫-೬ ದಿವಸ ಜಾತ್ರೆ ನೆರೆಯುತ್ತದೆ.

ದೇವದರ್ಶನಕ್ಕಾಗಿ ಮಾತ್ರ ನಿಂಬರಗಿಗೆ ಹೋಗುವವರುಂಟು. ಬಲಭೀಮದೇವರ ದೇವಾಲಯವನ್ನು ಬಹು ಪ್ರಶಾಂತವಾದ ಸ್ಥಳದಲ್ಲಿ ವಿಶಾಲವಾಗಿ ಕಟ್ಟಲಾಗಿದೆ. ನಿಂಬರಗಿ ಗ್ರಾಮಕ್ಕೂ, ದೇವಾಲಯಕ್ಕೂ ನೆಡುವೆ ಒಂದು ಹಳ್ಳ ಹರಡಿದೆ. ಹಳ್ಳ ಚಿಕ್ಕದಾದರೂ ಇಡಿಯ ವರುಷ ಹರಿಯುವದು.

ಸೊಲ್ಲಾಪುರದಿಂದ ಮಾರವಾಡಿಗಳು ಜಾತ್ರೆಗೆ ಮಿಠಾಯಿ ಅಂಗಡಿಗಳನ್ನು ತಪ್ಪದೆ ತರುವರು. ಚಡಚಣದಿಂದಲೂ ಅಂಥ ಒಂದೆರಡು ಅಂಗಡಿಗಳು ಜಾತ್ರೆಗೆ ಹೋಗುವವು. ಭಾಂಡೆ ಅಂಗಡಿಗಳಂತೆ ಸೀರೆ, ಕುಪ್ಪಸ, ಬಳೆಗಳ ಅಂಗಡಿಗಳೂ ಅಲ್ಲಿ ಕಾಣಸಿಗುವವು. ಅವರೆಲ್ಲರೂ ಜಾತ್ರೆಯಲ್ಲಿ ಸಾಕಷ್ಟು ಲಾಭ ಮಾಡಿಕೊಂಡು ತೆರಳುವರು.

ನಮ್ಮ ಅತ್ತಿಗೆ, ಅಣ್ಣಾ ಚರ್ಚಿಸಿ, ಜಾತ್ರೆಗೆ ಮಿಠಾಯಿ ಅಂಗಡಿ ಒಯ್ಯುವುದನ್ನು ನಿರ್ಣಯಿಸಿದರು. ಎದ್ದೇನೋ ದಿಗಂಬರಿ ಅಂದರೆ

ಸಾವರಿಸುವದೇನು ತಡ ಅಂದನಂತೆ. ಮಿಠಾಯಿ ಅಂಗಡಿಗೆ ಬೇಕಾಗುವ ಯಾವ ದೀನಸೂ ನಮ್ಮಲ್ಲಿರಲಿಲ್ಲ. ಎಲ್ಲವನ್ನೂ ಕೊಂಡು ಅಥವಾ ಬಾಡಿಗೆಯಿಂದಲೇ ತರಬೇಕು.

ಪೇಡೆ-ಬರ್ಫಿ, ಬೆಂಡು-ಬತ್ತಾಸ, ಕರಿದಂಟು-ಜಿಲೇಬಿ, ಘೊನಬಿ-ಮೋತಿಚೂರಿ ಮೊದಲಾದವುಗಳನ್ನು ಮಾಡಬಲ್ಲ ಒಬ್ಬ ರೇವಡಿಗಾರನನ್ನು ಹುಡುಕಿದೆವು. ಹುಡುಕುವ ಹಾದಿ ಕಾಲಲ್ಲಿಯೇ ಇತ್ತಂತೆ. ನಮಗೆ ಧತ್ತೂರೀ ಚೆನಬಸು ಸಿಕ್ಕನು.

ಅವನು ಹೇಳಿದಂತೆ ಚುರುಮರಿ-ಪುಟಾಣಿ, ಸೇಂಗಾ ಕಡಲೆಹಿಟ್ಟು, ಸಕ್ಕರೆ-ಒಳ್ಳೆಣ್ಣೆ ಮೊದಲು ಮಾಡಿ ಎಲ್ಲ ಸಾಮಗ್ರಿಗಳನ್ನು ಚಡಚಣದ ಕಿರಾಣಿ ಅಂಗಡಿಯಲ್ಲಿ ಖರೀದಿಸಿ, ಎತ್ತಿನ ಬಂಡಿಯಲ್ಲಿ ಹೇರಿಸಿ ನಿಂಬರಗಿಗೆ ಕಳಿಸಲಾಯ್ತು. ಸಂತೆ ನೆರೆಯುವ ಮೊದಲು ಗಂಟೆ ಚೌಡಿಯರು ನೆರೆಯುವಂತೆ, ನಾವು ಮುಂಚಿತವಾಗಿ ಹೋಗಿ ಠಾಣೆ ಹಾಕಿದೆವು. ಸಂತೆಯಲ್ಲಿಯೋ ಜಾತ್ರೆಯಲ್ಲಿಯೋ ಗಂಟಿ ಚೌಡಿಯರು ನೆರೆಯುವುದಕ್ಕಿಂತ ಮುಂಚಿತವಾಗಿ ಮಿಠಾಯಿ ಅಂಗಡಿಗಳು ತೆರೆಯುವುದುಂಟು.

ಜಾತ್ರೆ ನೆರೆಯುವ ಅವಧಿ ಇನ್ನೂ ೩ ದಿನ ಇತ್ತು. ಅಷ್ಟರಲ್ಲಿ ನಮ್ಮ ಅತ್ತಿಗೆಯ ದನಿ ಬಿದ್ದಿತ್ತು, ಮಾತಾಡುವುದಕ್ಕೂ ತೊಂದರೆಯಾಗಿ ಸೂಚು-ಸನ್ನೆಗಳಿಂದ ಕೆಲಸ ನಿರ್ವಹಿಸತೊಡಗಿದಳು. ಅಣ್ಣನಂತೂ ಅಂಗಡಿಯ ಮಾಲಿಕನಾಗಿ, ಅಲ್ಲಲ್ಲಿ ಹರಡಿದ ಸಾಮಾನುಗಳು ಕಳೆದು ಹೋಗದಂತೆ ನೋಡಿಕೊಳ್ಳುತ್ತಿದ್ದನು ಮತ್ತು ಮಿಠಾಯಿ ಮಾಡುವಾಗ ಚೆನಬಸಪ್ಪನಿಗೆ ಸಹಾಯವನ್ನು ಒದಗಿಸುತ್ತಿದ್ದನು. ಅತ್ತಿಗೆ ರೊಟ್ಟಿ ಯಾವಾಗ ಮಾಡುತ್ತಿದ್ದಳೋ, ಊಟಕ್ಕೆ ಯಾವಾಗ ಕರೆಯುತ್ತಿದ್ದಳೋ ನೆನಪಿಲ್ಲ. ತನ್ನ ಮನೆ, ತನ್ನ ಊಟ, ತನ್ನ ಬಾಯಿ ಅನ್ನುವವರಿಗೆ ಯಾವ ತೊಂದರೆಯೂ ಉಂಟಾಗದು, ಯಾವ ತಡೆಯೂ ತಲೆದೋರಲಾರದು.

ನಾನು ಮಾತ್ರ ನಿಂಬರಗಿಗೆ ಇಮ್ಮಡಿ ಹಕ್ಕಿನಿಂದ ಹೋಗುವಂತಾಯ್ತು. ಮಿಠಾಯಿ ಅಂಗಡಿಗಾಗಿ ಹೋಗುವುದು, ಒಂದು ನೀತಿಯೆಂದು ಈಗಾಗಲೇ ನಿಚ್ಚಳವಾಗಿದೆ. ಅದನ್ನು ಬಿಟ್ಟರೆ ಇನ್ನೊಂದು ಹಕ್ಕಿದೆ. ಅದು ಯಾವುದೆಂದರೆ-

೧೯೧೩-೧೪ನೇ ಇಸವಿಯಿಂದ ಚಡಚಣದ ನಾಟಕ ಕಂಪನಿಯವರು ಪ್ರತಿವರ್ಷ ನಿಂಬರಗಿ ಜಾತ್ರೆಗೆ ಹೋಗಿ ಅಲ್ಲಿ ತಾವು ಕಲಿತ ನಾಟಕದ ಆರೆಂಟು ಪ್ರಯೋಗಗಳನ್ನು ಮಾಡುತ್ತಿದ್ದರು. ಅವರು ಈ ಸಾರೆ ಎರಡು ನಾಟಕಗಳನ್ನು ಆಡುವ ಸಿದ್ದತೆ ಮಾಡಿಕೊಂಡಿದ್ದರು. ದಾಮಾಜಿ ಪಂತ ನಾಟಕದಲ್ಲಿ ಒಂದೆರಡು ಕಿರುಕುಳ ಪಾತ್ರ ಮತ್ತು ಇಂದ್ರಸೇನ ರೋಹಿಣಿ ನಾಟಕದಲ್ಲಿ ನಟಿ ಹಾಗೂ ರಾಜಕುಮಾರ ಪಾತ್ರಗಳು ನನ್ನ ಪಾಲಿಗೆ ಬಂದಿದ್ದವು.

ತಮ್ಮ ಅಂಗಡಿಯಲ್ಲಿ ಊಟ ಮಾಡುವನೆಂದು ಕಂಪನಿಯವರು ತಿಳಕೊಂಡರು. ಕಂಪನಿಯವರು ಅಡಿಗೆ ಮಾಡಿಸಿದಲ್ಲಿ ಹೋಗಿ ಉಂಡು ಬರುವನೆಂದು ಅಂಗಡಿಯವರು ಲೆಕ್ಕಹಾಕಿದರು. ಆ ಉಭಯ ತರ್ಕಗಳನ್ನು ಸುಳ್ಳು ಮಾಡುವ ದಾರಿ ನನ್ನದಾಗಿತ್ತು. ಅಂದರೆ ಇಬ್ಬಗೆಯ ಕೆಲಸಗಳು ನನ್ನ ಪಾಲಿಗಿದ್ದವು. ಮಿಠಾಯಿ ಅಂಗಡಿಯಲ್ಲಿ ಸುವಾಸನೆಯಿಂದ ಎಷ್ಟು ಸಾಧ್ಯವೋ ಅಷ್ಟರಿಂದ ತಣಿಯುತ್ತಿದ್ದೆ. ಅಪ್ಪಿತಪ್ಪಿ ಕಂಪನಿಯವರು ತಾತ್ಪೂರ್ತಿಕವಾಗಿ ತೆಗೆದ ಬೋರ್ಡಿಂಗಿಗೆ ಯಾವಾಗ ಹೋದರೂ ಒಂದು ರೊಟ್ಟಿಯೋ ಚಪಾತಿಯೋ ಸಿಗುತ್ತಿತ್ತು. ಎರಡೂ ಹೊತ್ತು ಮಾತ್ರ ಸಿಗುತ್ತಿರಲಿಲ್ಲ. ಅಂಥ ಅವಕಾಶ ನನಗೆಲ್ಲಿ ಸಿಕ್ಕೀತು?

ಅಂಗಡಿಯಲ್ಲಿ ಅವೆಷ್ಟು ಕೆಲಸವಿದ್ದರೂ ಅವುಗಳನ್ನು ಅಷ್ಟಕ್ಕೆ ಬಿಟ್ಟು ಸಾಯಂಕಾಲ ಒಂಬತ್ತು ಗಂಟೆಯೊಳಗಾಗಿ ಬಣ್ಣದ ಕೋಣೆಗೆ ಹೋಗಿ ನಿಲ್ಲಬೇಕಾಗುತ್ತಿತ್ತು. ಆ ಸಂದರ್ಭದಲ್ಲಿ ಮನೆಯವರು ನನ್ನನ್ನು ಪೂಜಿಸುತ್ತಿದ್ದರು. ಬಣ್ಣದ ಕೋಣೆಯಲ್ಲಿ ಕಂಪನಿಯವರು ಸಾಕಷ್ಟು ತೆಗಳುತ್ತಿದ್ದರು.

ರಾಜಕುಮಾರನ ಪಾತ್ರವಾಗಿ ರಾತ್ರಿ ೧೦ ಗಂಟೆಯಿಂದ ಬೆಳಗಿನ ೫ ಗಂಟೆಯವರೆಗೆ ಪ್ರೇಕ್ಷಕರಿಂದ ಭಲೆ ಅನಿಸಿಕೊಂಡು, ಬಣ್ಣದ ಕೋಣೆಗೆ ಹೋಗಿ ನಾನು ವೇಷ ಬದಲಿಸಿ ನಳರಾಜನಾಗುತ್ತಿದ್ದೆ. ಅದೇ ವೇಷದಲ್ಲೆ ಅಂಗಡಿಗೆ ಹೋದರೆ, ನನಗಾಗಿ ಅತ್ಯಗತ್ಯದ ಕೆಲಸವು ಸಿದ್ಧವಾಗಿ ಕುಳಿತಿರುತ್ತಿತ್ತು. ತುರ್ತುಪರಿಸ್ಥಿತಿಯ ತೋಂಡೀ ಹುಕುಮು ಮುಟ್ಟಿದ ಕೂಡಲೇ ಅದು ಜಾರಿಯಲ್ಲಿ ಬರಲೇಬೇಕು. ಆ ಕೆಲಸ ಯಾವುದೆಂದರೆ-

ಸೂರ್ಯ . ಹೊರಡುವಷ್ಟರಲ್ಲಿ ಚಡಚಣಕ್ಕೆ ಹೋಗಿ, ಕಿರಾಣಿ ಅಂಗಡಿಯಲ್ಲಿ ಒಂದು ಚೀಲ ಚುರುಮುರಿ ಖರೀದಿಸಿ (ಉದ್ದರಿಯಿಂದ) ಆಗಿನದಾಗ ಹೊರಳಿ ಬರಬೇಕು. ಈ ಚುರುಮುರಿಯಿಲ್ಲದೆ ಜಾತ್ರೆಯಲ್ಲಿ ಇನ್ನಾವ ಮಿಠಾಯಿಯೂ ಮಾರುವಂತಿಲ್ಲ.

ಕನಸಿನಲ್ಲಿ ರಾಜನಾಗಿದ್ದ ತಿರುಕನು, ಬೆಳಗಾದ ಬಳಿಕ ಭಿಕ್ಷೆಗೆ ಹೋಗಲು ನಾಚುತ್ತಿದ್ದನಂತೆ. ಹಾಗೆ ನನ್ನ ಗತಿ. ಬೆಳ್ಳಬೆಳತನಕ ವೀರಸೇನ ಎಂಬ ರಾಜಕುಮಾರನಾಗಿ, ಸಾರ್ವಜನಿಕರ ಕಣ್ಣು, ಮನಗಳನ್ನು ತಣಿಸಿದ ನಾನು, ನಡೆಯುತ್ತ ಅದೂ ಬರಿಗಾಲಲ್ಲಿ ಆಯ್ದು ಮೈಲು ಸಾಗಿ ಚಡಚಣ ತಲಪಬೇಕು. ಆ ಬಳಿಕ ಅಲ್ಲಿಯ ಅಂಗಡಿಯಲ್ಲಿ ಚುರುಮುರಿಯನ್ನು ಉದ್ದರೀ ಖರೀದಿಸಿ, ಕಡು ಬಿಸಿಲಲ್ಲಿ ಅದನ್ನು ತಲೆಯ ಮೇಲೆ ಹೊತ್ತುಕೊಂಡು ಜಾತ್ರೆಯಲ್ಲಿರುವ ಅಂಗಡಿಗೆ ತಲುಪಿಸಬೇಕು.

ರಾತ್ರಿಯಲ್ಲಿ ರಾಜಕುಮಾರನಾಗಿ ವನವಾಸದ ಕಷ್ಟಗಳನ್ನು ಅನುಭವಿಸಿದ ಕ್ಲೇಶಕ್ಕಿಂತ, ಹಗಲು ಹೊತ್ತಿನಲ್ಲಿ ಅನುಭವಿಸುವ ಕ್ಲೇಶ ಅತಿ ದಾರುಣವಾಗಿತ್ತು. ಜಾತ್ರೆ ಮುಗಿಯುವವರೆಗೆ ಚಡಚಣಕ್ಕೆ ಎಷ್ಟು ಸಾರೆ ಹೋಗಿಬರುವ ಪ್ರಸಂಗ ಬರುವುದೋ ತಿಳಿಯಲಿಲ್ಲ -

ಮುಂಬರುವ ೪-೫ ರಾತ್ರಿ ಪಾತ್ರಧಾರಿಯಾಗಿ ನಿದ್ರೆ ಕಟ್ಟುವುದಂತೂ ನಿಶ್ಚಯ, ಬೆಳಗಾದ ಬಳಿಕ ಅಂಗಡಿಯ ಕೆಲಸದ ಸಲುವಾಗಿ ಮನೆಯವರು ಚಡಚಣಕ್ಕೆ ಅಟ್ಟುವುದಂತೂ ತೀರ ನಿಶ್ಚಿತ. ಮುಂದಿನ ಮೂರು ಹಗಲು ಮೂರು ರಾತ್ರಿಗಳಲ್ಲಿ ಕಳೆಯಲಿಕ್ಕೆ ಎಷ್ಟು ತಿಂಗಳು ಬೇಕಾಗುವವೋ ಎಂದು ಜೀವವು ಬೆಪ್ಪಾಗಿ ನಿಲ್ಲುವದು.

ಚಡಚಣಕ್ಕೆ ಹೋಗಿ ತಲೆಗಂಟು ಹೊತ್ತು ಜಾತ್ರೆಯಲ್ಲಿರುವ ಸ್ವಂತ ಅಂಗಡಿಗೆ ಮುಟ್ಟಿಸುವುದು ಸುಲಭವೆನಿಸುವಂಥ ಭಾರವಾದ ಬಿಕ್ಕಟ್ಟಿನ ಕೆಲಸ ನನ್ನ ಸಲುವಾಗಿ ರೂಪಗೊಂಡಿತ್ತೇನೋ ಯಾವುದು ಆ ಕೆಲಸ?

ಈ ಸಾರೆ ನಿಂಬರಗಿಯಿಂದ ಚಡಚಣಕ್ಕೆ ಹೋದರೆ ತೀರದು, ಅದಕ್ಕೂ ಮೂರು ಮೈಲು ಮುಂದಿರುವ ಹಾವಿನಾಳಕ್ಕೆ ಹೋಗಬೇಕು, ಅಲ್ಲಿಯವರಾದ ಲಾಡರ ಮನೆ ಹುಡುಕಿಕೊಂಡು ಹೋಗುವುದು ಅಲ್ಲಿ ಸಿಗುವಷ್ಟು ಜವಾರಿ ಅಕ್ಕಿಯನ್ನು ಖರೀದಿಸಿ, ಚೀಲದಲ್ಲಿ ಹಾಕಿ ಚುಂಗಡಿ ಮಾಡಿ ಹೊತ್ತು ತರಬೇಕು, ನಿಂಬರಗಿ ಅಂಗಡಿಯವರೆಗೆ.

ಅಲ್ಲಿ ದೊರೆತ ಅಕ್ಕಿ ಆರುಮಾನು ಅಂದರೆ ೨೪ ಸೊಲಗಿ, ತೂಕದಲ್ಲಿ ಹೇಳಬೇಕಾದರೆ ೯೬ ಕಿ.ಗ್ರಾಂ ಆಗಬಹುದು. ಆ ಗಂಟನ್ನು ದಾರಿಯಲ್ಲಿ ೪-೬ ಕಡೆ ಇಳಿಸಿ ಗಳಿಗೆ ವಿಶ್ರಾಂತಿ ಪಡೆದು ಮತ್ತೆ ಹೊತ್ತುಕೊಂಡು ದಾರಿ ಕ್ರಮಿಸಬೇಕಾಯಿತು. ಅಂಥ ಸಾಮರ್ಥ್ಯ ನನಗೆ ಎಲ್ಲಿಂದ ಬಂತೆಂಬುದು ಇಂದಿಗೂ ಆಶ್ಚರ್ಯದ ಸಂಗತಿಯಾಗಿರುತ್ತದೆ. ಬಹುಶಃ ನಾನು ಪರಮೌಷಧಿಯನ್ನು ಹೆಚ್ಚಾಗಿ ಸೇವಿಸುತ್ತಿದ್ದುದೇ ಅದಕ್ಕೆ ಕಾರಣವೆನ್ನಬೇಕು ಯಾವುದು ಆ ಪರಮೌಷಧಿ?

"ಲಂಘನಂಪರಮೌಷಧಂ"

ಜಾತ್ರೆ ಮುಗಿಸಿಕೊಂಡು ಸ್ವಗ್ರಾಮಕ್ಕೆ ಬರುವಾಗ ಮಿಠಾಯಿ ಬದುಕು ಸಾಕಷ್ಟು ಉಳಿದಿತ್ತು. ಇಳಿಗಾರರು ಗಿಡದಿಂದ ಸಿಂದಿ ಇಳಿಸಿ ಹೆರವರಿಗೆ ಮಾತ್ರ ಮಾರುಗೊಟ್ಟು ಕುಡಿಸುವರು. ಆ ಸಿಂದಿಯನ್ನು ಹೆರವರೇ ಕುಡಿಯಬೇಕು. ಇಳಿಗಾರರು ಕುಡಿಯುವಂತಿಲ್ಲ, ಅದೊಂದು ವ್ರತ ಅವರಿಗೆ. ಹಾಗೆ ನಮ್ಮ ಮಿಠಾಯಿ ಅಂಗಡಿಯ ಮಟ್ಟಿಗೆ ನಾನಂತೂ ಇಳಿಗಾರನಿದ್ದಂತೆ ತಿನ್ನುವವರಿಗೆ ತೂಗಿಕೊಡುವುದೇ ನಮ್ಮ ಕೆಲಸ. ಮಿಠಾಯಿ ತಿನ್ನುವುದು ನಮಗೆ ಧರ್ಮಬಾಹಿರದ ಕೆಲಸವಾಗಿತ್ತು.

ಜಾತ್ರೆಗೆ ಬಂದ ನನ್ನ ಸರಿಯರು, ಸ್ನೇಹಿತರು ತಿಳಕೊಂಡಿದ್ದೇ ಬೇರೆ ಏನಂದರೆ -

ಈತನು ಊಟವನ್ನೇ ಬಿಟ್ಟುಕೊಟ್ಟು ಬಹುತರವಾಗಿ ಮಿಠಾಯಿಯನ್ನೇ ತಿನ್ನುತ್ತಾನೆಂದು.

ಚಡಚಣಕ್ಕೆ ಬಂದ ಬಳಿಕ ಆ ಮಿಠಾಯಿಯನ್ನೆಲ್ಲ ತೂಗಿಯೇ ಇಟ್ಟರು. ಮುಂದೆ ಒಂದೆರಡು ವಾರಗಳಲ್ಲಿ ಮಿಠಾಯಿ ಆರಿತು, ಹಗುರೂ ಆಯಿತು. ಆದರೆ ಅತ್ತಿಗೆ ತರ್ಕಿಸಿದ್ದೇ ಬೇರೆ. ಕಡಿಮೆಯಾದ ತೂಕದಷ್ಟು ಮಿಠಾಯಿ ತಿಂದು ಹಾಕಿರಲೇಬೇಕು! ಯಾರು ತಿಂದವರು?

ಇದ್ದ ಮೂವರಲ್ಲಿ ಕದ್ದವರಾರು? ಮಿಠಾಯಿಯ ಬದಿಯಲ್ಲಿ ಕುಳಿತು ಅದನ್ನು ಬಾಯಿಗಿಟ್ಟುಕೊಳ್ಳದಿರುವುದು ಯಾರಿಗೆ ಸಾಧ್ಯ?

೯. ಶಾಲೆಯೊಳಗಿನ ಶಿಸ್ತು

ನಮ್ಮೂರ ಶಾಲೆಯ ಕಟ್ಟಡದಲ್ಲಿ ಮೂರು ಕೋಣೆಗಳಿದ್ದು, ನಡುವಿನ ಕೋಣೆಯಲ್ಲಿ ಮುಖ್ಯ ಗುರುಗಳು ಆಸೀನರಾಗುವರು. ಇನ್ನೆರಡು ಕೋಣೆಗಳಲ್ಲಿ ಸಹಾಯಕ ಶಿಕ್ಷಕರು ಕೆಲಸ ನಿರ್ವಹಿಸುವರು. ಶಾಲೆಯ ಮೇಲೆ ಹಳ್ಳಿಯ ಕುಂಬಾರರಿಂದ ಸಿದ್ಧವಾದ ಹಂಚುಗಳನ್ನು ಹೊದಿಸಲಾಗಿತ್ತು. ನೆಲ ಗಟ್ಟಣೆ ಮಾಡಿದ್ದು, ದಿನಾಲು ಮುಂಜಾವಿನಲ್ಲಿ ಮಾತ್ರ ಒಡ್ಡರ ಹೆಣ್ಮಗಳೊಬ್ಬಳು ಕಸ ಉಡುಗುವಳು, ರವಿವಾರಕ್ಕೊಮ್ಮೆ ಸಗಣಿಯಿಂದ ನೆಲ ಸಾರಿಸುವಳು, ಅದಕ್ಕೆ ಪ್ರತಿಫಲವೆಂದರೆ ತಿಂಗಳಿಗೆ ೪ ರೂ. ಮಾತ್ರ.

ಸುತ್ತಲು ಕಂಪೌಂಡವಿದ್ದು, ಗೇಟಿನ ವ್ಯವಸ್ಥೆಯಿದೆ. ಗೇಟಿನಿಂದ ಒಳಗೆ ಬರುತ್ತಲೆ ಆಟದ ಬಯಲಲ್ಲಿ ಎಡಕ್ಕೊಂದು, ಬಲಕ್ಕೊಂದು ಬಸರಿ ಗಿಡಗಳು ದಟ್ಟವಾಗಿ ಬೆಳೆದು ನೆರಳು ಹಾಸುವವು. ಆಟದ ಬಯಲಿನ ಒಂದು ಭಾಗದಲ್ಲಿ ಮಲ್ಲಕಂಬ ಮತ್ತು ಪ್ಯಾರಲಲ್‌ಬಾರ್ ನೆಡಿಸಿದ್ದರು. ೬ನೇ, ೭ನೇ ತರಗತಿಗಳಿಗೆ ಮಲ್ಲಕಂಬ-ಡಬಲ್ ಬಾರ್‌ಗಳ ವ್ಯಾಯಾಮವನ್ನು ಕಡ್ಡಾಯವಾಗಿ ಕಲಿಸಲಾಗುತ್ತಿತ್ತು.

೭ನೇ ತರಗತಿಯಲ್ಲಿ ಓದುವ ವಿದ್ಯಾರ್ಥಿಗಳು, ವರ್ಗದಲ್ಲಿ ಕುಳಿತುಕೊಳ್ಳಲು ಬಾಕುಗಳು ಇದ್ದವು. ೭ನೇ ತರಗತಿಯ ವಿದ್ಯಾರ್ಥಿಗಳೆಂದರೆ ಬಾಲಕರಲ್ಲ, ಅಚ್ಚ ತರುಣರು, ಏಶ್ಯಾ, ಪಾಸ್ಯಾ ಎಂದು ಹೆಸರಾದ ಯಶವಂತ, ಪಾರಿಸನಾಥ, ಮೊಕಾಸಿ, ಮಠಪತಿ ಮೊದಲಾದವರು ಶಿಕ್ಷಕರಿಗಿಂತ ಎತ್ತರವಾಗಿದ್ದರು. ಅವರ ಗಡ್ಡ ಮೀಸೆಗಳು ಮುಕ್ಕಾಲು ಇಂಚು

ಬೆಳೆದಿದ್ದರೂ ಅವು ತುಪ್ಪಳ ಅನಿಸುತ್ತಿದ್ದವು. ಅವುಗಳಿಗೆ ಕತ್ತಿ ಹಚ್ಚುವಂತಿಲ್ಲ. ಹಾಗೆ ಮಾಡಿದರೆ ಕೂದಲು ಬಿರುಸಾಗುವವಂತೆ. ತಲೆಯ ಕ್ಷೌರವೆಂದರೆ ಕತ್ತಿ ಹಚ್ಚಿ ನುಣ್ಣಗೆ ಬೋಳಿಸುವುದು.

ಕಟಿಂಗ್, ಕ್ರಾಪುಗಳು ಇತ್ತೀಚಿನ ಆಮದುಗಳು. ಚಿಕ್ಕವರಿರುವಾಗ ಜುಲಪಿ ಬಿಡಿಸುತ್ತಿದ್ದರು. ಬಾಲ್ಯ, ತಾರುಣ್ಯದಲ್ಲಿ ಶಾಲೆಯ ವಿದ್ಯಾರ್ಥಿಗಳಲ್ಲದವರು ಮಾತ್ರ ಚೇರೆ ಎಂಬ ಕ್ಷೌರ ಮಾಡಿಸಿಕೊಳ್ಳುತ್ತಿದ್ದರು.

ಅಂದಿನ ಕ್ಷೌರಿಗಾಗಿ ಒಂದೊಪ್ಪತ್ತಿನ ಕೆಲಸಕ್ಕೆ ಬಿಡುವು ಕೊಡುತ್ತಿದ್ದರು. ಬಹಳ ಚೂಪವೂ ಅಲ್ಲದ, ತೀರ ಮೊಂಡವೂ ಅಲ್ಲದ ಕತ್ತಿಯಿಂದ ತಲೆ-ಗಡ್ಡಗಳನ್ನು ಬೊಳಿಸಿಕೊಳ್ಳುವುದೆಂದರೆ ಕಷ್ಟವಾಗುತ್ತಿತ್ತು. ಆದ್ದರಿಂದ ಆವಾಗ ಕ್ಷೌರಕ್ಕೆ ಕಷ್ಟವೆಂಬ ಬೇರೊಂದು ಹೆಸರಿತ್ತು.

ಗಡ್ಡ ಮೂಗುಗಳಲ್ಲಿ ಹಣಿಕೆ ಹಾಕುತ್ತಿರುವ ಬಿಳಿ ಕೂದಲುಗಳನ್ನು ಕಿತ್ತಿಹಾಕುವ ಸಾಧನವೊಂದು ಕ್ಷೌರಿಕನ ಹಸಬಿಯಲ್ಲಿ ಇರುತ್ತಿತ್ತು. ಆ ಉಪಾಯ ಮಾಡುವುದರಿಂದ ಬಿಳಿಕೂದಲು ಇಲ್ಲದಂತಾಗಿ ಅಥವಾ ಕಡಿಮೆಯಾಗಿ ಹರೆಯದ ಹೊಸ್ತಿಲು ದಾಟದ ಯುವಕರಂತೆ ಕಾಣುತ್ತಿದ್ದರು. ಬೆನ್ನ ಮಣ್ಣು ತೆಗೆದು ಹಾಕುವುದೂ ನಾವದಿಗನ ಕೆಲಸವೇ ಆಗಿತ್ತು.

ಒತ್ತಲಿಗೆ ಬೆಂಕಿಹಾಕಿ ಹಂಡೆ ನೀರು ಕಾಸಲಾಗುತ್ತಿತ್ತು. ಒಂದು ಬಟ್ಟಲಲ್ಲಿ ಆಡಿನ ಹಾಲು ತಂದು ಅದರಲ್ಲಿ ಅಫು ಬೆರೆಯಿಸಿ, ಮುಖ್ಯವಾಗಿ ನೆತ್ತಿಗೆ ತಿಕ್ಕಿ ಇಂಗಿಸಿಕೊಳ್ಳುವರು. ಕಿವಿಯಲ್ಲಿ, ಅಂಗಾಲಿಗೆ ಕೊಬ್ಬರಿಯೆಣ್ಣೆ ಹಾಕಿ ತಿಕ್ಕಕೊಂಡ ಬಳಿಕ ಜಳಕದ ಮನೆಗೆ ಹೋಗಿ, ೩-೪ ಕೊಡ ಸುಡುಸುಡುವ ನೀರಿನಿಂದ ಎರಕೊಂಡು, ಬಟ್ಟೆಯಿಂದ ಮೈ ಒರೆಸಿಕೊಂಡು, ಒಣಗು ಬಟ್ಟೆ ಧರಿಸುವಷ್ಟರಲ್ಲಿ, ಊಟಕ್ಕಾಗಿ ಮಣೆ ಹಾಕಿರುತ್ತಿತ್ತು.

ಬಸಿದ ಶಾವಿಗೆ, ಮುಷ್ಟಿಮುಷ್ಟಿ ಬೆಲ್ಲ, ಜೋಕೆಯಿಂದ ಬಿಟ್ಟ ತುಪ್ಪದಧಾರೆ ಮೇಲೆ ಕಾದು ಆರಿದ ಗಟ್ಟಿ ಹಾಲು ಹಾಕಿಸಿಕೊಂಡು, ಸುರಿಕೆಯ ಊಟ ಆರಂಭಿಸಲಾಗುವದು. ಒಂದು ತಾಬಾಣದಿಂದ ೨ನೇದಕ್ಕೆ ೩ನೇದಕ್ಕೆ ಕರೆಕೊಡುವ ಪ್ರಸಂಗವೂ ಬರುವುದುಂಟು. ಹೀಗೆ ಊಟದ ಆಟ

ಮುಗಿಸಿ, ಏಳುವಷ್ಟರಲ್ಲಿ ವಿಶ್ರಾಂತಿಯ ಹಾಸಿಗೆ ಸಿದ್ಧವಾಗುತ್ತಿತ್ತು. ಮುಸುಕು ಹಾಕಿ ಮಲಕೊಂಡರೆ ಇಳಿಹೊತ್ತಿನವರೆಗೆ ಎಚ್ಚರವಾಗುವುದೇ ಒಂದು ಕಷ್ಟ.

ಹಿರಿಯರಿಂದ ಬಂದ ಈ ಕಷ್ಟದ ಕಥೆಯನ್ನು ಗುರುಗಳು ಬಾಲಕರಿಗೆ ಹೇಳಿ ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳುವ ಹೊಣೆ ನಮ್ಮದಾಗಿದೆಯೆಂದು ಬೋಧಿಸುವರು.

ಈ ಬಗೆಯ ಕ್ಷೌರ ಪರಂಪರೆಯನ್ನು ಕಾಪಾಡಿಕೊಂಡು ಬರುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಕರ್ತವ್ಯವೆಂದು ಗಟ್ಟಿಸಿ ಹೇಳುತ್ತಿದ್ದರು. ಅಲ್ಲದೆ, ಅದನ್ನು ವಿದ್ಯಾರ್ಥಿಗಳು ಆಸ್ಥೆಯಿಂದ ಪಾಲಿಸುವದನ್ನು ಕಣ್ಣಿಟ್ಟು ನೋಡುತ್ತಿದ್ದರು.

೩ನೇ ತರಗತಿ ಮುಗಿಯುವವರೆಗೆ ವಿದ್ಯಾರ್ಥಿಯು ಮೊಳಕಾಲು ಮುಚ್ಚುವ ಅಂಗಿ, ತಲೆಗೆ ಅದೆಂಥದೋ ಬಣ್ಣದ ಪಾವುಡ ಅಥವಾ ರುಮಾಲು. ತಲೆಗೂದಲು ಬೆಳೆಸಿ ಚೇರೆ ಮಾಡಿಸಿಕೊಂಡು ಬಂದ ವಿದ್ಯಾರ್ಥಿಯನ್ನು ಬೊಕ್ಕಸೆತ್ತಿಯಲ್ಲಿ ಅವನ ಮೆರವಣಿಗೆ ತೆಗೆದು ಮೂರುಕೋಣೆಗಳಲ್ಲಿ ಮೆರೆಸುವರು.

ಮೇಲು ವರ್ಗದ ಬಾಲಕರು, ಕೇಳಿದ ಪ್ರಶ್ನೆಗೆ ತಪ್ಪು ಉತ್ತರ ಹೇಳಿದ ತರುಣರು, ತಲೆಬಾಗಿಸಿ ಶಿಕ್ಷಕರಿಗೆ ಕಪೋಲ ನಿಲುಕುವಂತೆ ಸಹಕರಿಸುತ್ತಿದ್ದರು. ಶಿಕ್ಷಕರು ನೆಗೆದು ಹಾರಿ ಅವರ ಕಪೋಲಕ್ಕೆ ಹೊಡೆಯುವ ಪ್ರಸಂಗವೂ ಒಮ್ಮೊಮ್ಮೆ ಬರುತ್ತಿತ್ತು.

ನಾನು ೨ನೇ ತರಗತಿಯನ್ನು ಮುಗಿಸಿ ೩ನೇ ತರಗತಿಗೆ ಬಂದೆನೆಂದು ನಮ್ಮ ತಂದೆಗೆ ಶಿಕ್ಷಕರಿಂದ ತಿಳಿದಾಗ, ಮಗನಿಗೆ ಧೋತರ ಕೊಂಡು ತರುವ ಚಿಂತೆ ಹತ್ತಿತೆಂದು ತಿಳಿಯಿತು.

ಸಂತೆಯಲ್ಲಿ ಉಪ್ಪಿನ ವ್ಯಾಪಾರ ಮುಗಿಸಿ, ತಂದೆ ಖಾಲೀಚೀಲ ಅಳೆಯುವ ಮಾಪುಗಳಲ್ಲದೆ ಇನ್ನೇನೋ ಕೊಂಡು ತಂದನೆಂದು ತಿಳಿಯಿತು. ಕುತೂಹಲದಿಂದ ಅವನ ಬಳಿಗೆ ಹೋಗಿ ನೋಡಿದಾಗ ನನಗಾಗಿ ಒಂದು

ಜೊತೆ ಧೋತರ ತಂದಿದ್ದು ಕಂಡುಬಂತು. ಬಿಚ್ಚಿನೋಡಿದೆ, ಹಸಿರು ಅಂಚಿನ ಧೋತರ! ಬಹುಕಾಲ ತಾಳುವಂಥವು ಆಗಿದ್ದವು.

ಧೋತರ ಬೆಲೆ ಎಷ್ಟು ಎಂದು ಮನೆಯಲ್ಲಿ ಯಾರೋ ಕೇಳಿದರು ನಮ್ಮ ತಂದೆಗೆ. ಹನ್ನೆರಡು ಆಣೆ ಮಾತ್ರ ಎಂದು ತಂದೆ ಹೇಳಿದ್ದು ಕೇಳಿಸಿತು. ಅಂದು ನನ್ನ ಅಟ್ಟಹಾಸವು ಮುಗಿಲಿಗೇರಿತ್ತು. ನಾಳಿನಿಂದೇ ಧೋತರ ಉಟ್ಟುಕೊಂಡೇ ಶಾಲೆಗೆ ಹೋಗುವುದು!

ಆ ಕೆಲಸದಲ್ಲಿ ನಮ್ಮ ತಂದೆ ಬಹು ವಿಧದಲ್ಲಿ ನೆರವಾಗುತ್ತಿದ್ದರು. ಮಾಸಿದಾಗ ಹಳ್ಳಕ್ಕೊಯ್ದು ಒಗೆದುಕೊಂಡು ಬರುವುದು, ಅದನ್ನು ಉಟ್ಟುಕೊಳ್ಳುವ ಕೌಶಲ್ಯವನ್ನು ಕಲಿಸಿಕೊಡುವುದು. ನಿದ್ರೆಯಲ್ಲಿದ್ದಾಗ ನಾನು ಮೈಮರೆತು ಧೋತರ ತೋಯಿಸದಂತೆ ನೋಡಿಕೊಳ್ಳುವುದು ಇತ್ಯಾದಿ.

ರಾತ್ರಿ ಅಭ್ಯಾಸ ಹೇಳುವೆನೆಂದು, ನಮ್ಮನ್ನು ಹುಸೇನಿ ಮಾಸ್ತರರು ಊರ ಚಾವಡಿಯ ಒಂದು ಭಾಗದಲ್ಲಿ ಮಲಗಿಸಲು ಆರಂಭಿಸಿದಾಗ ನಾನು ಉಟ್ಟ ಧೋತರ ಹಸಿಯಾಗದೆ ಉಳಿಯಹತ್ತಿತು. ಇತ್ತೀಚೆಗೆ ಆ ಸಮಸ್ಯೆಯೇ ಇಲ್ಲ. ಇವೆಲ್ಲ ಶಾಲೆಯ ಶಿಸ್ತಿಗೆ ಮಾರಕವೇ ಆಗಿವೆಯಲ್ಲವೇ?

೧೦. ಜನಸೇವೆಯತ್ತ ಒಲವು

೧೯೨೨ನೇ ಇಸವಿಯಲ್ಲಿ ನನ್ನ ಮುಲಕೀ ಪರೀಕ್ಷೆ ಮುಗಿಯಿತು. ಪರೀಕ್ಷಾ ಕೇಂದ್ರವೆಂದರೆ ವಿಜಾಪುರದ ಸರ್ಕಾರಿ ಹೈಸ್ಕೂಲು, ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ ೪-೫ ನೂರು. ಆಗ ತಗಲು-ತಿಪಲು ವ್ಯಾಪಾರಗಳು ಇನ್ನೂ ಬಳಕೆಯಲ್ಲಿ ಬಂದಿರಲಿಲ್ಲ. ತೇರ್ಗಡೆಯಾದವರು ನಿಜವಾಗಿಯೂ ಪರಿಶ್ರಮಿಸಿದವರು. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಉಮೇದವಾರರಲ್ಲಿ ಮೊದಲಿನ ಇಬ್ಬರು ಮೂವರಂತೂ ಎಲ್ಲ ವಿಷಯಗಳನ್ನು ಚೆನ್ನಾಗಿ ಓದಿಕೊಂಡವರು. ಅವರು ಬಾಳಿನಲ್ಲಿ ಏನಾದರೂ ಕೆಲಸ ನಿರ್ವಹಿಸಿದರೆ ಅದು ಗಣನೀಯ ಗಮನೀಯವಾಗುತ್ತಿತ್ತು.

೧೯೨೦ರಿಂದ ೨೪ರವರೆಗಿನ ವಿಜಾಪುರದ ಜಿಲ್ಲೆಯ ೪-೫ ಪರೀಕ್ಷೆಗಳಲ್ಲಿ ಮೇಲು ನಂಬರು ಪಡೆದವರು ಇಂಡಿ ತಾಲೂಕಿನ ಉಮೇದುವಾರರೇ ಎಂದು ತಿಳಿಯುತ್ತದೆ.

ಪರೀಕ್ಷೆ ಮುಗಿಸಿ ಮನೆಗೆ ಬಂದ ಬಳಿಕ ಪರೀಕ್ಷೆಯ ತೀರ್ಮಾನ ತಿಳಕೊಳ್ಳುವ ತವಕ. ಅದು ತಿಳಿದ ಬಳಿಕ ಪರಿಚಿತರೆಲ್ಲರೂ ಹೊಗಳಿದ ಸವಿನುಡಿಗಳನ್ನು ಕೇಳುವುದು, ದಿನಕಳೆದಂತೆ ಆ ಹಿಗ್ಗಿನ ಉಬ್ಬರವು ಕಡಿಮೆಯಾಗಿ ಮುಂದೇನು ಎಂಬ ಸಮಸ್ಯೆಯನ್ನು ಒಡ್ಡತೊಡಗಿತು.

ನಮ್ಮಣ್ಣನ ಉದ್ಯೋಗ ಸೀರೆ ನೆಯ್ಯುವುದು. ಕೂಲಿಯಿಂದ ನೇದು ನೇದು ಸಾಕಾಗಿ ಮನೆಯಲ್ಲೆ ಮಗ್ಗ ಹಾಕಿದನು. ಕೈಮಗ್ಗ, ಸಟೇಲ ಮಗ್ಗವಲ್ಲ

ಆದರೂ ದಿನಾಲು ಒಂದು ಸೀರೆಯನ್ನು ನೇದು ಮುಗಿಸುತ್ತಿದ್ದನು. ಕೂಲಿಕೊಟ್ಟು ಜೇಡಿಕೆ ಮಾಡಿಸಿ ತಂದು ನೆಯ್ಯುವುದು ಅದಕ್ಕೆ ಬೇಕಾಗುವ ಪೂರ್ವಭಾವಿಯಾದ ಕೆಲಸವನ್ನು ನಾನು ಮಾಡುತ್ತಿದ್ದೆ.

ಹಟ್ಟಿಯ ಮೇಲೆ ನೂಲು ತೋಡುವುದು, ಅದರಿಂದ ಕಂಡಿಕೆ ಸುತ್ತುವುದು ಅದಕ್ಕೂ ಮೊದಲು ಮಾಡುವ ವಾಡಿಕೆಯ ಕೆಲಸಗಳೆಂದರೆ ಕಸ-ಮುಸುರೆ, ಸಿಹಿನೀರು ಬಳಕೆಯ ನೀರು, ಇತ್ಯಾದಿ ಕೆಲಸಗಳನ್ನು ನನ್ನ ಹೊರತು ಇನ್ನಾರಿದ್ದರು ಮಾಡಲಿಕ್ಕೆ ನಮ್ಮ ಮನೆಯಲ್ಲಿ?

ನಮ್ಮದು ನಾಲ್ಕಾರು ತರುಣರ ಒಂದು ಗುಂಪು. ಅವರೆಲ್ಲರಲ್ಲಿ ನಾನೇ ಹೆಚ್ಚು ಕಲಿತವನು. ಹರ್ಡೇಕರ್ ಮಂಜಪ್ಪನವರ ಸಾಹಿತ್ಯ ಕೃತಿಗಳು ಪ್ರಕಟವಾಗಿ ಬೆಳಕು ಕಂಡಿದ್ದವು. ನಮ್ಮೆಲ್ಲರ ನಿತ್ಯಚರ್ಯೆಯೆಂದರೆ ವ್ಯಾಯಾಮ, ತಣ್ಣೀರು ಸ್ನಾನ, ಹರ್ಡೇಕರರ ಸಾಹಿತ್ಯ ಓದುವುದು, ನಾಟಕವನ್ನಾಗಲಿ, ಸರ್ಕಸ್‌ನ್ನಾಗಲಿ ಕಲಿಯುವುದು ಇತ್ಯಾದಿ.

ನಾನು ಹಟ್ಟಿಯ ಮೇಲೆ ನೂಲು ತೋಡುತ್ತಲೆ ಮುಂದೆ ತೆರೆದಿಟ್ಟು ಕೊಂಡು ಪುಸ್ತಕವನ್ನು ಓದುವ ರೂಢಿ ಮಾಡಿಕೊಂಡಿದ್ದೆನು. ವಿದ್ಯಾರ್ಥಿ ಯಾಗಿದ್ದಾಗ ಪಠ್ಯ ಪುಸ್ತಕಗಳನ್ನು ಇದೇ ರೀತಿ ಪಠಿಸುತ್ತಿದ್ದೆನು. ಪರೀಕ್ಷೆ ಮುಗಿದ ಬಳಿಕ ಬ್ರಹ್ಮಚರ್ಯ ಹೇಚ್ ಜೀವನ ಎಂಬ ಮರಾಠಿ ಪುಸ್ತಕದಲ್ಲಿ ಹಲವು ವಿಧದ ಪ್ರಕರಣಗಳು ತುಂಬ ರೋಚಕವಾಗಿದ್ದವು. ವ್ಯಾಯಾಮ, ಜಳಕ, ಊಟ, ನಿದ್ರೆ ಮೊದಲಾದ ವಿಷಯಗಳು ತರುಣರಿಗೆ ತುಂಬ ಉಪಯುಕ್ತ ಹಾಗೂ ಆಕರ್ಷಕವಾಗಿದ್ದವು.

ಅವುಗಳನ್ನು ಓದಿಕೊಳ್ಳುತ್ತ ಬಂದ ಹಾಗೆ, ಆಚರಣೆಯಲ್ಲಿ ಬದಲಾವಣೆ ಆಗತೊಡಗಿತು. ಅಲ್ಲದೆ ಮರಾಠಿ ಭಾಷೆ ಸಹಜವಾಗಿ ಅವಗತವಾಯಿತು. ಕೊನೆಯಲ್ಲಿ ಆ ಇಡಿಯ ಪುಸ್ತಕವನ್ನೇ ಕನ್ನಡಿಸಿದ್ದು ನೆನಪಿದೆ. ಅದರ ಹಸ್ತಪ್ರತಿಯನ್ನು ಮೂಲ ಲೇಖಕರ ಕಡೆಗೆ ಕಳಿಸಿದ್ದಾಯಿತು. ಆದರೆ ಅಷ್ಟರಲ್ಲಿ ಅವರು ಬೇರೊಬ್ಬ ತಜ್ಞರಿಂದ ಕನ್ನಡಿಸಿದ್ದೇವೆಂದು ತಿಳಿಸಿದರು.

ಶ್ರೀ ಸಂಗಮೇಶ್ವರ ನಾಟಕ ಮಂಡಲಿಯವರು, ಕಲಿತು ಆಡುವ ನಾಟಕಗಳನ್ನು ನೋಡಿ ನೋಡಿ, ಅಗತ್ಯವೆನಿಸಿದಾಗ ಅದರಲ್ಲಿ ಭಾಗವಹಿಸಿ ನಿರ್ವಹಿಸುತ್ತಾ ಬಂದಿದ್ದರಿಂದ ನಾಟಕಗಳನ್ನು ಕಲಿಯುವ ಹಾಗೂ ಬರೆಯುವ ತವಕವುಂಟಾಯಿತು.

ಮೈಸೂರು ಕಡೆಯಿಂದ ಬಂದ ಶ್ರೀ ಮಾಧವದಾಸ ಎಂಬ ಸನ್ಯಾಸಿಗಳ ಪರಿಚಯ ನನಗುಂಟಾಯಿತು. ಅವರು ನಮ್ಮ ಮೇಳದ ಮುಖಂಡರಾದ ವೆಂಕಣ್ಣ ಕುಲಕರ್ಣಿಯವರ ಮನೆಯಲ್ಲಿ ಇರುತ್ತಿದ್ದರು.

ನಾನು ಅಷ್ಟರಲ್ಲಿ, ಮೇಳದವರು ಕಲಿತಾಡುವ ನಾಟಕಗಳಲ್ಲಿ ಬಾಲಪಾತ್ರವನ್ನೋ, ಕಿರುಪಾತ್ರವನ್ನೋ ನಿರ್ವಹಿಸುತ್ತಿದ್ದೆ. ಇಷ್ಟೇ ಅಲ್ಲ, ಯಾವ ಪಾತ್ರವನ್ನೂ ನಿರ್ವಹಿಸುವುದಕ್ಕೆ ಬೇಕಾಗುವ ವಿಷಯವು ಕಂಠಗತವಾಗಿತ್ತು. ಆದ್ದರಿಂದ ನಾನು ಮೇಳದವರಿಗೆ ಬೇಕಾದ ಬಾಲಕನೆನಿಸಿದ್ದೆ.

೧೯೧೦ರಲ್ಲಿ ಈ ಭಾಗಕ್ಕೆ ನಾಟಕಗಳನ್ನು ತಂದು, ಬಯಲಾಟಗಳನ್ನು ಬದಿಗೆ ಸರಿಸಿದವರೆಂದರೆ ಗೋಡಿಹಾಳ ಗ್ರಾಮದ ಭೀಮನ ಗೌಡರು. ಅವರ ಪ್ರೋತ್ಸಾಹದಿಂದ ನಮ್ಮೂರ ಮೇಳದವರು, ಭುವನ ಸುಂದರಿ ಎಂಬ ಐದಂಕಿನ ನಾಟಕ ಕಲಿಯುವುದಕ್ಕೆ ಆರಂಭಿಸಿದರು. ಅವರ ಸಲಹೆಯಂತೆ ಪಾತ್ರಗಳ ಹಂಚಿಕೆಯನ್ನು ಮುಗಿಸಿದರು. ಆ ಕಾಲಕ್ಕೆ ಗೌಡರು ನನಗೂ ಒಂದು ಪಾತ್ರ ಕೊಡಬೇಕೆಂದು ಸೂಚಿಸಿದರು. ಭುವನಸುಂದರಿಯ ತಮ್ಮ ಮಧುಕರನ ಪಾತ್ರ ನನ್ನ ಪಾಲಿಗೆ ಬಂತು.

ಆ ರಾಜಕುಮಾರನ ಮಾತುಗಳಲ್ಲದೆ ಪದಗಳನ್ನು ಸಹ ನಾಲ್ಕೇನಾಲ್ಕು ದಿನಗಳಲ್ಲಿ ಕಂಠಪಾಠ ಮಾಡಿದೆನು. ಆಗ ನನ್ನ ವಯಸ್ಸು ೧೦ ವರ್ಷ. ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದೆ. ಕಲಿತ ಮಾತುಗಳನ್ನು ಗೌಡರ ಮುಂದೆ ಅಸ್ಖಲಿತವಾಗಿ ಆಡಿ ತೋರಿಸಿದೆ. ಆದರೆ ನಾಟ್ಯಾಭ್ಯಾಸದ ಕೋಣೆಯಲ್ಲಿ ಹತ್ತಿಪ್ಪತ್ತು ಜನರ ಎದುರಿನಲ್ಲಿ ನನ್ನನ್ನು ಕರೆದೊಯ್ದು ನಿಲ್ಲಿಸಿದಾಗ ಮೂಕನಾಗಿ ಬಿಟ್ಟೆ. ಬಾಯಿಂದ ಮಾತೇ ಹೊರಬೀಳಲಿಲ್ಲ. ಅದೆಷ್ಟು ಧೈರ್ಯ

ನೀಡಿ ಮಾತನಾಡಲು ಪ್ರೋತ್ಸಾಹಿಸಿದರು. ನನ್ನ ಮುಖ ಹೇಡಿತನವು ಎಷ್ಟೂ ಕಡಿಮೆ ಆಗಲಿಲ್ಲ. ಆದ್ದರಿಂದ ಆ ಪಾತ್ರವನ್ನು ಬೇರೊಬ್ಬ ಬಾಲಕನಿಗೆ ವಹಿಸಿಕೊಟ್ಟರು.

ಅಷ್ಟೊಂದು ಮುಖಹೇಡಿಯಾದ ನಾನು ನನ್ನ ಓರಿಗೆಯವರ ಗುಂಪಿನಲ್ಲಿ ಭುವನಸುಂದರಿ ನಾಟಕವನ್ನು ಇಡಿಯಾಗಿ ಕಂಠಪಾಠ ಒಪ್ಪಿಸುತ್ತಿದ್ದೆ. ಬರಿಯ ಗದ್ಯವನ್ನಷ್ಟೇ ಅಲ್ಲ, ಪದ್ಯಗಳನ್ನು ಸಹ ಮೂಲಧಾಟಿಯಲ್ಲಿ ಹಾಡಿ ತೋರಿಸುತ್ತಿದ್ದೆ. ಪಾತ್ರ ವಹಿಸಿದವರಿಗೆ ಅಲ್ಲಲ್ಲಿ ಮಾತುಗಳು ನೆನಪಿಗೆ ಬಾರದಾದಾಗ ನಾನು ಕುಳಿತಲ್ಲಿಂದಲೇ ಅವರಿಗೆ ಅವರಾಡಬೇಕಾದ ಮಾತನ್ನು ಕೂಗಿ ಹೇಳುತ್ತಿದ್ದೆ. ಆದರೆ ಮುಖಹೇಡಿತನವು ಮಾತ್ರ ಬಹಳ ದಿವಸ ಉಳಿದುಕೊಂಡಿತು. ಬರಬರುತ್ತ ಅದು ಕಡಿಮೆ ಆಯಿತು ಅಥವಾ ಹೋಗಿಯೇ ಬಿಟ್ಟಿತು.

ಆ ಸಾಧು ಮಹಾರಾಜರ ಬಳಿಗೆ ಹೋಗಿ ತೊದಲುತ್ತ ತೊದಲುತ್ತ ಒಂದು ಮಾತು ಕೇಳಿದೆನು, ಏನಂದರೆ

'ನಾವೆಲ್ಲ ಬಾಲಕರು ಕೂಡಿ ಒಂದು ಚಿಕ್ಕನಾಟಕ ಕಲಿಯಬೇಕೆಂದು ಆಶಿಸಿದ್ದೇವೆ. ಅದಕ್ಕೆ ತಮ್ಮ ಸಹಾಯ, ಆಶೀರ್ವಾದ ನೀಡಿರಿ'.

ಆ ವಿನಂತಿಯನ್ನು ಗ್ರಹಿಸಿ ಅವರು ಒಂದು ಕಥೆ ಹೇಳುವುದಕ್ಕೆ ಮಾತ್ರ ಒಪ್ಪಿಕೊಂಡರು. ನಾನದನ್ನು ನಾಟಕ ರೂಪದಲ್ಲಿ ಬರೆದು ತೆಗೆಯುವ ಕೆಲಸ ಮಾಡಬೇಕೆಂದು ತೀರ್ಮಾನ ನೀಡಿದರು. ಆ ನಾಟಕದ ಹೆಸರು ಲಾಫಿಂಗ್ ಖಾನ. ಅದನ್ನು ನಾಟಕ ರೂಪದಲ್ಲಿ ಬರೆದು, ಮುಗಿಸಿದ ಬಳಿಕ, ಪಾತ್ರಗಳ ಹಂಚಿಕೆ ಮಾಡಿ ಮಾತುಗಳನ್ನು ಬರಕೊಟ್ಟಿದ್ದಾಯಿತು, ಅಭ್ಯಾಸವನ್ನೂ ಆರಂಭಿಸಿದೆವು.

ಊರ ಚಾವಡಿಯ ಮುಂದೆ ಒಂದು ಬಯಲಾಟದ ಆಟ್ಟ ಹೂಡಿ ಆ ಪ್ರಹಸನ ತೋರಿಸಲಾಯಿತು. ಅದನ್ನು ನೋಡಬಂದವರು ಬಿದ್ದು ಬಿದ್ದು ನಕ್ಕರು, ನಕ್ಕು ನಕ್ಕು ಬಿದ್ದೂಬಿಟ್ಟರು. ಎರಡೂ ಗದ್ದಗಳನ್ನು ಹಿಡಕೊಂಡು

ನಕ್ಕರು, ಕೆಲವರಂತೂ ಎದ್ದು ನಿಂತು "ಬೊಡ್ಡಿಯಿಂದ ಒನ್ಸ್ ಮೋರ್" ಎಂದು ಕೂಗಾಡಿದರು.

ಅದನ್ನು ಕೇಳಿ ನಮಗೂ ಎಲ್ಲಿಲ್ಲದ ಹುರುಪು ಬಂತು. ತಥಾಸ್ತು ಎಂದು ಆ ಚಿಕ್ಕ ನಾಟಕವನ್ನು ಮತ್ತೊಂದು ಸಾರೆ ಆಗಲೇ ಆಡಿ ತೋರಿಸಿದೆವು.

ಮನೆಯ ಕರ್ತವ್ಯಗಳನ್ನು ಮಾಡಿ ಮುಗಿಸಿದ ಬಳಿಕ ಉಳಿದ ವೇಳೆಯನ್ನು ಈ ವಿಧದಲ್ಲಿ ವಿನಿಯೋಗಿಸುತ್ತಿರುವುದನ್ನು ಕಂಡು ಮನೆಯವರು ಮತ್ತು ಹಿತಚಿಂತಕರು ನಮ್ಮನ್ನು ತೆಗಳತೊಡಗಿವರು.

ಗೊಡ್ಡು ನಗೆಚಾಟಿಕೆಯ ವಿಷಯವೇ ಮುಖ್ಯವಾಗಿದ್ದ ಲಾಫಿಂಗ್ ಖಾನ್ ಪ್ರಹಸನದಿಂದ ಪ್ರಚೋದನೆಗೊಂಡ ನಾವು 'ಮರೆಮುಚ್ಚುಕ' ಎಂಬ ಗಂಭೀರ ವಿಷಯದ ನಾಟಕವನ್ನಾಡಿ ಸೈಸೈ ಅನಿಸಿಕೊಳ್ಳಬೇಕೆನ್ನುವ ಹೇವಕ್ಕೆ ಬಿದ್ದೆವು. ಅಸ್ಪೃಶ್ಯತಾ ನಿವಾರಣೆಯ ಕಥೆಯನ್ನು ನಿತ್ಯಜೀವನದಲ್ಲಿ ನಡೆದು ಹೋದಂತೆ ಅಭಿನಯಿಸಿ, ೧೯೨೩ನೇ ಇಸವಿ ಯುಗಾದಿಯ ದಿವಸ ಅಪಶಬ್ದಗಳ ಸುರಿಮಳೆಯಲ್ಲಿ ಮಿಂದೆದ್ದೆವು. ಅದರಿಂದಾದ ಪರಿಣಾಮದಿಂದಲೇ ಊರೂ ಸಾಕಾಯಿತು, ಗೌಡನೂ ಬೇಡವೆಂದನು ಎಂಬಂತಾಯಿತು.

ಮನೆಯ ಕೂಳು ತಿಂದೂ ದಕ್ಕಿಸಿಕೊಳ್ಳಲಿಕ್ಕಾಗಲಿಲ್ಲ. ಇನ್ನು ಏನಾದರೂ ಉದ್ಯೋಗ ಕೈಕೊಂಡು ದುಡಿದು ತಿನ್ನಬೇಕೆಂದು ಚಡಪಡಿಸ ತೊಡಗಿದೆನು.

ಅಣ್ಣನು ಊಟಕ್ಕೆದ್ದಾಗ ಅವನ ಮಗ್ಗದಲ್ಲಿ ಕುಳಿತು, ಲಾಳಿ ಒಗೆಯುವ ರೂಢಿ ಮಾಡಿಕೊಳ್ಳತೊಡಗಿದೆನು. ಒಂದೆರಡು ವಾರಗಳಲ್ಲಿ ಅದು ಬಹುಮಟ್ಟಿಗೆ ಸಾಧಿಸಿಯೂ ಬಿಟ್ಟಿತು. ಊಟ, ವಿಶ್ರಾಂತಿ ತೀರಿಸಿಕೊಂಡು ಅಣ್ಣನು ಮಗ್ಗಕ್ಕೆ ಬರುವಷ್ಟರಲ್ಲಿ ಗೇಣು-ಚೋಟಿ ನೆಯ್ಗೆ ಸಾಗಹತ್ತಿತು.

ಸನ್ನ ಬಾಳು ತಳಪಾಯವಿಲ್ಲದೆ ತತ್ತರಿಸುತ್ತಿರುವುದನ್ನು ಕಂಡು, ಬಡಚಿ ಸಿದ್ದಪ್ಪ ಎಂಬ ಮಿತ್ರನು ನನಗಾಗಿ ಒಂದು ಕೈಮಗ್ಗವನ್ನೇ ಹಾಕಿಸಿ ಕೊಟ್ಟನು.

ಒಂಟಿ ಲಾಳಿಯಲ್ಲಿ ನೇಯಲು ಸಾಧ್ಯವಾಗುವಂತೆ ಜೋಡಿಕೆ ಮಾಡಿಸಿ, ಮಗ್ಗದ ಮೇಲೆ ಅಣಿಗೊಳಿಸಿ ನನ್ನನ್ನು ಕೆಲಸಕ್ಕೆ ತೊಡಗಿಸಿದನು, ಅದು ಕೆಂಪು ಚಂದ್ರಕಾಳಿಯ ಸೀರೆ, ಗುರುವಾರದಿಂದ ಆರಂಭವಾಗಿ ಬುಧವಾರ ಮಧ್ಯಾಹ್ನದವರೆಗೆ ನೇದಾಗ ಒಂದು ಸೀರೆ ಮುಗಿಯಿತು. ಅದರಿಂದ ನನಗೆ ಎಂಟಾಣೆ ಕೂಲಿ ಸಿಕ್ಕಿತು. ಆ ಸೀರೆ ಮಾರಿದಾಗ ವಾಡಿಕೆಗಿಂತ ಒಂದು ರೂಪಾಯಿ ಹೆಚ್ಚಿಗೆ ಸಿಕ್ಕಿತು.

ಈ ಬಗೆಯಾಗಿ ವಾರಕ್ಕೆ ೮ ಆಣೆಯಂತೆ ಗಳಿಸುತ್ತ ಒಂದು ತಿಂಗಳು ಕಳೆಯುವ ಹೊತ್ತಿಗೆ ನೇಯ್ಗೆಯ ವೇಗ ಇಮ್ಮಡಿಸಿತು. ಅದರಿಂದ ವಾರಕ್ಕೆ ೧ ರೂ. ಕೂಲಿ ಬರತೊಡಗಿತು. ನನ್ನ ಮುಂದೆ ಇನ್ನಾರು ಎಂದು ಹಿಗ್ಗಿದೆನು. ಮನೆ ಖರ್ಚಿಗಾಗಿ ಆ ಹಣವನ್ನು ಅತ್ತಿಗೆಯ ಕೈಯಲ್ಲಿ ಕೊಟ್ಟೆನು.

ಸಂತೆಯ ದಿವಸ ಕಾಳಿನ ವ್ಯಾಪಾರದಲ್ಲಿ ಸಹಾಯಕನಾಗಿಯೂ ಕೆಲಸ ಮಾಡುತ್ತಿದ್ದೆ. ಆದ್ದರಿಂದ ನನ್ನ ಊಟ ರಿಣಗೊಳಿಸದೆನಿಸದೆಂದು ಬಗೆದೆನು. ವಾರದಲ್ಲಿ ೬ ದಿವಸ ನೇಯುವುದು, ಒಂದು ದಿನ ಸಂತೆಯ ಚಾಕರಿ. ಇದೆಲ್ಲ ಸೇರಿದರೂ ಅದು ಊ,ಮ,ಹೇ,ಗಳ ಕಾರ್ಯಕ್ರಮ ಮಾತ್ರ ಅನಿಸಿತು. ಅಷ್ಟಕ್ಕೇ ಬಾಳು ಅನ್ನುವಂತಿಲ್ಲ ಅನ್ನಬಾರದೆಂದೇ ನನ್ನ ಹಟ, ಹಾಗಾದರೆ ಮತ್ತೇನು ಮಾಡುವುದು?

ಯಂಕಂಚಿ ರಾಮಣ್ಣ ತಾಯಿಗೊಬ್ಬನೇ ಮಗ. ೬ನೇ ತರಗತಿಯವರೆಗೆ ಓದಿ ಕಪ್ಪಡ ಅಂಗಡಿಯೊಂದರಲ್ಲಿ ಉಮೇದುವಾರನಾಗಿ ದುಡಿತ ನಡೆಸಿದ್ದನು. ಅಂದರೆ ದೀಪಾವಳಿಯವರೆಗೆ ಸಂಬಳವಿರಲಿಲ್ಲ. ಆ ಮೇಲೆ ಬಡಚಿಸಿದ್ದ ಸ್ವತಂತ್ರ ನೇಕಾರ, ಹೇಳಿಕೊಳ್ಳುವಂಥ ಬದುಕು ಹುಟ್ಟಿಸುವನು, ಅಡಚಣೆಗಂಜಿ ಕೈಗೆ ಬಂದಂತೆ ಸೀರೆ ಕೊಡುವವನಲ್ಲ. ನೂರಾರು ಸೀರೆಗಳನ್ನು ಧಾರಣೆ ಬರುವವರೆಗೆ ಮನೆಯಲ್ಲಿ ಕಟ್ಟಿಡುವ ಕೆಚ್ಚು ಅವನಲ್ಲಿತ್ತು. ರಜಪೂತರ ವಿಠ್ಠಲ ಮತ್ತು ತಳವಾರ ಶಿವಪ್ಪ ಇವರು ಕೂಲಿಯಿಂದ ನೇದು ಮನೆಯ ಖರ್ಚಿಗೆ ಸಹಾಯ ಮಾಡುತ್ತಿದ್ದರು. ನಾನು ಸಹ ಇದೇ ವರ್ಗಕ್ಕೆ ಸೇರಿದವನೆಂದು ಹೇಳಬೇಕು.

ಮುಂದೆ ವೈಶಾಖ ಮಾಸ ಸಮೀಪಿಸಿತು. ಅದು ಮದುವೆಯ ಮಾಸ. ಸೀರೆಯ ಧಾರಣೆ ಹೆಚ್ಚುವದು. ಆದ್ದರಿಂದ ಕೂಲಿ ನೇಯುವುದು ಸಾಕು ಎಂದು ಸರಿಯರು ಯೋಚಿಸಿ ನನಗೆ ಪ್ರತ್ಯೇಕ ಮಗ್ಗ ಹಾಕಿಕೊಡಲು ಸರಿಯಾದ ಸ್ಥಳವನ್ನು ಗೊತ್ತುಮಾಡಿದ್ದಲ್ಲದೆ ಅದಕ್ಕೆ ಬೇಕಾಗುವ ಸಾಮಾನುಗಳನ್ನು ಅಣಿಗೊಳಿಸಲು ತೊಡಗಿದರು.

ನಾಳೆಗಿಂತ ಇಂದಿನ ದಿನವೇ ಲೇಸೆಂದು ೩-೪ ಜನ ಸ್ನೇಹಿತರು ಮೂರು ಸಂಜೆಯ ಹೊತ್ತಿಗೆ ಮನೆಗೆ ಬಂದರು. ದಾರ ಹಿಡಿದು ಅಳತೆ ಮಾಡಿ, ಯಾವ ಯಾವ ಗೂಟುಗಳನ್ನು ಎಲ್ಲೆಲ್ಲಿ ನೆಡಿಸಬೇಕು, ಮಗ್ಗದ ಕುಣಿ ಎಲ್ಲಿ ಅಗೆಯಬೇಕು ಎಲ್ಲ ಗುರುತಿಸಿಕೊಂಡು ತಾಸೆರಡು ತಾಸುಗಳಲ್ಲಿ ಕೆಲಸ ಮುಗಿಸಿಯೇ ಮನೆಗೆ ಹೊರಡುವುದೆಂದು ಹೂಡಿಕೆ ಕೊಟ್ಟರು.

"ಯಾರ ಮನೆಗೆ ಹೋಗುವುದು ಊಟಕ್ಕೆ!" ಎಂದವನು ಯಂಕಂಚಿ ರಾಮಣ್ಣ.

"ಮತ್ತಾರ ಮನೆಗೆ - ನಮ್ಮ ನಮ್ಮ ಮನೆಗೆ" ಎಂದವನು ಸದ್ದಲಗಿ ಸಿದ್ಧರಾಮ.

"ಇದು ನಮ್ಮ ಮನೆ ಅಲ್ಲವೇನು?" ಎಂದವನು ಉಮದಿ ವೀರಭದ್ರ.

"ನೀವು ಇದ್ದದ್ದು ಉಣ್ಣುವಿರೋ ವಿಶೇಷ ಏನಾದರೂ ಮಾಡಬೇಕೋ?" ಎಂದವನು ರಜಪೂತ ವಿಠ್ಠಲ.

"ಇಂದಿನೂಟ ಅಲ್ಪೋಪಹಾರ ಮಾತ್ರ ನಾಳೆ ಸುಗ್ರಾಸ ಭೋಜನ" ಎಂದು ಯಂಕಂಚಿ ರಾಮಣ್ಣಾ ನುಡಿಯುತ್ತಲೇ ಅಕ್ಕ ಗುರಮ್ಮ ಬಂದಳು - "ಏನಂದಿರಿ" ಎಂದು ಕೇಳಿದಳು.

"ಇಂದು ಸಂಜೆಯ ಅಂದರೆ ರಾತ್ರಿಯ ಊಟ ನಿಮ್ಮಲ್ಲಿಯೇ ಆಗಬೇಕಾಗಿದೆ. ಅದಕ್ಕೆ ಏನು ಹೇಳುವಿರಿ ಅಕ್ಕಾ" ಎಂದು ವೀರಭದ್ರ ಕೇಳಿದನು.

ನೀವು ಮಗ್ಗದ ಕೆಲಸ ಮುಗಿಸುವಷ್ಟರಲ್ಲಿ ಸೇಂಗಾದ ಕಾರುಬೇಳೆ, ಬಿಸಿರೊಟ್ಟಿ, ಮೇಲೆ ಜವಾರಿ ಅಕ್ಕಿಯ ಅನ್ನ, ಹಸಿಹಾಲು, ಬೆಲ್ಲ ಸಾಕಲ್ಲವೇ ಎಂದಳು ಎಲ್ಲರ ಅಕ್ಕ ಗುರಮ್ಮ.

"ಆದರೆ ಮೊದಲ ಸೀರೆ ಈ ಮಗ್ಗದಿಂದ ಹೊರಬೀಳುತ್ತಲೆ ಖೀರು-ಚಪಾತಿ ಉಣಿಸಬೇಕಾಗುತ್ತದೆ. ಅದೇ ಚೌಡೇಶ್ವರಿಯ ನೈವೇದ್ಯ"

"ಚೌಡೇಶ್ವರಿಗೆ ಎಣ್ಣೆ ಹೋಳಿಗೆಯ ಬಡಿವಾಣ ಮಾಡೋಣ. ನಿಮಗೇಕೆ ಅದರ ಚಿಂತೆ? ನಿಮ್ಮೆಲ್ಲರ ಊಟ ಅಂದು ನಮ್ಮಲ್ಲೇ" ಎಂದು ಅಕ್ಕ ಹುರಿದುಂಬಿಸಿದಳು.

ಮಗ್ಗದ ಕೆಲಸ ಮುಗಿಯಿತು, ಊಟದ ಕರೆಬಂತು.

ಮಗ್ಗದ ಕುಣಿ ಮೆತ್ತಿ ರಾಡಿಯಿಂದ ಸಾರಿಸಬೇಕಾಗಿದೆ. ನೇಗಿಯ ಹರಿಯನ್ನು ಚೊಕ್ಕಟವಾಗಿ ಹಸನಿಸಬೇಕಾಗಿದೆ. ಅವೆರಡೂ ಕೆಲಸಗಳು ಮುಗಿದ ಬಳಿಕ ಕೈ ತುತ್ತು ಬಾಯಿ ತುತ್ತು ಉಂಡು ಇಲ್ಲೇ ಮಲಗಿ ಕೊಳ್ಳುವೆವು. ಅಂದರೆ ನಿನ್ನ ಮನಸ್ಸಿಗೆ ಸಮಾಧಾನ ಆಗುವದಲ್ಲವೇ ಅಕ್ಕಾ?

"ಇದು ಸೇಂಗಾದ ಕಾರುಬೇಳೆ ಅಲ್ಲ, ಹಾಲಿನ ಖೀರು"

"ಇವು ರೊಟ್ಟಿಗಳಲ್ಲ, ಜವೆಗೋದಿಯ ಚಪಾತಿಗಳು"

"ಇದು ಗಾಣದ ಎಣ್ಣೆಯಲ್ಲ ಬೆಣ್ಣೆ ಕಾಸಿದ ತುಪ್ಪ"

ಹೀಗೆ ಏನೇನೋ ನಗೆ ಚಾಟಿಕೆಯ ಮಾತುಗಳನ್ನಾಡಿದರೂ ಅಂದಿನ ಅಡಿಗೆ ಹಸಿದ ಹೊಟ್ಟೆಗೆ ಅಮೃತಾನ್ನವೇ ಆಗಿತ್ತು.

ಹಸಿವೆಯೆನ್ನುವುದೇ ಹೆಚ್ಚಿನ ರುಚಿ. ಅದಕ್ಕೆ ಅಕ್ಕರೆಯಿಂದ ಉಣ ಬಡಿಸುವ ಸಾಮಾನ್ಯ ಊಟವು ಸಹ ಹಬ್ಬದೂಟ ಆಗುವದಿಲ್ಲವೇ?

ಊಟ ಮುಗಿದ ಬಳಿಕ ಸಹ ಮಗ್ಗದ ನಕ್ಷೆ, ಅಳತೆ ಮೊದಲಾದ ವುಗಳನ್ನು ಮತ್ತೊಮ್ಮೆ ಅಳವಡಿಸಿ ನೋಡಿದರು. ಮೇಲೆ ಅಂಚುಗಳನ್ನು

ಕುಸುರುಗೊಳಿಸುವ ಪಿಂಜಣವಿಟ್ಟು, ಸಮತೋಲ ಕಾಯ್ದುಕೊಳ್ಳುವಂತೆ ಅಣಿಗೊಳಿಸಿದರು. ಹೀಗೆ ಅಂದಿನ ಕೆಲಸ ಬೆಳಗಾಗುವಷ್ಟರಲ್ಲಿ ಶುಭಸ್ಯ ಶೀಘ್ರವಾಗಿ ಪರಿಣಮಿಸಿತು.

"ಎಮ್ಮವರು ಕೇಳಿದರೆ ಶುಭಲಗ್ನವೆನ್ನಿರಯ್ಯ" ಎಂದ ಬಸವ ವಾಕ್ಯವನ್ನು ಮಗ್ಗದ ಹಿಂಬದಿಯ ಗೋಡೆಯ ಮೇಲೆ ಬರೆಯಲಾಯಿತು. ಅಂದಿನ ರಾತ್ರಿ ವಾಡಿಕೆಯ ರಾತ್ರಿಗಿಂತ ಮಿಗಿಲಾಯಿತು, ಮುಂಜಾನೆ ನೋಡಿದವರಿಗೆ ದಂಗು ಬಡೆಯಿತು.

೧೧. ವಾಗ್ವಿಲಾಸ ಭವನ

ಮುಂಜಾವಿನ ೮ ಗಂಟೆಯಿಂದ ಮಗ್ಗದಲ್ಲಿ ಕುಳಿತು ನೇಯುವ ಕೆಲಸ ಮಾಡುತ್ತಿದ್ದೆ. ಮಧ್ಯಾಹ್ನ ಊಟ ಮುಗಿಸಿ ಮತ್ತೆ ನೆಯಿಗೆಯ ಕೆಲಸವನ್ನು ಮುಂದುವರಿಸಿ,. ಸಂಜೆಯ ೫ ಗಂಟೆಯ ಹೊತ್ತಿಗೆ ಒಂದು ಸೀರೆಯನ್ನು ಸಿದ್ಧಗೊಳಿಸುತ್ತಿದ್ದೆ. ಆ ಬಳಿಕ ತಾಸರ್ಧತಾಸು ಕಂಡಿಕೆ ಸುತ್ತಿ ಇಡುತ್ತಿದ್ದೆ ನಾಳಿನ ಕೆಲಸದ ಸಲುವಾಗಿ. ಆ ಬಳಿಕ ಒಂದರ್ಧ ರೊಟ್ಟಿ ತಿಂದು ಹೊರ ಬಿದ್ದರೆ ವಾಚನಾಲಯ ಸೇರುವುದು.

ಆ ಕಾಲಕ್ಕೆ ಧಾರವಾಡದ ಗೆಳೆಯರು ಆರಂಭಿಸಿದ ರೀತಿಯಲ್ಲಿ ಹಲಸಂಗಿ, ಚಡಚಣ ಹತ್ತರಕಿ ಗ್ರಾಮಗಳಲ್ಲಿ ವಾಚನಾಲಯ ಮಾಡಿ ಕೊಂಡೆವೆಂದು ಹೇಳಬಹುದು.

ಶಾರದಾ ವಾಚನಾಲಯ ಹಲಸಂಗಿ, ವಾಗ್ವಿಲಾಸಭವನ ಚಡಚಣ, ಕುಲಕಂಠೇಶ್ವರ ವಾಚನಾಲಯ ಹತ್ತರಕಿ. ಧಾರವಾಡದವರು ತಮ್ಮ ವಾಚನಾಲಯದಲ್ಲಿ 'ಕಾವ್ಯಸೇವೆ' ಎಂಬ ಕೈಬರಹದ ವಾರಪತ್ರಿಕೆ ಆರಂಭಿಸಿದ್ದನ್ನು ಕಂಡು ಹಲಸಂಗಿಯ ಗೆಳೆಯರು ಮೊಗ್ಗು ಎಂಬ ಕವಿತಾ ವಾರಪತ್ರಿಕೆಯನ್ನು ಚಡಚಣದ ಗೆಳೆಯರು, ಮುದ್ದು ಎಂಬ ಗದ್ಯಪದ್ಯ ವಾರಪತ್ರಿಕೆಯನ್ನು ನಿಯತ ಕಾಲಿಕವಾಗಿ ಬರೆದಿಡತೊಡಗಿದೆವು.

ಚಡಚಣ ಗ್ರಾಮದ ಚಾವಡಿ ಮುಂದಿನ ಒಂದು ಕೋಣೆಯನ್ನು ಬಾಡಿಗೆಯಿಂದ ಹಿಡಿದಿದ್ದಾಯಿತು. ತಿಂಗಳಿಗೆ ಒಂದು ರೂಪಾಯಿ ಅದಕ್ಕೆ

ಬಾಡಿಗೆ. ಬುರಡರಲ್ಲಿ ಬಿದಿರು ಖರೀದಿಸಿ ಚಿಕ್ಕ ಮಂಡನ್ ಮಾಡಿ, ಪುಸ್ತಕಗಳನ್ನು ವ್ಯವಸ್ಥಿತವಾಗಿ ಇರಿಸುವ ಯೋಜನೆ ಮಾಡಲಾಯಿತು ಮತ್ತು ಎರಡು ಬೇವಿನ ಫಳಿಗಳಿಗೆ ನಾಲ್ಕು ನಾಲ್ಕು ಕಟ್ಟಿಗೆಯ ಕಾಲುಗಳನ್ನು ಹಚ್ಚಿ ಎರಡು ಬಾಕು ಮಾಡಿಕೊಂಡೆವು. ಒಂದು ಎಲ್ಲಿಯದೋ ಹಳೆಯ ಕಂದೀಲು ದೊರಕಿಸಿ, ದುರಸ್ತಿ ಮಾಡಿ ದೀಪ ಹಚ್ಚುವ ಏರ್ಪಾಡು ಮಾಡಿದೆವು.

ಗೆಳೆಯರ ಮನೆಯಲ್ಲಿ ಇದ್ದಬಿದ್ದ ಅಂಥಇಂಥ ಪುಸ್ತಕಗಳನ್ನು ಸಂಗ್ರಹಿಸಿ ತಂದೆವು. ಕೆಲವು ಜನ ಹಿರಿಯರಿಗೆ ಬೇಡಿ ಅವರಲ್ಲಿರುವ ಪುಸ್ತಕಗಳನ್ನು ದಾನವಾಗಿ ಇಸಗೊಂಡು ಬಂದೆವು.

ಅವುಗಳನ್ನೆಲ್ಲ ದುರಸ್ತಿ ಮಾಡಿ, ಬೈಂಡು ಕಟ್ಟಿ ವಾಗ್ವಿಲಾಸ ಭವನ ಚಡಚಣ ಎಂಬ ಮುದ್ರೆಯನ್ನು ಒತ್ತಿದೆವು.

ಮೂರು ಸಂಜೆಯ ಹೊತ್ತಿಗೆ, ಹನುಮಂತ ದೇವರ ದರ್ಶನಕ್ಕೆ ಹೋಗಿ ಬರುವರೆಲ್ಲರೂ ಹಣಕಿ ಹಾಕಿ, 'ವಾಗ್ವಿಲಾಸ ಭವನ' ಎಂದು ಓದಿಕೊಂಡು ಹೋಗುತ್ತಿದ್ದರು. ಹಲವರು ಕಟ್ಟೆಯೇರಿ ನಿಂತು ಹಣಿಕೆ ಹಾಕುತ್ತಿದ್ದರು. ಕುಳಿತುಕೊಳ್ಳಬೇಕೆನ್ನುವವರಿಗೆ ಪಳ್ಳಿಯ ಬಾಕುಗಳಂತೂ ಇದ್ದವು.

೧೯೨೨ನೇ ಇಸವಿಯಲ್ಲಿ ಪ್ರಚಲಿತವಿದ್ದ ನಮ್ಮ ಭಾಗದ ಪತ್ರಿಕೆಗಳನ್ನು ಅಲ್ಲಲ್ಲಿಯಿಂದ ತಂದು ಇರಿಸುತ್ತಿದ್ದೆವು. ಹಾಗೆ ಮಾಡುವುದರಿಂದ ಕೆಲವರು ಪತ್ರಿಕೆಗಳನ್ನು ತೆರೆದು ದಪ್ಪ ಅಕ್ಷರಗಳನ್ನು ಓದಿಕೊಂಡು ಸುದ್ದಿ ತಿಳಕೊಳ್ಳ ತೊಡಗಿದರು.

ಇದಕ್ಕೂ ಮುಂದೆ ಹೋಗಿ ೪-೮ ಜನ ಹಿರಿಯ ತರುಣರು ಒಂದೆರಡು ಮಾಸಪತ್ರಿಕೆ ತರಿಸಿಕೊಟ್ಟರು. ಆ ಕಾರಣದಿಂದ ರಾತ್ರಿ ೮ ಗಂಟೆಯವರೆಗೆ ವಾಚನಾಲಯಕ್ಕೆ ಬಂದು ಹೋಗುವವರ ಸಂಖ್ಯೆ ತುಸು ಬೆಳೆಯಿತು.

ಒಂದು ಚಿಕ್ಕ ಪೆಟ್ಟಿಗೆಗೆ ನಾಣ್ಯ ಒಗೆಯುವ ರಂಧ್ರ ಕೊರೆದು ಮೇಲೆ ಒಂದೇ ದುಡ್ಡು ಎಂದು ಬರೆದು, ಎಲ್ಲರ ಕಣ್ಣಿಗೂ ಬೀಳುವಂತೆ ಬಿಗಿಯಾಗಿ ಇಟ್ಟೆವು. ಅದರಿಂದಲೂ ಒಂದಿಷ್ಟು ಹಣ ಬರತೊಡಗಿತು. ಆ ಹಣದಿಂದ ದೀಪಕ್ಕೆ ಎಣ್ಣೆ, ಕಸಬರಿಗೆ, ಹಾಸಲು ತರಟು ಸಂಗ್ರಹಿಸಿದೆವು.

೮ ಗಂಟೆಗೆ ಮನೆಗೆ ಹೋಗಿ ಸಂಜೆಯ ಊಟ ಮುಗಿಸಿ ಸಾಧ್ಯವಿದ್ದವರು ಮಲಗಲಿಕ್ಕೆ ವಾಚನಾಲಯಕ್ಕೇ ಬರುತ್ತಿದ್ದರು. ಮಲಗಲಿಕ್ಕೆ ಬರುವವರು ಒಂದೊಂದು ಕೌದಿಯನ್ನು ಮಡಚಿ ಒಳಕೋಣೆಯ ಮಾಡದಲ್ಲಿ ಓರಣವಾಗಿ ಇಡುತ್ತಿದ್ದೆವು. ಓದುಗರಿಗೆ ಅಸಹ್ಯವೆನಿಸಬಾರದೆಂದು ನೆಲ-ಗೋಡೆಗಳನ್ನು ಕಾಲಕಾಲಕ್ಕೆ ಸಾರಿಸಿಕೊಡಲು ಒಬ್ಬ ಹೆಣ್ಣು ಮಗಳನ್ನು ಗೊತ್ತುಪಡಿಸಿದ್ದೆವು.

ಯಾವುದೋ ಪತ್ರಿಕೆಯಲ್ಲಿ ಓದಿ ಖಾತ್ರಿದಾಯಕವಾದ ಚೇಳಿನ ಔಷಧಿ ಮಾಡಿದ್ದೆವು. ಕಡಿಸಿಕೊಂಡು ಬಂದವರು ಅದನ್ನು ಹಚ್ಚಿಸಿಕೊಂಡು ನಗುತ್ತ ಹೋಗುತ್ತಿದ್ದರು. ಅದನ್ನು ಮಾಡಿದ ಕ್ರಮವನ್ನು ಸ್ವಲ್ಪದರಲ್ಲಿ ಹೇಳುವುದು ಅವಶ್ಯವೆನಿಸುತ್ತದೆ -

ಮೂರು ಸೇರು ಚಿಮಣಿ ಎಣ್ಣೆ ಹಿಡಿಯುವ ಗಾಜಿನ ಬಾಟಲಿಯಲ್ಲಿ ೧ ೧/೨ ಸೇರು ಚಿಮಣಿ ಎಣ್ಣೆ ಹಾಕಿ ಅದರಲ್ಲಿ ಕನಿಷ್ಠ ೮೦ ಚೇಳುಗಳನ್ನಾದರೂ ಹಿಡಿದು ಹಾಕಿದರೆ ಅವು ಅಲ್ಲಿಯೇ ಸತ್ತು ಬಿಡುವವು. ಆರು ತಿಂಗಳು ಕೊಳೆಸಿದ ಬಳಿಕ, ಒಂದು ಬಿದರಿನ ಕಡ್ಡಿಗೆ ಅರಳಿ ಸುತ್ತಿ ಬಾಟಲಿಯಲ್ಲಿ ಅದ್ದಿ, ಚೇಳು ಕುಟುಕಿದ ಸ್ಥಳಕ್ಕೆ ಅಂದರೆ ಅಂಗಕ್ಕೆ ಒರೆಸಿದರೆ ಒಂದೆರಡು ನಿಮಿಷಗಳಲ್ಲಿ ಏರಿದ ವಿಷವೆಲ್ಲ ಇಳಿದು ಬಿಡುತ್ತಿತ್ತು. ಆ ಔಷಧಿಯ ಉಪಯೋಗ ೨-೩ ವರ್ಷಗಳವರೆಗೆ ಮಾಡಿಕೊಂಡೆವು.

ಬೆಳಗಿನ ೫ ಗಂಟೆಗೆದ್ದು ತಂಬಿಗೆ, ಉಟ್ಟುಕೊಳ್ಳುವ ಧೋತರ ಷುಟ್ಟಿ ಸಹಿತವಾಗಿ ಹಳ್ಳದಾಟಿ ಬಯಲಿಗೆ ಹೋಗಿ ಅಲ್ಲಿ ತಾಸರ್ಧತಾಸು, ಸಾಮುಶಕ್ತಿ ತೆಗೆದು ದಣಿಯುವ ಹೊತ್ತಿಗೆ ಮೂಡಲ ಕೆಂಪು ಸೂರ್ಯಕಿರಣಗಳಿಗೆ ದಾರಿಕೊಡುತ್ತಿತ್ತು.

ಆ ಬಳಿಕ ಬಾವಿಯಲ್ಲಿ ಸಾಕಷ್ಟು ಈಸಿ ಸಾಕೆನಿಸಲು ಹೊರಬಂದು ಮಡಿಬಟ್ಟೆ ಧರಿಸಿ, ಕಳೆದ ಧೋತರ ಒಗೆದುಕೊಂಡು ಮೇಲೇರಿ ಬರುವ ಹೊತ್ತಿಗೆ ಹಸಿವೆ ಕಂಗೆಡಿಸುತ್ತಿತ್ತು. ಗಿಡದಲ್ಲಿಯೇ ಪಾಡುಗೊಂಡ ಬಾಳೆಹಣ್ಣುಗಳನ್ನು ತೋಟಿಗನಿಂದ ಕೊಂಡು ತಿಂದು ಹೊಟ್ಟೆಯನ್ನು ತಣಿಸುತ್ತಿದ್ದೆನು.

ಅವಸರದಿಂದ ಮನೆಗೆ ಬಂದು, ಒಗೆದ ಬಟ್ಟೆಗಳನ್ನು ಒಣಹಾಕಿ ಅಡಿಗೆ ಮನೆಯ ಚಾಕರಿಯನ್ನು ಆರಂಭಿಸುತ್ತಿದ್ದೆನು. ಅದು ಮುಗಿಯುತ್ತಲೇ ೪-೬ ಕೊಡ ನೀರು ತಂದು ಮಗ್ಗದ ಕಡೆಗೆ ಹೋಗುತ್ತಿದ್ದೆನು.

ಸಂದರಿಕೆಯನ್ನು ಬಿಚ್ಚಿ ಕಟ್ಟಿ, ಕಂಡಿಕೆಯ ಚಟಲಿಗೆ ನೀರುಹಾಕಿ ಪಟೆ ಮಾಡಲು ಆರಂಭಿಸುತ್ತಿದ್ದೆ. ಆಗ ಅತ್ತಿಗೆ ಅಣ್ಣಂದಿರು ಕೈಕಾಲಿಗೆ ಹೋಗಿಬರುವ ಕೆಲಸದಲ್ಲಿ ತೊಡಗುತ್ತಿದ್ದರು. ಹೊತ್ತು ಎಷ್ಟಾಯಿತೆನ್ನುವುದು ಗಡಿಯಾರವಿಲ್ಲದಿದ್ದರೂ ಹೊಟ್ಟೆ ಹೇಳುತ್ತಿತ್ತು. ಆಗ ಏನೋ ನೆವ ಮಾಡಿ ಯಂಕಂಚಿ ರಾಮಣ್ಣನನ್ನು ಸಂಧಿಸಿ ಮಿಠಾಯಿ ಅಂಗಡಿಗೆ ಹೋಗುತ್ತಿದ್ದೆವು. ಕಿಸೆಯಲ್ಲಿ ರೊಕ್ಕವಿದ್ದರೆ ರೋಖು, ಇಲ್ಲದಿದ್ದರೆ ಉದ್ರಿ. ಮೋತಿ ಚೂರಿ, ಕರಿದಂಟು ಹುರಿದ ಸೇಂಗಾ ತಿಂದು ಸಾಕಾಗಲು ಅಂಗಡಿಯ ಜಿಡ್ಡಿ ಬಾಗಿಲಿನಿಂದ ಹೊರಬೀಳುತ್ತಿದ್ದೆವು. ಯಾಕಂದರೆ ಆ ವ್ಯವಹಾರ ಇನ್ನೊಬ್ಬರಿಗೆ ಅಥವಾ ಮನೆಯವರಿಗೆ ಗೊತ್ತಾಗಬಾರದಾಗಿತ್ತು.

ಆ ಬಾಕಿ ಹಣ ಸಂತೆಯ ಮರುದಿನ ಮುಟ್ಟಿಸುತ್ತಿದ್ದೆವು. ಒಟ್ಟಾರೆ ಕಳವಿನ ವ್ಯವಹಾರ. ಕೇಳಿದರೆ ಕೊಡುವಂಥ ಹಿರಿಯರು ಸಮಗಿರಲಿಲ್ಲ. ಹೊಟ್ಟೆ ಭರತಿಯಾಗದಿದ್ದರೆ ಶರೀರದ ಬೆಳವಣಿಗೆ ಕುಂಠಿತವಾಗುತ್ತದೆ ಎಂದು ಭಾವಿಸಿ ನಾವಿಬ್ಬರೂ ಹೊಟ್ಟೆ ತುಂಬ ಮಿಠಾಯಿ ತಿಂದು ಹೋಗಿ, ಆ ಬಳಿಕ ಮಧ್ಯಾಹ್ನ ಊಟಕ್ಕೆ ಕುಳಿತರೆ ಅರ್ಧರೊಟ್ಟಿ ಮಾತ್ರ ಸಾಕಾಗುತ್ತಿತ್ತು. ಅದನ್ನು ಕಂಡು ಮನೆಯವರು ತರ್ಕಿಸಿಯೇ ಬಿಡುತ್ತಿದ್ದರು - ಏನೋ ತಿಂದು ಬಂದಿದ್ದಾನೆ ಎಂದು.

ನಾವು ಹಾಗೆ ಮಾಡುವುದಕ್ಕೆ ಬೇಕಾಗುವ ರೊಕ್ಕ ಕದಿಯುವುದೇ ನಿಶ್ಚಿತವೆಂದು ಮನೆಯವರು ಬಗೆದಿದ್ದರು.

ನರಿಯಲ್ಲಿ ಜಾಣತನವಿರುತ್ತದೆ ಅಹುದು. ಆದರೆ ಅದನ್ನು ಹಿಡಿಯುವವನು ಅದಕ್ಕಿಂತಲೂ ಜಾಣನಿರಬೇಕಾಗುತ್ತದೆ. ಧಾನ್ಯದ ವ್ಯಾಪಾರ ಮಾಡುವಾಗ ನನ್ನ ಹಗಲುಗಳ್ಳತನ ಸಾಗಿದರೆ, ಕಪ್ಪಡ ವ್ಯಾಪಾರದ ಕಾಲಕ್ಕೆ ರಾಮಣ್ಣನ ತಗಲುತನ ಸಾಗುತ್ತಿತ್ತು. ಅಂಥ ಒಂದರೆಡು ಉದಾಹರಣೆಗಳನ್ನು ಮಾದರಿಗಾಗಿ ಹೇಳಬಹುದು.

ಕಾಳು ಮಾರುತ್ತ ನಾನು ಕುಳಿತಾಗ ಮಿಠಾಯಿ ಅಂಗಡಿಯ ಭೀಮಣ್ಣನು ಕಡಲೆಬೇಳೆ ಕೊಳ್ಳುವುದಕ್ಕೆ ಬಂದನು. ಅವನ ಪದರಲ್ಲಿ ೨-೩ ರೂ.ಗಳ ಕಡಲೆಬೇಳೆ ಅಳೆದುಹಾಕಿ, ಹಣವನ್ನೇ ಇಸಗೊಳ್ಳದೆ ಕಳಿಸಿಬಿಟ್ಟೆನು. ಆ ಕಾಲಕ್ಕೆ ಅಣ್ಣ-ಅತ್ತಿಗೆಯಿಲ್ಲದಿದ್ದರೆ ನನ್ನ ವ್ಯವಹಾರಕ್ಕೆ ಯಾವ ಅತಂಕವೂ ಬರುತ್ತಿರಲಿಲ್ಲ. ಒಂದು ವೇಳೆ ಇಬ್ಬರಲ್ಲಿ ಒಬ್ಬರಿದ್ದರೂ ಇನ್ನಾವುದೋ ಬಗೆಯಿಂದ ಅವನ ಮೇಲೆ ಹಣ ಉಳಿಯುವಂತೆ ಮಾಡಿಬಿಟ್ಟರೆ ಅದು ಇಂದಿಲ್ಲ ನನ್ನದಾಗಿಯೇ ಬಿಡುವುದು.

ಸಂತೆಯ ಗದ್ದಲವು ವಿಶೇಷವಾಗಿದ್ದಾಗ ಮೂತ್ರ ವಿಸರ್ಜನೆಯ ಅವಸರ ತೋರಿಸಿ, ಶಾಲೆಯ ಕಂಪೌಂಡಿನ ಬದಿಯಲ್ಲಿ ತಗ್ಗು ಕೆದರಿ ಅದರಲ್ಲಿ ೩-೪ ರೂ.ಗಳ ಚಿಲ್ಲರೆ ನಾಣ್ಯಗಳನ್ನು ಬಟ್ಟೆ ಮುಚ್ಚಿ ಬರುತ್ತಿದ್ದೆ. ಮರುದಿನ ಅದನ್ನು ತೊಳೆದು ಕಿಸೆಗೆ ಸೇರಿಸುತ್ತಿದ್ದೆ.

ರಾಮಣ್ಣನು ಕಿರಾಣಿ ಅಂಗಡಿಯಲ್ಲಿ ಗುಮಾಸ್ತನಾಗಿದ್ದಾಗ ಕಂದಿ ಚೆನಬಸಪ್ಪ ಒಂದು ೧೨ ಸೇರು ಸಕ್ಕರೆ ತೂಗಿಸಿಕೊಂಡು ಹೋದರೆ ಆ ಹಣವನ್ನು ತಿಂಡಿಯ ರೂಪದಲ್ಲಿ ಬರುತ್ತಿತ್ತು ಅಥವಾ ಅದರ ಬಾಕಿಯಲ್ಲಿ ಮುರಿದು ಹಾಕಲಾಗುತ್ತಿತ್ತು. ವಯಸ್ಸಿಗೆ ಬಂದ ಮಕ್ಕಳಿಗೆ ಕೈಯೆತ್ತಿ ಹಿರಿಯರು ಹಣ ಕೊಡುವ ಔದಾರ್ಯ ತೋರಿಸದಿದ್ದರೆ ಅವರು ಕಳವಿನ ದಾರಿಯನ್ನೋ ತಗುಲಿನ ಉಪಾಯವನ್ನು ಹುಡುಕಿಕೊಳ್ಳಬೇಕಾಗುತ್ತದೆ. ಇದೊಂದು ಸ್ವಾನುಭವ. ಇತ್ತೀಚೆಗೆ ನಮ್ಮ ಮಕ್ಕಳಿಗೆ ಜೇಬು ಹಣವನ್ನು ಕೇಳದೆ ಕೊಡುತ್ತ ಬರುವ ಬುದ್ಧಿ ನಮ್ಮಲ್ಲಿ ಹುಟ್ಟಿಕೊಂಡಿದೆ.

ಹೀಗೆ ವಾಚನಾಲಯವು ಪುಸ್ತಕದ ಸಹವಾಸದೊಂದಿಗೆ, ಒಂದು ವಿಧದ ಬುದ್ಧಿಯನ್ನು ಕಲಿಸಿ ಬೆಳೆಸಿದರೆ, ಮನೆಯವರ ಕೈಬಿಗಿತವು ನಮಗೆ ಹಣ ದೋಚುವ ಹೊಸಹೊಸ ದಾರಿಗಳನ್ನು ತೋರಿಸಿಕೊಟ್ಟಿದೆ. ಕದ್ದು ತಿನ್ನುವುದಕ್ಕಿಂತ ಬೇಡಿ ತಿನ್ನುವುದು ಒಳ್ಳೆಯದು ಎಂಬ ನೀತಿಯನ್ನು ಅರಿತಿದ್ದರೂ, ಬೇಡಿದರೂ ಕೊಡದ ಹಿರಿಯರು ಮನೆಯಲ್ಲಿದ್ದಾಗ ಕಳವು ಮಾಡಿ ಬೇಡದಂತೆ ತೆಪ್ಪಗಿರುವ ನೀತಿಯನ್ನು ಮಾತ್ರ ಕಲಿತೆವು.

ಆ ದಾರಿಯಲ್ಲಿ ನಮ್ಮ ಮಕ್ಕಳು ಪ್ರವೇಶಗೊಳ್ಳದಂತೆ, ಅವರಿಗೆ ಒಂದಿಷ್ಟು ಸ್ವತಂತ್ರ ಹಣ ಕೊಡುತ್ತ ಬರುವುದು ಸೂಕ್ತ ದಾರಿಯೆಂದು ತಿಳಿದೆವು. ಆದರೆ ಅದರಲ್ಲಿಯೂ ಹಲವಾರು ದೋಷಗಳು ಇರತಕ್ಕವೇ.

ಒಮ್ಮೆ ನಾವು ರಾತ್ರಿಯ ಊಟ ಮಾಡದೆ ವಾಚನಾಲಯದ ಕೋಣೆಗೆ ಬರುವುದಕ್ಕೆ ಒಳಕೊಂಡಿ ಹಾಕಿಕೊಂಡು ಯಾರೋ ಮಲಗಿದ್ದಾರೆಂದು ತಿಳಿಯಿತು. ನಾವು ಹಲವು ಸಾರೆ ಕೂಗಾಡಿದ ಬಳಿಕ ಒಳಗಿನವರು ಎದ್ದು ಬಾಗಿಲು ತೆರೆದರು. ದೀಪ ಎತ್ತರಿಸಿದೆವು ನೋಡಿದರೆ ಅಪರಿಚಿತ ವ್ಯಕ್ತಿ.

ಒಂದು ಅರೆನಿಮಿಷ ತಡೆದು, ವಿನಯದಿಂದ ಕೇಳಿಕೊಂಡಾಗ ಅವರು ತಮ್ಮ ವಿಷಯವನ್ನು ಹೇಳಿದರು -

“ನಾನು ಗುಪ್ತ ಪೋಲೀಸ ಅಧಿಕಾರಿ. ಒಬ್ಬ ಕಳ್ಳನನ್ನು ಹಿಡಿಯ ಬೇಕಾಗಿದೆ, ಆದ್ದರಿಂದ ಹೀಗೆ ವೇಷ ಬದಲಿಸಿ, ಸ್ಥಳಬದಲಿಸಿ ಈ ಊರ ಪೋಲಿಸ ಗೌಡರ ಸಲಹೆಯಂತೆ ಇಲ್ಲಿ ತಂಗಿದ್ದೇನೆ, ನನ್ನಲ್ಲಿ ಆಯುಧವಿದೆ, ಕೈದು ಇದೆ ಗೌಡರು ವಿಶ್ವಾಸ ತೋರಿಸಿದ್ದರಿಂದ ನೀವೂ ನಮ್ಮವರೇ ಎಂದು ಬಗೆದು ಈ ವಿಷಯ ಸ್ವಲ್ಪವರಲ್ಲಿ ಹೇಳಿದ್ದೇನೆ”

ನಿಮ್ಮ ದಿಟ್ಟತನಕ್ಕೆ ಹಾಗೂ ಸರಳತನಕ್ಕೆ ನಾನು ಮೆಚ್ಚಿದ್ದೇನೆ. ನಿಮ್ಮ ಕೆಲಸಕ್ಕೆ ನನ್ನಿಂದ ಇನ್ನಿಷ್ಟು ಸಹಾಯವಾಗಲಿ ಎಂದು ಕೈಯಲ್ಲಿ ಹತ್ತು ರೂ. ಇಡ ಬಂದರು. ನಾವು ಬೇಡವೆಂದರೂ ಕೇಳದೆ ನಮ್ಮ ಕಿಸೆಯಲ್ಲಿ ತುರುಕಿದರು.

ಹೇಳಿದರು - ನೀವಿನ್ನೂ ಚಿಕ್ಕವರಾದರೂ ಒಳ್ಳೆಯ ಕೆಲಸ ಮಾಡುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ. ನನ್ನ ಹೆಸರು ಈರಪ್ಪ. ಜಾತಿ ಅಗಸರದು. ಈರಪ್ಪ ಫೌಜದಾರ ಎಂದು ನನ್ನನ್ನು ಕರೆಯುತ್ತಾರೆ.

ಇಷ್ಟು ಕೇಳಿ ನಮಗೂ ಸಂತೋಷವಾಯಿತು. ನಾವು ವರ್ತಿಸಿದ್ದು ತುಸು ಹುಂಬುತನವೇ ಇರಬಹುದು, ಒರಟುತನವೂ ಬೆರೆತಿದೆ ಅದರಲ್ಲಿ. ಆದರೂ ಪ್ರಸಂಗಾವಧಾನವು ಪ್ರಕಟವಾಯಿತೆಂದು ಹೇಳಬಹುದು.

೧೨. ಸಾಹಿತ್ಯದ ಚಿಗುರು

ವಾಚನಾಲಯದಲ್ಲಿ ವಾರವಾರಕ್ಕೆ ಬರೆದಿಡುತ್ತಿರುವ "ಮುದ್ದು" ಪತ್ರಿಕೆಯನ್ನು ನಮ್ಮ ಶಾಲೆಯ ಮುಖ್ಯಗುರುಗಳು ಒಮ್ಮೆ ತರಿಸಿಕೊಂಡು ನೋಡಿದರು. ಪಲವಾರು ಕವನಗಳು ಮತ್ತು ೩-೪ ಲೇಖನಗಳು ಅದರಲ್ಲಿ ಒಡೆದು ಕಾಣಿಸುತ್ತಿದ್ದವು ಅಕ್ಷರಗಳು ಮುತ್ತು ಪೋಣಿಸಿದಂತೆ ದುಂಡುದುಂಡಾಗಿದ್ದವು.

ಆ ಪತ್ರಿಕೆ ಮುಖ್ಯ ಗುರುಗಳ ಟೇಬಲಿನ ಮೇಲೆ ಇರುವಾಗ ಅಕಸ್ಮಾತ್ತಾಗಿ ಭೆಟ್ಟಿಕೊಡುವ ಶಿಕ್ಷಣಾಧಿಕಾರಿಗಳು ವರ್ಗದ ಕೋಣೆಗಳಲ್ಲಿ ಸುತ್ತಾಡಿ ಮುಖ್ಯ ಗುರುಗಳ ಆಸನದತ್ತ ಬಂದು ಆಸೀನರಾದರು. ಕಣ್ಣಿಗೆ ಬಿತ್ತು ಆ 'ಮುದ್ದು' ಪತ್ರಿಕೆ. ಇದೇನು ಎಂದು ಕೇಳಿದರು.

ಮುಖ್ಯ ಗುರುಗಳು ಹೇಳಿದರು -

'ನಮ್ಮ ಶಾಲೆಯ ಹಿಂದಿನ ವಿದ್ಯಾರ್ಥಿ ಲಿಂಗಣ್ಣನೆಂಬುವನು ಒಂದು ವಾಚನಾಲಯ ತೆರೆದು ಗೆಳೆಯರೊಡನೆ ಮೋಘತ್ತಾಗಿ ನಡೆಸುತ್ತಾನೆ. ಆ ವಾಚನಾಲಯದಲ್ಲಿ ಪ್ರತಿವಾರ ಪ್ರಕಟವಾಗುವ ಕೈಬರಹದ ವಾರಪತ್ರಿಕೆ. ಇದು ನೋಡುವ ಸಲುವಾಗಿ ತರಿಸಿಕೊಂಡಿದ್ದೇನೆ.'

ಸಾಹೇಬರಿಗೆ ಆಶ್ಚರ್ಯವಾಯಿತು ಪತ್ರಿಕೆಯನ್ನು ಕೈಗೆತ್ತಿಕೊಂಡು ಪುಟಗಳನ್ನು ತಿರುವಿ ಹಾಕಿದರು 'ಮುದ್ದು' ಪತ್ರಿಕೆಗಳ ಫೈಲೇ ಆಗಿತ್ತು. ಎಲ್ಲ ಕೆಲಸಗಳನ್ನು ಬದಿಗಿರಿಸಿ ತಾಸರ್ಧತಾಸು ಪತ್ರಿಕೆಗಳಲ್ಲಿ ಕಣ್ಣಾಡಿಸಿದರು, ಬಳಿಕ ಮುಖ್ಯಗುರುಗಳಿಗೆ ಹೇಳಿದರು -

"ಆ ವಿದ್ಯಾರ್ಥಿಯನ್ನು ಒಂದಿಷ್ಟು ಕರೆಯಿಸಿರಿ, ಕಣ್ಣಾರೆ ನೋಡೋಣ"

ನನಗೊಂದು ತೀವ್ರ ಕರೆಬಂತು.

ಇದ್ದ ವೇಷದಲ್ಲಿ ಶಾಲೆಯತ್ತ ಸಾಗಿದೆ. ಸಾಹೇಬರ ಬಳಿಗೆ ಕರೆದೊಯ್ದರು. ಸಾಹೇಬರು ನನಗಾಗಿ ಒಂದು ಕುರ್ಚಿ ಹಾಕಿಸಿದ್ದರು. ನಾನು ಬಂದವನೇ ಅವರಿಗೆ ಕೈಮುಗಿದು ನಿಂತೆ.

ಸಾಹೇಬರಿಗೆ ಸಮಾಧಾನವೆನಿಸಲಿಲ್ಲ, ನುಡಿದರು "ಕುಳಿತುಕೊಳ್ಳಪ್ಪ ಲಿಂಗಣ್ಣ, ನೀನು ಆಧುನಿಕ ಆಂಡಯ್ಯ ನಿನ್ನ ಸಾಹಸ ಕಂಡು ನಿನ್ನನ್ನು ಕಾಣಬೇಕೆಂದು ಕರೆಸಿದ್ದೇನೆ."

ಹುದುಗುತ್ತಲೇ ಕುಳಿತುಕೊಂಡೆ.

ಸಾಹೇಬರ ಸಿಪಾಯಿ ಬಂದನು. ಅವನ ಕೈಯಲ್ಲಿ ಏತರದೋ ಮಡಿಕೆ ಇನ್ನೊಂದು ಕೈಯಲ್ಲಿ ಹಾಲಿನ ತಂಬಿಗೆ.

ಸಾಹೇಬರು ಮುಖ್ಯ ಗುರುಗಳನ್ನು ಬರಹೇಳಿ, ಅವರಿಗೆ ಸೂಕ್ತ ಆಸನ ಕೊಡಿಸಿ ಹೇಳಿದರು -

"ನೀವಿಬ್ಬರೂ ಗುರುಶಿಷ್ಯರು, ನಾನು ನಿಮ್ಮ ಶಾಲೆಯ ತಪಾಸಣೆಯ ಒಬ್ಬ ಸಾಮಾನ್ಯ ಅಧಿಕಾರಿ, ಆಧುನಿಕ ಆಂಡಯ್ಯ ಕವಿಯನ್ನು ಸಿದ್ಧಗೊಳಿಸಿದ ಗುರುಗಳ ಸಮ್ಮುಖದಲ್ಲಿ ಕವಿಶಿಷ್ಯನ ಬಾಯಿ ಸಿಹಿ ಮಾಡಿಕಳಿಸುವುದು ನನ್ನ ಧರ್ಮವೆಂದು ಭಾವಿಸಿದ್ದೇನೆ."

ಮಿಠಾಯಿ ಹಾಲು ಸ್ವೀಕಾರ ಮಾಡುವಂತೆ ಸಾಹೇಬರು ಸೂಚಿಸಿದರು.

ಯಥಾಪ್ರಕಾರ ಕಾರ್ಯಕ್ರಮ ಮುಗಿಯಿತು, ನಾನು ಎದ್ದು ನಿಂತು ಕೈಮುಗಿದು ಹೊರಡುವುದಕ್ಕೆ ಅಪ್ಪಣೆ ಕೇಳಿದೆನು.

ಸಾಹೇಬರು ಎರಡು ಹೆಜ್ಜೆ ಮುಂದೆ ಬಂದು ಬೆನ್ನ ಚಪ್ಪರಿಸಿ, ಹರ್ಷಭರಿತವಾದ ಮುಖದಿಂದ ಆಶೀರ್ವದಿಸಿದರು. ನಾನು ಮತ್ತೊಮ್ಮೆ ಗುರುಗಳಿಗೂ, ಸಾಹೇಬರಿಗೂ ವಂದನೆಗಳನ್ನು ಅರ್ಪಿಸಿ ಮನೆಯ ಹಾದಿ ಹಿಡಿದೆನು.

ಇಲ್ಲಿ ನನ್ನ ಗುರುಗಳೆಂದರೆ ದಿ. ಸಂ.ಭೀ. ಪಾಟೀಲ ಮುಖ್ಯ ಗುರುಗಳು ಮತ್ತು ಸಾಹೇಬರೆಂದರೆ ಹಿರಿಹಾಳ ಸಾಹೇಬರು.

ಅಂದು ಸಾಯಂಕಾಲದಲ್ಲಿ ಸೇರಿದ ಗೆಳೆಯರ ಮುಂದೆ ಅದೇ ಸುದ್ದಿ, ಅದೇ ಮಾತು ನಮ್ಮನ್ನೆಲ್ಲ ಹಿಗ್ಗಿನ ಕಡಲಲ್ಲಿ ತೇಲಿಸಿತು.

ಆ ವರುಷ ನಿಂಬರಗಿ ಜಾತ್ರೆಯ ಸಲುವಾಗಿ ೨ ನಾಟಕಗಳನ್ನು ಅಣಿಗೊಳಿಸಬೇಕಿತ್ತು. ಒಂದು 'ದಾಮಾಜಿ', ಇನ್ನೊಂದು 'ಇಂದ್ರಸೇನ ರೋಹಿಣಿ'. ಮೊದಲೇ ಕಲಿತಿದ್ದರ ಪುನರ್ರೂಢಿ ದಾಮಾಜಿ ನಾಟಕದ್ದು. ತೀರ ಹೊಸದಾಗಿ ಕಲಿತು ರೂಢಿಗೊಳಿಸುವುದು ಇಂದ್ರಸೇನ ರೋಹಿಣಿಯದು.

ಯಾವ ನಾಟಕದ ತಾಲೀಮು ನಡೆದರೂ ನಾನು ದಿನಾಲು ಹೋಗತಕ್ಕವನೇ. ಮಂಡಲಿಯ ನಿರ್ವಾಹಕರಾದ ವೆಂಕಣ್ಣ ಕುಲಕರ್ಣಿಯವರ ಮನೆ ಹಿಂದಿನ ಕಾಲದ ಅರಮನೆ ಆಗಿತ್ತು. ತಲೆವಾಗಿಲು ನೋಡಿದರೆ ಒಂದು ಚಿಕ್ಕ ಹಳ್ಳಿಯ ಅಗಸೆಬಾಗಿಲಂತಿತ್ತು. ಆ ದೊಡ್ಡ ಮನೆಯಲ್ಲಿ ಒತ್ತಟ್ಟಿಗೆ ಅಡಿಗೆ ಮನೆ, ದೇವರ ಮನೆ, ಮಲಗಿಕೊಳ್ಳುವ ಕೋಣೆಗಳಿದ್ದರೆ, ಇನ್ನೊತ್ತಟ್ಟಿಗೆ ದನಗಳ ಕೊಟ್ಟಿಗೆ, ಮೇವಿನ ಗೋದಲೆ, ಸೇದುವ ಬಾವಿ ಅಂಗಳದಲ್ಲಿ ತುಳಸಿಕಟ್ಟೆ, ತಲೆವಾಗಿಲಿನ ಎರಡು ಬದಿಯಲ್ಲಿ ಡೇಲಜಿಗಳು. ಡೇಲಜಿಯ ಮಗ್ಗುಲಿಗೆ ಕುಲಕರ್ಣಿಯವರು ಕುಳಿತು ನ್ಯಾಯಪಂಚಾಯತಿ ಬಗೆಹರಿಸುವ ಕಚೇರಿ.

ಆ ದೊಡ್ಡ ಮನೆಯ ಎದುರು ಮಗ್ಗಲಿಗೆ ಒಂದು ಪ್ರತ್ಯೇಕವಾದ ಆರಂಕಣದ ಕೋಣೆಯಿತ್ತು. ಅದೇ ನಮ್ಮ ಬೈಠಕಿ ಮನೆ. ಅಂದರೆ ನಮ್ಮ ನಾಟಕಗಳನ್ನು ಅಭ್ಯಸಿಸುವ ಸ್ಥಳ. ವೆಂಕಣ್ಣನವರು ಎಲ್ಲರಿಗೂ ಕಾಕಾ. ಅವರು ಸಂಜೆಯ ಅಲ್ಪೋಹಾರ ಮುಗಿಸಿ ಹೊರಟಿದ್ದರೆಂದರೆ ನೇರವಾಗಿ ಬೈಠಕ ಕೋಣೆಯನ್ನು ಪ್ರವೇಶಿಸುವರು.

ಅದರ ಮುಂದೆಯೇ ನನ್ನ ವಾಸ್ತವ್ಯ. ಇಬ್ಬರ ನಡುವೆ ಒಂದು ಕಂದೀಲು. ಆ ಕಂದೀಲ ಬೆಳಕಿನಲ್ಲಿ ಕಲಿಯುತ್ತಿರುವ ನಾಟಕದ ಪುಸ್ತಕ ಅಥವಾ ಹಸ್ತಪ್ರತಿ, ನೋಡುತ್ತ ತಪ್ಪಿದಲ್ಲಿ ತಿದ್ದುತ್ತಲೋ ಹೇಳುತ್ತಲೋ ಇರುವುದು ನನ್ನ ಕೆಲಸ. ಆ ಕೆಲಸವನ್ನು ನಾನು ಬಹು ಆಸ್ಥೆಯಿಂದ ಮಾಡುತ್ತಿದ್ದೆ.

ಅದರ ಪರಿಣಾಮದಿಂದ ಕಲಿಯುವ ನಾಟಕಗಳೆಲ್ಲ ನನಗೆ ಕಂಠಪಾಠವಾಗಿ ಬಿಡುತ್ತಿದ್ದವು. ಪುಸ್ತಕ ಅಥವಾ ಹಸ್ತಪ್ರತಿಯಿಲ್ಲದಿದ್ದರೂ ಪಾತ್ರಗಳ ತಪ್ಪು ತೊದಲು ಚಾಚೂ ತಪ್ಪದೆ ತಿದ್ದಿಹೇಳಬಲ್ಲವನಾಗಿದ್ದೆ. ನನ್ನ ಕೆಲಸದ ನಿರ್ವಹಣೆಯನ್ನು ಕಾಕಾ ಅವರು ಬಹು ಮೆಚ್ಚಿಕೊಂಡಿದ್ದರು. ಪ್ರಸಂಗ ಬಂದರೆ ನನ್ನ ಮೇಲುಗಟ್ಟಿ ನಿರ್ಣಯ ನೀಡುತ್ತಿದ್ದರು.

ನನ್ನ ಹುಡುಗ ಬುದ್ಧಿಯು ಅದನ್ನೆಲ್ಲ ಸದುಪಯೋಗಪಡಿಸಿಯೇ ಕೊಳ್ಳುತ್ತಿತ್ತೆಂದು ತಿಳಿಯಲಾಗದು. ಕಂಪನಿಯ ಮಂಡಲಿಯಲ್ಲಿ ಹೊಸಬರನ್ನು ಸೇರಿಸಿಕೊಳ್ಳುವ ಪ್ರಸಂಗದಲ್ಲಿ ಬಹಳ ವಾದವಿವಾದಗಳು, ತರ್ಕವಿತರ್ಕಗಳು ಮೂಡಿನಿಲ್ಲುತ್ತಿದ್ದವು.

ಅಹಿರಸಂಗ ಎಂಬ ಹಳ್ಳಿಯಲ್ಲಿ ವಾಸಿಸುತ್ತಿದ್ದ ಒಬ್ಬ ಬಡಪಾತರದವನು ಹೊಟ್ಟೆಗಾಗಿ ನೇಯ್ಗೆಯ ಉದ್ಯೋಗ ಮಾಡುತ್ತಿದ್ದನು. ಆ ಉದ್ಯೋಗ ಹಳ್ಳಿಯಲ್ಲಿ ಸರಿಯಾಗಿ ನಡೆಯಲೊಲ್ಲದೆಂದು ಚಡಚಣಕ್ಕೆ ಬಂದು ನೆಲೆಸಿದನು. ಆತನಿಗೊಬ್ಬ ಮಗಳು, ೭-೮ ವರ್ಷದ ಬಾಲಕಿ. ಅವಳು ಉಟ್ಟುತೊಟ್ಟ ಅರಿವೆ, ಬಿಟ್ಟ ತಲೆ ಜುಟ್ಟು ನೋಡಿದರೆ, ಆ ಬಡತನದ ಸ್ವರೂಪ ಕಲ್ಪನೆ ಆಗುತ್ತಿತ್ತು. ಆದರೆ ಆ ಹುಡಿಗೆಯ ತಂದೆ ಕುಲಕರ್ಣಿಯವರ ಕಡೆಗೆ ಬಂದು ತನ್ನ ಮಗಳನ್ನು ಅವರ ಮುಂದೆ ಅಡ್ಡಹಾಕಿ ತಾನು ಕೈ ಮುಗಿದು ನಿಂತನು -

"ಏನಾದರೂ ಮಾಡಿ ಈ ಬಾಲಕಿಯನ್ನು ಗಾಯನ, ನೃತ್ಯಗಳಲ್ಲಿ ಪಳಗಿಸಿ ಕೊಟ್ಟರೆ ಪರಮೋಪಕಾರವಾಗುತ್ತದೆ. ಹುಡಿಗೆ ನನ್ನ ಮಗಳಲ್ಲ

ನಿಮ್ಮ ಮಗಳು, ನಿಮ್ಮುಡಿಯಲ್ಲಿ ಹಾಕಿದ್ದೇನೆ, ಕಾಯಿರಿ, ಕೊಲ್ಲಿರಿ" ಎಂದು ಕಣ್ಣೊರೆಸಿಕೊಂಡನು.

ಆ ಮಾತಿಗೆ ಕಾಕಾ ಅವರೂ ಕರಗಿವರು ಮತ್ತು ಸಾಧ್ಯವಿದ್ದಷ್ಟು ಸಹಾಯ ಮಾಡುವೆನೆಂದು ಹೇಳಿದರು. 'ದಿನಾಲು ತಾಲೀಮಿಗೆ ಬರಲೇ ಬೇಕು, ನೀನು ಮರೆಯದೆ ನಿಮ್ಮೋಣಿಯಲ್ಲಿರುವ ಸಾಹೇಬಲಾಲನೊಡನೆ ಮಾಡಿ ಕಳಿಸುತ್ತಿರು. ತುಸು ರಾತ್ರಿಯಾದರೂ ಆಕೆಗೆ ನೃತ್ಯದ ಹೆಜ್ಜೆಗಳನ್ನು ಹಾಕುವಂತೆ ಹೇಳಿಸುವೆನು' ಎಂದು ಆಶ್ವಾಸನ ಕೊಟ್ಟರು.

ಆದರೆ ನನಗೆ ಮಾತ್ರ ಆ ಹುಡುಗಿಯ ಬಗೆಗೆ ಒಂದಿಷ್ಟು ಜಿಗುಪ್ಸೆ. ಏನಂದರೆ ಮೂಲತಃ ಆಕೆ ನಿರಕ್ಷರಿ, ಸಂಸ್ಕಾರ ದೂರಳು, ವಯಸ್ಸು ಚಿಕ್ಕದು, ಆಕೆಗೆ ಶಿಕ್ಷಣ ಕೊಡಬಲ್ಲ ತಜ್ಞರಾರೂ ನಮ್ಮಲ್ಲಿರಲಿಲ್ಲ. ಹೇವಕ್ಕಾಗಿ ಈ ಹೋಣೆಹೊತ್ತರೆಂದು ನನ್ನ ಹುರಟುಬುದ್ಧಿಗೆ ಗೋಚರಿಸಿತು.

"ಎಳೆಗರುಂ ಎತ್ತಾಗದೇ ಲೋಕದೊಳ್" ಎಂದು ಭವಿಷ್ಯದತ್ತ ಅರೆ ಗಣ್ಣು ತೆರೆದುಕೊಂಡವರು ಕೆಲವರಿದ್ದರು. ಅವರ ಧೋರಣೆಗೆ ಅರ್ಥವಿಲ್ಲ ವೆಂಬುದನ್ನು ತೋರಿಸಿಕೊಡಬೇಕೆಂದು ನನ್ನ ವಿಚಾರ. ಆ ಬಾಲಕಿಯ ಹೆಸರು ಜೈರಾ, ಬೈಠಕಿಗೆ ತಪ್ಪದೆ ಬರುತ್ತಿದ್ದಳು. ಆದರೆ ಬಂದವಳೇ ಹೊರಕಟ್ಟೆಯ ಮೇಲೆ ಒರಗಿ ಬಿಡುತ್ತಿದ್ದಳು.

ಕಲಿತು ರೂಢಿಸುವ ನಾಟಕದ ಒಂದು ಅಥವಾ ಎರಡಂಕುಗಳ ಅಭ್ಯಾಸ ಮೊದಲು ನಡೆಯುತ್ತಿತ್ತು. ಅದು ಮಧ್ಯರಾತ್ರಿ ಮೀರಿದಾಗ ಮುಗಿಯುತ್ತಿತ್ತು. ಆಗ ಜೈರಾನನ್ನು ಎಬ್ಬಿಸಿ, ಆಕೆಯ ಅಸ್ತವ್ಯಸ್ತವಾದ ತಲೆಗೂದಲು, ಉಡಿಗೆ ತೊಡಿಗೆ ತಿದ್ದುವ ಕೆಲಸ ಮುಗಿಸಿ, ನಿದ್ರೆಯಿಂದ ನಿಚ್ಚಳವಾಗಿ ಎಚ್ಚರಗೊಳಿಸಬೇಕು. ಆ ಬಳಿಕ ಕರೆತಂದು ದೀಪದ ಬೆಳಕಿನಲ್ಲಿ ನಿಲ್ಲಿಸುತ್ತಿದ್ದರು. ಪ್ರಯತ್ನವೇನೋ ಸಾಕಷ್ಟು ನಡೆಯುತ್ತಿದ್ದರೂ ಪ್ರಯೋಜನ ಮಾತ್ರ ಅಷ್ಟೊಂದು ಕಂಡು ಬರುತ್ತಿರಲಿಲ್ಲ. ನನಗಂತೂ ಆ ಕ್ರಮವೇ ಬೇಡವಾಗಿತ್ತು. ಆರಂಭದ ರಾತ್ರಿಯಲ್ಲಿಯೇ ಆಕೆಯ ಅಭ್ಯಾಸ ಮೊದಲು ಮುಗಿಸಿ ಕಳಿಸಿಕೊಟ್ಟರೆ ಒಳ್ಳೆಯದಾಗುವುದೆಂದು ನನ್ನ ಅಭಿಪ್ರಾಯ.

ದಾಮಾಜಿ ನಾಟಕದ ೨ನೇ ಅಂಕದ ಅಭ್ಯಾಸ ನಡೆದಿತ್ತು. ನಾಟಕದ ಹಸ್ತಪ್ರತಿ ತೆರದು ಇಟ್ಟಿದ್ದೆ. ಮಲಗಿದ ನಾಯಿ ಬುಧಂಗನೆ ಎದ್ದಂತೆ ಒಮ್ಮೆಲೆ ಎದ್ದು ಹೊರಗೆ ಹೋದೆ. ಒಂದಕ್ಕೆ ಹೋಗಿರಬಹುದೆಂದು ತಿಳಕೊಳ್ಳುವಂತಾ ಯಿತು. ಆದರೆ ನಾನು ಮಾಡಿದ್ದೇ ಬೇರೆ.

ನೇರವಾಗಿ ಕುಲಕರ್ಣಿಯವರ ಥೇಲಜಿ ಕಟ್ಟೆ ಏರಿದೆ. ಮಾಡದಲ್ಲಿ ಚಿಮಣಿ ದೀಪ ಬೆಳತನಕ ಉರಿಯುತ್ತಿತ್ತು. ಅಲ್ಲೊಬ್ಬ ಇಲ್ಲೊಬ್ಬ ಆಳು ಮಕ್ಕಳು ಮಲಗಿದ್ದರು ನಾನು ದೀಪದ ಕಾಡಿಗೆಯನ್ನು ಎರಡೂ ಬೊಟ್ಟುಗಳಿಗೆ ಹಚ್ಚಿಕೊಂಡು ಬಾಗಿಲು ದಾಟಿ ಹೊರಕಟ್ಟೆಗೆ ಬಂದೆ. ಜೈರಾ ಅಸ್ತವ್ಯಸ್ತವಾಗಿ ಮಲಗಿದ್ದಳು. ನಾನು ಹೋದವನೇ ಆಕೆಯ ಮೇಲುದುಟಿಯ ಮೇಗಡೆ ಎರಡು ಮೀಸೆಗಳನ್ನು ಕೊರೆದವನೇ ಅಂಗಳಕ್ಕೆ ಓಡಿಹೋಗಿ ಬೆರಳಿನ ಕಾಡಿಗೆ ಹೋಗುವಂತೆ ಮಣ್ಣುಹಚ್ಚಿ ತಿಕ್ಕಿಕೊಂಡು ಸ್ವಚ್ಛಗೊಳಿಸಿದವನೇ ಅವಸರದಿಂದ ಕಾಕಾ ಅವರ ಮುಂದೆ ಕುಳಿತು ಪುಸ್ತಕಪುಟಗಳನ್ನು ತಿರುವಿ ಹಾಕಿದೆ, ತರುವಾಯ ಹೇಳಿದೆ -

"ಈ ಹೊತ್ತು ದಿನಕ್ಕಿಂತ ಹೆಚ್ಚು ರಾತ್ರಿಯಾಗಿದೆ. ಜೈರಾನ ನರ್ತನವನ್ನಿಷ್ಟು ಮುಗಿಸಿ ಬಿಡೋಣ"

ಆದರೂ ಹತ್ತೆಂಟು ಮಿನೀಟುಗಳು ಗತಿಸಿದವು. ನಾಟ್ಯಾಭ್ಯಾಸ ಮುಗಿಯಿತು. ಕೂಡಲೆ ಸಾಹೇಬಲಾಲನು ಜೈರಾಳನ್ನು ಎತ್ತಿ ತಂದು ದೀಪದ ಬೆಳಕಿನಲ್ಲಿ ನಿಲ್ಲಿಸಿದ್ದೇ ತಡ, ನೋಡಿದವರೆಲ್ಲ ಘೊಳ್ಳನೆ ನಕ್ಕರು 'ಜೈರಾ ಮೀಸೆ ಹಚ್ಚಿಕೊಂಡು ಬಂದಿದ್ದಾಳಲ್ಲೋ' ಎಂದು ಕೆಲವರು ಆಡಿಸಾಡಿದರು. ಆ ಕೆಲಸ ಮಾಡಿದವನು ನಾನೇ ಎಂದು ಎಲ್ಲರೂ ನನ್ನ ಕಡೆಗೆ ಬೆರಳು ಮಾಡಿ ತೋರಿಸಿದರು. ನಾನು ನನ್ನ ಎರಡು ಅಂಗೈ ಬೆರಳು ತೋರಿಸಿದೆ. ಕಾಡಿಗೆಯ ಸೋಂಕು ಎಷ್ಟೂ ಇರಲಿಲ್ಲ. ನನ್ನ ಮೇಲಿನ ಪೀಡೆ ಸಹಜವಾಗಿ ಕಡೆಗಾಯಿತೆಂದು ಮನದಲ್ಲೇ ಹಿಗ್ಗಿದೆ. ಆದರೆ ಕಟ್ಟೆಯ ಮೇಲೆ ಕುಳಿತ ಹಾಗೂ ಅಡ್ಡಾದ ಜನರು ಆ ಮೀಸೆ ಕೊರೆದವರ ಬಗೆಗೆ ತರ್ಕ ವಿತರ್ಕ ನಡೆಸಿದ್ದರು. ಒಂದಕ್ಕೆಂದು ನೆವ ಮಾಡಿ ಹೊರಗೆ ಮಾತ್ರ ಒಮ್ಮೆ ಬಂದಿದ್ದನೆಂದು ಯಾರೋ ಗಟ್ಟಿಸಿ ಹೇಳಿದರು ನನ್ನ ಹೆಸರನ್ನು.

ಕುಲಕರ್ಣಿಯವರ ಆಳು ಮಗ ವರದಾನಿ ಸ್ಪಷ್ಟವಾಗಿ ಹೇಳಿದನು-

ನಿಂಗಪ್ಪನ ಹೊರತು ಯಾರೂ ಅಂಥ ಕೆಲಸ ಮಾಡಲಾರರು. ನಾನು ಮಲಗಿದಲ್ಲಿಂದಲೇ ಎಲ್ಲವನ್ನೂ ನೋಡಿದ್ದೇನೆ. ದೀಪವಿಡುವ ಮಾಡದ ಬಳಿಗೆ ಹೋಗಿ ಬಂದು ಕಟ್ಟೆಯ ಮೇಲೆ ಒಂದು ಕ್ಷಣ ಕುಳಿತಂತೆ ಮಾಡಿ, ಒಳಗಿನ ಅಂಗಳಕ್ಕೆ ಹೋಗಿ, ಬಾದಲಿಯೊಳಗಿನ ನೀರಿನಿಂದ ಕೈಬೆರಳು ಸ್ವಚ್ಛ ತೊಳಕೊಂಡಿರಬೇಕು.

ವರದಾನಿಯ ಸಾಕ್ಷಿ ಎಲ್ಲರಿಗೂ ವಾಸ್ತವಿಕವೆನಿಸಿತು. ನನ್ನನ್ನೇ ತಪ್ಪುಗಾರನೆಂದು ನಿರ್ಣಯ ಮಾಡಿದರು. ಬಯ್ಯುವವರು ಬಯ್ದರು, ಜರಿಯುವರು ಜರಿದರು. ಆದರೆ ನಾನು ನನ್ನ ಕೊನೆಯ ಅಭಿಪ್ರಾಯ ಹೇಳಿಬಿಟ್ಟೆ -

ನಾಟ್ಯ ಕಲೆ ಕಲಿಯಲು ಬರುವ ಹುಡುಗಿ, ವ್ಯವಸ್ಥಿತವಾದ ಈ ರೀತಿಯಲ್ಲಿ ಬರುವುದು ಯೋಗ್ಯವಲ್ಲವೇ? ಹುಡುಗಿಯ ಪಾಲಕರು ಬಡವರಿರಬಹುದು, ಆದರೆ ನಮ್ಮ ಕಂಪನಿಗೆ ಅಷ್ಟೊಂದು ಬಡತನ ಬಂದಿಲ್ಲ. ಆದ್ದರಿಂದ ಈ ಜೈರಾನನ್ನು ಹೀಗೆ ಅಸ್ತವ್ಯಸ್ತ ಸ್ಥಿತಿಯಲ್ಲಿ ಕರಕೊಂಡು ಬರಲು ಕಾಕಾ ಅವರು ಹೇಳುವರೇ? ಛೇ! ಅವರೆಂದೂ ಹಾಗೆ ಹೇಳಲಾರರು ಎಂದು ಮುಂಗಾಲ್ ಪುಟಿಗೆಯ ಮಾತುಗಳನ್ನು ತುಸು ಧೈರ್ಯದಿಂದ ಮತ್ತು ತುಸು ಅಂಜಿಕೊಂಡು ನಾನು ಮಾತಾಡಿದೆ. ರಾತ್ರಿಯೂ ಬಹಳ ಆಗಿತ್ತು. ನಿದ್ರೆಯೂ ಎಳೆಯುತ್ತಿತ್ತು. ಹೀಗಾಗಿ ಎಲ್ಲರೂ ಅವಸರದಿಂದ ತಂತಮ್ಮ ಮನೆಯ ಕಡೆಗೆ ತೆರಳಿದರು.

ಆ ಕೋಣೆಯಲ್ಲಿ ಮಲಗುವ ಮಹನೀಯರೆಂದರೆ ಮೂರುನಾಲ್ಕು ಜನ ಮಾತ್ರ. ಆದರೂ ಅವರು ನಸುಕಿನಲ್ಲೆದ್ದು ಸರಿಗಮದ ಅಭ್ಯಾಸ ಮಾಡತಕ್ಕವರು.

೧೩. ಗುರುಗಳಿಗೆ ತಿರುದಕ್ಷಿಣೆ

ಹುಸೇನಿ ಮಾಸ್ತರರೆಂದರೆ ನನ್ನ ನಿಷ್ಠಾ ಗುರುಗಳು ಎಂಬುದನ್ನು ಎಂದೂ ಮರೆಯುವಂತಿಲ್ಲ. ಆದರೂ ಅವರ ಬಾಯಿಂದ ನುಸುಳುವ ತಪ್ಪು ಶಬ್ದ ಪ್ರಯೋಗಗಳನ್ನು ಕೇಳಿದರೆ ನನಗೆ ತಡಕೊಳ್ಳುವುದಾಗುತ್ತಿರಲಿಲ್ಲ. ೭ನೇ ತರಗತಿಯಲ್ಲಿ ಡಿ.ಸಂ.ಬೀ. ಪಾಟೀಲ ಮಾಸ್ತರರು ಶಬ್ದಗಳ ವ್ಯುತ್ಪತ್ತಿ ಪ್ರತ್ಯಯ, ಉಪಸರ್ಗ ಮೊದಲಾದ ವಿಷಯಗಳನ್ನು ಚೆನ್ನಾಗಿ ಮನನ ಮಾಡಿದ್ದರಿಂದ ಹಲವು ತಪ್ಪು ಶಬ್ದಗಳು, ಅಶುದ್ಧ ಉಚ್ಚಾರಗಳು ವಿದ್ಯಾ ಗುರುಗಳಾದ ಹುಸೇನಿ ಮಾಸ್ತರರಿಂದ ಕೇಳಿ ಬಂದರೆ ನಾನು ಅಣಕು ನುಡಿದು ಮೂದಲಿಸುತ್ತಿದ್ದೆ.

ದಾಮಾಜಿ ನಾಟಕದಲ್ಲಿ ಹುಸೇನಿ ಮಾಸ್ತರರು ಪ್ರತಿನಾಯಕ. ಆ ಪಾತ್ರದ ಹೆಸರು ಮುಜುಮದಾರ, ದಾಮಾಜಿ ತಾಲೂಕ ಅಧಿಕಾರಿ, ಮುಜುಮದಾರ ಅವನ ಕೈಕೆಳಗಿನ ಚಾಕರ. ಘೋರವಾದ ಬರಗಾಲ ಬಿದ್ದುದರಿಂದ ಜನರೆಲ್ಲ ಅನ್ನ ಅನ್ನ ನೀರು ನೀರು ಅನ್ನುತ್ತ ಪ್ರಾಣ ಬಿಡುತ್ತಿದ್ದರು. ಹಾದಿಹಾದಿಗೂ ಹೆಣ, ಬೀದಿಬೀದಿಗೂ ತಲೆಬುರುಡೆ ಕಾಣಿಸುತ್ತಿದ್ದವು.

ಈಗ ೧೨ ರೂ.ಗಳಿಗೆ ಸಿಗುತ್ತಿರುವ ಜೋಳ ಆವಾಗ ಒಂದೇ ರೂ.ಗೆ ಸಿಗುತ್ತಿತ್ತು. ಆದರೂ ಜನರು ಉಪವಾಸದಿಂದ ಸಾಯುವುದು ತಪ್ಪಲಿಲ್ಲ. ದಾಮಾಜಿ ದಯಾಳು, ಅವನ ಧರ್ಮಪತ್ನಿಯೂ ಅಂಥವಳೇ. ಹಸಿದು ಬಂದ ಬಡವರಿಗೆ ನಾಲ್ಕು ತುತ್ತು ಅನ್ನ ಹಾಕದೆ ಕಳಿಸುತ್ತಿರಲಿಲ್ಲ.

ದಾಮಾಜಿಯ ಮನೆಯೊಳಗಿನ ಸಾಮಾನು ಮಾರಿದರು. ಅವನ ಶ್ರೀಮತಿಯ ಮೈಮೇಲಿನ ಬಂಗಾರದೊಡವೆಗಳು ಸಪ್ಪಳಿಲ್ಲದೆ ಕೈಬಿಟ್ಟವು.

ಕಡೆಯದಾದ ಒಂದು ಉಪಾಯ ಮಾತ್ರ ಉಳಿಯಿತು, ಏನೆಂದರೆ ಸರಕಾರದ ಜೋಳ ಮಾತ್ರ ಒಂದು ಹಗೆಯಲ್ಲಿ ತುಂಬಿತ್ತು. ಆ ಸರಕಾರವೆಂದರೆ ಬೀದರದ ಬಾದಶಹ.

ಹಸಿದು ಬಂದ ಜನಜಂಗುಳಿಗಾಗಿ ದಾಮಾಜಿ ಸರ್ಕಾರಿ ಹಗೆ ತೆಗೆಯಿಸಿ ಇದ್ದಷ್ಟು ಧಾನ್ಯವನ್ನೆಲ್ಲ ಹಂಚಿಹಾಕಿ ಜನರನ್ನು ಬದುಕಿಸಿದನು. ಆದರೆ ಆ ಮುಜುಮದಾರನು ದಾಮಾಜಿ ಮಾಡಿದ್ದು ಅನ್ಯಾಯವೆಂದು ಸಾರಿ ಅವನ ಅಧಿಕಾರವನ್ನು ತಾನು ಗಿಟ್ಟಿಸಬೇಕೆಂದು ಯತ್ನಿಸಿದನು. ದಾಮಾಜಿ ಬಳಸಿಕೊಂಡ ಜೊಳದ ಬೆಲೆ ಒಂದು ಲಕ್ಷ ಅರವತ್ತೆಂಟು ಸಾವಿರ ರೂಪಾಯಿ.

ನಾಟಕದ ಅಭ್ಯಾಸವು ಈ ಸಂದರ್ಭವನ್ನು ಕುರಿತು ಸಾಗಿತ್ತು. ನಾನು ವಾಡಿಕೆಯಂತೆ ಕಾಕಾ ಅವರ ಮುಂದುಗಡೆಯಲ್ಲಿ ಕುಳಿತಿದ್ದೆ. ಹುಸೇನಿ ಮಾಸ್ತರರು "ಏಕಲಾಖ ಅಡಸಷ್ಟಿ ಹಜ್ಜಾರ" ಎಂದು ಉಚ್ಚರಿಸಿದ್ದು ನನಗೆ ಸರಿಯೆನಿಸಲಿಲ್ಲ. ಕಾಕಾ ಅವರಿಗೆ ಕಿವಿಮಾತಿನಂತೆ ಹೇಳಿದೆ ತಾವು ಮಾಸ್ತರ ರಾಗಿಯೂ, ಹಜ್ಜಾರ ಅನ್ನುವುದು ಸರಿಯಲ್ಲವಲ್ಲ ಎಂದು ನುಡಿದೆ ಕಾಕಾ ಅವರು ಸಹಜವಾಗಿ ಮುಗಳುನಕ್ಕರು.

ಅದನ್ನು ಕಂಡು ಹುಸೇನಿ ಮಾಸ್ತರರು ಸಿಟ್ಟಿಗೆ ಬಂದು ತೆಗೆದಿರಿಸಿದ ತಮ್ಮ ರುಮಾಲು ಸುತ್ತಿಕೊಳ್ಳುತ್ತ ಹೊರಬಿದ್ದು ಕಟ್ಟೆಯ ಮೇಲೆ ಕುಳಿತರು.

"ಚೋಟಿ ಚೋಟಿ ಹುಡುಗರು ಸಹ ನನ್ನನ್ನು ಅಣಕಿಸುತ್ತವೆ. ನಾನು ನಿಮ್ಮ ಮೇಳದಲ್ಲಿ ಏಕಿರಬೇಕು? ನನಗೆ ಪಾತ್ರ ನಿರ್ವಹಿಸುವುದು ಬೇಡ. ಮತ್ತಾರಿಗಾದರೂ ವಹಿಸಿಕೊಡಿರಿ" ಎಂದು ಖಡಾಖಂಡಿತವಾಗಿ ನುಡಿದರು.

ಕಾಕಾ ಅವರು ಅದನ್ನೆಲ್ಲ ಕೇಳಿಯೂ ಅಲ್ಲಿ ಒಂದು ಕ್ಷಣ ಸಹ ನಿಲ್ಲದೆ ಹೋಗಿಬಿಟ್ಟರು. ಎಲ್ಲಿಗೆ? ಅವರಿಗೆ ಅಷ್ಟೊಂದು ಅವಸರದಿಂದ ಕೈ ಕಾಲಿಗೆ ಹೋಗುವ ಸಂದರ್ಭ ಬರುತ್ತಿತ್ತು.

ಕಟ್ಟೆಯ ಮೇಲೆ ಕುಳಿತ ಪ್ರಮುಖರು, ಅಪ್ರಮುಖರು ಅನ್ನದೆ ಎಲ್ಲರೂ ಸೇರಿ ನನಗೆ ಬೈದೇ ಬೈದರು. ಕಂಪನಿಯಿಂದ ಇವನನ್ನೇ ತಳ್ಳಿ ಹಾಕಿದರೆ ಒಳ್ಳೆಯದಾಗುವುದೆಂದು ಕೆಲವರು ಸ್ಪಷ್ಟವಾಗಿ ಹೇಳಿದರು. ಆದರೆ ಕಾಕಾ ಅವರು ಆ ಮಾತು ನಡೆಯಿಸಿ ಕೊಡಬೇಕಲ್ಲ. ಲಿಂಗಣ್ಣ ಅಂದರೆ ಎಂಕಣ್ಣ ಕಾಕಾ ಅವರ ಸಲಗೆಯ ಕೂಸು, ಆ ಸಲಿಗೆಯ ಕೂಸು ಇಂದು, ಸಲಗೆಯ ನಾಯಿಯಾಗಿದೆ ಎಂದು ಮುಂತಾಗಿ ಆಕ್ರೋಶಿಸಿದರು. ಆದರೆ ಅವರಲ್ಲಿಯೂ ಕೆಲವೊಂದು ಜನ ಸಮತೋಲ ಬುದ್ಧಿಯವರೂ ಇದ್ದರು. ಗುರುಗಳಿಗೆ ಶಿಷ್ಯ ತಪ್ಪೆಣಿಸಬಾರದು ಎಣಿಸಿದ್ದಾನೆ, ಈಗ ಶಿಷ್ಯನಾದವನು ಗುರುಗಳ ಕಾಲು ಹಿಡಿದು ಕ್ಷಮೆ ಕೇಳಲಿ ಸಾಕು ಮಾತು ಮುಗಿದು ಹೋಗುತ್ತದೆ ಎಂದು ನಿರ್ಣಯಕ್ಕೆ ಬಂದು, ನನ್ನನ್ನು ಕರೆದು ಹೇಳಿದರು.

"ಹೋಗು ಕೈ ಮುಗಿದು ಗುರುಗಳ ಪಾದಕ್ಕೆರಗಿ ಕೇಳಿಕೋ ತಪ್ಪಾಯಿತೆಂದು" ನಾನು ಆ ಮಾತಿಗೆ ಸಮ್ಮತಿಸಿದೆ. ಆದರೆ ಹುಸೇನಿ ಮಾಸ್ತರರ ಬಳಿಗೆ ಒಬ್ಬನೇ ಹೋಗಲು ಹಿಂಜರಿಯುತ್ತಿದ್ದೆ.

ಇಬ್ಬರು ಮೂವರು ನನ್ನ ಜೊತೆಗೆ ಬನ್ನಿರಿ, ನಾನು ಗುರುಗಳಿಗೆ ತಪ್ಪಾಯಿತೆಂದು ಕೇಳಿಕೊಳ್ಳುತ್ತೇನೆ.

ಒಬ್ಬಿಬ್ಬರು ನನ್ನನ್ನು ಬೆಂಬಲಿಸಿದರು. ಹುಸೇನಿ ಮಾಸ್ತರ ಬಳಿಗೆ ನಾನು ಹೋಗಿ ಕೈ ಮುಗಿದು ನಿಂತೆ. ನೆರೆದ ಜನಕ್ಕೆ ಅಷ್ಟರಿಂದ ಸಮಾಧಾನ ವಾಗಲಿಲ್ಲ ತಪ್ಪಾಯಿತೆಂದು ಕಾಲಿಗೆ ಬೀಳು ಎಂದರು.

ನಾನು ಬೆದರುತ್ತ ಬೆಚ್ಚುತ್ತ, ಅವರ ಬಳಿಗೆ ಹೋಗಿ ಮಣಿದು ನನ್ನ ಕಡೆಯಿಂದ ಇನ್ನೊಂದು ಚ್ಯೂಕಾಯಿತು ಎಂದು ಕಾಲಿಗೆರಗಿದೆ, ಕೂಡಿದವರೆಲ್ಲಾ ಮತ್ತೆ ಖೊಳ್ಳನೆ ನಕ್ಕರು.

ಏಕಲಾಖ ಅಡಸಪ್ಪ ಹಜ್ಜಾರ ಎಂದು ತಪ್ಪು ಮಾಡಿದ್ದನ್ನು ಇನ್ನೊಂದು ಸಾರೆ ಚ್ಯೂಕ ಆಯಿತೆಂದು ಆಡಿದ್ದು ಅವಹೇಳನದ ಮಾತು ಅದು ಶಿಷ್ಯನಿಗೆ ಗುರುಗಳು ಕೊಟ್ಟ ಸಲಿಗೆ, ಅಷ್ಟೇ ಅಲ್ಲ ಅದು ಎಂಕಣ್ಣ ಕಾಕಾ ಅವರು ಚೋಟುದ್ದ ಪೋರನಿಗೆ ಕೊಟ್ಟ ಗೊಡ್ಡು ಸಲಿಗೆ ಎಂದರು.

ಈ ರೀತಿ ಅಂದಿನ ಕಾರ್ಯಕ್ರಮ ಅಂತಿಮಾವಸ್ಥೆಗೆ ಬಂದಿತು. ಆದರೆ ಮರುದಿನದ ಗತಿಯೇನು ಎಂದು ಕೆಲವರು ಹೊಟ್ಟೆಕಡಿಯುತ್ತಿತ್ತು. ಆದರೆ ಕಂಪನಿಯ ಬಿಗಿತ ಸಡಿಲಾಗಲಿಲ್ಲ. ವಾಡಿಕೆಯಂತೆ ಬೈಠಕಿ ಕೋಣೆಗೆ ಬರುವ ಜನರೆಲ್ಲರೂ ಬಂದರು. ಚೊಕ್ಕಟವಾಗಿ ಅಭ್ಯಾಸ ಸಾಗಿತು. ಅಂದು ಜೈರಾ ಸಹ ಇದ್ದುದರಲ್ಲಿಯೇ ಚಾಕಚಕ್ಯದಿಂದ ಬಂದಿದ್ದಳು, ನರ್ತನದ ಅಭ್ಯಾಸವನ್ನು ಒಪ್ಪಿಸಿದಳು.

ನಿಂಬರಗಿ ಜಾತ್ರೆ ಹತ್ತಿರಹತ್ತಿರಕ್ಕೆ ಬಂದಾಗ ಮೇಳದವರ ಮನಸ್ಸುಗಳೂ ಹತ್ತಿರಹತ್ತಿರ ಬರುತ್ತವೆ. ಪ್ರಯೋಗಗಳೂ ಸುಂದರವಾಗುತ್ತವೆ ನಾಲ್ಕು ಜನರಿಂದ ಶಾಬಾಸಗಿರಿಯೂ ಸಿಗುತ್ತದೆ. ಶ್ರೀ ಸಂಗಮೇಶ್ವರ ನಾಟಕ ಮಂಡಲಿಯ ಹತ್ತಿಪ್ಪತ್ತು ಜನ ತಮ್ಮ ಅಸ್ತಿತ್ವವನ್ನು ಕಾಯ್ದುಕೊಂಡು ಬಂತು ಹೊಸಹೊಸ ನಾಟಕಗಳನ್ನು ಕಲಿತರು, ಆಡಿದರು ಜಾತ್ರೆಗೆ ಭೂಷಣ ಒದಗಿಸಿದರು. ಚಡಚಣಕ್ಕೆ ಹೆಸರು ತಂದರು.

ಇನ್ನೇನು ಬೇಕು?

೧೪. ಸ್ವಾತಂತ್ರ್ಯ ಚಳುವಳಿಯ ಅಲೆ

ವಾಚನಾಲಯ ಸಂಪರ್ಕದಲ್ಲಿ ವೃತ್ತ ಪತ್ರಿಕೆಗಳನ್ನೋದುವುದು ಒಂದು ಹವ್ಯಾಸವೇ ಆಯಿತು. ಸ್ವಾತಂತ್ರ್ಯ ಚಳುವಳಿಯ ಮೂಲಾಕ್ಷರಗಳೆಂದರೆ ಖಾದೀಧಾರಣ ಮತ್ತು ನೂಲುವುದು. ಮಾಂಚೆಸ್ತರದಿಂದ ಬಟ್ಟೆ ತರಿಸಿಕೊಂಡು ಭಾರತವು ೬೦ ಕೋಟಿ ರೂ.ಗಳನ್ನು ಕಳಕೊಳ್ಳುತ್ತಿತ್ತು. ಅಷ್ಟು ಹಣವನ್ನು ಉಳಿಸಿಕೊಂಡು ಭಾರತೀಯರು ಸಮೃದ್ಧ ಜೀವನ ನಡೆಸಬಹುದಾಗಿದೆಯೆಂದು ನಮ್ಮ ರಾಷ್ಟ್ರೀಯ ಚಳುವಳಿಯ ಮುಖಂಡರು ಹೇಳುತ್ತಿದ್ದರು. ಇಂಗ್ಲೆಂಡವು ೬೦ ಕೋಟಿ ರೂ. ಉತ್ಪನ್ನವನ್ನು ಕಳಕೊಂಡರೆ ಕಂಗಾಲಾಗುವುದೆಂದೂ ಪತ್ರಿಕೆಗಳಲ್ಲಿ ಓದುತ್ತಿದ್ದೆವು.

ಗಾಂಧಿ ಅವರು ಹೇಳಿಕೊಡುವ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಸ್ವದೇಶೀ ವ್ರತ, ಅಸ್ಪೃಶ್ಯ ನಿವಾರಣೆ ಮೊದಲಾದವುಗಳೆಲ್ಲ ರಾಷ್ಟ್ರ ಸೇವೆಯ ಪ್ರಮುಖ ಅಂಗಗಳಾಗಿದ್ದವು.

ಅದೇ ತಿಳುವಳಿಕೆಯಿಂದ 'ಮರೆಮುಚ್ಚುಕ' ಎಂಬ ನಾಟಕ ಬರೆದು ಕಲಿತು, ಆಡಿ ಸಾಮಾಜಿಕರ ತಲೆತಿರುಗಿಸಿದ ವಿಷಯ ಹಳೆ ಸುದ್ದಿಯಾಗಿತ್ತು.

ತಕಲಿಯಲ್ಲಿ ನೂತರೂ ಒಂದು ದೇಶಸೇವೆ, ಗಾಂಧಿಟೊಪ್ಪಿಗೆ ಧರಿಸಿದರೂ ಒಂದು ರಾಷ್ಟ್ರಹಿತ ಎಂಬ ಭಾವನೆ ನಮಗೆ ವಾಸ್ತವಿಕವೆನಿಸಿತು.

ನಮ್ಮನ್ನಾಳನಿಂತವರೆಲ್ಲ ಇಂಗ್ಲಂಡದಿಂದಲೇ ಬಂದವರಾಗಿರಲಿಲ್ಲ. ಇಂಗ್ಲಿಷಿನವರದು ಅರಸೊತ್ತಿಗೆ, ಭಾರತದ ಸುಶಿಕ್ಷಿತ ವರ್ಗವೆನ್ನುವುದು

ಅರಸಾಳುಗಳ ಜಾತಿ, ಅರಸೊತ್ತಿಗೆಯೆಂದರೆ, ಬ್ರಿಟಿಶರು ಕುಳಿತಲ್ಲಿಂದಲೇ ಮಾಡುವ ಬೇಟ, ಆದರೆ ಅರಸಾಳುಗಳು ಮಾತ್ರ ಹಾಗಲ್ಲ. ಬ್ರಿಟಿಶರಿಂದ ಒದೆಸಿಕೊಂಡು ಪುಟಿದೇಳುವ ಕಾಲುಚೆಂಡು ಮತ್ತು ನಿಶ್ಯಸ್ತ್ರರಾದ ಭಾರತೀಯರ ಮೇಲೆ ಏರಿಹೋಗುವ ಹುಸಿಗುಂಡು, ಹಸಿಗುಂಡು.

ಈ ತಿಳುವಳಿಕೆಯಲ್ಲಿ ಎಳ್ಳಷ್ಟೂ ತಪ್ಪಿಲ್ಲದಿರಬಹುದು, ಅಥವಾ ಇರಲಿಕ್ಕೂ ಇಲ್ಲ. ಅದರಿಂದ ದಿನದಿನಕ್ಕೆ ಜನರ ತಲೆತಿನ್ನುವ ಹಾಗೂ ತಲೆ ಕೆಡಿಸುವ ಕೆಲಸ ಮಾತ್ರ ಅವ್ಯಾಹತವಾಗಿ ಸಾಗಿತು. ಅಧಿಕಾರಿಗಳೆಂದರೆ ಬ್ರಿಟಿಶರು ಸಾಕಿದ ನಾಯಿ, ಆ ನಾಯಿಗಳ ಒಡಲು ತುಂಬಿಸುವುದು ಭಾರತೀಯರ ಅನ್ನದಿಂದ. ಅನ್ನ ಹಾಕಿದವನನ್ನೇ ಕಚ್ಚುವ ಗುಣ ಕಲಿತರು. ಆಳರಸನನ್ನು ಅಂದರೆ ಆರಸಾಳುಗಳನ್ನು ಥೂ ಬಿಡುವವರೆಂದರೆ ತುತ್ತುಬಗೆಯವವರಲ್ಲ, ಸೊಗಸಾದ ಸರಪಳಿ ಹಿಡಿದವರು.

ನಾನು, ಧಾರವಾಡದ ಶಿಕ್ಷಕ ತರಬೇತಿ ವರ್ಗದಲ್ಲಿದ್ದಾಗ (೧೯೨೫ನೇ)ಲೇ ಕರ್ನಾಟಕ ಕುಲಪುರೋಹಿತರೆನಿಸಿದ ಆಲೂರ ವೆಂಕಟರಾಯರ ವಿಶ್ವಾಸವನ್ನು ಗಳಿಸಿದ್ದೆನಲ್ಲದೆ, ಆನುಷಂಗಿಕವಾಗಿ ಮಂಗಳವೇಢೆ ಶ್ರೀನಿವಾಸರಾಯರ, ಮೋಹರೆ ಹಣಮಂತರಾಯರ ಸಹಾನುಭೂತಿಯನ್ನೂ ಗಳಿಸಿದ್ದೆನು.

ಒಬ್ಬರು ಬಾಗಲಕೋಟೆಯ ಕನ್ನಡಿಗ ವಾರಪತ್ರಿಕೆಯ ಸಮರ್ಥ ಸಂಪಾದಕರಾಗಿದ್ದರೆ, ಇನ್ನೊಬ್ಬರು ವಿಜಾಪುರದ ಕರ್ನಾಟಕ ವೈಭವ ಸಾಪ್ತಾಹಿಕದ ಪ್ರಚಂಡ ಸಂಪಾದಕರಾಗಿದ್ದರು.

ಧಾರವಾಡದ ಶಿಕ್ಷಕ ತರಬೇತಿ ವರ್ಗದಿಂದ ಹೊರಬಿದ್ದ ಬಳಿಕ ನಾನು ಚಡಚಣದವನಾಗಿ ಮಾತ್ರ ಆಗಿ ಉಳಿಯಲಿಲ್ಲ, ಭತಗುಣಕಿಯವನೂ ಆಗಿಬಿಟ್ಟಿದ್ದೆ. ಅವೆರಡೂ ಗ್ರಾಮಗಳನ್ನೊಳಗೊಂಡ ವಿಸ್ತಾರವಾದ ಕ್ಷೇತ್ರದವನೂ ಆಗಿದ್ದೆನೆಂದು ಹೇಳುವುದು ಅಭಿಮಾನದ ಸಂಗತಿ.

ಭತಗುಣಕಿಯ ಮಗ್ಗುಲಲ್ಲಿಯೇ ಹಲಸಂಗಿ ಗ್ರಾಮ. ಅದು ಚೆನ್ನಮಲ್ಲಪ್ಪ ಪಿ.ಧೂಲಾ, ಕಾಪಸೆ ರೇವಪ್ಪ ಮೊದಲಾದ ವೀರತರುಣರು ವಾಸಿಸುವ ಮಧ್ಯಮ ತರಗತಿಯ ಗ್ರಾಮವಾಗಿತ್ತು.

ಒಮ್ಮೆ ಚಡಚಣ ಭಾಗದಲ್ಲಿ ಮಳೆ ಸರಿಯಾಗಿ ಬೀಳಲಿಲ್ಲ. ಆದ್ದರಿಂದ ಅಲ್ಲಿ ಮೆಲ್ಲನೆ ಬರಗಾಲದ ಲಕ್ಷಣಗಳು ಕಂಡುಬರತೊಡಗಿದವು. ಇಂಡಿ ತಾಲೂಕಿನ ತಪಶೀಲದಾರರು ತಪಾಸಣೆಯ ನೆವದಿಂದ ಚಡಚಣ ಗ್ರಾಮಕ್ಕೆ ಬಂದರು, ಊರ ಪ್ರಮುಖರನ್ನೆಲ್ಲ ಚಾವಡಿಗೆ ಕರೆಯಿಸಿ ಅವರ ತೊಂದರೆಗಳನ್ನೆಲ್ಲ ಕೇಳಿಕೊಂಡರಲ್ಲದೆ ಅವಕ್ಕೆ ಸೂಕ್ತವಾದ ಪರಿಹಾರವನ್ನು ಹೇಳಿದರು.

ಅಲ್ಲಿ ನೆರೆದ ಗ್ರಾಮದ ಪ್ರಮುಖ ಕೃಷಿಕರು-ವ್ಯಾಪಾರಸ್ಥರು ಒಂದರ್ಧ ಗಳಿಗೆಯಲ್ಲಿ ತಮಗೆ ಬೇಕಾದ ಸಹಾಯವೇನೆಂಬುದನ್ನು ಗ್ರಾಮದ ಪ್ರಮುಖ ಕೃಷಿಕರಾದ ಯೋಗಪ್ಪಬಗಲಿ ಎಂಬುವರ ಬಾಯಿಂದ ಹೇಳಿಸಿದರು-

ಚಾಲೂ ವರ್ಷದ ತೆರಿಗೆಯನ್ನು ಸೂಟು ಬಿಟ್ಟರೆ ಎಲ್ಲರಿಗೂ ಕ್ಷೇಮ. ಒಕ್ಕಲಿಗನ ಆರ್ಥಿಕ ಆರೋಗ್ಯ ಸರಿಯಾಗಿದ್ದರೆ ಉಳಿದ ಉದ್ಯೋಗಿಗಳಿಗೆ ಕ್ಷೇಮ. ತಹಶೀಲದಾರರು ಮರು ಪ್ರಶ್ನೆ ಮಾಡಿದರು -

"ಈ ಗ್ರಾಮದಲ್ಲಿ ಚಹದಂಗಡಿಗಳು ಎಷ್ಟಿವೆ? ಸೆರೆಸಿಂದಿ ಗಾಂಜಿಗಳ ವ್ಯಾಪಾರ ಎಷ್ಟೆಂಬುದು ನಿಮಗೆ ಗೊತ್ತಿರಲಿಕ್ಕಿಲ್ಲ. ಅದನ್ನು ನಾನು ಹೇಳುತ್ತೇನೆ. ಇಷ್ಟೆಲ್ಲ ದುಬಾರಿಯಾದ ಮತ್ತು ಅಪ್ರಸ್ತುತವಾದ ವೆಚ್ಚ ಮಾಡುವುದಕ್ಕೆ ಹಿಂಜರಿಯದ ಕೃಷಿಕರು ಹೊಲದ ತೆರಿಗೆ ಸೂಟ ಬಿಡಿರೆಂದು ಹೇಳುವುದಕ್ಕೆ ನೀವು ನಾಚುವುದಿಲ್ಲವಲ್ಲ! ಇಂಥ ಆಚರಣೆ ನಡೆಸುವವನಿಗೆ ಲುಚ್ಚ್ಯಾ ಅನ್ನುತ್ತಾರೆ. ಈ ಊರ ಪ್ರಮುಖರೆಲ್ಲ ಅದೇ ವರ್ಗಕ್ಕೆ ಸೇರಿದವರೆಂದು ತೋರುತ್ತದೆ."

ಎಂಬ ಮಾತು ಮುಗಿಯುವಷ್ಟರಲ್ಲಿ ಕೃಷಿಕ ಪ್ರಮುಖರು ಕೈ ಮುಗಿದು ವಿನಯದಿಂದ ಅದೇ ವಿನಂತಿಯನ್ನು ಬೇರೆ ಶಬ್ದಗಳಲ್ಲಿ ಹೇಳಲಾರಂಭಿಸಿದರು.

ಅದನ್ನು ಕೇಳಿ ತಹಶೀಲದಾರರ ಧನಿಯು ಪಧನಿಯವರೆಗೆ ಏರಿತು. "ಬೇಡ ಬೇಡ ಇಂಥ ಲುಚ್ಚ್ಯಾಗಿರಿಯು ನನ್ನ ಮುಂದೆ ನಡೆಯುವದಿಲ್ಲ" ಎನ್ನುತ್ತ ಎದ್ದು ಹೊರಟರು, ಹೋಗಿಯೇಬಿಟ್ಟರು. ತಮ್ಮ ವಾಹನದಲ್ಲಿ, ಚಡಚಣದ ಪ್ರಮುಖರೆಲ್ಲ ಅಲ್ಲ ತಿಂದ ಕೋಡಗನಂತೆ ಮುಖ ಸಿಂಡರಿಸಿ ಕೊಂಡು ನಿಂತರು. ಅದೊಂದೇ ಅವರಿಗೆ ಸುಲಭ ದಾರಿಯಾಯಿತು.

ಮೇಲ್ಕಂಡ ಘಟನೆ ಸುದ್ದಿಯೋಲೆಯಾಗಿ ಬಾಗಲಕೋಟೆಗೆ ಹೋಯಿತೆಂದು ಹಿಂದಿನಿಂದ ತಿಳಿಯಿತು. ಕನ್ನಡಿಗ ಪತ್ರಿಕೆಯ ಮುಖಪುಟದಲ್ಲಿ ಮುಕ್ಕಾಲು ಇಂಚು ಗಾತ್ರದ ದಪ್ಪಕ್ಷರಗಳಲ್ಲಿ.

"ಚಡಚಣದ ಪ್ರಮುಖ ಜನರಿಗೆ ತಹಶೀಲದಾರರಿಂದ ಅವಮಾನ! ಅಪಶಬ್ದ ಬೇರೆ! ಬೈಗಳ ಸುರಿಮಳೆ ಮೇಲೆ" ಎಂಬ ಸಂಗತಿ ಪ್ರಕಟವಾಯಿತು. ಸುದ್ದಿ ಚಡಚಣದ್ದು, ಸುದ್ದಿ ಮಾಡಿದ ಶ್ರೇಯಸ್ಸು ಇಂಡಿಯ ತಹಶೀಲದಾರರದು. ಸುದ್ದಿ ಕಳಿಸಿದವರು?

'ಕನ್ನಡಿಗ' ಪತ್ರಿಕೆಯ ನೂರುನೂರು ಪ್ರತಿಗಳು ಬಂದೇ ಬಂದವು ಮನೆಮನೆಗೂ ಹರಡಿದವು. ತಹಶೀಲದಾರರಿಂದ ಬೈಸಿಕೊಂಡಾಗ ಅಳುಮೋರೆ ಮಾಡಿದ ಚಡಚಣದ ಜನ ನೂರಿನ್ನೂರರಷ್ಟು. ಈಗ ಹೋರಾಟ ಮಾಡಲು ಸಾವಿರಾರು ಜನರು ಸಿದ್ಧರಾಗಿದ್ದರು.

ಕನ್ನಡಿಗ ಪತ್ರಿಕೆ ವಾಜಪೆ ಜಿಲ್ಲಾಧಿಕಾರಿಗಳ ಕಚೇರಿಗೆ ಕಳಿಸಲ್ಪಟ್ಟಿತೇನೋ ಕಲೇಕ್ಟರರು ಇಂಡಿಗೆ ಫೋನ್ ಮಾಡಿ ತಹಶೀಲದಾರರನ್ನು ಕರೆಯಿಸಿಕೊಂಡು ತಮ್ಮ ರೋಷವನ್ನೆಲ್ಲ ತೂರಿಕೊಂಡಿರಬೇಕು. ಆದರೆ ಚಡಚಣದ ರೈತರನ್ನು ಸಮಾಧಾನ ಪಡಿಸುವ ಬಗೆ ಹೇಗೆ? ವಾಜಪೆ ಅವರಿಗೆ ಅಂಥ ಮನಸ್ಸಿತ್ತು. ಅಂತೇ ಅವರಿಗೆ ಉಪಾಯ ಹೊಳೆಯಿತು.

ಶುಭಶ್ಯಶೀಘ್ರಂ! ಮರುದಿನ ಮಧ್ಯಾಹ್ನದೊಳಗಾಗಿ ಜಿಲ್ಲಾಧಿಕಾರಿಗಳು ಚಡಚಣಕ್ಕೆ ಬಂದು ಚಾವಡಿಯ ಮುಂದೆ ಇಳಿದರು. ಹಾಹಾ ಅನ್ನುವಷ್ಟರಲ್ಲಿ ಊರಜನರೆಲ್ಲ ಇಮ್ಮಡಿ ಮುಮ್ಮಡಿ ಸಂಖ್ಯೆಯಲ್ಲಿ ಚಾವಡಿಯ ಮುಂದೆ ನೆರೆಯಿತು.

ವಾಜಪೆ ಸಾಹೇಬರು ಚಾವಡಿ ಕಟ್ಟೆಯ ಮೇಲೆ ನಿಂತು, ಕೈಮುಗಿದು "ಚಡಚಣದ ರೈತರೆಲ್ಲರೂ ನನ್ನನ್ನು ಕ್ಷಮಿಸಲೇಬೇಕು" ಎಂದರು.

ತಪ್ಪುಗಾರರಾದವರು ತಹಶೀಲದಾರರು ಕ್ಷಮೆ ಕೇಳುವವರು ಜಿಲ್ಲಾಧಿಕಾರಿಗಳು.

ನೆರೆದವರಲ್ಲಿ ಕೆಲವರು ಗೋಣಗುಟ್ಟಿದರು, ಕೆಲವರು ನಿಚ್ಚಳವಾಗಿ ನುಡಿದರು. ಮಂದಿಯಲ್ಲಿ ಒದ್ದು ಸಂದಿಯಲ್ಲಿ ಕಾಲು ಹಿಡಿಯ ಬಂದಂತಾಯಿತು.

ಇನ್ನೊಂದು ಕಡೆಯಿಂದ ಸ್ವರ ಕೇಳಿಸಿತು - ತಹಶೀಲದಾರರ ಮುಖ ನೋಡಬೇಕಾಗಿದೆ ಅದನ್ನು ಮೊದಲು ತೋರಿಸಿರಿ.

ಜನರೇನು ಅಂದುಕೊಂಡರೂ ವಾಜಪೆ ಅವರ ಬಾಯಿಂದ ಅದೊಂದೇ ಶಬ್ದ ಕೇಳಬರುತ್ತಿತ್ತು - "ಕ್ಷಮಿಸಿರಿ, ದೊಡ್ಡ ಮನಸ್ಸಿನಿಂದ ಕ್ಷಮಿಸಿರಿ"

ಮರುವಾರದ "ಕನ್ನಡಿಗ" ಸಂಚಿಕೆ ತನ್ನ ಮುಖಪುಟದಲ್ಲಿ - "ಚಡಚಣ ರೈತರ ಮುಂದೆ ಸರ್ಕಾರವು ಡೊಗ್ಗಿತು!" ಎಂಬ ವಾಕ್ಯವು ಕಂಗೊಳಿಸಿತು. ಕಣ್ಣಿಲ್ಲದವನೂ ಓದಿಕೊಳ್ಳುವ ಹಾಗೆ ಮುದ್ರಿತವಾಗಿತ್ತು.

ಆ ಪ್ರಸಂಗದಿಂದ ಚಡಚಣ ಗ್ರಾಮದ ಪ್ರಮುಖರು ಪುಟಿದೆದ್ದರು, ಪತ್ರಿಕೆಗೆ ಸುದ್ದಿ ಕಳಿಸಿದವರು ಯಾರೆನ್ನುವುದು ಪೋಲೀಸ್ ಕಚೇರಿಗೆ ಮಾತ್ರ ಸಂಪೂರ್ಣ ತಿಳಿದಿತ್ತು. ಸಿಂಪಿ ಲಿಂಗಣ್ಣ ಚಡಚಣದವನು. ಭತಗುಣಕಿ ಕನ್ನಡ ಶಾಲೆಯಲ್ಲಿ ಶಿಕ್ಷಕನಾಗಿದ್ದಾನೆ, ಚಡಚಣದವರಿಗೆ ಸರಕಾರವೆಂದರೆ ಕಃ ಪದಾರ್ಥ!

೧೫. ಮೊಟ್ಟಮೊದಲಿನ ಅನುಭವಗಳು

ಹುಟ್ಟಿದಂದಿನಿಂದ ಸಾಯುವವರೆಗಿನ ಹಲವಾರು ವರುಷಗಳನ್ನು ಭೂಮಿಯ ಮೇಲೆ ಕಳೆದರೂ ಮೊಟ್ಟಮೊದಲಿನ ಅನುಭವಗಳು ಘಟಿಸುತ್ತಲೇ ಬರುತ್ತವೆ. ತಿನಿಸು, ಉಣಿಸು, ಮದುವೆ, ಫಲಶೋಭನ ಮುಂತಾದವು ಮುಖ್ಯವಾಗಿವೆ.

ನಾನು ೩ನೇ ತರಗತಿಯಲ್ಲಿ ಓದುತ್ತಿರುವಾಗ ನಮ್ಮ ಸೋದರತ್ತೆಯ ಅಪ್ಪಣೆಯನ್ನು ಮೀರುವಂತಿರಲಿಲ್ಲ. ಯಾಕೆಂದರೆ ಆಕೆಯ ಉಸ್ತುವಾರಿಯಲ್ಲಿಯೇ ನಮ್ಮ ಮನೆತನ ಸಾಗಿತ್ತು.

ಕೇಶೆಟ್ಟಿ ಎಂಬ ಶ್ರೀಮಂತರ ಮನೆಗೆ ಒಂದು ಚಿಕ್ಕ ತಂಬಿಗೆಯೊಂದಿಗೆ ಹೋಗಿ ಅಂಗಳದಲ್ಲಿ ನಿಂತು ಮಜ್ಜಿಗೆ ಕೊಡಿರಿ ಎಂದೆನು. ಮಾತು ತುಸು ತೊದಲು ತೊದಲಾಗಿತ್ತು. ಅದೇ ಕಾಲಕ್ಕೆ ಚೆನ್ನಪ್ಪ ಸಾಹುಕಾರರು ದೇವರ ಮನೆಯಲ್ಲಿ ಕುಳಿತು ಶಿವಪೂಜೆ ಮಾಡಿಕೊಂಡು ಲಿಂಗಪೂಜೆ ಮುಗಿಸಿ ಕುಡಿಯಲು ವಾಡಿಕೆಯಂತೆ ಹಾಲು ಕೇಳಿದರು. ನಾನು ಮಜ್ಜಿಗೆ ಕೇಳಿದಾಗ ಅವರು ಹಾಲು ಕೇಳಿದರೇನೋ.

ಚೆನ್ನಪ್ಪನವರು ಮೊದಲು ನನ್ನನ್ನು ಒಳಗೆ ಕರೆದು ತಮ್ಮೊಡನೆ ಕುಡಿಯಲು ಒಂದು ಬಟ್ಟಲು ಹಾಲು ಕೊಟ್ಟರು, ಒಲ್ಲೆನೆಂದರೂ ಕೇಳಲಿಲ್ಲ, ಕುಡಿಯಬೇಕಾಯಿತು. ಹಾಲಿನಲ್ಲಿ ಸಕ್ಕರೆ ಬೆರೆತಿತ್ತು. ನನ್ನ ಜೀವನದಲ್ಲಿ ಮೊದಲಸಾರೆ ಹಾಲು ಕುಡಿದದ್ದು ಆಗಲೇ.

ಅದರಂತೆ ಮೊದಲಸಾರೆ ಬೇಸನ್‌ಉಂಡಿ ತಿಂದಿದ್ದು ಗೋಡೀಹಾಳ ಮಾಸ್ತರರ ಮನೆಯಲ್ಲಿ. ಕರಂದೀಕರ ಸಾಹೇಬರೊಡನೆ ಗೋಡಿಹಾಳಕ್ಕೆ ಹೋದಾಗ, ಸಾಹೇಬರು ನನ್ನನ್ನು ಜೊತೆಗೆ ಕರೆದೊಯ್ದು, ಅತ್ಯುತ್ತಮ ನಿಬಂಧ ಬರೆಯಬಲ್ಲ ೬ನೇ ತರಗತಿಯ ವಿದ್ಯಾರ್ಥಿ ಚಡಚಣ ಶಾಲೆಯಲ್ಲಿ ಕಲಿಯುತ್ತಾನೆ. ಅವನ ಊರೂ ಅದೇ ಆಗಿದೆಯೆಂದು ವರ್ಣಿಸಿದ್ದರು.

ಭತಗುಣಕಿ ಶಾಲೆಯ ಸಹಾಯಕ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದಾಗ ಒಂದು ದಿವಸ ಮುಖ್ಯಗುರುಗಳು ನನ್ನನ್ನು ಊಟಕ್ಕೆ ಕರೆದರು. ಹೋಗಿದ್ದೆ ಹೋಳಿಗೆಯ ಊಟ, ಬಿಸಿಬಿಸಿ ಹೋಳಿಗೆ, ೪ ಪದರು ಮಡಿಚಿತ್ತು, ಜೊತೆಗೆ ಬಿಳಿಹಾಲು ಅಥವಾ ತುಪ್ಪ. ಹಾಲಿನಲ್ಲಿ ತೇಲುವ ತುಪ್ಪ ನನಗೆ ಗೊತ್ತು. ಆದರೆ ಅಂದಿನ ತುಪ್ಪವೆಂದರೆ ತಾನೇ ತಾನಾಗಿ ತೇಲಿಸುತ್ತಿತ್ತು. ಮತ್ತೇನು ಬರುವುದೋ ಎಂದು ನಿರೀಕ್ಷಿಸುವಷ್ಟರಲ್ಲಿ ತಗೊಳ್ಳಿರಿ ಎಂಬ ಶಬ್ದ ಕೇಳಿಸಿತು. ಅದರ ಹಿಂದೆ ಮುಗಿದ ಕೈಯಿತ್ತು.

ಮದುವೆಯಾದದ್ದು ಒಂದೇ ಸಲವಾದರೂ ಕನ್ಯೆ ನೋಡುವ ಅನುಭವವು ಮೂರುನಾಲ್ಕು ಸಾರೆ ಬಂದು ಹೋಯಿತು. ಒಂದು ಕನ್ಯೆಯನ್ನು ಗೊತ್ತು ಮಾಡಿ ಕುಂಕುಮ ಹಚ್ಚಿದ್ದೊಂದೇ ನಿಜವಾಯಿತು. ಆದರೆ ಪ್ಲೇಗಿನಿಂದ ಆ ಹುಡಿಗೆಯ ತಾಯಿತಂದೆಗಳು ಏಕಕಾಲಕ್ಕೆ ತೀರಿ ಕೊಂಡಿದ್ದರಿಂದ ಆ ಹುಡಿಗೆ ಯಾವುದೋ ಮಹಾರಾಷ್ಟ್ರ ನಗರದಲ್ಲಿ ಅಕ್ಕನ ಬಳಿಯಲ್ಲಿ ಬೆಳೆದದ್ದು ಅಷ್ಟೇ ಗೊತ್ತು. ಆಮೇಲೆ ಚೆನ್ನಪ್ಪ ಸಾಹುಕಾರರ ಇದ್ದೊಬ್ಬ ಕನ್ಯೆಗೆ ಕುಂಕುಮ ಹಚ್ಚಿತು. ಆದರೆ ಆ ಕನ್ಯೆ ಮರುವರ್ಷವೇ ಕಾಲವಶವಾಯಿತು. ಮೂರನೇ ಕನ್ಯೆ ನನ್ನ ಸೋದರತ್ತೆಯ ಮೊಮ್ಮಗಳು, ಮಾತುಕತೆ ಮುಗಿದವು. ನಮ್ಮ ಮನೆತನದ ಕುಲಗುರುಗಳು ಮಾತುಕತೆಯ ಸ್ವರೂಪವನ್ನು ವಿಕೃತಗೊಳಿಸಿದ್ದರಿಂದ ಆ ಕನ್ಯೆ ಹೇಳದೆ ಕೇಳದೆ ತನ್ನ ಹಾದಿ ಹಿಡಿಯಿತು.

ಗೊತ್ತು ಮಾಡಿದ ೨ ಕನ್ಯೆಗಳನ್ನು ಗೊತ್ತಿಗೆ ಹಚ್ಚಿ, ಮೂರನೇದನ್ನು ಗೊತ್ತರಿಯದಂತೆ ಮಾಡಿದ ವರನಿಗೆ ಅದೇ ವರ್ಗಕ್ಕೆ ಸೇರಿದ ಒಂದು ಕನ್ಯೆ ಅತ್ತಿಗೆಯ ಹಂಚಿಕೆಯಿಂದ ಸಿಕ್ಕಿತು. ಆ ಕನ್ಯೆ ಕೇಶೆಟ್ಟಿಯವರದೇ ಆಗಿತ್ತು.

ಹತ್ತಿರದ ಮನೆತನಕ್ಕೆ ಕೊಟ್ಟು ಕುಂಕುಮ ಹಚ್ಚುವ ಕೆಲಸ ಮುಗಿಸಿ ಇನ್ನೂ ಹತ್ತಿರದವರನ್ನಾಗಿ ಮಾಡಿಕೊಳ್ಳುವಷ್ಟರಲ್ಲಿ ಆ ವರನು ಬರ್ದಿಲಕ್ಕೆ ತೆರಳಿದನು. ಆದರೆ ಎರಡು ಕನ್ಯೆ ನುಂಗಿ ಒಂದನ್ನು ತಳ್ಳಿ ಹಾಕಿದ ವರನಿಗೆ, ಒಬ್ಬ ವರನನ್ನು ಆಹುತಿಗೊಂಡ ಕನ್ಯೆ ಸಿಗುವುದು ಜ್ಯೋತಿಶ್ಶಾಸ್ತ್ರ ಸಮ್ಮತಿಸಿದ ವಿಷಯ. ಅದೂ ಒಂದು ಹೊಸ ಅನುಭವವೇ, ನಾಲ್ಕು ಗಂಡು ಎರಡು ಹೆಣ್ಣು ಮಕ್ಕಳನ್ನು ನನ್ನುಡಿಗೆ ನೀಡಿ ಆಗಲಿಹೋದದ್ದು ಬಾಸಿಂಗಬಲದ ಪ್ರಭಾವವೋ. ನನಗಂತೂ ಅದು ತಿಳಿಯದು.

ಬಾಸಿಂಗಬಲ ಮದುವೆ ಆಗುವ ಪೂರ್ತಿಯಿದ್ದು ಒಗೆತನದ ಋಣಾನುಬಂಧವೇ ಇಲ್ಲದ ಬಾಲವಿಧವೆ ನನ್ನ ಇಂದಿನ ಹೆಂಡತಿ. ೨ ಹೆಣ್ಣು ೩ ಗಂಡುಗಳನ್ನು ಮಾತ್ರ ಹಡೆದರೂ ಪಂಚಪಾಂಡವರಂಥ ಐವರು ಗಂಡು ಮಕ್ಕಳಿಗೂ ನಾಲ್ವರು ಹೆಣ್ಣು ಮಕ್ಕಳಿಗೂ ತಾಯಾಗಿ ಬದುಕು ಮಾಡಿದ್ದು ಎಂಥ ಗೆಲವಿನ ಗುಟ್ಟೋ ತಿಳಿಯದು.

ಭತಗುಣಕಿ ಶಾಲೆಯ ಶಿಕ್ಷಕನಾಗಿದ್ದಾಗ ಹಿಂದಿನ ಸಹಪಾಠಿಯೊಡನೆ ಅವರ ಮನೆಯಲ್ಲಿ ೮-೧೦ ದಿನ ಇದ್ದಾಗ, ಹಳೆಯಗೆಳೆಯರಾದ ನಾವು ಹೋಳಿಗೆ ಮಾಡಲು ಕಲಿಯಲು ಪ್ರಯತ್ನಿಸಿದೆವು. ಆದರೆ ಅದರ ಪರಿಣಾಮ ನಗೇಗೀಡುಮಾಡಿತು. ೨೦ ಹೋಳಿಗೆ ಆಗಬೇಕಾಗಿದ್ದ ಹೂರಣದಿಂದ ಎಂಟೇ ಹೋಳಿಗೆ ಮಾಡಿಟ್ಟೆವು. ಅಲ್ಲದೆ ಒಂದು ಚಿಕ್ಕ ಬಿಂದಿಗೆ ತುಂಬುವಷ್ಟು ಸಾರು ಸಿದ್ಧವಾಯಿತು. ೨-೩ ದಿನ ಸಾಕಾಗಿ ಉಳಿಯಿತು. ಇದೂ ಒಂದು ಪ್ರಥಮಾನುಭವವೇ.

ಅಂಥದೇ ಇನ್ನೊಂದು ಪ್ರಥಮಾನುಭವವೆಂದರೆ ಹಸಿಮೆಣಸಿನಕಾಯಿಯ ಪಲ್ಲೆ ಮಾಡುವ ಸಾಹಸವನ್ನು ನಾನೊಬ್ಬನೇ ಮಾಡಿದೆ. ಹಲವಾರು ಸಲಕರಣೆಗಳನ್ನು ಒದಗಿಸಿಕೊಂಡು ಏಕರಸಗೊಳಿಸಿದ ಪಲ್ಲೆಯು ದೂರಿದ್ದ ವರನ್ನೂ ಆಕರ್ಷಿಸುವಂತೆ ಘಮಘಮಿಸಿತು. ಆದರೆ ಅದನ್ನು ಬಾಯಿಗಿರಿಸಿ ಕೊಂಡರೆ, ಗಲ್ಲಗಲ್ಲ ಬಡಕೊಂಡು ಬೊಬ್ಬೆ ಹೊಡೆಯುವಂತಾಯಿತು. ಹಾಗಾಗಲು ಕಾರಣವೊಂದೇ ಉಪ್ಪು ಹಾಕಲು ಮರೆತಿದ್ದು.

ಹೀಗೆ ಬಾಳಿನ ನೂರು ವರ್ಷಗಳಲ್ಲಿ ಪ್ರಥಮಾನುಭವಗಳು ನೂರಾರು ಆಗುವ ಸಂಭವವಿದೆ. ಮಾದರಿಗಾಗಿ ಇಲ್ಲಿ ಕೆಲವೊಂದು ಮಾತ್ರ ವಿವರಿಸಿದ್ದೇನೆ. ಹೊಸಹೊಸ ಅನುಭವಗಳು ಬಂದು, ಹಿಂದಿನ ಅನುಭವ ಗಳಲ್ಲಿನ ತಪ್ಪುಗಳನ್ನೂ ಹೇಳಿಕೊಡಬಲ್ಲವು.

ಮೊದಲಿನದು ಕೂಸುಬುದ್ಧಿ, ತರವಾಯದ್ದು ಪ್ರಾಯದ ಗುದ್ದಿ, ಕೊನೆಯದಾಗಿ ಬರುವುದು ಮರೆವಿನ ಸುದ್ದಿ. "ಇಳೀತ ಬಂದ್ಹಾಂಗ ತಿಳೀತ ಬರ್ತ್ಯದ" ಎಂದು ಅನುಭಾವಿಗಳು ಹಾಡುತ್ತಾರೆ. ಆ ಮಾತು ಹಾಡಿನಲ್ಲಿದ್ದದ್ದಷ್ಟೇ ಸತ್ಯ. ಮರೆತು ಮಾನವನಾದನಂತೆ. ಆದರೆ ಅರಿತು ಶರಣನಾಗುವುದು ಕ್ರಮಪ್ರಾಪ್ತ. ಆದರೆ ನಾವು ಹುಟ್ಟುಶರಣರೆಂದೇ ಬಗೆದ ಜಾತಿಗೆ ಸೇರಿದವರು. ಪ್ರಥಮಾನುಭವಗಳು ಬರುತ್ತಲೇ ಇರುವುದೊಂದು ನಿಯತಿ ಧರ್ಮ.

ಎಲ್ಲಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ ಸಾಹಿತ್ಯ ಎಲ್ಲರಿಗೂ ಇಲ್ಲ ಎಂಬ ಮಾತನ್ನು ಸರ್ವಜ್ಞನಂತೆ ಹೇಳುವವರು ಮತ್ತಾರೂ ಇಲ್ಲವೆಂದಾಗ ನೂರು ವರುಷಗಳ ಆಯುಷ್ಯವೇ ತರಬೇತಿಯ ಅವಧಿಯೆಂದು ಯಾಕೆ ಹೇಳಬೇಕು?

೧೬. ದೈಹಿಕ ಮತ್ತು ಆರ್ಥಿಕ ಆರೋಗ್ಯ

ನನ್ನ ವೃತ್ತಿ ಶ್ರೀಮಂತಿಕೆಯದಲ್ಲ. ತಿಂಗಳಿಗೆ ಬರುವ ೨೫ ರೂ. ಸಂಬಳದಲ್ಲಿ ಊಟ-ಉಡಿಗೆ, ಹಬ್ಬ-ಹುಣ್ಣಿಮೆ, ಅತಿಥಿಸತ್ಕಾರ-ಪ್ರವಾಸ ಮೊದಲಾದ ಕಾರ್ಯಕ್ರಮಗಳನ್ನು ನಿರ್ವಹಿಸಬೇಕು. ಆರ್ಥಿಕ ರೇಖೆಯೊಂದಿಗೆ ಆಯುಷ್ಯ ರೇಖೆಯೂ ಅವಶ್ಯವಾಗಿದೆ. ಮನೆತನದ ಹಿರಿಯನೆನೆಸಿರುವವನ ಆರ್ಥಿಕರೇಖೆ ಮನೆಯ ಮಂಡಲಿಗೆಲ್ಲ ಅನ್ವಯಿಸುತ್ತದೆ.

ಹಾಸಿಗೆಯಿದ್ದಷ್ಟು ಕಾಲು ಚಾಚುವುದು ಬೇರೆ, ಹಾಸಿಗೆ ನೋಡಿ ಕಾಲು ಚಾಚುವುದು ಬೇರೆ. ಒಂದು ಮಿತವ್ಯಯದ ಕುರುಹು, ಇನ್ನೊಂದು ಅತಿವ್ಯಯದ ಲಕ್ಷಣ. ಹುಟ್ಟಿನಿಂದಲು ಪ್ರಾಪ್ತಿಯ ದಾರಿಯನ್ನೇ ಕಾಣದ ನಾನು, ಕೈಯಲ್ಲಿದ್ದಷ್ಟರಿಂದ ಕೆಲಸ ಸಾಗಿಸುವುದು ಅನಿವಾರ್ಯವಾಯಿತು.

ಉದ್ದರಿ ತರುವ ರೂಢಿಗೆ ನಾನು ಆಸ್ಪದವನ್ನೇ ಕೊಡಲಿಲ್ಲ. ನಿಚ್ಚಳ ವ್ಯವಹಾರದವರೆನಿಸುವ ಅಂಗಡಿಯಲ್ಲಿ ನಮಗೆ ಬೇಕಾಗುವ ಸಾಮಾನುಗಳನ್ನು ತರುವುದು, ಅದೂ ರೋಖವ್ಯಾಪಾರ. ಅದರಿಂದ ಧಾರಣೆ ಸ್ಪಷ್ಟಗೊಳ್ಳುತ್ತದೆ. ಕೈಯಲ್ಲಿದ್ದ ಹಣ ತೀರಿದಾಗ, ತಿಂಗಳ ಸಂಬಳ ಬರಲು ತಡವಾದಾಗ ವಾಡಿಕೆಯ ಅಂಗಡಿಗೆ ಹೋಗಿ, ಸ್ಪಷ್ಟಪಡಿಸುವ ಮೊದಲ ಮಾತು ಯಾವುದೆಂದರೆ -

"ನಮ್ಮ ಮನೆಗೆ ಬೇಕಾಗುವ ಕಾಳು, ಮಸಾಲೆ, ಉಪ್ಪು, ಸಕ್ಕರೆ, ಎಣ್ಣೆ ಮೊದಲಾದವುಗಳೆಲ್ಲ ನಿಮ್ಮ ಅಂಗಡಿಯಲ್ಲಿಯೇ ಸಿಗುವಾಗ ಬೇರೆ

ಅಂಗಡಿಗೆ ನಾವು ಹೋದವರೇ ಅಲ್ಲ. ನಮ್ಮದು ರೋಖ ವ್ಯಾಪಾರವೆನ್ನುವುದು ನಿಮಗೆ ತಿಳಿದ ವಿಷಯವೇ ಆಗಿದೆ. ಈ ಸಾರೆ ನಮ್ಮ ಸಂಬಳ ಬರಲು ೪-೬ ದಿವಸ ತಡವಾಗುವಂತೆ ತೋರುತ್ತದೆ, ಅಲ್ಲಿಯವರೆಗೆ ಬೇಕಾಗುವ ಸಾಮಾನುಗಳನ್ನು ನಮಗೆ ಉದ್ದರಿ ಕೊಡಲೇ ಬೇಡಿರಿ. ಸದ್ಯಕ್ಕೆ ಸಾಧ್ಯವಿದ್ದರೆ ೧೦ ರೂ. ಕೈಗಡ ಕೊಡಿರಿ. ಹಣಕೊಟ್ಟು ಸಾಮಾನು ಒಯ್ಯುವೆವು. ಸಂಬಳ ಬಂದ ಕೂಡಲೇ ನೀವು ಕೊಟ್ಟ ಕೈಗಡ ಹಣ ಮರಳಿಸಲಾಗುತ್ತದೆ."

ಈ ಮಾತು ಅಂಗಡಿಕಾರನಿಗೆ ನೇರವಾದ ವ್ಯವಹಾರವೆನಿಸುವುದರಲ್ಲಿ ಸಂಶಯವೇ ಇಲ್ಲ. ಉದ್ದರಿ ಒಯ್ಯುವವರಿಗೂ ರೋಖ ಖರೀದಿದಾರರಿಗೂ ನಮ್ಮದು ಒಂದೇ ಧಾರಣೆಯೆನ್ನುವವರಲ್ಲಿ ನಾನು ಗಿರಾಕಿಯಾಗಿ ಹೋದವನೇ ಅಲ್ಲ.

ಚಡಚಣದ ಗಂಡುಮಕ್ಕಳ ಶಾಲೆಯ ಮುಖ್ಯಶಿಕ್ಷಕನಾಗಿ ಬಂದಾಗ ಇಪ್ಪತ್ತು ವರುಷದಷ್ಟು ಕಾಲ ಸೇವೆ ಸಲ್ಲಿಸಿದ್ದೆನೆಂದು ಹೇಳಲು ಅಡ್ಡಿಯಿಲ್ಲ. ಆ ಹೊತ್ತಿಗೆ ಮನೆತನದಲ್ಲಿರುವ ಜನರ ಸಂಖ್ಯೆ ಬೆಳೆದ ಪ್ರಮಾಣದಲ್ಲಿ ಸಂಬಳವೇನೂ ಬೆಳೆಯಲಿಲ್ಲ. ಗಳಿಸುವ ಬೇರೊಂದು ದಾರಿ ಕಂಡುಹಿಡಿಯ ಬಹುದಾಗಿತ್ತು. ಆದರೆ ನಾನು ಕೂಸುಳ್ಳ ಸೂಳೆಯಾಗಿದ್ದೆ. ಇತ್ತ ಕೂಸನ್ನೂ ಸಮಾಧಾನ ಪಡಿಸಲು ಸಾಧ್ಯವಿಲ್ಲ, ಅತ್ತ ಭುಜಗನನ್ನು ತೃಪ್ತಿ ಪಡಿಸಲೂ ಸಾಧ್ಯವಿಲ್ಲ.

ಒಂದು ಬುಧವಾರ ಅಂದರೆ ಚಡಚಣ ಸಂತೆಯ ದಿನ. ದಿನಾಂಕ ೬ ಅಂದರೂ ಸಂಬಳ ಬಂದಿರಲಿಲ್ಲ. ನಾನು ಯಾರಿಗೂ ಕೈಗಡ ಬಾಯ್ಗಡ ಕೇಳುವ ರೂಢಿಯಿಟ್ಟುಕೊಂಡಿರಲಿಲ್ಲ. ಸಂತೆಯ ಖರ್ಚಿಗೆ ಏನು ಉಪಾಯ ಮಾಡಬೇಕೋ ತಿಳಿಯದಾಯಿತು. ಏನೋ ಯೋಚಿಸಿದೆ; ಸರಿಯೆನಿಸಿತು. ಎದ್ದು ನಡೆದೆ.

ಅವಜಿ ಅವರ ಅಂಗಡಿಯಲ್ಲಿ ಮಾಲಿಕರು ಕುಳಿತಿದ್ದು ಕಾಣಿಸಿತು. ಅವರೂ ಒಂದಿಷ್ಟು ನನ್ನ ಸಹಪಾಠಿಗಳೇ ಆಗಿದ್ದರು. ನಾನು ತುಸು ಅಭಿನಯವನ್ನೇ ಮಾಡಿದೆನೆನ್ನಿರಿ, ಕೇಳಿದ - 'ಹತ್ತು ರೂ. ಚಿಲ್ಲರೆ ಕೊಡಿರಿ.'

ಅವರು ಪೆಟ್ಟಿಗೆಯಿಂದ ಚಿಲ್ಲರೆ ತೆಗೆಯಹತ್ತಿದರು. ನಾನು ಎದೆಯ ಮೇಲಿನ ಕಿಸೆಯಲ್ಲಿ ಏನೋ ಹುಡುಕಿದಂತೆ ಮಾಡಿದೆ. ಅವರು ಕೊಡ ಮಾಡಿದ ಚಿಲ್ಲರೆ ಇಸಗೊಂಡೆ. ಮೃದುವಾಗಿ ಹೇಳಿದೆ -

"ಹತ್ತು ರೂ. ನೋಟು ಮನೆಯಲ್ಲೇ ಉಳಿಯಿತೆಂದು ತೋರುತ್ತದೆ, ತಂದು ಕೊಡುವೆ" ಎಂದು ನುಡಿದು ಮನೆಯ ಹಾದಿ ಹಿಡಿದೆ.

ನಾನು ತಂದ ೧೦ ರೂ. ಕೈಗಡವೆನ್ನಬೇಕೋ ಸಾಲವೆನ್ನಬೇಕೋ ನನಗೇ ತಿಳಿಯದಾಯಿತು. ದೊಡ್ಡ ನೋಟು ಮುರಿಸಿ ಚಿಲ್ಲರೆ ನಾಣ್ಯಗಳನ್ನು ತಂದಿದ್ದು ನಿಜ. ಆ ವ್ಯವಹಾರ ಯಾವ ಜಾತಿಗೆ ಸೇರುವುದೋ ನನಗಿನ್ನೂ ತಿಳಿದಿಲ್ಲ.

ಮರುದಿನ ಗುರುವಾರ ೧೦ ಗಂಟೆ ಹೊತ್ತೇರುವಷ್ಟರಲ್ಲಿ ತಾಲೂಕು ಸಿಪಾಯಿ ಬಂದು, ನಮ್ಮೆಲ್ಲರ ಸಂಬಳಕೊಟ್ಟು ಹೋದನು. ಆ ಕಾರಣದಿಂದ ಮೊದಲು ಅವಜಿ ಅವರ ಅಂಗಡಿಗೆ ಹೋಗಿ ೧೦ ರೂ. ನೋಟು ಕೊಟ್ಟು ಬಂದೆ. ಇಂಥ ಸಂದರ್ಭಗಳು ಹಲವು ಸಾರೆ ಬಂದಿವೆ, ಹಲವು ವಿಧವಾಗಿ ಬಂದಿವೆ, ಹಲವಾರು ಜನರೊಡನೆ ಬಂದಿವೆ. ಆದರೆ ನಾನಿರುವುದು, ಇದ್ದಂತಿರೋ ಸಿದ್ಧೇಶ್ವರಾ.

ವೈಷ್ಣವ ದಾಸರಂತೆ - "ನಾನೇಕೆ ಬಡವನೋ ನಾನೇಕೆ ಪರದೇಶಿ" ಎಂದು ದಿನಾಲು ಹಾಡುತ್ತಿದ್ದರೆ ನಮ್ಮ ಹರುಕತನ ಹಿಂಗುವುದೇನೋ ನೋಡಬೇಕೆಂದು ಹೊಸ ಪ್ರಯೋಗ ಆರಂಭಿಸಿದೆ. ಆದರೆ ಪ್ರಯೋಗ ಅಷ್ಟೇ ಹೊಸದು, ವ್ಯಕ್ತಿ ಮಾತ್ರ ಹಳೆಯ ಒಗ್ಗ, ಹುಟ್ಟುಗುಣ ಸುಟ್ಟರೂ ಹೋಗದು, ಹುಗಿದರೂ ಹೋಗದು. ಗುಣದ ಬದಲಾವಣೆಯೋ ರೂಪಾಂತರವೋ ಆಗಿಬಿಟ್ಟರೆ ಮಾತ್ರ ಮನುಷ್ಯನ ಮನುಷ್ಯತ್ವ ಬದಲಾಗುವುದೆಂದು ತೋರುತ್ತದೆ.

ಮುವತ್ತೈದು ವರ್ಷಗಳ ಸೇವಾ ದಿನಗಳಲ್ಲಿ, ಮನೆಯಲ್ಲಿ ಉಣ್ಣು ತಿನ್ನುವುದಕ್ಕೆ ಹತ್ತೆಂಟು ಹೊಸ ಒಡಲುಗಳು ಕಾಣಿಸಿಕೊಂಡವೇ ಹೊರತು, ಸಂಬಳ ಮಾತ್ರ ಇಮ್ಮಡಿಯಾದರೆ ಹೆಚ್ಚಾಯಿತು, ಮುಮ್ಮಡಿಯಾದರೆ

ಕಡಿಮೆಯಾಯಿತು. ಕೊಟ್ಟಷ್ಟೇ ಸ್ವೀಕರಿಸುವುದು ನಮ್ಮ ಧರ್ಮವಾಗಿತ್ತು. ಬೇಡಿದಷ್ಟು ಪಡೆಯುವ ಭಯೋತ್ಪಾದಕನಾಗುವ ದಾರಿ ನನಗೆ ಹಾಳತವಾಗುವಂತಿರಲಿಲ್ಲ.

ಪಾಂಡಿಚೇರಿ ಶ್ರೀ ಅರವಿಂದ ಆಶ್ರಮದ ನೇರವಾದ ಸಂಬಂಧ ವುಂಟಾದದ್ದು ೧೯೪೨ನೇ ಆಗಸ್ಟ್‌ದಿಂದ. ಆದರೆ ೧೯೨೪ರ ಸುಮಾರಿನಲ್ಲಿಯೇ ಅವರ ವಿಚಾರಗಳತ್ತ ಮನಸ್ಸು ಹೊರಳಿತು, ಅರಳಿತು, ಜೀವನವೆಂದರೆ ಓಡಿದತ್ತ ಬೆನ್ನು ಕೊಡುವ ಮೃದುತ್ವವೊಂದೇ ಅಲ್ಲ, ನನಗೇಕೆ ಬಡಿಯುವುದು ಎಂದು ಎದುರಿಸುವುದೂ ನಮ್ಮ ಧರ್ಮವೇ ಆಗಿತ್ತು.

ಜಗವೆಲ್ಲ ನಗುತಿರಲಿ, ಜಗದಳುವು ನನಗಿರಲಿ ಎನ್ನುವ ವಿಶಾಲ ಭಾವನೆ ನನಗಂತೂ ಬೇಡ, ಜಗವೆಲ್ಲ ನಗುತಿರಲಿ ಎನ್ನುವುದಷ್ಟೇ ಸಾಕು. ನನಗೆ, ಜಗದಳುವು ನನಗಿರಲಿ ಎಂಬ ಸಗಟು ವ್ಯಾಪಾರಿಯಾಗುವ ದಾರಿ ನನಗೆ ಅಸ್ವಾಭಾವಿಕ. ಜಗದಲ್ಲಿ ಯಾರೂ ಅಳಕೂಡದು, ಎಲ್ಲರೂ ಕೂಡಿ ಕೊಂಡು ನಗೋಣ, ಇದು ನನ್ನ ಹುಟ್ಟುಸ್ವಭಾವ. ಅತ್ತರೆ ಒಬ್ಬನೇ ಅಳ ಬೇಕಾಗುವದು, ನಕ್ಕರೆ ಎಲ್ಲರೂ ಕೂಡಿಕೊಳ್ಳುವರು. ಯಾಕೆಂದರೆ ನಾವು ಈ ಲೋಕಕ್ಕೆ ಹುಸಿನಗುತ ಬಂದವರು. ಅದರಂತೆ ತುಸುನಗುತ ತೆರಳುವರು ಅಂದಾಗ ಬಾಳುವ ಅಪೇಕ್ಷೆಯನ್ನು ಅಭೀಪ್ಸೆಯನ್ನಾಗಿ ಏಕೆ ಮಾರ್ಪಡಿಸಿ ಕೊಳ್ಳಬಾರದು? ದೈಹಿಕ ಮತ್ತು ಆರ್ಥಿಕ ಆರೋಗ್ಯಗಳೆರಡೂ ಸರಿಯಾಗಿರದಿದ್ದರೆ, ನಾವು ಕುಂಟರಾಗುವುದು ನಿಶ್ಚಿತ. ಕುಂಟುವುದೇ ನಮ್ಮ ಜನ್ಮಸಿದ್ಧ ಹಕ್ಕು ಆಗಿ ಬಿಡುವದು. ಬೇಡಿದರೆ ಬೇಡಿದಷ್ಟು ಮಾತ್ರ ಸಿಗಬಹುದು ಆದರೆ ಬೇಡದಿದ್ದರೆ ಬೇಕಾಗುವಷ್ಟು ಸಿಗವದು ಎಂದು ಶ್ರೀಮಾತೆಯವರು ಹೇಳುತ್ತಾರೆ. ಶರಣರಂತೂ ಬೇಡಲಾರೆ ಎಂದರು, ತಿಳಕೊಳ್ಳುವುದು ತೀರುತ್ತಲೆ ತಿಳುವಳಿಕೆಯುಂಟಾಗುವಂತೆ, ಬೇಡುವುದು ಬೇಡವೆನಿಸಿದರೆ ಬೇಕಾದುದೆಲ್ಲ ಕೈಗೆ ಬರುವದು. ಎತ್ತಲಾರದಷ್ಟು ಗಳಿಸಿ ಕೃತ್ರಿಮ ಶ್ರೀಮಂತನಾಗುವುದಕ್ಕಿಂತ ಅಚ್ಚ ಶ್ರೀಮಂತನಾಗುವ ದಾರಿಯನ್ನು ಶ್ರೀಮಾತಾರವಿಂದರು ಹೇಳಿಕೊಟ್ಟಿದ್ದು ನನಗೆ ಸಮ್ಮತವಾಗಿದೆ.

ಧನಬಲವು ಮೂಲತಃ ಪರಮೇಶ್ವರನದು. ಅದು ಈಗ ಅಸುರ-ರಾಕ್ಷಸರ ವಶದಲ್ಲಿದೆ. ಅದನ್ನು ದಾಳ ಹಾಕಿಯೇ ಗಳಿಸಿ ತರಬೇಕು, ಮನೆಯೊಡತಿಯಾದ ಮಾತೆಗೆ ಒಪ್ಪಿಸಬೇಕು. ನಿಮ್ಮೆಣಿಕೆಯಲ್ಲಿ ಯಾವುದು ನಿಜವಾದ ಧರ್ಮಮಾರ್ಗವೋ ಅದಕ್ಕಾಗಿ ತುಸುತುಸು ಅರ್ಪಿಸುತ್ತ ಹೋಗುವ ಸಾಧನೆಯಿಂದ ಹಿಡಿ ಬೀಜ ಬಿತ್ತಿದರೆ ಪಡಿಕಾಳು ಪ್ರತಿಯಾಗಿ ಸಿಕ್ಕುವವು. ಅದೇ ಶ್ರೀಮಂತನಾಗುವ ಶ್ರೇಷ್ಠವಾದ ದಾರಿ. ಹಾಗೆ ಗಳಿಸಿದ ಶ್ರೀಮಂತಿಕೆ ಅಚಲವಾದದು. ಆಸ್ತಿಯೆಲ್ಲ ತಂದೆ-ತಾಯಿಗಳದಿದ್ದರೂ ಮಕ್ಕಳಾದ ನಾವು ಈ ಮನೆ ನನ್ನದು, ಈ ಹೊಲ ನನ್ನದು ಅನ್ನುವಂತೆ, ಲೋಕಗಳ ತಂದೆಯ ಶ್ರೀಮಂತಿಕೆಗೆ ವಾರಸನಾಗುವ ದಾರಿಯನ್ನು ಶ್ರೀ ಮಾತಾರವಿಂದರು ಹೇಳಿಕೊಟ್ಟಿದ್ದು ನನಗೆ ಆಪ್ಯಾಯಮಾನವಾಗಿದೆ. ಬೇಡಿದಷ್ಟು ನಮಗೆ ಸಿಗದಿದ್ದರೆ ಬೇಕಾದಷ್ಟು ಸಿಗುವುದು ಮಾತ್ರ ನಿಶ್ಚಯ.

ಪ್ರಾಮಾಣಿಕ ರೀತಿಯಲ್ಲಿ ಖರ್ಚು ಮಾಡುವ ಪ್ರಸಂಗದಲ್ಲಿ ಅದನ್ನು ಪೂರಯಿಸುವಷ್ಟು ಧನವನ್ನು ನೀಡಲಾಗುತ್ತದೆ.

ಅವಶ್ಯವಿರುವಷ್ಟು ಖರ್ಚಿಗಾಗಿ ಹಣ ಕೇಳುವುದನ್ನು ಬಿಟ್ಟು, ನಾವು ತಂದೆಯ ಸೊಂಟದಲ್ಲಿ ಕಟ್ಟಿದ್ದ ಕೀಲಿ ಕೈಯನ್ನೇ ಬೇಡುವವರು ನಾವಾಗ ಬಾರದು. ಹಾಗೆ ಮಾಡಿದರೆ ನಮ್ಮ ಶ್ರೀಮಂತಿಕೆ ಇನ್ನಷ್ಟು ದೃಢವಾಗುವುದು, ಧನದ ಒಡೆಯರಾಗಬೇಕೆನ್ನುವ ಹುಚ್ಚು ಛಲದಿಂದ, ಧನದ ಆಳೋ ತೊತ್ತೋ ಆಗುವ ದುರ್ಭಾಗ್ಯವನ್ನು ತಪ್ಪಿಸಿಕೊಳ್ಳುವ ಶ್ರೀಮಂತಿಕೆ ನಮಗೆ ಬೇಕು. ಧಾರುಣಿಯೆಲ್ಲ ದೈವತವಾಗಿ ಕಾಣುವವರು ಮಾತ್ರ ಅಚಂಚಲ ಲಕ್ಷ್ಮಿಯ ಪುತ್ರರು ಅಂಥ ಶ್ರೀಮಂತಿಕೆಯನ್ನು ಜಗಜ್ಜನನಿಯು ನನಗೆ ಕಾಲಕಾಲಕ್ಕೆ ಒದಗಿಸುತ್ತ ಬಂದಿದ್ದಾಳೆ. ಪೆಟ್ಟಿಗೆಯ ಕೀಲಿಯನ್ನು ನಾನು ಹಿಂದೆ ಬೇಡಿಯೂ ಇಲ್ಲ, ಮುಂದೆ ಬೇಡುವುದೂ ಇಲ್ಲ.

ಮರವೇ, ನೀನು ನನ್ನ ತಂದೆಯೋ ನನ್ನ ಮಗನೋ ಹೇಳಬಲ್ಲೆಯಾ ಎಂದು ಮರದ ಕೆಳಗಿನ ಮಣ್ಣಿನಲ್ಲಿ ಬಿದ್ದ ಬೀಜ ಕೇಳುವಂತೆ, ನಾವು ಜಗದೀಶನನ್ನು ಕೇಳಬಹುದಾಗಿದೆ. ಮರ ಎನ್ನುವುದು ಬೀಜದ ತಂದೆಯೂ ಅಹುದು, ಬೀಜದ ಮಗುವೂ ಅಹುದು.

ಹುಚ್ಚು ಹುಡದಿಯ ಹುಡುಗರಂತೆ ನಾವು ಅಮಿತ ಸಂತಾನದ ಕೃಷಿಯನ್ನೇನೋ ಮಾಡುವೆವು. ಆ ಬೆಳೆಯ ಸರಿಯಾದ ಪಸಲು ಕೊಡುವಂತೆ ಏರ್ಪಾಡು ಮಾತ್ರ ಮಾಡುವುದಿಲ್ಲ. ಇದೇ ಖೇದಕರ. ಅಂತೆಯೇ ಮಹಾ ಖೇದಕರವೂ ಆಗಿದೆ.

ಹೆಣ್ಣು ಗಂಡು ಸೇರಿ ಒಂಬತ್ತು ಮಕ್ಕಳು ಈ ಹಳ್ಳಿಯ ಬಡ ಶಿಕ್ಷಕನ ಮನೆಯಲ್ಲಿ ಹೇಗೆ ಬೆಳೆದರೋ, ಹೇಗೆ ಆರೋಗ್ಯವಂತರಾದರೋ ಹೇಳಲಿಕ್ಕೆ ನನಗೆ ಸಾಧ್ಯವಿಲ್ಲ. ನನ್ನ ಮತ್ತು ಮಕ್ಕಳ ಸಂಬಂಧವೆಂಥದು ಎಂಬುದನ್ನು ಯೋಚಿಸದಿರುವುದೂ ದುಃಖ ಮೂಲವೆಂದು ನಾನು ಭಾವಿಸಿದ್ದೇನೆ. ಒಂಬತ್ತು ಜನ ಮಕ್ಕಳು ಅತ್ತು ನನ್ನ ತಲೆಕೆಡಿಸಿಲ್ಲ, ಬೇಡಿ ಉರುಳಾಡಿಲ್ಲ. ಏನು ತಿಂದು ಬೆಳೆದರೊ ಏನು ಕುಡಿದು ತಣಿದರೋ ಹೇಳುವುದಕ್ಕೆ ನಾನು ಅಸಮರ್ಥನಾಗಿದ್ದೇನೆ.

ವ್ಯಕ್ತಿಗೂ ಶ್ರೀಮಂತಿಕೆಗೂ ಇರುವ ಸಂಬಂಧ ಎಂಥದಿರಬೇಕೆನ್ನುವುದನ್ನು ಭಾವನೆ ಮಾತ್ರ ಹೇಳಿಕೊಡುವಂತೆ ಮಕ್ಕಳ ಜೋಪಾಸನೆಯನ್ನು ಯಾವ ಭಾವನೆಯಿಂದ ಸಾಗಿಸಬೇಕೋ ಎಂಬ ತಿಳುವಳಿಕೆಯನ್ನು ನನಗೆ ಶ್ರೀಮಾತಾರವಿಂದರೇ ದಯಪಾಲಿಸಿದರೆಂದು ಬಗೆದಿದ್ದೇನೆ, ಭಾವಿಸಿದ್ದೇನೆ. ಆ ವಿಷಯವನ್ನು ಸ್ಪಷ್ಟಪಡಿಸುವುದಕ್ಕಾಗಿ ಒಂದು ಕಥೆಯನ್ನು ರೂಪಿಸಿ ಕೊಂಡಿದ್ದೇನೆ. ಅದು ಯಾವುದೆಂದರೆ -

ಒಂದು ಗ್ರಾಮದಲ್ಲಿ ಒಬ್ಬ ಘನಶ್ರೀಮಂತನ ಹೆಂಡತಿ ಗಂಡು ಮಗುವನ್ನು ಹೆತು ಅಸುನೀಗಿದಳು. ಕುದುರೆ ಕಳಕೊಂಡು ಖೋಗೀರು ಹೊರುವ ಪ್ರಸಂಗ ಆ ಘನ ಶ್ರೀಮಂತನಿಗೆ ಉಂಟಾಯಿತು. ತಾಯಿಯನ್ನು ಕಳಕೊಂಡ ಕೂಸು ಅರಮನೆಯಲ್ಲಿ ಹಲಬುತ್ತಿದೆ. ಅದು ಶ್ರೀಮಂತಿಕೆಗೂ ಅವಮಾನ, ಶ್ರೀಮಂತನಿಗೂ ಅವಹೇಳನ.

ಆ ಉಪ್ಪರಿಗೆಯ ಮಗ್ಗುಲಿನಲ್ಲಿರುವ ಒಂದು ಗುಡಿಸಲಿನಲ್ಲಿ ಬಡವಿ ಯೊಬ್ಬಳು ಅದೇ ಸಂದರ್ಭದಲ್ಲಿ ಗಂಡು ಮಗುವಿನ ತಾಯಿಯಾಗಿದ್ದಳು. ಈ ಸುದ್ದಿ ಆ ಶ್ರೀಮಂತನಿಗೆ ತಿಳಿಯಿತು. ಆತನು ಒಬ್ಬಿಬ್ಬ ಸ್ನೇಹಿತರೊಡನೆ ಆ ಬಡವಿಯ ಮನೆಗೆ ಬಂದು ವಿಚಾರಿಸಿದನು.

"ನಿನ್ನ ಮಗುವಿನೊಡನೆ ನನ್ನ ಮಗುವಿಗೂ ಮೊಲೆಯುಣಿಸುವುದಕ್ಕೆ ಒಪ್ಪುತ್ತೀಯೋ? ನಾನು ಎಲ್ಲ ಅನುಕೂಲತೆಗಳನ್ನು ಒದಗಿಸುತ್ತೇನೆ"

ಆ ಮಾತು ಕೇಳಿ ಬಡವಿ ತಳಮಳಿಸಿದಳು. ಪರಿಸ್ಥಿತಿಯ ಅನುಕೂಲವಿಲ್ಲದಿದ್ದರೂ ಮನಸ್ಥಿತಿಯು ಆ ತಾಯಿಯ ಕಂದನ ಸಲುವಾಗಿ ಅಲ್ಲೋಲಕಲ್ಲೋಲವಾಯಿತು. ಶ್ರೀಮಂತರ ಮಾತಿಗೆ ಸಮ್ಮತಿಸಿದರೆ ಹೇಗೆ, ಬಿಟ್ಟರೆ ಹೇಗೆ ಎಂದು ಯೋಚಿಸತೊಡಗಿದಳು. ಕೊನೆಯಲ್ಲಿ ಆ ಅನಾಥ ಕೂಸು ಕಣ್ಣ ಮುಂದೆ ಬಂದು, ಕೈ ಮಾಡಿತು ಎತ್ತಿಕೋ ಎಂದು. ಆ ಸುಪ್ತ ಸೂಚನೆಯನ್ನು ಅನುಸರಿಸಿ ಆ ಬಡವಿ ಶ್ರೀಮಂತನ ತಾಯಿಲ್ಲದ ಕಂದನಿಗೂ ಮೊಲೆಯೂಡಿಸಲು ಒಪ್ಪಿಕೊಂಡಳು. ಆಮೇಲೇನು ಉಪ್ಪರಿಗೆಯ ಮಂದಿರವನ್ನಿಳಿದ ಕೂಸು, ಆ ಬಡವಿಯ ಗುಡಿಸಲಿಗೆ ಬಂತು ರನ್ನದೊಟ್ಟಿಲಿನಿಂದ, ರಗಟೆಯ ಜೋಳಿಗೆಯಲ್ಲಿ ಪವಡಿಸಿತು. ಅಳು ನುಂಗಿ ಮುಗುಳು ನಕ್ಕಿತು ಕೂಸು. ಅದನ್ನು ಕಂಡು ಶ್ರೀಮಂತನಿಗೆ ಹಿಡಿಸದಷ್ಟು ಆನಂದವಾಯಿತು ಆ ಆನಂದವು ಆತನ ಮನಸ್ಸಿನಲ್ಲಿ ಯಾವ ಪರಿಣಾಮ ಒದಗಿಸಿತೆಂದರೆ

"ನನ್ನಂಥ ಕೋಟ್ಯಾಧೀಶನ ಮಗುವಿಗೆ ಮೊಲೆಯುಣಿಸುವ ತಾಯಿ ಹಳೆಯ ಸೀರೆ ಉಡಬೇಕೇ? ತಂಗಳು ರೊಟ್ಟಿ ತಿನ್ನಬೇಕೇ? ಆಕೆಯ ಹಾಲು ಹಯನದ ಸಂಪರ್ಕವಿಲ್ಲದಿದ್ದರೆ, ನನ್ನ ಶ್ರೀಮಂತ ಶಿಶುವಿನ ಹೊಟ್ಟೆ ಹೇಗೆ ತಣಿದೀತು?" ಇತ್ಯಾದಿ.

ಮುಂದಿನ ತಾಸೆರಡು ತಾಸುಗಳಲ್ಲಿ ಆಕೆಯ ಗುಡಿಸಲಿಗೆ ಒಂದು ಹೇರು ಗೋದಿ ಬಂತು.

ಅಂಗಳಕ್ಕೆ ಹಿಂಡುವ ಹೊಸ ಮಣಕು ಬಂತು.

ರಾಜಕುಮಾರನಂಥ ಕಂದನನ್ನು ಎತ್ತಿಯಾಡಿಸುವವಳಿಗೆ ಪೀತಾಂಬರ ಸೀರೆ ಕುಪ್ಪಸ ಬೇಡವೇ ಎಂದು ಬಹುಬೆಲೆಯ ಸೀರೆ ಕುಪ್ಪುಸಗಳನ್ನು ಶ್ರೀಮಂತನು ಗುಡಿಸಲಿಗೆ ಕಳಿಸಿ ಕೆಲಸಮಾಡುವ ಒಬ್ಬ ಹೆಣ್ಣಾಳನ್ನು ಹುಡುಕಿ ಆ ಗುಡಿಸಲಿಗೆ ಕಳಿಸಿಕೊಟ್ಟನು. ಆ ಗುಡಿಸಲಿಗಾಗಿ, ಆ ಗುಡಿಸಲಿನ ತಾಯಿಗಾಗಿ ಶ್ರೀಮಂತನು ಏನು ಮಾಡುವುದಕ್ಕೂ ಸಿದ್ಧನಾದನು.

ಎರಡು ವಾರಗಳಲ್ಲಿ ಆ ಗುಡಿಸಲು ಕಡೇಪಾಟ ಮನೆ ಆಯಿತು ಮನೆಗೆ ಬಣ್ಣ ಬಳಿಯಲಾಯಿತು. ಗೋಡೆಗೆ ಚಿತ್ರ ಬರೆಯಲಾಯಿತು. ಆ ಕೂಸನ್ನು ಹಿಂಬಾಲಿಸಿ ಸಮಸ್ತ ಶ್ರೀಮಂತಿಕೆಗಳೆಲ್ಲ ಆ ಬಡವಿಯ ಅಡಿಯ ಬಳಿ ಬಿದ್ದವು. ಹುಟ್ಟಿದ ಕೂಡಲೇ ತಾಯಿಯನ್ನು ಕಳಕೊಂಡ ಆ ಶಿಶು, ಗುಡಿಸಲಿನ ಸಾಕುತಾಯಿಯ ಮೊಲೆ ಕುಡಿದು ಪರಿಪುಷ್ಟವಾಯಿತು ಆರೋಗ್ಯ ಗಳಿಸಿತು ಪ್ರಸನ್ನ ಮುಖ ತಳೆಯಿತು.

ಇಷ್ಟಕ್ಕೇ ಮುಗಿಯಲಿಲ್ಲ. ಆ ಕೂಸು ಬೆಳೆದು ದೊಡ್ಡದಾದಂತೆ ಅದರ ಆಟಿಗೆ ಸಾಮಾನುಗಳು, ಕೂಗುವ ಗುಬ್ಬಿ, ಹಾಡುವ ಸಾರಂಗ ಎಲ್ಲವೂ, ಸಂಗಳಿಸಿದವು, ಮುಂದೆ ಬೆಳೆಬೆಳೆದಂತೆ, ಕೂಸು ಬಾಲಕನಾಗಿ, ವಿದ್ಯಾರ್ಥಿಯಾಗಿ, ತರುಣನಾಗಿ, ಸದ್ಗುಣಿಯಾಗಿ ಸಕಲರಿಗೂ ಆಕರ್ಷಕ ವ್ಯಕ್ತಿಯಾದನು.

ಇದಕ್ಕೆಲ್ಲ ಕಾರಣ ಯಾರು? ಶ್ರೀಮಂತನ ತ್ಯಾಗ ಹೆಚ್ಚಿನದೋ, ಆ ಬಡವಿಯ ಮನಸ್ಸು ದೊಡ್ಡದೋ? ಅವೆರಡೂ ಪ್ರತ್ಯೇಕವಾಗಿ ದೊಡ್ಡವಾಗುತ್ತ ಬಂದಂತೆ ಒಂದನ್ನೊಂದು ದೊಡ್ಡದಾಗಿಸುತ್ತಲೂ ಬಂದವೆಂದು ಹೇಳಿದರೆ ಅತಿಶಯೋಕ್ತಿಯೆನಿಸದು. ಈ ಕಥೆ ಇಷ್ಟೇ ಸಾಕು.

ಆ ಗುಡಿಸಲಿನ ಬಡವಿ ಸ್ಪಷ್ಟವಾಗಿ ತಿಳಿದಿದ್ದಳು. ಈ ಕೂಸು ನನ್ನದಲ್ಲ ಶ್ರೀಮಂತನು ತತ್ಕಾಲಕ್ಕೆ ತಂದುಕೊಟ್ಟ ಕಂದ. ಆ ಕಂದನೊಡನೆ ಸಕಲ ಕೃಪೆಗಳೂ ಕೈಗೂಡಿ ಬಂದವಲ್ಲದೆ, ಅದೇ ಭಾವನೆ ನನ್ನ ಮನವನ್ನು ತಿದ್ದಿತು, ತೀಡಿತು, ಆ ಭಾವನೆಗೆ ನನ್ನ ಮನಸ್ಸು ಮಣಿಯಿತು, ತಣಿಯಿತು.

ನಾವು ಹಡೆದ ತಂದೆ ತಾಯಿಗಳಲ್ಲ ಯಾವನೋ ಘನ ಶ್ರೀಮಂತನ ಮಕ್ಕಳನ್ನು ಜೋಪಾನ ಮಾಡುವ ತೊತ್ತು. ಬಡವಿಯ ಕರ್ತವ್ಯವನ್ನು ನಿಸ್ತರಿಸಿಯೇ ತುತ್ತು ಬಡಿಕತನವನ್ನು ಕಳಕೊಂಡೆವು.

ಸಿರಿಯಿಲ್ಲದಿದ್ದರೂ ಶ್ರೀಮಂತಿಕೆ, ಘನತೆಯಿಲ್ಲದಿದ್ದರೂ ಪ್ರಸನ್ನತೆ ತಂದೊದಗಿಸುವ ಈ ದಾರಿ ಮಹತ್ತರವಾದದ್ದೆಂದು ನನಗೆನಿಸುತ್ತದೆ.

ಧರ್ಮ ಮೂಲವೆಂದರೆ ದಯೆ, ದಯವೇ ಧರ್ಮದ ಮೂಲವೆಂದರು ಮಹಾನುಭಾವರೆಲ್ಲ. ತನಗಿಂತ ಹೀನದೀನರಾದವರನ್ನು, ದುಃಖಿಗಳನ್ನು ಬಡವರನ್ನು ಕಂಡು ದಯೆ ತೋರಿಸಬೇಕು. ಅದೇ ಧರ್ಮದ ಮೂಲ

ಅಹುದು. ಆದರೆ ಹಾಗೆ ದಯೆ ಪೂರಯಿಸುವುದಕ್ಕೆ ಒಂದು ಮಹಾಶಕ್ತಿಯ ಅಗತ್ಯವೂ ನಮಗಿದೆ. ಅದೇ ಕೃಪೆ, ಮಹಾಕೃಪೆ, ಅದು ಜಗನ್ನಿಯಾಮಕ ಶಕ್ತಿ, ಅದು ಇಳಿದು ಬರುವುದಕ್ಕೆ ಕರೆಬೇಕು. ಕೂಗುಕೂಗು ಮನವೇ ಮಾತೆಯ ಕೂಗುವ ರೀತಿಯಲ್ಲಿ ಎಂದು ಶ್ರೀರಾಮಕೃಷ್ಣಪರಮಹಂಸರು ಹೇಳಿದ್ದುಂಟು. ಆ ಮಾತನ್ನೇ ತಮ್ಮ ಶಬ್ದಗಳಲ್ಲಿ ಶ್ರೀಮಾಸ್ತಿಯವರು ಹೇಳಿಕೊಟ್ಟರು -

ನಿನ್ನ ಮಕ್ಕಳು ನಿನ್ನ ಕರೆವ ದನಿ ಯಾವುದೋ ।
ಚೆನ್ನಕೇಶವಾ ನನಗೆ ಆ ದನಿಯ ನೀಡು ॥

ಕೆಳಗಿನ ಆ ಕರೆ ಮತ್ತು ಮೇಲೆ ಆ ಕೃಪೆ ಕೂಸು-ತಾಯಿ ಇದ್ದಂತೆ. ಇವೆರಡನ್ನು ಹತ್ತಿರ ಹತ್ತಿರ ತರುವ ಕೆಲಸ ಮಾಡುವುದು ಆನಂದ ಶಕ್ತಿ. ಆ ಶಕ್ತಿಯ ಹೆಸರೇ ಆನಂದವಾಗಿರುವಾಗ ಅದರ ಪರಿಣಾಮದಿಂದ ಆನಂದ ಸೂಸದಿರುವದೇ?

ಆನಂದ ಶಕ್ತಿಯು ದೈಹಿಕ ಮತ್ತು ಆರ್ಥಿಕ ಆರೋಗ್ಯವನ್ನು ಅನುಷಂಗಿಕವಾಗಿ ನೀಡಬಲ್ಲದೆಂದು ಹೇಳಲಾಗುತ್ತದೆ.

ಪ್ರತಿಯೊಂದು ಜೀವವು ತನ್ನದೇ ಆದ ಸಾಧನೆಗೆ ತೊಡಗಿರುತ್ತದೆ. ಜೀವನದ ಪ್ರತಿಯೊಂದು ಕ್ಷಣವೂ ಸಾಧನೆಗೆ ಪ್ರತಿಫಲ ಒದಗಿಸುತ್ತದೆ. ನಾವು ಶಿಶುವಾಗಿ ಬಡವರಿರಬಹುದು, ಗ್ರಾಮೀಣರಿರಬಹುದು ನಮಗಿರುವ ತಿಳುವಳಿಕೆಯ ಮಟ್ಟ ಕೆಳಗಿನದಿರಬಹುದು. ಆದರೆ - ಲೋಕವೆಂಬ ಕರ್ತಾರನ ಕಮ್ಮಟವೆಂದಿದ್ದಾರೆ ಶರಣರು.

ನನಗದು ಅಕ್ಕಸಾಲೆಯೆನಿಸಿತು. ಅಕ್ಕಸಾಲೆಯಲ್ಲಿ ಬರಿ ಬೆಳ್ಳಿ-ಬಂಗಾರದ ತುಣುಕುಗಳೇ ಚೆಲ್ಲಿರುವುದಿಲ್ಲ. ನೆಗ್ಗಿಲೊತ್ತಿದ ಚಿನ್ನದ ಹೂ, ಮುರಿದು ಗುಂಜಾದ ರತ್ನಾಭರಣ ಇವುಗಳಿಗೆ ಸೂಕ್ತವಾದ ಕ್ರಮವನ್ನು ಒದಗಿಸುವುದಕ್ಕೆ ಸುತ್ತಿಗೆ, ಅಜಗಣೆ, ಅಗ್ಗಿಷ್ಟಿಕೆ, ಕಂಬೆಚ್ಚು, ಇಕ್ಕಳು ಇವೆಲ್ಲ ಅನುಷಂಗಿಕವಾಗಿ ಇರಲೇ ಬೇಕು. ಆಗಲೆ ಅಕ್ಕಸಾಲೆ ಪೂರ್ಣತೆ ಸೇರುವದ. ಪೂರ್ಣದಲ್ಲಿ ಪೂರ್ಣ ಕಳೆದರೂ ಪೂರ್ಣ ಕೂಡಿಸಿದರೂ ಪರಿಣಾಮದಲ್ಲಿ ಕಂಡುಬರುವುದು ಪೂರ್ಣವೇ ಅಲ್ಲವೇ?

೧೭. ಮನೆಯಲ್ಲಿ ಮತ್ತೆ ಎದ್ದ ಲಗಾಟ

ಸೀರೆಯ ಮಗ್ಗಗಳು ಮನೆಯಲ್ಲಿ ಎರಡು. ಎರಡು ಮಗ್ಗಗಳಿಂದ ಎರಡು ಸೀರೆಗಳು ದಿನಾಲು ಸಿದ್ಧವಾಗುವವು. ನನ್ನದು ಸಟೇಲ ಮಗ್ಗ, ಅಣ್ಣನದು ಕೈಮಗ್ಗ. ಆದರೂ ೨ ಸೀರೆಗಳು ದಿನಾಲು ಹುಟ್ಟಿಬಂದು ನಮಗೆ ಅಚ್ಚ ಉಳಿತಾಯವಾಗಿ ೧೦ ರೂ. ಒದಗಿಸುತ್ತಿದ್ದವು. ಆಗ ಸೀರೆಗಳ ಬೇಡಿಕೆ ಬಹಳ ಇತ್ತು. ಮಗ್ಗದ ಮೇಲಿನ ಸೀರೆಗೂ ಮುಂಚಿತ ಬೇಡಿಕೆ ಬರುತ್ತಿತ್ತು.

ವ್ಯಾಪಾರದ ಹಂಗಾಮು ತಡವಾಗಿಯೋ ತೀವ್ರವಾಗಿಯೋ ಒಮ್ಮೆ ಇಳಿತರಕ್ಕೆ ಬರುವುದು ನಿಶ್ಚಯ. ಆ ಕಾಲಕ್ಕೆ ನೇಕಾರನು ಹೊಲದ ಕೂಲಿ, ತೋಟದ ಕೂಲಿ ಹುಡುಕಬೇಕಾಗುತ್ತಿತ್ತು. ನಮ್ಮ ಸೀರೆಗಳು ಮಾರಾಟ ಮಂದವಾಯಿತು, ಧಾರಣಿ ಇಳಿಯಿತು. ಇಳಿದ ಧಾರಣೆಗೆ ಸೀರೆ ಮಾರುಗೊಟ್ಟರೆ ತಿಂಗಳೆರಡು ತಿಂಗಳಲ್ಲಿ ಕೈಯೊಳಗಿನ ಬಂಡವಾಳೆಲ್ಲ ಕರಗಿ ಕೈಜೋಳಿಗೆ ಹಾಕಬೇಕಾಗುತ್ತಿತ್ತು.

ಸೀರೆಯ ಧಾರಣಿ ಇಳಿಯಿತೆಂದು, ಸಿದ್ಧವಾದ ಸೀರೆಗಳನ್ನು ಗಂಟು ಕಟ್ಟಿ ಇಡುತ್ತ ಹೋದರೆ ಮಗ್ಗಗಳಿಗೆ ಬೇಕಾಗುವ ಕಚ್ಚಾಮಾಲು ಎಲ್ಲಿಂದ ತರುವುದು? ವಾಡಿಕೆಯಂತೆ ಮಗ್ಗಗಳೇನೋ ನಡೆಯಬಹುದು. ಆದರೆ ಸೀರೆಗಳನ್ನು ಇಳಿದ ಧಾರಣೆಗೆ ಮಾರಿಕೊಂಡು ಬಿಕನಾಶಿಯಾಗಬೇಕಾಗುತ್ತಿತ್ತು.

ಮುಂದೆ ಮಗ್ಗಗಳನ್ನು ನಡೆಸುವ ಬಗೆ ಹೇಗೆ? ಬಂಡವಾಳವಿಲ್ಲದ ನೇಕಾರನು ಕಂಗಾಲನಾಗಬೇಕಾಗುತ್ತಿತ್ತು.

ನಾವಿಬ್ಬರು ಬೇಸರಪಡದೆ ದುಡಿಯಬಲ್ಲವರು ಮಾತ್ರ ಆಗಿದ್ದೆವು. ಆದರೆ ಸಿದ್ಧ ಬಟ್ಟೆಗಳನ್ನು ಮಾರಿ ಹೊಸ ಕಚ್ಚಾಮಾಲು ಒದಗಿಸುವ ವ್ಯವಹಾರ ಕುಶಲತೆ ನಮ್ಮ ಅತ್ತಿಗೆಯಲ್ಲಿತ್ತು. ಆದರೆ ಅದೂ ಕೈಮೀರಿ ಹೋದರೆ ಆಕೆಯೇನು ಮಾಡಬೇಕು?

ಸಿಡಿಪಿಡಿ ಎದ್ದಲಗಾಟಗಳು ಮನೆಯಲ್ಲಿ ತಮ್ಮದೇ ಆದ ಭೂತವೇಷದಲ್ಲಿ ಅಥವಾ ದೆವ್ವ ಕುಣಿತದಲ್ಲಿ ಕುಣಿಯತೊಡಗಿದವು.

ಇಂಥ ಪ್ರಸಂಗದಲ್ಲಿ ಇದ್ದಬಿದ್ದ ಪುಚ್ಛ ಬಲಿತ ಮರಿಯನ್ನು ಹೊರಗಟ್ಟಿ ಬಿಟ್ಟರೆ, ಇದ್ದುದರಲ್ಲಿ ನಿಶ್ಚಿಂತವಾಗಿರಬಹುದು ಎಂದು ಯೋಚಿಸಿದರೇನೋ, ಕಳ್ಳ ಬಂಡವಾಳದಿಂದ ಮಾಡಿದ ಉಪಹಾರಕ್ಕಿಂತ ನೇರವಾದ ಮಧ್ಯಾಹ್ನದ ಊಟವು ಗಂಟಲಿಗೆ ಇಳಿಯದಂತಾಯಿತು. ಮನೆಯಿಂದ ಹೊರಬಿದ್ದು ಬಿಟ್ಟರೆ ನೆಮ್ಮದಿ ಅನಿಸಬಹುದು. ಆದರೆ, ನಾನು ಹೋಗುವುದೆಲ್ಲಿಗೆ? ಆಪ್ತರೇ-ಇಷ್ಟರೇ? ಅಕ್ಕ ತಂಗಿಯರೇ? ಇನ್ನಾರಾದರೂ ಹತ್ತಿಹೊಂದಿದವರೇ? ಯಾರಿದ್ದರು ನಮ್ಮವರಾಗಿ?

೧೯೨೨ರಲ್ಲಿ ಮುಲಕೀಪರೀಕ್ಷೆ ಮುಗಿಸಿದ ಬಳಿಕ ೨ ವರುಷ ಮಗ್ಗದ ಕುಣಿಯಲ್ಲಿ ಕುಳಿತು ಮಾಡಿದ ಅರಸೊತ್ತಿಗೆಗೆ ಉರಲು ಬಂತು. ಹಾಗೂ ಹೀಗೂ ಕುಂಟುತ್ತ ೨ ವರ್ಷ ಗತಿಸಿದವು.

೧೯೨೩ನೇ ವರ್ಷದ ಆರಂಭದ ಕಾಲಕ್ಕೆ ಚಡಚಣ ಗ್ರಾಮದಲ್ಲಿ ತಮ್ಮ ಸರ್ಕಸ್ ಪ್ರದರ್ಶಿಸಬೇಕೆಂದು, ದೇವಲಕರ ಸರ್ಕಸ್ ಎಂಬ ಮಹತ್ತರವಾದ ಸರ್ಕಸ್ಸು ಮಹಾರಾಷ್ಟ್ರದಿಂದ ಬಂದು ಊರ ಹೊರಗಿನ ಬಯಲಲ್ಲಿ ತಂಬು ಹಾಕಿತು. ಆನೆ-ಕುದುರೆಗಳು ಅಸಂಖ್ಯವಾಗಿದ್ದವು. ಆದರೂ ಸರ್ಕಸಿನಲ್ಲಿ ತಮ್ಮ ಕೌಶಲ್ಯ ತೋರಿಸುವವರೂ ಅವರಿಗೆ ಹಿಂಬಲ ಮುಂಬಲರಾಗಿ ನೆರವು ಒದಗಿಸುವವರೂ ಲೆಕ್ಕವಿಲ್ಲದಷ್ಟು ಜನರು.

ನಮ್ಮ ಗೆಳೆಯರ ಬಳಗವು ಆ ಸರ್ಕಸ್ ನೋಡಲು ಹಲವು ಸಾರೆ ಹೋಗಿ ಬಂದೆವು. ಪರಿಣಾಮವೆಂದರೆ ನಾವು ಸಹ ಅಂಥ ಕಸರತ್ತುಗಳನ್ನು ಅರ್ಧಕ್ಕಿಂತ ಹೆಚ್ಚು ಸಾಧಿಸಬಹುದಷ್ಟೇ. ಕಲಿತರೂ ಸಾಕು ಹಳ್ಳಿಯ

ಸಂತೆಗಳಲ್ಲಿ, ಜಾತ್ರೆಗಳಲ್ಲಿ ಆಡಿ ತೋರಿಸಬಲ್ಲ ಕಂಪನಿ ಸಿದ್ಧವಾಗುತ್ತದೆಂದು ನಾವೆಲ್ಲರೂ ಲೆಕ್ಕಹಾಕಿ, ಅವೆಷ್ಟೋ ಕಸರತ್ತಿನ ಸಾಮಾನುಗಳನ್ನು ಅಣಿಗೊಳಿಸಿದವು. ಜೋತಾಡುವ ಜೋಡುಬಳೆ, ತುಟ್ಟತುದಿಯಲ್ಲಿಯ ತೂಗು ಜೋಕಾಲಿ. ಒಬ್ಬನ ಮೇಲೆ ಮೂವರೋ ನಾಲ್ವರೋ ನಿಂತು ಮರದಂತೆ ಟಿಸಿಲು ಪಸರಿಸುವುದು - ಮೊದಲಾದ ಕಸರತ್ತುಗಳು ನಮಗೆ ಬಿಗಿಯೆನಿಸಲಿಲ್ಲ. ಅವುಗಳನ್ನೆಲ್ಲ ಆಡಾಡುತ್ತ ನಾವು ರೂಢಿಸಿಕೊಂಡೆವು.

ಯಂಕಂಚಿ ಅವರ ಅಂಗಳದಲ್ಲಿ ದೊಡ್ಡ ಮರವಿತ್ತು ಬೇವಿನದು. ಆ ಬಯಲೆಲ್ಲ ಜೇಡಿಕೆಯ, ಉಂಕಿಯ, ಸಂದರಿಕೆಯ ಸವೆ ಆಗಿತ್ತು. ಆ ಮರದ ಬೇರೆಬೇರೆ ಟಿಸಿಲುಗಳಿಗೆ ಒಂದೊಂದು ಸರ್ಕಸ್ಸಿನ ಹಗ್ಗ ನೇತಾಡುತ್ತಿತ್ತು. ತಿಂಗಳೆರಡು ತಿಂಗಳು ಕಷ್ಟ ಪಡುವಷ್ಟರಲ್ಲಿ ೨ ತಾಸು ಪ್ರೇಕ್ಷಕರಿಗೆ ತೋರಿಸಬಲ್ಲ ಕಸರತ್ತು ಕಲಿಯುವುದು ಸಾಧ್ಯವಾಯಿತು. ಆ ಕಸರತ್ತುಗಳಲ್ಲಿ ನಾನೂ ಒಂದು ಕಸರತ್ತು ಕಲಿಯುವುದು ಅನಿವಾರ್ಯವಾಯಿತು. ನನ್ನ ತೊಡೆ, ಹೆಗಲು, ತಲೆ ಮೊದಲಾದವುಗಳನ್ನು ಹತ್ತಿ ನಿಂತವರು ಮತ್ತೆ ಇಬ್ಬಿಬ್ಬರನ್ನು ಹೊರುವಂಥ ಭಾರವನ್ನು ವಹಿಸಬಹುದಾಗಿತ್ತು. ಅದಕ್ಕೆ ನನ್ನದೊಂದೇ ಕರಾರು- ಎರಡೂ ಕಾಲು ನೆಲಕ್ಕೂರಬೇಕು ಮಾತ್ರ. ಆ ಬಳಿಕ ನನ್ನ ಮೇಲೆ ಎಂಟು ಜನ ಹತ್ತಿ ಕುಣಿದಾಡಿದರೂ ತಡೆಯಬಲ್ಲೆನೆಂದು ಹೇಳುತ್ತಿದ್ದೆ.

ಚಡಚಣಕ್ಕೆ ನೆರೆಹಳ್ಳಿಯಾದ ಉಮದಿಯ ಜಾತ್ರೆ ಯುಗಾದಿಯ ಹೊತ್ತಿಗೆ ಆಗುತ್ತದೆ. ಆವಾಗ ನಮ್ಮ ಸರ್ಕಸ್ಸು ಉಮದಿ ಗ್ರಾಮಕ್ಕೊಯ್ದು ಆಡಿಬರೋಣ ಎಂದು, ಎಲ್ಲರೂ ಒಮ್ಮನಸ್ಸಿನಿಂದ ನಿರ್ಣಯಿಸಿದೆವು. ಅದಕ್ಕೆ ತಕ್ಕಂತೆ ನಿಯಮಿತ ಅಭ್ಯಾಸ, ಪೌಷ್ಟಿಕ ಆಹಾರ, ಸಕಾಲದ ನಿದ್ರೆ ಇವನ್ನೆಲ್ಲ ಪಾಲಿಸಬೇಕಾಗುವುದೆಂದು ಲೆಕ್ಕ ಹಾಕಿ ನಮ್ಮ ಶಾರೀರಿಕ ಕಸರತ್ತುಗಳನ್ನು ಸತತವಾಗಿ ಅಭ್ಯಸಿಸತೊಡಗಿದೆವು.

ಯಂಕಂಚಿ ರಾಮಣ್ಣನೆಂದರೆ ಹಗುರುಕಾಲಿನ ಚಿಕ್ಕ ಆಕಾರದ ತರುಣ, ಸಾಯಕಲ್ ನಡೆಸುವ ವಿವಿಧ ಪ್ರಕಾರಗಳು ಅವನಿಗೆ ಸಾಧಿಸಿದ್ದವು. ಆ ವಿಧಾನಗಳನ್ನು ಹಳ್ಳಿಯ ಜಾತ್ರೆಗೆ ಬಂದವರು ೨ ತಾಸು ಸಹಜವಾಗಿ ಕುಳಿತು ನೋಡುವರೆಂದು ಲೆಕ್ಕ ಹಾಕಿದೆವು. ಉಮದಿ ಗ್ರಾಮದ ಒಬ್ಬಿಬ್ಬ

ತರುಣರು ನಮ್ಮ ಮಿತ್ರರಾಗಿದ್ದರು. ಅವರಿಂದ ನಾವು ಯಾವ ಸಹಾಯವನ್ನೂ ಪಡೆಯಬಹುದಾಗಿತ್ತು.

ಮುಲಕೀ ಪರೀಕ್ಷೆಯಲ್ಲಿ ಜಿಲ್ಲೆಗೆ ಮೊದಲ ನಂಬರು ಬಂತೆಂದು ಹಿಗ್ಗಿ ಹೀರೇಕಾಯಿಯಾದೆನು. ಗೆಳೆಯರೂ ಆ ಹಿಗ್ಗಿನಲ್ಲಿ ಪಾಲುಗೊಂಡರು. ಆದರೆ ಯಾವ ಕ್ಷಣದಲ್ಲಿ ಎಲ್ಲಿ ಜಿಗಿದು ಹೋಗುವನೋ ಎಂದು ಅನುಮಾನ ಪಡತೊಡಗಿದರು.

೧೯೨೨-೨೩ರಲ್ಲಿ ನೌಕರಿಗಾಗಿ, ಕಾಲೇಜಿನ ಆಯ್ಕೆಗಾಗಿ ಅರ್ಜಿ ಹಾಕುತ್ತಲೇ ಬಂದೆ. ಆದರೆ ಅದಕ್ಕೆ ಪರಿಣಾಮವೇನೂ ಕಂಡು ಬರಲಿಲ್ಲ. ಬಂದರೆ ಒಂದು ಸಂತೋಷ, ಬರದಿದ್ದರೆ ಎರಡು ಸಂತೋಷ. ಇದ್ದರೆ ಸುಖ ಹೋದರೆ ಲೇಸು, ಊರು ಸಾಕಾಗಿತ್ತು ಗೌಡನೂ ಬೇಡವೆಂದ, ಅಷ್ಟೇ ಅಲ್ಲ ನನಗೆ ಮನೆಯೂ ಸಾಕಾಗಿತ್ತು, ಮನೆಯವರಿಗೂ ಬೇಡವಾಗಿತ್ತು.

ಇದ್ದಕ್ಕಿದ್ದ ಹಾಗೆ ಟಪಾಲ ಪೇದೆಯು ಒಂದು ಲಕೋಟೆ ತಂದು ಕೊಟ್ಟನು. ಏನಿದೆ ಅದರಲ್ಲಿ? ಏನಿದ್ದರೂ ಅದನ್ನು ಈಗಲೇ ನೋಡುವುದು ಬೇಡ ಏಕೆ, ತುಂಬ ತಡಮಾಡಿ ನೋಡಲಿಕ್ಕೂ ಸಿದ್ಧ. ಆದರೆ ಒಳಗಿನ ಸಂಗತಿ ಹರ್ಷದಾಯಕವಾಗಿದ್ದರೆ ಒಳ್ಳೆಯದು, ಅವಸರ ಮಾಡಿ ಒಡೆದರೂ ಒಳಗಿನ ಸಂಗತಿ ಆಶಾದಾಯಕವಿರದಿದ್ದರೇನು ಗತಿ? ಹೀಗೆ ಸಂಶಯ ನಿಸ್ಸಂಶಯಗಳ ತಾಕಲಾಟದಲ್ಲಿ ಲಕೋಟೆ ಒಡೆದು ನೋಡಿದೆವು -

"ವಿಜಾಪುರದ ಜಿಲ್ಲೆಯಿಂದ ನಿನ್ನೊಬ್ಬನನ್ನೇ ಧಾರವಾಡ ಟ್ರೇನಿಂಗ್ ಸ್ಕೂಲಿಗೆ ಆರಿಸಲಾಗಿದೆ"

೨-೩ ದಿನಗಳಲ್ಲಿ ಧಾರವಾಡಕ್ಕೆ ಹೋಗಬೇಕಿತ್ತು. ತಿಂಗಳಿಗೆ ೧೨ ೧/೨ ರೂ. ವಿದ್ಯಾರ್ಥಿ ವೇತನ ಸಾಕು. ಇಷ್ಟರಿಂದ ಅರಮನೆ ಕಟ್ಟಬಹುದಾಗಿದೆ. ಇರಲಿ, ಆ ಮೊದಲು ವಿಜಾಪುರಕ್ಕೆ ಹೋಗಿ, ಸಿವಿಲ್ ಸರ್ಜನ್‌ರನ್ನು ಭೆಟ್ಟಿಯಾಗಿ, ಆರೋಗ್ಯ ತಪಾಸಣೆ ಮಾಡಿಸಿಕೊಂಡು ಸೂಕ್ತ ಅಭಿಪ್ರಾಯ ಬರೆಯಿಸಿಕೊಂಡು ಬರಬೇಕಿತ್ತು.

ಕಡಕಡ ಹೊಡೀ ನಗಾರಿಮ್ಯಾಲ ಕಯ್ಯ
ಬಾಲಿಹೊಟ್ಟಿಲೆ ಲೋಲ ಹುಟ್ಟಿದಾನ
ಹೊಡೀನಗಾರಿ ಮ್ಯಾಲಕಯ್ಯ

ಎಂದು ಹಾಡುತ್ತ ಮನಸ್ಸಿನಲ್ಲಿಯೇ ಕುಣಿದಾಡಿದೆ. ಈ ಸುದ್ದಿ ಮನೆಯವರಿಗೆ ತಿಳಿದರೆ, ವಿಜಾಪುರ-ಧಾರವಾಡ ಪ್ರವಾಸಗಳಿಗೆ ಹಣ ಒದಗಿಸುವುದರಲ್ಲಿ ಸಂದೇಹವೇ ಇಲ್ಲವೆಂದು ಮನಸ್ಸು ಹೇಳಿತು.

ವಾಡಿಕೆಯಂತೆ ವಿಜಾಪುರಕ್ಕೆ ಹೋಗಿ ಬಂದೆ, ನನ್ನ ಅರಿವೆ- ಅಂಚಡಿ, ಹಳ್ಳಿಯ ವೇಷಭಾಷೆ ಕಂಡು, ಸಿವಿಲ್ ಸರ್ಜನರು ತುಸು ಅವಹೇಳನ ಮಾಡಿದರು ಮಾಡಲಿ, ಆದರೆ ನನ್ನ ಆರೋಗ್ಯದ ಬಗ್ಗೆ ಯಾವ ಆಕ್ಷೇಪವೂ ಬರಲಾಗದೆಂದು ಬಲವಾಗಿ ಭಾವಿಸಿದೆ.

ಒಟ್ಟಿನಲ್ಲಿ ನಾನೆಣಿಸಿದಂತೆ ಸಿವಿಲ್ ಸರ್ಜನರ ಸರ್ಟಿಫೀಕೇಟು ಸಿಕ್ಕಿತು. ಓದಿ ನೋಡಿದೆ, ಕುಣಿಯುತ್ತ ಬಂದೆ, ಬರುವಾಗ ಜೋರಾಪುರದಲ್ಲಿರುವ ಸೋದರಮಾವನ ಮನೆಗೆ ಹೋಗಿ, ಬಂದ ಸುದ್ದಿ ತಿಳಿಸಿ, ಉಂಡುಗಿಂಡು ಮರಳಿದೆ, ಸುಳ್ಳು ಸುದ್ದಿ ಹೇಳಿ ಉಳ್ಳಿಕ್ಕೆ ಬಂದವನೆಂದು ಅವರು ಭಾವಿಸಲಿಲ್ಲ.

ಜೋರಾಪುರದಿಂದ ರೇಲ್ವೆ ನಿಲ್ದಾಣಕ್ಕೆ ಹೋಗುವುದು ನಡೆಯುತ್ತ ಆ ಬಳಿಕ ಉಗಿಬಂಡಿ ಹತ್ತಿ ಇಂಡಿರೋಡಕ್ಕೆ ಇಳಿಯುವುದು. ಅದಕ್ಕಾಗಿ ೫ ಆಣೆ ಮಾತ್ರ ಖರ್ಚಾದವು. ಆದರೆ ಇಂಡಿರೋಡದಿಂದ ಚಡಚಣದವರೆಗೆ ೧೯ ಮೈಲು ನಡೆದು ನಡೆದು ಕಾಲು ಸೋತವೆಂದು ಯಾರಿಗೆ ಹೇಳಲಿ? ಸರ್ಕಸ್ ಕಲಿತ ತರುಣ ಹಾಗೆಂದರೆ ಅವಮಾನವಲ್ಲವೇ?

ಇನ್ನು, ಚಡಚಣದಿಂದ ಧಾರವಾಡಕ್ಕೆ ಹೋಗುವ ಸಿದ್ಧತೆಯ ಕಥೆ ಹೇಳುವಂತಿದೆ -

ಪುಸ್ತಕ, ಅರಿವೆ ಅಂಚಡಿ ಇರಿಸಿಕೊಳ್ಳಲು ಒಂದು ಟ್ರಂಕು ಬೇಕಲ್ಲ! ಅದನ್ನು ಕೊಂಡುಕೊಳ್ಳುವ ತ್ರಾಣ ನನಗಿರಲಿಲ್ಲ, ಮನೆಯ ಒಂದು

ಮೂಲೆಯಲ್ಲಿ ಒಂದು ಪ್ರಾಚೀನ ಕಾಲದ ಟ್ರಂಕು ಕಾಣಿಸಿಕೊಂಡಿತು. ಅದಕ್ಕೆ ಯಾವ ಬಣ್ಣವೂ ಇರಲಿಲ್ಲ ಮುಚ್ಚಿ ಹಾಕುವುದಕ್ಕೆ ಕೊಂಡಿಯೂ ಇರಲಿಲ್ಲ. ಅದನ್ನು ಹಳ್ಳಕ್ಕೊಯ್ದು ತಿಳಿನೀರಿನಿಂದ ತೊಳೆದು ಹಳೆಯ ಅರಿವೆಯಿಂದ ಒರೆಸಿದೆ. ಕೊಂಡಿಗಿಂಡಿ ದುರಸ್ತಿ ಮಾಡುವವರೂ ಸಿಗಲಿಲ್ಲ. ಹಾಗೆ ಮಾಡುವುದು ಸುಸಾಧ್ಯವೂ ಆಗಿರಲಿಲ್ಲ. ಒಂದು ಕಾತಿಯ ಹಗ್ಗವನ್ನು ದೊರಕಿಸಿ, ಮುಚ್ಚಳ ಬಿಗಿಯಾಗಿ ಉಳಿಯುವಂತೆ ಒಳಿತಾಗಿ ಬಿಗಿದು ಬಿಟ್ಟೆ. ಮುಂದಿನ ಪ್ರಯಾಣದ ಕೆಲಸ ಮುಕ್ಕಾಲಿಗಿಂತ ಹೆಚ್ಚಾಗಿಯೇ ಪೂರ್ತಿ ಗೊಂಡಿತೆಂದು ಹೇಳಬಹುದು.

ಅಣ್ಣ ಅತ್ತಿಗೆಯರಿಬ್ಬರೂ ಸೇರಿ ಧಾರವಾಡಕ್ಕೆ ಹೋಗುವ ಸಲುವಾಗಿ ಬೇಕಾಗುವ ಹಣವನ್ನು ಅಂದರೆ ೩೦ ರೂ.ಗಳನ್ನು ತಂದುಕೊಟ್ಟರು. ಚಡಚಣದಿಂದ ಇಂಡಿರೋಡ ನಿಲ್ದಾಣಕ್ಕೆ ಹೊರಟ ಒಂದು ಎತ್ತಿನ ಗಾಡಿಯಲ್ಲಿ ನನ್ನ ಟ್ರಂಕು ಮತ್ತು ಹಾಸಿಗೆ ಗಂಟು ಇಟ್ಟು ಕುಳಿತುಕೊಂಡೆನು ೧೯ ಮೈಲುಗಳ ಪ್ರವಾಸದ ಸಲುವಾಗಿ ೮ ಆಣೆ ಬಾಡಿಗೆ ಕೊಟ್ಟೆ.

ಧಾರವಾಡಕ್ಕೆ ಹೋಗುವ ಬಂಡಿ ಸೊಲ್ಲಾಪುರದಿಂದಲೋ ಹುಟಗಿ ಯಿಂದಲೋ ಬರಬೇಕಾಗಿತ್ತು. ಅರ್ಧತಾಸು ಅವಧಿಯಲ್ಲಿ ನಾನು ಬುತ್ತಿ ಬಿಚ್ಚಿ ಉಂಡೆ ನೀರು ಕುಡಿದೆ, ಗಂಟೆ ಆಯಿತು, ಧಾರವಾಡದ ನೇರ ಟಿಕೀಟು ತೆಗೆಸಿದೆ ೩ ರೂ. ೬ ಆಣೆ ಕೊಟ್ಟೆ. ಅಷ್ಟರಲ್ಲಿ ಗಾಡಿ ಬಂತು, ಹತ್ತಿದೆ ತುಸು ತಡೆದು ಗಾಡಿ ಕೂಗಿ ಕೂಗಿ ಮುಂದುವರಿಯಿತು. ಕುತೂಹಲ ದಿಂದ ಸ್ಟೇಶನ್‌ಗಳನ್ನೆಲ್ಲ ನೋಡುತ್ತ ಸಾಗುವುದೇ ಒಂದು ಆಟವಾಗಿತ್ತು ನನಗೆ.

ಧಾರವಾಡ ಸ್ಟೇಶನ್ ಬಂತು. ಇಳಿದು ಟ್ರೇನಿಂಗ್ ಕಾಲೇಜಿನ ಹಾದಿ ಕೇಳುತ್ತ ಅಲ್ಲಿಗೆ ಹೋದೆ.

ಪ್ರಿನ್ಸಿಪಾಲರ ಬಳಿಗೆ ಕರೆದೊಯ್ದರು. ಹೆಸರು-ದೆಶೆ, ಪರೀಕ್ಷೆ ಎಲ್ಲ ಕೇಳಿಕೊಂಡು ವಸತಿ ಗೃಹಗಳ ಮೇಲಿನ ಸಾಲಿನಲ್ಲಿ ಒಂದು ಕೋಣೆ ಕೊಟ್ಟರು. ನನ್ನ ಜೊತೆಗಾರರಾಗಿ, ದುಕಾನದಾರ ಎಂಬುವರು ಬೆಳಗಾವ

ಜಿಲ್ಲೆಯಿಂದ ಬಂದಿದ್ದರು. ನಾವಿಬ್ಬರೂ ಒಂದು ವರ್ಷದ ಮಟ್ಟಿಗೆ ಜೊತೆಗಾರರಾದೆವಲ್ಲದೆ ಮಿತ್ರರೂ ಸ್ನೇಹಿತರೂ ಆದೆವು.

೧೯೨೩ನೇ ಇಸವಿಯವರೆಗೆ ಧಾರವಾಡ ಟ್ರೇನಿಂಗ್ ಕಾಲೇಜು ಅನಿಸುತ್ತಿದ್ದುದು, ನನ್ನ ಕಾಲುಗುಣದಿಂದಲೋ ಏನೋ, ಅದು ಟ್ರೇನಿಂಗ್ ಸ್ಕೂಲು ಅನಿಸತೊಡಗಿತು. ಧಾರವಾಡ, ಬೆಳಗಾವ, ಕಾರವಾರ, ವಿಜಾಪುರ ಜಿಲ್ಲೆಗಳಿಂದ ನನ್ನಂಥ ೪೦ ಜನ ಉಮೇದವಾರರು ಟ್ರೇ. ಸ್ಕೂಲ್ ವಿದ್ಯಾರ್ಥಿ ಆಗಿದ್ದೆವು. ವಿಜಾಪುರ ಜಿಲ್ಲೆಯಿಂದ ನಾನೊಬ್ಬನೇ ಎಂದು ಹಲವರು ಆಡಿಸಾಡಿದರು. ವಿಜಾಪುರದ ಜಿಲ್ಲೆಯೆಂದರೆ ಕರ್ನಾಟಕದ ಆಫ್ರಿಕ ಎಂದು ಪ್ರಿನ್ಸಿಪಾಲ ದೇಶಪಾಂಡೆ ಅವರು ಉಸುರಿದರು. ಅದೇ ಉಸಿರು ಎಲ್ಲ ವಿದ್ಯಾರ್ಥಿಗಳ ಬಾಯಲ್ಲಿ ವಾಣಿಯಾಗಿ ಹೊರಬೀಳತೊಡಗಿತು.

ವಿದ್ಯಾರ್ಥಿಗಳು ೩೫-೪೦ ಜನ ಮಾತ್ರ ಇದ್ದರೂ, ಅವರಿಗಾಗಿ ೩ ಬೋರ್ಡಿಂಗ್‌ಗಳು ಕೆಲಸ ಮಾಡುತ್ತಿದ್ದವು. ಬ್ರಾಹ್ಮಣರದು, ಮುಸ್ಲಿಮರದು ಮತ್ತು ಇನ್ನುಳಿದವರದು. ಹೀಗೆ ನಾನು ಇನ್ನುಳಿದವರ ಗುಂಪಿಗೆ ಸೇರಿದೆ. ಅಲ್ಲಿ ಲಿಂಗಾಯತ ವಿದ್ಯಾರ್ಥಿಗಳೇ ಹೆಚ್ಚಾಗಿದ್ದರು.

ಊಟಕ್ಕೆ ಎರಡೂ ಹೊತ್ತು ಬಿಸಿ ಅಡಿಗೆ, ಪ್ರತಿಯೊಬ್ಬರಿಗೆ ಒಂದೊಂದು ರೊಟ್ಟಿ, ಕಾಯಿಪಲ್ಲೆ, ಅನ್ನ, ಹುಳಿ, ರವಿವಾರಕ್ಕೊಮ್ಮೆ ಚಪಾತಿ, ಬೆಲ್ಲದಬೇಳೆ, ಬಟಾಟೆಪಲ್ಲೆ, ಒಂದು ಸೌಟು ತುಪ್ಪ, ಊಟದ ಏರ್ಪಾಡು ನನ್ನ ಮಟ್ಟಿಗಂತೂ ಶ್ರೀಮಂತಿಕೆಯ ಭೋಜನವೇ ಆಗಿತ್ತು. ತಿಂಗಳೊಪ್ಪತ್ತಿನಲ್ಲಿ ನನ್ನ ಬಣ್ಣವೇ ಬದಲಾಯಿತು. ತೂಕವಂತೂ ಇಮ್ಮಡಿಸಿದಂತಾಯಿತು.

ಬೋರ್ಡಿಂಗಿನ ತಿಂಗಳ ಖರ್ಚು ಎಂಟು-ಎಂಟೂವರಿ ಮಾತ್ರ. ಎಂಟಾಣೆ ಹಜಾಮತಿಯ ಖರ್ಚು. ಇನ್ನಿಷ್ಟು ಏನೇನೋ ಮುರಕೊಂಡು, ೧೨ ೧/೨ ರೂ.ಗಳಲ್ಲಿ ೨ ೧/೨ ರೂ.ಗಳಷ್ಟು ಉಳಿಯುತ್ತಿದ್ದವು. ಅಷ್ಟು ಹಣ ತಿಂಗಳವರೆಗೆ ಚಹದ ಸಲುವಾಗಿ ಖರ್ಚು ಮಾಡುತ್ತಿದ್ದೆವು. ನನ್ನಂಥವರು ಮಾತ್ರ ಹಾಗೆ ಮಾಡುತ್ತಿದ್ದರು.

ದೇಶಪಾಂಡೆ ಟ್ರೇ.ಸ್ಕೂ. ಹೆಡ್‌ಮಾಸ್ತರರು, ಕುರುಡಿ ಎಂಬ ಪ್ರಾಕ್ಟಿಸಿಂಗ್ ಸ್ಕೂಲ್ ಮುಖ್ಯ ಶಿಕ್ಷಕರು ಸ್ಕೂಲಿನ ಪಾರುಪತ್ಯಗಾರರು. ಇನ್ನೊಬ್ಬ ಕುಲಕರ್ಣಿಯೋ ಜೋಶಿಯೋ ಕ್ಲಾಸಿನ ಸೆಕ್ರೆಟರಿಯಾದ ದಿನವೇ ಅವನು ಕಾಲೇಜಿನ ವಾರ್ಷಿಕ ಪರೀಕ್ಷೆಯಲ್ಲಿ ಮೊದಲ ನಂಬರು ಪಡೆದನೆಂದೇ ಹೇಳುವಂತಾಯಿತು.

ಟ್ರೇ.ಸ್ಕೂಲು ಆಗುವ ಹಿಂದಿನ ವರ್ಷದವರೆಗೆ ೪-೫ ನೂರು ವಿದ್ಯಾರ್ಥಿಗಳ ದೊಡ್ಡ ಟ್ರೇನಿಂಗ್ ಕಾಲೇಜು, ೧ನೇ, ೨ನೇ, ೩ನೇ ವರ್ಷಗಳ ಟ್ರೇನಿಂಗ್ ಎಂಬ ವಿಭಾಗಗಳಿದ್ದವು. ಮೂರನೇ ವರ್ಷದ ಟ್ರೇಂಡರಾಗುವವರು, ಬಾಯಲ್ಲಿ ಬೆಳ್ಳಿಯ ಸೌಟು ಇಟ್ಟುಕೊಂಡೇ ಹುಟ್ಟಿ ಬಂದಿದ್ದರೇನೋ, ಅವರೆಲ್ಲರು ಬಹುಮಟ್ಟಿಗೆ ಭೂಸುರರು, ಜಹಗೀರ ದಾರರೋ, ದೇಶಪಾಂಡೆಯವರೋ ಆಗಿದ್ದರು. ಉಳಿದವರ ದೈವದಲ್ಲಿ ೨ನೇ ವರ್ಷ ಎನ್ನುವುದೇ ಇರಲಿಲ್ಲವೆಂದು ತೋರುತ್ತದೆ. ೧ನೇ ವರ್ಷದ ಟ್ರೇಂಡರು ಮಾತ್ರ ಆದಿಮಾನವರು, ಲಂಬಾಣಿಗಳು, ದ್ರಾವಿಡರು ಇವರೇ ಆಗಿದ್ದರೆಂದು ಸ್ಥೂಲವಾಗಿ ಹೇಳಬಹುದಾಗಿತ್ತು.

ನಾನು ಟ್ರೇ.ಸ್ಕೂಲಿನಲ್ಲಿ ದ್ರಾವಿಡ ವರ್ಗಕ್ಕೋ ನೀಗ್ರೋ ವರ್ಗಕ್ಕೋ ಸೇರಿದವನಂತೆ ಭಾವಿಸಲ್ಪಡುತ್ತಿದ್ದೆನು. ನನ್ನ ಸ್ನೇಹಿತರು, ಪ್ರೇಮಿಗಳು ಉದಾರಚರಿತರೇ ಆಗಿದ್ದರು. ಜಯಕರ್ನಾಟಕ ಎಂಬ ಬೃಹತ್ ಮಾಸಪತ್ರಿಕೆಯ ಸಂಪಾದಕರು ಆಲೂರು ವೆಂಕಟರಾಯರು ಬಿ.ಎ., ಎಲ್.ಎಲ್.ಬಿ., ಓದಿದವರು ಅಂದೇ ಕವಿ ಮುಖ್ಯರೆನಿಸಿದ ಶ್ರೀ ದ.ರಾ. ಬೇಂದ್ರೆ, ಕವಿಭೂಷಣ ಬೆಟಗೇರಿ ಅಲ್ಲದೆ ಶ್ರೀ ಶಂಬಾಜೋಷಿ, ಶ್ರೀ ಬುರ್ಲಿಬಿಂದು ಮಾಧವರು ನನಗೆ ಹಿರಿಯ ಬಂಧುಗಳ ಸ್ಥಾನದಲ್ಲಿದ್ದರು. ವಿನೀತ ರಾಮಚಂದ್ರ, ಪ್ರಹ್ಲಾದ ನರೇಗಲ್ಲ, ತಿವಾರಿ, ಖಾನೋಳಕರ ಮೊದಲಾದವರು ನನ್ನನ್ನು ಕಿರಿಯಬಂಧು ಎಂದು ಬಗೆಯುತ್ತಿದ್ದರು.

ಟ್ರೇ. ಸ್ಕೂಲಿನಲ್ಲಿ ಕನ್ನಡ ಪಾಠ ಹೇಳುವ ಸನ್ಮಾನ್ಯ ಪಂಡಿತ ಮ.ಪ್ರ. ಪೂಜಾರ ಅವರಿಗೆ ನಾನು ಅಚ್ಚುಮೆಚ್ಚಿನ ಪ್ರಾಮಾಣಿಕ ಶಿಷ್ಯನಾಗಿದ್ದೆನು. ನನ್ನ ಉಡಿಗೆ ತೊಡಿಗೆ, ಕಲಿಯುವ ವರ್ಗ ನೋಡಿದವರಿಗೆ ಒಂದು ವಿಚಿತ್ರ

ವೆನಿಸಿದರೂ ಶಂ.ಬಾ. ಜೋಷಿ ಮತ್ತು ಬೆಟಗೇರಿ ಕೃಷ್ಣಶರ್ಮರಂಥವರು ನನ್ನ ವಸತೀಗೃಹಕ್ಕೆ ಅವಕಾಶ ಮಾಡಿಕೊಂಡು ಬಂದು ಮಾತನಾಡಿಸಿ ಹೋಗುತ್ತಿದ್ದರು. ಶ್ರೀ ಆಲೂರು ಅವರ ಮಾಸಪತ್ರಿಕೆಯಲ್ಲಿ ನನ್ನ ಕೆಲವೊಂದು ಕವನಗಳು ಅಷ್ಟರಲ್ಲಿ ಪ್ರಕಟವಾಗಿದ್ದವೆಂದರೆ ಆಶ್ಚರ್ಯದ ಸಂಗತಿಯೆಂದೂ ತಿಳಿದವರಿದ್ದರು.

ವಿಜಾಪುರದ ಮೋಹರೆ ಹಣಮಂತರಾಯರಾಗಲಿ, ಬಾಗಿಲಕೋಟೆಯ ಮಂಗಳವೀಡು ಶ್ರೀನಿವಾಸರಾಯರಾಗಲಿ ಧಾರವಾಡಕ್ಕೆ ಬಂದಾಗ ನನ್ನನ್ನು ಕಂಡು ಕುಶಲ ವಾರ್ತೆ ಕೇಳಿಕೊಂಡು ಹೋಗುತ್ತಿದ್ದರು. ಈ ಎಲ್ಲ ಸಂಬಂಧಗಳನ್ನು ಕಂಡು ಸಹಪಾಠಿಗಳೆಲ್ಲರೂ ಬೆಕ್ಕಸಬೆರಗಾಗುತ್ತಿದ್ದರು. ಹಾವೇರಿ ತಾಲೂಕ ಶಾಲೆಯ ಶಿಕ್ಷಕರಾಗಿ ಕನ್ನಡ ಕಸ್ತೂರಿ ನಿಘಂಟು ಬರೆದ ಶ್ರೀ ಕವಲಿ ಅವರು ನನ್ನ ಸಲುವಾಗಿ ಬಹು ಆಶಾವಾದಿಯಾಗಿದ್ದರೆಂಬುದು ಟ್ರೇ.ಸ್ಕೂ ಶಿಕ್ಷಕರಿಗೆಲ್ಲ ತಿಳಿದ ವಿಷಯವಾಗಿತ್ತು.

"ನೋಡನೋಡ್ತ ದಿನಮಾನ, ಆಡ ಆಡ್ತ ಆಯುಷ್ಯ ನಡವಾದ ನಡದಾದ" ಅನ್ನುವಂತಿದ್ದರೂ ಅವಕಾಶ ಮಾಡಿಕೊಂಡು ಜಯ ಕರ್ನಾಟಕ ಕಾರ್ಯಾಲಯಕ್ಕೆ ಹೋಗಿ ಅಲ್ಲಿ ವಿಮರ್ಶೆಗಾಗಿ ಬಂದ ಪುಸ್ತಕಗಳನ್ನು ಓದುವುದಕ್ಕೆಂದು ಇಸಗೊಂಡು ಬರುತ್ತಿದ್ದೆನು.

ನನಗೆ ಪ್ರತಿತಿಂಗಳು ದೊರೆಯುವ ೧೨ ೧/೨ ರೂ. ಸಾಲದೆ ಹೋಗುತ್ತಿದ್ದವು. ದಿನಾಲು ಒಂದು ಸಾರೆ ಮಾತ್ರ ಚಹ ಕುಡಿಯುತ್ತಿದ್ದೆನು. ದುಡ್ಡಿಗೊಂದು ಕಪ್ಪು, ಮನೆಯಿಂದ ಹಣ ಬರುವ ನಿರೀಕ್ಷೆಯೇ ಇರಲಿಲ್ಲ. ಹೊಸ ಅಂಗಿ ಟೊಪ್ಪಿಗೆ ಬೇಕಾದರೆ, ಚಡಚಣಕ್ಕೆ ಹೋದಾಗ ಕೊಂಡು ಕೊಳ್ಳಬೇಕೆಂದು ನಿರ್ಣಯಿಸಿದ್ದೆನು. ಇದ್ದ ಅರಿವೆಗಳಿಗೆ ಹಚ್ಚುವುದಕ್ಕಾಗಿ ಸಬಕಾರ ಮತ್ತು ತಲೆಗೆ ಹಚ್ಚುವುದಕ್ಕೆ ಕೊಬ್ಬರಿಎಣ್ಣೆ ಎಲ್ಲಿಂದ ಮತ್ತು ಹೇಗೆ ತರುವುದು?

ವಾರಕ್ಕೊಂದು ದಿನ ಒಪ್ಪತ್ತು ಉಣ್ಣುತ್ತಿದ್ದೆ. ಆದರೆ ಎರಡೂ ಹೊತ್ತು ಬೋರ್ಡಿಂಗಿಗೆ ಹೋಗದಿದ್ದರೆ ಮಾತ್ರ ಒಂದು ದಿವಸದ ಊಟದ ಖರ್ಚು

ಆರೆಂಟು ಆಣೆ ಉಳಿಯುತ್ತಿದ್ದವು. ಒಮ್ಮೊಮ್ಮೆ ಹಾಗೆ ಮಾಡುವುದೂ ಅನಿವಾರ್ಯವಾಗುತ್ತಿತ್ತು. ತಿಂಗಳಲ್ಲಿ ೨-೩ ದಿನ ಉಪವಾಸ ಮಾಡಿ ಅದರಿಂದ ಉಳಿಯುವ ಹಣವನ್ನು ಸಬಕಾರ-ಕೊಬ್ಬರಿಯೆಣ್ಣೆಗಳಿಗಾಗಿ ಮಾತ್ರ ಉಪಯೋಗಿಸುತ್ತಿದ್ದೆ. ಬೋರ್ಡಿಂಗಿನಲ್ಲಿ ಸಿಗುವ ಊಟಗಳಲ್ಲದೆ ಇನ್ನೇನೂ ತಿನ್ನುತ್ತಿರಲಿಲ್ಲ, ತಿನ್ನಲು ಸಾಧ್ಯವೂ ಇರಲಿಲ್ಲ.

ಇಷ್ಟಾಗಿಯೂ ಉಟ್ಟುಕೊಳ್ಳುವ ಧೋತರಗಳಿಗೆ ಸಬಕಾರದ ದರ್ಶನವೇ ಆಗುತ್ತಿರಲಿಲ್ಲ. ಶ್ರೀಶೈಲ ಯಾತ್ರೆ ತೀರಿಸಿಕೊಂಡು ಬಂದ ಜಂಗಮರ ಧೋತರಗಳಂತೆ ನನ್ನ ಧೋತರಗಳೂ ಕೆಂಬಣ್ಣ ತಳೆದಿದ್ದವು.

ರೈಟರ್ ಓಣಿಯಲ್ಲಿರುವ ವಿನೀತ ರಾಮಚಂದ್ರರಾಯರ ಮನೆಗೆ ಆಕಸ್ಮಾತ್ ಹೋದಾಗ ಅಲ್ಲಿ ಕವಿ ದ.ರಾ.ಬೇಂದ್ರೆ ಅವರ ಭೆಟ್ಟಿ ಅನಾಯಾಸವಾಗಿ ಒದಗಿತು. ಅದೇ ಅವರ ಮೊದಲ ದರ್ಶನ. ಆ ನೆವದಿಂದ ವಿನೀತರ ಅಜ್ಜ ನಮಗೆಲ್ಲ ತಿನ್ನಲಿಕ್ಕೆ ಯಾವುದೋ ಸಿಹಿ ಕೊಟ್ಟರು ಅದನ್ನು ಭಾಗ್ಯದ ಬದುಕಿನಂತೆ ಬಾಯಾಡಿಸಿದೆ.

ಧಾರವಾಡ ವಾತಾವರಣದಲ್ಲಿ ಊಟವನ್ನಲ್ಲದೆ ಮತ್ತೇನಾದರೂ ತಿನ್ನಲು ಅವಕಾಶವೇ ಇರಲಿಲ್ಲ.

ಶಾರೀರಿಕ ಶಿಕ್ಷಕರಾದ ಶ್ರೀ ಪವಾರ ಅವರು ನನ್ನ ಮೈಕಟ್ಟು ಶಾರೀರಿಕ ಸ್ಥಿತಿಯ ಸಲುವಾಗಿ ನನಗಿರುವ ಲವಲವಿಕೆಯನ್ನು ಕಂಡು ತುಂಬ ಪ್ರೀತಿಸುತ್ತಿದ್ದರು - "ನೀನು ಶರೀರ ಶ್ರಮ ಹೆಚ್ಚಿಗೆ ಮಾಡಬೇಡ, ಅದರಿಂದ ಪರಿಣಾಮ ವಿಪರೀತವಾಗಬಹುದು" ಎಂದು ಉಪದೇಶಿಸುತ್ತಿದ್ದರು.

ನನ್ನ ವಸತಿಗೃಹದ ಮಗ್ಗಲ ಕೋಣೆಯಲ್ಲಿರುವ ಮಾಳಕೊಪ್ಪ ಮತ್ತು ನಾಗಶೆಟ್ಟಿ ಅವರೊಂದಿಗೆ ದಿನಾಲು ಸಾಯಂಕಾಲಕ್ಕೆ ಶೀರ್ಷಾಸನ ಹಾಕುತ್ತಿದ್ದೆ. ಅದು ಈವರೆಗೂ ಬೆಂಬಳಿಸಿ ಬಂದಿದೆ.

ಹೀಗೆ, ಧಾರವಾಡದ ಪರಿಸರ ಹಾಗೂ ಸಹವಾಸಗಳಿಂದ ನಾನು ಸ್ವಾಭಾವಿಕವಾಗಿಯೇ ಮಾರ್ಪಟ್ಟೆನು, ಬೇರ್ಪಟ್ಟೆನು. ಆಗ ನನಗೆ ೧೯ ವರ್ಷ. ಕಾಲ್ಮರೆ ಹಾಕಲು ನಾನು ಆರಂಭಿಸಿದ್ದು ಅದೇ ವರುಷ.

೧೮. ಧಾರವಾಡದ ಟ್ರೇನಿಂಗಿನ ತರುವಾಯ

ಒಂದು ವರ್ಷದ ಟ್ರೇನಿಂಗು ಧಾರವಾಡದಲ್ಲಿ ಆಡಾಡುತ್ತ ಮುಗಿಯಿತು. ನೇರವಾಗಿ ಚಡಚಣಕ್ಕೆ ಬಂದು ಬಿಟ್ಟೆ. ಇದ್ದಕ್ಕಿದ್ದ ಹಾಗೆ ವಿಜಾಪುರ ಜಿಲ್ಲೆಯ ಶಿಕ್ಷಣಾಧಿಕಾರಿಗಳಿಂದ ಪತ್ರ ಬಂತು, ಓದಿ ನೋಡಿದೆ - "ಇಂಡಿ ತಾಲ್ಲೂಕಿನ ಭತಗುಣಕಿ ಪ್ರಾಥಮಿಕ ಶಾಲೆಯ ಸಹಾಯಕ ಶಿಕ್ಷಕ ಸ್ಥಾನಕ್ಕೆ ನಿಮ್ಮನ್ನು ನಿಯಮಿಸಿದೆ" ಎಂದು ಬರೆದಿತ್ತು.

ವಿಷಯ ತಿಳಿದು ಹಿಡಿಸಲಾರದ ಹಿಗ್ಗು ಉಂಟಾಯಿತು. ಅದರೊಡನೆ ತೀವ್ರತರ ಎದೆಗುದಿ. ಯಾಕೆ?

ಭತಗುಣಕಿ ಗ್ರಾಮವು ಜಹಗೀರದಾರರದು. ಜಹಗೀರದಾರರು ಕೊಂಕಣಸ್ಥ ಬ್ರಾಹ್ಮಣರಾದ್ದರಿಂದ ಅವರ ಮಾತೃಭಾಷೆ, ಮನೆತನದ ಮಾತು ಮರಾಠಿ, ಅವರಿಗಾಗಿ ಊರಜನರಿಗೆಲ್ಲ ಮರಾಠಿಯ ಅಭಿಮಾನ, ಅಲ್ಲಿ ಹೆಸರಿಗೆ ಮಾತ್ರ ಕನ್ನಡ ಶಾಲೆಯಿತ್ತು, ಆದರೆ ಕಲಿಸುವುದೆಲ್ಲ ಮರಾಠಿ, ತಮಗೆ ಮರಾಠಿ ಶಾಲೆಯೇ ಬೇಕೆಂದು ಸಾವಿರಾರು ಜನ ರೈತರು ಸಹಿ ಮಾಡಿದ ಅರ್ಜಿ ಹೋಗಿತ್ತೆಂದು ತೋರುತ್ತದೆ, ವಿಜಾಪುರ ಜಿಲ್ಲೆಯ ಶಿಕ್ಷಣಾಧಿಕಾರಿಗಳ ಕಡೆಗೆ.

ಜಹಗೀರದಾರರು ಕೊಂಕಣಸ್ಥರು, ಜಿಲ್ಹಾಧಿಕಾರಿಗಳೂ ಕೊಂಕಣಸ್ಥರು. ಊರ ಜನಸಾಮಾನ್ಯರ ಬೇಡಿಕೆ ಮರಾಠಿ ಶಾಲೆಯೇ ಬೇಕೆಂದು. ಅಲ್ಲಿಯ ನಾಲ್ವರು ಶಿಕ್ಷಕರಲ್ಲಿ ಮುಖ್ಯ ಗುರುಗಳು ಕೊಂಕಣಸ್ಥರು. ೨ನೇ ೩ನೇ

ತರಗತಿಗಳಲ್ಲಿ ಮರಾಠಿಯೊಡನೆ ಕನ್ನಡ ಪರಿಚಯವನ್ನು ಮಾಡಿಕೊಡಲಾಗುತ್ತಿತ್ತು ಮೇಲಿನ ತರಗತಿಗಳಲ್ಲಿ ಕಲಿಸುವ ವಿಷಯವೆಲ್ಲ ಮರಾಠಿ ಮಾಧ್ಯಮದಲ್ಲಿಯೇ. ಹೀಗಾಗಿ ಅಲ್ಲಿಯ ಶಾಲೆಯೆಂದರೆ ಹಂಡಬಂಡ ಕನ್ನಡ, ಹೆಚ್ಚಾಗಿ ಮರಾಠಿ.

ನಾನು ಅಲ್ಲಿಗೆ ಶಿಕ್ಷಕನಾಗಿ ಹೋಗುವುದಕ್ಕಿಂತ ಮೊದಲು, ಆ ಸ್ಥಾನದಲ್ಲಿ ಶ್ರೀ ಲ.ಭೀ. ಗುಮಾಸ್ತೆ ಎಂಬುವರು ಶಿಕ್ಷಕರಾಗಿದ್ದರು. ಅವರು ಬರಡೋಲ ಗ್ರಾಮದವರು. ಸಹಜವಾಗಿಯೇ ಕನ್ನಡಾಭಿಮಾನಿಗಳು. ಅವರದು ಸುಮ್ಮನೆ ಕುಳಿತುಕೊಳ್ಳುವ ಜೀವವಲ್ಲ. ಕಲಿಸುವುದರಲ್ಲಿ ಅಷ್ಟೊಂದು ಆಸಕ್ತಿ ತೋರಿಸತಕ್ಕವರಲ್ಲವೆಂದರೂ ಕನ್ನಡ ಶಿಕ್ಷಣಕ್ಕಾಗಿ ಅತ್ಯಾತುರವುಳ್ಳವರು.

ಆ ಸಂದರ್ಭದಲ್ಲಿ ಶ್ರೀರಕ್ಕಸಗಿ ದೇಸಾಯಿಯವರು ನಮ್ಮ ಭಾಗದಿಂದ ಶಾಸಕರಾಗಿ ಹೋಗಿದ್ದರು, ಮುಂಬಯಿಗೆ. ವಿಧಾನಸಭೆಯ ಅಧಿವೇಶನ ನಡೆದ ಕಾಲಕ್ಕೆ ಭತಗುಣಕಿ ಶಾಲೆಯಲ್ಲಿ ಮಾತ್ರ ಮರಾಠಿ ಶಿಕ್ಷಣವೇಕೆ? ಗ್ರಾಮದ ಜಹಗೀರದಾರರು, ವಿಜಾಪುರದ ಜಿಲ್ಲೆಯ ಶಿಕ್ಷಣಾಧಿಕಾರಿಗಳು ಕೊಂಕಣಸ್ಥರಾದ ಕಾರಣ ದುರಭಿಮಾನದಿಂದ ಕನ್ನಡವನ್ನು ತುಳಿದು ನಿಲ್ಲಬೇಕೇ ಎಂಬ ಪ್ರಶ್ನೆಯೆತ್ತಿದರು.

ಆ ಕಾರಣದಿಂದ ಜಿಲ್ಲೆಯ ಶಿಕ್ಷಣಾಧಿಕಾರಿಗಳು ಉರಿದೆದ್ದರು, ಭತಗುಣಕಿಯ ಜಹಗೀರದಾರರೆಲ್ಲ ದೊಡ್ಡ ದೊಡ್ಡ ಹುದ್ದೆ ಪಡೆದು ಪುಣೆ, ಮುಂಬಯಿಗಳಲ್ಲಿ ವಾಸ ಮಾಡಿದ್ದರು. ಅವರದೇ ಆದ ದಿನಪತ್ರಿಕೆ ಲೋಕಮಾನ್ಯವು ಮುಂಬೈಯಲ್ಲಿ ಮರಾಠಿಯ ಧ್ವಜ ಎತ್ತಿತ್ತು. ಈ ಎಲ್ಲ ಸೌಕರ್ಯ ಹಾಗೂ ದರ್ಪಗಳಿಂದ ಗುಮಾಸ್ತೆ ಅವರ ಮೇಲೆ ಸಲ್ಲದ ಆರೋಪ ಹೊರಿಸಿ, ಬಾಗಲಕೋಟೆ ತಾಲೂಕಿನ ಬೇವೂರ ಗ್ರಾಮಕ್ಕೆ ವರ್ಗಮಾಡಿಸಿದ್ದರು. ಅಲ್ಲಿ ನೀರು ದುರ್ಮಿಳವಾದ್ದರಿಂದ ಈ ಭಾಗದವರಿಗೆ ಶಿಕ್ಷಾತರೀಕ ಗ್ರಾಮವೆನಿಸಿತ್ತು. ಆ ವಿಷಯವನ್ನೆಲ್ಲ ನಾನು ಪತ್ರಿಕೆಯಲ್ಲಿ ಓದಿದ್ದೆ. ಆ ಸ್ಥಾನದಲ್ಲಿ ಶಿಕ್ಷಕನಾಗಿ ಬಾಳುವುದು ಕಠಿಣವಾದ ವಿಷಯವೇ ಆಗಿತ್ತು.

ಒಂದನೇ ಸಹಾಯಕ ಶಿಕ್ಷಕರು ಉಕ್ಕಲಿ ಗ್ರಾಮದ ಜಮಖಂಡಿ ಎಂಬುವರು. ಅವರು ದೇವೀಹೊಸೂರು ಗ್ರಾಮದಲ್ಲಿ ೨ ವರುಷ ನಿಂತು, ಒಕ್ಕಲತನ ಒಲವಿನ ಶಾಲೆಯಲ್ಲಿ ಕೆಲಸ ಮಾಡಬಲ್ಲ ಕೆಲವೇ ಜನರಲ್ಲಿ ಒಬ್ಬರಾಗಿದ್ದರು. ಒಕ್ಕಲತನವೇ ಪ್ರಮುಖ ಉದ್ಯೋಗವುಳ್ಳ ಭತಗುಣಕಿಯಲ್ಲಿ ಒಕ್ಕಲತನ ಒಲವಿನ ಶಾಲೆ ನಡೆಸುವುದು ಸಹಜವಾದ ಮತ್ತು ವಾಸ್ತವಿಕ ವಾದ ಸಂಗತಿಯೇ ಆಗಿತ್ತು. ಅದಕ್ಕಾಗಿ ಮೇಲಿನ ೩ ತರಗತಿಗಳಲ್ಲಿ ಒಕ್ಕಲತನ ಒಲವಿನ ವಿಷಯ ಕಲಿಸುವುದು ಅನಿವಾರ್ಯವಾಯಿತು. ಅದಕ್ಕಾಗಿ ಕನ್ನಡಾಭ್ಯಾಸ ಮುಖ್ಯವಾಗಿರಬೇಕೆನ್ನುವುದು ಸ್ಪಷ್ಟವಾಯಿತು.

ಅದೃಷ್ಟವಶದಿಂದ ನನ್ನ ಪಾಲಿಗೆ ಮೇಲಿನ ೩ ವರ್ಗಗಳು ಬಂದವು. ಆ ಕಾರಣದಿಂದ ಶ್ರೀ ಗೋಡಬೋಲೆ ಮುಖ್ಯ ಶಿಕ್ಷಕರನ್ನು ಅಲ್ಲಿಂದ ವರ್ಗ ಮಾಡಿ, ಆ ಸ್ಥಳವನ್ನು ಜಮಖಂಡಿ ಅವರಿಗೆ ಕೊಡಮಾಡಿದರು. ಈ ಎಲ್ಲ ಸೌಕರ್ಯಗಳಿಂದ ಅಲ್ಲಿ ಕನ್ನಡವು ತಲೆಯೆತ್ತಿ ನಿಲ್ಲಲು ಸಾಧ್ಯವಾಯಿತು.

ಶಾಲೆಯಲ್ಲಿ ಗಣೇಶೋತ್ಸವ, ಬಸವ ಜಯಂತಿ ಉತ್ಸವಗಳು ಆರಂಭ ಗೊಂಡವು. ಕಾಲಕಾಲಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗತೊಡಗಿದವು.

"ಗೋಡಬೋಲೆ ಕಡುಕೋಲೆ" ಎಂದು ಜನರು ಆಡಿಕೊಳ್ಳಹತ್ತಿದ್ದರು.

ನನ್ನೆಡೆಗೆ ತರುಣವರ್ಗ ಬಂದು ಕನ್ನಡ ಪತ್ರಿಕೆಯನ್ನು ಓದತೊಡಗಿತು. ರಸಿಕರು ನನ್ನನ್ನು ನಾಟಕದ ಕೈವಾರಿಯೆಂದು ಭಾವಿಸಿದರು. ನನ್ನ ಬಳಿಯಲ್ಲಿದ್ದ ಶ್ರೀರಾಮ ಪಾದುಕಾ-ಪಟ್ಟಾಭಿಷೇಕ ನಾಟಕ ಪುಸ್ತಕವನ್ನು ನಾಲ್ಕೆಂಟು ಜನರು ಓದಿಕೊಂಡರು. ಅದನ್ನು ಆಡಿಯೇ ತೋರಿಸಬೇಕೆಂದು ಸೊಂಟಕಟ್ಟಿ ನಿಂತರು. ಆ ಸಂಘಟನೆಯನ್ನು ಕಂಡೂ ಕಾಣದಂತೆ ಜಹಗೀರದಾರ ಧನಿಯರು ತಮ್ಮಷ್ಟಕ್ಕೆ ತಾವಿದ್ದರು.

ಇಂಡಿ ತಾಲೂಕ ಲೋಕಲ್ ಬೋರ್ಡಿಂಗಿನ ಪ್ರೆಸಿಡೆಂಟರಾದ ನರಸಪ್ಪ ಗೌಡರಿಗೆ ತುಸು ಬೇಸರಾಯಿತು. ಆ ಸುದ್ದಿ ಕೇಳಿ ಕಿನಿಸಿದರು. ಅವರಿಗೆ ಬೇಕಾದದ್ದು ಬೇರೆಯೇ ಆಗಿತ್ತು. ಜಹಗೀರದಾರರ ಸದ್ದು ಅಡಗ ಬೇಕಲ್ಲದೆ, ತನ್ನ ದೊಡ್ಡಸ್ತಿಕೆ ಹೆಡೆಯೆತ್ತಬೇಕು. ಇವೆರಡರಲ್ಲಿ ಒಂದು ಕೆಲಸ ಸಹಜವಾಗಿ ಕೈಗೂಡಿತು ಇನ್ನೊಂದು ಕೆಲಸಕ್ಕೆ ತೊಡಕಾಲು ಬೀಳಹತ್ತಿತು.

ತರುಣ ವರ್ಗವು ತನಗೆ ಅವಕಾಶ ಸಿಕ್ಕಾಗ ನನ್ನ ಕಡೆಗೆ ಬಂದು ಸಾಹಿತ್ಯ ರಸವಿನೋದಗಳಲ್ಲಿ ಹೊತ್ತು ಕಳೆಯತೊಡಗಿತು. ಇದು ಶ್ರೀ ಜಮಖಂಡಿಯವರಿಗೆ ಅನಪೇಕ್ಷಿತವಾಯಿತೆಂದು ತೋರುತ್ತದೆ. ಅವರು ಲೋ.ಬೋ. ಪ್ರೆಸಿಡೆಂಟ್‌ರನ್ನು ಒಲಿಸಿಕೊಳ್ಳುವ ಪ್ರಯತ್ನ ನಡೆಸಿದರು. ಅವರ ಒಲುಮೆ ಪುಕ್ಕಟೆಯಾಗಿ ಸಿಗುವ ವಸ್ತು ಅಲ್ಲವೆಂದು ಅವರಿಗೂ ತಿಳಿಯಿತೇನೋ. ನನ್ನನ್ನು ಒಲಿಸಿಕೊಳ್ಳುವ ಪ್ರಯತ್ನ ನಡೆಸಿದರೆಂದು ಹೇಳಬಹುದು.

ಚಡಚಣದಿಂದ ಭತಗುಣಕಿಗೆ ಹೋಗಲಿಕ್ಕೆ ಸುಗುಮದಾರಿ ಹೇಳಿ ಕೊಟ್ಟವರೆಂದರೆ ದಿ. ಮಲ್ಲಿಕಾರ್ಜುನಪ್ಪ ಕುಸೂರ ಅವರು. ಭತಗುಣಕಿ ಅವರ ತಂಗಿಯ ಊರು. ಗಂಟು ಬೇನೆಯ ಹಾವಳಿಯಲ್ಲಿ ಅವರ ತಂಗಿ ಹಾಗೂ ಆಕೆಯ ಗಂಡ ಇಬ್ಬರೂ ತೀರಿಕೊಂಡರು. ಅವರ ಮನೆತನದ ಉದ್ಯೋಗ ಕಿರಾಣಿಯ ಚಿಕ್ಕ ಅಂಗಡಿ ನಡೆಸುವುದು. ಆ ಮನೆತನಕ್ಕೆ ಇಬ್ಬರು ಹೆಣ್ಣು ಮಕ್ಕಳೇ ಬಾಧ್ಯರು. ಶ್ರೀ ಕುಸೂರ ಅವರ ಪ್ರಯತ್ನದಿಂದ, ಚಡಚಣ ದಲ್ಲಿ ನನ್ನ ಸಹಪಾಠಿಯಾಗಿದ್ದ ಸಂಗಪ್ಪ ಸೊಲ್ಲಾಪುರ ಈತನನ್ನು ಅಳಿಯ ತನಕ್ಕೆ ಇಟ್ಟುಕೊಂಡು, ಹಿರಿಯ ಹುಡಿಗೆಯೊಡನೆ ಅಕ್ಕಿಕಾಳು ಹಾಕಿಕೊಟ್ಟರು.

ಇನ್ನೊಬ್ಬ ಹುಡಿಗೆಯನ್ನು ಹಲಸಂಗಿಗೆ ಕೊಟ್ಟರು. ಆಕೆಗೂ ತಾಯಿ ತಂದೆಗಳ ಆಸ್ತಿಯಲ್ಲಿ ಒಂದಿಷ್ಟು ಆಸ್ತಿ ಸಿಗುವಂತೆ ಮಾಡಿದರು.

ಸಂಗಪ್ಪ ಸೊಲ್ಲಾಪುರ ಈತನ ಮನೆಯಲ್ಲಿ ಎರಡು ದಿನ ನಿಂತು ಕೊಂಡೆ. ಬೇರೊಂದು ಸ್ವತಂತ್ರ ಮನೆ ನೋಡಿ ನಿಲ್ಲಬೇಕೆಂದು ವಿಚಾರಿ ಸುತ್ತಿರುವಾಗ ಸಂಗಪ್ಪನ ಹೆಂಡತಿ ಒಂದು ವಾರದ ಮಟ್ಟಿಗೆ ಚಡಚಣಕ್ಕೆ ಹೋಗಬೇಕಾಗಿ ಬಂತು. ಅವರು ಮರಳಿ ಬರುವವರೆಗೆ ನಾವಿಬ್ಬರೂ ಜೊತೆಯಾಗಿ ಅಡಿಗೆ ಮಾಡಿಸಿಯೋ, ಮಾಡಿಕೊಂಡೋ ದಿನ ಕಳೆದವು. ಅದೇ ಕಾಲಕ್ಕೆ ನಾವು ಹೋಳಿಗೆ ಮಾಡಲು ಕಲಿಯುವ ಪ್ರಯತ್ನದಲ್ಲಿ ಅರ್ಧ ಯಶಸ್ಸು ಪಡೆದದ್ದು. ಸಂಗಪ್ಪನ ಮಡದಿ ಚಡಚಣದಿಂದ ಬರುವಷ್ಟರಲ್ಲಿ ಪತ್ತಾರ ನಾಗಣ್ಣನ ಅಂಗಡಿ ನನಗಾಗಿ ಸಿಕ್ಕಿತು. ಅದು ೨ ಅಂಕಣದ್ದು ಮಾತ್ರ.

ಅರ್ಧಭಾಗದಲ್ಲಿ ಅಡಿಗೆ, ನೀರು, ಉರುವಲ, ಊಟಗಳಿಗಾಗಿ ಕಾದಿರಿಸಿ ಉಳಿದರ್ಧಭಾಗದಲ್ಲಿ ಹಾಸಿಕೊಂಡು ಕುಳಿತು, ಅಥವಾ ಅಡ್ಡಾಗಿ ಓದುತ್ತಿದ್ದೆ, ಇಲ್ಲವೆ ನಿದ್ರಿಸುತ್ತಿದ್ದೆ. ಆ ಅಂಗಡಿಗೆ ಕದಗಳಿರಲಿಲ್ಲ. ಒಂದನ್ನು ಮಾತ್ರ ತೆಗೆದಿಡುತ್ತಿದ್ದೆ.

ಮುಂಜಾನೆಯೆದ್ದು ಕೈಕಾಲಿಗೆಂದು ಹೋದವನು, ಊರ ಮುಂದಿನ ಬಾವಿಯಲ್ಲಿ ಈಸಾಡಿ, ಧೋತರ ಒಗೆದುಕೊಂಡು ಬಂದು ಒಣ ಹಾಕಿ ಶಾಲೆಗೆ ಹೋಗುತ್ತಿದ್ದೆ.

ಯಾರಾದರೂ ಬಂದು ಹಣಕಿ ಹಾಕಿ ಮಾತಾಡಿದರೆ ಎರಡು ಮಾತು ಗಳಲ್ಲಿ ಮರುನುಡಿದು ಮುಗಿಸುತ್ತಿದ್ದೆ. ಶಾಲೆ ಬಿಟ್ಟ ಬಳಿಕ ೧೧ ಗಂಟೆಗೆ ೧ ಕೊಡ ಸಿಹಿನೀರು ತಂದು, ನಾಲ್ಕು ರೊಟ್ಟಿ ಮತ್ತು, ಅದೇ ಹಂಚಿನ ಮೇಲೆ ಒಂದಿಷ್ಟು ಕಾಯಿಪಲ್ಲೆ ಮಾಡಿಕೊಂಡು ಉಣ್ಣುತ್ತಿದ್ದೆ; ಅಲ್ಲದೆ ಸಂಜೆಗಾಗಿ ೨ ರೊಟ್ಟಿ ಉಳಿಸುತ್ತಿದ್ದೆ.

ದಿನಾಲು ಗಿದ್ನ ಹಾಲು ಕೊಳ್ಳುತ್ತಿದ್ದೆ. ಅದನ್ನು ಕಾಸುವ ಉಸಾಬರಿಗೆ ಹೋಗದೆ, ಸಕ್ಕರೆ ಹಾಕಿ ಕುಡಿದು ಬಿಡುತ್ತಿದ್ದೆ. ಇಂಥ ಸಂದರ್ಭದಲ್ಲಿ ನನಗೆ ದಿನಾಲು ೩-೪ ಸಾರೆ ಭೆಟ್ಟಿ ಆಗುವವರಲ್ಲಿ ಮಠದ ಗುರುಬಾಳಯ್ಯ ಒಬ್ಬರು. ನಮ್ಮೂರು ಚಡಚಣವೆಂದೂ, ಭತಗುಣಕಿಗೆ ಶಿಕ್ಷಕನಾಗಿ ಬಂದಿ ರುವೆನೆಂದೂ ಕೇಳಿ ತಿಳಿಕೊಂಡರು. ಅಡಿಗೆ ಸ್ವಂತ ಮಾಡಿಕೊಳ್ಳುವಿರಾ ಎಂದು ಕೇಳಿ ತಿಳಕೊಂಡು ಅವರು ನನಗೆ - "ಶಾಲೆ ಎಷ್ಟು ಕಲಿತಿರುವಿರಿ" ಎಂದು ಪ್ರಶ್ನಿಸಿದಾಗ, ಮುಲಕೀ ಪರೀಕ್ಷೆಯವರೆಗೆ ಎಂದು ಹೇಳಿಬಿಡದೆ, "ನೀವೆಷ್ಟು ಕಲಿತವರು" ಎಂದು ಕೇಳಲು - "ನಮ್ಮದೂ ಅರ್ಧ ಮುಲಕೀ ಪರೀಕ್ಷೆ ಆಗಿದೆ"ಯೆಂದೂ ತಿಳಿಸಿದರು.

ಅದರರ್ಥ ನನಗಾಗಲಿಲ್ಲ. ಮತ್ತೆ ಕೇಳಿ ತಿಳಿಯಲು ಅಪೇಕ್ಷೆಪಟ್ಟಾಗ "ನಾಲ್ಕನೇ ತರಗತಿಯವರೆಗೆ" ಎಂದು ಉತ್ತರ ಬಂತು. ಹಾಗಾದರೆ ಅರ್ಧ ಮುಲಕೀ ಪರೀಕ್ಷೆಗಿಂತ ತುಸು ಹೆಚ್ಚೇ ಕಲಿತಿರುವಿರಲ್ಲಾ ಎಂದು ನಗುತ್ತ ನುಡಿದೆನು. ಅವರಿಗೆ ಊರಲ್ಲೆಲ್ಲ ಸುಳ್ಳು ಗುರುಬಾಳಯ್ಯ ಅನ್ನುತ್ತಿದ್ದರು. ನನಗೆ ಮಾತ್ರ ಆ ಅನುಭವ ತೀವ್ರ ಬರಲಿಲ್ಲ.

ರೊಟ್ಟಿ-ಅನ್ನ ಬೇಯಿಸಲಿಕ್ಕೆ ಕಟ್ಟಿಗೆ ಕುಳ್ಳು ಬೇಕಲ್ಲವೇ? ನನ್ನ ವರ್ಗದಲ್ಲಿದ್ದ ಇಬ್ಬರು ಹರಿಜನ ಬಾಲಕರು, ನಾಲ್ಕು ಕಟ್ಟಿಗೆ ಕುಳ್ಳು ತಂದು ಕೊಡುತ್ತಿದ್ದರು. ಅದಕ್ಕಾಗಿ ಅವರಿಗೆ ೩-೪ ಆಣೆ ಕೊಡುತ್ತಿದ್ದೆ.

ಅಂಗಡಿಯನ್ನು ನೆಲಬುರಕಿ ಸಾರಿಸಲು ೫ನೇ ತರಗತಿಯಲ್ಲಿ ಓದುತ್ತಿದ್ದ ದುದನಿ ಯಶವಂತ, ಟಕ್ಕಳಕಿ ಗುರುಪಾದ ಇಬ್ಬರೂ ತಿಂಗಳಲ್ಲಿ ೨-೩ ಸಾರೆ ಸಾರಿಸಿಕೊಡುತ್ತಿದ್ದರು.

ಒಮ್ಮೆ ಮಳೆಗಾಲದಲ್ಲಿ ೪-೫ ದಿನ ಸತತ ಮಳೆ ಹತ್ತಿತು. ಕುಳ್ಳುಕಟ್ಟಿಗೆ ತೀರಿದ್ದವು. ತಂದು ಕೊಡುವವರಿಗೆ ಒಣಗಿದ ಕಟ್ಟಿಗೆ ಕುಳ್ಳು ಸಿಗುವುದು ಸಾಧ್ಯವಾಗಲಿಕ್ಕಿಲ್ಲವೆಂದು ಅವರಿಗೆ ಹೇಳಲೇ ಇಲ್ಲ. ಆಗ ಒಲೆಯಲ್ಲಿ ಏನು ಹಾಕಬೇಕು, ಹೊಟ್ಟೆಗೇನು ಹೇಳಬೇಕು? ಹಸಿವೆ ಒಂದು ಯುಕ್ತಿ ಹೇಳಿತು.

ಎರಡು ಹಿಡಿ ಕಡಲೆಬೇಳೆ ನೆನೆಹಾಕುವುದು, ಸಾಕಷ್ಟು ನೆನೆದ ಬಳಿಕ ಉಪ್ಪು ಜೀರಿಗೆ ಚೆನ್ನಾಗಿ ಅರೆದು, ಹಾಳತವಾಗಿ ಬೆರೆಯಿಸಿ ತಿನ್ನಬೇಕು. ಆದರಿಂದ ಹೊಟ್ಟೆ ತುಂಬುವುದು. ರೊಟ್ಟಿಪಲ್ಲೆ ಎರಡರ ಬದಲಾಗಿ ಒಂದೇ ಖಾದ್ಯದಿಂದ ಬಗೆಹರಿಯುವುದು ಎಂಬ ಯೋಜನೆ ಹೊಳೆದದ್ದರಿಂದ ಮನಸ್ಸಿಗೆ ಸಮಾಧಾನವಾಯಿತು.

ಒಮ್ಮೆ ನನ್ನ ಅಂಗಡಿ (ಮನೆ)ಯಲ್ಲಿ ಒಬ್ಬನೇ ಇದ್ದುದನ್ನು ಕಂಡು, ಮನೆಯ ಮಾಲಿಕ ನಾಗಣ್ಣಪತ್ತಾರ ಬಂದು ಅಂಗಡಿಯಲ್ಲಿ ಅತ್ತ ಇತ್ತ ಕಣ್ಣಾಡಿಸಿ ಕಿವಿಮಾತು ಹೇಳಿದರು ಏನೆಂದರೆ -

"ನೀವು ಅಂಥ ಇಂಥವರನ್ನು ಅಂಗಡಿಯಲ್ಲಿ ಕರಕೊಂಡು ಕುಳಿತು ಕೊಳ್ಳಬೇಡಿರಿ, ಯಾಕೆಂದರೆ ನಮ್ಮ ಹೆಂಗಸು ತುಸು ಸುಮಾರು"

ಆ ಮಾತು ಕೇಳಿ ನನ್ನೆದೆ ಧಸ್ ಅಂದಿತು. ಈ ಮಾತು ಯಾರ ಮುಂದೆ ಉಸುರಲಿ? ಯಾರಿಗೆ ಹೇಳಿದರೆ ನನ್ನ ತೊಂದರೆ ನಿವಾರಣೆ ಆದೀತು ಎಂದು ಒಳಗೊಳಗೇ ಚಿಂತಿಸತೊಡಗಿದೆ.

ಜಿಟಿಜಿಟಿ ಮಳೆ ನಿಂತಿರಲಿಲ್ಲ. ಶಾಲೆ ಬಿಟ್ಟು ಬಂದಿದ್ದೆ. ನನ್ನ ಖಾದ್ಯವನ್ನು ಬಟ್ಟಲಲ್ಲಿ ಹಾಕಿ ಮುಕ್ಕುತ್ತಿದ್ದೆ. ಅಷ್ಟರಲ್ಲಿ - "ಏನ್ರೀ, ಮಾಸ್ತರ ಸಾಹೇಬರೇ ಏನು ಮಾಡುತ್ತಿರುವಿರಿ" ಎನ್ನುತ್ತ ಜೇವರಗಿ ಮಲ್ಲಪ್ಪ ಹಣಿಕೆ ಹಾಕಿದರು. ಒಲೆ ತಣ್ಣಗಿದೆ ಬಾಯಿ ಏನೋ ತಿನ್ನುತ್ತಿದೆ. ಅಡಿಗೆಗಿಡಿಗೆ ಏನೂ ಆದಂತಿಲ್ಲ, ತಿನ್ನುವುದೇನನ್ನು ಎಂದು ಚೌಕಸಿ ಮಾಡುವಷ್ಟರಲ್ಲಿ ಕಡಲೆ ಬೇಳೆಯೆಂದು ಗುರುತಿಸಿದರು. ಈ ಖಾದ್ಯವೇಕೆ, ಅಡಿಗೆ ಮಾಡಿಕೊಳ್ಳಲಿಲ್ಲವೇ ಎಂದರು.

"ಉರವಲ ಆಗಿದೆ ಬಂದ ಕೂಡಲೆ ರೊಟ್ಟಿಗೆ ಹಂಚಿಡುವೆ" ಎಂದೆ. ಆ ಮಾತು ಕೇಳಿ ಆತನ ಕಣ್ಣು ಹನಿಯಾದವು. ಟಣ್ಣನೆ ಜಿಗಿದು, ನೇರವಾಗಿ ಊರ ಮುಂದಿನ ತಮ್ಮ ತೋಟಕ್ಕೆ ಹೋಗಿ ಒಂದು ಪೆಂಡಿ ಬರಲು, ಹತ್ತೆಂಟು ಕುಳ್ಳು ಕೊಟ್ಟು ಕಳಿಸಿದರು. ಬೆನ್ನ ಹಿಂದೆಯೇ ಮಲ್ಲಪ್ಪನ ತಂಗಿ ಗಂಗಾ ೨ ರೊಟ್ಟಿ, ಪಲ್ಲೆ, ಬಟ್ಟಲು ಮೊಸರು ತಂದುಕೊಟ್ಟಳು. ೨-೩ ದಿನಗಳಿಂದ ಕೈಕೊಂಡ ವ್ರತವನ್ನು ಮುರಿದುಬಿಟ್ಟೆ.

ಅಷ್ಟರಲ್ಲಿ ಮಲ್ಲಪ್ಪ ಬಂದು ಕುಳಿತರು.

ನನ್ನ ಗಂಟಲ ಬಿಗಿದಿತ್ತು. ಪತ್ತಾರ ನಾಗೇಶಿ ಹೇಳಿದ ಕಿವಿಮಾತು ಮಲ್ಲಪ್ಪನ ಕಿವಿಗೂ ಮುಟ್ಟಿಸಿದೆ. ಅದನ್ನು ಕೇಳಿದ್ದೇ ತಡ ಮಲ್ಲಪ್ಪ, ಹಾದಿಗೆ ಹೋಗುವ ಇಬ್ಬರು ತರುಣರನ್ನು ಕರೆದರು. ನನ್ನ ಸಾಮಾನುಗಳನ್ನೆಲ್ಲ ೨ ಗಂಟುಗಳಲ್ಲಿ ಕಟ್ಟಿಸಿ ತಮ್ಮ ಮನೆಯ ಒಂದು ಭಾಗವಾದ ಕೊಟ್ಟಿಗೆಯ ಕೋಣೆಯಲ್ಲಿ ಒಯ್ದಿಡಲು ಹೇಳಿದರು.

ಸಂಜೆಯಾಗುವುದರೊಳಗಾಗಿ ಆ ಮನೆಯನ್ನು ಸ್ವಚ್ಛವಾಗಿ ಉಡುಗಿಸಿ ಸೆಗಣಿಯಿಂದ ಸಾರಿಸಿ, ಅಂದು ರಾತ್ರಿ ಅಲ್ಲಿ ವಸತಿ ಮಾಡುವುದಕ್ಕೆ ತಡೆ ಆಗದಂತೆ ಅಚ್ಚುಕಟ್ಟು ಮಾಡಿಸಿದ್ದರು.

ಇನ್ನು ಭತಗುಣಕಿ ಗ್ರಾಮದ ಇನ್ನೊಂದು ಅಧ್ಯಾಯಕ್ಕೆ ಆರಂಭ.

ನಾನಿರುವ ಮನೆಯೆಂದರೆ ೩ ಅಂಕಣದ ಒಂದು ಕೋಣೆ, ಅದರ ಹೊರಮಗ್ಗಲಿಗೆ ಅದೇ ಅಳತೆಯ ಪಡಸಾಲೆ, ಮುಂದೆಲ್ಲ ಬಟ್ಟಬಯಲು,

ಮನೆಯೆದುರಿಗೆ ೩-೪ ಕುಟುಂಬಗಳು ವಾಸಿಸುತ್ತಿದ್ದವು. ಪಡಸಾಲೆಯ ೨ ಅಂಕಣಗಳನ್ನು ಹತ್ತಿ ಕಟ್ಟಿಗೆಯ ನೆರಿಕೆ ಕಟ್ಟಿಸಿ, ಮೇಲೆ ಕೆಸರು ಮೆತ್ತಿ ಸೆಗಣಿಯಿಂದ ಸಾರಿಸಿಕೊಟ್ಟರು.

ವಿದ್ಯಾರ್ಥಿಗಳು ಹಾಗೂ ಸಹಶಿಕ್ಷಕರು ಹೊರಗಿನ ಪಡಸಾಲೆಯ ದಕ್ಷಿಣ ಗೋಡೆಗೆ ಆನಿಸಿ, ಒಂದು ಪುಸ್ತಕ ಕಪಾಟು ಇರಿಸಿದರು. ಬಂದ ಬಂದ ಮಿತ್ರರೆಲ್ಲ ಹೊರಗಿನ ಪಡಸಾಲೆಯಲ್ಲಿಯೇ ಕುಳಿತುಕೊಳ್ಳುವರು ಬೇಕಾದರೆ ತುಸು ಅಡ್ಡಾಗುವರು.

ಎಲ್ಲೆಲ್ಲಿಯೂ ಚೇಳಿನ ವಾಸವೇ ಕಂಡು ಬರುತ್ತಿತ್ತು ಆ ಕೋಣೆಯಲ್ಲಿ. ಹೊರಗಿನ ಪಡಸಾಲೆಯಲ್ಲಿ ಅವುಗಳ ಪ್ರಮಾಣ ಕಡಿಮೆಯಿತ್ತು. ಸಾಯಂಕಾಲಕ್ಕೆ ಅಡ್ಡಾಡಿಕೊಂಡು ಬಂದು ಕಟ್ಟೆಯ ತುದಿಯಲ್ಲಿರುವ ಗೂಟಕ್ಕೆ ತೂಗುಹಾಕಿರುವ ಕಂದೀಲು ಹೊತ್ತಿಸಿ ಬಳಿಕವೇ ಕಾಲ್ಮರೆ ಕಳೆಯುತ್ತಿದ್ದದು. ಕಂದೀಲು ಕೈಯಲ್ಲಿ ಹಿಡಕೊಂಡು ಕೋಣೆಯ ಕದ ತೆಗೆದು ಒಳಹೊಕ್ಕರೆ, ನೆನಪು ಮಾಡಿಕೊಂಡ ಸ್ಥಳಕ್ಕೆ ಹೋದವರಿಗೆ ಕಾಣಸಿಗುವು ದೆಂದರೆ ಒಂದು ಇಲ್ಲವೆ ಎರಡು ಚೇಳುಗಳು.

ಪಡಸಾಲೆಯಲ್ಲಿ ತೂಗಹಾಕಿದ ಕಂದೀಲಿನ ಬೆಳಕಿಗೆ ಬರುವ ಹುಳುಗಳನ್ನು ತಿನ್ನುವ ಆಸೆಯಿಂದ ಹಲ್ಲಿಗಳು ಬರತೊಡಗಿದವು. ಆ ಹಲ್ಲಿಗಳಿಗೆ ಅಂಜಿ ಚೇಳುಗಳು ಅಡಗುತ್ತ ಬಂದವೆಂದು ಹೇಳಬಹುದು.

ಮುಂಜಾವಿನ ಶಾಲೆಯ ಕೆಲಸ ಮುಗಿಸಿ ಮನೆಗೆ ಬಂದವನೇ ಒಂದೇ ಒಂದು ಕೊಡ ಸಿಹಿ ನೀರು ತಂದು, ಒಲೆ ಹೊತ್ತಿಸಿ, ನಾಲ್ಕೆಂದರೆ ನಾಲ್ಕೇ ರೊಟ್ಟಿಗಳು ಮತ್ತು ಆ ಹಂಚಿನಲ್ಲಿ ಹಾಕಿಕೊಂಡ ಕಾಯಿಪಲ್ಲೆಯೇ ಆ ರೊಟ್ಟಿಗೆ ಸಾಧನ. ಚಡಚಣದಿಂದ ಆಮದಾಗಿ ಬಂದ ಸೇಂಗಾದ ಹಿಂಡಿ ಯಾವಾಗಲೂ ಇರುತ್ತಿತ್ತು. ರೊಟ್ಟಿ ಬೇಸರವೆನಿಸಿದಾಗ ಬರಿ ಅನ್ನ ಕುದಿಸಿ, ಹಾಲು ಸಕ್ಕರೆ ಹಣ್ಣು ಇಲ್ಲವೆ, ಗುರುಬಾಳಯ್ಯ ದೊರಕಿಸಿ ತಂದುಕೊಟ್ಟ ಬಟ್ಟಲು ಮೊಸರು, ಎರಡೆರಡು ವಾರ ಬೇಳೆ ಕಾಳಿನ ಸಂಪರ್ಕವೇ ಅಡಿಗೆಯಲ್ಲಿ ಬರುತ್ತಿರಲಿಲ್ಲ.

ಮೆಂತಿ ಪಲ್ಲೆ, ಕಿರಿಸಾಲೆ ಪಲ್ಲೆಯಂಥ ಪಲ್ಲೆಯನ್ನು ಬೇಳೆಯ ಕಾಳಿನ ಜೊತೆಗೆ ಕುದಿಸಿ, ಬಳ್ಳೊಳ್ಳಿ ಎಣ್ಣೆ, ಉಪ್ಪುಹಾಕಿ ತಿರುವಿದರೆ ಅಂದಿನ ರೊಟ್ಟಿಗಳಿಗೆ ಎರಡು ಹೊತ್ತಿನ ಸಾಧನವಾಗುತ್ತಿತ್ತು. ಈ ಕೆಲಸಗಳಿಗೆ ಬೇಸರಾದಾಗ ಶನಿವಾರ ಮಧ್ಯಾಹ್ನಕ್ಕೆ ಹಲಸಂಗಿಗೋ, ಚಡಚಣಕ್ಕೋ ಹೋಗಿ ಯಾವ ಶ್ರಮವಿಲ್ಲದೆ ಉಂಡು ಬರುತ್ತಿದ್ದೆ.

ಸುಟ್ಟ ಬದನೆಕಾಯಿಯಲ್ಲಿ ಉಪ್ಪು ಬಳ್ಳೊಳ್ಳಿ ಅರೆದು ಬೆರೆಯಿಸಿ ಅದರಲ್ಲಿ ೨ ಸೌಟು ಗಾಣದೆಣ್ಣೆ ಹಾಕಿಕೊಂಡರೆ ಒಪ್ಪೊತ್ತಿನ ಊಟ ಮುಗಿಯುತ್ತಿತ್ತು. ಆಗಾಗ ಚಪಾತಿ ಮಾಡಿಕೊಳ್ಳುತ್ತಿದ್ದೆ, ಇಲ್ಲವೆ ಬೇಳೆಯು ಮೇಲಿನ ಕಡಬು ಮಾಡಿಕೊಂಡು, ಅದರಲ್ಲಿ ತುಪ್ಪ ಹಾಕಿಕೊಂಡು ಉಂಡು ತಣಿಯುತ್ತಿದ್ದೆ.

ಅದೇ ಮನೆಯಲ್ಲಿ ಶ್ರೀ ಶಿವರಾಮ ಕಾರಂತರು, ನನ್ನ ಅತಿಥಿಯಾಗಿ ಬಂದಾಗ ಮೆತ್ತಗಿನದಾಗಿರುವ ರೊಟ್ಟಿ, ಬಾಳೆಹಣ್ಣು ತಿನ್ನಕೊಟ್ಟು ಅತಿಥಿ ಸತ್ಕಾರ ಮಾಡಿದ್ದುಂಟು. ಯಾವ ಅತಿಥಿ ಬಂದರೂ ಊರ ಮುಂದಿನ ನಾಲ್ಕು ಮೊಟ್ಟೆಯ ತೋಟಕ್ಕೆ, ಹೋಗಿ ಮನಸ್ವಿ ಈಜಾಡಿ ಬರುತ್ತಿದ್ದೆವು. ಒಗೆಯ ಬೇಕಾದರೆ ಅಂಗಿಟೊಪ್ಪಿಗೆಗಳನ್ನು ಅಲ್ಲಿಯೇ ಸಬಕಾರ ಹಚ್ಚಿ ಶುಭ್ರಗೊಳಿಸಿಕೊಂಡು ಬರುತ್ತಿದ್ದೆವು.

ಇಂಥ ನಿರ್ವಹಣೆ ನಡೆಸುತ್ತಿದ್ದಾಗ ಲೋ.ಬೋ. ಪ್ರೆಸಿಡೆಂಟ ನರಸಪ್ಪ ಗೌಡರು ತಮ್ಮ ಹಿರಿಯ ಮಗನನ್ನು ಚೆನ್ನಾಗಿ ಕಲಿಸಿಕೊಡಿರಿ. ೧೮ನೇ ವಯಸ್ಸಿನ ಆತನು ಆಯ್.ಸಿ.ಎಸ್. ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿದೆ ಎಂದು ದುಂಬಾಲಬೀಳುವವರು. ನಾನು ನನ್ನ ಅಡಿಗೆಯ ತೊಂದರೆಯನ್ನು ಮುಂದೊಡ್ಡಿದರೆ ತಮ್ಮಲ್ಲಿಯೇ ಬಂದು ಊಟ ಮಾಡಿರೆಂದು ಆತ್ಮೀಯತೆ ತೋರಿಸುವರು. ಆದರೆ ಆ ಕ್ರಮವನ್ನು ಅನುಸರಿಸುವುದು ನನ್ನಿಂದಾಗಲಿಲ್ಲ.

ಲೊ.ಬೋ. ಪ್ರೆಸಿಂಡೆಂಟರ ಹಿರಿಯಮಗನ ಹೆಸರು ಅಣ್ಣಪ್ಪಗೌಡ. ಆ ಗೌಡರು ಶಾಲೆಗೆ ಸಕಾಲಕ್ಕೆ ಬಂದವರೇ ಅಲ್ಲ. ೨ ತಾಸು ಹೊತ್ತು ಏರಿ, ಆ ಕೈಯಲ್ಲಿ ಒಂದು ಪಾಟಿಯ ದೊಡ್ಡ ತುಣುಕು, ಈ ಕೈಯಲ್ಲೊಂದು

ಅದೇ ಪಾಟಿಯ ಸಣ್ಣ ತುಣುಕು ಹಿಡಿದುಕೊಂಡು ಅಪ್ಪುಗೈಯಲ್ಲಿ ಶಾಲೆಯನ್ನು ಪ್ರವೇಶಿಸುವರು. ಅವರಿಗಿರುವ ಪುಸ್ತಕದ ಪುಟಗಳೆಲ್ಲ ಮಡಿಚಿ ಇಳಿಬಿದ್ದು ನಾಯಿಯ ಕಿವಿಯಾಗಿದ್ದವಲು. ಎರಡು ಪಾಟೀ ತುಣುಕುಗಳ ಪ್ರಯೋಜನದ ಬಗ್ಗೆ ಕೇಳಿದರೆ, ಒಂದು ಸ್ಲೇಟು ಇನ್ನೊಂದು ಪೆನ್ಸೀಲು ಎಂದು ಹೇಳುವರು.

ಶಾಲೆಯನ್ನು ತಲುಪಿ ಸಾವರಿಸಿಕೊಂಡು ಕುಳಿತುಕೊಳ್ಳುವಷ್ಟರಲ್ಲಿ, ಓಲೆಕಾರನು ಬಂದು ಅಣ್ಣಪ್ಪಗೌಡರನ್ನು ಮನೆಗೆ ಕರೆದೊಯ್ಯುವನು. ಉಪಹಾರ-ಗಿಪಹಾರ ತೀರಿಸಿಕೊಂಡು ಶಾಲೆಗೆ ಬರುವ ಹೊತ್ತಿಗೆ, ಒಂದಕ್ಕೆ ಹೋಗುವ ಗಡಿಬಿಡಿ ಮಾಡುತ್ತಿದ್ದರು. ಅವರು ಸದ್ಯಕ್ಕೆ ಬಿಡುವದಿಲ್ಲ ಇದೇ ಈಗ ಶಾಲೆಗೆ ಬಂದಿರುವಿ ಬೇಡ ಎಂದರೆ, ಕುಳಿತಲ್ಲಿಯೇ ಮೂತ್ರ ಬಿಟ್ಟು ಎಡಬಲದ ಸಹಪಾಠಿಗಳಿಗೆ ತೋರಿಸುವರು. ಆ ಸುದ್ದಿಯನ್ನು ಅವರು ನನ್ನ ಮುಂದೆ ಹೇಳುವರು.

"ಒಂದಕ್ಕೆ ಬಂದರೂ ಮಾಸ್ತರರು ಬಿಡುವದಿಲ್ಲವಾದ್ದರಿಂದ ಕುಳಿತಲ್ಲಿಯೇ ಆ ಕೆಲಸ ಮುಗಿಸಿದೆನೆಂದು" ಮನೆಯಲ್ಲಿ ಗೌಡತಿಯ ಮುಂದೆ ಫಿರ್ಯಾದಿ ಹೇಳುವರು. ಶಿಕ್ಷಕನೆಂದರೆ ಮಕ್ಕಳಿಗೆ ಪಾಠ ಕಲಿಸುವ ಪ್ರಾಣಿಯಲ್ಲ ತನ್ನನ್ನು ತಾನೇ ಶಿಕ್ಷೆಗೆ ಗುರಿಪಡಿಸಿಕೊಳ್ಳುವ ದುರ್ದೈವಿಯೆಂದು ನಾನು ಅರ್ಥಮಾಡಿ ಕೊಳ್ಳುವಂತಾಯಿತು.

ಅಣ್ಣಪ್ಪಗೌಡರ ದಿನಚರಿಯನ್ನು ಶಾಲೆಯ ತಪಾಸಣಾಧಿಕಾರಿಗಳಿಗೆ ಬಿಚ್ಚಿ ಹೇಳಬೇಕಾಯಿತು. ಅದನ್ನು ಕೇಳಿ, ಶಿಕ್ಷಕರ ಬಗ್ಗೆ ಅನುಕಂಪ ತಾಳುವ ಅವರು ಗೌಡರನ್ನು ಪ್ರತಿವರ್ಷ ತೇರ್ಗಡೆ ಮಾಡಿ, ಮುಂದಿನ ವರ್ಗಕ್ಕೆ ಸಾಗಿಸುತ್ತಿದ್ದರು. ತಪಾಸಣಾಧಿಕಾರಿಗಳು ನಮಗೆ ಈ ಬಗೆಯ ಮಹತ್ತರ ಸಹಾಯ ಮಾಡಿದ್ದರಿಂದ ಗೌಡರು ಭತಗುಣಕಿ ಶಾಲೆಯಿಂದ, ವಿಜಾಪುರದ ಸಿದ್ದೇಶ್ವರ ಹೈಸ್ಕೂಲಿನ ವಿದ್ಯಾರ್ಥಿಯಾಗಿ ವಿಜೃಂಭಿಸಲು ಸಾಧ್ಯವಾಯಿತು. ಇಲ್ಲದಿದ್ದರೆ ನಮ್ಮ ಗತಿ ದೇವರೇ ಬಲ್ಲ.

ಅಣ್ಣಪ್ಪ ಗೌಡರೆಂದರೆ ನಿಜಾಮ ಸರ್ಕಾರದ ನಾಣ್ಯವಿದ್ದಂತೆ. ಅದು ಉಳಿದ ಯಾವ ರಾಜ್ಯದಲ್ಲಿಯೂ ಚಲಾವಣೆ ಆಗುವಂತಿಲ್ಲ. ನಿಜವಾಗಿಯೂ ಪ್ರೆಸಿಡೆಂಟರ ಚೊಚ್ಚಲ ಕುಮಾರರು ಸಿದ್ಧೇಶ್ವರ ಹೈಸ್ಕೂಲಿನಿಂದ ಹಿಂಬಡತಿಯಾಗಿ ಮತ್ತೆ ಭತಗುಣಕಿ ಶಾಲೆಗೆ ಬಂದು ೫ನೇ ತರಗತಿಯ ವಿದ್ಯಾರ್ಥಿಯಾದರು. ಆದರೆ ನಮಗೆ ಮೊದಲಿನಷ್ಟು ತೊಂದರೆಯಾಗಲಿಲ್ಲವೆನ್ನು ವುದೇ ನಮ್ಮ ಪುಣ್ಯ.

ಅಣ್ಣಪ್ಪಗೌಡರು ೧ನೇ ತರಗತಿಯಲ್ಲಿದ್ದಾಗ ಸಾಹೇಬರು ಅವರ ಕೈಗೆ ಬಾಲಬೋಧನೆ ಎಂಬ ಪುಸ್ತಕ ಕೊಟ್ಟು ಓದ ಹೇಳಿದರು. ಗೌಡರು ಸಾವರಿಸಿ ಕೊಂಡು ಓದಲಣಿಯಾದರು -

ಮೂಲ ಪುಸ್ತಕದಲಿದ್ದುದು - "ಈ ಗೊಂಡೆ ಯಾರಿಗೆ ಕೊಡಲಿ" ಎಂದಿತ್ತು. ಆದರೆ ಗೌಡರು ಅದನ್ನು ಬೇರೆ ಬಗೆಯಲ್ಲಿ ಬೇರೆ ಅರ್ಥ ಬರುವಂತೆ ನಿಚ್ಚಳವಾಗಿ ಓದಿ ಪರೀಕ್ಷಾಧಿಕಾರಿಗಳಿಗೆ ಹರ್ಷಗೊಳಿಸಿದರು.

ಗೊಂಡೆಯೊಳಗಿನ ಗೊಂ-ಗೆಂ ಆಗಿತ್ತು. ಯಾರಿಗೆ ಕೊಡಲಿ ಎನ್ನುವುದು ಯಾರಿಗೆ ಕೆಡಲಿ ಎಂದಾಗಿತ್ತು. ಸಾಹೇಬರು ಗಹಗಹಿಸಿ ನಕ್ಕು "ಭಲೆ! ಭಲೆ" ಗುಡ್! ವರ್ಗದ ಶಿಕ್ಷಕರು ಚಿಕ್ಕ ಗೌಡರನ್ನು ಒಳಿತಾಗಿ ಸಿದ್ಧ ಮಾಡಿದ್ದಾರೆಂದು ಗಟ್ಟಿಸಿ ಕೈಯೆತ್ತಿ ಕೂಗಿ ಹೇಳಿದರು.

ಆ ಸಂಗತಿ ಪ್ರೆಸಿಡೆಂಟರಿಗೆ ತಿಳಿಯಲು ತಡವಾಗಲಿಲ್ಲ. ಮರುಕ್ಷಣ ದಲ್ಲಿಯೇ ಅವರ ಸಿಪಾಯಿ ಓಂದು ಪ್ರೆಸಿಡೆಂಟ್ ಸಾಹೇಬರು, ಚಹಕ್ಕೆ ಬಂದು ಹೋಗಬೇಕೆಂದು ವಿನಂತಿಸಿಕೊಂಡ ಪತ್ರ ತೋರಿಸಿದನು.

ಅದರಿಂದ ನವಗ್ರಹಗಳ ದೋಷವೆಲ್ಲ ದೂರವಾಗಿ, ಸಂತೋಷದಿಂದ ಉಸಿರಾಡಿಸುವಂತಾಯಿತು. ನಾವೆಲ್ಲ ಶಿಕ್ಷಕ ಬಂಧುಗಳು, ಭತಗುಣಕಿಯ ಬಸವಣ್ಣ ದೇವರಿಗೆ ಜೋಡುಕಾಯಿ ಒಡೆಸಿದೆವು. ಆದರಿಂದಲೆ ಬಸವಣ್ಣ ದೇವರ ಕೃಪೆಯೊಂದಿಗೆ ಪೂಜಾರಿ ಗುರುಬಾಳಯ್ಯನ ಕೃಪೆಯೂ ಅನುಷಂಗಿಕವಾಗಿ ಸಂಗಳಿಸಿದಂತಾಯಿತು.

೧೯. ಗಾಂಧಿ ಚಳುವಳಿಯ ಸೋಂಕು

ಮೇಲಿನ ತರಗತಿಯಲ್ಲಿ ಓದುತ್ತಿದ್ದ ದಿವಾಣಜಿ ಮತ್ತು ಗೋವಿಂದ ಮೊಕಾಶಿ ಇವರಿಬ್ಬರಿಗೂ ಹೆಚ್ಚು ಆಸ್ಥೆಯಿಂದ ಬರವಣಿಗೆಯಲ್ಲಿ ತರಬೇತಿ ನೀಡತೊಡಗಿದೆ. ಕಮತಿಗ ಎಂಬ ಕೈಬರಹದ ವಾರಪತ್ರಿಕೆಯ ಸಂಪಾದಕರೆಂದು ಆಯ್ಕೆ ಮಾಡಿಕೊಂಡೆ. ಅವರು ವರ್ಗದಲ್ಲಿ ನನ್ನ ವಿದ್ಯಾರ್ಥಿಗಳಾಗಿದ್ದರು, ವಯೋಮಾನದಿಂದ ನನಗಿಂತ ತೀರ ಚಿಕ್ಕವರು.

ಕರ್ನಾಟಕದ ಒಂದು ಹಳ್ಳಿಯ ಶಾಲೆಯಲ್ಲಿ, ಮೇಲ್ತರಗತಿಯಲ್ಲಿ ಓದುವ ಹುಡುಗರು ಒಂದು ವಾರಪತ್ರಿಕೆಯನ್ನು ೧೯೨೮ನೇ ವರ್ಷದಲ್ಲಿಯೇ ಆರಂಭಿಸಿದ್ದರೆಂಬ ಸಂಗತಿ ನಿಜವಾಗಿಯೂ ಚಕಿತಗೊಳಿಸುವ ಸಂಗತಿಯೇ ಆಗಿದೆ. ಪುಣೆಯಿಂದ ಆಗ ಹೊರಡುತ್ತಿದ್ದ 'ಮಕರಂದ' ಎಂಬ ಮಾಸ ಪತ್ರಿಕೆಯಲ್ಲಿ ರಾಷ್ಟ್ರೀಯತ್ವವನ್ನು ಕುದುರಿಸುವ ಚಿಕ್ಕ ಕಥೆ ಹಾಗೂ ಪುಟ್ಟ ಪ್ರಬಂಧಗಳನ್ನು. ಕನ್ನಡಿಸಿ, ಕನ್ನಾಡಿನ ಸಾಹಿತ್ಯದ ಬದುಕೇ ಎನ್ನುವ ರೂಪದಲ್ಲಿ ಕಮತಿಗದಲ್ಲಿ ಬರುವ ಸಂಗತಿಯು ಇಂದಿಗೂ ಅಪೇಕ್ಷಣೀಯ ವಾಗಿದೆ. ಆ ಕೆಲಸಕ್ಕೆ ವಿದ್ಯಾರ್ಥಿಗಳಾದ ಮೊಕಾಶಿ ಮತ್ತು ದಿವಾಣಜಿ ಅವರು ಹೆಚ್ಚು ಆಸಕ್ತಿ ತೋರುತ್ತಿದ್ದರು. ದಿವಾಣಜಿ ರಚಿಸಿದ ಚಿಕ್ಕ ಲಾವಣಿಗಳು ಈಗ ದುರ್ಮಿಳವಾಗಿವೆ.

ಇಬ್ಬರೂ ವಿದ್ಯಾರ್ಥಿಗಳು ಇಂಡಿ ತಾಲೂಕಿನವರೇ ಆಗಿದ್ದರು. ದಿವಾಣಜಿಯದು ಬಲ್ಲೊಳ್ಳಿ ಗ್ರಾಮವಾದರೆ, ಮೊಕಾಶಿಯದು ಹಿರೇಬೇವನೂರು.

ಅಮೇರಿಕದ ಒಬ್ಬ ಮಹಿಳೆ ಮಿಸ್ ಮೇಯೋ ಎಂಬುವಳು ಭಾರತವನ್ನೆಲ್ಲ ಸಂಚರಿಸಿ ಇಲ್ಲಿಯ ಕೆಲವು ರೀತಿರಿವಾಜುಗಳನ್ನು ತೆಗಳಿ ಬರೆದ ಲೇಖನಗಳು ಇಂಗ್ಲಿಷ್ ಪತ್ರಿಕೆಗಳಲ್ಲಿ ಬರುತ್ತಿದ್ದವು. ಆಕೆ ಆ ವಿಷಯದಲ್ಲಿ ವರದಿಯನ್ನು ಪ್ರಕಟಿಸಿದಳೆಂದು ಹೇಳುತ್ತಾರೆ. ಮ.ಗಾಂಧಿ ಅವರು ಆಕೆಯ ವಿಚಾರಗಳ ಬಗೆಗೆ ತೀರ ಹೇಸಿಕೆಯನ್ನು ತೋರ್ಪಡಿಸಿದರು. ದಿವಾಣಜಿಯು ಆ ಬಗೆಗೆ ರಚಿಸಿದ ಲಾವಣಿಯ ಪಲ್ಲವಿ ಮಾತ್ರ ನೆನಪಿದೆ ಏನಂದರೆ -

ಪೋರಿ ಏನು ಬೆರಕೀ
ಹಿಂದುಸ್ತಾನಕ ಹೊಡದಾಳ ಡುರಕಿ

ಈ ಮೊಕಾಶಿಯು ಮುಲಕೀ ಪರೀಕ್ಷೆ ಮುಗಿಸಿದ ಬಳಿಕ ವಿಜಾಪುರ ದಿಂದ ಹೊರಡುವ ಕರ್ನಾಟಕ ವೈಭವ ಎಂಬ ವಾರಪತ್ರಿಕೆಯ ಉಪಸಂಪಾದಕನಾಗಿ ಕೆಲವು ವರುಷ ಕೆಲಸ ಮಾಡಿದನೆಂಬ ಸಂಗತಿ ಇಂದು ನಂಬುವುದಕ್ಕೂ ಕಠಿಣವಾಗಿದೆ.

ನಮ್ಮ ಪ್ರೌಢ ವಿದ್ಯಾರ್ಥಿಗಳು ಆಸಕ್ತಿ ವಹಿಸಿ ನಾನಂದು ಬರೆದ 'ಮೊದಲನೇ ದೇಶದ್ರೋಹಿ' ಎಂಬ ಏಕಾಂಕವನ್ನು ಅಭಿನಯಿಸಿದರಲ್ಲದೆ ಜನಜೀವನ ಎಂಬ ಮೂರಂಕಿನ ನಾಟಕವನ್ನು ಕಲಿತು ಆಡಿ ಸಾರ್ವಜನಿಕ ರಲ್ಲಿ ರಾಟಿಮೇಟಿಗಳಳಿಯೇ ದೇಶದಾಟವೇ ಕೆಡಗು ಎಂಬ ವಿಚಾರದ ಮನವರಿಕೆ ಮಾಡಿಕೊಟ್ಟರು.

ನಾನು ಬರೆದ ಪುಸ್ತಕಗಳಲ್ಲಿ ಪ್ರಪ್ರಥಮವಾಗಿ ಮುದ್ರಣಗೊಂಡ ಪುಸ್ತಕ ವೆಂದರೆ ಜನಜೀವನ. ಅದು ಭತಗುಣಕಿಯಲ್ಲಿಯೇ ಪ್ರಕಟಗೊಂಡಿತೆಂದು ಹೇಳಲು ಅಭಿಮಾನವೆನಿಸುತ್ತದೆ. ಆ ಬಳಿಕ ಅಲ್ಲಿದ್ದಾಗಲೇ 'ಭಕ್ತಿ ರಹಸ್ಯ' 'ದೇಶಭಕ್ತಿಯ ಕಥೆಗಳು', 'ಭಾರತೀಯ ಮಹಾಪುರುಷರು', 'ಸ್ವಾರ್ಥತ್ಯಾಗ', 'ಲೋಬೋಲೋಬೋ' ಎಂಬ ಚಿಕ್ಕ ಚಿಕ್ಕ ಪುಸ್ತಕಗಳು ಪ್ರಕಟವಾದ ಸಂಗತಿ ಸ್ಮರಣೀಯವಾಗಿದೆ.

ವಚನಪಿತಾಮಹರೆನಿಸಿದ ಫ.ಗು.ಹಳಕಟ್ಟಿ ಅವರ ನವಕರ್ನಾಟಕ ಸಾಪ್ತಾಹಿಕದಲ್ಲಿ ಹಳ್ಳಿಯ ಜೀವನಕ್ಕೆ ಸಂಬಂಧಿಸಿದ ೧೩ ಲೇಖನಗಳನ್ನು ಕ್ರಮವಾಗಿ ಪ್ರಕಟಿಸಿದ್ದನ್ನು ಬಹುಜನರು ಶ್ಲ್ಯಾಘಿಸಿದ್ದುಂಟು. ಕನ್ನಡ ಪತ್ರಿಕೆಯಲ್ಲಿ ಮೊದಲಿಗರಾಗಿ ಹಳಕಟ್ಟಿಯವರು ಕನ್ನಡ ಲೇಖನಗಳಿಗೆ ಅಲ್ಪ ಪ್ರಮಾಣದಲ್ಲಿಯೇ ಆಗಲಿ ಪ್ರತಿಫಲ ನೀಡಲಾರಂಭಿಸಿದರೆಂದು ತಿಳಿಸಲು ಅಭಿಮಾನವೆನಿಸುತ್ತದೆ.

ಅದರಂತೆ ೧೯ನೇ ಶತಮಾನದಲ್ಲಿ ಆಗಿಹೋದ ಜಾಗೃತ ಭಾರತದ ಅಗ್ರಗಣ್ಯರನ್ನು ಕುರಿತು, "ಭಾರತೀಯ ಮಹಾಪುರುಷರು" ಎಂಬ ಹೆಸರಿನಿಂದ ಕ್ರಮವಾಗಿ ಪ್ರಕಟಿಸಿದ ಲೇಖನಗಳನ್ನು ಒಂದುಗೂಡಿಸಿ ಪುಸ್ತಕ ವನ್ನು ಕನ್ನಡಿಗರ ಕೈಗೆ ಕೊಟ್ಟು ಮಹದುಪಕಾರ ಮಾಡಿದರು. ಹಳಕಟ್ಟಿ ಅವರು ಆ ಕಾಲಕ್ಕೆ 'ದೇಶಭಕ್ತಿಯ ಕಥೆಗಳು', 'ಭಾರತೀಯ ಮಹಾಪುರುಷರು' ಎಂಬ ಚಿಕ್ಕ ಪುಸ್ತಕಗಳು ನಮ್ಮಲ್ಲಿಯ ರಾಷ್ಟ್ರೀಯತ್ವವನ್ನು ಜಾಗೃತಗೊಳಿಸಬಲ್ಲವಾಗಿದ್ದವೆಂದು ಲೇಖಕನಾದ ನಾನು ಇಂದಿಗೂ ಎದೆತಟ್ಟಿ ಹೇಳಬಲ್ಲೆನು.

ಫ್ರಾನ್ಸ್, ಆಯರ್ಲಂಡ, ರಶಿಯಾ, ಜಪಾನ ಮೊದಲಾದ ದೇಶಗಳಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ದೇಶಭಕ್ತಿಯನ್ನೋ ರಾಷ್ಟ್ರ ಪ್ರೇಮವನ್ನೋ ತೋರ್ಪಡಿಸಿದವರ ಜೀವನ ಪ್ರಸಂಗಗಳನ್ನು ಕಥಾರೂಪದಲ್ಲಿ ಪವಣಿಸಿ ನವ ಕರ್ನಾಟಕದ ವಾಚಕರಿಗೆ ಓದಗೊಟ್ಟ ಬಳಿಕ, ಅವುಗಳನ್ನೆಲ್ಲ ಒತ್ತಟ್ಟಿಗೆ ಸಂಗಳಿಸಿ 'ದೇಶಭಕ್ತಿಯ ಕಥೆಗಳು' ಎಂಬ ಚಿಕ್ಕ ಗ್ರಂಥವನ್ನು ವಿದ್ಯಾರ್ಥಿಗಳಿಗಾಗಿ ಶ್ರೀ ಹಳಕಟ್ಟಿಯವರು ಪ್ರಕಟಿಸಿದರು.

ಆ ಬಳಿಕ ಹತ್ತೆಂಟು ವರ್ಷಗಳ ತರುವಾಯ ದೇಶಭಕ್ತಿಯ ಕಥೆಗಳು (೬೦) ಬರೆದು ಪ್ರಚುರ ಪಡಿಸಿದ್ದುಂಟು. ಅದು ಕಾರಣಾಂತರದಿಂದ ಮಧುರ ಚೆನ್ನರ ಹೆಸರಿನಿಂದ ಹುಬ್ಬಳ್ಳಿಯ ಲೋಕಶಿಕ್ಷಣ ಸಮಿತಿಯವರು ಪ್ರಕಟಿಸಿದರು. ನನ್ನ ಹೆಸರಿನಿಂದ ಪ್ರಕಟವಾದರೆ ಶಿಕ್ಷಕನಾದ ನನಗೆ ಸರಕಾರದಿಂದ ತೊಂದರೆಯಾಗುವ ಭಯವಿತ್ತು.

ರಾಟಿ ಮೇಟಿಗಳ ಮಹಿಮೆಯನ್ನು ಎತ್ತಿ ಹೇಳಿದ ಜನಜೀವನ ನಾಟಕವನ್ನು ಭತಗುಣಕಿಯಲ್ಲಿ ಆಡಿತೋರಿಸಿದಂತೆ, ಲಚ್ಯಾಣ ಜಾತ್ರೆಯಲ್ಲಿಯೂ ಆಡಿ ತೋರಿಸಿದ್ದಾಯಿತು. ಅದರಂತೆ, ವಿಜಾಪುರದ ಅಂದಿನ ಕಲೇಕ್ಟರ ನಾಯಕ ಸಾಹೇಬರು ನಿರ್ದೇಶಿಸಿದ ದುಷ್ಕಾಳ ನಿವಾರಕ ಸಂಸ್ಥೆಯ ಉದ್ಘಾಟನೆಯ ಕಾಲಕ್ಕೆ ಭತಗುಣಕಿ ಶಾಲೆಯ ಬಾಲಕರಿಂದ ಆಡಿಸಿ, ಸಾರ್ವಜನಿಕರಿಂದ ಸೈ ಎನಿಸಿಕೊಂಡರು.

ಆ ನಾಟಕದಲ್ಲಿ ಬರುವ 'ಬೆಳಕು ತೋರಿತು ಮನದೆ ನಿಜದೆ' ಎಂಬ ಪಲ್ಲವಿಯ ಹಾಡನ್ನು ಕಥಾನಾಯಕನ ಬಾಯಿಂದ ಹಾಡಿಸಿದ ವಿಷಯವಾಗಿ ಆದಿಕವಿ ಪಂಪನ ಒಂದು ಕವನ ಭಾಗಕ್ಕೆ ಹೋಲಿಸಿ ವಿವೇಚಿಸಿದವರು ಶ್ರೀನಾಯಕ ಕಲೇಕ್ಟರರೇ.

'ಜನಜೀವನ' ನಾಟಕ ಬರೆದ ನನಗೂ, ಅದನ್ನು ಆಡಿತೋರಿಸಿದ ವಿದ್ಯಾರ್ಥಿಗಳಿಗೂ ಪ್ರಶಸ್ತಿ ಪತ್ರಗಳನ್ನು ನೀಡಿ ಸನ್ಮಾನಿಸಿದರು. ಅಂದಿನ ಕಾಲಕ್ಕೆ ಅಂಥ ಸನ್ಮಾನವನ್ನು ಸಂಗಳಿಸಿಕೊಂಡು ನಾವು ಹೆಡೆಯೆತ್ತಿ ನಿಲ್ಲುವಂತೆ ಮಾಡಿತು.

ಈ ಸಾಹಿತ್ಯ ಪ್ರಕಾರವು ಜಾನಪದದ್ದೂ ಅಲ್ಲ, ಶಿಷ್ಟ ಜಾತಿಯದೂ ಅಲ್ಲವೆಂದರೆ ವಿಶಿಷ್ಟ ಜಾತಿಗೆ ಸೇರಿದ್ದೆಂದು ಕೈಯೆತ್ತಿ ಹೇಳಬಹುದಾಗಿದೆ. ನೇರವಾಗಿ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಗೆ ಪ್ರೇರಕವಾಗಿರದಿದ್ದರೂ ಪೂರಕವಾಗಿರುವುದರಲ್ಲಿ ಸಂಶಯವಿಲ್ಲ.

ನನ್ನ ಸಾಹಿತ್ಯ ಪ್ರಕಾರವು ದೇಶಭಕ್ತಿ-ರಾಷ್ಟ್ರಭಕ್ತಿಗಳನ್ನು ಉದ್ದೀಪನಗೊಳಿಸಲು ಪ್ರಯತ್ನಿಸಿತೆಂಬುದು ಸತ್ಯಪೂರ್ಣವಾಗಿದೆ.

೨೦. ಎಲ್ಲಿಯ ಮಾಮರ ಎಲ್ಲಿಯ ಕೋಗಿಲೆ?

ನಕಾಶದಲ್ಲಿ ಸಹ ಕಾಣಸಿಗದ ಹಾಗೂ ಯಾವ ಮುಖ್ಯ ದಾರಿಯಲ್ಲಿಯೂ ಹುಟ್ಟಿಕೊಳ್ಳದ ಭತಗುಣಕಿ ಗ್ರಾಮವೆಲ್ಲಿ, ನಾನೆಲ್ಲಿ? ನನ್ನ ರಾಷ್ಟ್ರೀಯತ್ವದ ವಿಚಾರಗಳೆಲ್ಲಿ? ಭತಗುಣಕಿಯ ೧೯ನೇ ಶತಮಾನದ ಜೀವನವೆಲ್ಲಿ? ಹೊಲಗಳೆಲ್ಲ ಜಹಗೀರದಾರರವೇ ಆಗಿದ್ದರೂ ಅವುಗಳನ್ನೆಲ್ಲ ತೋಟವಾಗಿ ಮಾರ್ಪಡಿಸಿದವರೆಲ್ಲ ಕೃಷಿಕ ಕೂಲಿಯವರೇ ಆಗಿದ್ದರು. ಅಂದಿನ ಕಾಲಕ್ಕೆ ಭತಗುಣಕಿಯ ಸೀಮಾ ಪ್ರದೇಶದಲ್ಲಿ ಮುನ್ನೂರು ಮೊಟ್ಟೆಯ ಗಾಲಿಗಳು ತಿರುಗುತ್ತಿದ್ದವೆಂದು ಹೇಳಲಾಗುತ್ತಿತ್ತು.

ಆ ಗ್ರಾಮ ಹುಟ್ಟಿ ಅವೆಷ್ಟು ಶತಮಾನಗಳು ಗತಿಸಿದ್ದವೋ ದೇವರಿಗೇ ಗೊತ್ತು. ಅಂದರೆ ಆ ಊರಲ್ಲಿ ರಸಿಕರ ಮೇಳಗಳಾಗಲಿ, ಹಾಡು ಬಾರಿಸುವ ಕಲೆಗಳಲ್ಲಿ ನಿಷ್ಣಾತರಾದವರಾಗಲಿ ಸಿಗುವುದೇ ದುಸ್ತರ. ಎಲ್ಲೆಲ್ಲಿ ನೋಡಿದರೂ ಹೊಟ್ಟೆಯ ಹೋರಾಟವೇ. ಏನೇನು ನೋಡಿದರೂ ಹಸಿವೆಗಾಗಿ ಪೊಟ್ಟೆ ಹೊಸೆಯುವ ಹುಳುಗಳೇ. ನಿರಕ್ಷರಿಗಳ ದೊಡ್ಡ ಗುಂಪು ಆ ಊರ ವಸತಿಗಾರರೆಂದು ಹೇಳುವುದಕ್ಕೆ ಅನುಮಾನ ಪಡುವ ಕಾರಣವೇ ಇಲ್ಲ.

ನಾನು ಶಿಕ್ಷಕನಾಗಿ ಅಲ್ಲಿಗೆ ಹೋದ ಬಳಿಕ ನಾಟಕ ಕಲಿಯುವ ಹವ್ಯಾಸ ಕೆಲವರಲ್ಲಿ ಮಾತ್ರ ಮೂಡಿತೆನ್ನಬಹುದು. ಆದರೆ ಅದನ್ನೆಲ್ಲ ಹಿಂದೆ ತೆಗಳುವ ಕುಹಕಿಗಳೇ ಹೆಚ್ಚು. ಅಂಥದರಲ್ಲಿ, ಹಾರ್ಮೋನಿಯಂ ಕಾಲಪೇಟ ಮುಂಬಯಿಯಲ್ಲಿ ಖರೀದಿಯಾಗಿ ಭತಗುಣಕಿಗೆ ಬಂದದ್ದು ೧೯೨೭ನೇ

೩ಸವಿಯಲ್ಲಿ ಹಾರ್ಮೋನಿಯಂ ಭತಗುಣಕಿಯವರದಾಯಿತು. ಅಷ್ಟೇ ಅದನ್ನು ಬಾರಿಸುವವರು ಪರಊರಿನ ಕಲಾವಿದರೇ. ಅದನ್ನು ಮೊಟ್ಟಮೊದಲು ಎತ್ತಿ ನಿಲ್ಲಿಸಿ, ಪೂಜಿಸಿ ಬಾರಿಸುವುದಕ್ಕೆ ಆರಂಭಿಸಿದವರೆಂದರೆ ನಾನೇ.

ನನ್ನ ಮನೆ ನೋಡಿ ನನ್ನನ್ನು ಯಾರೂ ಗುರುತಿಸುವಂತಿಲ್ಲ. ನನ್ನ ಮನೆ ಚೇಳಿನ ಬೀಡು, ಏಡಿಗಳ ತವರು. ಅದು ಹೇಗೆ ಎಂದು ಕೇಳುವವರಿಗೆ ನಾನು ಹೇಳಲೇ ಬೇಕು "ಚೇಳಿಗೆ ಬಸುರಾಗಿದ್ದೇ ಕಡೆ" ಎಂದು ಬಸವಣ್ಣನವರು ಹೇಳಿದ್ದುಂಟು. ಅದರಂತೆ ಸಿಂಪಿ ಮಾಸ್ತರರ ಮನೆಯಲ್ಲಿ ಹುಟ್ಟಿಕೊಂಡ ಚೇಳಿನ ಜನ್ಮವೇ ಕಡೆಯದು ಎಂದು ಹೇಳುವಂತಾಯಿತು.

ಒಮ್ಮೆ ಮಧ್ಯಾಹ್ನದ ಊಟ ಮುಗಿಸಿ, ತುಸು ಅಡ್ಡಾಗಿ ಏಳಬೇಕೆಂದರೆ ಗಡದು ನಿದ್ದೆ ಹತ್ತಿದ್ದರಿಂದ ಏಳುವುದಕ್ಕೆ ತುಸು ತಡವೇ ಆಯಿತು. ಎಚ್ಚತ್ತು ನೋಡಿದರೆ, ಮಧ್ಯಾಹ್ನ ಶಾಲೆಯ ಹೊತ್ತು ಮೀರಿತೇನೋ ಎನ್ನುತ್ತ ಮುಖ ತೊಳಕೊಂಡು, ಅಂಗಿಯ ಮೇಲೆ ಕೋಟು ಧರಿಸಿ, ತಲೆಗೆ ಟೋಪಿ ಸಿಕ್ಕಿಸಿ ಕೊಂಡು ಅವಸರದಿಂದ ಶಾಲೆಗೆ ಹೋದೆ. ೫ನೇ ವರ್ಗದ ವಿದ್ಯಾರ್ಥಿಗಳೆಲ್ಲ ವಾಡಿಕೆಯಂತೆ ಎದ್ದು ನಿಂತು ನನ್ನನ್ನು ಸನ್ಮಾನಿಸಿದರು. ಕುಳಿತುಕೊಳ್ಳಿರಿ ಎಂದು ಸೂಚಿಸಿದರು ನಿಂತೂ ಕುಳಿತುಕೊಳ್ಳಲಿಲ್ಲ, ನನ್ನತ್ತಲೇ ನೋಡಹತ್ತಿದ್ದರು. ಅಲ್ಲದೆ ಬೊಟ್ಟು ಮಾಡಿ ಏನೋ ತೋರಿಸಹತ್ತಿದರು. ನನಗೆ ದಟ್ಟವಾದ ಸಂಶಯ ಬಂದು ಏನೆಂದು ಕೇಳಿದೆ.

"ಕೋಟಿನ ಕಾಲರ ಮೇಲೆ ಕೊಂಡಿಯೆತ್ತಿ ನಿಂತ ಚೇಳು" ಎಂದು ಒಬ್ಬ ವಿದ್ಯಾರ್ಥಿ ಹೇಳಿದಾಗ - 'ಹಾವು ತುಳಿದೇನೋ ಮಾನಿನೀ! ಹಾವು ತುಳಿದೇನೆ' ಎಂದು ಹಾಡಿದಂತಾಗಿ ಕೋಟಿನ ಎಡಭಾಗವನ್ನು ಜಾಡಿಸಿದೆ. ಚೇಳು ಅಷ್ಟುದೂರ ಹೋಗಿ ಬಿತ್ತು.

ಇದೇ ಪ್ರಸಂಗದಲ್ಲಿ, ಇಂಥದೇ ಒಂದು ಸಂಗತಿಯನ್ನು ಹೇಳದಿದ್ದರೆ ಮನಸ್ಸು ಏನಂದೀತು? ನನ್ನ ಮನೆಯಿಂದ ೪-೮ ಮಾರುಗಳ ಅಂತರದಲ್ಲಿ ಚಿಕ್ಕ ಹರಿ ಒಂದು ಹರಿಯುತ್ತದೆ. ಆ ಭಾಗವೆಲ್ಲ ಬಹುತರ ಗಂಡಸರೆಲ್ಲ

ಬಯಲ ಕಡೆಗೆ ಹೋಗುವ ಸ್ಥಳ. ಮನೆಯಿಂದ ತಂಬಿಗೆ, ನೀರು ಏನೂ ತರುವ ಕಾರಣವಿಲ್ಲ. ಕಿವಿಯಲ್ಲಿ ಸಿಕ್ಕಿಸಿದ ಆರಿಸಿದ ಬೀಡಿ, ಕಿಸೆಯಲ್ಲಿ ಕಡ್ಡಿ ಪೆಟ್ಟಿಗೆ ಇವೆರಡಿದ್ದರೆ ಸಾಕು ಆ ಫ್ಲಾಟ್ ಫಾರ್ಮಿನ ತಿಕೀಟು ಸಿಕ್ಕಂತೆ. ಅದೆಂಥ ಕೃಷ್ಣ ಪಕ್ಷವೇ ಇರಲಿ, ಅದೆಂಥ ಕಾರ್ಗತ್ತಲೆ ಸುರಿಯುವ ಮೋಡಗಳೇ ಮಗ್ಗುಲಲ್ಲಿ ಹಬ್ಬಿಕೊಂಡಿರಲಿ, ಬೀಡಿ ಹೊತ್ತಿಸಿದವನ ಕಿಡಿ ನಮ್ಮ ಪಡಸಾಲೆಯಲ್ಲಿ ಕುಳಿತವರ ಕಣ್ಣುಗಳನ್ನು ಕೊರಯಿಸುತ್ತಿತ್ತು.

ನಮ್ಮ ಮನೆಯ ಪಡಸಾಲೆಯಲ್ಲಿ ಒಟ್ಟಿಗೆ ೪-೫ ಜನ ಮಲಗುತ್ತಿದ್ದೆವು. ಇಬ್ಬರು ಗರಡೀ ಗೆಳೆಯರು, ಇಬ್ಬರು ಪರ ಊರಿನ ವಿದ್ಯಾರ್ಥಿಗಳು ಮತ್ತು ನಾನು. ಉಳಿದವರಿಗೆಲ್ಲ ನಿದ್ದೆ ಹತ್ತಿದ್ದನ್ನು ಅವರ ಗೊರಿಕೆ ಹೇಳಿಕೊಡಲು, ನಾನು ಓದುವುದನ್ನು ಮುಗಿಸಿ ಒಂದಕ್ಕೆ ಹೋಗಿ ಬಂದು, ಕಂದೀಲ ದೀಪವನ್ನು ತುಸು ಇಳಿಸಿ, ಶೀರ್ಷಾಸನ ಹಾಕುತ್ತಿದ್ದೆ. ಅದು ದಿನದ ಕೊನೆಯ ಕಾರ್ಯಕ್ರಮ. ತಲೆಕೆಳಗೆ, ಕಾಲ ಮೇಲೆ ಮಾಡಿ ನಿಂತಾಗ ಒಂದು ನಾಯಿ ಸಪ್ಪಳಿಲ್ಲದೆ ಓಡಿ ಬಂದು, ತಿರುವು ಮುರುವಿನ ಪ್ರಾಣಿ ಯಾವುದು ಎಂದು ಲೆಕ್ಕಹಾಕತೊಡಗಿತು. ಶಿರದತ್ತ ಬಾಗಿ ನನ್ನ ಮುಖವನ್ನು ಮೂಸಿ, ತನ್ನ ಗೋಣು ಪೂರ್ಣ ಎತ್ತರಿಸಿ ಮೇಲೆ ನೋಡಿದರೆ ಎರಡು ಪಾದ ಎಂಬ ವಿಷಯವನ್ನು ೩ ಸಾರೆ ನೋಡಿ ನಿರ್ಧರಿಸಿಕೊಂಡು, ಬಂದ ದಾರಿಯಲ್ಲಿ ಓಡಿಹೋಯಿತು. ನನಗೆ ಹೊಟ್ಟೆ ತುಂಬ ನಗೆ ಬಂದಿದ್ದರಿಂದ ಆಸನ ಮುಗಿಸಿದೆನು.

ಇನ್ನೊಂದು ರಾತ್ರಿ ನನ್ನ ತಲೆದಿಂಬು ಮತ್ತು ಹಾಸಿಗೆಯ ನಡುವಿನ ಪೊಳ್ಳಿನಲ್ಲಿ ಏನೋ ಸುಳಿದಾಡಿದಂತಾಯಿತು. ಹೊರಳಿ ಮಲಗಿದೆ, ಕೆಳಕ್ಕೆ ಸರಿದೆ, ಮೇಲಕ್ಕೆ ಸರಿದೆ ಆ ಸುಳಹು ಅಡಗಲೇ ಇಲ್ಲ. ಕೊನೆಗೆ, ಕಂದೀಲಿನ ಬತ್ತಿ ಥಳಿಸಿ ನೋಡಿದರೆ, ತಲೆ ದಿಂಬು ಹಾಸಿಗೆಗಳ ನಡುವಿನ ಪೊಳ್ಳಿನಲ್ಲಿ ಏಡಿ ಕುಳಿತಿತ್ತು. ಬೆಳಕು ಕಂಡು, ಅಡ್ಡ ನಡೆಯ ಹತ್ತಿತು. ಅದು ಬಹುಶಃ ಪೂರ್ವ ದಿಕ್ಕಿನಲ್ಲಿ ಅಡ್ಡ ಮಲಗಿದ ನೀರಹರಿಯಿಂದ ಹೊರಟು ಬಂದು ನನ್ನನ್ನು ಆಶ್ರಯಿಸಿತ್ತೆಂದು ತೋರುತ್ತದೆ. ಮಲಗಿದವರನ್ನೆಲ್ಲ ಎಬ್ಬಿಸಿ, ಏಡಿಯನ್ನು ತೋರಿಸಿ ಅದು ಮಾಡಿದ ಕಥೆ ಹೇಳಿದೆ.

ನಾಲ್ವರಲ್ಲಿ ಹೆಚ್ಚು ಗಟ್ಟಿಗರಾದ ಒಬ್ಬರು ಎದ್ದು, ಆ ಏಡಿಯನ್ನು ಹಿಡಿದು ಹಳ್ಳದ ಬದಿಯಲ್ಲಿ ಚೆಲ್ಲಿ ಬಂದರು. ಆದರೂ ಬಹಳ ಹೊತ್ತಿನವರೆಗೆ ನಿದ್ರೆ ಹತ್ತಲೇ ಇಲ್ಲ. ಪೂರ್ವಜನ್ಮದ ಕಥೆಗಳೆಲ್ಲ ನೆನಪಾಗ ತೊಡಗಿದವು. ಬೆಳಗಾಗುವ ಹೊತ್ತಿಗೆ ಹತ್ತಿದ್ದು ಬರೀಜಂಪು.

೨೧. ಮದುವೆಯ ಸಂಭ್ರಮ

ನಾನು ಧಾರವಾಡದ ತರಭೇತಿ ಕೇಂದ್ರದಲ್ಲಿದ್ದಾಗಲೇ ಚಡಚಣದ ನಮ್ಮ ಮನೆಯಲ್ಲಿ ಒಂದು ಚಿಕ್ಕ ಕಾರ್ಯಕ್ರಮ ನಡೆದು ಹೋಯಿತು.

ನಮ್ಮ ಅತ್ತಿಗೆಯ ಕುಶಲವಾದ ಪ್ರಯತ್ನದಿಂದ ಚಡಚಣದಲ್ಲಿಯೇ ಇದ್ದ ಕೇಶೆಟ್ಟಿ ಎಂಬ ಮನೆತನದ ಕನ್ಯೆ-ಸೊಲಬವ್ವನನ್ನು ನನಗೆ ಕೊಡುವುದಕ್ಕೆ ಆ ಮನೆತನದವರು ಸಮ್ಮತಿಸಿದರು. ಮಾತುಕತೆ ಮುಗಿಯುವುದೇ ತಡ, ಕುಂಕುಮ ಹಚ್ಚುವ ಕೆಲಸ ನಡೆದು ಹೋಯಿತು. ಆ ಸಂಗತಿಯನ್ನು ನನ್ನ ಮಿತ್ರ ವಿಠ್ಠಲ ಬರಡೋಲ ಎಂಬವರು ಧಾರವಾಡಕ್ಕೆ ಪತ್ರ ಬರೆದು ನನಗೆ ತಿಳಿಸಿದರು. ಆ ಪತ್ರವೋದಿ ನನಗೆ ಸಂತೋಷವಾಯಿತೆಂದು ಹೇಳುವ ಕಾರಣವೇ ಇಲ್ಲ.

ಕುಂಕುಮ ಹಚ್ಚುವ ಕಾಲಕ್ಕೆ ಮನೆಯಲ್ಲಿದ್ದ ಬಿದ್ದ ಬಂಗಾರದಿಂದ ಪುತಳಿಯ ಸರಮಾಡಿ ಕನ್ಯೆಯ ಕೊರಳಲ್ಲಿ ಹಾಕಿದರು.

ಅತ್ತಿಗೆ ಗುರಮ್ಮನು ಮೇಲಿಂದ ಮೇಲೆ ಹೊಸನೆಂಟರ ಮನೆಗೆ ಹೋಗಿ ಕನ್ಯೆಯ ಮನವೊಲಿಸಿ ಮನೆಗೆ ಕರೆತಂದು, ಅಡಿಗೆ ಮನೆಯ ಕೆಲಸ ಮಾಡಿಸಲು ತೊಡಗಿದಳು. ಅದರಿಂದ ಬೀಗರಿಗೆ ಹಿಗ್ಗು, ನಮ್ಮವರಿಗೆ ಹಗುರು ಆಯಿತು.

ಇನ್ನು ಲಗ್ನವೆಂದು?

ಮೈದುನನು ಧಾರವಾಡದಿಂದ ಬಂದ ಬಳಿಕ, ತಪ್ಪದೆ ಸಿಗುವದೆಂಬ ನೌಕರಿ ಆರಂಭವಾಗುತ್ತಲೆ ಮದುವೆ ಮಾಡಿ ಬಿಡೋಣ ಎಂದು ಕನ್ಯೆಯ ತಾಯಿಗೆ, ಅಣ್ಣಂದಿರಿಗೆ ಹೇಳಿ ವಿಶ್ವಾಸ ಹುಟ್ಟಿಸಿದಳು. ಆದರಿಂದ ಅವರಿಗೆ ಸಮಾಧಾನವಾಯಿತು. ಮುಂದೆ ಎಣಿಕೆ ಹಾಕಿದಂತೆ ಭತಗುಣಕಿಯಲ್ಲಿ ನೌಕರಿ ಆರಂಭವಾಯಿತು. ತಿಂಗಳ ಸಂಬಳ ೨೫ ರೂ. ಎಂದು ನಿಚ್ಚಳವಾಯಿತು.

ಚಡಚಣಕ್ಕೆ ನಾಡಿನ ಹಿರಿಯ ಮುಖಂಡರು ಮೇಲಿಂದ ಮೇಲೆ ಬಂದು ರಾಷ್ಟ್ರಕಾರ್ಯ ಉತ್ಸಾಹದಿಂದ ಮುಂದುವರಿಯುವಂತೆ ಮಾಡಿದರು. ರೈತರ ಸಂಘ ಖಾದೀ ನಿರ್ಮಾಣ ಕಾರ್ಯ, ಅದರ ಪ್ರಕಾರ ಕೆಲಸ ಇವೆಲ್ಲ ಬಹು ತೀವ್ರಗತಿಯಲ್ಲಿ ಬೆಳೆದು ನಿಂತವು. ಆಗಾಗ ಚಡಚಣದ ಸಾರ್ವಜನಿಕರು, ನಾಡ ಮುಖಂಡರ ಭಾಷಣ ಕೇಳುವ ಸುಪ್ರಸಂಗಗಳಿಂದ ಉತ್ಸಾಹಿತರಾದರು.

ನಾನಂತೂ ಸೂಟಿಯ ಅವಧಿಯಲ್ಲಿ ಚಡಚಣಕ್ಕೆ ಬಂದು ಅಲ್ಲಿ ನಡೆಯುವ ಖಾದೀ ಹುಟ್ಟುವಳಿ ಮತ್ತು ಪ್ರಚಾರ ಕೆಲಸವನ್ನು ಕುದುರಿಸಲು ಬೇಕಾಗುವ ನಗರ ಸಂಕೀರ್ತನೆಯ ಪದಗಳನ್ನು ರಚಿಸಿಕೊಟ್ಟೆ. ಖಾದಿಯ ಮಹಿಮೆ, ಚಹ ತಂಬಾಕುಗಳ ಅನಿಷ್ಟತೆ, ಪರದೇಶಿ ವಸ್ತುಗಳ ತ್ಯಾಜ್ಯ ಮೊದಲಾದ ವಿಷಯಗಳನ್ನು ಕುರಿತು, ಹಲವಾರು ಲಾವಣಿಗಳನ್ನು ಬರೆದು, ಹಾಡಬಲ್ಲವರಿಗೆ ಚೆನ್ನಾಗಿ ಕಲಿಸಿ, ಸಾರ್ವಜನಿಕರ ಕಿವಿಗೆ ಮುಟ್ಟಿ, ಮನಸ್ಸಿಗೆ ತಟ್ಟುವಂತೆ ಮಾಡಿದೆನು. ಈ ಕೆಲಸಗಳನ್ನು ಒಂದೊಪ್ಪತ್ತಿನ ಸೂಟಿಯಲ್ಲಿ ಅಥವಾ ರಾತ್ರಿಯಲ್ಲಿ ಹೇಳಿಕೊಟ್ಟು, ಬೇಗಾಗುವಷ್ಟರಲ್ಲಿ ಭತಗುಣಕಿ ಶಾಲೆಯ ವರ್ಗದಲ್ಲಿ ಕುಳಿತು ಪಾಠ ಹೇಳುತ್ತಿದ್ದೆನು. ಅದರಿಂದ ಶಾಲೆಯ ಕೆಲಸಕ್ಕೆ ಯಾವ ವ್ಯತ್ಯಯವೂ ಬರುತ್ತಿರಲಿಲ್ಲ. ಆದರೆ ಚಡಚಣ ಪೋಲಿಸ ಠಾಣೆಯ ಅಧಿಕಾರಿಗಳು ಎಡೆಬಿಡದೆ ಮೇಲಧಿಕಾರಿಗಳಿಗೆ ತಿಳಿಸಿ, ನನ್ನ ಸಲುವಾಗಿ ಅನಾದರ ಭಾವನೆಯನ್ನು ಹುಟ್ಟಿಸುತ್ತಲೇ ಬರುತ್ತಿದ್ದರು.

೧೯೨೮ನೇ ಒಂದು ವೈಶಾಖದಲ್ಲಿ ನನ್ನ ಲಗ್ನ ಮಾಡಿ ಮುಗಿಸ ಬೇಕೆಂದು ನಿಶ್ಚಯಿಸಿದರು. ಅದಕ್ಕಾಗಿ ಬೇಕಾಗುವ ಹಿಟ್ಟು, ಅಕ್ಕಿ, ಬೆಲ್ಲ,

ಬೇಳೆಗಳನ್ನು ಕೊಂಡು ತರುವುದಕ್ಕೆ ಬೇಕಾಗುವ ಹಣವನ್ನು ಶಿಕ್ಷಕರ ಸಹಕಾರಿ ಸಂಘದಿಂದ ಸಾಲತಂದು, ಮನೆಯವರ ಕೈಗೆ ಕೊಟ್ಟೆನು. ಗೋದಿ, ಅಕ್ಕಿ, ಬೇಳೆ ಖರೀದಿ ಆಯಿತು. ಬೆಲ್ಲವನ್ನೂ ಮರೆಯಲಿಲ್ಲ. ಲಗ್ನಕ್ಕೆ ಬೇಕಾಗುವ ಸೀರೆ, ಕುಪ್ಪಸಗಳನ್ನು ತಾತ್ಪೂರ್ತಿಕ ಉದ್ದರಿಯಿಂದ ಕೊಡುವುದಕ್ಕೆ ಒಬ್ಬ ಮಿತ್ರನ ಮನವೊಲಿಸಿದ್ದಾಯಿತು.

ಆಗಿನ್ನೂ ಹಿಟ್ಟಿನ ಗಿರಣಿ ಬಂದಿರಲಿಲ್ಲ. ಆದ್ದರಿಂದ ಪ್ರತ್ಯೇಕ ವ್ಯವಸ್ಥೆ ಮಾಡುವುದು ಅನಿವಾರ್ಯವಾಗಿತ್ತು. ನಮ್ಮ ಮನೆಯಲ್ಲಿ ೪-೬ ಎತ್ತು ಗಲ್ಲುಗಳನ್ನು ತಂದಿಟ್ಟರು. ರಾತ್ರಿ ೯ ಗಂಟೆಯಿಂದ ಆ ನಾಲ್ಕಾರು ಬೀಸು ಕಲ್ಲುಗಳಲ್ಲಿ ಗೋದಿ ಬೀಸುವ ಕೆಲಸವನ್ನು ನೆರೆಹೊರೆಯ ಹಾಗೂ ಹತ್ತಗಡೆಯ ಬಂಧುಗಳು ಸಕಾಲಕ್ಕೆ ಊಟ ಮಾಡಿ ನಮ್ಮ ಮನೆಗೆ ಬಂದು ಬೀಸಿಕೊಟ್ಟು ಹೋಗುತ್ತಿದ್ದರು. ಅದಕ್ಕಾಗಿ ೩-೪ ಕಂದೀಲ ಹಚ್ಚಿ ತೂಗ ಬಿಡಲಾಗುತ್ತಿತ್ತು.

ನಮ್ಮ ಧಾನ್ಯದಂಗಡಿಯಲ್ಲಿ ವ್ಯಾಪಾರ ಮಾಡುವ ಪೋಲಿಸ ಪೇದೆಗಳಲ್ಲಿ ೪-೬ ಜನರು ಬಂದು ಮಧ್ಯರಾತ್ರಿಯವರೆಗೆ ಹಾಡುತ್ತ ಬೀಸಿ, ಆ ಬಳಿಕ ಗಸ್ತಿಯ ಡ್ಯೂಟಿಗೆ ಹೋಗುತ್ತಿದ್ದರು. ನಮ್ಮ ಅತ್ತಿಗೆಯನ್ನು ಒಡಹುಟ್ಟಿದ ಅಕ್ಕನಂತೆ ಬಗೆಯುವ ಮೌಲಾ, ಮದಾರಸಾಬ, ಭೀಮನ ಗೌಡ, ಧೋಂಡಿಬಾ ಮೊದಲಾದವರು ಜೋಡಿ ಜೋಡಿಯಾಗಿ ಬೀಸ ಕುಳಿತು ಹಾಡಲಾರಂಭಿಸಿದರೆ, ಅದನ್ನು ಕೇಳುವುದಕ್ಕೆ ಹತ್ತಿಪ್ಪತ್ತು ಗಂಡು ಹೆಣ್ಣು ಸೇರುತ್ತಿದ್ದರು. ಅವರಿಗೂ ಬೀಸುವ ಸರತಿ ಬಾರದೆ ಹೋಗುತ್ತಿರಲಿಲ್ಲ.

ಬೀಸುವುದಕ್ಕೆ ಬೇಸತ್ತವರು ಅಕ್ಕಿಬೇಳೆ ಹಸನು ಮಾಡುವುದಕ್ಕೆ ಸಿದ್ಧರಾಗುತ್ತಿದ್ದರು. ಈ ಎಲ್ಲ ಕೆಲಸಗಳಿಗೆ ಕೂಲಿಯಂತೂ ಇರಲಿಲ್ಲ. ಚಹದ ಜಂಜಡ ಮಾತ್ರ ಒಂದಿಷ್ಟಿತ್ತು. ಗೋದಿ ಕುಟ್ಟಿ ಹುಗ್ಗಿಯ ಅಕ್ಕಿ ತಯಾರಿಸುವ ಹಾಗೂ ಸೊಗಸಾದ ಮಸಾಲೆ ಪುಡಿಯನ್ನು ಹದಗೊಳಿಸುವ ಹೆಣ್ಣುಮಕ್ಕಳೂ ಬರುತ್ತಿದ್ದರು. ಅವರಿಗೆ ದೊರೆಯುವ ದಿನದ ಪ್ರತಿಫಲವೆಂದರೆ, ಬೆಲ್ಲದ ಚಹ ಹಾಗೂ ಲಗ್ನದ ಕಾಲಕ್ಕೆ ದೊರೆಯುವ ತಬಕ ತುಂಬ ದೊರೆಯುವ ಹುಗ್ಗಿ.

ಇದೆಲ್ಲ ಸಿದ್ಧವಾದ ಮೇಲೆ ಬಣಗಾರ ಸಮಾಜದವರು ಅಯ್ಯನವರನ್ನು ಕರೆ ತಂದು ಅಕ್ಕಿಕಾಳು ಗಂಟು ಕಟ್ಟುವ ವಿಧಾನ ಮುಗಿಸಿದರು. ಮನೆಯಲ್ಲಿ ಈ ಎಲ್ಲ ಕೆಲಸ ನಡೆಯುವ ದಿನಗಳಲ್ಲಿ, ನಾನು ನನ್ನ ಭತಗುಣಕಿಯಲ್ಲಿಯೇ ಉಳಿದು, ಕೈಯಿಂದ ರೊಟ್ಟಿ ಮಾಡಿಕೊಂಡು ಉಂಡು ತಣಿಯುತ್ತಿದ್ದೆನು.

ನನ್ನ ಕೈಹಿಡಿಯತಕ್ಕ ಕನ್ಯೆ ಅರಿಸಿಣ ಹಚ್ಚುವ ದಿವಸ ಸಹ ಸಂಜೆಯವರೆಗೆ ಅಕ್ಕ ಗುರಮ್ಮನ ಹತ್ತಿರವೇ ಉಳಿದು ಕೆಲಸ ಮಾಡುತ್ತಿದ್ದಳು.

ನಮ್ಮದು ಶ್ರೀಮಂತ ಲಗ್ನವಲ್ಲದಿದ್ದರೂ ಅರಿಸಿಣ ಹಚ್ಚುವುದು, ನಂದಿ ಮಕ, ಅಕ್ಷತಾರೋಪಣ ಎಂಬ ಮೂರು ದಿನಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ನಮ್ಮ ಲಗ್ನದೊಡನೆ ಇನ್ನೊಂದು ಲಗ್ನವೂ ಅದರೊಂದಿಗೆ ಮುಗಿಯುವುದಕ್ಕೆ ಆಸ್ಪದ ಮಾಡಿಕೊಡಲಾಗಿತ್ತು.

ಸಿಂಪಿ ಮನೆತನಕ್ಕೆ ಸೇರಿದ ಚನಮಲ್ಲಪ್ಪನ ಮಗ ಶರಣಪ್ಪನ ಲಗ್ನವೂ ಆ ಕಾಲಕ್ಕೆ ನಡೆದು ಹೋಗುವಂತೆ ಅನುಕೂಲ ಮಾಡಿಕೊಡಲಾಯಿತು. ಅತ್ತಿಗೆ ಗುರಮ್ಮನ ದೊಡ್ಡಪ್ಪನ ಮಗ ಶಂಕರನ ಮಗಳನ್ನೇ ಶರಣಪ್ಪನಿಗೆ ಕೊಡಿಸಲಾಯಿತು. ಒಂದರೊಡನೆ ಇನ್ನೊಂದು ಲಗ್ನವಾದಂತೆ, ಮೂರು ದಿನಗಳ ಕಾರ್ಯಕ್ರಮಗಳಲ್ಲಿ ನಡುವಿನ ದಿನವೊಂದು ಲುಪ್ತವಾಗಿ ದಾಟಿ ಹೋಯಿತು. ಹಾಗೆ ಮಾಡಲು ಜ್ಯೋತಿಷಿಗಳು ಮೊದಲೇ ಹೇಳಿದ್ದರಂತೆ, ಅಂತೆಯೇ ಅದೊಂದು ಮದುವೆಯ ಸಂಭ್ರಮವೇ ಆಗಿಹೋಯಿತು.

ನನ್ನ ಲಗ್ನದ ಹೊತ್ತಿಗೆ ನನ್ನ ವಯಸ್ಸು ೨೩ ನಡೆದಿತ್ತು. ಕನ್ಯೆಯ ವಯಸ್ಸು ಅದಕ್ಕಿಂತ ೮ ವರ್ಷ ಕಡಿಮೆ. ಅಕ್ಕಿಕಾಳು ಬಿದ್ದ ಬಳಿಕ ಒಂದೇ ಕುದುರೆಯ ಮೇಲೆ ಇಬ್ಬರೂ ಮದುಮಕ್ಕಳನ್ನು ಇನ್ನೊಂದು ಕುದುರೆಯ ಮೇಲೆ, ಇನ್ನಿಬ್ಬರು ಮದುಮಕ್ಕಳನ್ನು ಕುಳ್ಳಿರಿಸಿ ಮೆರವಣಿಗೆ ತೆಗೆಯಲಾಯಿತು.

ತಾರುಣ್ಯಾವಸ್ಥೆಗೆ ಬಂದ ವಧುವರರನ್ನು ಗಂಡಹೆಂಡಿರನ್ನಾಗಿ ಮಾಡಿಸುವ ತನ್ನ ಮೈದುನ ದೊರೆಯ ಲಗ್ನದ ಕಥೆಯನ್ನು ಅತ್ತಿಗೆಯು ಬಲು ಸೊಗಸಾಗಿ, ಕೈಯೆತ್ತಿ ಒಮ್ಮೆ ಎದೆಗೆ ಕೈಹಚ್ಚಿ ಒಮ್ಮೆ ಹೇಳುತ್ತಿದ್ದನ್ನು ಕೇಳಿ ಹರ್ಷಿತರಾದವರು ಒಬ್ಬರಲ್ಲ, ಇಬ್ಬರಲ್ಲ ನೂರಾರು ಜನ. ಆಗ

ತಿಳಿಯಿತು ನನಗೆ ಲಗ್ನವೆನ್ನುವುದು ಜೀವನದಲ್ಲಿ ನಡೆಯುವ ಅತಿ ಪ್ರಮುಖವಾದ ದೊಡ್ಡ ಬದಲಾವಣೆಯೆಂದು.

ಲಗ್ನವೂ ಮುಗಿಯಿತು, ಸೂಟಿಯ ದಿನಗಳೂ ಮುಗಿದವು. ಆರು ಹರದಾರಿ ಅಂತರದಲ್ಲಿರುವ ಭತಗುಣಕಿ ಶಾಲೆಯ ಕರೆ ಕುಳಿತಲ್ಲಿಯೇ ಕೇಳಿಸತೊಡಗಿತು. ಆಗ ನೋಡಬೇಕು ನನ್ನ ಮುಖವನ್ನು ಆಗ ನಿಟ್ಟಿಸಬೇಕು ನನ್ನ ಕಣ್ಣುಗಳನ್ನು. ಅವೆರಡನ್ನೂ ನಮ್ಮ ಅತ್ತಿಗೆ, ಬಹು ಕಂಡು ಹಿಡಿದಳೆಂದು ಹೇಳಬಹುದು.

ಪುಂಡಿಪಲ್ಲೆಯಲ್ಲಿ ಬೆರಸಲು ಜೋಳದ ನುಚ್ಚು ಬೇಕೆಂಬ ನೆವದಿಂದ ಎಂದೂ ಬೀಸಿಯರಿಯದ ಅತ್ತಿಗೆ, ಬೀಸೂಕಲ್ಲಿನ ಮುಂದೆ, ಎಡಗಾಲು ಚಾಚಿ ಕುಳಿತು ಕಲ್ಲಿಗೆ ಮುಕ್ಕು ಹಾಕಿ ಹಾಡತೊಡಗಿದ ಹಾಡು ಇಂದಿಗೂ ನನ್ನೆದೆಯನ್ನು ಕಿವುಚುತ್ತದೆ -

ಊರೀಗಿ ಹೋಗವರ ಮಾರ್‍ಯಾಕ ಬಾಡ್ಯಾವ
ಗೀರ ಗಂಧ್ಯಾಕ ಬೆವತಾವ। ನಾರಿ ನಿನ್ನ
ಕಣ್ಣು ಒಳಹೊರಗ ॥

ಎಂದು ಮುಗುಳು ನಕ್ಕಿದ್ದು ಚಿತ್ರವಾಗಿ ನನ್ನ ಚಿತ್ತಭಿತ್ತಿಯ ಮೇಲೆ ಮೂಡಿನಿಂತಿದೆ.

ಅಡಗೀಯ ಮನಿಯಾಗ ಮಡದಿಯ ಸುಳುವಿಲ್ಲ
ಅಡಿಗಿ ಬಾಯೀಗಿ ರುಚಿಯಿಲ್ಲ। ಮಡದೀನ
ಬಿಟ್ಟು ಹೊಂಟಾರ ಪರನಾಡ ॥

ಎನ್ನುತ್ತ ಕಲ್ಲುಗರಗರ ತಿರುಹುವ ಸಂಭ್ರಮವನ್ನು ಅಂದು ಅತ್ತಿಗೆಯಲ್ಲಿ ಕಂಡೆನು.

ಹೀಗೆ ಜೀವನ ಮತ್ತು ಸಾಹಿತ್ಯ ಹಾಸುಹೊಕ್ಕಾಗಿ ಮೇಲೆ ಕುಂದದ ಬಣ್ಣವಾಗಿ ಪರಿಣಮಿಸಬಲ್ಲದೆಂಬ ಅನುಭವವು ನನಗುಂಟಾದದ್ದು ಬಹು ಹಿಂದಿನ ಕಾಲದ ಸಂಗತಿ. ಆದರೆ ಅದು ನಿತ್ಯ ನೂತನವಾಗಿ,

ತಾನೇ ತಾನಾಗಿ ನಿಂತು ಕೊಂಡಿದೆಯೆಂದು ನಾನಂತೂ ಹೇಳಬೇಕು. ಉಳಿದವರು ತಮ್ಮ ಈ ಅನುಭವವನ್ನು ಬೇರೊಂದು ಬಗೆಯಲ್ಲಿ ಬಗೆಹರಿಸಬಹುದು.

ಮದುವೆಯಾದ ತರುವಾಯ ನನ್ನ ದೇಹ ಭತಗುಣಕಿಯಲ್ಲಿ, ಮನಸ್ಸು ಚಡಚಣದಲ್ಲಿ. ಶಾಲೆಯ ಕೆಲಸವೂ ಸೊಗಸದು, ಮನೆಯ ಅಡಿಗೆಯೂ ರುಚಿಸದು, ಉಂಡು ಉಪವಾಸವೆನ್ನುವುದು ಆದೇ ಅಹುದೇನು ಎಂಬ ಸಂಶಯ ಬರುತ್ತದೆ.

ಧನ-ಋಣ ವಿದ್ಯುತ್ತುಗಳು ಒತ್ತಟ್ಟಿಗೆ ಸಂಗಳಿಸಿದರೆ ಅಲ್ಲೊಂದು ನಿಚ್ಚಳ ವಾದ ಜ್ಯೋತಿ ಮಿಣುಕುತ್ತದೆ. ಎರಡು ಧನಗಳಾಗಲಿ, ಎರಡು ಋಣ ಗಳಾಗಲಿ ಒಂದುಗೂಡಿದರೆ ಯಾವ ಪರಿಣಾಮವೂ ಕಂಡುಬರದು. ಸಾಂಬನೆಂಬುವನು ಒಬ್ಬನೇ ಇದ್ದಾನೆಂದು ಹೇಳಬಲ್ಲವರುಂಟು, ಆದರೆ ಅಂಬನೇ ಸಾಂಬನೆಂದು ತಿಳಕೊಳ್ಳವುದು ಸುಲಭವಲ್ಲ.

ಚಿಮ್ಮುತ್ತ ನಿರಿಯನು ಬನದಲಿ ಬಂದಳು
ಬಿಂಕದ ಸಿಂಗಾರೀ ॥

ಆಕೆ ಕೇಳುತ್ತಾಳೆ - ನನಗೆ ಮದುವೆ ಎಂದು?

ಬನರಿಯು ಅದಕ್ಕೆ ಕೊಡುವ ಮರುನುಡಿಯೇ ಬೇರೆಯಾಗಿದೆ.

"ಆಳಿಬ್ಬಿಬ್ಬರು ಕೇರಿಯ ಸುತ್ತಿ ಹೆಗಲಲಿ ಹೊತ್ತಂದು"

ಹೊಸ ಮದುಮಕ್ಕಳಿಗೆ ಈ ಉತ್ತರ ಸಮನಿಸದು.

ಅವರು ಚಿರಂಜೀವರಾಗಿ ಹುಟ್ಟಿದ ಮೇಲೆ ಚಿರಂಜೀವರಾಗಿ ಬದುಕಬೇಕೆನ್ನುತ್ತಾರೆ. ಚಿರಂಜೀವಿಗಳಿಗೂ ಚಿರಜೀವಿಗಳಿಗೂ ನಡೆದ ಶೀತಲ ಯುದ್ಧ ಇಂದು ನಿನ್ನೆಯದಲ್ಲ. ನಾಳೆ ನಾಡದು ಮುಗಿಯುವಂಥದೂ ಅಲ್ಲ.

ಹೀಗೆ ಲಗ್ನದ ತರುವಾಯ ಒಳ ಜೀವನದಲ್ಲಿ ನಡೆದಂಥ ಶೀತಲ ಯುದ್ಧವು ಹೊರಜೀವನದಲ್ಲಿಯೂ ನಡೆಯಲೇ ಬೇಕಾಗಿದೆ. ಅದೇ ಸಂಸಾರ ಸಮರ. ಪ್ರಪಂಚದ ಪಾಣಿಪತ್ತು. ಅದರಲ್ಲಿ ಹೋರಾಡಿದವರೇ ಗೆದ್ದರೆನ್ನಬೇಕು, ಭೋರಾಡಿದವರೇ ಸೋತರೆನ್ನಬೇಕು.

೨೨. ಬೆಸುಗೆ ಬಿಡಿಸಿದ ಬೇಸಗೆ ಸೂಟಿ

ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ. ಬೇಸಗೆ ವರುಷಕ್ಕೊಮ್ಮೆ ಹೇಳಿ ಕಳಿಸಿದಂತೆ ಬಂದರೂ ತಿಂಗಳೊಪ್ಪತ್ತು ನಿಂತು ಮಳೆಗಾಲದ ಸೆರಗಿಗೆ ಗಂಟುಹಾಕಿ ತಾನು ತೆರಳುತ್ತದೆ. ನಮ್ಮ ಮದುವೆ ಯಾಗಿ ಮರು ಬೇಸಗೆ ಕಳೆದರೂ `ಕನ್ಯೆಯೇನು ದೊಡ್ಡವಳಾಗಲಿಲ್ಲ. ವಯಸ್ಸು ೧೫ಕ್ಕೆ ಬಂದರೂ ಋತುಮತಿ ಆಗಲಿಲ್ಲ. ಮದುವೆ ಆದದ್ದೊಂದೇ ನಿಜವಾಯಿತು. ಆದರೆ ಕೂಳು ಕುದಿಸುವ ನನ್ನ ಬವಣೆಯೇನೂ ಹಿಂಗಲಿಲ್ಲ. ಋತುಮತಿಯಾಗಿದ್ದರೆ ನಾನು ಕೆಲಸ ಮಾಡುವ ಊರಿಗೆ ಕರೆದೊಯ್ಯುತ್ತಿದ್ದೆ. ಕನ್ಯೆ ಗಂಡನ ಬಳಿಯಲ್ಲಿರಬೇಕಾದ ಪ್ರಸಂಗ ಸಂಗಳಿಸುವುದಕ್ಕೆ ತಡವಾಯಿ ತೆಂದರೂ ಆಕೆಯನ್ನು ತವರುಮನೆಯಲ್ಲಿ ಅತ್ತಿಗೆ ಇರಗೊಡಿಸಲೊಲ್ಲಳು. ಮನೆಗೆ ಕರೆತಂದು ಇದ್ದಬಿದ್ದ ಕೆಲಸಗಳನ್ನೆಲ್ಲ ಮಾಡಿಸಿಕೊಳ್ಳುವಳು. ಅದು ಕನ್ಯೆಗೂ ಆಭಾಸ, ತವರಿನವರಿಗೂ ಆಭಾಸ. ಇದನ್ನು ತಪ್ಪಿಸುವ ಬಗೆ ಹೇಗೆ?

ಸಾಮಾಜಿಕರು ಆ ದಿಶೆಯಲ್ಲಿಯೂ ವಿಚಾರ ಮಾಡಿದ್ದಾರೆ ಅವಶ್ಯವಿ ದ್ದಲ್ಲಿ ಅದನ್ನು ಕಾರ್ಯರೂಪದಲ್ಲಿಯೂ ತಂದಿದ್ದಾರೆ. ಏನದು ಆ ಉಪಾಯ?

ಕನ್ಯೆಗೆ ಸೀರೆ ಉಡಿಸಿ ಗಂಡನ ಮನೆಗೆ ಕರೆತಂದು, ಗಂಡನನ್ನು ಕೂಡಿಸಿಬಿಟ್ಟು ಬೆಳಗು ಮುಂಜಾನೆ ನವ ಸತಿಪತಿಯರಿಗೆ ಸ್ನಾನಕ್ಕೆ ಹಾಕಿ ಆರತಿ ಬೆಳಗಿ ಅವಸರದ ಸವಿಯೂಟವೆನಿಸಿದ ಶಾವಿಗೆಯನ್ನು ಉಣ್ಣಿಸಿ ಬಿಟ್ಟರೆ ತೀರಿತು ಕನ್ಯೆ ದೊಡ್ಡವಳಾದಂತೆಯೇ, ಮುಂದಿನ ಪ್ರಪಂಚದ ದಾರಿ ಸುಗಮಗೊಂಡಂತೆಯೇ.

ಸಾಮಾಜಿಕರ ಈ ರೂಢಿಯು ಏಕೋ ನನಗೆ ಅಷ್ಟೊಂದು ಸರಿಯೆನಿಸಲಿಲ್ಲ. ಆ ವಿಚಾರ ಅತ್ತಿಗೆಗೂ ಸೂಕ್ತವೆನಿಸಿತು. ಆ ಸೀರೆಯುಡಿಸಿ ಕರೆತರುವುದನ್ನು ಮುನ್ನೂಕುತ್ತ ಹೋದರೆ, ಮನೆಯಲ್ಲಿ ಕೂಲಿಯಿಲ್ಲದೆ ದುಡಿಯುವ ಹೆಣ್ಣಾಳು ಸಿಕ್ಕಂತಾಗುತ್ತದೆ. ಈ ಹೂರಣವನ್ನು ಹುದುಗಿಸಿಟ್ಟು ಆಕೆ ಬರಿ ಕಣಕವನ್ನೇ ಹೆರವರ ತೋರಿಕೆಗಾಗಿ ನಿಚ್ಚಳಗೊಳಿಸಿದಳು.

"ನನ್ನ ಮೈದುನ ಎಂದೂ ತಂದವನಲ್ಲ, ಪ್ರಪಂಚಕ್ಕೆ ಒದಗಿಸಿದವನಲ್ಲ. ಉಂಡು ಆಡಿದವನು. ಅಕ್ಕಿಯಿಲ್ಲೋ ಗಂಡಾ, ಎಣ್ಣೆಯಿಲ್ಲೋ ಗಂಡಾ, ಉಪ್ಪು ತೀರಿತೋ ಗಂಡಾ ಕಟ್ಟಿಗೆ ಆದವೋ ಗಂಡಾ ಎನ್ನುವ ಉಪದ್ರವ ಅಥವಾ ಕಿರಿಕಿರಿಯನ್ನು ನನ್ನ ಅಕ್ಕರೆಯ ಮೈದುನನಿಗೆ ಈ ಚಿಕ್ಕ ವಯಸ್ಸಿನಲ್ಲಿ ಹಚ್ಚುವುದು ಬೇಡ" ಎಂಬರ್ಥದ ಮಾತುಗಳನ್ನು ಶಾಸ್ತ್ರೋಕ್ತವಾಗಿ ಹೇಳಿ ಮುಂದೆ ಬಂದು ನಿಂತ ಸಮಸ್ಯೆಯನ್ನು ತಳ್ಳಿಹಾಕುವಳು.

ಒಂದು ಬಗೆಯಿಂದ ಅದೇ ಸುಸೂತ್ರವೆಂದು ನನಗೂ ತೋರಿತು. ಮದುವೆಯಾದ ಮಾತ್ರಕ್ಕೆ ಹೆಂಡತಿಯಾದಂತಲ್ಲವೆಂದೇ ನಾನು ಯೋಚಿಸಿದೆನು. ಇಬ್ಬಗೆಯ ಈ ಜಗ್ಗಾಟದಲ್ಲಿ ತುಸು ವಿರಸ ತಲೆದೋರಿತು. ಹೇಸಿಕೆ ತೂರಿತು. ಗಂಡನಿದ್ದಲ್ಲಿ ಕನ್ಯೆ ಕಳಿಸಿದರೆ ಗಂಡನ ಮನೆಗೆ ಕಳಿಸಿದಂತೆ, ಗಂಡನೇ ಇಲ್ಲದ ಆ ಮನೆಗೆ ಮಗಳನ್ನು ಕಳಿಸುವುದೆಂದರೆ, ತೊತ್ತು ಬಡಿಕ ತನಕ್ಕಾಗಿಯೇ ಎಂದು ಹೆಣ್ಣಿನವರ ಲೆಕ್ಕಾಚಾರ. ಅದು ತಪ್ಪು ಎಂದು ಯಾರೂ ಅನ್ನಲಾರರು.

ಬೇಸಗೆಯ ಸೂಟಿ ಬಂತು. ನಾನು ಊರಿಗೆ ಬಂದೆ. ಆದರೆ ಮದುವೆಯಾದವಳು ತವರು ಮನೆಯಲ್ಲಿ ಆಡುವ ತನಕ ಕುಳಿತವರು ಆರುವ ತನಕ ಏಕೆ ಕುಳ್ಳಿರಬಾರದು? ಎಂದು ನಾನು ಮತ್ತು ನನ್ನ ಗೆಳೆಯರು ಲೆಕ್ಕ ಹಾಕಿದೆವು. ಆದರೆ ಛತಗುಣಕಿಯಲ್ಲಿರುವುದಕ್ಕೂ ಚಡಚಣದಲ್ಲಿರುವುದಕ್ಕೂ ಬಹಳ ಬದಲಾವಣೆಯೆನಿಸಲಿಲ್ಲ.

ಮಾರೀ ನೋಡಿದರೆ ನ್ಯಾರೀ ಮಾಡಿದಂತಾಗುತ್ತದೆ ಎಂದು ಹಿರಿಯರು ಮಾಡಿಟ್ಟ ಲೋಕೋಕ್ತಿಯಿದೆ. ನ್ಯಾರಿ ಮಾಡಿಸುವ ಮುಖವೇ

ನನ್ನ ಕಣ್ಣಿಗೆ ಬೀಳಲಿಲ್ಲವೆಂದರೆ ನ್ಯಾರಿಗೂ ಶಿವರಾತ್ರಿಗೂ ಭೇದವೇನು ಉಳಿಯಿತು? ಮನಸ್ಸಿನ ಈ ಹಲವು ತಾಕಲಾಟಗಳು ಕಡಿಮೆ ಆಗುವುದಕ್ಕೆ ಒಂದು ದಾರಿಯನ್ನು ಕಂಡು ಹಿಡಿಯಬೇಕಾಯಿತು. ಖಾದಿ ಗ್ರಾಮೋದ್ಯೋಗ ಕಾರ್ಯಾಲಯಕ್ಕಾಗಲಿ, ರೈತಸಂಘದ ಕಚೇರಿಗಾಗಲಿ ಹೋಗಿ ಹೊತ್ತು ಕಳೆದು ಬರಬಹುದಲ್ಲ. ಆದರೆ ಕಳೆದ ಮುತ್ತು ಸಿಕ್ಕೀತಲ್ಲದೆ ಹೋದ ಹೊತ್ತು ಮಾತ್ರ ಸಿಗಲೇ ಆರದು.

ಯಂಕಂಚಿ ರಾಮಣ್ಣ, ಕೇಶೆಟ್ಟಿ ಮಲ್ಲ, ಮಠಪತಿ ಸಿದರಾಮಯ್ಯ, ಕುಲಕರ್ಣಿ ಸ್ವಾಮಿರಾಯ ಮೊದಲಾದವರು ತಲೆಗೂಡಿಸಿ ಕುಳಿತು ಒಂದು ನಿರ್ಣಯಕ್ಕೆ ಬಂದೆವು. ನಾರೀಮಣಿ ಎಂಬ ಹೆಸರಿನಲ್ಲಿ ಸಂಯುಕ್ತ ಪೃಥ್ವಿರಾಜರ ಕಥೆಯನ್ನು ನಾಟಕ ರೂಪದಲ್ಲಿ ಬರೆದರೆ, ಜಯಚಂದ್ರನಂಥ ರಾಜಕಾರಣಿಗಳ ಮೊಂಡ ಮುಖಕ್ಕೆ ಕನ್ನಡಿ ಹಿಡಿದಂತಾಗುವುದೆಂದು ಎಣಿಸಿದೆವು. ಆ ಕಥೆಯನ್ನು ನಮ್ಮವರಿಗೆ ಅವಶ್ಯವಾಗಿ ತೋರಿಸಿಕೊಡಬೇಕೆಂದು ಲೆಕ್ಕ ಹಾಕಿದೆವು.

ಅಂತೂ ನಾಟಕ ಬರೆಯಲು ಆರಂಭಿಸಿದೆ. ಕಥೆ ಮೂರಂಕಗಳಿಗೆ ಸಾಲುವಷ್ಟಿತ್ತು, ಅಲ್ಲಲ್ಲಿ ಸೂಕ್ತ ಪದ್ಯಗಳನ್ನು ರಚಿಸಿ ಸೇರಿಸಲಾಯಿತು.

ಬೇಸಿಗೆ ಸೂಟಿ ಅರ್ಧಕ್ಕಿಂತ ಹೆಚ್ಚು ಕಳೆದಿತ್ತು, ಶಾಲೆಗಳು ಆರಂಭವಾಗಲು ೧೧ ದಿನಗಳು ಮಾತ್ರ ಉಳಿದಿದ್ದವು.

ಪಾತ್ರಗಳ ಹಂಚಿಕೆ, ಆಯಾ ಪಾತ್ರಗಳ ಮಾತು, ಹಾಡುಗಳನ್ನು ಪ್ರತ್ಯೇಕ ಪ್ರತಿಯಲ್ಲಿ ಬರೆದು ಕೊಡುವುದು, ಪೇಟಿಯವನೊಡನೆ ಹಾಡಿನ ಹೊಂದಾಣಿಕೆ ಮಾಡಿಕೊಳ್ಳುವುದು ಮೊದಲಾದ ಕೆಲಸಗಳು ಆರಂಭವಾದವು ಸ್ಥಳವೆಲ್ಲಿ?

ಆ ಕೆಲಸಗಳನ್ನೆಲ್ಲ ನಿಸ್ತರಿಸಿಕೊಳ್ಳುವುದಕ್ಕೂ ರಾತ್ರಿ ನಾಟಕದ ಅಭ್ಯಾಸ ಮಾಡುವುದಕ್ಕೂ ನಮ್ಮ ಮನೆಯೇ ಪ್ರಶಸ್ತವಾದುದೆಂದು ಎಲ್ಲರಿಗೂ ತೋರಿತು. ಆ ಮೇಲೆ ನಮ್ಮ ಮನೆಯೆಂದರೆ ಇಡಿಯ ಹಗಲಿರುಳು ನಾಟಕ ಸಿದ್ದತೆ ನಡೆಸುವ ಕಾರ್ಯಾಲಯವೇ ಆಗಿಬಿಟ್ಟಿತು.

ನೀರು ಕುಡಿಯುವೆನೆಂದು ಅಡಗೀಮನೆ ಹೊಕ್ಕವನು ಗುರುಬಾಯಿ ಅಕ್ಕ ಮಾಡಿಟ್ಟ ದೊಡ್ಡ ರೊಟ್ಟಿಯ ಮೇಲೆ ಒಂದು ಮುದ್ದೆ ಹಿಂಡಿಪಲ್ಲೆ ಹಾಕಿಕೊಂಡು ಸೌಟು ಗಾಣದೆಣ್ಣೆ ಸುರುವಿಕೊಂಡು ಉಣ್ಣುವುದಕ್ಕೆ ಯಾರೂ ನಾಚುತ್ತಿರಲಿಲ್ಲ, ಯಾರೂ ಹೆದರುತ್ತಿರಲಿಲ್ಲ, ಹಿಂಜರಿಯುತ್ತಲೂ ಇರಲಿಲ್ಲ.

ಹತ್ತು ದಿನಗಳ ಅಭ್ಯಾಸ ಮುಗಿಸಿ, ೧೧ನೇ ದಿವಸ ವಿರಕ್ತಮಠದ ಬಯಲಲ್ಲಿ ನಾಟಕ ಮಾಡುವುದು. ೧೨ನೇ ದಿವಸ ಬೆಳಗಾಗುವಷ್ಟರಲ್ಲಿ ತಮ್ಮ ಶಾಲೆಯಿದ್ದ ಊರಿಗೆ ಹೋಗಿ ವರ್ಗದಲ್ಲಿ ಕುಳಿತುಕೊಳ್ಳುವುದು. ಕಲಿಸಲಿ ಬಿಡಲಿ ಆ ಮಾತು ಮುಖ್ಯವಲ್ಲ ಸೂಟಿ ಮುಗಿದು ಶಾಲೆ ಆರಂಭವಾಗುವ ದಿವಸ, ಬೆಳಗಿನ ೭ ಗಂಟೆಗೆ ಶಾಲೆಗೆ ಹೋಗಿ, ಶಿಕ್ಷಕರ ಹಾಜರೀ ಪುಸ್ತಕದಲ್ಲಿ ಸಹಿ ಮಾಡಿದರೆ ತೀರಿತು.

ದಿ. ೧೧ ಶನಿವಾರ ನಾಟಕವಾಡಿ, ದಿ. ೧೨ರ ಬೆಳಗಿಗೆ ಶಾಲೆಯಲ್ಲಿದ್ದರಾಯಿತು ತಿಂಗಳ ಸಂಬಳ ದಕ್ಕಿದಂತಾಯಿತು. ಆಮೇಲೆ ದಿ. ೧೪ಕ್ಕೆ ಅಂದರೆ ಚಡಚಣ ಸಂತೆಯ ದಿನವೂ ಒಂದು ನಾಟಕ ಇರಿಸಿ ಕೊಂಡೆವು.

ದಿ ೧೩ರ ಸಂಜೆಯ ೫ ಗಂಟೆಗೆ ಶಾಲೆ ಬಿಟ್ಟು ಭತಗುಣಕಿಯಿಂದ ಹೊರಟು ೧೫ ಮೈಲು ನಡೆದು ಚಡಚಣವನ್ನು ತಲಪುವುದು, ಕೈತುತ್ತು ಬಾಯಿತುತ್ತು ಊಟ ಮಾಡುತ್ತಲೆ, ಬಣ್ಣದ ಕೋಣೆಗೆ ಹೋಗಿ, ಪೃಥ್ವೀರಾಜನ ಪಾತ್ರ ಧರಿಸುವುದು ಇಡಿಯ ರಾತ್ರಿ ಆತನ ಆಡಳಿತ ನಿರ್ವಹಿಸುವುದು.

ನಾಟಕ ಮುಗಿಯುತ್ತಲೆ ನಾನು ಮನೆಗೆ ಬಂದು, ಬಿಸಿನೀರಿನಿಂದ ಎರಕೊಂಡು ಶಾವಿಗೆ-ಸಕ್ಕರೆ-ತುಪ್ಪ ಊಟ ಮಾಡಿ ಭತಗುಣಕಿಯ ಹಾದಿ ಹಿಡಿಯುವುದು.

ಬೆಳಗಿನ ೭ ಗಂಟೆ ಆಗಿ ಹೋಗಿತ್ತು. ನಾನು ಹೋಗಿ ಶಾಲೆಯ ಹೆಬ್ಬಾಗಿಲಿನ ಮೆಟ್ಟುಗಟ್ಟೆಯ ಮೇಲೆ ನಿಂತಿದ್ದೆ. ಅಷ್ಟರಲ್ಲಿ ನಮ್ಮ ಶಾಲೆಯ ಮುಖ್ಯ ಗುರುಗಳು ಮುಸುಕು ಹಾಕಿಕೊಂಡು, ಕೈಯಲ್ಲಿ ತುಂಬಿದ ತಂಬಿಗೆ

ಹಿಡಕೊಂಡು ಬಯಲಿಗೆ ಹೊರಟ್ಟಿದ್ದರು. ನನ್ನನ್ನು ನೋಡಿ ನಿಂತರು. ನಾನು ಕೈಮುಗಿದೆ. ಎಲ್ಲಿಂದ ಬರೋಣವಾಯ್ತು ಎಂದು ಕೇಳುವ ಮೊದಲೇ "ಚಡಚಣದಲ್ಲಿ ನಿನ್ನೆ ನಾರೀಮಣಿ ನಾಟಕವಿಡಲಾಗಿತ್ತು. ನಿನ್ನೆ ಸಾಯಂಕಾಲಕ್ಕೆ ಹೋಗಿ, ರಾತ್ರಿಯ ಕೆಲಸ ಮುಗಿಸಿ ಇದೇ ಬಂದೆ."

ಅದನ್ನು ಕೇಳಿ ಮುಖ್ಯ ಗುರುಗಳು, ತುಸು ನಾಚಿಕೆ ಬೆರತ ಮುಗುಳು ನಕ್ಕರು. ಹೀಗೆ ಆ ವರ್ಷದ ಬೇಸಗೆ ಮನೆಯಲ್ಲಿ ತುಸು ಬೆಸುಗೆ ಬಿಡಿಸಿದರೂ ಸಾರ್ವಜನಿಕರಲ್ಲಿ ಒಂದು ಉತ್ಸಾಹದ ಪ್ರವಾಹವನ್ನು ಹರಿಯಿಸಿತೆಂದು ಹೇಳಲಿಕ್ಕೆ ಸಂಕೋಚ ಪಡುವ ಕಾರಣವೇ ಇಲ್ಲ.

೨೩. ಹೊತ್ತಿಗಾಗದ ಜಾಣ್ಮೆ

ನಾನು ಭತಗುಣಕಿ ಶಾಲೆಯಲ್ಲಿ ಕೆಲಸ ಮಾಡುತ್ತಿರುವಾಗ, ಅನೇಕ ಜನ ಶಾಲಾ ತಪಾಸಣಾಧಿಕಾರಿಗಳು ಬಂದು ಬಂದು ಹೋದರು. ಆದರೆ ಅವರಲ್ಲಿ ಬಹುವರ್ಷ ತಳಹಿಡಿದು ಕುಳಿತವರೆಂದರೆ ಚಿಟಣೀಸ ಸಾಹೇಬರು. ಅವರು ಒಂದಿಷ್ಟು ತಿನಿಸು ಬಡಕರು. ನಡು ವಯಸ್ಸಿನಲ್ಲಿಯೇ ಅರ್ಧಕರ್ಧ ಸಂಖ್ಯೆಯಲ್ಲಿ ಹಲ್ಲು ಕಳಕೊಂಡಿದ್ದರು. ಮುಕಣಿಯಿಂದ ಮಾಡಿದ ಉಸುಳಿ, ಕಡಲೆ ಗಿಡದ ಸುಲಿಗಾಳು ಅಂದರೆ ಜೀವ ಕೊಡುತ್ತಿದ್ದರು.

ಭೀಮಾ ತೀರದ ಹಳ್ಳಿಗಳ ಶಾಲೆಗಳಲ್ಲಿ ಅನಿರೀಕ್ಷಿತವಾಗಿ ವಸತಿ ಮಾಡಿ ಹೊರೆಹೊರೆ ಕಡಲಿಗಿಡ ಅಂದರೆ ಸುಲಗಾಯಿ ತರಿಸಿ, ಶಾಲೆಯ ಬಾಲಕರಿಂದ ಕಾಳು ಸುಲಿಸಿ ಗಂಟು ಕಟ್ಟಿ ಹಾಸಿಗೆಯ ಸುರಳಿಯಲ್ಲಿ ತುಂಬುತ್ತಿದ್ದರು. ಆಗಾಗ ಕಡಲೆಯ ಹಸಿಕಾಳುಗಳನ್ನು ಬಚ್ಚಬಾಯಿಯ ಒಸಡೆಯಿಂದ ಅಬಡಜಬಡ ನುರಿಸಿ ನುಂಗಿ ಎಂಥದೋ ಒಂದು ಗುಳಿಗೆ ಗಂಟಲಲ್ಲಿ ಇಳಿಸುತ್ತಿದ್ದರು. ಆ ಕ್ರಮದಿಂದ ಹಲವಾರು ತರದ ಶಾರೀರಿಕ ಶಕ್ತಿಗಳನ್ನು ಗಳಿಸಿದ್ದೇನೆಂದು ಹೇಳುತ್ತಿದ್ದರು. ಆದರೆ ಅವರ ಪಚನಶಕ್ತಿ ಮಾತ್ರ ತೀರ ಉಡುಗಿ ಹೋಗಿತ್ತೆಂದು ಕಂಡೇ ಬರುತ್ತಿತ್ತು.

ಆ ಶಿಕ್ಷಣಾಧಿಕಾರಿಗಳ ವಸತಿ ಸ್ಥಾನವೆಂದರೆ ಶಾಲಾ ಕಟ್ಟಡದೊಳಗಿನ ಒಂದು ಕೋಣೆ. ಗಾದೆ ಹಾಸಿ ಸೊಳ್ಳೆಪರದೆ ಕಟ್ಟಿಕೊಡುವುದು ಸಿಪಾಯಿಯ ಕೆಲಸ. ಆದರೆ ನಡುರಾತ್ರಿಯಲ್ಲಿಯೇ ಆತನನ್ನು ಕೂಗಿ ಎಬ್ಬಿಸಿ, ಮಗ್ಗಲ

ಹಾಸಿಗೆ, ಉಟ್ಟ ಧೋತರಗಳನ್ನು ತೊಳಿಸಿ ಬೇಲಿಯ ಮೇಲೆ ಒಣಗ ಹಾಕಿಸುತ್ತಿದ್ದರು. ಹೊತ್ತು ಹೊರಡುವಷ್ಟರಲ್ಲಿ ಆಗಿಬಿಟ್ಟಿರುವ ಬದಲಾವಣೆಯನ್ನು ಕಂಡು, ಶಿಕ್ಷಕರು, ಬಾಲಕರೂ ಗುಸುಗುಸು ಮಾತಾಡುತ್ತಿದ್ದರು - "ಸಾಹೇಬರ ಹೊಟ್ಟೆ ಜಾಡಿಸಹತ್ತಿದ್ದ ಕಾರಣ ಈ ಹಾಸಿಗೆ ಹೊದಿಕೆಗಳೆಲ್ಲ ಮಡಿಗೊಂಡಿವೆ".

ಅಂದು ಸಾಹೇಬರದು ಅನಿರೀಕ್ಷಿತ ಏಕಾದಶಿ. ಏಕಾದಶಿಯೆಂದರೆ ಏನೂ ತಿನ್ನುತ್ತಿರಲಿಲ್ಲ. ಬರಿ ಒಂದು ತಂಬಿಗೆ ಹಾಲು ಕಾಸಿ, ಉಗುರು ಬೆಚ್ಚಗಾಗುವವರೆಗೆ ಆರಲಿಟ್ಟು ಕೇಸರಿ ಮತ್ತು ಸಕ್ಕರಿ ಹಾಕಿದಾಗ ಹಾಲಿಗೆ ಒಂತರ ಬಣ್ಣ ಬರುವುದು. ಆಗ ಸಾಹೇಬರು ಆ ಹಾಲನ್ನೆಲ್ಲ ಒಂದೇ ಉಸಿರಿನಲ್ಲಿ ಕುಡಿದು ಮೇಲೊಂದು ಗುಳಿಗೆ ನುಂಗುತ್ತಿದ್ದರು.

ಇಡಿಯ ವಾರ ಹಳ್ಳಿಗಳಲ್ಲಿಯೇ ಕಳೆದರೂ ಸಾಹೇಬರಿಗೆ ರವಿವಾರ ಕ್ಯೊಮ್ಮೆಯಾದರೂ ಮನೆ ನೆನಪಾಗುತ್ತಿರಲಿಲ್ಲ. ಊರಕೋಳಿಯ ಕೂಡ ನೀರಕೋಳಿ ಸತ್ತಿತೆನ್ನುವಂತೆ, ಸಾಹೇಬರ ಸಿಪಾಯಿ, ರವಿವಾರವಾದರೂ ಮನೆಯಲ್ಲಿ ಹೆಂಡತಿ ಮಕ್ಕಳೊಡನೆ ಸುಖವಾಗಿ ಇರಬೇಕೆಂದರೆ ಸಾಹೇಬರು ಮುಂದಿನ ವಾರ ಹೋಗೋಣ ಎನ್ನುತ್ತಿದ್ದರು. ಆ ಮಾತು ಕೇಳಿ ಸಿಪಾಯಿ ಸಾಹೇಬರು ಮೋರೆ ಸಪ್ಪಗೆ ಮಾಡಿಕೊಂಡು ಕುಳಿತು ಬಿಡುತ್ತಿದ್ದರು. ಅದನ್ನು ಕಂಡು ಸಾಹೇಬರು ನನ್ನನ್ನು ಹತ್ತಿರ ಕರೆದು -

"ಸಿಂಪೀ, ಈತನಿಗೆ ಏನಾಗಿದೆ? ಅಳುಮೋರೆ ಏಕೆ ಮಾಡಿದ್ದಾನೆ? ಈ ಸಿಪಾಯಿಗೆ ಇಲ್ಲೇನು ಕಡಿಮೆ ಬಿದ್ದಿದೆ? ತಿನ್ನಲಿಕ್ಕೆ ಉಣ್ಣಲಿಕೆ ಬೇಡಿದ್ದು ಸಿಗುತ್ತದೆ. ಮನೆಗೆ ಹೋದರೆ ಅಲ್ಲೇನು ಸಿಗುತ್ತದೆ? ಮಣ್ಣು! ಹೇಳು ನೀನಾದರೂ ಒಂದಿಷ್ಟು ಬುದ್ಧಿಯನ್ನು" ಎಂದು ಸೂಚಿಸುತ್ತಿದ್ದರು.

ಅಷ್ಟರಲ್ಲಿ ನಾನು ಆ ಸಿಪಾಯಿಯ ಅಂತರಂಗವನ್ನೆಲ್ಲ ಅರಿತು ಕೊಂಡಿದ್ದೆನು. ಸಾಹೇಬರಿಗೆ ವಿನಂತಿಸಿಕೊಂಡೆನು -

"ಸಿಪಾಯಿ ಈ ವಾರ ಒಬ್ಬನೇ ಮನೆಗೆ (ವಿಜಾಪುರಕ್ಕೆ) ಹೋಗಿ ಬರಲಿ. ಮತ್ತೆರಡು ದಿನ ರಜೆ ಕೊಡಿರಿ, ಮನೆಗೆ ಕಳಿಸುವ

ಸಾಮಾನುಗಳನ್ನೆಲ್ಲ ಬೂರಸಗಟ್ಟುವಷ್ಟರಲ್ಲಿ ಕಳಿಸಬಿಡಿರಿ. ಸಿಪಾಯಿ ಹೋಗಿ ಮನೆಯವರೆಗೆ ಹೋಗಿ ಮುಟ್ಟಿಸಿಬಿಡುತ್ತಾನೆ. ಹೋಗಿ ಬರಲಿ, ಪುಣ್ಯದ ಕೆಲಸಕ್ಕೆ ಸಮ್ಮತಿ ಕೊಡಿರಿ?"

"ಸಿಂಪೀ, ನೀನು ಜಾಣ ನೋಡೋ, ಎಲ್ಲ ಕಲೆಗಳನ್ನು ನೀನು ಬಲ್ಲೆ! ಸಿಪಾಯಿ ಹತ್ತರ ಗಾಡಿ ಹಿಡಿದು ವಿಜಾಪುರಕ್ಕೆ ಹೋಗಿಬಿಡಲಿ, ಆಯಿತಿಲ್ಲೊ? ಗಂಟುಗಳನ್ನೆಲ್ಲ ಸಾವರಿಸಿಕೊಳ್ಳಲಿ" ಎಂದು ಸಾಹೇಬರು ನುಡಿದೊಡನೆ, ಸಿಪಾಯಿ ಸಾಹೇಬನ ಮುಖ ಇಷ್ಟು ಅಗಲವಾಯಿತು. ಅವನು ಹೊರಬೇಕಾದ ಗಂಟುಗಳು, ಚುಂಗಡಿ ಆಗಿದ್ದವು. ಆದರೆ ಅವು ಭಾರವೆಂದು ತೋರಲಿಲ್ಲ ಅವನಿಗೆ. ಹಸಿಕಡಲೆ ಕಾಳು ಸುಲಿದಿಟ್ಟಿದ್ದು ಒಂದು ಚಂಗಡಿಯಾದರೆ, ಹೊಳೆ ಸಾಲಬದನೀಕಾಯಿ, ಅದರಲ್ಲಿಯೂ ಭೀಮಾತೀರದ ಬದನೀಕಾಯಿ ಒಂದು ಮೊಟ್ಟೆ, ಅಷ್ಟು ಸರಂಜಾಮದೊಡನೆ ಸಿಪಾಯಿ ವಿಜಾಪುರಕ್ಕೆ ಹೊರಟರೂ ಮೂರೇ ಹೆಜ್ಜೆಗಳಲ್ಲಿ ಮನೆ ಕಾಣುವೆನಲ್ಲಾ ಎಂದು ಮನದಲ್ಲಿ ಹಿರಿಹಿರಿ ಹಿಗ್ಗಿದನು.

ಇತ್ತ ಸಾಹೇಬರು ಮುಖ್ಯ ಶಿಕ್ಷಕರನ್ನು ಕರೆಯಿಸಿ ಹೇಳಿದರು -

"ನಾನು ಅಹಿರಸಂಗ ಶಾಲೆಯ ತಪಾಸಣೆ ಮಾಡಬೇಕಾಗಿದೆ. ಒಂದು ಎತ್ತಿನ ಬಂಡಿಯನ್ನು ಹೇಳಿಡಿರಿ"

ಶ್ರೀ ಜಮಖಂಡಿ ಮುಖ್ಯಗುರುಗಳೆಂದರೆ ಒಂದು ಹೇಳಿದಾಗ ಎರಡು ಮಾಡಿಸುವಂಥವರಾಗಿದ್ದರು. ಹಾಂ ಅನ್ನುವಷ್ಟರಲ್ಲಿ ಸಾಹೇಬರ ಅಲ್ಪೋಪ ಹಾರದ ಸಿದ್ದತೆಯನ್ನು ಮಾಡಿಸಿದ್ದರು. ಎತ್ತು ಹೂಡಿದ ಬಂಡಿ ಶಾಲೆಯ ಮುಂದೆ ಬಂದು ನಿಂತಿತು. ಅದಕ್ಕೆ ಸವಾರಿ ಕಟ್ಟಿ ನೆರಳು ಮಾಡಿದ್ದರು.

ಸಾಹೇಬರು ಜಮಖಂಡಿಯನ್ನು ಒತ್ತಟ್ಟಿಗೆ ಕರೆದು ಹೇಳಿದರು "ಒಬ್ಬ ಜಾಣ ಅಸಿಸ್ಟಂಟನನ್ನು ನನ್ನೊಡನೆ ಕಳಿಸಿ. ಅಹಿರಸಂಗವೇನು ದೂರದ ಹಳ್ಳಿಯಲ್ಲ. ಸಂಜೆಯೊಳಗಾಗಿ ಮರಳಿ ಬರುವೆವು".

ಮುಖ್ಯಗುರುಗಳು ಸಾಹೇಬರೊಡನೆ ಸಹಪ್ರವಾಸಿಯಾಗಿ ಹೋಗುವುದಕ್ಕೆ ನನ್ನನ್ನು ಸಿದ್ಧಗೊಳಿಸಿದರು.

ಗಾಡಿ ಸಾಗಿತು. ದಟ್ಟವಾದ ನೆರಳು, ಗಾಡಿಯಲ್ಲಿ ಸಾಹೇಬರ ಕಣ್ಣು ತಾವಾಗಿಯೇ ಮುಚ್ಚತೊಡಗಿದವು. ಆದರೆ ನಾನು ಬೇಕೆಂದು ಕಣ್ಣುಮುಚ್ಚಿ ತೂಕಡಿಸುವಂತೆ ಮಾಡತೊಡಗಿದೆನು. ಇದ್ದಕ್ಕಿದ್ದ ಹಾಗೆ "ಥರ್‌ಕರ್! ಥರ್! ಥರ್! ಥರ್ ಥರಕ್" ಎಂದು ಸಪ್ಪಳವಾಯಿತು. ನಾನು ಗಾಬರಿಯಾಗಿ ಕಣ್ಣು ತೆರೆಯುವಷ್ಟರಲ್ಲಿ ಸಾಹೇಬರೂ ಕಣ್ಣು ತೆಗೆದು ಮುಗಳುನಕ್ಕು "ಇದು ಒಲ್ಲೆ ಒಲ್ಲೆನೆಂದರೂ ಜುಲುಮೆಯಿಂದ ನಿಮ್ಮ ಜಮಖಂಡಿ ಅವರು ತಿನಬಡಿಸಿದ ಅಲ್ಪೋಪಹಾರದ ಮಹಿಮೆ, ಅಪಾನವಾಯು ಅಪಮಾನವಾಯಿತೆಂದು ತಿಳಿಯಬೇಡ, ನಿನಗಷ್ಟೇ ಗೊತ್ತಿರಲಿ ಸಾಕು" ಅಂದರು.

ಅಹಿರಸಂಗ ಶಾಲೆಯ ಗುರುಗಳು ಸಾಹೇಬರ ಗಾಡಿಯನ್ನು ಎದುರುಗೊಂಡು ಅವರನ್ನು ಇಳಿಸಿಕೊಂಡೇ ಬಿಟ್ಟರು. "ನಿಮ್ಮ ಶಾಲೆಯನ್ನು ಸಂದರ್ಶಿಸಬೇಕಾಗಿದೆ" ಎಂದು ಸಾಹೇಬರು ನುಡಿದಾಗ, "ಪರೀಕ್ಷೆಯನ್ನೇ ಮುಗಿಸಿಬಿಟ್ಟರೆ ಒಳ್ಳೆಯದಾಗುವದು" ಎಂದು ಅಹಿರಸಂಗ ಶಾಲೆಯ ಮುಖ್ಯ ಗುರುಗಳಾದ ಜೋಷಿ ಅವರು ವಿನಂತಿಸಿದರು.

ಚಿಟಣೀಸ ಸಾಹೇಬರು ತಮ್ಮ ಬಚ್ಚಬಾಯಿಯಲ್ಲಿ ಮುಗುಳುನಗೆ ತೇಲಿಸಿ ಕಣ್ಣು ಚೂಟಿದರೂ, ಅದರರ್ಥ ನನಗೂ ಆಗಲಿಲ್ಲ.

ಅರ್ಧ ತಾಸಿನಲ್ಲಿ ಪರೀಕ್ಷೆ ಮುಗಿದು ಬಿಟ್ಟಿತು. ಶಾಲೆಗೆ ಬಂದವರು, ಬಾರದವರು, ಎಲ್ಲರೂ ತೇರ್ಗಡೆಯಾಗಿ ಮುಂದಿನ ತರಗತಿಗಳಿಗೆ ಹೊರಟರು. ತೇರ್ಗಡೆಯಾದ ವಿದ್ಯಾರ್ಥಿಗಳಲ್ಲಿ ಒಬ್ಬನು ತೀರಿಯೇ ಹೋಗಿದ್ದನೆಂದು ಹಿಂದಿನಿಂದ ಗೊತ್ತಾಯಿತು. ಅದನ್ನು ಸಾಹೇಬರು ಕೈಮುಟ್ಟಿ ತಿದ್ದಿಕೊಟ್ಟರು.

ಎತ್ತಿನ ಗಾಡಿ ಹೊರಳಿ ನಿಂತಿತು. ಭತಗುಣಕಿಯ ದಾರಿ ಹಿಡಿಯಿತು.

ಶಾಲೆಯ ಮುಂದೆ ಜಮಖಂಡಿ, ಹೆರಕಲ್ಲ, ಅಂಕಲಗಿ ಶಿಕ್ಷಕರು ನಿಂತು ದಾರಿ ಕಾಯುತ್ತಿದ್ದರು. ಸಾಹೇಬರು ಗಾಡಿಯಿಂದ ಇಳಿದವರೇ ಜಮಖಂಡಿ ಅವರಿಗೆ ಕೈ ಸನ್ನೆ ಮಾಡಿ ಹೇಳಿದರು -

"ನಿಮ್ಮ ಸಿಂಪಿ ಜಾಣನೆಂದು ಹೇಳಿದ್ದಿರಿ. ಆದರೆ ಅವನ ಜಾಣತನ ಅಷ್ಟಕಷ್ಟೇ" ಎಂದರು.

ಅಹಿರಸಂಗ ಶಾಲೆಯ ಶಿಕ್ಷಕರಿಂದ ಗಾಡಿ ಬಾಡಿಗೆಯೆಂದು ೬-೮ ರೂ. ಇಸಗೊಳ್ಳಬೇಕಾಗಿತ್ತೆಂದು ಹಿಂದಿನಿಂದ ತಿಳಿಯಿತು. ಆದರೆ ಪ್ರಯೋಜನವೇನು? "ನಿರ್ಧನನಾದ ನಂತರ ಜ್ಞಾನ ಬಂದುಪಯೋಗವೇನು?"

೨೪. ಜೀವನದೆಶೆ ತಪ್ಪಿಸಿದ ದೀಪಾವಳಿ

"ಛಿಡೆಯನ್ನೂ ಬಿಡಲಾರೆ, ಬಿಟ್ಟೂ ಮಲಗಲಾರೆ" ಎನ್ನುವ ಸ್ವಭಾವ ನನಗೆ ಹುಟ್ಟಿನಿಂದಲೂ ಸಂಗಳಿಸಿತ್ತು. ಅದು ನನ್ನ ಹಲವಾರು ಅನರ್ಥಗಳಿಗೂ ಕಾರಣವಾಗಿದೆ. ಮೇಲಿಂದ ಮೇಲೆ ಹಲಸಂಗಿಗೆ ಹೋಗಿ ಬರುತ್ತಿದ್ದ ನನ್ನ ಆ ಸ್ವಭಾವವನ್ನು ಕಳಕೊಳ್ಳದಿದ್ದರೆ ಕಲ್ಯಾಣವೇ ಇಲ್ಲವೆನ್ನುವ ವಿಚಾರ ನನ್ನನ್ನು ಬಾಧಿಸುತ್ತಿತ್ತು.

ದಿ. ಚೆನ್ನಮಲ್ಲಪ್ಪ ಮತ್ತು ಆತನ ಬಾಳಸಂಗಾತಿ ಬಸಮ್ಮ ಅವರು ಅದೆಷ್ಟು ಅನ್ಯೋನ್ಯವಾಗಿದ್ದರೆಂಬ ಸಂಗತಿಯನ್ನು ನಮ್ಮ ನೆರೆ ಮನೆಯಲ್ಲಿದ್ದ ಬಸಣ್ಣ ಸರಸಂಬಿ ಅವರ ಬಾಯಿಂದ ಮಾತ್ರ ಕೇಳುತ್ತ ಬಂದಿದ್ದೆ. ಆದರೆ ಕಿವಿಯಿಂದ ಕೇಳಿದರೆ ಬಾಯಿಗೆ ನೀರು ಬಿಟ್ಟೀತೆ ಅನ್ನುವಂತಾಗುತ್ತಿತ್ತು. ಪ್ರತಿ ಶನಿವಾರ, ರವಿವಾರ ಹಲಸಂಗಿಗೆ ಹೋಗಿ ಬರುವ ಕ್ರಮವಿರಿಸಿಕೊಂಡಾಗ ಕಂಡು ಬಂದದ್ದು ಏನಂದರೆ -

> ನನ್ನ ಕೈಯ ಹಿಡಿದಾಕಿ ಅಳು ನುಂಗಿ ನಗು ಒಮ್ಮೆ ನಾನೂನು ನಕ್ಕೇನು ।
> ಇಲದಿರಕ ನಿನ್ನ ಅಳುವ ಹುಚ್ಚು ಹಳ್ಳದ ಕಳ್ಳ ಹುದಲಾಗ ಸಿಕ್ಕೇನು ॥

ನಾನು ನಗಬೇಕೆಂದರೆ ಕೈಹಿಡಿದವಳೂ ನಗುವಂತಾಗಬೇಕು ಎಂಬ ತತ್ತ್ವಜ್ಞಾನವನ್ನು ಹಲವಾರು ಜೀವನಗಳ ನಿರೀಕ್ಷೆಯಿಂದ ಕಂಡುಹಿಡಿದೆ. ಊಟ ಮಾಡಬೇಕಾದವನು ನಾಚಬಾರದು ನಾಚಿದರೆ ಊಟ ಸಿಗುವಂತಿಲ್ಲ. ಹಸಿವೆಯೂ ಕೆಡುತ್ತದೆ, ಹೊಟ್ಟೆ ಕಡಿಯುವವನೇ ಅಜಿವಾನ ತಿನ್ನಬೇಕು ಎಂಬ ನೀತಿಯನ್ನು ಅನುಸರಿಸದಿದ್ದರೆ ನನ್ನ ಮುಂದಿನ ಜೀವನವೆಲ್ಲ

ಹುಳಿಯಾಗುತ್ತದೆ, ಹುಳಿತೂ ಹೋಗುತ್ತದೆ, ಬರಿ ಅರಿತು ಫಲವೇನು? ಆಚಾರ ಬೇಕಲ್ಲವೇ? ಅದರ ಹೆಗಲೆಣೆಯಾಗಿ, ಕೈಗೆ ಬಂದ ಬೆಣ್ಣೆ-ರೊಟ್ಟಿಯನ್ನು ಸಾಧ್ಯವಾದಷ್ಟು ತೀವ್ರ ತಿಂದು ಬಿಡುವುದೇ ಕ್ಷೇಮವೆನಿಸಿದ್ದರಿಂದ ಉಣ್ಣುವ ವಿಚಾರ ಸರಣಿಗೆ ಮನಸೋತೆನು.

ಹೆಂಡತಿಯಾದವಳು ಸೀರೆಯುಟ್ಟು ಬಂದಳು. ಯಾವುದೋ ಶುಭ ಮುಹೂರ್ತದಲ್ಲಿ ದಾಂಪತ್ಯ ಜೀವನ ಸಂಗಳಿಸಿತು. ಅದು ಸೊಗಸು ಗೊಳ್ಳುವುದಕ್ಕೆ ಅನೇಕ ಅಡ್ಡಿ ಅಡಚಣೆಗಳಿದ್ದವು. ತೀಕ್ಷ್ಣ-ತಿರಸ್ಕಾರಗಳೂ ಇದ್ದವು. ಅವುಗಳನ್ನು ಲೆಕ್ಕಿಸಲಿಲ್ಲ. ಮಾನ-ಸನ್ಮಾನಗಳ ಕಲ್ಪನೆಯನ್ನು ನಾಲ್ಕು ಮಾರು ದೂರದಲ್ಲಿರಿಸಿದೆನು. ಆ ಕಾರಣದಿಂದ ನಾನು ಭತಗುಣಕಿಯಿಂದ ಹಲಸಂಗಿಯ ದಾರಿಹಿಡಿದಂತೆ, ಚಡಚಣದ ದಾರಿ ಹಿಡಿಯತೊಡಗಿದೆನು.

ನನ್ನ ಅತ್ತೆ ಮನೆಯವರು ಅಥವಾ ಹೆಂಡತಿಯ ತವರು ಮನೆಯವರು ಕೈಬಿಗಿ ಹಿಡಿದರು, ಮಗಳಿಗೆ ಹಾಸಿಗೆ ಕೊಡಲಿಲ್ಲ, ಹೊದಿಕೆ ಕೊಡಲಿಲ್ಲ. ನಮ್ಮ ಸಂಭ್ರಮವೆಲ್ಲ ನೆರೆಯವರ ಜಾಡಿ ಜಮಖಾನೆಗಳಲ್ಲಿಯೇ ಆರಂಭವಾಯಿತು. ಅಲ್ಲಿಯೇ ಅಂಕುರಿಸಿತು. ಅದಕ್ಕಾಗಿ ನಾನು ರೊಚ್ಚಿಗೇಳ ಬೇಕೆಂದು ನಮ್ಮ ಅತ್ತಿಗೆ ಆಶಿಸಿದಳು, ಅಣ್ಣ ಅದಕ್ಕೆ ಸೈಗೊಟ್ಟನು. ಆದರೆ ನನಗೆ ಅಷ್ಟರಲ್ಲಿ ಕೆಳಗಿನ ಪದ್ಯವು ಬಾಳಮಂತ್ರವಾಗಿ ಪರಿಣಮಿಸಿತು. ಜೀವನ ಸೂತ್ರವಾಗಿ ಕಂಗೊಳಿಸಿತು ಅದಾವ ಪದ್ಯವೆಂದರೆ -

ಮನಗಾಕೆ ಭೂಮಿ ತಾಯಿ ಮಂಚ
ಕೈಹಿಡಿದೋಳು ಪುಟ್ಟನಂಜಿ
ನಗನಾಗತಾ ಉಪ್ಪಗಂಜಿ
ಕೊಟ್ಟರಾತು ರತ್ನನ ಪ್ರಪಂಚ ॥

ಈ ವಿಚಾರ ಸರಣಿಯು ಮಾಗಿ ಪರಿಪಕ್ವಗೊಳ್ಳುವುದಕ್ಕೆ ನಾಲ್ಕಾರು ತಿಂಗಳುಗಳೇ ಬೇಕಾದವು. ಪಾಡುಗಾಯಿ ನಿಜವಾಗಿಯೂ ಪರಿಪಕ್ವಗೊಳ್ಳಲಿಕ್ಕೆ ಹುಲ್ಲುಹಾಸಿಗೆಯೇ ಸಾಕು, ಉಳಿದದ್ದೆಲ್ಲ ಕಾಕು.

ನಮ್ಮ ಮನೆಯ ಒಂದು ಭಾಗದಲ್ಲಿ ಅಂದರೆ, ಡೇಲಜಿ ಹಾಗೂ ಕೋಣೆಗಳಲ್ಲಿ ಯಾಗಂಟಿ ಅಂದಾನಿ ಮತ್ತು ಚಿನ್ನವ್ವ ಎಂಬ ದಂಪತಿಗಳು

ವಾಸ ಮಾಡುತ್ತಿದ್ದರು ಅವರದು ಇಳಿವಯಸ್ಸು. ಸ್ವಲ್ಪದರಲ್ಲಿಯೇ ಉಂಡುಟ್ಟು ಸುಖವಾಗಿದ್ದರು. ಉಂಡಿದ್ದು ಆರೋಗ್ಯ, ಉಟ್ಟಿದ್ದು ಸೌಭಾಗ್ಯ. ಅದನ್ನು ನೋಡಿದವರ ಹೊಟ್ಟೆ ಉರಿಯದೆ ಇರುತ್ತಿರಲಿಲ್ಲ. ಇದೆಲ್ಲ ಅವರಿಗೇಕಿದೆ ಅನ್ನುವುದಕ್ಕಿಂತ ತಮಗೇಕಿಲ್ಲ ಎನ್ನುವುದೇ ಮುಖ್ಯ ಸಮಸ್ಯೆ ಆಗುತ್ತಿತ್ತು.

ಚಿನ್ನವ್ವನ ನಿಶ್ಚಿಂತ ಜೀವನ, ಆಕೆ ಉಡುತೊಡುವ ಸೀರೆಕುಪ್ಪಸ, ಕೊರಳು-ಕಿವಿ-ಹಸ್ತ-ತೋಳುಗಳಲ್ಲಿ ಕಾಣಿಸುವ ಬಂಗಾರದಾಭರಣ ಇವು ಕಣ್ಣುಕೋರಯಿಸುತ್ತಿದ್ದವು. ಆ ಲೆಕ್ಕಾಚಾರದಿಂದ ನೋಡಿದರೆ, ನಮ್ಮ ಅತ್ತಿಗೆ ಅಣ್ಣ ಅವರ ದುಡಿತ, ಹೋರಾಟ-ಹೈರಾಣಗಳು ಯಾವ ಸುಖದ ತುದಿಗಟ್ಟೆಯಲ್ಲಿಯೂ ತಂದು ನಿಲ್ಲಿಸಲಿಲ್ಲ. ಅವೆಲ್ಲ ತನಗೂ ದೊರೆಯಲಿ ಅನ್ನುವುದಕ್ಕಿಂತ, ತನಗೂ ದೊರೆಯದೆ ಹೋಗಲಿ, ಅವರಿಗೂ ಇಲ್ಲದಂತಾಗಲಿ ನಮಗಿಂತ ಕನಿಷ್ಠ ಸ್ಥಿತಿಗೆ ಬಂದರೆ ಸಾಕು, ಅದೇ ನಮಗೆ ಹಿಗ್ಗು, ಹಾಲು ತುಪ್ಪಗಳಿಂದ ಕೈ ತೊಳಕೊಂಡ ಹಾಗೆ - ಎನ್ನುವ ದಾರಿ ಹಿಡಿದರು.

ನಮ್ಮ ಅತ್ತಿಗೆ ಗುರಮ್ಮನಿಗೆ ಆಚೆಯ ಓಣಿಯಲ್ಲಿದ್ದ ಇಬ್ಬರು ಯುವಕರು ತಮ್ಮಂದಿರಾಗಿ ನಡಕೊಂಡಿದ್ದರು. ಅವರ ಸಹಾಯದಿಂದ ಈ ನೆರೆಮನೆಯ ಚೆನ್ನಮ್ಮನ ಐಶ್ವರ್ಯ ಮಣ್ಣುಗೂಡಿದರೆ ಸಾಕು ಎನ್ನುತ್ತಿದ್ದಳು. ಮನಸ್ಸಿನಲ್ಲಿ ಅದಕ್ಕಾಗಿ ಒಂದು ಸುವ್ಯವಸ್ಥಿತ ಕಾರ್ಯಕ್ರಮ ಮೈದಾಳಿತು. ಒಂದು ನಕ್ಷೆಯೇ ಸಿದ್ಧವಾಯಿತು.

ಚಿನ್ನವ್ವನೆಂದರೆ ಅತ್ತಿಗೆ ಗುರಮ್ಮನ ಸೋದರತ್ತೆ, ಅರ್ಥಾತ್ ಅಂದಾನಿ ಸೋದರಮಾವ. ಚಿನ್ನವ್ವನ ಸಿಂಗಾರವೆಲ್ಲ ಆಕೆಯ ಸ್ವಂತ ಪರಿಶ್ರಮದ್ದು, ಅಂದಾನಿಯದು ಅದರಲ್ಲೇನೂ ಇರಲಿಲ್ಲ. ಅದನ್ನು ಆಟಕ್ಕಾಗಿಯೋ ಮಾಟಕ್ಕಾಗಿಯೋ ಎತ್ತಿಹಾಕಬೇಕು. ದಕ್ಕಿದರೆ ನಮ್ಮದು ದಕ್ಕದಿದ್ದರೆ ಜೇಷ್ಠೆ ಈ ತಳಹದಿಯ ಮೇಲೆ ಚಿನ್ನವ್ವನ ಚಿನ್ನದೊಡನೆ ಚಿನ್ನಾಟ ನಡೆಯ ಬೇಕಾಯಿತು.

ಊರ ಹೊರಗಿನ ಬಯಲಲ್ಲಿ ಒಂದು ಪ್ರಖ್ಯಾತವಾದ ಭವ್ಯ ಸರ್ಕಸ್ಸು ಬಂದಿತ್ತು. ಅದು ನಾವೆಲ್ಲರೂ ನೋಡತಕ್ಕಂಥದು, ದಶರಥ ಮತ್ತು ಆಮೂಶಾ ಚೆನ್ನಮ್ಮನ ನಡೆಪಥದ ಅಳಿಯರು, ಅವರು ಖರ್ಚುಮಾಡಿ ತಿಕೀಟು ತೆಗೆಸಲು ಸಿದ್ಧರಾದರು. ಅಕ್ಕ ಗುರಮ್ಮ ಮತ್ತು ಮಾವ ಈರಪ್ಪ, ಅತ್ತೆ ಚೆನ್ನಮ್ಮ ಅಳಿಯ ನೂರಂದ ಹೀಗೆ ನಾಲ್ವರು ಸರ್ಕಸ್ ನೋಡಲು ಹೊರಟರು. ಅಂದಾನಿ ಊರಲ್ಲಿ ಇರಲಿಲ್ಲ. ನಾನಂತೂ ಭತಗುಣಕಿಗೆ ಹೋಗಿಬಿಟ್ಟಿದ್ದೆ, ಸನ್ನ ಹೆಂಡತಿ ತನ್ನ ತಾಯಿಯ ಮನೆಗೆ ಮಲಗಲು ಹೋಗಿದ್ದಳು. ಅವರವರ ಮನೆಗೆ ಕೀಲಿ ಹಾಕಬೇಕಲ್ಲದೆ, ತಲೆಬಾಗಿಲಿಗೂ ಒಂದು ದೊಡ್ಡ ಕೀಲಿ ಜಡಿಯುವ ಕೆಲಸ ಅಣ್ಣ ಈರಪ್ಪನಿಗೆ ಒಪ್ಪಿಸಿದರು. ಎಷ್ಟಾದರೂ ಇದೊಂದು ತಾತ್ಪೂರ್ತಿಕ ಚೇಷ್ಟೆಯೆಂದು ಆರಂಭವಾಯಿತು.

ದಶರಥ ಮತ್ತು ಆಮೂಶಾ ಮುಂದುವರಿದು, ಅಕ್ಕ-ಅತ್ತೆ-ಅಳಿಯ ಇವರನ್ನು ಕರೆದುಕೊಂಡು ಮುಂದೆ ಸಾಗಿದರು. ಈರಪ್ಪಣ್ಣ ಹಿಂದೆ ನಿಂತು ತಲೆ ಬಾಗಿಲಿಗೆ ಕೀಲಿ ಜಡಿದು ಅವರನ್ನು ಸಂಗಳಿಸತಕ್ಕವನು. ಚೆನ್ನಕ್ಕ ಯಾವ ಆಭರಣವನ್ನೂ ಧರಿಸಿರಲಿಲ್ಲ. ಅವುಗಳನ್ನೆಲ್ಲ ಮನೆಯಲ್ಲಿರುವ ಒಂದು ಪೆಟ್ಟಿಗೆಯಲ್ಲಿ ಹಾಕಿಟ್ಟಿದ್ದಳು. "ರಾತ್ರಿಯ ಕೆಲಸ, ಸಂಗಡ ಯಾಕೆ ಈ ಬಂಗಾರದ ಗಸಣಿ?" -ಎಂದು ಪಿಸುಮಾತಿನಲ್ಲಿ ನೀತಿ ಹೇಳಿಕೊಟ್ಟವಳು ಚೆನ್ನಮ್ಮನ ಸೋದರಸೊಸೆ ಗುರಮ್ಮ. ಅದೇ ಕಾರ್ಯಗತವಾಯಿತು.

ಇನ್ನು ಎಲ್ಲರಿಗಿಂತ ಹಿಂದೆ ಉಳಿದವ ಈರಪ್ಪಣ್ಣ. ಅಂದರೆ ದಶರಥ ಮತ್ತು ಆಮೂಶಾನ ಮಾವ, ಅಕ್ಕನ ಗಂಡ, ಅವನು ಹಿಂದುಳಿದರೂ ಮನೆಗೆ ಕೀಲಿ ಹಾಕದೆ, ಕೊಂಡಿಗೆ ಜೋತು ಬೀಳುವಂತೆ ಮಾಡಿದರೆ ಸಾಕು ಕೀಲಿ ಯಾವುದೋ ತಿಪ್ಪಿಗೆ ಚೆಲ್ಲಿದರೆ ಅವನ ಕೆಲಸ ಮುಗಿಯಿತು.

ಸರ್ಕಸ್ಸು ಅರ್ಧ ಮುಗಿದಿತ್ತೋ ಇಲ್ಲವೋ ನಡೆಪಥದ ಅಳಿಯಂದಿರು ಚೆನ್ನವ್ವನ ಮನೆಗೆ ಬಂದು, ಆಕೆಯ ಆಭರಣ ಪೆಟ್ಟಿಗೆಯನ್ನು ಎತ್ತಿ ಒಯ್ದು, ಎಲ್ಲಿಯೋ ಬಯತಿಟ್ಟು ಸರ್ಕಸ್ ನೋಡಲು ಹೋಗಿ ಕುಳಿತರು. ಸರ್ಕಸ್ ಮುಗಿಯಿತು, ಎಲ್ಲರೂ ಕೂಡಿ ಮನೆಗೆ ಬಂದು ನೋಡುತ್ತಾರೆ - ತಲೆ ಬಾಗಿಲಿಗೆ ಹಾಕಿದ ಕೀಲಿಯಿರಲಿಲ್ಲ. ಮನೆಯಲ್ಲಿ ಯಾರೋ ಕಳ್ಳರು ಹೊಕ್ಕು,

ಏನೇನೋ ದೋಚಿದ್ದಾರೆಂಬ ಸಂಶಯದಿಂದ ಬೊಬ್ಬೆ ಹೊಡೆದರು. ಜನ ನೆರೆಯಿತು. ಪೋಲೀಸ ಕಚೇರಿಯವರೂ ಬಂದರು. ಕಳವಾದ ಸಾಮಾನುಗಳ ಯಾದಿ ಮಾಡಿಕೊಂಡರು. ಅಷ್ಟರಲ್ಲಿ ಅತ್ತಿಗೆಯ ಹೊಟ್ಟೆಕಡಿತ ಆರಂಭವಾಯಿತು.

ಆ ಕೋಣೆಯನ್ನು ಹೊಕ್ಕ ಕಳ್ಳರು, ಈ ಕೋಣೆಯನ್ನು ಹೊಕ್ಕು ಪುತಳಿ, ಕೈಬಿಲ್ವಾರ ಒಯ್ದಿದ್ದಾರೆಂದು ಬೊಬ್ಬಿಟ್ಟಳು. ಪುತಳಿ-ಬಿಲ್ವಾರಗಳನ್ನು ಅಡಗಿ ಮನೆಯ ಬಚ್ಚಲಲ್ಲಿ ನೀರಿನಿಂದ ತುಂಬಿನಿಂತ ಎದೆಮಟ್ಟ ಎತ್ತರದ ರಂಜಣಿಗೆಯಲ್ಲಿ ಎಸೆದರು. ಕಳುವಾದ ಸುದ್ದಿ ಕೇಳಿ, ನೆರೆಯವರು ನೆರೆದಂತೆ, ಆಪ್ತೇಷ್ಟರೂ ಬರಬೇಕಲ್ಲವೇ? ನಮ್ಮತ್ತೆಯೂ ಬಂದು ತನ್ನ ಹಿರಿಯ ಮಗಳಂತಿರುವ ಗುರಮ್ಮನನ್ನು ಸಾಂತ್ವನ ಪಡಿಸುತ್ತಿರುವಾಗ, ಗುರಮ್ಮ ತನ್ನ ದೊಡ್ಡಮ್ಮನಿಗೆ ಕಿವಿಯಲ್ಲಿ ಹೇಳಿದಳು -

"ರಂಜಣಿಗೆಯಲ್ಲಿ ಒಗೆದ ಪುತಳಿ-ಬಿಲ್ವಾರಗಳನ್ನು ನಿನ್ನ ಮನೆಗೆ ತೆಗೆದುಕೊಂಡು ಹೋಗು. ಇಲ್ಲದಿದ್ದರೆ ಅವು ಪೋಲೀಸರ ವಶಕ್ಕೆ ಹೋಗುವವು"

ಆದರೆ ಬಸಮ್ಮ ಅತ್ತೆ ಆ ಮಾತು ಕಿವಿಯಲ್ಲಿ ಹಾಕಿಕೊಳ್ಳಲಿಲ್ಲ, ಎದ್ದು ಮನೆಗೆ ಹೋದಳು. ಮರುಕ್ಷಣದಲ್ಲಿ ಚೇಷ್ಟೆ ಹೂಡಿದ ತಮ್ಮಂದಿರು ಬರಲು, ಆ ಪುತಳಿ-ಬಿಲ್ವಾರಗಳನ್ನು ಅವರಿಗೆ ಒಪ್ಪಿಸಿದಳು. ಅವು ಮನೆ ಬಿಟ್ಟು ಹೋದವು. ಆದರೆ ತಿರುಗಿ ಬಂದವೋ ಇಲ್ಲವೋ ನನಗೂ ತಿಳಿದಿಲ್ಲ. ಚೆನ್ನಮ್ಮನ ಚಿನ್ನವಂತೂ ಏಳೂರು ಕೆರೆಯ ನೀರು ಕುಡಿಯುತ್ತ ತೇಲದೆ ಮುಳುಗದೆ ಮಾಯವಾಯಿತು.

ಮರುದಿನ ಮುಂಜಾನೆ ೮ ಗಂಟೆಯ ಸುಮಾರಿಗೆ, ನಮ್ಮ ಅತ್ತಿಗೆಯ ತಮ್ಮ ಈರಪ್ಪ ಪಕರಿ ಭತಗುಣಕಿಗೆ ಬಂದು, ಕಳುವಾದ ಸಂಗತಿ ನನಗೆ ತಿಳಿಸಿದನು. ನಾನು ಇದ್ದಕ್ಕಿದ್ದ ಹಾಗೆ ರಜೆ ತೆಗೆದುಕೊಂಡು ಅವನನ್ನು ಹಿಂಬಾಲಿಸಿದೆನು. ಹಾದಿಯಲ್ಲಿ ಆತನು ನನ್ನ ಸಮಾಧಾನಕ್ಕಾಗಿ ಹೇಳಿದನು-

ನಮ್ಮದೇನೂ ಕಳವಾಗಿಲ್ಲ, ಅದಕ್ಕಾಗಿ ಚಿಂತಿಸಬೇಡ, ವಾಡಿಕೆಯಂತೆ ನಿನ್ನನ್ನು ಕರೆಯಬಂದಿರುವೆನಲ್ಲದೆ ಇನ್ನೇನು ಅನರ್ಥವಿಲ್ಲೆಂದು ಹೇಳಿದನು. ಇದರಿಂದ ತಾತ್ಪೂರ್ತಿಕವಾಗಿ ಒಂದಿಷ್ಟು ಸಮಾಧಾನವಾಯಿತು. ಆದರೆ ಆ ನಾಟಕದ ಜಾಲವು ಯಾರಾರನ್ನು ಬಲೆಗೆ ಹಾಕುವುದೋ ತಿಳಿಯದು ಎಂದು ಮಿಡುಕಿದೆನು. ಅಂತೂ ನಾನು ಮಧ್ಯಾಹ್ನದೊಳಗಾಗಿ ಊರಿಗೆ ಬಂದೆನು. ಮನೆಗೆ ಬಂದು ಹಣಕಿ ಹಾಕುವಷ್ಟರಲ್ಲಿ ಪೋಲೀಸಗೌಡ, ಹಾಗೂ ಪೋಲೀಸರು, ಫೌಜದಾರ ಮೊದಲಾದವರು, ಆಸೀನರಾಗಿ ತಪಾಸಣೆಯ ಕಾರ್ಯವನ್ನು ಅಭಿನಯಿಸುತ್ತಿದ್ದರು.

ಚೆನ್ನವ್ವನ ಮನೆಯಲ್ಲಿ ಕಳವಾದರೆ ನಮ್ಮ ಮನೆಯನ್ನೇಕೆ ತಪಾಸು ಮಾಡುವುದು ಎಂದಿದ್ದೆ. ಅದು ಪೋಲೀಸರಿಗೂ ಗೌಡನಿಗೂ ವಿಪರ್ಯಾಸ ವೆನಿಸಿತು. ತಪಾಸಣೆಗೆ ಈ ಮಾಸ್ತರನು ತಡಮಾಡಿದನು ಎಂದು ರಿಪೋರ್ಟಿನಲ್ಲಿ ಕಾಣಿಸಿದರು. ದಶರಥ, ಆಮೂಶಾ ಊರಲ್ಲಿದ್ದರೂ ಏನೂ ಗೊತ್ತಿಲ್ಲದಂತೆ ಎದೆಯುಬ್ಬಿಸಿ ಅಡ್ಡಾಡುತ್ತಿದ್ದರು. ಚೆನ್ನಕ್ಕ ಹಾಸಿಗೆ ಹಿಡಿದಳು, ಗುರುಬಾಯಿ ಹಾಸಿಗೆ ಹಾಸಿಟ್ಟಳು, ಈರಪ್ಪಣ್ಣ ಪೋಲೀಸರ ಕಾಲುಚಂಡವಾಗಿ ಹತ್ತಾರು ಕಡೆಗೆ ಓಡಾಡತೊಡಗಿದನು. ಮಗ್ಗವು ಏರುಗಟ್ಟಿತು. ಧಾನ್ಯದ ವ್ಯಾಪಾರವು ತಳಕಂಡಿತು, ನಾನು ಚಡಚಣದಲ್ಲಿ ನಿಂತು ಮಾಡುವುದೇನು ಎಂದು ಭತಗುಣಕಿಗೆ ಮರಳಿದೆನು.

ಕುಚೇಷ್ಟೆ ಮಾಡದೆ ಪ್ರತಿಷ್ಠೆ ಉಂಟಾಗುವದಿಲ್ಲವಂತೆ. ಆಡಾಡುತ್ತ ಗುಡ್ಡ ಕಡಿದು ಮೈಮೇಲೆ ಹಾಕಿಕೊಂಡಂತಾಯಿತು. ಚೆನ್ನವ್ವನ ಚಿನ್ನವಂತೂ ತಿರುಗಿ ಬಾರದ ದಾರಿಗೆ ಹೋಯಿತು. ಅಣುಕು ಚೌರ್ಯ ಮಾಡಿಸ ಬೇಕೆಂದು ಗುರಮ್ಮನೆಗೆಣ್ಣೆಯ ಪುತಳೀಸರ ಬಿಲ್ವರಗಳು ಎಲ್ಲಿ ಅಡಗಿದವೋ ಇಂದಿಗೂ ತಿಳಿದಿಲ್ಲ. ಈ ಚಳುವಳಿಯಲ್ಲಿ ನಮ್ಮಣ್ಣನಿಗೆ ಮಾತ್ರ ಬಹಳ ಗಾಸಿಯಾಯಿತು.

ನೇಯ್ಗೆಯ ಕೆಲಸ ಸ್ಥಗಿತವಾಯಿತು. ಒಳಗಿಂದೊಳಗೇ ಚಿಂತೆಯ ಕರಗಸವು ಅಂತರಂಗವನ್ನು ಕೊರೆದೊರೆದು ತುಂಡು ಮಾಡಿತು. ಅಲ್ಲದೆ ಇವೆಲ್ಲಕ್ಕೂ ಶಿಖರಪ್ರಾಯವಾದ ಕಾಟವೆಂದರೆ ಪೋಲೀಸರ ಕರೆ. ಅದೆಂಥ

ಬೈಗಳೋ, ಅವೆಂಥ ಹಿಂಸೆಗಳೋ ಅವನಿಗೇ ಗೊತ್ತು. ಯಾರ ಮುಂದೆ ಹೇಳಬೇಕು? ಹೇಳಿದರೆ ಆಗುವುದಾದರೂ ಏನು?

ಇದೇನು ಮಾಡಿಟ್ಟೆಯೇ ಗುರಿ? ನಾಲ್ಕು ಜನರಲ್ಲಿ ಮುಖವೆತ್ತಿ ತಿರುಗಲಾರದ ಹಾಗೆ ಆಗಿಬಿಟ್ಟಿತು. ಈಗಾಗಲೇ ಅರ್ಧ ಸತ್ತಿದ್ದೇನೆ. ಇನ್ನೊಂದರ್ಧ ಯಾವ ಕ್ಷಣಕ್ಕೆ ಸಾಯುವೆನೋ ತಿಳಿಯದು ಎಂದು ಮಿಡುಕುವನು.

ಅನ್ಯವಿಲ್ಲದೆ, ಪುಣ್ಯವಿಲ್ಲದೆ ನನ್ನ ಹೆಂಡತಿಯ ಮೈಮೇಲಿನ ಬಂಗಾರ ಆಡಾಡುತ್ತ ಕೈಬಿಟ್ಟಿತು. ಮಡುವಿಗೆ ಬಿತ್ತು. ಅದನ್ನು ಮಡುವಿನೊಳಗಿನ ಮೊಸಳಿ ನುಂಗಿ ಹಾಕಿಬಿಟ್ಟಿತು.

ಚಿನ್ನವ್ವನು ಕುದುರೆ ಕಳಕೊಂಡಿದ್ದಲ್ಲದೆ ಖೋಗೀರುಹೊರುವ ಪ್ರಸಂಗ ಬಂದಿತಲ್ಲ ಎಂದು ಊರೇ ಬಿಟ್ಟಳು. ಅದೆಲ್ಲಿಯದೋ ದೂರದ ಹಳ್ಳಿಯ ಅಜ್ಞಾತವಾಸದಲ್ಲಿ ಹೊತ್ತುಗಳೆಯಲು ಹೋದಳು. ಈ ಎಲ್ಲ ಪರಿಸರದ ಪರಿಸ್ಥಿತಿಗಿಂತ ನನ್ನ ಪರಿಸ್ಥಿತಿ ತೀರ ಕನಿಷ್ಠವಾಗಿತ್ತು. ಬಾವಿ ಬೀಳಬೇಕೆಂದರೆ ಅಲ್ಲಿ ಹುಲಿ ಬಾಯಿ ತೆರಕೊಂಡು ಕುಳಿತಿದೆ. ಕಡೆಗೆ ಬರಬೇಕೆಂದರೆ, ಕಾತರ ಕಂಟಿಯ ಶರಾಸನದಲ್ಲಿ ಬಿದ್ದು, ಜೋಳಣೆಯ ಕೂಸಾಗಿದ್ದೇನೆ. ಇದಕ್ಕೆಲ್ಲ ಏನು ಉಪಾಯ? ಯಾವುದೋ ಉಪಾಯವಿರಬಹುದು, ಆದರೆ ಅದು ತಿಳಿಯುವ ಬಗೆ ಹೇಗೆ?

ಶಿಕ್ಷಕ ವೃತ್ತಿಯೆಂದರೆ ನನಗೆ ಉಪಜೀವನದ ಏಕಮಾತ್ರ ದಾರಿಯಾಗಿ ರುವದಲ್ಲದೆ, ಸೇವಾವೃತ್ತಿಯನ್ನು ಗಳಿಸುವ ಸಂಜೀವಿನಿಯಾಗಿದೆ. ರಾಜಕಾರಣದ ಕೃಷಿಯ ಪರಿಣಾಮದಿಂದ ನಾಟಿಕೆಗಳು ಎದೆಗೆ ಬಂದು ನಿಂತಿವೆ. ಅವುಗಳ ಸಾರ್ಥಕ್ಯ ಉಂಟಾಗಬೇಕು. ಇವುಗಳನ್ನು ಒತ್ತಟ್ಟಿಗಿಟ್ಟರೂ ವೈಯಕ್ತಿಕ ಜೀವನ ಮತ್ತು ಅದನ್ನು ಶ್ರದ್ಧೆಯಿಂದ ನಂಬಿದ ಹೆಂಡತಿಯ ಜೀವನ, ಆರೋಗ್ಯಕರ ಹಾಗೂ ಆಹ್ಲಾದಕರವಾಗಿ ಮಾಡುವ ಮೂಕ ತಪಸ್ಸು ಸಫಲವಾಗಬೇಕು.

ನಾಡಿಗೇ ನಾಗರಪಂಚಮಿ ಹಬ್ಬ ಬಂದಿದ್ದರೂ ನಮ್ಮ ಪಾಲಿಗೆ ಪಂಚಮಿಯಿಲ್ಲದ ಬರೆ ನಾಗರವೇ ಬಂದಂತಾಯಿತು. ಊರ ತರುಣರೆಲ್ಲ

ಮರಕ್ಕೆ ಕಟ್ಟಿದ ಜೋಕಾಲಿಯನ್ನು ಜೋಕಿದರೆ, ನಾನು ಆಲದ ಮರದ ಪಾರಂಬಿ ಹಿಡಿದು ಜೋತಾಡತೊಡಗಿದಂತಾಗಿದೆ. ಊರೆಲ್ಲ ವಿಘ್ನೇಶ್ವರನನ್ನು ಒಲಿಸಿಕೊಳ್ಳಲು ಸಮರ್ಥವಾಗಿದ್ದರೆ, ನಾನು ಮಾತ್ರ ಇಲಿಯ ಕಡಿತಕ್ಕೇ ಈಡಾದ ತಳಬೇರಿನಂತಾಗಿದ್ದೇನೆ. ಬದಲಾವಣೆಯಿಲ್ಲದ ದಿನಮಾನಗಳಿಲ್ಲವೇ?

ದಸರೆಯ ದಿವಸ, ನಾಳೆ ಈ ಗೃಹದ ಲಕ್ಷ್ಮಿಯಾಗಲಿರುವ ಹೆಂಡತಿ, ತವರುಮನೆಯವರ ಬಂಗಾರ ಸೇರುಸೇರು ಇಟ್ಟು ತೊಟ್ಟು, ನನಗೆ ಬನ್ನಿಯ ಬಂಗಾರವಿತ್ತು ಸ್ಪರ್ಶಿಸಿದಾಗ ಆ ಪ್ರಪ್ರಥಮ ರೋಮಾಂಚನದ ಏರಿಳಿತವು ೨-೩ ದಿನ ಉಳಿದುಕೊಂಡವು. ದಸರೆಯ ಹಬ್ಬ ಬಂತು, ಹೋಯಿತು, ಆದರೆ ನಮ್ಮ ಸೀಮೋಲ್ಲಂಘನ ಮಾತ್ರ ಆಗಲಿಲ್ಲ.

ಅಕ್ಕರೆಯ ಸಕ್ಕರೆಯೇ ಇಲ್ಲದಿದ್ದರೆ ಅದನ್ನು ಸವಿಯುವ ಬಗೆ ಹೇಗೆ? ಕರುಳಿಗೆ ಕರುಳು ಚಿಗುರಿಸಿದ ತಾಯಿಯೇ ಕೈಕೊಟ್ಟಮೇಲೆ ನಾನೊಂದು ಓಣಿಯ ನಾಯಿಯೇ ಸರಿ. ಅಕ್ಕ ತಂಗಿಯರನ್ನು ಕಾಣದ ನನಗೆ ಮಮತೆಯ ಜೇನು ಎಲ್ಲಿಂದ ಸಿಕ್ಕೀತು? ಈ ಕೊರತೆಗಳೆಲ್ಲ ಒಂದೇ ಒಂದು ವ್ಯಕ್ತಿಯಿಂದ ತುಂಬಿ ಬರಬಹುದೆಂದು ನಿರೀಕ್ಷಿಸುತ್ತ ಕುಳಿತ ನಾನು ಒಂಟೆಯ ತುಟಿಯ ಕೆಳಗೆ ಕುಳಿತ ನರಿಯ ಪಾಡೇ ನನ್ನದಾಗಬೇಕು.

ಅದೆಷ್ಟು ಅವಸರ ಮಾಡಿದರೂ ದೀಪಾವಳಿಯಾಗುವವರೆಗೆ ಯಾವ ಬದಲಾವಣೆಯೂ ಆಗಲು ಸಾಧ್ಯವಿಲ್ಲ. ಹಣತಿಯಿದೆ, ಬತ್ತಿಯಿದೆ, ಎಣ್ಣೆಯಿದೆ, ಆದರೆ ಅದಕ್ಕೆ ಜ್ಯೋತಿಯ ಸ್ಪರ್ಶವಿಲ್ಲ. ಧನ ವಿದ್ಯುತ್ತಿಗೆ ಋಣ ವಿದ್ಯುತ್ತಿನ ಸಂಪರ್ಕವಿಲ್ಲದಾಗಿದೆ -

> ಎಂದಿಗೋ ಇನ್ನೆಂದಿಗೋ ।
> ದೇವನೊಲಮೆಯ ಕಾಲ ಸಂಗಳಿಸಿ ಬರುವುದು ।
> ಇನ್ನೆಂದಿಗೋ ಇನ್ನೆಂದಿಗೋ ॥

ಎಂದು ವಿವೇಕಾನಂದ ಸ್ವಾಮಿಗಳು ಹಾಡಿದರೆ, ನಾನು ಅಂಥದೇ ಪೆಟ್ಟಿನಲ್ಲಿ ತಂತಿ ಬಾರಿಸಬೇಕಾಗಿದೆ.

ದಸರೆಯಾದ ಬಳಿಕ ದೀಪಾವಳಿಯ ಸಿದ್ಧತೆ ಮನೆ ಮನೆಗೂ ನಡೆಯುವಂತೆ ನಮ್ಮ ಮನೆಯಲ್ಲಿಯೂ ನಡೆಯಿತು. ಸಾರಣೆ-ಕಾರಣೆ, ಹಾಸಿಗೆ ಹೊದಿಕೆ ತೊಳೆಯುವುದು, ದೇವರ ಮನೆಯ ಸಿಂಗಾರ, ಐದು ದಿನಗಳ ದೀಪ ಹಾಕುವ ಏರ್ಪಾಡು ಸುರಳೀ ಹೋಳಿಗೆ, ಕರ್ಚಿಕಾಯಿಗಳ ಸಮಾರಾಧನೆ ಎಲ್ಲವೂ ನಡೆದಿದ್ದು ಎಲ್ಲರಿಗೂ ಕಾಣಿಸಿತು. ಆದರೆ ಒಳಗಿನ ಕುದಿ ಬೇರೆ. ನನ್ನ ಕುದಿತ ಒಂದು ಜಾತಿಯದು, ಅಣ್ಣನ ಕುದಿತ ಇನ್ನೊಂದು ಜಾತಿಯದು, ಅತ್ತಿಗೆಯ ಕುದಿತ, ಮತ್ತು ಮಕ್ಕಳ ಕುದಿತ ಇಂಥದೇ ಎಂದು ಯಾರೂ ಹೇಳಲಾರರು.

ದೀಪಾವಳಿಯು ಕತ್ತಲೆಯನ್ನೆಲ್ಲ ನುಂಗಿ ನೀರು ಕುಡಿದರೂ ದೀಪದ ಬುಡಕ್ಕೆ ಕತ್ತಲೆ ಉಳಿಯತಕ್ಕದ್ದೇ. ಅಣ್ಣನು ಪಾಡ್ಯದ ದಿವಸ ಹೊಸ ವರುಷದ ನೆಯಿಗೆಯನ್ನು ಪ್ರಾರಂಭಿಸಬೇಕೆಂದು ಯೋಚಿಸುತ್ತಿದ್ದಾನೆ. ನಮ್ಮ ಶಾಲೆಗಿದ್ದ ಸೂಟಿಗಳು ಕರುಗವವೆಲ್ಲವು ಎನ್ನುವಂತೆ ಹಗಲಿರುಳುಗಳ ವೇಗ ಮಂದವಾಗಿದೆ. ಹಬ್ಬವಾದ ಮರುದಿನವೇ ನಮ್ಮ ಹಳ್ಳಿಗೆ ಹೊರಡುವುದೆಂದು ಹೇಳುವ ನಾವು ಕಡೆ ಪಂಚಮಿಯಾದ ಮರುದಿನ ಮಾತ್ರ ತಪ್ಪದೆ ಹೊರಡುವುದೆಂದು ಹೇಳಬೇಕಾಯಿತು. ಕೊನೆಯಲ್ಲಿ ಸೂಟಿ ಮುಗಿಯುವ ದಿನವಂತೂ ಇಲ್ಲಿ ನಿಲ್ಲುವಂತೆಯೇ ಇಲ್ಲ.

ಪ್ರತಿ ಬುಧವಾರ ಬರುವ ಚಡಚಣ ಸಂತೆಯ ಗಡಿಬಿಡಿಯು, ಪ್ರತಿ ಸಾರೆಗಿಂತ ಮಿಗಿಲಾದ ಗಲಬಿಲಿಯನ್ನು ಕಂಡಿತು. ಆ ಗಲಿಬಿಲಿಯೊಂದಿಗೆ "ಝುಣ್ ಝುಣ್ ಝುಣಾ, ಜೇಬ ತುಂಬ ಹಣಾ" ಒದಗಿಸಿದ ಲಕ್ಷಣ ಕಂಡು ಬಂತು. ನಮ್ಮೂರ ಸಂತೆಯೆಂದರೆ ಒಂದು ಪಾಣೇಪತ್ತದ ಯುದ್ಧ. ಅದರಲ್ಲಿ ಸೋತವರು ದಣಿದಂತೆ, ಗೆದ್ದವರೂ ದಣಿಯುತ್ತಾರೆ. ಸಂತೆಯ ಸರಂಜಾಮವನ್ನು ಎತ್ತಿ ಮನೆಗೆ ತರಲು ೨ ತಾಸು ರಾತ್ರಿಯೇ ಆಯಿತೆನ್ನಬೇಕು.

ಕೈಕಾಲು ತೊಳಕೊಂಡು ನೀರು ಮಾತ್ರ ಕುಡಿದೆವು. ಆದರೆ ಯಾರಾರು ಉಂಡೆವೋ ಏನು ಉಂಡೆವೋ ಹೇಳಲಿಕ್ಕಾಗದು. ನಿದ್ದೆ ಮೊದಲೇ ಬಂದಿತ್ತು, ಉಂಡ ಬಳಿಕ ಬರಬೇಕಾಗಿತ್ತು. ಆದರೆ ಅದು

ಉಣ್ಣುವ ಮೊದಲೇ ಬಂತು. ಕುಳಿತಲ್ಲಿಯೇ ತೂಕಡಿಸಿದರು. ತೂಕಡಿಸಿದಲ್ಲಿಯೇ ಮಗ್ಗುಲಾದರು, ಮಗ್ಗುಲಾದ ರೀತಿನಲ್ಲೇ ಎಚ್ಚತ್ತಾಗ ಬೆಳಗೇ ಆಗಿತ್ತು. ಹೊರಳಿ ಮಲಗಿದವಳು ನಮ್ಮತ್ತಿಗೆ ಒಬ್ಬಾಕೆ. ಅಣ್ಣನು ತಂಬಿಗೆ ತೆಗೆದುಕೊಂಡು ಹಳ್ಳದ ಕಡೆಗೆ ಹೋಗಿ ಬಂದನು. ನೇಯ್ಗೆ ಹೂಡಿದನು, ಕಂಡಿಕೆಯಿರಲಿಲ್ಲ, ತಾತ್ಪೂರ್ತಿಕವಾಗಿ ಕಂಡಿಗೆ ಸುತ್ತಿಕೊಂಡನು, ಇನ್ನು ಮಗ್ಗದಲ್ಲಿ ಕುಳಿತುಕೊಳ್ಳಬೇಕೆಂದು ಸಾವರಿಸುವಷ್ಟರಲ್ಲಿ ಮತ್ತೆ ಕೈಕಾಲಿಗೆ ಹೋಗಬೇಕಾಯಿತು.

ಬರುವಾಗ ಹಳ್ಳದಲ್ಲಿ ಕೈಕಾಲು ತೊಳಕೊಂಡು, ತಂಬಿಗೆ ತುಂಬ ನೀರು ತಂದನು. ಮನೆ ತಲಪಿದವನೇ ಮಾಳಿಗೆ ಏರಿದನು, ಹೊಟ್ಟೆ ಜಾಡಿಸಿತು, ಕರುಳು ಕಿತ್ತು ಬರುವಂತೆ ಓಕರಿಕೆಯೂ ಬಂತು, ಕೆಳಗೆ ಬಂದು ಬಾಯಿ ತೊಳಕೊಂಡು, ಮಗ್ಗದಲ್ಲಿ ಕುಳಿತುಕೊಂಡು ಮೊಳದಷ್ಟು ನೆಯ್ದಿದ್ದನೋ ಇಲ್ಲವೋ ಮತ್ತೆ ಹೊಟ್ಟೆ ಮುರಿಯಿತು, ಗಂಟಲು ಕಾರಿತು ಅಣ್ಣನು ಹಾಸಿಕೊಂಡು ಉರುಳಿದನು. ಆಗ ಮಧ್ಯಾಹ್ನದ ೧೦ ಗಂಟೆ ಆಗಿತ್ತು.

ಅತ್ತಿಗೆ ಅದೇ ಎದ್ದು ಕೈಕಾಲಿಗೆ ಹೋಗಿ ಬಂದಳು. ಹಾಸಿಗೆಯಲ್ಲಿ ಒರಗಿದ ಪತಿಯ ಬಳಿಗೆ ಹೋದಳು, ಹೊಟ್ಟೆಯಲ್ಲಿ ಸಂಕಟವಾಗುತ್ತಿದೆಯೆಂದು ಬಿದ್ದ ಸ್ವರದಲ್ಲಿ ಹೇಳಿದನು. ಅಣ್ಣನ ಕಾರಿಕೆ, ಓಕರಿಕೆ ಸಾಗಿಯೇ ಇದ್ದವು. ಕಣ್ಣು ಒಳಸೇರಿದವು, ದನಿ ಬಿದ್ದಿತು, ಮಾತಾಡುವುದು ಕಠಿಣವಾಯಿತು. ಬದುಕಲಾರನೆಂದು ಕೂಡಿದವರು ತಮ್ಮ ತಮ್ಮೊಳಗೆ ಮಾತಾಡತೊಡಗಿದರು.

ಆ ಪ್ರಸಂಗದಲ್ಲಿ ಅಣ್ಣನು ಬದುಕಬೇಕೆಂದು ಅಟ್ಟಹಾಸವನ್ನೇ ಮಾಡಲಿಲ್ಲ. ಮುಕ್ತಿಯೇ ಮನೆಯವರೆಗೆ ಕರೆಯಬಂದಂತೆ, ಆ ವರ್ತನೆ ತೋರಿಸಿಕೊಟ್ಟಿತು. ಆತನ ಇತ್ತೀಚಿನ ೩-೪ ತಿಂಗಳ ಅವಧಿಯಲ್ಲಿ ಬದುಕಬೇಕೆಂಬ ಅವನ ಲವಲವಿಕೆಯೆಲ್ಲ ಪುಡಿಗೂಡಿ ಹೋದಂತಿತ್ತು.

ಧಾನ್ಯ ವ್ಯಾಪಾರದ ಉತ್ಸುಕತೆ, ಚೇಷ್ಟೆಯ ಕಳವು ಮಾಡಿದ ಅವಹೇಳನ, ಗುಂಪಿನಲ್ಲಿ ಮೇಳದಲ್ಲಿ ಕಂಗೊಳಿಸಬೇಕಾದ ವ್ಯಕ್ತಿಯು, ಅವಮಾನ, ಭಯ, ದಿಗಿಲು ಮೊದಲಾದ ಕುತಂತ್ರಗಳಲ್ಲಿ ಕಕ್ಕಾವಿಕ್ಕಿಯಾಗಿ ಬೀಳುವ ಹೊತ್ತಿಗೆ, ಗಾಳಿ ಬೇನೆ ಬಂದು, ಕೈಹಿಡಿದು ಕರೆದೊಯ್ಯಿತೆಂದೇ ತೋರಿತು. ಅದು ತೋರಿಕೆ ಮಾತ್ರವಾಗಿರದೆ, ಅಚ್ಚ ಘಟನೆಯಾಗಿ ಕಾಣಿಸಿ ಕೊಳ್ಳಲಿಕ್ಕೆ ಬಹಳ ತಡವಾಗಲಿಲ್ಲ. ಮಧ್ಯಾಹ್ನದ ೨ ಗಂಟೆಯ ಹೊತ್ತಿಗೆ ಅವನ ಪ್ರಾಣವು ಹಂತಹಂತವಾಗಿ ಹೋಗುತ್ತಿರುವಂತೆ ಅನಿಸಿತು. ಕೈಬೆರಳು ಮುದುಡಿಗೊಂಡವು. ಉಗುರುಗಳು ಕಪ್ಪಗಾದವು. ಒಂದು ಸಾರೆ ಹಾಸಿ ಮಲಗಿಕೊಂಡವನು ಮತ್ತೆ ಏಳಲಿಲ್ಲ, ಹೊರಳಲಿಲ್ಲ. ಮಾತಾಡಲಿಲ್ಲ, ಸಂಕಟವನ್ನು ಸೂಚಿಸಲೂ ಇಲ್ಲ.

ತಂದೆಯಡಗಿದ ಬಳಿಕ ನೀನೇ ತಂದೆಯೆಂದು, ಹದಿನಾಲ್ಕು ವರುಷ ಅಣ್ಣನಿಗೆ ತಮ್ಮನಾಗಿ, ಅತ್ತಿಗೆಗೆ ಮೈದುನನಾಗಿ ನಡೆದುಕೊಂಡ ನಾನು ಈಗ ರೆಕ್ಕೆ ಕಿತ್ತಿದ ಪಕ್ಷಿಯಾಗಿ ಕುಳಿತೆ. ಅಳುವಿನ ಚಿಲುಮೆಗಳು ಅಂತಃಕರಣದಿಂದ ಪುಟಿದೆದ್ದು ಬರುತ್ತಿದ್ದವು. ಆದರೆ ಅವನ್ನು ಸಾಂತ್ವನ ಪಡಿಸುವುದರಲ್ಲಿಯೇ ನನ್ನ ಪುಣ್ಯವೆಲ್ಲ ಖರ್ಚಾಯಿತೆನ್ನಬೇಕು.

ಅಂದು ಗುರುವಾರ ನಮ್ಮೂರ ಸಂತೆಯ ಮರುದಿನ. ಬಲು ಓಡಾಡ ಬೇಕಾದ ದಿನ. ನಮ್ಮೂರವರಿಗೆ ಗುರುವಾರದ ಬೆಳಗು ಏನು ತಂದಿತೋ ಏನೋ. ಅಂದಿನ ಸಂಜೆ ಮಾತ್ರ ಅಣ್ಣನನ್ನು ಎಳೆದೊಯ್ದಿತು.

ನಾನು ಇದ್ದದ್ದು ಯಾರಿಗಾಗಿ? ಯಾರಿಗಾಗಿ ನಾನು ಬದುಕಬೇಕು ಮೊದಲಾದ ತಾತ್ವಿಕ ಸಮಸ್ಯೆಗಳಿಗೆ ಇಂದಿಗೂ ಉತ್ತರ ಸಿಕ್ಕಿಲ್ಲ, ಮುಂದೆ ಸಹ ಸಿಗುವಂತಿಲ್ಲ.

ಅಣ್ಣನ ಹೆಂಡತಿ, ಆಕೆಯ ನಾಲ್ವರು ಮಕ್ಕಳು, ಅಲ್ಲದೆ ನಾಳೆ ಲೆಕ್ಕಕ್ಕೆ ಸೇರ ಬಲ್ಲ ಹೆಂಡತಿ ಇವರೆಲ್ಲರಿಗೆ ಕಾಯಂ ಆಗಿ ಸಿಗುವ ಬುತ್ತಿಯೆಂದರೆ, ನನಗೆ ಪ್ರತಿ ತಿಂಗಳು ಬರುವ ೨೫ ರೂ. ಮಾತ್ರ. ನನ್ನ ಪಂಚ ಪ್ರಾಣಗಳನ್ನೆಲ್ಲ ಹಂಚು ಹರಿ ಮಾಡಿ, ಹಂಚಿ ಕೊಂಡಿ ತಿಂದ ರಕ್ಕಸ

ಬಾಯಿಗೆ ೨೫ ರೂ.ಗಳೆಂದರೆ ಯಾವ ಕಾಚು. ರೂಪಾಯಿಯ ನೆಪದಿಂದ ನನ್ನ ಜೀವ ಹಿಂಡುವುದಕ್ಕೆ ಆಸ್ಪದವುಂಟಾಯಿತು ಅಣ್ಣನ ಮರಣದಿಂದ.

ಇನ್ನು ನೌಕರಿ ನಿಸ್ತರಿಸುವುದು ಹೇಗೆ? ಹೆಂಡತಿಯನ್ನು ಜೊತೆಗೆ ಕರೆದೊಯ್ಯುವ ಹಂಚಿಕೆ ಯಾವುದು? ಇದಕ್ಕೆ ಸಹಾಯಕರಾರು, ಅವರು ಎಲ್ಲಿದ್ದಾರೆ ಎಂಬುದಂತೂ ನನಗೆ ತಿಳಿಯಲೇ ಇಲ್ಲ.

೨೫. ಇಬ್ಬರೇ ಅಚ್ಚ ಮಿತ್ರರು

ಸಾಮಾಜಿಕರು ಅಂತ್ಯವಿಧಿ ಮುಗಿಸಿಕೊಂಡು ಮನೆಯವರೆಗೆ ಬಂದು ಅವರು ಮಕ್ಕಳನ್ನು ಒಬ್ಬ ಮೈದುನನನ್ನು ಗುರುಬಾಯಿಯ ಕೈಯಲ್ಲಿ ಒಪ್ಪಿಸಿ ಕೊಡುತ್ತೇವೆ. ಆಕೆ ಆ ಕೆಲಸವನ್ನು ನಿರ್ವಹಿಸಬೇಕೆಂದು ತೋರುತ್ತದೆ ಎಂದರು.

ಆ ಮಾತು ಕೇಳಿ ಅತ್ತಿಗೆಯು, ಪಡಸಾಲೆಯ ತುದಿಗಟ್ಟೆಯಲ್ಲಿ ನಿಂತವಳು ದೈವದವರಿಗೆ ಕೈಯೆತ್ತಿ ಹೇಳುತ್ತೇನೆ -

"ಮೈದುನ ಸೇರಿ ನಾಲ್ಕು ಮಕ್ಕಳನ್ನು ನನ್ನ ಜೀವ ತೇದು ಜೋಪಾನ ಮಾಡುತ್ತೇನೆ, ಹಿಂಜರಿಯುವದಿಲ್ಲ."

ಎಂದವಳೇ ಇಡಿಯ ದೇಹವನ್ನು ಅಂಗಳದಲ್ಲಿ ಚೆಲ್ಲಿದಳು. ನೆರೆದವರು ಅವಸರದಿಂದ ಆಕೆಯನ್ನು ಎತ್ತಿ ತಂದು ಪಡಸಾಲೆಯಲ್ಲಿ ಹಾಕಿದರು.

ಮರುದಿನ ವಾಡಿಕೆಯಂತೆ ದಿನಕರ್ಮಗಳು ಮುಗಿದವು.

ಹೊತ್ತು ಹೊರಳಿತ್ತು, ಭತಗುಣಕಿಯಿಂದ ಒಬ್ಬ ಪಟ್ಟಾವಾಲಾ ಸಿಪಾಯಿ ಬಂದು ಕೈಮುಗಿದು - ನಿಮ್ಮನ್ನು ಕೂಡಲೇ ಮುಂದೆ ಹಾಕಿಕೊಂಡು ಬರಬೇಕೆಂದು, ಸ್ಕೂಲ್ ಬೋರ್ಡ್ ಚೇರಮನ್ನರು ನನ್ನನ್ನು ಕಳಿಸಿದ್ದಾರೆ ಅಂದನು.

ಆ ಮಾತು ಕಿವಿಗೆ ಬೀಳುವದೇ ತಡ, ಭತಗುಣಕಿಯ ದಾರಿ ಹಿಡಿದೆನು. ಇಂಡಿಗೆ ಹೋಗುವ ಬಸ್ಸಿನಲ್ಲಿ ಕುಳಿತು, ಪಟ್ಟಣದ ಹಾದಿಗಿಳಿದು, ೨ ಮೈಲು ನಡೆದು ಭತಗುಣಕಿಯನ್ನು ತಲುಪಿದೆವು. ಶಾಲೆಯಲ್ಲಿಯೇ ಕುರ್ಚಿಯ ಮೇಲೆ ಆಸೀನರಾದ ಸಜ್ಜನ ಸಾಹೇಬರನ್ನು ಕಂಡು, ಕೈಮುಗಿದು ಒತ್ತಟ್ಟಿಗೆ ನಿಂತೆನು.

ಸಾಹೇಬರು ಕೇಳಿದರು -

"ಈ ಹೊತ್ತು ನಿಮ್ಮ ಶಾಲೆ ಸೂಟಿಯನ್ನು ಮುಗಿಸಿ ಆರಂಭಗೊಂಡಿದ್ದು ನೀವು ಹಾಜರಿರಲಿಲ್ಲವಲ್ಲ!"

"ಮನೆಯಲ್ಲಿ ನಿನ್ನೆ ಅಕಸ್ಮಾತ್ತಾಗಿ ದೇಹಬಿಟ್ಟ ಅಣ್ಣನ ದಿನಕಾರ್ಯವಿತ್ತು. ನಿಂತುಕೊಂಡೆ, ಇಂದಿನ ದಿನದ ರಜೆ ಮಂಜೂರು ಪಡಿಸಿರಿ" ಎಂದೆ.

"ಇಂದಿನ ದಿನ ಒಂದೇ ಅಲ್ಲ, ದೀಪಾವಳಿ ಸೂಟಿಯ ದಿನಗಳನ್ನೆಲ್ಲ ಅರ್ಧ ಪಗಾರಿ ರಜೆಯೆಂದು ಭಾವಿಸುವೆವು" ಎಂದರು.

ನಾನದಕ್ಕೆ ಮೌನಸಮ್ಮತಿ ಸೂಚಿಸಿದೆ.

ಚೇರಮನ್ ಸಾಹೇಬರು ಮತ್ತೆ ತಮ್ಮ ಹೇಳಿಕೆಯನ್ನು ಮುಂದುವರಿಸಿದರು ಏನಂದರೆ -

'ಭತಗುಣಕಿ ಶಾಲೆಯಲ್ಲಿ ಶಿಕ್ಷಕರೆಲ್ಲ ಕಾನೂನಿನ ವಿರುದ್ಧವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಸಹಭಾಗಿಯಾಗುವರೆಂದು, ಜಿಲ್ಲಾ ಕಲೆಕ್ಟರರ ಕಡೆಗೆ ವರದಿ ಬಂದಿದೆಯಂತೆ. ಅವರು ನಮ್ಮನ್ನೇ ಕೇಳಿದ್ದಾರೆ - 'ನಿಮ್ಮ ಆ ಶಿಕ್ಷಕರ ಮೇಲೆ ನಾವೇ ಕ್ರಮ ಕೈಕೊಳ್ಳೋಣವೇ? ಅಥವಾ ನೀವು ಅವರಿಗೆ ತಕ್ಕ ಶಾಸ್ತಿ ವಿಧಿಸುವಿರೋ?' ಹೇಗೆ ಮಾಡಬೇಕು ತಿಳಿಸಿರಿ.'

"ಸ್ಕೂಲ್ ಬೋರ್ಡ್ ಚೇರಮನ್‌ರಾದ ತಾವು, ನಮ್ಮ ತಪ್ಪಿಗೆ ತಕ್ಕ ಶಿಕ್ಷೆ ವಿಧಿಸಲು ಬಾಧ್ಯಸ್ಥರೇ ಇರುವಿರಲ್ಲ! ನಮ್ಮನ್ನು ಕಲೆಕ್ಟರರ ಕಡೆಗೆ ಒಪ್ಪಿಸಬೇಡಿರಿ" ಎಂದು ನಾಲ್ವರು ಶಿಕ್ಷಕರು ದನಿಗೂಡಿಸಿ ಹೇಳಿಕೊಂಡೆವು.

ಚೇರಮನ್‌ರು ತಮ್ಮ ಕೆಲಸ ಮುಗಿಯಿತೆಂದು ವಿಜಾಪುರದ ದಾರಿ ಹಿಡಿದರು. ನಾವು ಒಬ್ಬರ ಮುಖವನ್ನೊಬ್ಬರು ಮೌನದಲ್ಲಿಯೇ ನೋಡುತ್ತ ಸಾಹೇಬರನ್ನು ಬೀಳ್ಕೊಟ್ಟೆವು.

ಎರಡು ದಿನ ಕಳೆಯುವಷ್ಟರಲ್ಲಿ ನಾಲ್ವರೂ ಶಿಕ್ಷಕರ ಮೇಲೆ ಯಾವ ಯಾವ ಕ್ರಮ ತೆಗೆದುಕೊಂಡೆವೆಂಬುದನ್ನು ಸ್ಪಷ್ಟಪಡಿಸಿ, ಈ ಹುಕುಂ ಮುಟ್ಟಿದ ೨೪ ತಾಸುಗಳಲ್ಲಿ ನಿಮಗೆ ಶಿಕ್ಷಾತರೀತ ವರ್ಗಮಾಡಿದ ಶಾಲೆಗಳಿಗೆ ಹೋಗಿ ಹಾಜರಾಗಿ ಅಲ್ಲಿಯ ಮುಖ್ಯ ಗುರುಗಳಿಂದ ರಿಪೋರ್ಟ ಮಾಡಿಸಬೇಕು ಎಂದು ಆ ಹುಕುಮಿನಲ್ಲಿ ವಿವರಿಸಲಾಗಿತ್ತು.

ಮುಖ್ಯ ಶಿಕ್ಷಕರಾದ ಜಮಖಂಡಿ ಅವರಿಗೆ, ಮಲೇರಿಯಾ ರೋಗದ ಗಂಡುಮೆಟ್ಟಾದ ಮಮದಾಪುರಕ್ಕೆ (ತಾ. ವಿಜಾಪುರ) ಶಿಕ್ಷಾತರೀಕ ವರ್ಗಾ ಮಾಡಿದೆ.

ಮೊದಲನೇ ಅಸಿಸ್ಟಂಟರಾದ ಹೆರಕಲ್ ಅವರ ಮೇಲಿನ ಆಪಾದನೆ ಸಾಧಾರಣವಾಗಿದ್ದ ಕಾರಣ ಅವರನ್ನು ಬಾಗಲುಕೋಟೆಯ ಗಂಡುಮಕ್ಕಳ ಶಾಲೆಗೆ ಸಹಾಯಕ ಶಿಕ್ಷಕರೆಂದು ವರ್ಗಮಾಡಿದೆ.

ಇನ್ನು, ೨ನೇ ಅಸಿಸ್ಟಂಟರಾದ ಸಿಂಪಿ ಅವರನ್ನು ಬಾಗೇವಾಡಿ ತಾಲೂಕಿನ ನೀರಿಲ್ಲದ ಗ್ರಾಮವಾದ ಇಂಗಳೇಶ್ವರ ಗಂಡು ಶಾಲೆಗೆ ಸಹಾಯಕ ಶಿಕ್ಷಕರೆಂದು ಶಿಕ್ಷಾತರೀಕ ವರ್ಗಮಾಡಿದೆ.

ಹೊಸದಾಗಿ ನೌಕರಿ ಕಾಯಂ ಆಗಿರುವ ಅಂಕಲಗಿ ಅವರಿಗೆ ಜಾಡರ ಬಬಲಾದಿ ಶಾಲೆಗೆ ಹಾಕಲಾಗಿದೆ (ಶಿಕ್ಷಾತರೀತ)

ಚೇರಮನ್‌ರ ಆದೇಶದಂತೆ ಹುಕುಮಿನ ಸಾರಾಂಶವನ್ನು ತಿಳಿಯಪಡಿಸಿ ಸಹಿ ಮಾಡಿಸಿಕೊಂಡು ಮುಖ್ಯಶಿಕ್ಷಕರು ಬಿಡುಗಡೆ ಮಾಡಿದರು. ಅವರವರ ಹುಕುಂ ಅವರವರ ಕೈಯಲ್ಲಿ ಕೊಟ್ಟರು.

ನಾನಂತೂ ನನ್ನ ಪುಸ್ತಕದ ಕಪಾಟ, ಕೊಡ, ಬೋಗೋಣಿ ಪಾತ್ರೆ ಪಡಗಗಳ ಗಂಟುಕಟ್ಟಿ ಮಿತ್ರರಿಗೊಪ್ಪಿಸಿ ಚಡಚಣಕ್ಕೆ ಕಳಿಸುವ ಏರ್ಪಾಡು ಮಾಡಬೇಕೆಂದು ಅವರಿಗೆ ವಿನಂತಿಸಿಕೊಂಡೆ.

ಸೂರ್ಯಾಸ್ತದ ಸಮಯವಾಗತೊಡಗಿತ್ತು. ನಾನು ನನ್ನ ಕೈಚೀಲ ಹಿಡಕೊಂಡು ಇಂಡಿರೋಡ ಸ್ಟೇಶನದ ದಾರಿ ಹಿಡಿದೆ. ನನ್ನೊಡನೆ ಬೂದಿಹಾಳ ಗ್ರಾಮದ ವಿದ್ಯಾರ್ಥಿಗಳೂ ಹೊರಟರು. ಅವರೆಲ್ಲರೂ ಮೇಲ್ತರಗತಿಗಳಲ್ಲಿ ಓದುತ್ತಿದ್ದರು. ಅವರು ನನ್ನನ್ನು ಸಲಿಗೆಯ ಒತ್ತಾಯದಿಂದ ತಮ್ಮೂರಿಗೆ ಕರೆದೊಯ್ದರು.

ಬೂದಿಹಾಳದಿಂದ ಇಂಡಿರೋಡ ನಿಲ್ದಾಣ ೧ ೧/೨ ಮೈಲು ಮಾತ್ರ. ಹುಟಗಿಯ ಕಡೆಯಿಂದ ವಿಜಾಪುರದ ಕಡೆಗೆ ಹೋಗುವ ಗಾಡಿ ಬರುವುದು ರಾತ್ರಿ ೯ ಗಂಟೆಗೆ. ಆದ್ದರಿಂದ ಊಟ ತೀರಿಸಿಕೊಂಡು ಹೋಗಬೇಕೆನ್ನುವ ತಮ್ಮ ವಿನಂತಿಯನ್ನು ಮಾನ್ಯ ಮಾಡಬೇಕೆಂದು ವಿದ್ಯಾರ್ಥಿಗಳು ಕೈಮುಗಿದು ತಲೆಬಾಗಿ ನಿಂತರು.

"ವರ್ಗವಾದದ್ದು ನಿಮಗಿತ್ತ ಶಿಕ್ಷೆಯಲ್ಲ, ಸರ್ಕಾರವು ಅಥವಾ ಮೇಲಾಧಿಕಾರಿಗಳು ತಾವಾಗಿ ಕರೆದುಕೊಟ್ಟ ಪ್ರಶಸ್ತಿ ಪತ್ರವಾಗಿದೆ" ಎಂದು ಒಬ್ಬ ಹಿರಿಯ ಸಮಾಧಾನ ಹೇಳಿದರು.

ಚಡಚಣದ ಠಾಣಾ ಪೋಲೀಸರು ಮತ್ತು ಭತಗುಣಕಿಯ ಪೋಲೀಸ ಗೌಡರು ಮಾಡಿದ ರಿಪೋರ್ಟುಗಳೇ ಈ ಶಿಕ್ಷಾತರೀತ ವರ್ಗಕ್ಕೆ ಕಾರಣವೆಂದು ಇನ್ನೊಬ್ಬ ಹಿರಿಯರು ಹೇಳಿಕೊಟ್ಟರು.

ಅಡಿಗೆಯಾಗಿದೆಯೆಂದು ಊಟಕ್ಕೆ ಕರೆಬಂತು.

ಕೈಕಾಲು ಮೋರೆ ತೊಳಕೊಂಡು ೪ ಜನ ವಿದ್ಯಾರ್ಥಿಗಳೊಂದಿಗೆ ಊಟಕ್ಕೆ ಕುಳಿತೆ. ನಿಜವಾಗಿಯೂ ನನ್ನ ಹೊಟ್ಟೆ ೨-೩ ದಿನಗಳಿಂದ ಊಟ ಕಂಡಿದ್ದಿಲ್ಲ.

ಜವೆ ಗೋದಿಯಿಂದ ಮಾಡಿದ ಮೆತ್ತಗಿನ ಚಪಾತಿ, ಅಕ್ಕಿಯ ಅನ್ನ, ಬೆಣ್ಣೆ ಕಾಸಿದ ತುಪ್ಪ, ಹಾಲುಕೆನೆ, ಮಜ್ಜಿಗೆಯ ಸಾರು ಇವೆಲ್ಲವುಗಳಿಂದ ಅಳವಡಿಸಿದ ಅಡಿಗೆಯನ್ನು ಸವಿಮಾಡಿ ಉಂಡು ರಾತ್ರಿ ಎಷ್ಟಾಗಿದೆಯೆಂದು ಕೇಳಿದೆ. ಎಂಟೂ ಕಾಲು ಗಂಟೆ ಆಗಿದೆಯೆಂದು ಹೇಳಿದರು.

ಇಂಡಿರೋಡ ದಾರಿ ಹಿಡಿದೆವು. ನಾನು ಮತ್ತು ನನ್ನೊಡನೆ ಹತ್ತಿಪ್ಪತ್ತು ಜನ ವಿದ್ಯಾರ್ಥಿಗಳು ಜಯಘೋಷದೊಡನೆ, ಊರ ಹಿರಿಯರಿಗೆ ಶರಣಾರ್ಥಿ ಹೇಳಿ ನಡೆದೆವು.

ಸ್ಟೇಶನ್‌ದಲ್ಲಿ ವಿಜಾಪುರ ತಿಕೇಟು ತೆಗೆಸಲಾಯಿತು.

ಮರುಗಳಿಗೆಯಲ್ಲಿ ಗಾಡಿ ಸಿಳ್ಳುಹಾಕುತ್ತ ಬಂದು ನಿಂತಿತ್ತು. ಪ್ಲಾಟಫಾರ್ಮಿನಲ್ಲಿ ತೆರವಿದ್ದ ಬೋಗಿ ನೋಡಿ ನನ್ನನ್ನು ಹತ್ತಿಸಿದರು, ವಿದ್ಯಾರ್ಥಿಗಳೆಲ್ಲ ಕಿಡಕಿಯ ಬದಿಯಲ್ಲಿ ನಿಂತರು, ಗಾಡಿ ಹೊರಡುವ ಮೊದಲು ಸಿಳ್ಳು ಹಾಕಿತು. ಗಾರ್ಡನ ಸೀಟಿಯೂ ಆಯಿತು. ಗಾಡಿ ಮುಂದುವರಿಯಿತು.

ವಿದ್ಯಾರ್ಥಿಗಳೆಲ್ಲ ಏಕಕಂಠದಿಂದ ಜಯಜಯಕಾರ ಮಾಡಿ ಕೈಯೆತ್ತಿ

"ಹೋಗಿ ಬನ್ನಿರಿ ನಿಮಗೆ ಗೆಲುವಾಗಲಿ"

ಎಂದು ಕೂಗಿದರು, ಗಾಡಿ ಸಾಗಿಯೇಬಿಟ್ಟಿತು.

ರಾತ್ರಿ ೧೧ ಗಂಟೆಯ ಸುಮಾರಿಗೆ ವಿಜಾಪುರ ಸ್ಟೇಶನ್ ಬಂತು ಇಳಿದೆ. ಕುದುರೆಯ ಗಾಡಿ ಹತ್ತಿ ಕಿರಾಣಿ ಬಜಾರಕ್ಕೆ ಹೋದೆ. ಅಲ್ಲಿ ಶ್ರೀ ರೇವಣಸಿದ್ದಪ್ಪಣ್ಣಾ ಹಲಸಂಗಿ ಅವರಿದ್ದ ನಾರಾಯಣದಾಸ ಅವರ ಅಂಗಡಿಯಲ್ಲಿ ಇನ್ನೂ ದೀಪವಿತ್ತು. ಬಾಗಿಲು ತೆಗೆದು ನನ್ನನ್ನು ಒಳಗೆ ಬರಮಾಡಿಕೊಂಡರು. ಮಲಗಲಿಕ್ಕೆ ಅನುಕೂಲವಾದ ಸ್ಥಳ ತೋರಿಸಿದರು.

ಬೆಳಗು ಮುಂಜಾನೆ ಎದ್ದು ಪಾತ್ರರ್ವಿಧಿಗಳನ್ನೆಲ್ಲ ತೀರಿಸಿಕೊಂಡು, ಅಂಗಡಿಯಲ್ಲಿದ್ದ ಸ್ನೇಹಿತರಿಗೆ ಶರಣಾರ್ಥಿಕೊಟ್ಟು, ಬಾಗೇವಾಡಿಗೆ ಹೋಗುವ

ಬಸ್ಸು ಹಿಡಿಯಲು ತವಕದಿಂದ ಹೋದೆ. ದಾರಿಯಲ್ಲಿ ಸಿಕ್ಕ ಒಂದಂಗಡಿಯಲ್ಲಿ ಒಂದು ಬಟ್ಟಲು ಹಾಲು ಕುಡಿದು ಹೊಟ್ಟೆಯ ಹಳವಂಡವನ್ನು ತಮ್ಮಣಗೊಳಿಸಿದೆ.

ವಿಜಾಪುರದಿಂದ ಬಾಗೇವಾಡಿ ೨೬ ಮೈಲು ಅಂತರದಲ್ಲಿದೆ. ೯ ಗಂಟೆಗೆ ಬಿಟ್ಟ ಬಸ್ಸು ೧೧ ಗಂಟೆಯ ಸುಮಾರಿಗೆ ಬಾಗೇವಾಡಿಗೆ ಒಯ್ದು ಇಳಿಸಿತು.

ಇಂಗಳೇಶ್ವರ ದಾರಿ ಯಾವುದು ಬಾಗೇವಾಡಿ ಅದೆಷ್ಟು ದೂರದಲ್ಲಿದೆ? ವಾಹನ ಗೀಹನ ಸಿಗುವವೋ ಹೇಗೆ - ಎಂದು ಚೌಕಸಿ ಮಾಡಿದೆ.

ನಡೆಯುತ್ತಲೇ ಹೊರಟೆ, ೭ ಮೈಲಿನ ದಾರಿಯಲ್ಲಿ.

೨ ಫರ್ಲಾಂಗು ಹೋಗಿದ್ದೆ. ದಾರಿಯಲ್ಲಿ ಎತ್ತಿನ ಬಂಡಿಯೊಂದು ಸವಾರಿಕಟ್ಟಿ ನೆರಳು ಮಾಡಿತ್ತು. ಗಾಡಿ ಯಾವ ಊರಿಗೆ ಹೊರಟಿದೆ ಎಂದಾಗ, ಇಂಗಳೇಶ್ವರಕ್ಕೆ ಎಂಬ ಉತ್ತರ ಸಿಕ್ಕಿತು. ಹರುಷಿತನಾದೆ. ಗಾಡಿ ಅಸಂಗಿಯದು ಎಂದು ಗೊತ್ತಾಯಿತು. ಇಂದು ಹೊಸ್ತಿಲ ಹುಣ್ಣಿಮೆ, ಇಂಗಳೇಶ್ವರದಲ್ಲಿ ಸಿದ್ಧೇಶ್ವರ ಜಾತ್ರೆ. ಅಲ್ಲಿ ನಮ್ಮ ಆಪ್ತರಿದ್ದಾರೆ. ಹೊರಟಿದ್ದೇವೆ ಎಂದು ಗಾಡಿಯೊಳಗೆ ಕುಳಿತ ಗೃಹಸ್ಥರು ಹೇಳಿದರು.

"ನಿಮ್ಮೂರ್ಯಾವುದು?" "ಚಡಚಣ"ವೆಂದೆ.

"ಹೊರಟದ್ದೆಲ್ಲಿಗೆ" "ಇಂಗಳೇಶ್ವರ"ಕ್ಕೆಂದೆ.

"ಯಾರ ಕಡೆಗೆ" ಎಂದಾಗ, "ಶಾಲೆಯ ಮಾಸ್ತರರ ಕಡೆಗೆ ಹೋಗಬೇಕಾಗಿದೆ. ನನಗೆ ಇಂಗಳೇಶ್ವರಕ್ಕೆ ವರ್ಗವಾಗಿದೆ" ಎಂದು ತಿಳಿಸಿದೆ.

"ಬನ್ನಿರಿ, ಗಾಡಿ ಹತ್ತಿರಿ, ನೀವೂ ಲಿಂಗಾಯತರೇ ಅಲ್ಲವೇ" ಎಂದರು.

"ಅಹುದು" ಎನ್ನುತ್ತ ಗಾಡಿ ಹತ್ತಿದೆ.

ಮೆತ್ತಗಿನ ಹಾಸು, ತಂಪಾದ ಸವಾರಿಯ ನೆರಳು. ಮರುಕ್ಷಣವೇ ನಿದ್ದೆ ಆವರಿಸಿತು. ಮುಂದೆ ಒಂದು ತಾಸಿನ ಮೈಲು ಯಾವುದೋ ತೋಟದ ಬಳಿಯಲ್ಲಿ ಗಾಡಿ ತರುಬಿದ ಬಳಿಕ ನನ್ನನ್ನು ಎಚ್ಚರಿಸಿದರು. "ನೀರು ಕುಡಿಯಲಿಕ್ಕೆ ನಿಮ್ಮಲ್ಲೇನಾದರೂ ಇದೆಯೇ" ಎಂದು ಕೇಳಿದರು.

ವಾಟಕಾ ಇದೆ ಎಂದು ಸಹಜವಾಗಿ ಮರುನುಡಿದೆ. ಅವರು ನಕ್ಕರು. "ನಾನು ಕೇಳಿದ್ದು ಅದನ್ನಲ್ಲ. ನೀರು ಕುಡಿಯುವ ಮುಂಚೆ ತಿನ್ನಬೇಕಾದದ್ದು ಏನಾದರೂ ಇದೆಯೇ ಎಂದು ಕೇಳಿದೆ, ಇಲ್ಲವೆಂದಂತಾಯಿತು ನಮ್ಮಲ್ಲಿ ಹೆಸರಿನ ಉಂಡಿಗಳಿವೆ. ಒಂದು ತಿಂದು ನೀರು ಕುಡಿಯಿರಿ" ಎಂದರು. ಸನ್ನೆಯಿಂದ ಸಮ್ಮತಿಸಿದೆ. ಉಂಡಿ ತಿಂದು ನೀರು ಕುಡಿದೆ. ಆ ಬಳಿಕ ನಿದ್ರೆ ಸುಳಿಯಲಿಲ್ಲ.

ಅರ್ಧ ತಾಸಿನಲ್ಲಿ ಇಂಗಳೇಶ್ವರದ ಹತ್ತಿರದಲ್ಲಿಯೇ ಬಂದಿದ್ದೆವು.

ನಾನು ಗಾಡಿಯಿಂದಿಳಿದು, ಶಾಲೆಯ ಮುಖ್ಯಗುರುಗಳ ಮನೆಯೆಲ್ಲಿ ಎಂದು ಕೇಳುತ್ತ ಮುಂದೆ ಸಾಗಿದೆ. ಅವರ ಮನೆ ಸಿಕ್ಕಿತು.

ಮುಖ್ಯ ಗುರುಗಳು ಮನೆಯಲ್ಲಿದ್ದರು. ನಾನು ನನ್ನ ಕಿಸೆಯಿಂದ ಕಾಗದ ತೆಗೆದೆ. ಈ ಹುಕುಮಿನ ಪ್ರಕಾರ ಬಂದಿದ್ದೇನೆ ಎಂದು ಅದನ್ನು ಅವರ ಕೈಗಿತ್ತೆ.

ಓದಿಕೊಂಡರು, ನನ್ನ ಹೆಸರು ಕೇಳಿ ತಿಳಿದು ತುಂಬ ಹರ್ಷಿತರಾದರು ಅವರ ಮನೆಯ ಹೆಣ್ಣು ಮಕ್ಕಳಿಗೂ ನನ್ನ ವೃತ್ತಾಂತ ಗೊತ್ತಾಯಿತು. ಕೈಕಾಲು ತೊಳೆಯಲು ನೀರು ಕೊಟ್ಟರು. ಜಾತ್ರೆಯೂಟದ ಸವಿ ನೋಡಿದೆನು. ಮೇಲೆ ಗಟ್ಟಿಯಾದ ಚಹ ಸಿಕ್ಕಿತು.

ಮನೆಯ ಎದುರಿಗೇ ಕಾಣುತ್ತಿದ್ದ ಶಾಲೆಯ ಒಂದು ಕೋಣೆಯಲ್ಲಿ ಮೆತ್ತಗಿನ ಹಾಸಿಗೆ, ತಲೆದಿಂಬು ವಿದ್ಯಾರ್ಥಿಗಳಿಂದ ಹಾಕಿಸಿದರು.

ನಾನಲ್ಲಿಗೆ ಹೋಗಿ ಹಿಂದುಮುಂದಿನ ಯೋಚನೆಗಳನ್ನೆಲ್ಲ ಮರೆತು ಸ್ವಸ್ಥವಾಗಿ ನಿದ್ರೆ ಮಾಡಿದೆ. ಎದ್ದದ್ದು ತೀರ ಸೂರ್ಯ ಮುಳುಗುವ ಹೊತ್ತಿಗೆ.

ಜಾತ್ರೆಯ ಸಲುವಾಗಿ ಊರ ಮೇಳದವರು ಕಲಿತ ನಾಟಕ ಆಡಲಿದ್ದರು. ಮುಖ್ಯ ಶಿಕ್ಷಕರ ಸೂಚನೆಯಂತೆ ನನಗೂ ಒಂದು ಪಾಸು ಬಂತು. ಮೇಳದ ಪ್ರಮುಖರು ನನ್ನ ಹೆಸರು ಕೇಳಿದ್ದರಂತೆ. ಅವರು ಬಂದು ನನ್ನನ್ನು ಭೇಟ್ಟಿಯಾದರು. ನಾಟಕಕ್ಕೆ ಬರಲೇಬೇಕೆಂದು ಆಗ್ರಹಪಟ್ಟರು, ನಾನು ಒಪ್ಪಿಕೊಂಡೆ, ಆದರಿಂದ ಸಂತೋಷವೆನಿಸಿತು.

ಜಾತ್ರೆಯ ಸಲುವಾಗಿ ೩ ದಿನಗಳ ಸೂಟಿಯಿತ್ತು ಶಾಲೆಗೆ.

ನನ್ನ ವಸತಿಗಾಗಿ ತಾತ್ಪೂರ್ತಿಕ ಒಂದು ಕೋಣೆ ನೋಡಿ ಬಂದೆವು.

"ನೀವು ಚಡಚಣಕ್ಕೆ ಹೋಗಿ ಮಂಡಲಿಯನ್ನು ಕರೆತರಲು ಅಡ್ಡಿಯಿಲ್ಲ ಈ ಊರಲ್ಲಿ ನೀರಿನದೇ ಒಂದು ತೊಂದರೆ. ಆದರೂ ಚಿಂತಿಸುವ ಕಾರಣವಿಲ್ಲ. ಹೊಸ ಕೆರೆಗೆ ಇದೇ ಮೊದಲಸಾರೆ ನೀರು ಬಂದಿದೆ. ನೀರಿನ ತೊಂದರೆ ಹಿಂಗುವುದರಲ್ಲಿ ಸಂಶಯವೇ ಇಲ್ಲ. ಶಿಕ್ಷಿತರೀತ ಗ್ರಾಮವೆಂದು ನೀವೇನೂ ಗಾಬರಿಯಾಗುವ ಕಾರಣವಿಲ್ಲ" ಎಂದು ಮುಖ್ಯ ಗುರುಗಳು ಹಿರಿಯ ಬಂಧುವಿನಂತೆ ಸಲಹೆ ನೀಡಿದರು. ಅವರ ಶ್ರೀಮತಿಯವರಂತೂ ತುಂಬ ಪ್ರೋಕ್ತರು, ಅವರು ಸಾಕಷ್ಟು ಧೈರ್ಯವಿತ್ತರು.

ರಾತ್ರಿ ನಾಟಕ ನೋಡಿ ಬಂದು, ಶಾಲೆಯ ಒಂದು ಕೋಣೆಯ ಏಕಾಂತದಲ್ಲಿ ಸಾಕಷ್ಟು ನಿದ್ರೆ ಮಾಡಿ, ಮುಂಜಾವಿನ ವಿಧಿಗಳನ್ನು ಮುಗಿಸಿ ಕೊಂಡು, ಶ್ರೀಕರಣೀ ಗುರುಗಳೊಂದಿಗೆ ಉಪಹಾರ ತೀರಿಸಿಕೊಂಡೆ. ಆ ಬಳಿಕ ಬಾಗೇವಾಡಿಯ ದಾರಿ ಹಿಡಿದೆ.

ಸಂಜೆಯೊಳಗಾಗಿ ಚಡಚಣ ತಲುಪಿದೆ. ಒಂದೆರಡು ದಿನಗಳಲ್ಲಿ ನಾವೆಲ್ಲ ಹೊರಡಬೇಕು ಎಂದು ಸೂಚ್ಯವಾಗಿ ಅತ್ತಿಗೆಯವರಿಗೆ ಹೇಳಿದೆ. ಮರುಕ್ಷಣವೇ ಮುಂಬರುವ ಗಲಾಟೆಯ ನೆನಪಾಗಿ ಎದೆ ನಡುಗಿತು. ಅದನ್ನು ದಾಟದೆ ಮುಂದಿನ ದಾರಿಯೇ ಇಲ್ಲವಲ್ಲ ಎಂದು ಮನಸ್ಸಿಗೆ ಧೈರ್ಯ ಹೇಳಿದೆ.

ನನಗೆ ಇಬ್ಬರೇ ಸ್ನೇಹಿತರು. ಒಡ ಹುಟ್ಟಿದವರಂತೆ ಇದ್ದರೆಂದು ಪ್ರಾಂಜಲತೆಯಿಂದ ಒಪ್ಪಿಕೊಳ್ಳುತ್ತೇನೆ. ಒಬ್ಬರು ಚಡಚಣದವರೇ ಆದ ಹಾಗೂ ಸಹಪಾಠಿಗಳೂ ಆಗಿದ್ದ ಗುರುಪಾದಪ್ಪಣ್ಣ ಜೀರಂಕಲಗಿ. ಇನ್ನೊಬ್ಬರೆಂದರೆ ಹಲಸಂಗಿಯವರಾದ ಹಾಗೂ ಬಾಲ್ಯದಿಂದಲೂಮಿತ್ರರಾಗಿ ಬಂದ ಚೆನ್ನಮಲ್ಲಪ್ಪ ಗಲಗಲಿ. ಇವರಿಬ್ಬರ ಸಹಕಾರ, ಸಹಾನುಭೂತಿ ಇದ್ದಿದ್ದರಿಂದಲೇ ನನ್ನ ಸಂಸಾರವು ತಕ್ಕ ತಳಹದಿಯನ್ನು ಕಂಡಿತು. ಬರಿ ಅತ್ತಿಗೆಯ ಮೇಲೆ ಕೈಯೂರಿದ್ದರೆ, ನಾನು ಹುದಿಲಲ್ಲಿಯೇ ಮುಳುಗಿ ಹೋಗುತ್ತಿದ್ದೆನು.

ಮರುದಿನ ಗುರುಪಾದಪ್ಪಣ್ಣನ ಮನೆಗೆ ಹೋಗಿ, ನನ್ನ ಸಂಸಾರದ ಅರೆಕೋರೆಗಳನ್ನು ಹೇಳಿದೆ. ಅಂದರೆ ಲಕ್ಷ್ಯಕ್ಕೆ ತಂದುಕೊಟ್ಟೆ. ನನ್ನ ಹೆಂಡತಿಯೆಂದರೆ ತನ್ನ ಬೆನ್ನ ಮೇಲೆ ಹುಟ್ಟಿದ ತಂಗಿಯೆಂದು ಭಾವಿಸಿದವರು. ಆ ವಿಷಯವನ್ನು ಅಕ್ಷರಶಃ ಸರಿಯಾಗಿ ನಿರ್ವಹಿಸಿಕೊಟ್ಟರು.

ಅದರಂತೆ, ಹಲಸಂಗಿಯ ಚೆನ್ನಮಲ್ಲಪ್ಪನವರು, ನನ್ನ ಹೆಂಡತಿ ಗುರುಪಾದಪ್ಪನವರಿಗೆ ಖಾಸ ತಂಗಿಯೆನಿಸಿದಂತೆ, ಚೆನ್ನಮಲ್ಲಪ್ಪನವರ ಹೆಂಡತಿ ಬಸಮ್ಮ ನನ್ನನ್ನು ಖಾಸ ಅಕ್ಕನಾಗಿ ಲಾಲಿಸಿದಳು. ಅವರಿಬ್ಬರ ಸಹವಾಸ ದೊರಕದಿದ್ದರೆ ನಾನೊಬ್ಬ ಶಂಭನೋ ಕಾಡುಮೇಡಿನ ಕುರುಬನೋ ಆಗುತ್ತಿದ್ದೆನೆಂದು ಹೇಳುವುದು ಅಪ್ರಾಸಂಗಿಕವೇನಲ್ಲ.

ಒಡಹುಟ್ಟಿದ ಅಣ್ಣ ತಮ್ಮರಿಲ್ಲದಿರುವವರಿಗೆ, ನಡೆ ಪಥದ ಅಣ್ಣ ತಮ್ಮಂದಿರೇ ಗತಿಯಲ್ಲವೇ? ಆ ಉಭಯ ಬಂಧುಗಳು ನಡೆಪಥದವರು ಮಾತ್ರ ಎಂದು ಯಾರೂ ಹೇಳಲಾರರು, ಒಂದೇ ಹೊಟ್ಟೆಯ ಒಂದೇ ಹುರಿಯಲ್ಲಿ ರೂಪು ತೊಟ್ಟು ಬಂದ ಕಂದಗಳು.

೨೬. ಹೊರಪಯಣದ ಪೂರ್ವಸಿದ್ಧತೆ

ಇಂಗಳೇಶ್ವರದಿಂದ ಮರಳಿ ಊರಿಗೆ ಬಂದೆ. ಮನೆಗೆ ಹೋದರೆ, ಅಲ್ಲಿ ಅತ್ತಿಗೆ ಮಕ್ಕಳು ಯಾರೂ ಮಾತನಾಡಲಿಲ್ಲ, ಮೌನದ ಸ್ವಾಗತ. ನಾನು ಏನು ಮಾಡಬೇಕೋ ಏನು ಮಾತಾಡಬೇಕೋ ತಿಳಿಯದಾಯಿತು.

ಅಂಗಿ ಟೊಪ್ಪಿಗೆ ತೆಗೆದಿಟ್ಟು, ಬಚ್ಚಲಿಗೆ ಹೋಗಿ ಕೈಕಾಲು ತೊಳಕೊಂಡು ಒಂದು ತಂಬಿಗೆ ನೀರು ಕುಡಿದು ಹೊರಬಿದ್ದೆ ಎಲ್ಲಿಗೆ?

ಅಣ್ಣಾ ಗುರುಪಾದಪ್ಪನವರ ಮನೆಗೆ ಹೋಗಿ, ಅವರಿಗೆ ಸಾದ್ಯಂತ ವಿಷಯವನ್ನು ವಿವರಿಸಿದೆ. ಇಂದು ಮನೆಯಲ್ಲಿ ದೊರೆತ ಸ್ವಾಗತದ ವಿಷಯ ಇನ್ನು ಸ್ವಲ್ಪದರಲ್ಲಿ ಹೇಳಿದೆ. ಆದರೆ ಊಟವಾಗಲಿಲ್ಲ ಎಂಬುದನ್ನು ತಿಳಿಸುವ ಅಗತ್ಯವೇ ಇರಲಿಲ್ಲ.

- "ನೀನು ನಾಳೆ ಹೊರಡಲೇ ಬೇಕು. ಈ ಹೊತ್ತು ಸಂಜೆ ಇಳಿ ಹೊತ್ತಿಗೆ ನಿಮ್ಮ ಮನೆಗೆ ಬರುವೆನು. ಆಗ ಅತ್ತಿಗೆಯನ್ನು ಮಾತಾಡಿಸಿ, ಇಂಗಳೇಶ್ವರಕ್ಕೆ ಹೊರಡುವ ಯೋಚನೆ ತಿಳುಸುವೆ. ಜೊತೆಗೆ ಒಬ್ಬ ಹುಡುಗ ಶಂಕರನನ್ನು ಕಳಿಸೆಂದೂ ಹೇಳುವೆನು. ಆದರೆ ಆಕೆ ಒಪ್ಪುವುದಿಲ್ಲವೆನ್ನುವುದು ತಿಳಿದಿದ್ದರೂ ನಾವು ಜೊತೆಗೆ ಕಳಿಸಲು ಕೇಳಿಕೊಳ್ಳುವುದನ್ನು ಬಿಡಲಿಕ್ಕಾಗದು."

"ಚಡಚಣದಲ್ಲಿ ನನಗಿರುವ ಮನೆ ಎಂದರೆ ಒಂದು ಅತ್ತಿಗೆಯ ಆಡಳಿತಕ್ಕೆ ಸೇರಿದ ಮನೆ. ಇನ್ನೊಂದು ಅತ್ತೆಯ ಮನೆ. ಅಲ್ಲಿಗೆ ನಾನು ಹೋಗುವುದಕ್ಕಿಂತ ನೀವೇ ಹೋಗಿ, ನಾಳೆ ಮುಂಜಾನೆ ಟಪಾಲ ಬಸ್ಸಿಗೆ ಮಗಳನ್ನು ಹೊರಡಿಸಿರೆಂದು ಸೂಚಿಸುವುದು ಒಳ್ಳೆಯದೆಂದು ನನಗನಿಸುತ್ತದೆ" ಎಂದೆ.

ಆ ವಿಚಾರ ಅವರಿಗೂ ಸೂಕ್ತವೆನಿಸಿತು. ಅಣ್ಣನವರ ಮನೆಯಲ್ಲಿ ಒಂದು ಬಟ್ಟಲು ಚಹ ಕೊಟ್ಟರು. ಊಟ ಆಗಿದೆಯೆಂದು ಹೇಳಿದ್ದರಿಂದ ಆ ವಿಷಯದಲ್ಲಿ ಅವರು ಆಗ್ರಹಪಡಿಸಲಿಲ್ಲ.

ನಾನು ನೇರವಾಗಿ ಮನೆಗೆ ಬಂದೆ. ಹುಟ್ಟಾ ಪರದೇಶಿಯಾದ ನಾನು ಅಂದು ಇಮ್ಮಡಿ ಪರದೇಶಿಯಾಗಿ ಏನೋ ಹಾಸಿಕೊಂಡು ಅಡ್ಡಾದೆ. ನಿದ್ರೆ ಹತ್ತಲೇ ಇಲ್ಲ. ತಲೆಯಲ್ಲಿ ನೂರಾರು ಜೇನುಹುಳುಗಳು ಗುಂಯ್‌ಗುಟ್ಟುತ್ತಿದ್ದವು. ಆ ಕಾಲಕ್ಕೆ ಚಡಚಣದ ರಾಷ್ಟ್ರೀಯ ಕೆಲಸವಾಗಲಿ, ಸಾಹಿತ್ಯದ ವಿಷಯವಾಗಲಿ ತಲೆಯಲ್ಲಿ ಹಣಕಿ ಹಾಕಲೇ ಇಲ್ಲ. ಹಾಗೊಮ್ಮೆ ಹೀಗೊಮ್ಮೆ ಹೊರಳಿ ಹೊರಳಿ ಮಲಗುವುದೇ ಆಯಿತು.

ಅಷ್ಟರಲ್ಲಿ ಅಣ್ಣನವರು ಬಂದೇಬಿಟ್ಟರು.

"ಅಕ್ಕನವರೇ, ಗುರುಬಾಯಿ ಅಕ್ಕನವರೇ" ಎಂದು ೨-೩ ಸಾರೆ ಕೂಗಿದ್ದರೂ ಎಚ್ಚರವಾಗದಂತೆ ನಿದ್ರೆಯಲ್ಲಿ ಅಂದರೆ ಅಚ್ಚ ಎಚ್ಚರದಲ್ಲಿ ಡುಕ್ಕು ಹೊಡೆದರು.

ಮರುಗಳಿಗೆಯಲ್ಲಿ ಎಚ್ಚತ್ತ ಹಾಗೆ ಕಣ್ಣು ತೆರೆದು ಎದ್ದು ಕುಳಿತರು ನನ್ನ ಅತ್ತಿಗೆಯವರು. ಆಗ ಅಣ್ಣನವರು ಹೀಗೆ ಹೇಳಿದರು.

"ಏನ್ರೀ ಅಕ್ಕಾ, ನಾಳೆ ಲಿಂಗಣ್ಣ ಮತ್ತು ಸೂಲಬವ್ವ ಇಂಗಳೇಶ್ವರಕ್ಕೆ ಹೋರಡಲೇಬೇಕು. ಹೆಚ್ಚು ನಿಲ್ಲಲು ರಜೆಯಿಲ್ಲ. ಜೊತೆಗೆ ಶಂಕರನನ್ನು ಕಳಿಸಿಕೊಡಿರಿ ಮತ್ತು ಅವರ ಪ್ರಪಂಚಕ್ಕೆ ಬೇಕಾಗುವ ಕೊಡ-ಭಾಂಡೆ-ಪಾತ್ರೆಗಳನ್ನು ನಿರ್ಣಯಿಸಿ ಚೀಲದಲ್ಲಿ ಕಟ್ಟಿಡಿರಿ."

"ಅವರ ಜೊತೆಗೆ ಹೋಗಲು ಯಾರೂ ಒಪ್ಪುವುದಿಲ್ಲ. ಇನ್ನು ಕೊಡ ಭಾಂಡೆಗಳ ವಿಷಯವಾಗಿ ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಅವನ ಅತ್ತೆ-ಮಾವಂದಿರು ಕೊಟ್ಟಿದ್ದನ್ನು ಅವನು ಒಯ್ಯಲಿ. ನನ್ನ ಅತ್ತೆ ಮಾವಂದಿರ ಕೊಡ, ಭಾಂಡೆ, ತಪ್ಪೇಲಿ ನನಗಿರಲಿ ತೀರಿತು, ಬೇಕಾದಾಗ ಹೊರಡಲಿ. ನನ್ನ ಅಪ್ಪಣೆಯಿದೆ. ಆದರೆ ನನ್ನ ಹಾಗೂ ನನ್ನ ಮಕ್ಕಳ ಹೊಟ್ಟೆಗೆ ಏನು ಹಾಕಲಿ? ಅವನ ಪಗಾರದಲ್ಲಿ ಮೂರು ಭಾಗ ಮಾಡಿ, ಒಂದು ತಾನಿಟ್ಟುಕೊಳ್ಳಲಿ, ಎರಡು ಭಾಗ ನನಗೆ ಕಳಿಸಲಿ ಬೇಡ, ನಿಮ್ಮ ಕಡೆಗೆ ಕಳಿಸಲಿ, ನೀವಿಲ್ಲಿ ನನಗೆ ಕೊಡಿರಿ."

ಗುರುಪಾದಪ್ಪನವರು ವಿಷಾದದಿಂದ ನನ್ನ ಕಡೆಗೆ ನೋಡಿದರು ಮಾತ್ರ.

ನಾನು, ಅತ್ತಿಗೆ ಹಾಕಿದ ಕಟ್ಟಳೆಗಳನ್ನು ಒಪ್ಪಿಕೊಳ್ಳಲು ಸಾಧ್ಯವೇ ಇರಲಿಲ್ಲ. ಈಗಿದ್ದ ಸೋಸಾಯಿಟಿಯ ಸಾಲ, ತಿಂಗಳ ಖರ್ಚು ಪರಸ್ಥಳದ ಜೀವನ ಮರ್ಯಾದೆಯಿಂದ ಸಾಗಿಸಬೇಕಾಗಿದೆ ಎಂದು ಮನದಲ್ಲಿ ಎಣಿಕೆ ಹಾಕಿದ್ದನ್ನೇ ಬಿಚ್ಚಿ ಹೇಳಿದೆನು.

ಆ ಮಾತು ಕೇಳಿ ಅತ್ತಿಗೆ ಆಕ್ರೋಶಿಸತೊಡಗಿದಳು. ಆಕೆಯನ್ನು ಸಮಾಧಾನ ಪಡಿಸುವ ದಾರಿಗೇ ಹೋಗಲಿಲ್ಲ ನಾನು.

ಸದ್ಯಕ್ಕೆ ೨-೩ ತಿಂಗಳು ಕಳೆಯಲಿ ಆಮೇಲೆ ಇದ್ದುದರಲ್ಲಿಯೇ ಹೊಂದಿಸಿಕೊಂಡು ಹೋಗೋಣ ಎಂದು ಸಾಂತ್ವನ ಪಡಿಸಿದರು ಅಣ್ಣನವರು.

"ಎಲ್ಲಿ ಹೋದರೆ ಊಟ ಸಿಕ್ಕೀತು" ಎಂದು ಕಳವಳಿಸಿದರೂ ನನಗೆ ದಾರಿ ಕಾಣಿಸಲಿಲ್ಲ.

"ಅಕ್ಕಾ ಅವರೇ ಲಿಂಗಣ್ಣನ ಊಟ ಸಂಜೆಗೆ ನಮ್ಮ ಮನೆಯಲ್ಲಿಯೇ ನನ್ನೊಡನೆ ಮುಗಿಯುವದು. ನೀವೇನು ಮಾಡುವ ತೊಂದರೆ ಪಡಬೇಡಿರಿ."

"ನಮ್ಮ ಸಲುವಾಗಿಯಾದರೂ ಎರಡು ರೊಟ್ಟಿ ಬೇಯಿಸಬೇಕಲ್ಲಾ" ಎಂದರು ಅತ್ತಿಗೆಯವರು.

"ಇದೇ ಕೈಯಲ್ಲಿ ಕೇಶೆಟ್ಟಿ ಅವರ ಮನೆಗೆ ಹೋಗಿ, ನಾಳೆ ತಂಗಿಯನ್ನು ಕಳಿಸುವ ಎತ್ತಗಡೆ ಮಾಡಿರೆಂದು ಹೇಳಿ ಹೋಗುವೆ" ಎನ್ನುತ್ತ ಅಣ್ಣನವರು ಎದ್ದರು.

ನನಗೇನೂ ತಿಳಿಯದಾಯಿತು. ಅವರೊಡನೆ ಎದ್ದು ಹೋಗಬೇಕೋ ಇಲ್ಲಿಯೇ ಕುಳಿತುಕೊಳ್ಳಬೇಕೋ ತಿಳಿಯಲಿಲ್ಲ.

೨೭. ಬೀಳುಕೊಡಿಗೆಯ ಸಮಾರಂಭ?

ಅಂದು ಸಾಯಂಕಾಲ ಅಣ್ಣನವರ ಗುಮಾಸ್ತೆ ನನ್ನನ್ನು ಕರೆಯ ಬಂದನು. ಊಟಕ್ಕೆ ನಾನು ಹೇಳಿಕಳಿಸಿದ್ದೆ ಊಟ ಇಲ್ಲೇ ಮಾಡುವೆ ಇನ್ನೊಂದು ಸಾರೆ ಬಂದಾಗ ನಿಮ್ಮಲ್ಲಿ ಊಟ ಮಾಡಿಹೋಗುವೆನು ಈ ಸಾರೆ ನನ್ನನ್ನು ಬಿಡಿರಿ.

ಟಪಾಲ ಬಸ್ಸು ಹಳ್ಳದಾಚೆಯ ದಾರಿಯ ಬದಿಯಲ್ಲಿ ನಿಲ್ಲುತ್ತಿತ್ತು. ನನಗಾಗಿ ಕಟ್ಟಿದ ಭಾಂಡೆಗಳ ಚೀಲ, ಅರಿವೆ-ಅಂಚಡಿ ಹಾಸಿಗೆ ಹೊದಿಕೆಗಳ ಗಂಟು ಹೊರಿಸಿಕೊಂಡು ಹೊರಟೆ ಬಸ್ಸು ನಿಂತಲ್ಲಿಗೆ. ಅರ್ಧದಾರಿ ಸಾಗಿದಾಗ ಹಿಂದೆ ಹೊರಳಿ ನೋಡಿದೆ. ಎರಡು ಗುಂಪುಗಳು ಕಣ್ಣಿಗೆ ಬಿದ್ದವು. ಒಂದು ಹೆಂಡತಿಯ ತವರವರದು ಇನ್ನೊಂದು ಅತ್ತಿಗೆಯ ಸಂಬಂಧಿಕರು.

ಈ ಘಟನೆ ಸಹಜವಾಗಿ ಮುಗಿಯುವಂಥದಲ್ಲ. ದೇವರು ಮಾಡಿದಂತೆ ಆಗಲಿ ಎಂದು ಮುಂದುವರಿದೆ.

ಬಸ್ಸು ಸಿದ್ಧವಾಗಿ ನಿಂತಿತ್ತು. ನಾವು ಅದನ್ನು ಹತ್ತಿ ನಮ್ಮನಮ್ಮ ಸ್ಥಳಗಳನ್ನು ಹುಡುಕಿಕೊಂಡು ಕುಳಿತೆವು. ಒಂದು ಕಡೆಗೆ ಅತ್ತಿಗೆಯ ಆಕ್ರೋಶ, ಇನ್ನೊಂದು ಕಡೆಗೆ ಅತ್ತೆ ಮನೆಯವರ ಮೂಕಶೋಕ ಈ ಎರಡೂ ಗುಂಪಿಗೆ ಸಂಬಂಧವಿಲ್ಲದವರು ಹೇಳಿದರು.

"ಅಳಬಾರದು, ಹೊಸದಾಗಿ ಊರಿಗೆ ಹೊರಟಾಗ, ಅವರಿಗೂ ಒಳ್ಳೆಯದಾಗಲೆಂದು ಆಶೀರ್ವಾದ ಮಾಡಬೇಕು"

ಆ ಮಾತು ಕೇಳಿ ಅತ್ತಿಗೆ ಕಣ್ಣೊರಿಸಿಕೊಂಡು ಆಗಿನ ಮಟ್ಟಿಗೆ ಶೋಕವನ್ನು ತಡೆಗಟ್ಟಿದರು. ಮಕ್ಕಳು ಮಾತ್ರ ಮೂವರೂ ಅಡರಾಸ ತೊಡಗಿದರು - "ಅಳಬೇಡಿರೋ ಅಳಬೇಡಿರಿ, ಕಾಕಾ ಚಿಗವ್ವ ಹೊಸದಾಗಿ ಊರಿಗೆ ಹೊರಟಾಗ ಅತ್ತು ಅವಲಕ್ಷಣ ತೋರಿಸಬೇಡಿರೋ" ಎಂದಾಗ ಮಕ್ಕಳ ಅಳುವ ಭುಗಿಲ್ ಎದ್ದಿತು. ಅದು ಅತ್ತಿಗೆ ಸಹನವಾಗಲಿಲ್ಲವೆನ್ನುವಂತೆ - "ಅಳಬೇಡಿರೋ, ಅಳಬೇಡಿರಿ, ಹೇಗೆ ಹೇಳಲಿ ನಿಮಗೆ? ಅಳಬೇಡ್ರಿ ಅಳಬೇಡ್ರಿ ಎಂದು ನಿಮ್ಮ ಮುಂದೆ ಹೊಯ್‌ಕೊಳ್ಳಲಾ" ಎಂದು ಬಹು ದೊಡ್ಡದನಿ ತೆಗೆದು ಹಾಡಿಕೊಂಡು ಅಳತೊಡಗಿದಳು.

"ನಮಗೆ ದೇವರು ಅಳುವಂತೆ ಮಾಡಿದ್ದಾನೆ. ಅವರು ಸುಖದವರು ನಗುತ್ತ ಹೋಗಲಿ" ಎಂದು ಶಂಕರನು ಕೊಂಕು ನುಡಿದನು. ಹುಷಾರ ಹುಡುಗ. ಇವನಿಗೆಲ್ಲಾ ತಿಳಿಯುತ್ತದೆ, ಪ್ರಸಂಗವೇ ಹಾಗಿದೆಯೆಂದು ತಿಳಿದವರು ಮಾತಾಡಿಕೊಂಡರು.

ಕಂಡಕ್ಟರನು ಬರುವವರೆಗೆ ಇದೆಲ್ಲಾ ನಡೆಯತಕ್ಕದ್ದೇ ಎಂದು ಯೋಚಿಸಿ, ಶೋಕಾವೇಗವನ್ನು ತಡೆಯಿರೆಂದು ಯಾರೂ ಸಮಾಧಾನ ಹೇಳಲಿಲ್ಲ.

ಚಡಚಣದಿಂದ ಹೊರಬೀಳುವ ಕೆಲಸವಂತೂ ಸದ್ಯದಮಟ್ಟಿಗೆ ಮುಗಿದಿದೆ. ಮುಂದಿನ ವಿಷಯ ಮುಂದೆ. ನಮ್ಮ ದೈವವು ಅದೆಂಥದೇ ಇರಲಿ ನೆರಳಾಗಿ ಹಿಂದೆಯೋ ಮುಂದೆಯೋ ಸಾಗಿದೆ ಅಥವಾ ಬೆಂಬತ್ತಿದೆ ಅಣಕಿಸುತ್ತಲೂ ಇದೆ. ಜಗತ್ತಿನಲ್ಲಿ ಸೂರ್ಯನೊಬ್ಬನನ್ನು ಬಿಟ್ಟರೆ ಇನ್ನಾರಿಗೂ ನೆರಳು ತಪ್ಪಿಲ್ಲ.

ಬಸ್ಸು ಬಿಟ್ಟಿತು. ವಿಜಾಪುರದತ್ತ ಮುಂದುವರಿದಂತೆ ಅಳುವು, ಆಕ್ರೋಶಗಳ ಸ್ವರವು ಕಿವಿಗೆ ಬೀಳದಂತೆ ಹಿಂಜರಿಯಿತೆನ್ನಬಹುದು, ಅಥವಾ ನಾವೇ ಮುಂದುವರಿದೆವೆಂದು ಹೇಳಬಹುದು.

ವಿಜಾಪುರದಲ್ಲಿ ಬಾಗೇವಾಡಿಯ ಬಸ್ಸು ಹತ್ತಿದೆವು. ತಿಂಡಿ-ತಿನಿಸು, ನೀರು-ಚಹಗಳ ವಿಷಯವೇ ಇರಲಿಲ್ಲ. ಚಡಚಣದ ಅಗಲಿಕೆಯು ನಮ್ಮ

ಹಸಿವೆ ನೀರಡಿಕೆಗಳನ್ನು ಹಾರಿಸಿಬಿಟ್ಟಿತೇನೋ. ತಾತ್ಪೂರ್ತಿಕವಾಗಿಯಾದರೂ ಮೈಕಜ್ಜಿಯ ಬಾಧೆ ಕಡಿಮೆ ಆಯಿತೆನ್ನಬಹುದು. ಸಂಪೂರ್ಣ ಹೋಗಿ ಬಿಟ್ಟಿತೆಂದು ಹೇಳುವ ಕಾಲವು ಬರಬೇಕಾಗಿದೆ, ಬರಬೇಕಿದೆ.

ನಾವು ಬಾಗೇವಾಡಿಯನ್ನು ತಲಪಿದ್ದು ಸಂಜೆ ಇಳಿಹೊತ್ತಿಗೆ. ಅಂದು ಸೋಮವಾರ, ಬಾಗೇವಾಡಿಯ ಸಂತೆ, ಇಂಗಳೇಶ್ವರದಿಂದ ಒಂದೆರಡು ಎತ್ತಿನ ಬಂಡಿಗಳೂ ಬಂದಿದ್ದವು. ಒಂದು ಬಂಡಿಯವನು, ನಮ್ಮಿಬ್ಬರನ್ನು ಕರೆದೊಯ್ಯುವೆನೆಂದು ಹೇಳಿದನು.

ಬಾಗೇವಾಡಿಯಲ್ಲಿ ತುಸು ಅಕ್ಕಿಬೇಳೆಗಳನ್ನು ಖರೀದಿಸಿದೆವು. ೧೯೩೧ನೇ ವರುಷ ಅಗ್ಗಳಿಕೆಯ ಕಾಲವೇ ಆಗಿತ್ತು. ೧ರೂ ಕೊಟ್ಟರೆ ೮-೯ ಕೆ.ಜಿ. ಅಕ್ಕಿ ಬರುತ್ತಿದ್ದವು. ಉಣ್ಣುವವರೇ ಇರಲಿಲ್ಲವೆನ್ನಬಹುದಾಗಿದೆ.

ದೀಪಹಚ್ಚುವ ವೇಳೆಗೆ ನಾವು ಇಂಗಳೇಶ್ವರವನ್ನು ತಲುಪಿ, ನಮಗಾಗಿ ಕಾದಿಟ್ಟ ಮನೆಯನ್ನು ತಲುಪಿದೆವು. ಕಂದೀಲು ಹಚ್ಚಿದಾಗ ಹರಡಿದ ಬೆಳಕಿನಲ್ಲಿ ಒಬ್ಬರಿಗೊಬ್ಬರು ಕಾಣಿಸಿಕೊಂಡೆವು. ಕಣ್ಣು ಹಸಿಯಾಗಿದ್ದವು ಅಷ್ಟರಲ್ಲಿ ನೆರೆಹೊರೆಯ ಹೆಣ್ಣುಮಕ್ಕಳು ಬಂದರು. ಗುರುತು ಕೇಳಿದರು, ಹೇಳಿದರು. ಬಾಳಹೊತ್ತಿಗೆಯಲ್ಲಿ ಬರುವ ಬೇರೊಂದು ಪಾಠದ ಪುಟಗಳನ್ನು ತೆರೆದಿಟ್ಟಂತಾಯಿತು ನಾವಿರಬೇಕಾದ ಮನೆಯಲ್ಲಿ ನಮಗಿಂತ ಮುಂಚಿತವಾಗಿಯೇ ಕೊಡತುಂಬಿಸಿ ಇಡಿಸಿದ್ದರು. ಅದು ಮುಖ್ಯ ಶಿಕ್ಷಕರ ಶ್ರೀಮತಿಯವರ ಮುಂಧೋರಣೆಯೇಸೈ.

ಹೊಸ ಮನೆಯಲ್ಲಿ ದೀಪ ಹಚ್ಚಿದ ಬಳಿಕ ಕೈಕಾಲು ತೊಳಕೊಂಡ ಮೇಲೆ ಮುಂದಿನ ಕೆಲಸ ಕಲ್ಪನೆ ತಾನಾಗಿಯೇ ಬರುತ್ತದೆ. ಹೆಂಡತಿಯು ತನಗಾಗಿ ಕಟ್ಟಿದ ಬುತ್ತಿಯನ್ನು ಕೈಗೆತ್ತಿಕೊಂಡು ಬಿಚ್ಚತೊಡಗಿದಳು -

ತಾಯಿಕಟ್ಟಿದ ಬುತ್ತಿ, ತರತರದಯಾಲಕ್ಕಿ

ಬಿಚ್ಚಿ ಉಣ್ಣುವುದಕ್ಕೆ ಅಲ್ಲಿ ಭೀಮರಥಿ ಹೊಳೆಯಿರಲಿಲ್ಲ. ಹಿಗ್ಗು ಮಾತ್ರ ತುಂಬಿದ ಹೊಳೆಯಾಗಿ ಎರಡೂ ದಡಿಗಳನ್ನು ತುಂಬಿ ತುಳುಕುತ್ತಿತ್ತು.

ಇರುಳಿನ ಪರದೆಯೊಂದು ಸರಿದುಬಿಟ್ಟರೆ ಬೆಳಗು ಬರುವದು. ಆಗ ಇಂಗಳೇಶ್ವರದ ಅಜ್ಞಾತ ಬಳಗವೆಲ್ಲ ಹತ್ತಿರ ಹತ್ತಿರ ಬರುವದು.

ನಾನು ಅಂದು ಮೊದಲಸಾರೆ ಇಂಗಳೇಶ್ವರಕ್ಕೆ ಹೊರಟಾಗ, ತಮ್ಮ ಸವಾರಿ ಬಂಡಿಯಲ್ಲಿ ಕುಳ್ಳಿರಿಸಿಕೊಂಡು, ಹೆಸರಿನ ಉಂಡಿ ತಿನಿಸಿ, ನೀರು ಕುಡಿಯಲು ದಾರಿ ಮಾಡಿಕೊಟ್ಟ ಚೆನ್ನಮಲ್ಲಯ್ಯನವರ ತಮ್ಮ ಗಂಗಯ್ಯ ಅದೇ ಊರಿನಲ್ಲಿ ಚಿಕ್ಕದಾದ ಒಂದು ಕಿರಾಣಿ ಅಂಗಡಿ ನಡೆಸಿದ್ದ, ಸೋದರತ್ತೆಯ ಮಗಳನ್ನು ಮದುವೆಯಾಗಿ ಎರಡು ಮಕ್ಕಳ ತಂದೆ ಆಗಿದ್ದರು. ಅವರ ಮುಗ್ಧ ಹೆಂಡತಿಯನ್ನು ಈ ಕ್ಷಣದಲ್ಲಿ ನಗಿಸಿದವರು, ಮರುಕ್ಷಣದಲ್ಲಿಯೇ ಅಳಿಸುವಂಥವರು. ಅಳುಅಳುತ್ತಿರುವಾಗಲೇ ಖೊಕ್ಕನೆ ನಗಿಸಬಲ್ಲವರೂ ಆಗಿದ್ದರು.

ಗಂಗಯ್ಯನವರೂ ನನ್ನಂತೆ ತುಸು ತಿಂಡಿ ಪ್ರಿಯರು. ನಮ್ಮಿಬ್ಬರಲ್ಲಿ ಯಾರ ಮನೆಯಲ್ಲಿ ಹೊಸ ತಿಂಡಿಯಾದರೂ ಎರಡೂ ಮನೆಯಲ್ಲಿ ತಿಂಡಿಯಾದಂತೆ ನಾನು ಮತ್ತು ಗಂಗಯ್ಯ ಅನ್ಯೋನ್ಯರಾದಂತೆ, ನಮ್ಮಿಬ್ಬರ ಶ್ರೀಮತಿಯರೂ ಅನ್ಯೋನ್ಯರಾಗಿ ಬಿಡಲು ತಡವೇ ಆಗಲಿಲ್ಲ.

ಗಂಗಯ್ಯನಂತೆ ಸರಳ ವಿನೋದಿಯೊಬ್ಬನ ಪರಿಚಯವೂ ಆಯಿತು. ಗಂಗಯ್ಯನವರ ಸಂಪರ್ಕದಿಂದ ಅವನಾರೆಂದರೆ ಬಡಿಗರ ಗಂಗ. ಅವನಲ್ಲಿ ಇಸಗೊಂಡು ತಿನ್ನುವ ಸ್ವಭಾವಕ್ಕಿಂತ ಕಸುಗೊಂಡು ತಿನ್ನುವ ಸ್ವಭಾವ ಮಿಗಿಲಾಗಿತ್ತು, ಸಲಿಗೆಯವರ ಸಂಪರ್ಕದಲ್ಲಿ ಮಾತ್ರ.

ಇಂಗಳೇಶ್ವರ ಕುಲಕರ್ಣಿಯವರ ಮಗಳ ಲಗ್ನದ ಕಾಲಕ್ಕೆ ಊರ ಹೊರಗಿನ ಮಠದಲ್ಲಿ ದೊಡ್ಡ ಅಡಿಗೆ ಮಾಡಿಸಿತ್ತು. ದೊಡ್ಡ ಅಡಿಗೆಯೆಂದರೆ ಪ್ರಮಾಣದಲ್ಲಿ ಮಾತ್ರವಲ್ಲ, ಶ್ರೇಷ್ಠತೆಯಲ್ಲಿಯೂ ಅದು ದೊಡ್ಡ ಅಡಿಗೆಯೇ ಆಗಿತ್ತು. ಮುಖ್ಯ ಅಡಿಗೆ ಕರಿಗಡಬು, ಅವುಗಳನ್ನು ತಾಬಾಣದಲ್ಲಿ ತೇಲಿಸಿ ಮುಳುಗಿಸುವಷ್ಟು ಬೆಣ್ಣೆ ಕಾಸಿದ ತುಪ್ಪ ಬಡಿಸುತ್ತಿದ್ದರು. ಮಠ ಅಷ್ಟು ದೂರವಿರುವಾಗಲೇ ತುಪ್ಪಿನ ಕಂಪು ಮೂಗಿಗೆ ತಗಲುತ್ತಿತ್ತು. ನಾಯಿಕುನ್ನಿಗಳಂಥ ಮೂರು ಕರಿಗಡಬುಗಳನ್ನು ಮುಳುಗಿಸುವ ತುಪ್ಪದೊಡನೆ ಆಗ ಮಾಡಿದ ಗಟ್ಟಿಗರೆಂದರೆ ನಾವಿಬ್ಬರೇ ಗಂಗಯ್ಯ ಮತ್ತು ನಾನು.

ಬಡಿಗೇರ ಗಂಗನಿಗೆ ಜನರೆಲ್ಲ ಸಲಿಗೆಯಿಂದ ಮಾನಗೇಡಿ ಅನ್ನುತ್ತಿದ್ದರು. ನಾವು ಅವನಿಗೆ ಛೀಮಾರಿ ಅನ್ನುವಷ್ಟು ಸಲಿಗೆ ಅವನೊಡನೆ ಬೆಳೆಯಿತು. ಅಂದು ಸಾರ್ವಜನಿಕರಲ್ಲಿ ಛೀಮಾರಿ ಗಂಗ ಸಾರಿಬಿಟ್ಟನು-

"ಈ ಊರಿನ ಬೆಳೆದ ಕುಸ್ತಿಗಡಿ ಚಿನಮಲ್ಲನನ್ನು ಸೋಲಿಸುವ ಕುಸ್ತಿ ಗಡಿ ಚಡಚಣದಿಂದ ಬಂದಿದೆ, ನಾಳೆ ಶ್ರಾವಣ ಸೋಮವಾರ ದಿವಸ ನಿಮ್ಮ ಕುಸ್ತಿಯಿರಿಸಿದೆ ಚಿನಮಲ್ಲ ಸಿದ್ಧನಾಗಿರು" ಎಂದು ಕೂಗಿ ಹೇಳಿದನು. ಆ ಚಿನಮಲ್ಲ ದೊಡ್ಡ ಕುಸ್ತಿಯಾಡುವ ಮಲ್ಲನಾಗಿದ್ದರೂ ವಿನಯದಲ್ಲಿ ಬೆಣ್ಣೆಗಿಂತ ಮೃದು. ನಾವೇನು ತಾಳುವೆವು ಅಂಥವರು ಕುಸ್ತಿಗೆ ನಿಂತರೆ ಎಂದು ನುಡಿದು ಕೈ ಮುಗಿದನು.

ನೀರನ ತುಟ್ಟಾಗ್ರತೆಗೆ ಇಂಗಳೇಶ್ವರವು ಹೇಳಿಮಾಡಿಸಿದ ಗ್ರಾಮ. ರೊಟ್ಟಿಯ ಬದಲಾಗಿ ಒಂದು ಚಪಾತಿ ಕೊಡಬಹುದು. ಆದರೆ ಒಂದು ತಂಬಿಗೆ ನೀರು ಕೊಡುವುದು ಬಿಗಿಯೆನಿಸುವದು. ಇಂಗಳೇಶ್ವರದ ಹತ್ತಿರದಲ್ಲಿ ಅಳ್ಳಿಚಿಂಡಿ ಮತ್ತು ಹಟ್ಟಿ ಎಂಬ ಎರಡು ಹಳ್ಳಿಗಳಿವೆ. ಹಳ್ಳಿಯಲ್ಲಿ ಊಟವಿಲ್ಲ, ಅಳ್ಳಿಚಿಂಡಿಯಲ್ಲಿ ಆಟವಿಲ್ಲ, ಇಂಗಳೇಶ್ವರದಲ್ಲಿ ತೋಟವಿಲ್ಲ ಎನ್ನುವ ಲೋಕೋಕ್ತಿ ಬಳಕೆಯಲ್ಲಿದೆ. ನೀರಿನ ದುರ್ಮಿಳತೆಯ ಆ ಸ್ವಾದವನ್ನು ಸವಿಯಲೆಂದು ವಿಜಾಪುರ ಜಿಲ್ಲೆಯ ತಪ್ಪುಗಾರ ಶಿಕ್ಷಕರಿಗೆ ವರ್ಗಮಾಡುವ ಸಣ್ಣ ಸ್ಥಳವೆಂದರೆ ಇಂಗಳೇಶ್ವರ.

ನಾನಲ್ಲಿಗೆ ವರ್ಗವಾಗಿ ಹೋದಾಗ ಶಾಲೆಯಲ್ಲಿ ಮೂವರು ಶಿಕ್ಷಕರು. ಮುಖ್ಯಗುರುಗಳು ಕೊಣ್ಣೂರದವರು, ಶಿಪಾರಸ ತರೀಕವೆಂದು ಇಂಗಳೇಶ್ವರಕ್ಕೆ ಬಂದವರು. ನಾನು ಮತ್ತು ನಿಂಬರಗಿ ಎಂಬುವರು ಶಿಕ್ಷಾತರೀಕವೆಂದು ಆ ಗ್ರಾಮಕ್ಕೆ ವರ್ಗವಾಗಿ ಬಂದವರು. ಶಿಕ್ಷಾತರೀಕ ಶಿಕ್ಷಕರು ಅನುಭವಿಸುವ ತೊಂದರೆಗಳೇ ಶಿಫಾರಸ ತರೀಕ ಶಿಕ್ಷಕರಿಗೂ ಅನ್ವಯಿಸುವದಿಲ್ಲವೇ? ಅಲ್ಲಿಗೆ ವರ್ಗವಾಗಿ ಹೋದ ಶಿಕ್ಷಕರಾರೂ ಆ ಊರಲ್ಲಿ ಮನೆ ಮಾಡಿ ನಿಲ್ಲುತ್ತಿರಲಿಲ್ಲ. ಪಾಂಥಸ್ಥರಂತೆ ಬರುವುದು ಮತ್ತು ಹೋಗುವುದು ಅಥವಾ ಬರುವುದೇ ಇಲ್ಲ, ಹೋಗಿಯೇ ಬಿಡುವರು.

ನಾವು ಮೂವರು ಮಾತ್ರ ಇಂಗಳೇಶ್ವರದಲ್ಲಿ ಮನೆ ಮಾಡಲೇ ಬೇಕಾಯಿತು. ಶಿಫಾರಸತರೀಕ ಶಿಕ್ಷಕರು ಇನ್ನಿಷ್ಟು ಮೇಲ್ತರದ ಸ್ಥಾನವನ್ನು ಗಳಿಸುವುದಕ್ಕೆ ಚೆನ್ನಾಗಿ ದುಡಿಯಬೇಕಾಗುತ್ತದೆ. ಅದಕ್ಕಾಗಿ ಅಲ್ಲಿ ಮನೆ ಮಾಡಿಕೊಂಡು ನಿಲ್ಲುವುದು ಅನಿವಾರ್ಯವೆನಿಸುತ್ತದೆ. ನನಗೆ ಸ್ವಗ್ರಾಮದಿಂದ ಅಗಲುವುದು ಅತ್ಯಗತ್ಯವಾಗಿತ್ತು. ಹೆಂಡತಿಯ ಜೊತೆಗೆ ಪರಸ್ಥಳಕ್ಕೆ ಹೋಗಿ, ಸಂಸಾರಿಕನಾಗಿ ಬಾಳಬೇಕಾಗಿತ್ತು. ಮೂರನೇ ಶಿಕ್ಷಕರೆಂದರೆ ನಿಂಬರಗಿ ಎಂಬವರು. ಅವರು ಇಸ್ಪೇಟಿನೊಳಗಿನ ಎಕ್ಕಾ ಇದ್ದ ಹಾಗೆ ಎಲ್ಲಿ ಹೋದರೂ ಒಬ್ಬರೇ ದೇವರಂತೆ ಒಬ್ಬರೇ ಆ ಕಾರಣದಿಂದ ಶಾಲೆಯ ಕೆಲಸಗಳು ಸುಗಮಗೊಂಡವು. ಸಕ್ರಮಗೊಂಡವು ಒಂದೇ ಹುರಿಯದಾರಗಳನ್ನು ಹೊಸೆದರೆ ಸಹಜವಾಗಿ ಹುರಿಕಟ್ಟಿನ ಹಗ್ಗವಾಗುವುದಲ್ಲವೇ!

ನನ್ನ ಪಾಲಿಗೆ ಬಂದ ವರ್ಗವೆಂದರೆ ೫ನೇ ತರಗತಿ. ಆ ವಿದ್ಯಾರ್ಥಿಗಳಿಗೆ ಪಠ್ಯದೊಳಗಿನ ಪಾಠಪದ್ಯಗಳಲ್ಲದೆ ಜನರಲ್ ಕವಿತೆ ಹಾಡುಗಳನ್ನು ವಿಫುಲವಾಗಿ ಹೇಳಿಕೊಟ್ಟೆನು. ನನ್ನ ಬಳಿಯಲ್ಲಿ ಪಿಯಾನ ಕೈಪೆಟ್ಟಿಗೆಯಿತ್ತು. ಮಕ್ಕಳು ಹಾಡುವಂತೆ ಬಾರಿಸುವುದಕ್ಕೂ ರೂಢಿ ಮಾಡಿಕೊಂಡೆನು. ಅದರ ಪರಿಣಾಮದಿಂದ ಸಾರ್ವಜನಿಕರು ಶಿಕ್ಷಕರಾದ ನಮ್ಮನ್ನು ವಿಫುಲವಾಗಿ ಮೆಚ್ಚಿಕೊಂಡರು.

ಬೆಳಗಿನ ೬ ಗಂಟೆಗೆದ್ದು ತಂಬಿಗೆ ತೆಗೆದುಕೊಂಡು ಹೋಗಿ, ಕೆರೆಯ ಹೊಲದಲ್ಲಿ ವ್ಯಾಯಾಮ, ಜಳಕ ತೀರಿಸಿಕೊಂಡು ಬರುವುದಕ್ಕೆ ಹತ್ತೆಂಟು ವಿದ್ಯಾರ್ಥಿಗಳು ಸಿದ್ಧರಾದರು. ಹಳ್ಳಿಗರ ಪ್ರೀತಿಯೆಂದರೆ ಒಣಮಾಯೆ ಅಷ್ಟೇ ಅಲ್ಲ, ಮೊಲೆಯಲ್ಲಿ ಹಾಲೂ ಇರುವದು. ಅವರು ಭೂಮಿತಾಯಿಯ ಕೃಪೆಯಿಂದ ಪ್ರಾಪ್ತವಾದ ಯಾವ ವಸ್ತುವನ್ನೂ ಮಾಸ್ತರರನ್ನು ಬಿಟ್ಟು ತಿನ್ನಬಾರದೆಂದು ಮಕ್ಕಳಿಗೆ ಬೋಧಿಸುತ್ತಿದ್ದರು.

ಮುಖ್ಯಶಿಕ್ಷಕರ ಮನೆಯವರು. ಹೊಲಿಗೆಯ ಕಾಯಕದಲ್ಲಿ ಬಲ್ಲಿದರು. ಹಲವಾರು ಹೆಣ್ಣು ಮಕ್ಕಳು ಅವರ ಮನೆಗೆ ಹೋಗಿ, ಹೊಲಿಗೆಯ ಕೆಲಸವನ್ನು ಪೂರಯಿಸಿಕೊಂಡು ಹೋಗುತ್ತಿದ್ದರು. ಪ್ರತಿಫಲದ ಕಡ್ಡಾಯವನ್ನೇ ಇಟ್ಟುಕೊಂಡಿರಲಿಲ್ಲ. ಆದ್ದರಿಂದ ಪ್ರತಿಫಲವು ವಾಡಿಕೆಗಿಂತ ಮಿಗಿಲಾಗಿ

ಬರುತ್ತಿತ್ತು. ಅದರಿಂದ ಉಭಯರಲ್ಲಿಯೂ ಆತ್ಮೀಯತೆಯು ಬೆಳೆಯಲು ಸಾಧ್ಯವಾಯಿತು.

ನಮ್ಮ ಮನೆ ಕುಂಬಾರ ಓಣಿಯ ಹತ್ತಿರದಲ್ಲಿತ್ತು. ಕುಂಬಾರ ಕಲ್ಲಪ್ಪನೆಂಬವರ ಮನೆಯವರಿಗೆ ನಿಂಬರಗಿ ತವರೂರಾಗಿತ್ತು. ನಿಂಬರಗಿ ಚಡಚಣದ ನೆರೆಹಳ್ಳಿ. ಆಕೆಯ ಮಗಳಾದ ಸಿದ್ದವ್ವನನ್ನು ಚಡಚಣಕ್ಕೆ ಹತ್ತಿರದಲ್ಲಿರುವ ಹಿರೆಲೋಣಿಗೆ ಕೊಟ್ಟಿತ್ತು. ಸಿದ್ದವ್ವ ಕಲಿತ ಹುಡಿಗೆ, ನನ್ನ ಹೆಂಡತಿಯೊಡನೆ ಸ್ನೇಹವುಂಟಾಗಲಿಕ್ಕೆ ತಡವಾಗಲಿಲ್ಲ, ತಡೆಯೂ ಆಗಲಿಲ್ಲ.

ನಾನು ಶಾಲೆಗೆ ಹೋದ ಹೊತ್ತಿನಲ್ಲಿ ಸಿದ್ದವ್ವ ನಮ್ಮ ಮನೆಗೆ ಬಂದು ನನ್ನ ಸಂಗ್ರಹದೊಳಗಿನ ಅನೇಕ ಪುಸ್ತಕಗಳನ್ನು ಓದಿ ಮುಗಿಸಿದ್ದಳು. ನನ್ನ ಹೆಂಡತಿಯನ್ನು ಸಾಕ್ಷರಿಯನ್ನಾಗಿ ಮಾತ್ರ ಮಾಡಿಬಿಡದೆ, ಸುಶಿಕ್ಷಿತಳನ್ನಾಗಿಯೂ ಮಾಡುವ ನನ್ನ ಹಂಬಲಕ್ಕೆ ಅವಳ ಗೆಳೆತನವು ನೀರೆರೆಯಿತು.

ಸಿದ್ದವ್ವನ ಗೆಳೆತನ ಮಾಸ್ತರರ ಹೆಂಡತಿ ಸೂಲಬವ್ವನೊಡನೆ ಎನ್ನುವುದು ಸುಳ್ಳು. ಮಾಸ್ತರರೊಡನೆ ಸ್ನೇಹ ಬೆಳೆಸುವ ದಾರಿ ಹಿಡಿದಿದ್ದಾಳೆ ಸಿದ್ದವ್ವ ಎಂದು ಆಡಿಕೊಂಡವರೂ ಉಂಟು. ಅಂಥ ಬುದ್ಧಿಯಿದೆಯೆಂದೇ ಆಕೆಯ ಗಂಡನು ಕರೆದೊಯ್ದಿಲ್ಲ, ಅವ್ವನಂತೆ ಮಗಳು, ಎಂದು ಮುಂತಾಗಿ ಸುಳ್ಳಿನ ಬಳ್ಳಿಯೂ ಹಬ್ಬಿಬಿಟ್ಟಿತು. ಆದರೆ ಸಿದ್ದವ್ವನ ಕಕ್ಕನಮಗ ಶರಣಪ್ಪ ನನ್ನ ಬಗೆಗೆ ಪೂಜ್ಯಭಾವ ಇರಿಸಿಕೊಂಡಿದ್ದರಿಂದ ಹೆಚ್ಚಿನ ತೊಂದರೆಯುಂಟಾಗುವುದಕ್ಕೆ ದಾರಿಯೇ ಉಳಿಯಲಿಲ್ಲ.

ಇಂಗಳೇಶ್ವರದಲ್ಲಿ ವಾಸ್ತವ್ಯ ಮಾಡಿ ಒಂದೆರಡು ವಾರಗಳಾದವೋ ಇಲ್ಲವೋ ಅನಿರೀಕ್ಷಿತವಾಗಿ ನನ್ನ ಭಾವಮೈದುನ ಅಂದರೆ ಹೆಂಡತಿಯ ಅಣ್ಣ ಶಿವಯೋಗಿ ಬಂದು ನಮ್ಮ ಕ್ಷೇಮ ಸಮಾಚಾರ ತಿಳಕೊಂಡು ಒಂದು ದಿನ ನಿಂತು ಮರುದಿನ ತೆರಳಿದನು.

ಹೆಂಡತಿಯ ಬಳಗದವರೊಬ್ಬರು ಬಂದು ಹೋದ ಬಳಿಕ, ತುಸು ದಿನಗಳಲ್ಲಿಯೇ ನನ್ನ ಬಳಗದವರಲ್ಲಿ ಒಬ್ಬರಲ್ಲ ಇಬ್ಬರು ಬಂದು ಹೋದರು. ಅವರು ಬಂಮದು ಒಂದು ಆಶ್ಚರ್ಯವಾದರೆ ಹೋದುದು ಇನ್ನೊಂದು

ಆಶ್ಚರ್ಯವೆನ್ನಬೇಕು. ಶನಿವಾರ ಮಧ್ಯಾಹ್ನದ ಸೂಟಿಯಲ್ಲಿ ನಾನು ನೂಲುತ್ತ ಕುಳಿತಾಗ ಒಬ್ಬ ವಿದ್ಯಾರ್ಥಿ ಬಂದು ಹೇಳಿದನು-

"ಯಾರೋ ಚಡಚಣದವರಂತೆ, ಹಿಂದಿನ ಮನೆಯ ಮುಂದೆ ನಿಂತು ಇದು ಲಿಂಗಾಯಿತರ ಮನೆಯೇನ್ರೇ ಅವ್ವಾ? ಕೂಸು ಹಸಿದಿದೆ. ಒಂದು ತುತ್ತು ರೊಟ್ಟಿ ಕೊಡಿರಿ ನಮ್ಮವ್ವ!" ಎಂದಳು. "ಯಾವೂರವ್ವಾ ನಿಮ್ಮದು" ಎಂದು ಮನೆಯವರು ಕೇಳಲು "ಚಡಚಣದವರು ನಾವೆಂದು" ಮರುನುಡಿದಳು. ಚಡಚಣದ ಒಬ್ಬ ಮಾಸ್ತರರು ಇದ್ದಾರಲ್ಲ ಅವರ ಪರಿಚಯ ನಿಮಗಿರ ಬೇಕಲ್ಲವೇ? ಎನ್ನಲು, ಅಹುದು ಅವರು ನಮ್ಮೂರವರೇ, ಅವರ ಮನೆ ತೋರಿಸಿರಿ ಎಂದು ನನ್ನನ್ನು ಕರೆತಂದರು, ಹೊರಕಟ್ಟೆಯ ಮೇಲೆ ಕುಳಿತು ಕೂಸಿಗೆ ಉಣಿಸುತ್ತಿದ್ದಾರೆ."

ನಾನು ಅವಸರದಿಂದ ತಲೆವಾಗಿಲ ಮುಂದೆ ನಿಂತು ಎಡಕ್ಕೆ ನೋಡಿದರೆ ಕಟ್ಟೆಯ ಮೇಲೆ ಕುಳಿತವರು ನಮ್ಮ ಅತ್ತಿಗೆ ಕಿರಿಯ ಮಗಳಾದ ಭಾಗೀರಥಿಯನ್ನು ಉಣ್ಣಿಸುತ್ತಿದ್ದಾಳೆ. ನಾನು ಹೋಗಿ ಒಳಗೆ ನಡೆಯವ್ವಾ! ಬಾ! ತಂಗೀ ಭಾಗೀರಥಿ! ಒಳಗೆ ಬಾ ಎಂದು ಎತ್ತಿಕೊಳ್ಳಲು ಹೋದೆ, ಬರಲಿಲ್ಲ. ಆದರೆ ಮಗುವನ್ನು ಎತ್ತಿಕೊಂಡ ತಾಯಿ ತಲೆಬಾಗಿಲಲ್ಲಿ ಕಾಲಿಟ್ಟು ಅಲ್ಲಿಗೇ ಕಲ್ಲಮೇಲೆ ಕುಳಿತಂತೆ ಮಾಡಿ ಅಡ್ಡಾದಳು.

ನನ್ನೊಡನೆ ನನ್ನ ಹೆಂಡತಿಯೂ ಆಕೆಯನ್ನೂ ಕಂಡು ಅಕ್ಕಾ ಒಳಗೆ ಬನ್ನಿರಿ ಭಾಗೀರಥೀ, ಬಾ ತಂಗೀ ನನ್ನ ಬಳಿಗೆ ಎಂದು ಎತ್ತಿಕೊಳ್ಳುವ ಪ್ರಯತ್ನಮಾಡಿದಳು, ಆದರೆ ಯಶಸ್ವಿಯಾಗಲಿಲ್ಲ.

ಅತ್ತಿಗೆ ಎದ್ದು ಕುಳಿತು - "ನಡಿ ಭಾಗೀ, ಊರಿಗೆ ಹೋಗೋಣ ಮಾರಿನೋಡುವ ಹಾಗೆ ಆಗಿತ್ತು ಬಂದು ಬಿಟ್ಟೆ. ಇಲ್ಲಿ ಮಾರಿ ನೋಡಿದೆ. ಆಯ್ತು ಹೊರಟು ಬಿಡೋಣ" ಎಂದು ಹೊರಟು ನಿಂತಳು.

ನೆರೆಹೊರೆಯ ಹಿರಿಯ ಹೆಣ್ಣುಮಕ್ಕಳು ನೆರೆದರು. ನಮ್ಮಿಬ್ಬರ ಪರಿಚಯ ಕೇಳಿ ತಿಳಕೊಂಡರು. "ಮೈದುನ ನೆಗೆಣ್ಣೆ ಕರೆಯುತ್ತಾರೆ. ಹೋಗು ತಾಯಿ ಹಸಿವೆಯಿದ್ದಷ್ಟು ಊಟ ಮಾಡು, ಮಗುವಿಗೆ ಉಣ್ಣಿಸು" ಎಂದು ನುಡಿದು, ಅವರು ತಂತಮ್ಮ ಮನೆಗೆ ತೆರಳಿದರು.

ನಾನು ಅತ್ತಿಗೆಯವರನ್ನು ಒಳಗೆ ಕರೆತಂದು, ಕಣ್ಣೀರು ಕರೆದು "ನನ್ನ ಅವಮಾನ ಮಾಡುವುದು ಸರಿಯಲ್ಲ. ಜೀವ ನೆನಿಸಿತೆಂದು ಬಂದಿ, ಒಳ್ಳೆಯದಾಯಿತು, ಇಂದು ಒಂದು ದಿನ ನಿಲ್ಲು, ನಾಳೆ ಹೋಗುವಿಯಂತೆ" ಎಂದು ಇದ್ದ ಪುಣ್ಯವೆನ್ನಲ್ಲ ಖರ್ಚುಮಾಡಿ ಪ್ರಾರ್ಥಿಸಿದೆ. ಅದು ಸಫಲವಾದಂತೆ ಕಾಣಿಸಿತು.

ರಾತ್ರಿ ಊಟ, ನಿದ್ರೆ ಮುಗಿದು ಬೆಳಗಾಗುವುದಕ್ಕೆ ಜಳಕ ಮಾಡಿಸಿ, ಅನ್ನ ಮಾಡಿ ಕೂಸಿಗೆ, ತಾಯಿಗೆ ಉಣಬಡಿಸಲಾಯಿತು. ಹಳ್ಳಿ ನಿಂಗನೆಂಬ ವಿದ್ಯಾರ್ಥಿಯನ್ನು ಕರೆಯಿಸಿ ನನ್ನ ತೊಡಕನ್ನು ಬಿಡಿಸಲು ಅವನಿಗೆ ಕೇಳಿಕೊಂಡೆ. ಅವರು ಮನೆಯಲ್ಲಿ ಈಲು ಮಾಡಿದ ಒಂದು ಮುದಿಯೆತ್ತು ಇತ್ತು. ಅದಕ್ಕೆ ಮುಟ್ಟು ಹಾಕಿ ಬಾಗೇವಾಡಿಯವರೆಗೆ ಅವ್ವಾ ಅವರನ್ನು ಕಳಸಿಬರಲು ಸಿದ್ಧನಾದನು.

ಅತ್ತಿಗೆಯ ಕೈಯಲ್ಲಿ ಬಸ್ಸಿನ ಚಾರ್ಜು, ಕೂಸಿನ ಕೈಯಲ್ಲಿ ೨ ರೂ. ಕೊಟ್ಟು ಕಳಿಸಿದೆ. ಬಾಗೇವಾಡಿಯಿಂದ ಮರಳಿಬಂದ ಬಳಿಕ ನಿಂಗನು, ನಮ್ಮ ಅತ್ತಿಗೆಯವರನ್ನು ವಿಜಾಪುರ ಬಸ್ಸಿನಲ್ಲಿ ಕುಳ್ಳಿರಿಸಿ ಬಂದೆನೆಂದು ಹೇಳಿದನು.

ಕರುಣಾಮಜನಕವಾದ ಒಂದು ಸತ್ಯಸಂಗತಿಯನ್ನು ಇಲ್ಲಿ ಹೇಳಬೇಕು, ಏನಂದರೆ ಹೆಂಡತಿಗೆ ೧೬ ವರುಷ ವಯಸ್ಸಾದರೂ ಋತುಮತಿ ಆಗಲಿಲ್ಲ ನಾನು ನಿರ್ವಾಹವಿಲ್ಲದೆ ಋತುಮತಿಯಾಗಿ ೨ ವರ್ಷಗಳಾದವೆಂದು ಸುಳ್ಳು ಹೇಳಿ, ನನ್ನೊಡನೆ ಇಂಗಳೇಶ್ವರಕ್ಕೆ ಕರೆತಂದೆ. ಆಕೆಯ ಅಣ್ಣ, ನನ್ನ ಅತ್ತಿಗೆ ಬಂದು ಮಾತಾಡಿಸಿ ಹೋದ ೨-೩ ದಿನಗಳಲ್ಲಿ ಮೈನರೆದದ್ದು ತಿಳಿಯಿತು. ನಾವು ಅದಕ್ಕೆ ತಿಂಗಳ ಮುಟ್ಟು ಎಂದು ಹೆಸರಿನಿಂದ ೪ ದಿನ ಒತ್ತಟ್ಟಿಗಿಟ್ಟು ಸಣ್ಣಿ ಎಂಬ ವಿದ್ಯಾರ್ಥಿನಿಯಿಂದ ಮನೆಯ ಕೆಲಸ, ಬಟ್ಟೆ ಒಗೆಯೋಣ ಮೊದಲಾದ ಕೆಲಸಗಳನ್ನು ಮಾಡಿಸಿಕೊಂಡೆವು, ಕೊನೆಯ ದಿನ ಹೆಂಡತಿ ಎರಕೊಂಡು ಮನೆಯೊಳಗೆ ಬಂದು ತನ್ನ ಕೆಲಸಗಳನ್ನು ನಿರ್ವಹಿಸತೊಡಗಿದಳು.

ಈ ಸಂಗತಿ ನಮ್ಮಿಬ್ಬರ ಹೊರತು ಇನ್ನಾರಿಗೂ ತಿಳಿಯದು. ಪತ್ರ ಬರೆದು ಚಡಚಣಕ್ಕೂ ತಿಳಿಸಲಿಲ್ಲ. ಸೂಟಿಗೆ ಹೋದಾಗ ಹೆಂಡತಿಯ

ತವರು ಮನೆಗೆ ಗೊತ್ತಾದಾಗ ಏನು ಮಾಡುವರೋ ಮಾಡಲಿ ಎಂದು ವಾಡಿಕೆಯಂತೆ ದಿನದ ಕೆಲಸಗಳಲ್ಲಿ ತೊಡಗಿದೆವು.

ಹೆಂಡತಿಗೆ ಅಕ್ಷರ ಜ್ಞಾನವನ್ನು ದೃಢೀಕರಿಸಲು ಸಹಕರಿಸಿ, ದಿ. ಹರ್ಡೇಕರರ ಹಾಗೂ ದಿ. ಬೇಂದ್ರೆ ಅವರ ಪುಸ್ತಕಗಳನ್ನು ಓದಿ ಹೇಳಿ, ಬಳಿಕ ತಾನೇ ಓದಿಕೊಂಡು ಆನಂದಿಸುವಂತೆ ಪ್ರೋತ್ಸಾಹಿಸುತ್ತಿದ್ದೆ. ನಾನು ನನ್ನ ಶಾಲೆಯ ಕೆಲಸ ಮುಗಿಸಿ ಕೆಲಹೊತ್ತು ನೂಲುವುದು ಮತ್ತು ಪಾಶ್ಚಾತ್ಯ ದೇಶಗಳ ಕ್ರಾಂತಿಯ ಐತಿಹಾಸವನ್ನೋದಿ ಅದರೊಳಗಿನ ಪ್ರಸಂಗಗಳನ್ನು ಕಥಾರೂಪದಲ್ಲಿ ಬರೆದಿಡುತ್ತಿದ್ದೆನು. ಫ್ರಾನ್ಸ್, ಆಯರ್ಲಂಡ್, ರಶಿಯಾ, ಜರ್ಮನಿ, ಜಪಾನ ಮೊದಲಾದ ದೇಶಗಳ ಕ್ರಾಂತಿಯ ಇತಿಹಾಸ ಗ್ರಂಥಗಳನ್ನು ತರಿಸಿಕೊಂಡು ವ್ಯಾಸಂಗ ಮಾಡಿದ ಫಲವಾಗಿ, ದೇಶ ಭಕ್ತಿಯ ಕಥೆಗಳು ನೂರರಷ್ಟು ಸಿದ್ಧವಾದವು.

ಶಾಲೆಯ ಕೆಲಸವೋ ಚೊಕ್ಕ ಚೆನ್ನ. ಪ್ರತಿಯೊಬ್ಬರು ಅಹುದಹುದು ಎನ್ನುವಂತೆ ಮೂವರು ಶಿಕ್ಷಕರು ದುಡಿದು, ಶಾಲೆಯ ಒಳಗೋಡೆಗಳನ್ನು ಚಿತ್ರ, ಗಾದೆ, ನಕಾಶೆಗಳಿಂದ ಸಿಂಗರಿಸಿದೆವು. ಪರೀಕ್ಷಾಧಿಕಾರಿಗಳು ಬಂದು, ತಮ್ಮ ಆನಂದವನ್ನು ಸಾರ್ವಜನಿಕರ ಮುಂದೆ ಹೇಳಿದರಲ್ಲದೆ ಭೆಟ್ಟಿಯ ಹೊತ್ತಿಗೆಯಲ್ಲಿ ಅಸ್ಖಲಿತವಾಗಿ ಬರೆದೂ ಬಿಟ್ಟರು. ಒಂದು ಒಂದೂವರಿ ವರ್ಷಗಳಲ್ಲಿ ಶಾಲೆ ಅದೆಷ್ಟು ಸುಧಾರಿಸಿದೆ ಎಂಬುದನ್ನು ಅಲ್ಲಿಯ ದಿ. ಮಡಿವಾಳಪ್ಪ ಗೌಡರು ಹೊಗಳಿ, ಶಿಕ್ಷಣಾಧಿಕಾರಿಗಳನ್ನು ಬೆರಗುಗೊಳಿಸಿದರು. ಜಿಲ್ಲಾ ಸ್ಕೂಲ್ ಬೋರ್ಡಿನವರಿಗೆ, ತಮ್ಮೂರಿಗೆ ಬಂದು ಪ್ರತ್ಯಕ್ಷವಾಗಿ ಕಂಡುಕೊಳ್ಳಿರೆಂದು ಆವ್ಹಾನಿಸಿದರು.

ಸ್ಕೂಲ್ ಬೋರ್ಡ ಚೇರಮನ್‌ರು ಖಾಸಗೀ ಕೆಲಸಕ್ಕಾಗಿ ದಿಂಡವಾರಕ್ಕೆ ಹೋಗಿ ಮರಳಿ ಬಾಗೇವಾಡಿಗೆ ಹೋಗುವಾಗ ನಮ್ಮ ಶಾಲೆಯನ್ನು ಸಂದರ್ಶಿಸಿ ತಮ್ಮ ಸಂತೋಷವನ್ನು ಸಾರ್ವಜನಿಕರಿಗೆ ಮನಗಾಣಿಸಿ ಕೊಟ್ಟರು. ಆ ಕಾಲಕ್ಕೆ ನಾನು ಅವರನ್ನು ಕೇಳಿಕೊಂಡೆ-

"ಸಾಹೇಬರೇ, ಗಾಂಧಿ-ಐರ್ವಿನ್ ಒಪ್ಪಂದದ ಪ್ರಕಾರ ತಪ್ಪಿತಸ್ಥರೆಂದು

ಕಾರಾಗ್ರಹಕ್ಕೀಡು ಮಾಡಿದವರನ್ನು ಬಿಡುತ್ತಿದ್ದಾರೆ. ಶಿಕ್ಷೆಗೀಡಾದವರು ನಿರ್ದೋಷಿಯೆನಿಸುತ್ತಿದ್ದಾರೆ, ಶಿಕ್ಷಾಂತರೀಕ ವರ್ಗಕ್ಕೆ ಈಡಾದ ನನ್ನಂಥವರನ್ನು ಮರಳಿ ಸ್ವಗ್ರಾಮಕ್ಕೆ ಕಳಿಸಬೇಕಲ್ಲವೇ?"

"ಕಳಿಸಲೇಬೇಕು, ಅವಶ್ಯವಾಗಿ ಕಳಿಸಬೇಕು, ನಿಮಗೆ ಯಾವ ಊರು ಬೇಕು, ಹೇಳಿರಿ?" ಎಂದು ಕೇಳಿದರು.

"ಹಲಸಂಗಿಯ ಅಸಿಸ್ಟಂಟನನ್ನಾಗಿ ವರ್ಗಮಾಡಿದರೆ ಒಳ್ಳೆಯದಾಗುತ್ತದೆ" ಎಂದು ಅವರ ಮನಕ್ಕೆ ಮುಟ್ಟುವಂತೆ ಹೇಳಿಕೊಂಡೆ.

ಸಾಹೇಬರು ನಕ್ಕರು, ಬಳಿಕ ನುಡಿದರು -

"ಹಲಸಂಗಿಗೆ ಅಸಿಸ್ಟಂಟನ್ನಾರಾಗಿ ಹಾಕಬೇಕೆಂದು ಕೇಳುತ್ತೀರಿ ಆದರೆ ಹೆಡ್‌ಮಾಸ್ತರ ಜಾಗಕ್ಕೆ ಹಾಕಿದರೆ ಒಪ್ಪುವುದಿಲ್ಲವೇ?"

"ತಮ್ಮಿಚ್ಛೆಯಿದ್ದರೆ ಒಪ್ಪಲೇಬೇಕು, ಒಪ್ಪುತ್ತೇನೆ"

"ಮುಂದಿನ ವಾರ ಆರ್ಡರ್ ಕಳಿಸುವೆವು, ದಾರಿ ಕಾಯಿರಿ" ಎನ್ನುತ್ತ ಚೇರಮನ್ನರು ಶಾಲೆಯಿಂದ ಹೊರಬಿದ್ದರು.

ಆ ಸಂಗತಿ ಘಟಿಸಿದ ಬಳಿಕ ಒಂದೆರಡು ದಿನಗಳಲ್ಲಿ ನಾವು ಬಹು ಶೋಕಾಕುಲವಾದ ಪರಿಸ್ಥಿತಿಗೆ ಈಡಾದೆವು. ಹೆಂಡತಿಯ ಅಣ್ಣ ಶಿವ ಯೋಗಪ್ಪನು ಇಂಗಳೇಶ್ವರಕ್ಕೆ ಬಂದು ತಂಗಿಯನ್ನು ಮಾತನಾಡಿಸಿ ಹೋದನೆಂಬ ಸಂಗತಿ ಇನ್ನೂ ಮರೆತಿರಲಿಲ್ಲ. ಅಷ್ಟರಲ್ಲಿ ಒಬ್ಬ ಯುವಕ ಚಡಚಣದಿಂದ ನಮ್ಮ ಕಡೆಗೆ ಬಂದನು.

ಕಣ್ಣೀರು ಸುರಿಸುತ್ತ ಇದ್ದಕ್ಕಿದ್ದ ಹಾಗೆ ಶಿವಯೋಗಪ್ಪ ಎರಡೇ ದಿನ ಜ್ವರ ಬಂದ ಕಾರಣದಿಂದ ತೀರಿಕೊಂಡನು. ಆ ಸಂಗತಿಯನ್ನು ನಿಮಗೆ ತಿಳಿಸಿ ಕರೆದೊಯ್ಯಲು ಬಂದಿದ್ದೇನೆ ಎಂದು ವಿವರಿಸಿದನು.

ಆಮೇಲೆ ತಡಮಾಡದೆ ಒಂದು ಗಾಡಿಯನ್ನು ಗೊತ್ತುಮಾಡಿ ಬಾಗೇವಾಡಿಗೆ ಹೋಗಿ, ಅಲ್ಲಿಂದ ವಿಜಾಪುರಕ್ಕೆ ಹೋಗುವ ಬಸ್ಸು ಹಿಡಿದೆವು. ಅಳುತ್ತ ಕರೆಯುತ್ತ, ಎದೆಎದೆ ಮುಖಮುಖ ಬಡಕೊಂಡು ರೋದಿಸುವ ಹುಡಿಗೆಯನ್ನು ನೋಡಿದವರೂ ಅಳುತ್ತಿದ್ದರು. ಅಂಥ ಪ್ರಸಂಗದಲ್ಲಿ ಬಸ್ಸಿನಲ್ಲಿ ಕುಳಿತ ಒಬ್ಬಿಬ್ಬ ದೊಡ್ಡ ಮನುಷ್ಯರು ಹುಡಿಗೆಯನ್ನು ಬೆದರಿಸತೊಡಗಿದರು. ಇಷ್ಟಕ್ಕೂ ಮೀರಿ ಅತ್ತರೆ ಬಸ್ಸಿನಿಂದ ಕೆಳಗಿಳಿಸಿ ಬಿಡಬೇಕಾಗುವುದು ಎಂದು ನಿಷ್ಟುರವಾಗಿ ಹೇಳಿದರು.

ಸತ್ತವರಿಗಾಗಿ ಅಳಬೇಕೋ, ನಿಷ್ಠುರ ನುಡಿಗಳನ್ನು ಕೇಳಿ ಕುತ್ತಿಗೆಯೊತ್ತಿ ಕೊಳ್ಳಬೇಕೋ ತಿಳಿಯದಾಯಿತು. ಹಾಹಾರವವು ಉಚ್ಚಳಿಸತೊಡಗಿತು. ನಾನು ಹತ್ತಿರದಲ್ಲಿ ಕುಳಿತು, ಆಕೆಯನ್ನು ಸಾಂತ್ವನಪಡಿಸತೊಡಗಿದೆ. ಕೃತ್ರಿಮ ಶೋಕವಾಗಿದ್ದರೆ ಸಾಂತ್ವನದಿಂದ ತಮ್ಮಣಿಗೊಳ್ಳುತ್ತಿತ್ತೋ ಏನೋ.

ತೀರ ಸಂಜೆಯಾಗುವ ಹೊತ್ತಿಗೆ ಬಸ್ಸು ಚಡಚಣ ತಲುಪಿತು. ಅಲ್ಲಿಂದ ಮನೆಗೆ ಹೋಗಲು ಅರ್ಧ ತಾಸು ಕಳೆಯಿತು. ಮನೆಯಂಗಳದಲ್ಲಿ ಕಾಲಿರಿಸುವ ಹೊತ್ತಿಗೆ, ಶಿವಯೋಗಪ್ಪನ ಹೆಣದ ಸುತ್ತ ಹೆಣ್ಣು ಗಂಡೆನ್ನದೆ ಆಪ್ತೇಷ್ಟರ ಜಂಗುಳಿಯೇ ಕೂಡಿತ್ತು "ಸೊಲಬವ್ವ ಬಂದಳು" ಎಂಬುದು ಎಲ್ಲರಿಗೂ ತಿಳಿಯಿತು.

ಎದೆ ಕರಗಿಸುವ ಆ ಸಂದರ್ಭವನ್ನು ಕಂಡು, ನನ್ನ ಕಣ್ಣೀರು ಉಕ್ಕಿ ಬಂದವು. ಕಣ್ಣೊರಿಸಿಕೊಂಡು ಮನಸ್ಸಿಗೆ ಸಮಾಧಾನ ತಂದುಕೊಳ್ಳುತ್ತಿದ್ದೆ.

ಹೆಣದವರು ಹೆಣಕ್ಕೆ ಅಳುತ್ತಿದ್ದರೆ, ಗೊರವನು ತನ್ನ ದುಗ್ಗಾಣೆಗಾಗಿ ಬಡಕೊಳ್ಳುತ್ತಿದ್ದನಂತೆ. ಕೇಶೆಟ್ಟಿಯವರ ಮನೆಗೆ ಇನ್ನು ಬಾಧ್ಯಸ್ಥರಾರು. ಮಕ್ಕಳಿಬ್ಬರೂ ಚಿಕ್ಕವರು, ಪಾಲನ ಕರ್ತರಾರು? ಸತ್ತವನ ಹೆಂಡತಿಯೋ ಶಿವಯೋಗಿ ಹೆಂಡತಿಯ ತವರಿನವರೂ ಅದೇ ಊರಲ್ಲಿದ್ದರು ಅವರ ದೃಷ್ಟಿಯು ಈ ಶೋಕಸಾಗರವನ್ನೆಲ್ಲ ನಿಮಿಷದಲ್ಲಿ ಈಸಿ ಆಚೆಯದಡ ಸೇರಿತು.

ಶಿವಯೋಗಿಗೆ ಇಬ್ಬರು ಗಂಡಸು ಮಕ್ಕಳಿದ್ದರು. ಅವರಿನ್ನೂ ತೀರ ಚಿಕ್ಕವರು. ವಾರಸದಾರರೆಂದು ಯಾರ ಹೆಸರು ಹೇಳಬೇಕು ಎನ್ನುವುದು ಒಬ್ಬರ ವಿಚಾರವಾದರೂ ಅಜ್ಞಾನ ಪಾಲಕರ್ತರೆಂದು ಶಿವಯೋಗಿಯ ತಾಯಿಯ ಹೆಸರು ನೋಂದಾಯಿಸಬೇಕು ಎಂದು ಇನ್ನೊಂದು ಗುಂಪಿನವರು ತೀರ್ಮಾನಿಸಿದರು.

ವಾರಸದಾರರೆಂದು ಶಿವಯೋಗಿಯ ಹೆಂಡತಿಯ ಹೆಸರನ್ನೇ ನೋಂದಾಯಿಸಬೇಕೆನ್ನುವವರ ಗುಂಪಿನಲ್ಲಿ ನಮ್ಮ ಅತ್ತಿಗೆಯವರು ಅಗ್ರಗಣ್ಯರಾಗಿದ್ದರು. ಅದು ನಾಳಿನ ಕೆಲಸ. ಈಗ ಸದ್ಯಕ್ಕೆ ಆಗಬೇಕಾದದ್ದು ಅಂತ್ಯವಿಧಿ ಎಂದು ಅತ್ತ ಗಮನಿಸಿದರು ಕೆಲವರು.

೨೮. ಹಲಸಂಗಿ ಶಾಲೆಯ ಮುಖ್ಯಾಧ್ಯಾಪಕ

ಕರ್ನಾಟಕ ರಾಜ್ಯ ಗುಣಮಟ್ಟದ ಗೆಳೆಯರ ಗುಂಪು ಕಟ್ಟಿದ ಹಲಸಂಗಿಯಲ್ಲಿ ಶಾಲೆಯ ಕಟ್ಟಡವೇ ಇರಲಿಲ್ಲ. ಅಗಸೆಯ ಬಳಿಗಿರುವ ಮಹಾದೇವನ ಗುಡಿ, ವಿಠೋಬನ ಗುಡಿಗಳೇ ಶಾಲೆಯ ಕಟ್ಟಡವಾಗಿದ್ದವು. ಶಿಕ್ಷಕರು ಇಬ್ಬರೇ. ಐದನೇ ತರಗತಿಯವರೆಗೆ ಮಾತ್ರ ಶಾಲೆ. ಇಂಗಳೇಶ್ವರದಿಂದ ನನಗೆ ಹಲಸಂಗಿಗೆ ವರ್ಗವಾಗಿದ್ದು, ನಾಲ್ಕು ದಿನಗಳಲ್ಲಿ ಹಲಸಂಗಿಗೆ ಬರುವೆನೆಂದು ಚೆನ್ನಮಲ್ಲಪ್ಪನವರಿಗೆ ಬರೆದಿದ್ದೆ. ಅದಕ್ಕೆ ಅವರಿಂದ ಉತ್ತರವೂ ಬಂದಿತ್ತು.

"ಮನೆಯಲ್ಲಿ ಹೆರಿಗೆ ಆಗಿದೆ. ಅವಳಿಜವಳಿ ಗಂಡು ಮಕ್ಕಳು, ನೀನೊಬ್ಬನೇ ಬರಬೇಡ, ಜೊತೆಗೂಡಿ ಬಾ"

ಇಂಗಳೇಶ್ವರಕ್ಕೆ ಒಯ್ದ ನಮ್ಮ ಪ್ರಾಪಂಚಿಕ ಸಾಮಾನುಗಳನ್ನು ಎತ್ತಿನ ಬಂಡಿಯ ಮೇಲೆ ಹೇರಿಸಿಕೊಂಡು, ನಡುವಿನ ದಾರಿಯಿಂದ ವಿಜಾಪುರದ ವರೆಗೆ ತಂದು, ಒಂದು ಅಡತದಂಗಡಿಯಲ್ಲಿ ಹಚ್ಚಿ, ನಾವಿಬ್ಬರು ಬಸ್ಸಿನಲ್ಲಿ ಕುಳಿತು, ಏಳಗಿ ಎಂಬ ಹಳ್ಳಿಗಿಳಿದು ೧ ೧/೨ ಮೈಲು ನಡೆದು ಹಲಸಂಗಿಯನ್ನು ತಲುಪಿದೆವು.

ನಮ್ಮ ಬರವನ್ನು ಕಂಡು ಮನೆಯವರೆಲ್ಲರೂ ಹರ್ಷಿತರಾದರು. ಬಾಣಂತಿಯ ಕೋಣೆಯಲ್ಲಿಯೇ ಸತ್ಯಕಾಮ-ಯೋಗೀಶ್ವರ ದರ್ಶನವಾಯಿತು.

ನಮಗಾಗಿ ಒಂದು ಬಾಡಿಗೆ ಮನೆ ನೋಡತೊಡಗಿದೆವು. ಅಲ್ಲಿ ಬಾಡಿಗೆಯಿಲ್ಲದೆ ಮನೆ ಸಿಗುತ್ತಿದ್ದರೂ ರೂಢಿಯಂತೆ ಬಾಡಿಗೆ ಮನೆಯೆನ್ನುವುದುಂಟು.

ಅಲ್ಲಿ ಮುಖ್ಯ ಗುರುಗಳಾಗಿ ಕೆಲಸ ಮಾಡುತ್ತಿದ್ದ ವಿಠ್ಠಲ ಕೃಷ್ಣ ಪಲಮಾರಿಯವರು ಮೂಲತಃ ಚಡಚಣದವರೇ ಆಗಿದ್ದರು. ಅವರು ನನಗೆ ಚಾರ್ಜು ಕೊಟ್ಟು, ಅಂಜುಟಗಿ ಶಾಲೆಯ ಶಿಕ್ಷಕರಾಗಿ ಹೋಗಬೇಕಿತ್ತು, ಹೋದರು. ಆದರೆ ಹಲಸಂಗಿಯಿಂದ ಮನೆಯನ್ನು ಕಿತ್ತಲಿಲ್ಲ. ಯಾಕೆಂದರೆ ಅವರ ಗಬಾಳ ಬಾರದಾನಿ ಬಹಳ. ಬ್ರಾಹ್ಮಣರ ಓಣಿಯಲ್ಲಿ ವೈಷ್ಣವ ಬ್ರಾಹ್ಮಣರಂತಿದ್ದ ಬ್ರಾಹ್ಮಣ ಭಕ್ತರಾಗಿದ್ದರು.

ಶಾಲೆಯ ಕೆಲಸದೊಡನೆ ಅವರು ಬಡ್ಡಿ ವ್ಯವಹಾರ, ಕಟ್ಟಿಗೆ ತಲೆಹೊರೆಯ ಮಾರಾಟ ಮಾಡುತ್ತಿದ್ದರು. ಹೊಲಿಗೆಯ ಯಂತ್ರವನ್ನಿಟ್ಟಿದ್ದರು ೩-೪ ಮನೆಗಳನ್ನು ಅಡವು ಇರಿಸಿಕೊಂಡು ಸಾಲ ಕೊಟ್ಟಿದ್ದರು. ಖೋತಿಯಿಂದ ಹೊಲಗಳನ್ನು ಮಾಡಿದ್ದರು. ಹೀಗೆ ಅವರ ಪ್ರಪಂಚವು ಆಲದ ಮರದಂತೆ ಹಲವು ಪಾರಂಭಿಗಳನ್ನು ಬಿಟ್ಟಿತ್ತು. ಅದರಿಂದ ಹಲವಾರು ಜನರಿಗೆ ನೆರಳು ನೀಡುತ್ತಿತ್ತು. ಅವರು ಸುಲಭವಾಗಿ ಶಾಲೆಯ ಚಾರ್ಜು ಒಪ್ಪಿಸಿದರೂ ಮನೆ ಹಲಸಂಗಿಯಲ್ಲಿಯೇ ಉಳಿಸಿದರು.

ಆದ್ದರಿಂದ ನಾವು ಬೇರೆ ಮನೆ ಹುಡುಕಬೇಕಾಯಿತು. ಹೆರಿಗೆಯ ಮನೆಯಲ್ಲಿ ಎಷ್ಟು ದಿನ ನಿಲ್ಲುವುದು?

ಪಲ್ಮಾರಿಯವರು ಅಂಜುಟಗಿಗೆ ಹೋಗಿ ಬಂದು, ಎಡತಾಕಿ ತಿಂಗಳೊಪ್ಪತ್ತು ಕಳೆದರು. ಆ ಬಳಿಕ ಅವರ ವಿಚಾರ ಬದಲಾಗಿ ಹಲಸಂಗಿಯಿಂದ ಮನೆ ಕಿತ್ತುಕೊಂಡು ಹೋಗುವುದೇ ಲೇಸೆಂದು ಅವರಿಗೆ ತೋರಿತು. ಹೋದರು ಮನೆ ಖಾಲಿ ಆಯಿತು ಅದೇ ಮನೆ ನಮ್ಮದಾಯಿತು. ಮನೆಯಲ್ಲಿ ನಾವು ಇಬ್ಬರೇ, ಚಡಚಣದಿಂದ ಯಾರಾದರೂ ಬಂದರೆ ಅದು ತಾತ್ಪೂರ್ತಿಕ.

ನನ್ನ ಹೆಂಡತಿ ನಾಲ್ಕು ತಿಂಗಳ ಬಸುರಿ. ಆಕೆಯ ತವರಿನವರು ಕುಪ್ಪಸ ಮಾಡಬೇಕಾಗಿತ್ತು. ಆ ಕೆಲಸ ಹಲಸಂಗಿಯಲ್ಲಿ ನೆರವೇರಿತೋ ಚಡಚಣದಲ್ಲಿ ಪೂರಯಿಸಿತೋ ನೆನಪಿಲ್ಲ. ಆದರೆ ಅದರಲ್ಲಿ ಅತ್ತಿಗೆಯವರು ಮಾತ್ರ ಸಂಪೂರ್ಣ ನೇತೃತ್ವ ವಹಿಸಿದರು. ಪೂರ್ಣದಲ್ಲಿ ಪೂರ್ಣವನ್ನು ಕೂಡಿಸಿದರೂ ಉಳಿಯುವುದು ಪೂರ್ಣವೇ. ಅತ್ತಿಗೆಯವರು ವಾಡಿಕೆಯಾಗಿ ಕುಪ್ಪಸ ಮಾಡುವ ಕಾರ್ಯವನ್ನು ಮನೆಯಲ್ಲಿಯೇ ನೆರವೇರಿಸಿದರೂ ಅದರಿಂದ ಅವರಿಗೆ ಹಾನಿಯೇನೂ ಆಗಲಿಲ್ಲ. ಆಗಿದ್ದರೆ ಲಾಭವೇ ಆಗಿರಬಹುದು.

ಶೆಟ್ಟಿಯೇ ನಿಮ್ಮ ಮಗ ಅಲ್ಲಿ ಬಿದ್ದಾನೆಂದರೆ, ಶೆಟ್ಟಿ ಹೇಳಿದನಂತೆ ಲಾಭವಿಲ್ಲದಲ್ಲಿ ನನ್ನ ಮಗ ಬೀಳಲಾರನು. ಆ ಶೆಟ್ಟಿಯ ಮುಂಧೋರಣೆ ಯಂತೆಯೇ ನಮ್ಮ ಅತ್ತಿಗೆಯ ಮುಂಧೋರಣೆಯೂ ತೂಕದ್ದಾಗಿತ್ತು.

ಹಲಸಂಗಿಯಿಂದ ಹೆಂಡತಿ ಹಡೆಯುವ ಸಲುವಾಗಿ ತವರು ಮನೆಗೆ ಹೋದಳು. ಮರುದಿನವೇ ನನ್ನ ವಾನಪ್ರಸ್ಥಾಶ್ರಮದ ಬಾಗಿಲು ತೆರೆಯಿತು. ರೊಟ್ಟಿ ಒಣಗಿ, ಒಣಗಿರೊಟ್ಟಿ, ಮೇಲೆ ಗಳಗಳ ನೀರು ಕುಡಿಯುವುದು. ಇದು ವಿಠ್ಠಲ ಭಕ್ತರ ಭಜನೆಯ ಮಾದರಿಯೆಂದು ನಗೆಯ ಧಾಟಿಯಲ್ಲಿ ಹೇಳುತ್ತಿದ್ದೆವು.

"ವಿಠ್ಠಲ ರಕುಮಾಯಿ ವಿಠ್ಠಲ ರಕುಮಾಯಿ" ಎಂದು ಹಾಡಿ ಹಾಡಿ ಬೇಸತ್ತಾಗ ಪುಂಡಲೀಕ ವರದ ಹರಿ ವಿಠ್ಠಲ ಎಂದು ಉಗ್ಗಳಿಸಿದರೆ ಭಜನೆ ತಾನಾಗಿಯೇ ಮುಗಿಯುವುದಲ್ಲವೇ ?

ಚಡಚಣದವರೇ ಆದ ಸರಸಂಬಿ ಮಲ್ಲಪ್ಪನವರು ಹಲಸಂಗಿಯಲ್ಲಿಯೇ ವಾಸ್ತವ್ಯ ಮಾಡಿದ್ದರು. ಹಲಸಂಗಿಯಲ್ಲಿ ಅವರ ಅತ್ತೆಯ ಮನೆ. ಹೆಂಡತಿಯ ಸಲುವಾಗಿ ಆ ಊರಿಗೆ ಹೋಗಿ ಅಲ್ಲಿಯೇ ಮನೆ ಮಾಡಿದ್ದರು. ಅವರದು ಸೀರೆಯ ವ್ಯಾಪಾರ. ಮಂಗಳವಾರ ಇಂಡಿಯ ಸಂತೆ, ಬುಧವಾರ ಚಡಚಣದ ಸಂತೆ, ಗುರುವಾರ ಹಲಸಂಗಿಯ ಸಂತೆ, ಶುಕ್ರವಾರ ಮನವಿಯ ಸಂತೆ, ಈ ಮುಖ್ಯ ಸಂತೆಗಳಲ್ಲದೆ, ೨-೩ ಉಪಸಂತೆಗಳನ್ನೂ

ಮಾಡುತ್ತಿದ್ದರು. ಕುದುರೆಯೇ ಅವರಿಗೆ ವಾಹನ. ಅವರು, ನನಗೆ ಹೆಣ್ಣು ಕೊಟ್ಟ ಮಾವನವರ ಕೈಯಲ್ಲಿಯೇ ನುರಿತ ವ್ಯವಹಾರ ಕುಶಲರಾಗಿದ್ದರಂತೆ. ಆದ್ದರಿಂದ ನನ್ನ ಹೆಂಡತಿಯನ್ನು ಹೊಟ್ಟೆಯಲ್ಲಿ ಹುಟ್ಟಿಬಂದ ಮಗಳೆಂದೇ ಭಾವಿಸಿದ್ದರು.

ಶಾಲೆಯಲ್ಲಿ ಬಿನ್ ಇಯತ್ತೆ ಸೇರಿ ಆರು ತರಗತಿಗಳು. ಅವುಗಳಲ್ಲಿ ಮೂರು ವರ್ಗವನ್ನು ಅಸಿಸ್ಟಂಟರು, ಮೂರು ವರ್ಗಗಳನ್ನು ನಾನು ನೋಡಿ ಕೊಳ್ಳುತ್ತಿದ್ದೆವು. ಒಬಲೇಶ್ವರದವರಾದ ಅಡಿಹುಡಿ ಎಂಬುವರು ನನಗೆ ಸಹಾಯಕ ಶಿಕ್ಷಕರಾಗಿದ್ದರು. ಎಂಥ ಪ್ರಸಂಗದಲ್ಲಿಯೂ ಅನುಕೂಲರಾಗಿಯೇ ವರ್ತಿಸುವಂಥವರು. ಅವರಿಗೆ ಮಕ್ಕಳು ಮರಿ ಆಗಿರಲಿಲ್ಲ. ಪತಿ ಶಿಕ್ಷಕರಾಗಿ ಶಾಲೆಯತ್ತ ತೆರಳುವಂತೆ ಅವರ ಸತಿಯಾದವಳು, ಮುಂಜಾವಿನಿಂದ ಮಧ್ಯಾಹ್ನದವರೆಗೆ ಅಡವಿಯ ಕೆಲಸಕ್ಕೆ ಹೋಗುತ್ತಿದ್ದಳು. ಅಡಿಹುಡಿ ಬಸಪ್ಪ ಮಾಸ್ತರರಿಗೆ ಗುರುಶಾಂತವ್ವನವರು ಅನುಕೂಲೆಯಾದ ಸತಿ.

ಶಾಲೆಯ ಪಠ್ಯಪುಸ್ತಕಗಳಲ್ಲಿ ಬರುವ ಕವಿತೆ-ವಾಚನಗಳಲ್ಲದೆ, ಪಠ್ಯೇತರ ಕವನ - ಏಕಾಂಕಗಳನ್ನು ಅವರಿಗೆ ಓದುವುದಕ್ಕೆ ಪ್ರೋತ್ಸಾಹ ನೀಡಿದೆನು. ಜಿ.ಪಿ. ರಾಜರತ್ನಂ ಅವರ ಶಿಶುಗೀತೆಗಳು ಅದೇ ಪ್ರಕಟವಾಗಿದ್ದವು. ಅದೇ ವರ್ಗಕ್ಕೆ ಸೇರಿದ ನೂರಾರು ಕವನಗಳನ್ನು ೪ನೇ, ೫ನೇ ತರಗತಿಯವರಿಗೆ, ವಿವಿಧ ಧಾಟಿಗಳಲ್ಲಿ ಹಾಡಲು ಕಲಿಸಿದೆ. ಒಂಟಿಯಾಗಿ ಸಾಮೂಹಿಕವಾಗಿ ಹಾಡಿ ಜನರ ಮನವನ್ನು ಆಕರ್ಷಿಸಿದೆವು.

ಲೋನಾವಳ ಆಶ್ರಮದ ಕುವಲಯಾನಂದರ ಕ್ರಮಬದ್ಧ ಆಸನಗಳನ್ನು ನಾನು ರೂಢಿಸಿಕೊಂಡಿದ್ದೆನು. ಅವು ಎಣಿಕೆಯಲ್ಲಿ ೧೪ ಮಾತ್ರ ಆದರೂ ಆ ಕ್ರಮ ಬೆರಗುಗೊಳಿಸುವಂಥದು. ಆ ಆಸನಗಳನ್ನು ಮಕ್ಕಳಿಗೆ ಕಲಿಸಿದರೆ, ಅವರ ಭವಿಷ್ಯ ಸುಖಕರವಾಗುವದೆಂದು ನನ್ನೆಣಿಕೆ ಹಾಗೂ ಅನುಭವ. ಸಮ ವಯಸ್ಸಿನ ಹಾಗೂ ಸಮಗಾತ್ರದ ೧೨ ಜನ ಬಾಲಕರಿಗೆ ಆ ಆಸನಗಳನ್ನು ಕವಾಯತ ಪದ್ಧತಿಯಂತೆ ಕಲಿಸಿ ರೂಢಿಗೊಳಿಸಿದ್ದೆನು.

ಯಾವುದೋ ಹಬ್ಬ ಅಂದರೆ ಬಹುಶಃ ನಾಗರಪಂಚಮಿ ಇರಬಹುದು, ಕವಿತೆ ಗೀತೆಗಳನ್ನು ಹಾಡುವ ಬಾಲಕರಿಗೆ ಒಂದು ವಿಧದ ಸಮವಸ್ತ್ರವಾದರೆ ಸಾಮೂಹಿಕ ಆಸನಗಳ ಕಾರ್ಯಕ್ರಮದಲ್ಲಿ ಭಾಗವಹಿಸುವ ಬಾಲಕರಿಗೆ ಬೇರೊಂದು ವಿಧದ ಸಮವಸ್ತ್ರ.

ಪಟೇಲರ ಮನೆಯ ಮುಂದಿನ ಬಯಲಲ್ಲಿ ೨ ದೊಡ್ಡ ಗುಡಾರಗಳನ್ನು ಹಾಸಿ ಬಾಲಕರ ಕವನ, ಹಾಡು, ಆಸನ, ವಿನೋದ ಮೊದಲಾದವುಗಳನ್ನು ಸಾರ್ವಜನಿಕರಿಗೆ ತೋರಿಸಿದಾಗ ಕಂಡವರಿಗೆ ತುಂಬ ಹರ್ಷವಾಯಿತು. ಅದು ಮಕ್ಕಳಿಗೆ ಅಚ್ಚ ಸುಖ ನೀಡುವುದೆಂದು ಬಗೆದರು.

ಆ ಕಾರ್ಯಕ್ರಮ ಆಕರ್ಷಕವಾಗಿ ಪರಿಣಮಿಸಿದ್ದರಿಂದ ಮುಂದಿನ ಸಾರೆ ಗಣೇಶೋತ್ಸವ-ನವರಾತ್ರಿ ಹಬ್ಬಗಳನ್ನು ಶಾಲೆಯಲ್ಲಿ ಆಚರಿಸಬೇಕೆಂಬ ಲವಲವಿಕೆ ನಮ್ಮಲ್ಲಿ ಹುಟ್ಟಿತು ಮತ್ತು ಅದು ಕಾರ್ಯಗತವಾಗುವಂತೆ, ಸಹಾಯ ಅನುಕೂಲತೆಗಳು ದೊರೆತವು. ಅದಕ್ಕಾಗಿಯೇ ನನ್ನನ್ನು ಸುಶಿಕ್ಷಿತ ಜನರು ಲಿಂಗಣ್ಣ ಮಾಸ್ತರರೆಂದು ಕರೆದರು. ಕಲಿಯದ ತರುಣರು, ಯುವಕರು ನಿಂಗೋಣಿ ಮಾಸ್ತರ ಎಂದು ಕರೆದರು. ಈ ಕೆಲಸಗಳಿಗೆಲ್ಲ ಸಂಪೂರ್ಣ ನೆರವು ನೀಡಿದವರಲ್ಲಿ ಗಿರಿಧರ ದೇಶಪಾಂಡೆ, ಕಾಪಸೆ ರೇವಪ್ಪ, ಮಾದಣ್ಣ ಓಲೆಕಾರ ಮುಂತಾದವರೆಂದು ಮರೆಯದೆ ಹೇಳಬೇಕಾಗಿದೆ.

ಇಂಥ ಅವಸರದ ಕೆಲಸಗಳು ನಡೆದಾಗ ನನ್ನ ಅತ್ತಿಗೆಯ ಅಡ್ಡಸೋಗುಗಳು ಬಂದು, "ಇನ್ನಾರೆ ನಗರೋ ನಿಮ್ಮೊವ್ವನ" ಎನ್ನುವಂತೆ ಮಾಡುತ್ತಿದ್ದವು. ಚಡಚಣದ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಪ್ಲೇಗು ಕಾಲು ಚಾಚುವ ಹೊತ್ತಿಗೆ ನನ್ನ ಅತ್ತಿಗೆ, ತನ್ನ ಹಿರಿಯಮಗಳಾದ ಸಾವಿತ್ರಿಯನ್ನು ಕರೆತಂದು "ನಿಮ್ಮವ್ವನ ಹೆಸರಿಟ್ಟೇದ್ದೀರಿ ಈಕೆಗೆ, ಈಕೆಯನ್ನು ಈ ಜಡ್ಡಿನಿಂದ ಹೇಗೆ ಉಳಿಸಿಕೊಳ್ಳುವಿಯೋ ನೋಡು" ಎಂದು ಗಂಟು ಬೇನೆಗೀಡಾದ ಮಗಳನ್ನು ತಂದು ನಡುಮನೆಯಲ್ಲಿ ಮಲಗಿಸಿಬಿಟ್ಟಳು.

ಹೇಳುವುದು ಬರೇ ಜ್ವರ ಎಂದು. ಪುಣ್ಯಕ್ಕೆ ನಾಲ್ಕು ದಿನ ಅದೆಂಥದೋ ಉಪಚಾರ ಮಾಡುವಷ್ಟರಲ್ಲಿ ಗುಣ ಕಂಡಿತು. ಇನ್ನೊಮ್ಮೆ

ಯಾರೋ ಆಪ್ತರ ಹುಡಿಗೆಯನ್ನು ಹಲಸಂಗಿ ಜಾತ್ರೆಯ ನೆವದಿಂದ ಕರೆತಂದರೆ. ಅದು ನಮ್ಮಲ್ಲಿ ಮೈನರೆಯಬೇಕೇ? ಅದಕ್ಕಾಗಿ ನಾನು ಅನಿವಾರ್ಯವಾದ ಕೆಲವು ಖರ್ಚುಗಳನ್ನು ಮಾಡಬೇಕಾಯಿತು. ಅದಕ್ಕಾಗಿ ಗೆಳೆಯರು ನನಗೆ ಒಳಿತಾಗಿ ಸಿಟ್ಟು ಮಾಡಿದರು, ಮಾತಿನಿಂದ ಉಗುಳಿದರು.

ಶಾಲೆಯಲ್ಲಿ ಉತ್ಸವ ಮಾಡುವುದಕ್ಕೆ ಆರಂಭಿಸುವುದಾದರೆ ಶ್ರೀ ಗಣೇಶನಿಂದಲೇ ಶ್ರೀಗಣೇಶಾಯನಮಃ ಆಗಬೇಕಷ್ಟೇ? ಆ ವಿಚಾರ ಇನ್ನೂ ಗರ್ಭಾವಸ್ಥೆಯಲ್ಲಿದ್ದಾಗ ಚೆನ್ನಮಲ್ಲಪ್ಪ-ರೇವಪ್ಪ ಅವರನ್ನು ಕೆಣಕತೊಡಗಿದೆನು "ಆಧ್ಯಾತ್ಮವೆ ನಿಚಿತ ಪ್ರಯೋಜನವೆನಗೆ" ಎನ್ನುತ್ತಿದ್ದ ಅವರ ಆಲಸಿಕೆಯನ್ನು ಕಳೆಯುವುದು ದುಸ್ತರವಾಯಿತು. ಸರ್ಕಸ್ಸಿನ ಕುದುರೆಯನ್ನು ಕಾಡಿನಲ್ಲಿ ತಂದು ಸುತ್ತು ಹಾಕಿಸಬೇಕಾದರೆ ಬಾರಕೋಲಿನ ಸಪ್ಪುಳವನ್ನು ಕೇಳಿಸಲೆ ಬೇಕು. ಇಲ್ಲಿ ಸಲ್ಲುವವರು ಆಗಬೇಕು ನಾವು ಮೊದಲು ಎಂಬ ಮಾತು ನನ್ನದು ಅಲ್ಲಿ ಸಲ್ಲುವವರು ಆಗುವುದಕ್ಕಾಗಿಯೇ ಇಲ್ಲಿ ಸಲ್ಲುವವರು ನಾವಾಗಬೇಕು ಎಂಬ ಸಮನ್ವಯ ಸೂತ್ರದ ಸಹಾಯದಿಂದ ಶಾಲೆಯಲ್ಲಿ ಗಣೇಶೋತ್ಸವ ಆರಂಭವಾಯಿತು.

ನಮ್ಮ ಮೊಟ್ಟಮೊದಲಿನ ದಿಟ್ಟ ನಿಲುಮೆಯೆಂದರೆ ಯಾರಿಗೂ ವಂತಿಗೆ ಕೇಳುವಂತಿಲ್ಲ. ಕೇಳದೆ ಕೊಟ್ಟರೆ ಸೂಕ್ತವಾಗಿದ್ದಷ್ಟು ಸ್ವೀಕರಿಸುವುದು ಗೆಲುವಾಗುವಂತೆ ಶಾಲೆಯ ಮಕ್ಕಳು ತಾವಾಗಿಯೇ ಧಾನ್ಯ ತಂದುಕೊಟ್ಟರು. ಅಂಥ ಸಹಾಯವೇ ನಮ್ಮನ್ನು ಕಡೆದಾಯಿಸಿದ್ದೆಂದು ಹೇಳಬೇಕೇ?

ಶ್ರೀವಿವೇಕಾನಂದ ಸ್ವಾಮಿಗಳು ಹೇಳುತ್ತಿದ್ದ "ನನ್ನ ಗೋಪಾಲ" ಎಂಬ ಕಥೆಯನ್ನು ಕುವೆಂಪು ಅವರು ನಾಟಕ ರೂಪದಲ್ಲಿ ಬರೆದರು. ಆದರೆ ಅದು ನಮ್ಮ ಮಕ್ಕಳಿಗೆ ತುಸು ಬಿಗಿಯೇ ಆಯಿತೆನ್ನಬೇಕು. ಅದನ್ನು ಇನ್ನೂ ಸುಲಭಗೊಳಿಸಿ ೫ನೇ ತರಗತಿಯ ಮಕ್ಕಳಿಗೆ ಕಲಿಸಿ, ಗಣೇಶೋತ್ಸವ ಕಾಲಕ್ಕೆ ಆಡಿಸಬೇಕೆಂದು ತೀರ್ಮಾನಿಸಿದೆವು. ಮಕ್ಕಳು ಅದನ್ನು ಅಭ್ಯಸಿಸತೊಡಗಿದರು.

ಗಣೇಶ ಚೌತಿಯ ದಿನ ಚೆನ್ನಮಲ್ಲಪ್ಪನವರ ಹೊರ ಪಯಣ ಮಾಡಿಸಿ ಶಾಲೆಗೆ ಕರೆತಂದೆವು. ಆಗ ಅವರು ನನ್ನನ್ನು ರಿಂಗ್‌ಮಾಸ್ಟರ್ ಅಂದರು,

ರೇವಪ್ಪನವರೂ ಇಂಥ ಕೆಲಸದಲ್ಲಿ ಸಹಕರಿಸಲು ಸದಾ ಸಿದ್ಧರು. ಓಲೆಕಾರ ಮಾದಣ್ಣ ಗಣೇಶನಿಗೆ ಇಲಿ ಇದ್ದ ಹಾಗೆ. ಚೆನ್ನಮಲ್ಲಪ್ಪನವರ ವಾಹನವೇ ಆಗಿದ್ದನೆನ್ನಬೇಕು.

ನಮ್ಮದು ಪ್ರಾಥಮಿಕ ಶಾಲೆ. ಅದು ನಡೆಯುವುದು ಮಹಾದೇವನ ಗುಡಿಯಲ್ಲಿ. ಗಣೇಶೋತ್ಸವ ಪ್ರಾರಂಭವಾದದ್ದು ಅಲ್ಲಿಯೇ ಅಂದಾಗ, ಅದು ಸಕಲರಿಗೂ ಕಲ್ಯಾಣಕರವಾಗುವುದೆಂಬ ಭರವಸೆ ನೀಡಿದಂತೆಯೇ ಗಣೇಶನನ್ನು ಕಳಿಸುವ ದಿನವೇ ರಾತ್ರಿ ನನ್ನ ಗೋಪಾಲ ನಾಟಕವು ಚಾವಡಿ ಕಟ್ಟೆಯ ಮೇಗಡೆ ಕಟ್ಟಿದ ಛತ್ತಿನ ಕೆಳಗೆ. ಬಹುವರುಷಗಳಿಂದ ಸಾರ್ವಜನಿಕರೆಲ್ಲ ಬೆರತು, ಆಟ ನಾಟಕಗಳನ್ನು ನೋಡದೆ ಇದ್ದ ಹೆಣ್ಣುಮಕ್ಕಳು ಹೊರಬಿದ್ದು ನನ್ನ ಗೋಪಾಲ ನಾಟಕ ನೋಡಿ ಪುನೀತರಾದರೆಂದು ಹೇಳಬಹುದು. ಅಂದಿನಿಂದ ಹೆಣ್ಣುಮಕ್ಕಳು ಎಲ್ಲಿದ್ದರೂ ನಾವು ಆಡುವ ನಾಟಕ, ಹೂಡಿದ ಉತ್ಸವ ನೋಡುವುದಕ್ಕೆ ತುಂಬ ತವಕಿಸತೊಡಗಿದರೆಂದು ಹೇಳಬಹುದಾಗಿದೆ.

೨೯. ನಾಡಹಬ್ಬವಾಯಿತು ಗಣೇಶೋತ್ಸವ

ಆಶ್ವೀಜ ಶುದ್ಧ ಪ್ರತಿಪದೆಯಿಂದ ೯ ದಿನಗಳೆಂದರೆ ನವರಾತ್ರಿ. ಮರುದಿನವೇ ದಸರ. ನವರಾತ್ರಿಯ ಹಬ್ಬವೇ ನಾಡಹಬ್ಬ. ಅದು ಕನ್ನಾಡಿಗೆ ಸಂಬಂಧಿಸಿದ್ದು. ಕನ್ನಾಡಿನಲ್ಲಿ ಆ ಹಬ್ಬ ಪರಂಪರಾಗತವಾಗಿ ಬಂದಿದೆ. ಎಲ್ಲಮ್ಮ, ಜಗದಂಬೆ, ದಾನಮ್ಮ ಮೊದಲಾದ ಹೆಸರುಗಳಿಂದ ಬಹುತರವಾಗಿ ಪ್ರತಿಯೊಂದು ಮನೆಯನ್ನು ಸಾರಿಸಿ, ಬಣ್ಣ ಹಚ್ಚಿ, ಹಾಸಿಗೆ-ಹೊದಿಕೆ ಒಗೆದು ತಂದು ರುಚಿಯಿಂದ ಮಾಡುವ ಹಬ್ಬ, ಬಿಡಿಬಿಡಿಯಾಗಿ ಆಚರಿಸುವ ಆ ಹಬ್ಬವನ್ನು ಇಡಿಯಾಗಿ ಆಚರಿಸುವ ಕ್ರಮಕ್ಕೆ ನಾಡಹಬ್ಬ ಅನ್ನುವುದು ವಾಸ್ತವಿಕ.

ಶ್ರೀ ಅರವಿಂದರು ಅಖಂಡ ಭಾರತದ ಸಲುವಾಗಿ ಹೇಳಿದ ವಿಷಯವನ್ನೇ ಇಲ್ಲಿ ಅಖಂಡ ಕರ್ನಾಟಕಕ್ಕಾಗಿ ಹೊಂದಿಸಿಕೊಳ್ಳಬಹುದಾಗಿದೆ. ಏನೆಂದರೆ -

"ಅಖಂಡ ಭಾರತ ದರ್ಶನವು ಒಬ್ಬನಿಗಾದರೂ ಸಾಕು. ಅದು ಸಾರ್ಥಕವಾಗುತ್ತದೆ. ಅಂಥ ದರ್ಶನ ಪಡೆಯುವ ಸಲುವಾಗಿ ಹಲವಾರು ಜನರು ಏಕಮುಖ ಏಕಭಾವದಿಂದ ಉಪಾಸನೆ ಮಾಡಿದರೆ ಅಖಂಡ ಭಾರತವು ಜೀವದೊಟ್ಟು ನಿಲ್ಲುವದು."

ಈ ವಿಚಾರ ಸರಣಿಯನ್ನೇ ಅಖಂಡ ಕರ್ನಾಟಕದ ಸಲುವಾಗಿ ಉಪಾಸನಾ ಕ್ರಮದಲ್ಲಿ ಬಳಸಿಕೊಂಡರೆ, ೨೪ ತುಣುಕಾಗಿ ಬಿದ್ದ

ಕರ್ನಾಟಕವು ಅಖಂಡವಾಗಬಲ್ಲದು. ನಾಡು ಒಂದೇ ಅಲ್ಲ, ನುಡಿ-ನಡೆಗಳಲ್ಲಿ ಸಹ ಕರ್ನಾಟಕವು ಅಖಂಡವಾಗಿ ನಿಂತರೆ ಚೆಲುವು ನಾಡು ಉದಯವಾದಂತೆ, ನವರಾತ್ರಿಯ ಹಬ್ಬದ ಕಾಲಕ್ಕೆ ಶ್ರೀಮಾತೆಯವರು ಹೇಳಿದಂತೆ ಕನಿಷ್ಠ ೧೨ ಜನರು ಏಕೋಭಾವದಿಂದ ಉಪಾಸನೆ ನಡೆಸಿದರೆ ಅಖಂಡ ಕರ್ನಾಟಕದ ದರ್ಶನವು ಒಬ್ಬನಿಗಾದರೂ ಲಭಿಸುವದು. ಆಗ ಮೈ-ಮನ-ಮಾತುಗಳಲ್ಲಿಯೂ ಕರ್ನಾಟಕಕ್ಕೆ ಒಂದು ಸ್ವರೂಪ ಬರುವದು.

ಏಕೋಭಾವ ೧೨ ಜನರು, ಊರ ತರುಣರಲ್ಲಿ ಸಿಗುವುದಕ್ಕಿಂತ ಸುಲಭವಾಗಿ, ಸುಗುಮವಾಗಿ ಶಾಲೆಯಲ್ಲಿ ಸಿಗಬಲ್ಲರು. ಅವರೆಲ್ಲರೂ ನಂಬಿದ ಒಬ್ಬ ಶಿಕ್ಷಕ ಗುರುಗಳ ಹೇಳಿಕೆಯನ್ನು ಸಹಜವಾಗಿ ಸಮನಿಸುವರು. ಅದಕ್ಕಾಗಿ ಈ ಕೆಳಗಿನ ಸಂಸ್ಕೃತ ಶ್ಲೋಕದಲ್ಲಿ ಬಣ್ಣಿಸಿದಂತೆ, ಭುವನೇಶ್ವರಿಯ ಭಾವಚಿತ್ರವನ್ನು ಶಾಲೆಯ ಒಂದು ಭಾಗದಲ್ಲಿ ಸ್ಥಾಪಿಸಬೇಕಾಗುತ್ತದೆ.

ಉದ್ಯದಿನದ್ಯುತಿ ಮಿಂದು ಕಿರೀಟಾಂ
ತುಂಗಕುಚಾಂ ವರದಾಂಕುಶ್ರಾಭೀತಕರಾಂ
ನಯನ ತ್ರಯ ಯುಕ್ತಾಂ
ಸ್ಮೇರ ಮುಖಾಂ ॥

ಸ್ಥಾಪಿತ ಮೂರ್ತಿ ಅಥವಾ ಚಿತ್ರ ಭುವನೇಶ್ವರಿಯದು. ಅದಕ್ಕೆ ಉತ್ಸವಮೂರ್ತಿಯೊಂದು ಬೇಕಲ್ಲವೇ? ಕನ್ನಾಡಿನ ತುಂಡುಭಾಗಗಳನ್ನೇ ಒತ್ತಟ್ಟಿಗೆ ಹೊಂದಿಸಿ ಅದಕ್ಕೆ ಸುತ್ತು ರೇಖೆಯೆಳೆದರೆ ಅದು ಕನ್ನಡ ನಕ್ಷೆಯಾಗುತ್ತದೆ. ಆ ನಕ್ಷೆಯಲ್ಲಿ, ನಾಡದೇವಿ ಕೈಯಲ್ಲಿ ಬಾವುಟವಿಡಿದು ಎದ್ದೇಳುವಂತೆ ಚಿತ್ರಿತಗೊಳಿಸಿದವರು ದಿ. ವಿನೀತ ರಾಮಚಂದ್ರರಾಯರು. ಅದನ್ನೇ ನಾವು ನಾಡಹಬ್ಬದ ಕಾಲಕ್ಕೆ ಕನ್ನಾಡ ಬಾವುಟವೆಂದು ಗ್ರಹಿಸಿದೆವು.

ನಗರ ಸಂಕೀರ್ತನೆಗೆ ಹೊರಡುವ ಮುನ್ನ, ಸಾಂಬನೆನಿಸಿದ ಶಿವ-ಭುವನೇಶ್ವರಿಯನ್ನು ಪೂಜಿಸಿ, ಪ್ರಾರ್ಥಿಸಿ, ಉಗ್ಗಡಿಸಿ ನಗರ ಸಂಕೀರ್ತನಕ್ಕೆ ಹೊರಡುವುದು. ಬಾವುಟದಲ್ಲಿ ವರ್ಣಿತವಾದ ನಾಡದೇವಿಯ ರೋಮಾಂಚಕಾರಿಯಾದ ಇತಿಹಾಸ, ಅದ್ಭುತ ಮಹಿಮೆ, ಅಚಲಕೆಚ್ಚು ಮೊದಲಾದ ದೈವೀಗುಣಗಳನ್ನು ಸ್ಫುಟಗೊಳಿಸುವ ಹತ್ತಿಪ್ಪತ್ತು ಪದಗಳನ್ನು ರಚಿಸಿ ಮತ್ತು

ಆಯ್ಕೆ ಮಾಡಿ ಸಾಮೂಹಿಕವಾಗಿ ಹಾಡುವುದಕ್ಕೆ ಶಾಲೆಯ ಮಕ್ಕಳಿಗೆ ರೂಢಿಮಾಡಿಸಿದೆವು.

ಬೆಳಗಿನ ೫ ಗಂಟೆಗೆ ಪ್ರತಿಯೊಂದು ಮನೆಯ ಮುಂದಿನ ಕಸ ಬಳಿದು, ನೀರ ತಳಿಹಾಕಿ, ರಂಗವಲ್ಲಿ ಬರೆದು, ತಲೆವಾಗಿಲಿನ ಎಡಬಲ ಮಾಡಗಳಲ್ಲಿ ಹಣತಿ ಹಚ್ಚಿಡುವುದು. ತುಂಬಿದ ಕೊಡ, ಹೂಮಾಲೆ, ಆರತಿ, ತೆಂಗು ಅಥವಾ ಹಣ್ಣುಗಳ ಸಜ್ಜಿನಿಂದ ಮನೆಯ ಹೆಣ್ಣುಮಕ್ಕಳು ನಿಲ್ಲುವರು. ನಾಡದೇವಿಯ ಬಾವುಟವನ್ನು ಪೂಜಿಸಿ, ಆರತಿ ಬೆಳಗಿ, ಹೂಮಾಲೆ ಹಾಕಿ, ಕಾಯಿ ಒಡೆದು, ಸಾಧ್ಯವಿದ್ದರೆ ದಕ್ಷಿಣೆಯಿಟ್ಟು ಕೈಮುಗಿಯುವರು. ಅಷ್ಟಕ್ಕೆ ಆ ಮನೆ ಕೆಲಸ ಮುಗಿಯಿತು.

ದೇವರ ಮನೆಯೊಳಗಿನ ಜಗಲಿಯ ಮೇಲೆ ನಂದಾದೀಪ ಬೆಳಗುತ್ತದೆ ತಾಬಾಣದಲ್ಲಿ ಸಸಿ ಬೆಳೆಯುತ್ತಿದೆ. ಮನೆಯವರು ವ್ರತಸ್ಥರಂತೂ ಆಗಿಯೇ ಇದ್ದಾರೆ.

ಈ ತಳಹದಿಯ ಮೇಲೆ ನಮ್ಮ ನಾಡಹಬ್ಬವು ನವರಾತ್ರಿಯಿಂದ ಆರಂಭವಾಗಿ ದಸರೆಯ ದಿವಸ ಕೊನೆಗೊಳ್ಳುವದು.

ನಗರ ಸಂಕೀರ್ತನವನ್ನು ಮುಗಿಸಿಕೊಂಡು ಧ್ವಜವು ಶಾಲೆಯ ಬಳಿಗೆ ಬರುತ್ತದೆ. ಅಲ್ಲಿ ಧ್ವಜವಂದನೆಯ ಕಾರ್ಯಕ್ರಮ ನಡೆಯುವುದು.

ಏರಿಸಿ। ಹಾರಿಸಿ। ಕನ್ನಡದ ಬಾವುಟಾ।
ಗಾಳಿಯಲಿ ಪಟಪಟಾ। ಧೂಳಿಯಲಿ ಛಟಛಟಾ ॥

ಆ ಬಳಿಕ ಒಬ್ಬ ಹಿರಿಯರ ಚಿಕ್ಕ ಭಾಷಣ, ಕನ್ನಡ ಹಿರಿಮೆಯನ್ನು ಕುರಿತದ್ದು. ಕೊನೆಯಲ್ಲಿ ಮನೆಮನೆಯವರು ಅರ್ಪಿಸಿದ ಚುರುಮರಿ, ಕೊಬ್ಬರಿ, ಬೆಂಡು, ಬತ್ತಾಸು, ಕರಿದಂಟಿನ ಒಡೆ ಇವೆಲ್ಲ ಸೇರಿದ ಪ್ರಸಾದವನ್ನು ಪ್ರತಿಯೊಬ್ಬ ಬಾಲಕನಿಗೆ ಬೊಗಸೆ ಬೊಗಸೆ ಕೊಟ್ಟರೂ ಹಿಂಗದಷ್ಟು ಸಂಗ್ರಹವಾಗುತ್ತಿತ್ತು ಮತ್ತು ತೊಟ್ಟಲಕಾಯಿ ಒಡೆಯಲೆಂದು ಹಲವರು ೧ ೧/೪ ರೂ. ಅಥವಾ ೧೦ ರೂಗೆ ಕೊಟ್ಟಿದ್ದು ಪ್ರತಿದಿವಸ

೮-೧೦ ರೂ.ಗಳ ಶೇಖರಣೆ ಆಗುತ್ತಿತ್ತು. ಹೀಗಿರುವಾಗ ನಾಡಹಬ್ಬಕ್ಕಾಗಿ ವಂತಿಗೆ ಕೇಳುವ ಪ್ರಸಂಗವೇ ಇರಲಿಲ್ಲ.

ಇಳಿಹೊತ್ತಿಗೆ ಮಕ್ಕಳ ಪಂದ್ಯಾಟ, ಬಾಲಿಕೆಯರ ಕೋಲಾಟ, ಇಲ್ಲವೆ ವಿನೋದ ಸಂಭಾಷಣೆ ಸಾಹಿತ್ಯವನ್ನು ಕುರಿತ ಭಾಷಣ ಬಂದ ಅತಿಥಿಗಳಿಂದ ಇದು ನಮ್ಮ ನಾಡಹಬ್ಬದ ಸ್ಥೂಲ ಕಲ್ಪನೆಯಾದಂತೆ ಮೂಲಕಲ್ಪನೆಯೂ ಅಹುದು.

ಪ್ರತಿವರುಷ ನಾಡಹಬ್ಬದ ಕಾಲಕ್ಕೆ ಗುಂಪಿನ ಗೆಳೆಯರಾದ ನಾವೆಲ್ಲರೂ ಪಾಲುಗೊಂಡು ಏಕಾಂಕಗಳನ್ನೋ ಪ್ರಹಸನಗಳನ್ನೋ ಮಾಡಿ, ಸಾರ್ವಜನಿಕರನ್ನು ತಣಿಸುತ್ತಿದ್ದೆವು. ಹಿಂದಿನ ವರುಷ "ನನ್ನ ಗೋಪಾಲ" ನಾಟಕವನ್ನು ಸರಳಗೊಳಿಸಿ ಮಕ್ಕಳು ಆಡಿ ತೋರಿಸಿದಂತೆ ಮುಂದಿನ ವರ್ಷಗಳಲ್ಲಿ "ತಿರುಕರ ಪಿಡಗು", "ಯಮನಸೋಲು" ನಾಟಕಗಳನ್ನು ಆಡಿ ತೋರಿಸಿ ಪ್ರೇಕ್ಷಕರನ್ನು ಅದಾವುದೋ ಲೋಕಕ್ಕೊಯ್ದು ಅದನ್ನು ತೋರಿಸಿ ಕೊಂಡು ಬಂದಂತೆ ಪರಿಣಾಮಕಾರಿಯಾಗಿ ಆಡಿ ತೋರಿಸಿದ್ದುಂಟು.

ತಿರುಕರ ಪಿಡುಗು-ಪ್ರಹಸನಕ್ಕೆ ತಿರುಕರ ಗುಡುಗು ಉತ್ತರ ರೂಪವಾಗಿ ಸನಾತನ ತರುಣರು ಆಡಿ ತೋರಿಸಿದರು. ಆದರೆ ಅದು ತಿರುಕರ ಪಿಡುಗನ್ನು ಮರೆಮಾಡುವಷ್ಟು ಪ್ರಖರವಾಗಿರಲಿಲ್ಲವೆಂದರೂ ಪ್ರತೀಕಾರ ನೀಡಿದವರ ಪ್ರಯತ್ನ ಅತ್ಯಂತ ಸ್ತುತ್ಯವಾಗಿದೆ.

'ತಿರುಕರ ಪಿಡುಗು' ನಾಟಕದಲ್ಲಿ ನಾಯಕನ ಪಾತ್ರವನ್ನು ನಾನು ವಹಿಸಿದರೆ, 'ಯಮನಸೋಲು' ನಾಟಕದಲ್ಲಿ ನಾಯಕಿಯ ಪಾತ್ರವನ್ನು ಕಾಪಸೆ ರೇವಪ್ಪ ವಹಿಸಿದರು. ಇನ್ನು ಚೆನ್ನಮಲ್ಲಪ್ಪ ಮುಖ್ಯಪಾತ್ರ ವಹಿಸಿದ ನಾಟಕವೆಂದರೆ, "ಶ್ರೀ ರಾಮಕೃಷ್ಣ ಪರಮಹಂಸ" ಆ ವಿಷಯವಾಗಿ ಮುಂದಿನ ಪುಟಗಳಲ್ಲಿ ವಿವರಿಸಲಾಗಿದೆ.

೧೯೩೫ನೇ ಫೆಬ್ರವರಿ ೧೦ನೇ ದಿನಾಂಕವೆಂದರೆ, ನನ್ನ ೩೦ನೇ ಹುಟ್ಟಿದ ಹಬ್ಬ. ಅದನ್ನು ಚೆನ್ನಮಲ್ಲಪ್ಪನವರ ರಾಮಾಹಳ್ಳದ ತೋಟದಲ್ಲಿ, ಮಾವಿನಮರಗಳ ದಟ್ಟ ನೆರಳಲ್ಲಿ ಆಚರಿಸಲಾಯಿತು. ಗೆಳೆಯರೆಲ್ಲರೂ ಕೂಡಿ

ಆರಂಭಿಸಿದ "ವಿಶ್ವಾಮಿತ್ರ" ಎಂಬ ತ್ರೈಮಾಸಿಕ (ಕೈಬರಹದಲ್ಲಿ)ದ ಮೊದಲ ಸಂಚಿಕೆ ಪ್ರಕಟವಾಯಿತು. ಆ ಕಾಲಕ್ಕೆ ಚಡಚಣ-ವಿಜಾಪುರಗಳಿಂದ ಮತ್ತು ಹತ್ತಿರದ ಗ್ರಾಮಗಳಿಂದ ಗೆಳೆಯರಾದ ಗುರುಪಾದಪ್ಪ ಜೀರಂಕಲಗಿ, ರೇವಣಸಿದ್ದಪ್ಪ ಮದಭಾವಿ ಮೊದಲಾದವರು ಬಂದು ಭಾಗವಹಿಸಿದರು.

ಗುಂಪಿನವರ ಸಾಹಿತ್ಯಸೇವಾ ಕಾರ್ಯವು ಈ ಮೂಲಕ ಗರ್ಭಧಾರಣ ಮಾಡಿತೆಂದು ಹೇಳಬಹುದಾಗಿದೆ.

ಹಿಂದಿಯಿಂದ 'ಮಿಲನ' ಕಾವ್ಯವನ್ನು ಕನ್ನಡಿಸಿದ ಪದ್ಯಗಳು ಕ್ರಮಶಃ ಹೊರಬಂದವೆನ್ನಬಹುದು. ನಾನೇ ಅದರ ಅನುವಾದಕನೆಂದು ಬೇರೆ ಹೇಳುವ ಕಾರಣವಿಲ್ಲ.

ಚೆನ್ನಮಲ್ಲಪ್ಪನವರ 'ಜಯತತ್ವ' ಲೇಖನ ಮೊದಲ ಸಂಚಿಕೆಯ ಮೊದಲ ಪುಟದಲ್ಲಿ ಬಂದಿದೆ.

ಧೂಲಾಸಾಹೇಬರ 'ಅರಬ್ಬಿಯದ ಅಭಿಮನ್ಯು' ಎಂಬ ಖಂಡಕಾವ್ಯ ಆರಂಭಗೊಂಡಿತು.

ಇನ್ನುಳಿದ ಸಂಪಾದಕೀಯ ಬರಹಗಳನ್ನು ನಾನೇ ಬರೆಯಲು ಕಲಿತೆನು. ಅಂದು ಗೆಳೆಯರು ಮತ್ತು ಸೋದರಿಯರು ಸಹೃದಯತೆಯಿಂದ ಎರೆದ ಸೇಸೆಯಕ್ಕಿಯ ಬಲವು ಕಳೆದ ೫೩ ವರುಷಗಳಿಂದಲೂ ಸಬಲವಾಗಿ ನನ್ನನ್ನು ಕಾಪಾಡಿಕೊಂಡು ಬಂದಿದೆ.

ಅಂದು ರೂಪುಗೊಂಡ ನನ್ನ ೩೦ ವರುಷಗಳ ಹುಟ್ಟುಹಬ್ಬವು, ಮುಂದಿನ ವರುಷ ಸಾಧಿಸಬೇಕಾದ ಮಹಾಕಾರ್ಯಗಳ ಬೀಜ ಬಿತ್ತಿದ ಸೂಚನೆ ಆಯಿತು.

ಶ್ರೀರಾಮಕೃಷ್ಣ ಪರಮಹಂಸರ ಶತಮಾನೋತ್ಸವ ಮತ್ತು ಶ್ರೀ ಅರವಿಂದ ಗ್ರಂಥಮಾಲೆಯ ಪ್ರಥಮ ಪ್ರಕಟನೆ ಇವೆರಡೂ ಕಾರ್ಯ ರೂಪದಲ್ಲಿ ಬರುವಂತೆ, ಗೆಳೆಯರು ಪೂರ್ವಸಾಧನೆ ನಡೆಸಬೇಕೆಂದು ನಿಶ್ಚಯಿಸಿದೆವು.

ಕನ್ನಡಿಗರಾದ ನಮ್ಮ ಬಾಳಿಗೆ ಬಹು ಬೆಳಕು ನೀಡಿದವರಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಪ್ರಮುಖರು. ಮೂಲತಃ ಬಂಗಾಲದವರಾದ ಅವರ ಶತಮಾನೋತ್ಸವವು ಕಲಕತ್ತೆಯ ಬಳಿಯಲ್ಲಿರುವ ದಕ್ಷಿಣೇಶ್ವರದಲ್ಲಿ ಬಹು ವಿಜೃಂಭಣೆಯಿಂದ ನಡೆಯಿತೆಂದು ಓದಿ ತಿಳಿದೆವು. ಅದನ್ನು ನಾವು ಆಚರಿಸಿದರೆ ಬಂಗಾಲದ ತರುವಾಯ ಕನ್ನಾಡ ಹೆಸರು ಬರೆಸಿದಂತಾಗುತ್ತದೆ.

ಶತಮಾನೋತ್ಸವ ದಿನಾಂಕವನ್ನು ಹಿಂದಿನಿಂದ ತೀರ್ಮಾನಿಸಬಹುದು. ಆದರೆ ಆ ಸಂದರ್ಭದಲ್ಲಿ ನಾವು ಸಿದ್ಧಗೊಳಿಸುವದಕ್ಕಿಂತ ಸಾಧಿಸಬೇಕಾದು ದೇನು - ಎಂಬುದನ್ನು ನಿರ್ಧರಿಸಿದೆವು.

೧. ಶ್ರೀರಾಮಕೃಷ್ಣ ಪರಮಹಂಸರ ನಾಟಕವನ್ನು ಅಭಿನಯಿಸುವುದು, ಆ ನಾಟಕವನ್ನು ಬರೆಯಲಿಕ್ಕೆ ಚೆನ್ನಮಲ್ಲಪ್ಪನವರೇ ಸುಸಮರ್ಥರು. ನಾಟಕ ಬರೆದ ಮೇಲೆ ಪಾತ್ರಗಳ ಹಂಚಿಕೆ ಮಾಡುವುದು.

೨. ಉತ್ಸವಕಾಲಕ್ಕೆ ಕನ್ನಡದಲ್ಲಿ ಅನುವಾದಗೊಂಡ ಪರಮಹಂಸರಿಗೆ ಸಂಬಂಧಿಸಿದ ಸಾಹಿತ್ಯ ಗ್ರಂಥಗಳನ್ನು ಬೆಂಗಳೂರು-ಮೈಸೂರುಗಳಿಂದ ತರಿಸಿ ಕೊಂಡು ಪ್ರತಿಫಲವನ್ನು ಲೆಕ್ಕಿಸದೆ ಮಾರಾಟಮಾಡುವುದು.

೩. ಶ್ರೀ ಅರವಿಂದ ಗ್ರಂಥಮಾಲೆಯನ್ನು ಆರಂಭಿಸಿ ಪ್ರಥಮ ಗ್ರಂಥವೆಂದು ಶ್ರೀ ಕಾಪಸೆ ರೇವಪ್ಪ ಅವರ "ನಂದನವನ" ಎಂಬ ಸಣ್ಣ ಕತೆಗಳ ಸಂಕಲನವನ್ನು ಪ್ರಕಟಿಸುವುದು.

೪. ಆ ಸಂದರ್ಭಕ್ಕೆ ಅವಶ್ಯವಾಗಿ ಯಾರಾರನ್ನು ಬರಮಾಡಿಕೊಳ್ಳುವುದು ಎಂಬ ವಿಚಾರವನ್ನು ಕ್ರಮೇಣ ಮಾಡುವುದು.

ಹೀಗೆ ಹಳ್ಳಿಯ ಕನ್ನಡ ಶಾಲೆಯೊಂದರಲ್ಲಿ ಆರಂಭಗೊಂಡ ಗಣೇಶೋತ್ಸವವು ಹಬ್ಬವಾಗಿ, ಪರಮಹಂಸರ ಶತಮಾನೋತ್ಸವವಾಗಿ, ಶ್ರೀ ಅರವಿಂದ ಗ್ರಂಥಮಾಲೆಯಾಗಿ ಬೇರ್ಪಡುತ್ತ, ಮಾರ್ಪಡುತ್ತ ಬಂದುದರ ಸಮೀಕ್ಷೆಯನ್ನು ಸ್ವಲ್ಪದರಲ್ಲಿ ಮಾಡಿಕೊಡಲಾಯಿತು.

೩೧. ಉತ್ಸವ ಸಮಾರಂಭ

ವಾರದ ಹಿಂದೆಯೇ ನಮ್ಮ ಉತ್ಸವ ಸಮಾರಂಭವನ್ನು ವಿವರಿಸುವ ಪ್ರಕಟನಾ ಪತ್ರಿಕೆಗಳು ಎಲ್ಲ ಕಡೆಗೂ ಹೋಗಿದ್ದವು. ಗೊತ್ತು ಮಾಡಿದ ದಿನ ಸಂಜೆಯಾಗುವಷ್ಟರಲ್ಲಿ ಅತಿಥಿಗಳೆಲ್ಲ ಬರತೊಡಗಿದರು.

ಅಷ್ಟು ದೂರದಿಂದ ಶ್ರೀ ಶಿವರಾಮಕಾರಂತರು ಬಂದರು. ಇತ್ತ ಸೊನ್ನಲಿಗೆಯಿಂದ ಬೇಂದ್ರೆ ಅವರು ಬಂದರು. ವಿಜಾಪುರದಿಂದ ಶ್ರೀ ಅಕ್ಕಿ, ಪದ್ಮರಾಜ ಹುನಗುಂದ, ಗಜೇಂದ್ರಗಡ, ರೇವಣ್ಣಸಿದ್ದಪ್ಪಣ್ಣ ಬಂದರು, ಚಡಚಣ-ಲೋಣಿ ಸಾಲೊಟಗಿಗಳಿಂದ ಸ್ನೇಹಿತರೆಲ್ಲ ಬಂದರು.

ಶ್ರೀ ಕಾರಂತರು ವಿಶ್ರಾಂತಿಯನ್ನು ಅಪೇಕ್ಷಿಸದೆ, ನಮ್ಮ ಮನೆಯ ಪಡಸಾಲೆಯಲ್ಲಿ ತಮ್ಮ ನೃತ್ಯದ ಹೊಸ ಪ್ರಯೋಗಗಳನ್ನು ಕುಣಿದು ತೋರಿಸಿದರು. ಸಭಾಮಂಟಪದ ಮುಂದೆ ಕಿಕ್ಕಿರಿದ ಜನ ನೋಡಿ ಹರ್ಷಪಟ್ಟರು. ಕಾರಂತರು ತಾವೇ ಹೊಸದಾಗಿ ಬರೆದ "ನಾಟಕವೆಂಬ ನಾಟಕ"ವನ್ನು ಅಭಿನಯದೊಡನೆ ಓದಿ ತೋರಿಸಿದರು.

ಸಾರ್ವಜನಿಕರಿಗೆ ಮಂಗಳೂರು ಕನ್ನಡ ಮತ್ತು ಕಾರಂತರ ಮಾತಿನ ಶೈಲಿಗಳ ಅರ್ಥ ತಿಳಿಯಿತೇನೋ, ಕೇಳಿದವರೆಲ್ಲ ಆನಂದತುಂದಿಲರಾದರು. ನಮ್ಮ ಗ್ರಂಥಮಾಲೆಯ ಮೊದಲ ಪುಸ್ತಕವಾದ "ನಂದನವನ"ದ ಮುದ್ರಿತ ಪ್ರತಿಗಳು ಬಂದಿದ್ದವು. ಅದರ ಪ್ರಕಟನಾ ಕಾರ್ಯ ನಡೆಯಿತು.

ಶ್ರೀ ಬೇಂದ್ರೆ ಮತ್ತು ಕಾರಂತರು, ಪರಮಹಂಸರನ್ನು ಕುರಿತು ಭಾಷಣ ಮಾಡಿ ಜನಜಂಗುಳಿಯ ಚಿತ್ತವನ್ನು ಸ್ಥಿಮಿತಗೊಳಿಸಿದರು.

ಆ ಬಳಿಕ ಅತಿಥಿಗಳ ಊಟ ಮುಗಿಯುವ ಹೊತ್ತಿಗೆ ನಾಟಕ ಪಾತ್ರಗಳ ಸಿದ್ಧತೆ ಆಯಿತು. ಪಾತ್ರ ಸಿದ್ಧತೆಗೆ ಬೇಕಾದ ವೇಷಭೂಷಣಗಳನ್ನು ಭತಗುಣಕಿಯಿಂದ ಬಂದ ಹಾಗೂ ಪುಣೆಯಲ್ಲಿ ವಾಸಿಸುತ್ತಿದ್ದ ಶ್ರೀ ಅಪಟೆ ಎಂಬ ತರುಣರು ಒದಗಿಸಿದರು.

ಪಾತ್ರ ಪರಿಚಯದ ವಿವರವನ್ನು ಸಾರ್ವಜನಿಕರಿಗೆ ಮುಂಚೆಯೇ ಕೇಳಿಸಲಾಯಿತು.

ಪರಮಹಂಸರ ವೇಷದಲ್ಲಿ ಚೆನ್ನಮಲ್ಲಪ್ಪ, ವಿವೇಕಾನಂದರ ತದ್ರೂಪ ವೆನ್ನುವಂತೆ ಸಿಂಪಿ ಲಿಂಗಣ್ಣ, ಪರಮಹಂಸರ ಅಳಿಯನಾಗಿ ಕಾಪಸೆ ರೇವಪ್ಪ, ಶಾರದಾಮಣಿದೇವಿಯಾಗಿ ಸರಸಂಬಿ ಚೆನ್ನಪ್ಪ, ಪರಮಹಂಸರಿಗೆ ಅದ್ವೈತ ಸಾಧನೆ ಕಲಿಸಿದ ಗುರುಗಳಾಗಿ ಬಂಡೋರಾಮ ಪ್ರೇಕ್ಷಕರ ಮುಂದೆ ಹಾದುಹೋದರು.

ಆರಂಭದಲ್ಲಿ ಸೂಕ್ತ ಪ್ರಾರ್ಥನೆ ಮುಗಿಯಿತು.

ಕೂಗು ಕೂಗು ಮನವೇ। ಮಾತೆಯ
ಕೂಗುವ ರೀತಿಯಲಿ ॥

ಎಂದು ಹಾಡುತ್ತ ಭವತಾರಿಣಿ ದೇವಿಯ ಮುಂದೆ ಕುಳಿತ ಪರಮಹಂಸರು ಕಾಣಿಸಿಕೊಂಡರು.

ಭವತಾರಿಣಿಯ ವೇಷದಲ್ಲಿ ಸಿಂಪಿಲಿಂಗಣ್ಣ ಅದ್ಭುತವಾಗಿ ತೋರಿದರು. ಸರ್ವಸಾಕ್ಷಾತ್ಕಾರಿಯ ವಿವಿಧ ಸಾಧನೆಗಳೆಲ್ಲ ಕ್ರಮವಾಗಿ ರಂಗದ ಮೇಲೆ ಹಾದುಹೋದವು.

ನಾಟಕ ನಡೆದದ್ದು ಸುಮಾರು ೨ ತಾಸು ಮಾತ್ರ. ಆದರೆ ನೂರು ವರ್ಷಗಳ ಹಿಂದಿನ ಕಥೆಯೆಲ್ಲ ಸಾರ್ವಜನಿಕರ ಕಣ್ಣ ಮುಂದೆ ಸುಳಿದವು.

ವಿವೇಕಾನಂದ ಸ್ವಾಮಿಗಳ ಭಾಷಣವು ಅಷ್ಟೇ ಅದ್ದೂರಿಯಿಂದ ಸಾರ್ವಜನಿಕರಿಗೆ ಕೇಳಸಿಕ್ಕಿತು. ಸರ್ವಧರ್ಮ ಸಮನ್ವಯದ ತತ್ವವನ್ನು

ಇಡಿಯ ಜಗತ್ತೇ ಒಪ್ಪಿಕೊಂಡಿತು. ಪಡುವಣದವರ ಮುಖದಿಂದ - ಮುಂದೇನು ಎಂದು ಕೇಳಿಸಲಾಯಿತು. ಸರ್ವಧರ್ಮ ಸಮನ್ವಯದಿಂದ ತರುವಾಯ, ಸರ್ವಯೋಗ ಸಮನ್ವಯದ ಮನ್ವಂತರಕ್ಕೆ ಕಾರಣರಾದ ಶ್ರೀ ಅರವಿಂದ ಸಾಧನೆ ಸೂಚುಗೊಂಡಿತು.

ವಾಡಿಕೆಯಂತೆ ನಾಟಕ ಮುಗಿದ ಮೇಲೆ ವಿನೋದಾವಳಿಯನ್ನು ತೋರ್ಪಡಿಸುವ ಸಂದರ್ಭವನ್ನು ಕಳಕೊಳ್ಳಲಿಲ್ಲ.

ನಾಟಕ ಮುಗಿಯಿತು. ತಿಂಗಳುಗಟ್ಟಲೆ ಓದಿ ತಿಳಕೊಂಡರೂ ತೀರದ ವಿಷಯವನ್ನೆಲ್ಲ ೨ ತಾಸಿನ ನಾಟಕದಿಂದ ನೆರೆದವರು ತಿಳಕೊಂಡು ಧನ್ಯರಾದರು. ನಿನ್ನ ವಸ್ತುವಂ ನೋಡು। ಮಮತೆಯ ಮಾಡು। ಸಲೆಕಾಪಾಡು ಗೆಳೆಯಾ ಎಂಬ ಹಾಡು ನೆನಪಿಟ್ಟುಗೊಂಡ ಜನರು ಧನ್ಯಧನ್ಯವೆನ್ನುತ್ತ ತಂತಮ್ಮ ಮನೆಗೆ ತೆರಳಿದರು.

೩೨. ಪರಿಹಾಸದ ಪರಿಸರ

ನಾಡಹಬ್ಬದಲ್ಲಿ ಆಡಿದ ಏಕಾಂಕ ನಾಟಕ ಮುಗಿದ ಬಳಿಕ ಸಹ ಪ್ರೇಕ್ಷಕರು ಎದ್ದು ಹೋಗುತ್ತಿರಲಿಲ್ಲ. ಇನ್ನೂ ಏನೋ ತೋರಿಸುತ್ತಾರೆಂದು ಗಟ್ಟಿಯಾಗಿ ಕುಳಿತು ಬಿಡುತ್ತಿದ್ದರು ಸಾವಿರಾರು ಜನರು. ನಾಟಕ ಮುಗಿದ ಬಳಿಕ ತಾಸರ್ಧ ತಾಸು ವಿವಿಧ ವಿನೋದಗಳನ್ನು ಆಡಿ, ನಟಿಸಿ, ಕುಣಿದು ತೋರಿಸುತ್ತಿದ್ದೆವು. ಅದರಲ್ಲಿ ಅಗ್ರಗಣ್ಯರೆಂದರೆ ನಾವೇ ಮೂರು ಮಂದಿ, ಹೆಸರು ಹೇಳುವ ಕಾರಣವೇ ಇಲ್ಲ.

ಮೊದಲಿಗಾಗಿ ಇಲ್ಲಿ ೨-೩ ಪ್ರಹಸನಗಳನ್ನು ಕುರಿತು ಹೇಳಿದರೆ ಸಾಕೆನಿಸುತ್ತದೆ -

"ತಿರುಕರ ಪಿಡುಗು" ನಾಟಕವನ್ನು ರಚಿಸಿದ ಬೇಂದ್ರೆಯವರು, ಹತ್ತೆಂಟು ಜನ ತಿರುಪೆಯವರನ್ನು ಮಾತ್ರ ರಂಗಭೂಮಿಯ ಮೇಲೆ ತರುತ್ತಾರೆ. ಆದರೆ ನಾವು ನಾಟಕಕಾರರಲ್ಲ; ನಟರು. ಲೆಕ್ಕವಿಲ್ಲದಷ್ಟು ತಿರುಪೆಯವರನ್ನು ವಿವಿಧ ವೇಷಗಳಲ್ಲಿ ರಂಗಭೂಮಿಯ ಮೇಲೆ ತರುತ್ತಿದ್ದೆವು ಅಥವಾ ಸಂದರ್ಭಕ್ಕೆ ತಕ್ಕ ವೇಷದಲ್ಲಿ ನಾವೇ ಬರುತ್ತಿದ್ದೆವು-

ಒಬ್ಬ ಆಚಾರಿ, ಹೊಳೆಯಲ್ಲಿ ಸ್ನಾನ ಮಾಡಿ ಮಡಿಯುಟ್ಟು, ಕೈಯಲ್ಲಿ ನೀರಿನ ಗಿಂಡಿ ಹಿಡಿದು - "ಥಾಕೀರಂಡೇ ಗಂಡಾ ಥಾಕೀ" ಅನ್ನುತ್ತ ಟುಣಪುಣನೇ ಹಾರುತ್ತ ಗಿಂಡಿಯ ನೀರನ್ನು ಕೈಯಲ್ಲಿ ತೆಗೆದುಕೊಂಡು ಸಿಂಪಡಿಸುತ್ತ ಸಾಗಿದ್ದನು. ಇಲ್ಲಿ ಆಚಾರಿಯ ಪಾತ್ರದಲ್ಲಿದ್ದವರು ಚೆನ್ನಮಲ್ಲಪ್ಪ.

೩೦. ಧರ್ಮಸಮನ್ವಯದಿಂದ ಯೋಗಸಮನ್ವಯದತ್ತ

ಮಧುರಚೆನ್ನರಿಗೆ ಒಪ್ಪಿಸಿದ ಕೆಲಸವನ್ನು ಸುಗುಮವಾಗಿ ಮಾಡಿಸಿ ಕೊಳ್ಳುವವರು ಯಾರು ಎಂದು ಹೇಳುವ ಕಾರಣವೇ ಇಲ್ಲ. ಕಾಪಸೆ ರೇವಪ್ಪನವರೇ ಅದಕ್ಕೆ ಸಮರ್ಥರು; ಹಾಗೂ ಅರ್ಹರು. ಆ ಹೊಣೆ ಹೊತ್ತುದೇ ತಡ, ಕಾಪಸೆಯವರು ಮುಂದಿನ ಎತ್ತಗಡೆ ನಡೆಸಿದರು.

ಸುರಮ್ಯವಾದ ಬನ, ನಿಬಿಡವಾದ ನೆರಳು, ಗಲಿವಿಲಿಯಿಲ್ಲದ ಪರಿಸರ ಇವು ಮೊದಲು ಬೇಕು. ಚೆನ್ನಮಲ್ಲಪ್ಪನವರ ಮೋಟ ಮಡುವಿನ ಬದಿಗಿರುವ ಮಾವಿನ ತೋಪಿನಲ್ಲಿ ಒಂದು ಸ್ಥಳವನ್ನು ಆಯ್ಕೆಮಾಡಿಕೊಂಡು, ದಟ್ಟ ನೆರಳು ಬೀಳುವಂತೆ ಒಂದು ಡೇರೆ ಹೊಡೆಸಿದರು. ಒಂದು ಭಾಗದಲ್ಲಿ ಆರಾಂಕುರ್ಚಿ ಮತ್ತು ಮುಂದೆ ಒಂದು ಚಿಕ್ಕ ಮೇಜು, ಅದರ ಮೇಲೆ ಸುಳುಹು ಹೊಳಹಿನ ಹೊಸ ಅರಿವೆ ಹರಹಿದೆ. ಒಳ್ಳೇ ದಪ್ಪ ಕಾಗದಗಳಿಂದ ಸಿದ್ಧವಾದ ನೋಟಬುಕ್ಕು, ಚೂಪಾಗಿ ಕೆತ್ತಿಟ್ಟ ಹೆಚ್.ಬಿ. ಸೀಸ ಪೆನಸೀಲು, ಇವೆಲ್ಲ ಒಂದು ಮಗ್ಗುಲಿನ ಸಿದ್ಧತೆಯಾದವು.

ಉಪಹಾರಕ್ಕೆ ಒಳ್ಳೆಯ ಉಪ್ಪಿಟ್ಟು, ತಾಜಾತುಪ್ಪದ ಒಗ್ಗರಣೆ ಅದಕ್ಕಿರ ಬೇಕು. ಉಪಹಾರದ ತಟ್ಟೆಯಲ್ಲಿ ಸ್ವಚ್ಛವಾದ ಚಮಚೆ, ಬದಿಗೆ ಒಂದೋ ಎರಡೋ ನಿಂಬಿಯ ಹೋಳು, ಅದನ್ನು ಅಂದು ಮುಗಿಸುವಷ್ಟರಲ್ಲಿ ಗಟ್ಟಿಯಾದ ಹಾಲಿನಲ್ಲಿ ಸಿದ್ಧಗೊಳಿಸಿದ ಕಾಫಿ ದೊಡ್ಡ ಕಪ್ಪಿನಲ್ಲಿ ಒದಗಿಸಬೇಕು ನೀರಿನ ತಂಬಿಗೆ ಬಟ್ಟಲುಗಳಿಗೆ ಹೇಳಿ ಮಾಡಿಸಿದಂಥ ಬಣ್ಣವಿರಬೇಕು.

ಉಪಹಾರದ ಕಾರ್ಯಕ್ರಮ ಮುಗಿಸಿ, ಕೈಯಲ್ಲಿ ನೋಟಬುಕ್ಕು ಹಿಡಿಯುವ ಹೊತ್ತಿಗೆ, ಕಾಪಸೆ ಬೇರೊಂದು ಮರದ ಕೆಳಗೆ ಹೋಗಿ ಯಾವುದೋ ಪುಸ್ತಕವನ್ನು ಓದುತ್ತ ಕುಳಿತುಕೊಳ್ಳುವನು.

ಹೊತ್ತು ಏರಿ ಹನ್ನೊಂದು ಹನ್ನೊಂದುವರಿ ಆಗುವ ಹೊತ್ತಿಗೆ ಮನೆಯಿಂದ ಬುತ್ತಿ ಬರುವದು. ಆ ಕೆಲಸ ಮುಗಿಸದಿದ್ದರೆ ಅದು ಆರಿ ತಣ್ಣಗಾಗುವದೆಂದು ಲೇಖಕರು ಕೈತೊಳಕೊಂಡು ಊಟಕ್ಕೆ ಕುಳಿತರು. ಊಟವಾದ ಬಳಿಕ ತುಸು ವಿಶ್ರಾಂತಿ. ಆ ಬಳಿಕ ಲೇಖನ ಮುಂದುವರಿಯುವದು.

ಕಾಪಸೆ ಡೇರೆಯಲ್ಲಿ ಹೋಗಿ ಬೆಂಚಿನ ಮೇಲಿಟ್ಟ ನೋಟಬುಕ್ಕು ತೆಗೆದು ನೋಡಿದರೆ, ಓಂ ಶ್ರೀ ಓಂ ಎಂಬ ಮೂರೇ ಅಕ್ಷರಗಳು ಕಾಣಿಸಿದವು. ಅಂತು ಕಟ್ಟಳೆ ಮುಂದೆ ಬಿದ್ದಂತಾಯಿತು.

ಮರುದಿನವೂ ಸಿದ್ಧತೆಗಳೆಲ್ಲ ಪೂರ್ಣಗೊಂಡವು. ಕಾಫಿಯ ಬದಲು ಅಂದು ಚಹ ಪಾನವಾಯಿತು. ನೋಟಬುಕ್ಕು ಹಿಡಿದು ಏನೋ ಬರೆಯಲು ಆರಂಭಿಸಿದಂತೆ ತೋರಿತು. ಸರಿಯಾಗಿ ನಿನ್ನೆ ಬಂದ ಹಾಗೆ ಇಂದೂ ಬುತ್ತಿ ಬಂತು, ಮನೆಯಿಂದ. ಅದನ್ನು ಆರಗೊಡಬಾರದಲ್ಲವೇ?

ಹೀಗೆ ೪-೫ ದಿನಗಳು ಗತಿಸಿದವು. ಲೇಖಕರು ನಾಟಕವನ್ನು ಬರೆಯಲಾರಂಭಿಸಿ ಒಂದು ಪುಟವನ್ನು ಸಹ ತುಂಬಿಸಲಿಲ್ಲ. ಅವರಿಗೂ ತಿಳಿಯಿತು ಕಾಪಸೆ ಇನ್ನೂ ಮೇಲೆ ಬಯ್ಯದೆ ಇರಲಾರನೆಂದು. ಬಯ್ದರೆ ಬಯ್ಯಲಿ, ನಾಳೆಯಾದರೂ ಕೆಲಸ ಆರಂಭವಾದರೆ ಸಾಕು.

ನಾಳೆಯೂ ಆಗಲಿಲ್ಲ.

ದೂರದಲ್ಲಿ ಕುಳಿತ ಕಾಪಸೆಯವರನ್ನು ಕೈಸೂಚು ಮಾಡಿ ಹತ್ತಿರ ಕರೆದರು. ಕೆಲಸ ಯಶಸ್ವಿಯಾಯಿತೆಂದು ಅವನು ಆನಂದದಿಂದ ಜಿಗಿಯುತ್ತ ಬಂದರು. ಆಗ ಲೇಖಕರು ಹೇಳತೊಡಗಿದರು.

“ನಾವು ಸಂಪೂರ್ಣ ತಪ್ಪು ಮಾಡಿದೆವು”

"ಬರೆಯುವ ಹೊಣೆ ನಾನು ಹೊರಲೇಬಾರದಿತ್ತೇನೋ, ಏಕೆಂದರೆ, ನಾಟಕ ಬರೆಯಬಲ್ಲ ಲಿಂಗಣ್ಣನಿರುವಾಗ ನಾನು ಕಾರಭಾರ ಮಾಡಬಾರದಿತ್ತು. ೪-೬ ದಿನಗಳ ಸತತ ಪರಿಶ್ರಮದಿಂದ ಇಷ್ಟಾದರೂ ತಿಳಿಯಿತು. ಇದೋ ಈ ನೋಟಬುಕ್ಕು, ಲಿಂಗಣ್ಣನಿಗೆ ಒಪ್ಪಿಸು, ಒಂದರೆಡು ವಾರಗಳಲ್ಲಿ ಬರೆದು ಮುಗಿಸಲಿ."

ಆದೇಶದಂತೆ ತಂಬು-ಗಿಂಬು ಕಿತ್ತಿ ಮನೆಗೆ ಕಳಿಸಲಾಯಿತು. ಗಾಡಿ ತರಿಸಿ ಅದರಲ್ಲಿ ಕುಳಿತು, ಬಿಸಿಲಾಗುವಷ್ಟರಲ್ಲಿ ಮನೆ ಸೇರಿರೆಂದು ಚೆನ್ನಮಲ್ಲಪ್ಪನವರಿಗೆ ಹೇಳಲಾಯಿತು.

"ಊರು ಸಾಕಾಗಿತ್ತು, ಗೌಡನೂ ಬೇಡವೆಂದಂತಾಯಿತು" ಎಂದು ನಕ್ಕು ಚೆನ್ನಮಲ್ಲಪ್ಪ ಗಾಡಿ ಹತ್ತಿದರು.

ಮನೆಗೆ ತೆರಳಿದ ಬಳಿಕ ಲೇಖಕರು ಹಾಸಿಗೆ ಹಾಕಿ ಮಲಗಿಕೊಂಡರು ೨ ದಿನ ಏಳಲೇ ಇಲ್ಲವೆಂದು ನಮಗೆಲ್ಲ ಹಿಂದಿನಿಂದ ತಿಳಿಯಿತು.

ನಾನು, ಅದೇ ಮುಂಜಾವಿನ ಶಾಲೆ ಬಿಟ್ಟು ಮನೆಗೆ ಬಂದಿದ್ದೆನು. ನನ್ನ ಬೆನ್ನ ಹಿಂದೆಯೇ ರೇವಪ್ಪನು ಅವಸರದಿಂದ ಬಂದು -

"ಇಗೋ ನಿನ್ನ ನಾಟಕ ಪುಸ್ತಕ" ಎಂದು ನುಡಿದು ನೋಟಬುಕ್ಕನ್ನು ನನ್ನ ಕೈಗಿತ್ತನು... ನೋಡಿದೆ, ನೋಡಿಯೇ ನೋಡಿದೆ ಏನೂ ಇರಲಿಲ್ಲ ಅದರಲ್ಲಿ.

"ಬರೆದರೆ ಇದ್ದೀತಲ್ಲ!" ಎಂದನು ರೇವಪ್ಪ.

"ಮುಂದಿನ ದಾರಿ?"

"ಅದನ್ನು ನೀವೇ ನಿರ್ಧರಿಸಬೇಕು"

"ಮೊದಲು ನಿರ್ಧರಿಸಿದ್ದು ಸುಳ್ಳಾಯಿತೇ?"

"ಮೊದಲ ದಿನವೇ ಗೊತ್ತಾಯಿತು. ಆ ನಿರ್ಧಾರ ಸುಳ್ಳಾಗುವುದೆಂದು ಆದರೆ ಅದು ಪ್ರಕಟವಾಗಲು ಮತ್ತೆ ೪ ದಿನ ಕಳೆದವು."

"ಚೆನ್ನಮಲ್ಲಪ್ಪನವರ ವಾಸ್ತವ್ಯ ತೋಟದಲ್ಲಿಯೇ ಅಲ್ಲವೇ?"

"ಆ ವಾಸ್ತವ್ಯವನ್ನು ನಿನ್ನೆಯೇ ಮುಗಿಸಿ, ನೇರವಾಗಿ ಮನೆಗೆ ಬಂದು ಹಾಸಿಗೆ ಹಾಸಿ ಮಲಗಿಕೊಂಡಿದ್ದಾರೆ"

"ಪಾಪ! ಅಡವಿಯ ಹವೆ ತಡೆಯಲಿಲ್ಲವೇನೋ"

"ಅವರಿಗೆ ಅಡವಿಯ ಹವೆ ತಡೆಯಲಿಲ್ಲ. ನಿಮಗೆ ಊರ ಹವೆಯಾದರೂ ತಡೆಯುವದೋ ಇಲ್ಲವೋ! ನೋಡಿಕೋ, ಯಾಕಂದರೆ ನಾಟಕ ಬರೆಯುವ ಕೆಲಸ ನಿನಗೆ ಒಪ್ಪಿಸಲಾಗಿದೆ, ನೀನಾದರೂ ಆಸ್ಥೆ ವಹಿಸಿ ೨ ವಾರಗಳಲ್ಲಿ ಮುಗಿಸಿಕೊಂಡು."

"ಬದಲಾವಣೆ ಏಕಾಯಿತು?" ಎಂದು ಕೇಳಿದೆನಾನು.

"ಅದನ್ನು ನಿಮಗೆ ಹಿಂದಿನಿಂದ ತಿಳಿಸುವೆ" ಎಂದವನೇ ತಮ್ಮ ಮನೆಗೆ ತೆರಳಿದನು.

ಪಡಸಾಲೆಯಲ್ಲಿ ಮಗಳು ಭುವನೇಶ್ವರಿ ಆಡುತ್ತಿದ್ದಳು, ಗೊಂಬೆಯನ್ನು ಇಟ್ಟುಕೊಂಡು -

ನನ್ನ ಕೂಸು ಮಾಯದ ಗಿಣಿಯೇ

ಕಯ್ಯಾಗ ಬಂಗಾರ ಚಿಣಿಯೇ

ಎಲ್ಲಾಡಿ ಬಂದೆ ಅರಗಿಣಿಯೇ

ನನ್ನ ಕೂಸು ಮಾಯದ ಗಿಣಿಯೇ॥

ಹಸಿದ ಕಾಲಕ್ಕೆ ಹಾಡಿಗಿಂತ ರೊಟ್ಟಿಯ ರುಚಿಯೇ ಹೆಚ್ಚಿನದಲ್ಲವೇ? ಆದ್ದರಿಂದ ಅವಸರದಿಂದ ಕೈಕಾಲು ತೊಳಕೊಂಡು ವಾಡಿಕೆಯಂತೆ ಊಟಕ್ಕೆ ಕುಳಿತೆನು. ಆಟ ಮುಗಿಸಿ ಅಥವಾ ನಿಲ್ಲಿಸಿ ಭುವನೇಶ್ವರಿ ನನ್ನ ಬಳಿಗೆ ಊಟಕ್ಕೆ ಬಂದಳು.

ಊಟ ಮುಗಿಸಿ ಏಳುವಷ್ಟರಲ್ಲಿ ಟಪಾಲು ಬಂದಿತ್ತು. ಪತ್ರ, ಪತ್ರಿಕೆ ನೋಡುತ್ತ ಕ್ಷಣ ಹೊತ್ತು ಅಡ್ಡಾದೆನು, ನಿದ್ರೆ ಹತ್ತಿಬಿಟ್ಟಿತು. ಮಧ್ಯಾಹ್ನ ಶಾಲೆ ೨ ಗಂಟೆಯ ತರುವಾಯ, ಆವರೆಗೆ ನಿಶ್ಚಿಂತೆಯಿಂದ ನಿದ್ದೆ ಮಾಡುವುದು ದೈನಂದಿನ ಕೆಲಸವೇ ಆಗಿತ್ತು.

ಆ ಸಂದರ್ಭದಲ್ಲಿ ಸುಳ್ಳುಗಾರನೆಂಬ ಅನ್ವರ್ಥಕನಾಮ ಗಳಿಸಿದ ಗುರುನಾಥನು ರಂಗದ ಮೇಲೆ ಬಂದು ಕೈಮುಗಿದು - "ನಾನು ಎರಡೇ ಮಾತು ಹೇಳಬೇಕೆಂದು ಬಂದಿದ್ದೇನೆ" ಅನ್ನುತ್ತಲೇ

"ಯಾರು ಕರೆದರು ನಿಮ್ಮನ್ನು ಸುಳ್ಳಿನ ಮುದ್ದೆ" ಎಂದು ಜನಸ್ತೋಮದಿಂದ ಸಾಮೂಹಿಕ ದನಿಯೊಂದು ಕೇಳಿಸಿತು.

"ಬೇಸರಾಗುವಷ್ಟರಲ್ಲಿ ಮುಗಿಸುತ್ತೇನೆ. ನಾನು ಹೇಳುವುದು ಒಂದು ಸಣ್ಣ ಕಥೆ"

"ನಿನ್ನ ಕಥೆ ಬೇಡ, ನಿನ್ನ ವ್ಯಥೆ ಬೇಡ, ಹೇಳಿ ಕೇಳಿ ಆ ಕಥೆ ಹಳಸಿ ನಾರುವಂತೆ ಮಾಡಿದ್ದೀರಿ, ನಾಳಿಗೆ ಹೇಳುವಿರಂತೆ, ಯಾರೂ ಇಲ್ಲದಾಗ" ಇದು ಸಾರ್ವಜನಿಕರ ನಿಲುಮೆ.

"ನಾಳೆ ಅಂದರೆ ಹಾಳು"

"ಈ ಹಾಳು ರಗಳೆ ಸಾಕು, ಒಂದು ಹಾಡಿರಿ ಕೇಳುತ್ತೇವೆ" ಇದು ಪ್ರತಿಕ್ರಿಯೆ.

ಅಷ್ಟರಲ್ಲಿ ಬಣ್ಣದ ಕೋಣೆಯಿಂದ ಒಬ್ಬ ಮರಿಕವಿ ಹೊರಬಿದ್ದು, "ಅ-ಅ-ಅ" ಅನ್ನುತ್ತ ಹಾಡುವಂತೆ ಕಾಣಿಸಿತು. ಬಂದು ನಿಂತವ ಹೊಸಬ, ಹೇಳುವ ವಿಷಯ ಹೊಸದು ನಗಿಸುವ ರೀತಿ ಹೊಸದಾಗುವಂತಿದ್ದರೆ, ಆಗಲೆಂದಿತು ಸಾರ್ವತ್ರಿಕ ಜನತೆ.

ನಮಗ ಕನ್ನಡ ಬರೂದಿಲ್ಲ
ನಿಮಗ ತುರ್ಕ ತಿಳೂದಿಲ್ಲ॥
ಎತ್ತೀಗಿ ಅಂತಾರಬೈಲ
ಅಗ್ಗಿನ ಗಾಡೀಗ ಅಂತಾರ ರೈಲ॥
ಬಂದೀಖಾನೀಗಿ ಅಂತಾರ ಜೈಲ॥
ನಮಗ ಕನ್ನಡ ಬರೂದಿಲ್ಲ
ನಮಗ ತುರಕ ತಿಳೊದಿಲ್ಲ

ಅತ್ತೀ ಮನಿಗೆ ಹೋಗಿದ್ದೆ
ಅಚ್ಚೇರಕ್ಕಿ ತಂದಿದ್ದೆ
ಅಕ್ಕ್ಯಾಗೊಂದು ಕಲ್ಲಿತ್ತು
ಬಾಯಾನಹಲ್ಲು ಕಟಕ್ಕಂತು
ಟೊಂಕಿನುಡದಾರಫಟಕ್ಕಂತು
ಧಡೀಧೋತರಾ ಜಮಖಂಡಿ
ಸಮುದರದಾಗಿನ ಬೆಳಕಿಂಡಿ
ಕೆಂಪನಪೋರಿಗಿ ಮಾಡಿಕೊಂಡಿ
ಕೊಳಲಾನ ಚೌಕಾಕಳಕೊಂಡಿ

ಹೀಗೆ ತಡ ಮಾಡುತ್ತ ಸಾರ್ವಜನಿಕರಿಗೆ ಪುಸಲತ್ತು ಕೊಡುವುದರಿಂದ ನಮ್ಮ ಉದ್ದೇಶಕ್ಕೆ ಭಂಗ ಬರುವುದೆಂದು ಮೂವರು ಹಾಡುತ ಮುಂದೆ ಬಂದರು, ಸಾಮೂಹಿಕ ಗಾನದಲ್ಲಿ.

ಏಳಿರಿ ಏಳಿರಿ ಬಲುಬೇಗ। ಬೆಳಗಾಗಿದೆ ಏಳಿರಿ ಬಲು ಬೇಗ।
ಏಳಿರಿ ಕಳೆಯುತ ನಿಮ್ಮ ಭೋಗ। ಬಲುಯೋಗದ ಹರಿ ಬಂದಿಹನೀಗ॥

ಆ ಹಾಡು ಕೇಳಿ, ಎಚ್ಚರಿದ್ದವರಿಗೆ ಸಮಾಧಾನವಾಯಿತು, ಜಂಪು ಹತ್ತಿದವರಿಗೆ ಗಾಬರಿ ಆಯಿತು. ಅದು ರಾಜರತ್ನಂ ಅವರು ಬರೆದ "ಕಂಬಳಿಸೇವೆ" ಎಂಬ ನಗೆಯ ಏಕಾಂಕಮಾಡಿ ಅದಕ್ಕಾಗಿ ಹಂಬಲಿಸುವವರನ್ನು ತಣಿಸಲಾಯಿತು.

೩೩. ಗ್ರಂಥಮಾಲೆಯ ನಿರ್ವಹಣೆ

ಶ್ರೀರಾಮಕೃಷ್ಣ ಪರಮಹಂಸರ ಶತಮಾನೋತ್ಸವವು ನಮ್ಮ ಬಾಳಿಗೆ ಹೊಸ ತಿರುವು ಕೊಟ್ಟಂತಾಯಿತು. ಪರಮಹಂಸರ ಮತ್ತು ವಿವೇಕಾನಂದ ಸ್ವಾಮಿಗಳ ವಿಚಾರ ಸಾಂಗತ್ಯದಿಂದ ಸರ್ವಧರ್ಮ ಸಮನ್ವಯ ತತ್ತ್ವವನ್ನು ಮೈಗೂಡಿಸಿಕೊಂಡ ಬಳಿಕ, ಸರ್ವಯೋಗ ಸಮನ್ವಯ ಸಾಧನವು ಕ್ರಮ ಪ್ರಾಪ್ತವಾಯಿತು. ಶತಮಾನೋತ್ಸವ ಕಾಲಕ್ಕೆ ಅದರ ಬೀಜಾರೋಹಣ ಮಾಡಿದಂತಾಯಿತು. ಶ್ರೀ ಅರವಿಂದರನ್ನು ಕುರಿತ ವಿಚಾರ ಕೃಷಿಯು ಮೊದಲಿಗೂ ನಡೆದೇ ಇತ್ತು. ಈಗ ಬೀಜಾಂಕುರವು ಕಾಣಿಸಿಕೊಂಡಿತು ಅದೇ "ನಂದನವನ" ಎಂಬ ಸಣ್ಣಕತೆಗಳ ಸಂಕಲನ.

ನಮ್ಮ ಮಾಲೆಯ ಹೆಸರು ಶ್ರೀ ಅರವಿಂದ ಗ್ರಂಥಮಾಲೆ. ಹಲಸಂಗಿಯೇ ಅದರ ಪ್ರಕಾಶನ ಸ್ಥಳ, ವರ್ಷಕ್ಕೆ ಆರು ಪುಸ್ತಕಗಳು ಎರಡು ತಿಂಗಳಿಗೊಂದರಂತೆ ಹೊರಡಬೇಕಲ್ಲದೆ, ವರ್ಷಾಂತ್ಯಕ್ಕೆ ಒಂದು ಬಹುಮಾನದ ಪುಸ್ತಕ. ವರ್ಷದ ೭ ಪುಸ್ತಕಗಳಿಗೆ ವಾರ್ಷಿಕ ಚಂದಾ ೩ ರೂ. ಮಾತ್ರ, ಅದೂ ಅಂಚೆ ವೆಚ್ಚ ಸೇರಿ. ಸಂಪಾದಕರು ಚೆನ್ನಮಲ್ಲಪ್ಪ ಗಲಗಲಿ ಅರ್ಥಾತ್ ಮಧುರಚೆನ್ನ. ಕಾಪಸೆ ರೇವಪ್ಪನವರು ಅದರ ಮುಖ್ಯ ನಿರ್ವಾಹಕರು. ನಾನು ಅವರ ಸಹಾಯಕ. ಗ್ರಾಹಕರನ್ನು ಕೂಡಿಸುವ ಕೆಲಸದೊಡನೆ, ಮುಂದಿನ ಪುಸ್ತಕದ ಸಿದ್ಧತೆ, ಮುದ್ರಣ, ಗ್ರಾಹಕರಿಗೆ ಕಳಿಸುವುದು ಮೊದಲಾದ ಕೆಲಸ ನೋಡಿಕೊಳ್ಳಬೇಕು. ಕಾಪಸೆ ಅವರಿಗೆ ಒಂದಿಷ್ಟು ಮಾಸಾಶನ, ಚೆನ್ನಮಲ್ಲಪ್ಪ ನವರು ಅಶಕ್ತರು, ಕುಳಿತಲ್ಲಿಂದಲೇ ಸಾಧ್ಯವಾದ ನೆರವನ್ನು ಒದಗಿಸುವವರು. ಪಿ. ಧೂಲಾ ಸಾಹೇಬರು ಕಾದಿಟ್ಟ ಶಕ್ತಿ. ನಾನು ಶಾಲೆಯ ಶಿಕ್ಷಕ. ಸೂಟಿಯ

ಕಾಲದಲ್ಲಿ ಅಥವಾ ರಜೆ ಪಡೆದು ಚಂದಾದಾರರನ್ನು ಕೂಡಿಸುವುದಕ್ಕೆ ಆಡಿಯಾಡಬೇಕು.

ವಿಜಯನಗರ ಸಾಮ್ರಾಜ್ಯದ ೬ನೇ ಶತಮಾನೋತ್ಸವ ಕಾಲದಲ್ಲಿ "ಕನ್ನಡ ಕುಲಗುರು ವಿದ್ಯಾರಣ್ಯ" ಎಂಬ ಚಿಕ್ಕ ಪುಸ್ತಕ ಹೊರಡಿಸಿ, ಗ್ರಾಹಕರಿಗೆ ಕೊಡಮಾಡುವುದರೊಂದಿಗೆ, ಇನ್ನೂರು ಪ್ರತಿಗಳನ್ನು ವಿಜಯನಗರ ಉತ್ಸವ ಕಾಲಕ್ಕೆ ಬಂದ ಪ್ರತಿಷ್ಠಿತರಿಗೆ ಆ ಪ್ರತಿಗಳನ್ನು ಹಂಚಿ ನಮ್ಮ ಅಲ್ಪ ಸೇವೆಯನ್ನು ಸಲ್ಲಿಸುವುದು.

ಆ ಚಿಕ್ಕ ಪುಸ್ತಕದ ಲೇಖಕರು ಚನ್ನಮಲ್ಲಪ್ಪ ಮತ್ತು ನಾನು-ಸಿಂಪಿ ಲಿಂಗಣ್ಣ, ವಿದ್ಯಾರಣ್ಯ ಸ್ವಾಮಿಗಳನ್ನು ಕುರಿತು ಬರೆದ ವಿವೇಚನಾ ಯುಕ್ತ ಲೇಖನವೇ ನನ್ನದು. ಅದನ್ನು ಒಂದು ವಿಶಿಷ್ಟ ಸಾಧನಾ ಪದ್ಧತಿಯಿಂದ ಬರೆದದ್ದುಂಟು. ನನ್ನ ಮುಂದಿನ ಬರವಣಿಗೆಯೂ ಅದೇ ಕ್ರಮದಿಂದ ಸಾಗಿ ಬಂದಿತೆಂದು ಹೇಳಬಹುದಾಗಿದೆ.

ಹಾ ಹಾ ಅನುವಷ್ಟರಲ್ಲಿ ಒಂದು ವರುಷ ಮುಗಿಯಿಸಿ ೨ನೇ ವರುಷದಲ್ಲಿ ಗ್ರಂಥಮಾಲೆ ಕಾಲಿಟ್ಟಿತು, ಮುದ್ರಣಕಾರ್ಯವನ್ನು ಧಾರವಾಡದ ಶ್ರೀ ಶೇ.ಗೋ. ಕುಲಕರ್ಣಿ ಅವರು ಬಹು ಅಚ್ಚುಕಟ್ಟಾಗಿ ಪೂರಯಿಸಿ ಕೊಡುತ್ತಿದ್ದರು.

ಎರಡು ವರುಷ ದಾಟುವಷ್ಟರಲ್ಲಿ ಗ್ರಂಥಮಾಲೆಯು ತನ್ನದೇ ಆದ ಮುದ್ರಣಾಲಯ ಮಾಡಿಕೊಳ್ಳುವುದು ಸಾಧ್ಯವಾಗುವುದೇನೋ ತಿಳಕೊಳ್ಳವಾ ಎಂದು ನಾನು ಮತ್ತು ಚೆನ್ನಮಲ್ಲಪ್ಪ ಪ್ರವಾಸ ಕೈಕೊಂಡೆವು. ವಿಜಾಪುರ ಅಥಣಿಗಳಲ್ಲಿ ಆ ಬಗ್ಗೆ ತುಸು ಚರ್ಚಿಸಿ ಬಳಿಕ ಬೆಳಗಾವಿಯತ್ತ ಸಾಗಿದೆವು. ಅಲ್ಲಿ ನಾವಿಬ್ಬರೂ ಶ್ರೀ ಅಡ್ಡಣಗಿ ಅವರ ಮನೆಯಲ್ಲಿ ಇಳಕೊಂಡೆವು. ಅಲ್ಲಿ ಅಮ್ಮಣಗಿ ದೇಸಾಯರಾದ ಶ್ರೀ ಶಂಕರಗೌಡಪಾಟೀಲರ ಭೆಟ್ಟಿ ಆಯಿತು. ಅವರೊಡನೆ ನಮ್ಮ ವಿಚಾರವನ್ನು ಕುರಿತು ವಿವೇಚಿಸಿದೆವು.

ಶ್ರೀ ಶಂಕರಗೌಡರು ದೊಡ್ಡ ಮನೆತನಕ್ಕೆ ಸೇರಿದ ಸುಶಿಕ್ಷಿತ ಸಹೃದಯರು. ಅವರೂ ನಮ್ಮಂತೆ ಪಾಂಡಿಚೇರಿಯ ಶ್ರೀ ಅರವಿಂದ

ಮಿ. ನಾಯಕ ಅವರ ಮನೆಯ ಮುಂದಿನ ದಾರಿಯಲ್ಲಿ ತನ್ನ ಮಂತ್ರ- "ಥಾಕೀ ರಂಡೆಗಂಡಾ ಥಾಕೀ" ಎನ್ನುತ್ತ ಕೈಯಿಂದ ನೀರು ಸಿಂಪಡಿಸುತ್ತ ಟುಣುಪುಣನೇ ಹಾರುತ್ತ ಹೊರಟಿರುವ ಗಲಬಿಲಿಯನ್ನು ಕಂಡು, ತಲೆ ವಾಗಿಲಿಗೆ ಬಂದು, ಆಚಾರಿಯನ್ನು ಕಾಣುತ್ತಲೆ ಗಕ್ಕನೆ ಮೂಗುಮುಚ್ಚಿಕೊಂಡು-

"ನೀ ಥಾಕೀ ಯಾರನ್ನಾದರೂ ತೀವ್ರ ಹೊರಟುಹೋಗು" ಎಂಬ ಪಲ್ಲವಿಗೆ ಹಲವು ಮಾತುಗಳನ್ನು ಪವಣಿಸುತ್ತಾರೆ.

"ಏನು ಹಲ್ಲು ನಮ್ಮ ಆಚಾರಿಯವ್ರು ಕೊಳೆತ ಕುಂಬಳ ಬೀಜವಾಗಿವೆ. ಕಾಲಿಟ್ಟರೆ ಭರಕ್ಕನೆ ಜಾರುವವು! ಇಷ್ಟು ದೂರವಿದ್ದರೂ ದುರ್ವಾಸನೆ ಬರುತ್ತದೆ. ಓ, ದುರ್ವಾಸ ಮುನಿಗಳೇ, ಏನು ನಿಮ್ಮ ಮಡಿ? ಎಂದು ನೀರು ಕಾಣಿಸಿದ್ದೀರಿ ಅದಕ್ಕೆ? ಮಂತ್ರ ಹೇಳುತ್ತೀರಲ್ಲ ಸಂಸ್ಕೃತದಲ್ಲಿ" ಆತ್ಮವನ್ನು ನೀರು ತೋಯಿಸದು, ಗಾಳಿ ಆರಿಸದು, ಬೆಂಕಿ ಸುಡದು, ಕತ್ತಿ ಕತ್ತರಿಸದು, ನಿಮ್ಮ ಮಟ್ಟಿಗೆ ನೀವುಟ್ಟ ಪಂಚೆಯೇ ಆತ್ಮವಾಗಿದೆಯಲ್ಲಾ! ಹೂಂ ಸಾಗಿರಿ ಬೇಗನೇ "ಥಾಕೀ ರಂಡೇ ಗಂಡಾ" ಎಂದು ನೀವು ಅನ್ನಬೇಕೋ, ನಾವು ನಿಮಗೆ ಅನ್ನಬೇಕೋ ನೀವೇ ಹೇಳಿರಿ. ಕೈಯಿಂದ ಸಿಡಿಸುವ ನೀರ ಹನಿಗಳಿಗಿಂತ ನಿಮ್ಮ ಬಾಯಿಂದ ನುಸುಳುವ ಉಗುಳು-ಹನಿಗಳು ದೊಡ್ಡದಾಗಿವೆ. ಹೂಂ! ಸಾಗಿರೀ!! "ಥಾಕೀ ರಂಡೆ ಗಂಡಾ"

ಈ ಪ್ರಹಸನವನ್ನು ಕೇಳಿದವರು, ಕಂಡವರು ನಕ್ಕೇನಕ್ಕರು ಹೊಟ್ಟೆ ಹುಣ್ಣಾಗುವಂತೆ ಕೈಯಲ್ಲಿ ಹೊಟ್ಟೆ ಹಿಡಿದುಕೊಂಡು ನಕ್ಕರು - "ತುಂ ತುಂ ತುಂ ತುಂಬಿ ಬಂದಿತ್ತು! ಮತ ಮತ್ತ ತುಂಬಿ ಹರಿದಿತ್ತ!"

ಹಣ್ಣಿನ ವ್ಯಾಪಾರ ಮಾಡಿಕೊಂಡು ತನ್ನೂರಿಗೆ ಹೊರಟಿದ್ದಳು. ಬಾಗವಾನತಿ ಮೈ ಕಟ್ಟು-ಬಣ್ಣಗಳಲ್ಲಿ ಆಕೆ ತುಂಬಿದ ಕುಂಬಳಕಾಯಿಯಂತಿದ್ದಳು. ನಿಲ್ದಾಣದಲ್ಲಿ ಓಡಾಡಿ ಗಾಡಿಯ ಬೋಗಿಯಲ್ಲಿ ಜಾಗ ಹಿಡಿದು ಗಂಡನನ್ನು ಒತ್ತಟ್ಟಿಗೆ ಒರಗಿಸಿದ್ದಳು. ಅದಕ್ಕೆ ಕಾರಣವೆಂದರೆ, ಆಕೆಯ ತಿಕೀಟು ಒಂದೇ ತೆಗೆದಿದ್ದಳು. ಗಂಡನ ತಿಕೀಟು ತೆಗೆದಿರಲಿಲ್ಲ.

ಮುಂದಿನ ನಿಲ್ದಾಣದಲ್ಲಿಯೇ ಇಳಿಯಬೇಕಾಗಿತ್ತು. ತನ್ನ ಗಂಟು ಗದಡಿಗಳನ್ನೆಲ್ಲ ಒತ್ತಟ್ಟಿಗೆ ಕಟ್ಟಿ ಬಲಗೈಯಲ್ಲಿ ಹಿಡಿದಿದ್ದಳು. ಎಡಗೈಯಲ್ಲಿ ಕೂಸಿನಂತೆ ಗಂಡನನ್ನು ಬಗಲಲ್ಲಿ ಎತ್ತಿ, ಭುಜದ ಮೇಲೆ ಮಲಗಿಸಿಕೊಂಡು, ಮೇಲೆ ಒಂದು ಚಾದರ ಹೊದಿಸಿದ್ದಳು. ಗೇಟಿನ ದಾರಿಯಲ್ಲಿ ಎಲ್ಲರಂತೆ ಸಾಲಿನಲ್ಲಿ ನಿಂತು ಗೇಟಿನ ಬಳಿ ತಿಕೀಟು ಕಲೇಕ್ಟರನಿಗೆ ತನ್ನ ಕೈಯೊಳಗಿದ್ದ ತಿಕೀಟು ಕೊಟ್ಟು ದಾಟಿ ಹೋಗುವುದರಲ್ಲಿದ್ದಳು.

ತಿಕೀಟು ಕಲೇಕ್ಟರನಿಗೆ ಸಂಶಯ ಬಂತು - "ಇದೇನು ಎತ್ತಿಕೊಂಡಿದ್ದು" - ಎಂದು ಕೇಳಿದನು.

"ಅದು ಜಡ್ಡಿನ ಕೂಸು" ಎಂದು ಮರುನುಡಿಯುವಷ್ಟರಲ್ಲಿ ತಿಕೀಟು ಕಲೇಕ್ಟರನು ಮುಸುಕು ಎತ್ತಿ ನೋಡಿದರೆ, ಕೂಸಿನ ಮುಖದಲ್ಲಿ ಗಡ್ಡ ಮೀಸೆಗಳು ಜೋತಾಡುತ್ತಿದ್ದವು.

"ಇಳಿಸು ಅವನನ್ನು ಕೆಳಗೆ" ಅಂದಾಗ.

ಕೆಳಗಿಳಿಸಿದ ಕೂಸು, ಹೊತ್ತ ಹೆಂಗಸಿಗಿಂತ ಅರ್ಧ ಫೂಟು ಎತ್ತರವಾಗಿತ್ತು. ಆ ದೃಶ್ಯವನ್ನು ಕಂಡು ಪ್ರೇಕ್ಷಕರೆಲ್ಲ ನಕ್ಕೇನಕ್ಕರು, ಪಾತ್ರಧಾರಿಗಳನ್ನು ಗುರುತಿಸಿದ ಬಳಿಕಂತೂ ಆ ತುದಿಯಿಂದ ಈ ತುದಿಯವರೆಗೆ ನಗೆಯ ಬುಗ್ಗೆ ಗಹಗಹಿಸಿತು.

ಈ ಪ್ರಹಸನದಲ್ಲಿ ಕೂಸು ಆಗಿ ತಾಯಬಗಲಲ್ಲಿ ಮುದ್ದೆಯಾಗಿ ಕುಳಿತವರು ಚೆನ್ನಮಲ್ಲಪ್ಪ, ಬಾಗವಾನತಿ ಯಾರು ಎಂದು ಕೇಳುವ ಕಾರಣವೇ ಇಲ್ಲ. ಚೆನ್ನಮಲ್ಲಪ್ಪನನ್ನು ಕೂಸು ಮಾಡಿ ಬಗಲಲ್ಲಿ ಎತ್ತಿಕೊಳ್ಳುವ ಕುವ್ವತ್ತು ನನ್ನ ಹೊರತು ಇನ್ನಾರಿಗಿತ್ತು ನಮ್ಮ ಗೆಳೆಯರಲ್ಲಿ?

ಈವರೆಗೆ ಉದಾಹರಿಸಿದ ೨ ಪ್ರಹಸನಗಳಲ್ಲಿ ಕಾಪಸೆಯವರು ಕಾಣಿಸಿಕೊಳ್ಳಲೇ ಇಲ್ಲ. ಅಹುದು ಅವರು ಕಾಣಿಸಿಕೊಳ್ಳಬಹುದಾದ ಒಂದು ಪ್ರಸಂಗವನ್ನು ಹೇಳಿ ಈ ಪ್ರಕರಣವನ್ನು ಮುಗಿಸಿಬಿಡುತ್ತೇನೆ.

ಧನಶೆಟ್ಟಿ ಎಂಬುವರು ಮೂಲತಃ ವ್ಯಾಪಾರಿಗಳು. ಆದರೂ ಅವರು ರಾಜಕಾರಣ ಪ್ರಿಯರು. ಅವರವೇ ಆದ ಕೆಲವಾರು ಸಿದ್ಧಾಂತಗಳಿದ್ದವು. ಅವರ ವೇಷಭೂಷಣಗಳನ್ನು ನೋಡಿದಾಗ ದಿ. ಮದನಮೋಹನ ಮಾಲವೀಯವರನ್ನೇ ಕಂಡಂತಾಗುವದು.

ಸ್ಫೂರ್ತಿದಾಯಕ ಭಾಷಣವೆಂದರೆ ಧನಶೆಟ್ಟಿ ಅವರದು ಎತ್ತಿದ ಕೈ. ಧಾರ್ಮಿಕ ಪುರುಷರ ಜಯಂತಿಯಿರಲಿ, ಇದೇ ಈಗ ದೇಹವಿಟ್ಟು ಅಕಾಲ ಮೃತ್ಯುಗೀಡಾದ ಉದಿತೋದಿತ ಸಾಹಿತಿಯ ಅಂತ್ಯವಿಧಿಯ ಪ್ರಸಂಗವೇ ಇರಲಿ ಅವರು ಸ್ಫೂರ್ತಿದಾಯಕವಾಗಿಯೇ ಮಾತಾಡಬಲ್ಲರು. ವಿಷಯ ಎಂಥದೇ ಇರಲಿ, ಹೇಳುವ ರೀತಿಯಲ್ಲಿ ಸ್ಫೂರ್ತಿಯು ತುಂಬಿ ತುಳುಕುತ್ತಿತ್ತು. ಅವರ ಭಾಷಣದಲ್ಲಿ ಚಿಕ್ಕಚಿಕ್ಕ ವಾಕ್ಯಗಳು ಇರುತ್ತಿರಲೇ ಇಲ್ಲ. ಹಲವಾರು ಉಪವಾಕ್ಯಗಳು ಕೈಕೈ ಹಿಡಕೊಂಡು, ಪ್ರಥಮಾ ವಿಭಕ್ತಿಯಿಂದ ಸಪ್ತಮಿ, ಸಂಬೋಧನ ವಿಭಕ್ತಿಗಳವರೆಗೆ ಎಲ್ಲ ವಿಭಕ್ತಿಗಳನ್ನು ಪ್ರತಿನಿಧಿಸುತ್ತಿದ್ದವು. ಆ ಚಾತುರ್ಯವನ್ನು ಕಂಡು ನಗದವರು ಕಡಿಮೆ.

ಮ. ಗಾಂಧಿಯವರು ನಿತ್ಯದಂತೆ ಪ್ರಾರ್ಥನೆಗೆ ಹೊರಟಾಗ, ಗೋಡಸೆ ಎಂಬವರ ಗುಂಡಿನೇಟಿನಿಂದ ರಾಮಾ! ರಾಮಾ! ಎನ್ನುತ್ತ ಅಸುನೀಗಿದ್ದ ವಿಷಯವನ್ನು ಎತ್ತಿಕೊಂಡು ಪುಣ್ಯಸ್ಮರಣೆ ಮಾಡಬೇಕಾದ ಸಂದರ್ಭದಲ್ಲಿ ಧನಶೆಟ್ಟಿಯವರು, ನಾಲ್ಕು ಮಾತು ಹೇಳಬೇಕೆಂದು ಯಾರೋ ನಿರ್ದೇಶಕರು ಸೂಚಿಸಿದರು. ಧನಶೆಟ್ಟಿಯವರು ಆ ಸೂಚನೆಯನ್ನು ಕೂಡಲೇ ಗ್ರಹಿಸಿ ಮಾತನಾಡುವುದಕ್ಕೆ ಎದ್ದು ನಿಂತರು.

"ದೇಶಬಾಂಧವರೇ,

ಇಂದಿನದು ನಮ್ಮ ದೇಶದ, ನಮ್ಮ ರಾಷ್ಟ್ರದ, ನಮ್ಮ ಜನಾಂಗದ, ನಮ್ಮ ಪರಂಪರೆಯ ದುರ್ದಿನವಾಗಿದೆ. ನಮ್ಮನ್ನಗಲಿ ಹೋದ ಮಹಾತ್ಮರನ್ನು ಅದೆಷ್ಟು ವಿಧದಲ್ಲಿ ಕಂಡರೂ ಅವರೊಬ್ಬ ಅದ್ವಿತೀಯ ಮಹಾಪುರುಷರೆಂದು ಹೇಳಲು ಹಿಂಜರಿಯುವ ಕಾರಣವೇ ಇಲ್ಲ. ಆ ವಿಷಯ ಹಿಂದಿನಂತೆ ಮುಂದೆಯೂ ಸ್ಫೂರ್ತಿದಾಯಕವಾಗಿದೆ.

ಸಭಿಕರೇ,

ಯಾವ ಮಹಾತ್ಮಾಗಾಂಧಿಯವರು, ಸಮುದ್ರ ತೀರ ಪೋರಬಂದರಿನಲ್ಲಿ ಹುಟ್ಟಿಬಂದರೋ, ಸಭಿಕರೇ, ಯಾವ ಮಹಾತ್ಮಾಗಾಂಧಿಯವರನ್ನು ವಿಶ್ವಕವಿಗಳೆನಿಸುವ ರವೀಂದ್ರನಾಥ ಠಾಕೂರರು, ಮಹಾತ್ಮಾ ಎಂದು ಕರೆದರೋ, ಸಭಿಕರೇ, ಯಾವ ಮಹಾತ್ಮಾಗಾಂಧಿಯವರಿಂದ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಸ್ತೇಯ ಮೊದಲಾದ ಸದ್ಗುಣಗಳು ಪುನರ್ಜನ್ಮ ಪಡೆದವೋ, ಸಭಿಕರೇ, ಯಾವ ಮಹಾತ್ಮಾಗಾಂಧಿಯವರಿಗೆ ಪಡುವಣ ನಾಡಿನವರು ದ್ವಿತೀಯ ಕ್ರಿಸ್ತನೆಂದು ಕರೆಯಲು ಹಿಂದೆ ಮುಂದೆ ನೋಡಲಿಲ್ಲವೋ, ಸಭಿಕರೇ, ಯಾವ ಮಹಾತ್ಮಾಗಾಂಧಿಯವರಿಂದ ಹರಿಜನ-ಗಿರಿಜನರೆಲ್ಲಾ ಪುನೀತರಾಗಿ ಧನ್ಯತೆಯನ್ನು ಅನುಭವಿಸಿದರೋ ಸಭಿಕರೇ, ಯಾವ ಮಹಾತ್ಮಾಗಾಂಧಿಯವರ ಕಾಲಕೀರ್ದಿಯಲ್ಲಿ ಬ್ರಿಟಿಶ್ ಸಾಮ್ರಾಜ್ಯದ ಬೇರುಗಳೆಲ್ಲ ಸಡಿಲಾಗಿ ಬಿಟ್ಟವೋ ಸಭಿಕರೇ, ಯಾವ ಮಹಾತ್ಮಾಗಾಂಧಿಯವರಲ್ಲಿ ನಿಕೃಷ್ಟತೆಯನ್ನು ಕಳೆಯುವ ಸ್ಫೂರ್ತಿಯು ತುಂಬಿ ತುಳುಕುತ್ತಿತ್ತೋ ಸಭಿಕರೇ, ನಾವೆಲ್ಲರೂ ಕೂಡಿ, ಮ. ಗಾಂಧಿಯವರೇ, ನೀವು ಏನಾದರೂ ಮಾಡಿ ಈ ಭಾರತದಲ್ಲಿ ಪುನರ್ಜನ್ಮ ಪಡೆದು ದೇಶಕ್ಕೆ, ರಾಷ್ಟ್ರಕ್ಕೆ, ಜನಾಂಗಕ್ಕೆ ಆರ್ಯ-ಕೀರ್ತಿಗೆ ನವಚೈತನ್ಯ ತುಂಬಿರೆಂದು ಕೈ ಮುಗಿದು, ಶಿರಬಾಗಿ, ಸೆರಗೊಡ್ಡಿ ಬೇಡಿಕೊಂಡು ಈ ಸ್ಫೂರ್ತಿದಾಯಕ ಭಾಷಣವನ್ನು ಮುಗಿಸುತ್ತೇನೆ ಎಂದು ಚಪ್ಪಾಳೆ ಬಾರಿಸಲು ಸಭಿಕರೆಲ್ಲ ಸೂಚಿಸಿದರು.

ಆದರೆ ಯಾರೋ ಹೇಳಿದರು - ಇದು ಚಪ್ಪಾಳೆ ಬಾರಿಸುವ ಸಭೆಯಲ್ಲ. ಹೀಗೆ ಹಲವಾರು ವಿಧದಲ್ಲಿ ಸಾಮಾಜಿಕರ ಮುಖಕ್ಕೆ ಕನ್ನಡಿ ಹಿಡಿದು, ಕಾಣಿಸುವ ಲೋಪ-ದೋಷಗಳನ್ನು ತಿದ್ದಿಕೊಳ್ಳುವುದಕ್ಕೆ ಆಸ್ಪದವಾಗಲಿ ಬಿಡಲಿ ಸದ್ಯಕ್ಕಂತೂ ಹೊಟ್ಟೆತುಂಬ ನಕ್ಕು ತೃಪ್ತರಾದದ್ದೇನು ಸಣ್ಣ ಲಾಭವಲ್ಲ. ಇಂಥ ಚುಟುಕು ವಿನೋದಗಳಿಗಾಗಿ ಸಾವಿರಾರು ಜನರು ನಿದ್ದೆಗೆಟ್ಟು ಕುಳಿತು ಕೊಳ್ಳುತ್ತಿದ್ದರು.

ಪಾತ್ರಗಳ ಸಿದ್ಧತೆ ಒಳಗೆ ನಡೆದಿರುವಾಗಲೇ ಜನಸ್ತೋಮವೆಲ್ಲ ಆತುರದಿಂದ ಕೇಳಲು ಕಿವಿ, ನೋಡಲು ಕಣ್ಣು ನಿಮಿರಿಸಿ ಕುಳಿತುಕೊಳ್ಳುತ್ತಿತ್ತು.

ಆಶ್ರಮದೊಂದಿಗೆ ವಿಶೇಷ ಸಂಬಂಧ ಇರಿಸಿಕೊಂಡವರು. ಅವರ ಭೆಟ್ಟಿ ಮತ್ತು ಅವರೊಡನೆ ನಡೆದ ಮಾತುಕತೆಗಳಿಂದ ಚೆನ್ನಮಲ್ಲಪ್ಪನವರು ಮುದ್ರಣಾಲಯ ವಿಚಾರವನ್ನು ತುಸು ಬದಿಗಿರಿಸಿದರು.

ಕರ್ನಾಟಕದಿಂದ ಮೊಟ್ಟಮೊದಲು ಪಾಂಡಿಚೇರಿಗೆ ಹೋಗಿ, ಶ್ರೀ ಅರವಿಂದರನ್ನು ಸಂಪರ್ಕಿಸಿದವರೆಂದರೆ, ಶ್ರೀ ಬಾಳಿವಕೀಲರು, ಶ್ರೀ ಕುಮಾರ ಸ್ವಾಮಿಗಳು ಮತ್ತು ಪ್ರೊ. ಮಾಳವಾಡ ಅವರ ಅತ್ತೆಯವರೆಂದು ಶ್ರೀ ಶಂಕರಗೌಡರಿಂದ ತಿಳಿಯಿತು. ಆದ್ದರಿಂದ ಬೆಳಗಾವಿಯಲ್ಲಿಯೇ ಇದ್ದ ಶ್ರೀ ಬಾಳಿವಕೀಲರನ್ನು ಮೊದಲು ಕಾಣುವುದು ಅನಿವಾರ್ಯವಾಯಿತು. ಅಗತ್ಯವೂ ಆಯಿತು. ಅಂದು ಸಾಯಂಕಾಲ ಅವರ ಮನೆಗೆ ಹೋಗಿ ಅವರನ್ನು ವಂದಿಸಿ, ಪಾಂಡಿಚೇರಿಗೆ ಹೋಗುವುದಕ್ಕೆ ಬೇಕಾಗುವ ಪೂರ್ವ ಸಿದ್ಧತೆ, ಅದರ ನೇರವಾದ ದಾರಿ, ಆಶ್ರಮದಲ್ಲಿ ಯಾರಿಗೆ ಬರಕೊಳ್ಳುವುದು ಏನೆಂದು ಬರಕೊಳ್ಳುವುದು ಮೊದಲಾದ ಸಂಗತಿಗಳು ತಿಳಿದು ಬಂದವು. ಆ ದಿಶೆಯಲ್ಲಿ ಮುಂದುವರಿಯುವುದೇ ಮೊದಲ ಕೆಲಸವೆಂದು ತೀರ್ಮಾನಿಸಿ ಮರಳಿ ಹಲಸಂಗಿಯತ್ತ ಬಂದವು. ಅದರಿಂದ ಗ್ರಂಥಮಾಲೆ, ಮುದ್ರಣಾಲಯ ವಿಚಾರವನ್ನು ಸದ್ಯಕ್ಕೆ ಹಿಂದಿಡಸಬೇಕಾಯಿತು. ಆದರೆ ೨ನೇ ವರ್ಷದ ಗ್ರಂಥಗಳನ್ನೆಲ್ಲ ಗ್ರಾಹಕರಿಗೆ ಒದಗಿಸುವುದನ್ನು ಮರೆಯಲಾಗದಷ್ಟೇ?

ಮುಂದಿನ ಪ್ರಕಟನೆಗಳನ್ನು ನಾವು ದರ್ಶನ ಪಡೆದು ಮರಳಿ ಬಂದ ಬಳಿಕ ಕಟ್ಟಿಕೊಂಡ ಶ್ರೀ ಅರವಿಂದ ಮಂಡಲದಿಂದ ಪ್ರಕಾಶ ಪಡಿಸಬಹುದೆಂದು ನಿರ್ಧಾರವಾಯಿತು.

ಈ ಪ್ರಸಂಗದಲ್ಲಿ ನಾನು ೨ನೇ ವರ್ಷದ ಟ್ರೇನಿಂಗಿನ ಸಲುವಾಗಿ ಧಾರವಾಡಕ್ಕೆ ಹೋಗಲೇ ಬೇಕಾಯಿತು. ಇಲ್ಲದಿದ್ದರೆ ಹಲಸಂಗಿಯಲ್ಲಿ ಮುಖ್ಯ ಶಿಕ್ಷಕನಾಗಿ ಉಳಿಯಲಾರೆನೆಂದು ಭಾವಿಸಿದೆನು. ಆ ದಿಶೆಯಲ್ಲಿ ಪ್ರಯತ್ನಿಸಿ ಮುಂದುವರಿಯಲು ೨ನೇ ವರ್ಷದ ತರಬೇತಿಗಾಗಿ ನನ್ನ ಆಯ್ಕೆ ಆಗುವಂತೆ ಏರ್ಪಾಡು ಮಾಡಿಕೊಂಡೆನು. ಅದು ಸಾಧ್ಯವೂ ಆಯಿತು.

ನಾನು ಮನೆಯವರನ್ನೆಲ್ಲ ಚಡಚಣಕ್ಕೆ ಕಳಿಸಿದೆನು. ಹೆಂಡತಿ, ಚೊಚ್ಚಲ ಮಗಳು ಭುವನೇಶ್ವರಿ, ಪರಮಹಂಸರ ಶತಮಾನೋತ್ಸವ ಸಂದರ್ಭದಲ್ಲಿ ಹುಟ್ಟಿದ ಭವತಾರಿಣಿ ಹಾಗೂ ಒಬ್ಬನೇ ಒಬ್ಬ ಮಗನಾದ ವೀರೇಂದ್ರ ಹೀಗೆ ನಾಲ್ವರನ್ನು ಚಡಚಣದ ಅತ್ತೆಯ ಮನೆಯವರು ಹಿಡಿದಿರದಿದ್ದರೆ ನಾನು ೨ನೇ ವರುಷದ ಟ್ರೇನಿಂಗೇ ಆಗುತ್ತಿರಲಿಲ್ಲ, ಹೆಡ್‌ಮಾಸ್ತರನಾಗಿ ಹಲಸಂಗಿಯಲ್ಲಿ ಉಳಿಯುತ್ತಿರಲೂ ಇರಲಿಲ್ಲ. ಕಾಲೇಜಿನ ವಾರ್ಷಿಕ ಪರೀಕ್ಷೆ ರಿಕಾರ್ಡಬ್ರೆಕ್ ಆಗುವುದಕ್ಕೆ ಸುಸಂಧಿ ಸಿಗುತ್ತಿರಲಿಲ್ಲ.

ಟ್ರೇನಿಂಗ್ ಮುಗಿದ ಬಳಿಕ ನಾನು ಹಲಸಂಗಿಗೆ ಬರಬಹುದೆಂದು ಭಾವಿಸಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ. ನನ್ನನ್ನು ಇಂಡಿಯ ತಾಲೂಕು ಶಾಲೆಯ ಸಹಾಯಕ ಶಿಕ್ಷಕನೆಂದು ಆಯ್ಕೆ ಮಾಡಿ ಕಳಿಸಿದರು. ನಾನೂ ಅದಕ್ಕೆ ಸಮ್ಮತಿಸಿದೆ.

ಹಲಸಂಗಿ ಶಾಲೆಯಿಂದ ಅಂಜುಟಗಿ ಶಾಲೆಗೆ ವರ್ಗವಾಗಿ ಹೋಗಿದ್ದ ಶ್ರೀ ಪಲ್ಮಾರಿಯವರು ಮತ್ತೆ ಪ್ರಯತ್ನಿಸಿ ಹಲಸಂಗಿಗೆ ಬಂದಿದ್ದರು. ಆದ್ದರಿಂದ ಆ ಸ್ಥಳ ನನಗೆ ಸಿಗುವುದಕ್ಕೆ ತೊಂದರೆ ಹುಟ್ಟಿಕೊಂಡಿತು. ಆದ್ದರಿಂದ ಮರುಮಾತೆತ್ತದೆ ಇಂಡಿಯ ಶಾಲೆಗೆ ಸಹಾಯಕ ಶಿಕ್ಷಕನಾಗಬೇಕಾಯಿತು ಮತ್ತು ವಾಸ್ತವ್ಯಕ್ಕಾಗಿ ಮನೆಯೊಂದನ್ನು ಬಾಡಿಗೆಯಿಂದ ಹಿಡಿದು ಮಂಡಳಿಯನ್ನು ಅಲ್ಲಿಗೆ ತಂದು ಮನೆಯ ವ್ಯವಸ್ಥೆಯನ್ನು ಪುನರ್ಘಟಿಸ ಬೇಕಾಯಿತು.

ಮನೆಯ ಬಳಗದೊಡನೆ, ನನ್ನ ಹೆಂಡತಿಯ ಅಬಚಿಯ ಮಗಳಾದ ಗಂಗಾಬಾಯಿಯೂ ಇಂಡಿಗೆ ಬಂದಳು. ಆಕೆ ತನ್ನ ಅಕ್ಕನೊಡನೆ ತಿಂಗಳೆರಡು ತಿಂಗಳು ಇಂಡಿಯಲ್ಲಿದ್ದು ಆಮೇಲೆ ತನ್ನೂರಿಗೆ ಅಂದರೆ, ಬನಹಟ್ಟಿಗೆ ಹೋದಳು. ಗಂಡನ ಮನೆ ಚಿಕ್ಕೋಡಿಯಲ್ಲಿ, ಚಿಕ್ಕಂದಿನಲ್ಲಿಯೇ ಮದುವೆ ಯಾಗಿದ್ದು, ಆ ಬಳಿಕ ಅವರು ಅಂದರೆ ಗಂಡನ ಮನೆಯವರು ಆಕೆಯನ್ನು ಕರೆದೊಯ್ಯಲಿಲ್ಲ, ಈಕೆ ಹೋಗಲೂ ಇಲ್ಲ.

ಸಿಂಪಿ ಲಿಂಗಣ್ಣನ ವಾಸ್ತವ್ಯ ಸ್ಥಾನ ಇಂಡಿಯೇ ಆಯಿತು, ಸುಮಾರು ಒಂದು ವರುಷ, ಎಂಟು ತಿಂಗಳು.

ಇಂಡಿಯ ತಾಲೂಕ ಶಿಕ್ಷಕರಾದ ಶ್ರೀ ಮುತಾಲಿಕರು ದಾಸರ ಹಾಡುಗಳನ್ನು ಹಾಡುವರು. ಹಾಡುತ್ತ ಪಿಯಾನ ಬಾರಿಸುವರು. ಅವರಿಗೆ ಶ್ರೀಕಲಾಳ ಎಂಬ ರಸಿಕ ಮಿತ್ರರು ಜೊತೆಯಾದರು. ಅವರೂ ಪಿಯಾನ ಬಾರಿಸಬಲ್ಲರು. ಕಟ್ಟುನಿಟ್ಟಾಗಿ ಶಾಲೆಯ ಕೆಲಸ ನಿರ್ವಹಿಸಬಲ್ಲ ಸಹಶಿಕ್ಷಕರೂ ಆಗಿದ್ದರು. ಅವರು ಅಂಡರ್ ಗ್ರ್ಯಾಜುಯೇಟ್ ಟ್ರೇಂಡರು.

ಶ್ರೀ ಮುತಾಲಿಕರು ಬ್ರಾಹ್ಮಣರಾಗಿದ್ದರೂ ಮನೆಯಲ್ಲಿ ಮಾತ್ರ ಆಚರಣೆ ಇರಿಸಿಕೊಂಡವರು. ಶುದ್ಧ ವೈಷ್ಣವದಾಸರಂತಿದ್ದರು. ಸರಳ ಜೀವಿಗಳು, ಸುಲಭ ಸ್ನೇಹಿತರು, ಹರಿಜನ ಕೇರಿಯಲ್ಲಿ ಶಿಕ್ಷಕರಾದ ಸಿದ್ಧರಾಮ ಎಂಬವರು ಅವರಿಗೆ ಜೀವನ್ಮಿತ್ರರಾಗಿದ್ದರು. ಸೂಟಿಯಲ್ಲಿ ಅಥವಾ ಶಾಲೆಯ ಕೆಲಸ ಮುಗಿದ ಬಳಿಕ ಅವರಿಬ್ಬರದೇ ಒಂದು ಜೋಡಿ.

ಬಹಳವಾದರೆ ಸಾಯಂಕಾಲಕ್ಕೆ ಲೈಬ್ರರಿಗೆ ಹೋಗುತ್ತಿದ್ದರು. ಶ್ರೀ ಮುತಾಲಿಕರಿಗೆ ಯಾರೋ ಕೇಳಿದರಂತೆ -

"ಏನ್ರೀ ಮುತಾಲಿಕರೇ, ಹರಿಜನ ಸಿದ್ಧರಾಮನನ್ನು ಬಿಟ್ಟರೆ ನಿಮಗೆ ಬೇರೆ ಮಿತ್ರರು ಊರಲ್ಲಿ ಯಾರೂ ಸಿಗಲಿಲ್ಲವೇ?"

"ಅಹುದು, ನಾನು ಅಂಥವರನ್ನೇ ಹುಡುಕುತ್ತಿದ್ದೇನೆ, ಇನ್ನೂ ಸಿಕ್ಕಿಲ್ಲ, ಸಿಕ್ಕ ಬಳಿಕ ಇವರ ಸಂಗತಿ ಬಿಟ್ಟುಕೊಡುವೆ" ಎಂದು ಮರುನುಡಿದೆನೆಂದು ಅವರೇ ಹೇಳುತ್ತಿದ್ದರು.

ತಾಲೂಕ ಸ್ಥಳವಾದ ಇಂಡಿಯಲ್ಲಿ, ತಾಲೂಕ ಶಾಲೆಯಾದ ಇಂಡಿಯ ಗಂ.ಮ. ಶಾಲೆಯಲ್ಲಿ ಅನೇಕ ಶಿಕ್ಷಕ ಬಂಧುಗಳ ಪರಿಚಯವಾಯಿತು. ಹಳ್ಳಿಯಿಂದ ಬಂದು ಹೋಗುವ ಅಸಂಖ್ಯ ಶಿಕ್ಷಕರು ಪರಿಚಿತರಾದರು. ಅವರೆಲ್ಲರ ಸ್ನೇಹವು ತಾತ್ಪೂರ್ತಿಕವಾಗಿದ್ದರೂ ಅವರ ಸಂಪರ್ಕ ಮಾತ್ರ ಹತ್ತಾರುವರ್ಷ ಉಳಿದು ಬಂದಿತೆಂದು ಹೇಳಬಹುದು.

ಇಂಡಿಯಲ್ಲಿ ವಾಸ್ತವ್ಯ ಮಾಡಿದ ತಾಲೂಕ ಶಿಕ್ಷಣಾಧಿಕಾರಿ ಹಿರೇಮಠ ಎಂಬುವರನ್ನು ಆಗಾಗ ಕಂಡುಬರುತ್ತಿದ್ದೆ.

ಇಂಡಿಯಿಂದ ಹಲಸಂಗಿಗೆ ಶಿಕ್ಷಕನಾಗಿ ೨ನೇ ಸಾರೆ ಹೋಗುವ ಸಂದರ್ಭವೂ ಒದಗಿತು. ಹಲಸಂಗಿಗೆ ಹೋಗಿ ಹೊಸಮನೆಯನ್ನು ಹುಡುಕಿ ಮನೆಯವರನ್ನು ಕರೆಯಿಸಿಕೊಂಡೆ. ಅಷ್ಟರಲ್ಲಿ ೨ನೇ ಮಗ ಈಶ್ವರನ ಜನ್ಮವಾಗಿತ್ತು. ಸಾಲೋಟಗಿಯ ಸ್ನೇಹಿತರೊಡನೆ ಗಾಢ ಸಂಪರ್ಕವುಂಟಾಗಿತ್ತು. ಅದು ಇಂದಿಗೂ ಉಳಿದು ಬಂದಿದೆ. ಪ್ರಿ. ಕರೂರ, ಹೈಸ್ಕೂಲ್ ಹೆ.ಮಾ. ಬಗಲಿ, ಕನ್ನಡ ಜನಪದ ಯಕ್ಷಗಾನದ ಸದಸ್ಯ ಯಳಸಂಗಿ ಮೊದಲಾದವರು ಮುಖ್ಯರೆಂದು ಹೇಳಬಹುದು.

೩೪. ಧಾರವಾಡ ಗಂ.ಟ್ರೇ.ಕಾ.

೧೯೨೫-೨೬ರಲ್ಲಿ ಒಂದು ವರ್ಷದ ಟ್ರೇನಿಂಗ್ ಮುಗಿಸಿದ ನನಗೆ, ೧೫ ವರುಷ ಕಳೆದರೂ ೨ನೇ ವರ್ಷದ ತರಬೇತಿ ವರ್ಗಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಧಾರವಾಡವನ್ನು ತಲುಪಿದ ಅರ್ಧ ತಾಸಿನಲ್ಲಿಯೇ ಮೈತುರಿಕೆ ಆರಂಭವಾಗಿ ಹೈತಿಗೆಯಂಥ ಉಬ್ಬುಗಳು ಮೈತುಂಬ ಕಾಣಿಸಿ ಕೊಳ್ಳುವವು. ಧಾರವಾಡದ ಹವೆ ಉಸಿರಾಡಿಸುವವರೆಗೆ ಈ ತೊಂದರೆ ಇರತಕ್ಕದ್ದೇ. ಇಂಥ ಪರಿಸ್ಥಿತಿಯಿರುವಾಗ ಟ್ರೇನಿಂಗಿಗೆ ಹೋಗುವ ಇಚ್ಛೆ ನನಗಿಲ್ಲವೆಂದು, ಸ್ಕೂಲ್ ಬೋರ್ಡಿನವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತ ಬಂದಿದ್ದೆ. ಹೀಗಾಗಿ ೧೫ ವರ್ಷ ಕಳೆದವು.

ಒಮ್ಮೆ ಶ್ರೀ ಚೆನ್ನಮಲ್ಲಪ್ಪ ಮತ್ತು ನಾನು ಯಾವುದೋ ಕೆಲಸಕ್ಕಾಗಿ ಧಾರವಾಡಕ್ಕೆ ಹೋದಾಗ ದಿ.ಶೇ.ಗೋ. ಕುಲಕರ್ಣಿಯವರ ಅತಿಥಿಗಳಾದೆವು. ಅದೇ ಕಾಲಕ್ಕೆ ಅವರ ಮನೆಯಲ್ಲಿ ಡಾ॥ ಪಾರ್ಥನಾರಾಯಣರಾವ ಎಂಬವರು ಅತಿಥಿಯಾಗಿ ಅಲ್ಲಿಯೇ ಇದ್ದರು. ವಾಡಿಕೆಯಂತೆ ನನ್ನ ಮೈತಿಂಡಿ ಆರಂಭವಾಗುತ್ತಲೇ ಅವರಿಗೆ ತೋರಿಸಲು, ಅವರದಕ್ಕೆ ತಾತ್ಪೂರ್ತಿಕವಾಗಿ ಒಂದು ಸರಳ ಉಪಾಯ ಹೇಳಿದರು. ಕೂಡಲೇ ನಾವು ಆ ಉಪಾಯವನ್ನು ಮಾಡಿಯೇ ಬಿಡಲು ಸಾಕಷ್ಟು ಪ್ರಯೋಜನವೆನಿಸಿತು. ಆ ಅಸ್ವಾಸ್ಥ್ಯವು ಸಂಪೂರ್ಣವಾಗಿ ತೊಲಗಲಿಕ್ಕೆ ಬೇರೊಂದು ಕಷಾಯ ಹೇಳಿಕೊಟ್ಟರು.

ಆ ಭರವಸೆಯಿಂದ ೧೯೪೧ನೇ ವರ್ಷ ಧಾರವಾಡಕ್ಕೆ ೨ನೇ ವರುಷದ ಟ್ರೇನಿಂಗಿಗೆ ಹೋಗಲು ಸಾಧ್ಯವಾಯಿತು. ಇಡಿಯ ವರುಷವನ್ನು

ಗೆಲುವಾಗಿ ಕಳೆದೆ. ಆ ಕಾಲಕ್ಕೆ ಕಾಲೇಜು ಪರಿಪುಷ್ಟವಾಗಿತ್ತು. ೧ನೇ, ೨ನೇ ವರ್ಷದ ತರಬೇತಿ ವರ್ಗಗಳೆಲ್ಲ ಸೇರಿ ಸುಮಾರು ೩೫೦ ಜನ ವಿದ್ಯಾರ್ಥಿಗಳಿದ್ದರೆಂದು ಹೇಳಬಹುದು. ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ೩ ಬೋರ್ಡಿಂಗುಗಳು ತೆರೆದಿದ್ದವು. ಬ್ರಾಹ್ಮಣ, ಮುಸ್ಲಿಂ ಬೋರ್ಡಿಂಗುಗಳನ್ನು ಬಿಟ್ಟರೆ ಉಳಿದೆಲ್ಲ ವಿದ್ಯಾರ್ಥಿಗಳು ಲಿಂಗಾಯತ ಬೋರ್ಡಿಂಗಿಗೆ ಸೇರಿದ್ದರು. ಪ್ರತಿ ಸೋಮವಾರ ಸಾಯಂಕಾಲಕ್ಕೆ ಲಿಂಗಾಯತರ ಬೋರ್ಡಿಂಗಿನಲ್ಲಿ "ಶಿವಾನುಭವ ಸಂಸ್ಥೆ"ಯ ಶರಣರ ವಚನಗಳನ್ನೋದಿ ಸಾಮೂಹಿಕ ಪ್ರಾರ್ಥನೆ ಮಾಡುತ್ತಿದ್ದರು. ಅದೇ ಸುಮಾರಿಗೆ ನಾನು ಬರೆದ "ಕನ್ನಡದ ಕುಲದೀಪ ಬಸವಣ್ಣ" ಎಂಬ ಲೇಖನವು ಪ್ರಕಟವಾಗಿತ್ತು.

ಅದನ್ನು ಚಿಕ್ಕದಾದ ಪುಸ್ತಕ ರೂಪದಿಂದ ನಮ್ಮ ಬೋರ್ಡಿಂಗಿನವರು ಪ್ರಕಟಿಸೋಣ ಎಂದು ನಿರ್ಧರಿಸಿ ವಂತಿಗೆ ಕೂಡಿಸಿದರು. ಸಾಧನಾ ಪ್ರೆಸ್ಸಿನಿಂದ ಸುಂದರವಾಗಿ ಮುದ್ರಿತಗೊಂಡು ಪ್ರಕಟವಾಯಿತು. ಆ ಪುಸ್ತಕದ ಪ್ರತಿಗಳನ್ನು ಕಾಲೇಜಿನ ಪ್ರಿನ್ಸಿಪಾಲ, ವೈಸ್ ಪ್ರಿನ್ಸಿಪಾಲ, ಅಧ್ಯಾಪಕ ವರ್ಗ ಮೊದಲಾದವರಿಗೆ ಕಾಣಿಕೆಯಿಂದ ಒಪ್ಪಿಸಲಾಯಿತು. ಆಗ ಅವರೆಲ್ಲರಿಗೆ ತಿಳಿದು ಬಂತು ನಾ.ಶಿ. ಸಿಂಪಿ ಎಂಬ ಗಂ.ಟ್ರೇ.ಕಾ ವಿದ್ಯಾರ್ಥಿಯೇ ಸಿಂಪಿ ಲಿಂಗಣ್ಣ ಎಂದು.

ಕಾಲೇಜು ಶಿಕ್ಷಕರಾಗಿ ಬಂದ ಒಬ್ಬಿಬ್ಬ ಅಧ್ಯಾಪಕರು ಬಿ.ಎ. ತರಗತಿ ಯಲ್ಲಿದ್ದಾಗ ನಾನು ಬರೆದ "ಪವಿತ್ರ ಜೀವನ" ಎಂಬ ಕಥಾ ಸಂಗ್ರಹವನ್ನು ಪಠ್ಯವಾಗಿ ಓದಿದವರಾಗಿದ್ದರು. ಅವರೂ ನನ್ನನ್ನು ಮನಸಾರೆ ಪ್ರೀತಿಸಹತ್ತಿದ್ದರು.

ಮಾನಸಶಾಸ್ತ್ರ ಮತ್ತು ಶಿಕ್ಷಣ ಶಾಸ್ತ್ರಗಳನ್ನು ತರಬೇತಿ ವರ್ಗಗಳಿಗೆ ಕಲಿಸಲಾಗುತ್ತಿದ್ದರೂ ಆ ವಿಷಯದ ಪುಸ್ತಕಗಳಿರಲಿಲ್ಲ. ವರ್ಗಗಳಲ್ಲಿ ಹೇಳಿಕೊಟ್ಟ ಟಿಪ್ಪಣಿಗಳ ಸಹಾಯದಿಂದ ವಿದ್ಯಾರ್ಥಿಗಳು ವಿಷಯವನ್ನು ಅಭ್ಯಸಿಸುತ್ತಿದ್ದರು. ಡಾ॥ ವಿ.ಕೊ. ಜವಳಿ ಅವರು ಮಾನಸಶಾಸ್ತ್ರವನ್ನೂ ವೈಸ್ ಪ್ರಿ॥ ಬೈಚವಾಳ ಅವರ ಶಿಕ್ಷಣ ಶಾಸ್ತ್ರವನ್ನೂ ವರ್ಗಗಳಿಗೆ ಹೇಳಿ ಕೊಡುತ್ತಿದ್ದರು.

"ಕನ್ನಡ ಕುಲದೀಪ ಬಸವಣ್ಣ" ಎಂಬ ಚಿಕ್ಕ ಪ್ರಕಟಣೆಯನ್ನು ಕಂಡು ಆ ಉಭಯ ವಿದ್ವಾಂಸರು, ಮಾನಸಶಾಸ್ತ್ರ-ಶಿಕ್ಷಣ ಶಾಸ್ತ್ರಗಳನ್ನು ಬರೆದು ಮುದ್ರಿಸುವುದಕ್ಕೆ ತವಕಿಸತೊಡಗಿದರು. ಆ ಕೆಲಸ ಯಶಸ್ವಿಯೂ ಆಯಿತು. ಡಾ।। ಜವಳಿ ಅವರು ತಮ್ಮ ಬರವಣಿಗೆಯನ್ನು ನನಗೆ ತೋರಿಸಿ ಪ್ರೆಸ್ಸಿಗೆ ಕಳಿಸುತ್ತಿದ್ದರು. ವೈ.ಪ್ರಿ. ಬೈಚವಾಳರು ತಮ್ಮ ಬರವಣಿಗೆಯನ್ನು ಶ್ರೀ ಗುರುನಾಥ ಜೋಶಿ ಅವರಿಗೆ ತೋರಿಸಿ ಮುದ್ರಣಾಲಯಕ್ಕೆ ಕಳಿಸುತ್ತಿದ್ದರು.

೫ನೇ ತರಗತಿಯವರೆಗೆ ನಾನು ಒಂದು ಹಿಂದೀ ಪಾಠ ಕಲಿಸಬೇಕಾಗಿತ್ತು. ಶ್ರೀ ಗುರುನಾಥ ಜೋಶಿ ಅವರು "ಅಡಡಡಾಧಡಂ" ಎಂಬ ಗದ್ಯ ಗೀತೆಯನ್ನು ಕಲಿಸಲು ಸಲಹೆ ನೀಡಿದರು. ಪಾಠವನ್ನು ಹಿಂದಿಯಲ್ಲಿಯೇ ಹೇಳಿಕೊಡಬೇಕಾಗಿತ್ತು. ಆದರೆ ನನಗೆ ಹಿಂದೀ ಮಾತನಾಡುವ ರೂಢಿಯಿರಲಿಲ್ಲ. ಅದರಂತೆ ೫ನೇ ತರಗತಿಯ ಬಾಲಕರೂ ಹಿಂದಿಯಲ್ಲಿ ಉತ್ತರ ಕೊಡಲು ಸಾಧ್ಯವಿರಲಿಲ್ಲ. ಆದ ಕಾರಣ ನನಗನುಕೂಲ ವಾಗುವ ಪದ್ಧತಿಯನ್ನು ಅನುಸರಿಸಬೇಕಾಯಿತು. ೫ನೇ ತರಗತಿಯ ವಿದ್ಯಾರ್ಥಿಗಳಿಗೆ ಕನ್ನಡದ ಮುಖಾಂತರ ಹಿಂದಿ ಕಲಿಸುವಂತೆ, ನಾನು ಪಾಠ ಹೇಳಲು ಆರಂಭಿಸಿದೆ.

ಅಂದಿನ ವಿಷಯ ಶಿಕ್ಷಕರು, ಗುರುನಾಥ ಜೋಶಿ ಅವರು, ಪಾಠ ನಿರೀಕ್ಷಕರು ಕಾಲೇಜಿನ ಮಾನಸಶಾಸ್ತ್ರ ಪ್ರಾಧ್ಯಾಪಕರಾದ ಡಾ।। ವಿ.ಕೊ. ಜವಳಿ ಅವರು ಬಂದಿದ್ದರು. ಉಭಯರೂ ನನ್ನ ಪಾಠವನ್ನು ಆಸ್ಥೆಯಿಂದ ನಿರೀಕ್ಷಿಸಿ ಪಾಠದ ಪರಿಣಾಮವನ್ನು ನಾಲ್ಕು ಶಬ್ದಗಳಲ್ಲಿ ಹೇಳಿ - "ಕನ್ನಡ ಮುಖಾಂತರವಾಗಿ ಹಿಂದಿ ಕೇಳಿ ಕೊಡುವುದು ೫ನೇ ತರಗತಿಯವರಿಗೆ ಅನಿವಾರ್ಯವಾದ್ದರಿಂದ ಸಿಂಪಿ ಅವರು ಅನುಸರಿಸಿದ ಪದ್ಧತಿಯು ಹೊಸ ಮಾದರಿಯದೆಂದು ಹೇಳಬಹುದು" ಎಂದು ಬರೆದು, ೭೫ ಗುಣಗಳನ್ನು ಕೊಟ್ಟು, ಜೋಶಿ ಮತ್ತು ಜವಳಿ ಅವರು ಕೆಳಗೆ ದಿನಾಂಕ ಬರೆದು ಅಂಕಿತ ಹಾಕಿದರು.

ಪ್ರಾಧ್ಯಾಪಕ ಎಸ್.ಎಸ್. ಮಾಳವಾಡ ಅವರು, ನನ್ನನ್ನು ತಮ್ಮ ಮನೆಗೆ ಬರಮಾಡಿಕೊಂಡು ಅಲ್ಪೋಪಹಾರದಿಂದ ತಣಿಸಿ ಒಂದು

ಸಂಗತಿಯನ್ನು ಹೇಳಿದರು. ಏನಂದರೆ ನಾಡದು ಸೋಮವಾರ ನಗರ ಸಭಾ ಭವನದಲ್ಲಿ ನಿಮ್ಮದೊಂದು ಭಾಷಣವಿರಿಸಬೇಕೆಂದು ಯೋಚಿಸಿದ್ದೇನೆ. ನೀವು ಅದಕ್ಕೆ ಒಪ್ಪುವಿರೆಂದು ಆಶಿಸುತ್ತೇನೆ.

"ಯಾವ ವಿಷಯ?"

"ಆಧುನಿಕ ಕನ್ನಡ ಕವಿತೆ" ಎಂದು ವಿಷಯವನ್ನು ಕುರಿತು ಒಂದರ್ಧ ತಾಸು ಮಾತಾಡಿದರೆ ಸಾಕು ಎಂದುರ.

ನಾನು ಮೌನ ತಳೆದೆ

"ಮೌನಂ ಸಮ್ಮತಿ ಲಕ್ಷಣಂ" ಎಂದರು ನಸುನಗುತ್ತ ಪ್ರಾ।। ಮಾಳವಾಡ ಅವರು.

ಗೊತ್ತು ಮಾಡಿದಂತೆ ಸೋಮವಾರ ದಿವಸ ನನಗೆ ಕರೆಬಂತು. ನಗರ ಸಭಾಭವನಕ್ಕೆ ಹೋದೆ. ಕೆಲವು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತ್ರ ಬಂದಿದ್ದರು. ನನ್ನ ಸಹಪಾಠಿಗಳೂ ಹಲವಾರು ಜನ ಬಂದಿದ್ದರು, ಡಾ।। ಜವಳಿ ಅವರು ಮಾತ್ರ ತುಂಬ ಆಸ್ಥೆ ವಹಿಸಿ ನನ್ನ ಭಾಷಣವನ್ನು ಸಂಪೂರ್ಣವಾಗಿ ಕೇಳಿದರು.

ಅಧ್ಯಕ್ಷರಾದ ಪ್ರಾ।। ಮಾಳವಾಡ ಅವರು ಮುಕ್ತಾಯಗೊಳಿಸುವ ನಾಲ್ಕು ಮಾತುಗಳನ್ನು ಹೇಳಿ, ನನ್ನ ಗೌರವಕ್ಕೆ ಹೊಸ ಸ್ವರೂವನ್ನು ಒದಗಿಸಿದರು.

ನಾನಿನ್ನೂ ಗಂ.ಟ್ರೇ.ಕಾ.ದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಒಂದು ಮಹತ್ವದ ಸಂದರ್ಭವೊದಗಿತು. ಹಾವೇರಿ ಪೇಟೆಯಲ್ಲಿದ್ದ ಮುರಘಾ ಮಠದ ಬೆಳ್ಳಿಹಬ್ಬ ೨-೩ ದಿವಸ ಆ ಉತ್ಸವ ನಡೆಯುತ್ತಿತ್ತು. ನಮ್ಮ ಬೋರ್ಡಿಂಗಿನ ಶಿವಾನುಭವ ಸಂಘದ ಪ್ರಮುಖರು ಜೊತೆಗೆ ೩-೪ ಜನರನ್ನು ಕರಕೊಂಡು, ಪ್ರಿನ್ಸಿಪಾಲರ ಆಫೀಸಿಗೆ ಹೋಗಿ ಬಿನ್ನಯಿಸಿದರು-

"ಹಾವೇರಿ ಪೇಟೆಯಲ್ಲಿರುವ ಮುರಘಾ ಮಠದ ಬೆಳ್ಳಿಹಬ್ಬದ ಕಾಲಕ್ಕೆ ದೂರದೂರದಿಂದ ಬಂದ ವಿದ್ವಾಂಸರ ಭಾಷಣಗಳನ್ನು ಏರ್ಪಡಿಸಿದ್ದಾರೆ. ಅದನ್ನು ಕೇಳುವ ಸಲುವಾಗಿ ನಾವು ಅಲ್ಲಿಗೆ ಹೋಗಬೇಕೆಂದು ಆಶಿಸಿದ್ದೇವೆ ದಯೆಯಿಟ್ಟು ತಾವು ಅಪ್ಪಣೆ ನೀಡವಿರೆಂದು ಆಶಿಸುತ್ತೇವೆ."

ಪ್ರಿನ್ಸಿಪಾಲರು ಮುಗುಳುನಕ್ಕು ಅವಶ್ಯವಾಗಿ ಕೇಳಬೇಕಾದ ವಿಷಯ. ಇಚ್ಛೆ ಇದ್ದರೆ ಅಲ್ಲಿಗೆ ಹೋಗಬಹುದು ಎಂದು ನುಡಿದದ್ದಲ್ಲದೆ ಅದಕ್ಕೆ ಸಮ್ಮತಿಯನ್ನು ಬರೆಯಿಸಿ, ಅದಕ್ಕೆ ಅಂಕಿತ ಹಾಕಿ ನೋಟೀಸ ಬೋರ್ಡಿಗೆ ಅಂಟಿಸಿದರು. ಆ ಕಾರಣದಿಂದ ಗಂ.ಟ್ರೇ.ಕಾ.ಸ ಬಹುತರ ವಿದ್ಯಾರ್ಥಿಗಳು ಮುರಘಾಮಠಕ್ಕೆ ಎರಡು ಮೂರು ದಿವಸ ಹೋಗಿ ಬಂದೆವು.

ಈಗಿನ ಊರವಕೊಂಡ ಜಗದ್ಗುರುಗಳು, ಆಗಿನ್ನೂ ಕೊಡಗಿನ ಸ್ವಾಮಿಗಳಾಗಿದ್ದರು. ಅವರ ಪರಿಚಯವಾಯಿತು. ಬಹಳ ಅಭಿಮಾನದಿಂದ ಹಾಗೂ ಆತ್ಮೀಯತೆಯಿಂದ ಹತ್ತಿರ ಕುಳ್ಳಿರಿಸಿಕೊಂಡರು. ಅಲ್ಲದೆ ತರಬೇತಿ ಕೇಂದ್ರದ ವಿದ್ಯಾರ್ಥಿಗಳಿಗೆ ಸೂಕ್ತ ಸ್ಥಳ ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡಿದರು. ನಮ್ಮ ಕಾಲೇಜಿನ ಹಳೆ-ಎಳೆ ವಿದ್ಯಾರ್ಥಿಗಳಲ್ಲಿ ಸಾಕಷ್ಟು ಜನ ಬಂದಿದ್ದರು.

ಸಭೆಯ ಕಾರ್ಯಕ್ರಮಗಳು ನಡೆದಾಗ ಅಕಸ್ಮಾತ್ ಪ್ರಾಚಾರ್ಯ ಮಾಳವಾಡರವರು ಸಭಾರಂಗಕ್ಕೆ ಬಂದು ನಿಂತರು. ಸ್ವಲ್ಪ ಕೇಳಿರಿ ಎಂದು ಆರಂಭಿಸಿಯೇ ಬಿಟ್ಟರು, ಏನಂದರೆ -

ಈ ಮಹಾಮಠದ ಬೆಳ್ಳೀ ಹಬ್ಬದ ಕಾಲಕ್ಕೆ ಒಂದು ಹೊಸ ಕಾರ್ಯಕ್ರಮ ಇರಿಸಿಕೊಳ್ಳಬೇಕೆಂದು ನಿರ್ವಾಹಕರು ನಿರ್ಧರಿಸಿದ್ದೇವೆ. ಯಾವ ಹೊಸ ಕಾರ್ಯಕ್ರಮವೆಂದರೆ ಆಶು ಕವಿತಾ ಸ್ಪರ್ಧೆ. ಎರಡು ವಿಷಯಗಳನ್ನು ಕೊಡುತ್ತೇವೆ. ಗೊತ್ತು ಮಾಡಿದ ಅವಧಿಯಲ್ಲಿ ೧೪ ಸಾಲಿನ ಕವಿತೆಯೊಂದನ್ನು ಬರೆದು ಒಪ್ಪಿಸಬೇಕು. ಅವುಗಳನ್ನೆಲ್ಲ ನಿರ್ವಾಹಕರು ನಿರೀಕ್ಷಿಸಿ, ಪರಿಣಾಮವನ್ನು ಘೋಷಿಸುತ್ತೇವೆ.

ಎರಡು ವಿಷಯಗಳು ಯಾವವು ಎಂದು ಶ್ರೋತೃವರ್ಗದಿಂದ ಒಂದು ದನಿ ಬಂತು. ಪ್ರಾ. ಮಾಳವಾಡರು ಹೇಳಿದರು ಒಂದನೇದು ಪ್ರಸಾದ ನಿಲಯ, ೨ನೇದು ಮೃತ್ಯುಂಜಯ ಮಹಾಸಾಮಿಗಳು, ಅರ್ಧತಾಸಿನ ಅವಧಿ.

ಸ್ಪರ್ಧೆಯಲ್ಲಿ ಭಾಗವಹಿಸಬೇಕೆನ್ನುವವರು, ಹೈಸ್ಕೂಲಿನ-ಕಾಲೇಜಿನ-ಟ್ರೇನಿಂಗ್ ತರಬೇತಿಯ ವಿದ್ಯಾರ್ಥಿಗಳಾಗಿರಬೇಕು.

ಆಶು ಕವಿತೆಗಳೆಲ್ಲ ಕೈಸೇರಿದ ಬಳಿಕ ಅರ್ಧ ತಾಸಿನ ತರುವಾಯ ಸ್ಪರ್ಧೆಯ ಪರಿಣಾಮವನ್ನು ಘೋಷಿಸುವೆವು.

ನಮ್ಮ ಗಂ.ಟ್ರೇ.ಕಾ. ವಿದ್ಯಾರ್ಥಿಗಳೆಲ್ಲರೂ ನನಗೆ ಸೂಚಿಸ ತೊಡಗಿದರು. ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂದು. ಅವರೆಲ್ಲರಿಗೂ ಸಮ್ಮತಿ ಸೂಚಿಸಿ "ಶ್ರೀ ಮೃತ್ಯುಂಜಯ" ಮಹಾಸ್ವಾಮಿಗಳು ಎಂಬ ವಿಷಯವನ್ನು ಕುರಿತು ಹದಿನಾಲ್ಕು ಸಾಲಿನ ಒಂದು ಕವನ ಬರೆದನು. ಅವಧಿ ಇನ್ನೂ ಮುಗಿದಿರಲಿಲ್ಲವೆಂದು ಮತ್ತೊಮ್ಮೆ ಮಗುದೊಮ್ಮೆ ಓದಿ ನೋಡಿಕೊಂಡು ಶುದ್ಧ ಪ್ರತಿಯನ್ನು ಸಿದ್ಧಪಡಿಸಿ ನಿರ್ವಾಹಕರ ಕಡೆಗೆ ಕಳಿಸಿದೆನು.

ಆ ಬಳಿಕ ಮನಸ್ಸಿಲ್ಲದಿದ್ದರೂ ಟ್ರೇ.ಕಾಲೇಜಿನ ವಿದ್ಯಾರ್ಥಿಗಳೆಲ್ಲ ಗಟ್ಟಿ ಮನಸ್ಸು ಮಾಡಿ ಕುಳಿತುಕೊಂಡರು. ಆಶು ಕವಿತೆಯ ಪರಿಣಾಮವನ್ನು ತಿಳಿದುಕೊಂಡೇ ಹೋಗೋಣ ಎಂದು ಕೆಲವರು ಸೂಚಿಸಿದರು. ಒಬ್ಬಿಬ್ಬರು ಶಂಕೆ ತೆಗೆದರು. ತಡಮಾಡಿ ಹೋದರೆ ಬೋರ್ಡಿಂಗ್ ಮುಚ್ಚಲಾಗುತ್ತದೆ, ಆಗೇನು ಮಾಡುವುದು?

ಹಾಗೂ ಹೀಗೂ ಅರ್ಧತಾಸು ಕಳೆಯಿತು. ಇನ್ನೇನು ಇಷ್ಟರಲ್ಲಿ ಸ್ಪರ್ಧೆಯ ಪರಿಣಾಮ ತಿಳಿಸುವರೆಂದು ಮೂಗಿನ ಮೇಲೆ ಬೆರಳಿಟ್ಟುಕೊಂಡು ನಿರೀಕ್ಷಿಸತೊಡಗಿದೆವು.

ಆಶು ಕವಿತಾ ಸ್ಪರ್ಧೆಯಲ್ಲಿ ೧೪ ಜನ ಕವಿಗಳು ಮಾತ್ರ ಭಾಗವಹಿಸಿದ್ದು ತಿಳಿಯಿತು. ಕರ್ನಾಟಕ ಕಾಲೇಜಿನ ವಿದ್ಯಾರ್ಥಿಗಳು ಸಹ,

ಸಹ ಭಾಗಿಯಾಗಿದ್ದರೆಂದು ಗೊತ್ತಾಯಿತು. ಅಷ್ಟರಲ್ಲಿ ಸಭಾ ಮಂಟಪಕ್ಕೆ ಪ್ರಾ. ಮಾಳವಾಡರು ಧತ್ತೆಂದು ಬಂದು ನಿಂತರು. ಸಭಾಗೃಹ ನಿಶ್ಯಬ್ಧ ವಾಯಿತು, ಪರಿಣಾಮ ಕೇಳುವ ಸಲುವಾಗಿ.

ಪ್ರಾ. ಮಾಳವಾಡ ಅವರು ಕೂಗಿದರು. "ಇಲ್ಲಿ ಕೇಳಿರಿ ಆಶು ಕವಿತಾ ಸ್ಪರ್ಧೆಯ ಪರಿಣಾಮ ಈ ರೀತಿಯಾಗಿದೆ" -

ಮೊದಲ ಬಹುಮಾನ ಸಿಂಪಿ ಲಿಂಗಣ್ಣ ಗಂಡು ಮಕ್ಕಳ ಟ್ರೇ. ಕಾಲೇಜಿನ ವಿದ್ಯಾರ್ಥಿ.

ಎರಡನೇ ಬಹುಮಾನ ಸಂ.ಶಿ. ಭೂಸನೂರ ಮಠ ಕರ್ನಾಟಕ ಕಾಲೇಜಿನ ಬಿ.ಎ. ವಿದ್ಯಾರ್ಥಿ.

ಮೂರನೇ ಬಹುಮಾನ ಹಿರೇಮಠ ಇವರೂ ಕರ್ನಾಟಕ ಕಾಲೇಜಿನಲ್ಲಿ ಓದುತ್ತಾರೆ.

ಇನ್ನೊಮ್ಮೆ ಕೇಳಿರಿ ಮೊದಲ ಬಹುಮಾನ ಯಾರಿಗೆ? ಸಿಂಪಿ ಲಿಂಗಣ್ಣ ಎಂಬ ಗಂ.ಟ್ರೇ.ಕಾ.ದ. ವಿದ್ಯಾರ್ಥಿ ಅನ್ನುವುದೇ ತಡ,

ಗಂ.ಟ್ರೇ.ಕಾ ವಿದ್ಯಾರ್ಥಿಗಳೆಲ್ಲ ಎದ್ದು ನಿಂತು ಹುಯ್ ಎಂದು ಕೂಗುತ್ತ ತಮ್ಮ ತಲೆಯ ಮೇಲಿನ ಟೊಪ್ಪಿಗೆ ತೆಗೆದು ತೂರತೊಡಗಿದರು. ಆನಂದದ ಅತಿರೇಕವನ್ನು ಕಂಡು ಉಳಿದ ಶ್ರೋತೃಗಳೆಲ್ಲ ಬೆಪ್ಪು ಬೆರಗಾದರು.

ಅದೇ ಉತ್ಸಾಹದಲ್ಲಿ ತರಬೇತಿ ಕೇಂದ್ರದ ವಿದ್ಯಾರ್ಥಿಗಳೆಲ್ಲ ಗುಂಪು ಗುಂಪಾಗಿ ಎತ್ತರದ ದನಿಯಲ್ಲಿ ಆನಂದವನ್ನು ಹೊರಸೂಸುತ್ತ ಪ್ರಸಂಗಾನುಸಾರವಾಗಿ ಜಯಜಯಕಾರ ಮಾಡುತ್ತ ತಮ್ಮ ಕಾಲೇಜಿನ ಆವಾರವನ್ನು ಪ್ರವೇಶಿಸಿದರು. ಬೋರ್ಡಿಂಗಿನ ಊಟವೂ ಸಿಕ್ಕಿತು, ಅದು ಹೆಚ್ಚಿನ ಆನಂದಕ್ಕೆ ಕಾರಣವೇ ಆಯಿತು.

ಮುಂಬರುವ ದೀಪಾವಳಿ ಸೂಟಿಗೆ ತಂತಮ್ಮ ಊರಿಗೆ ಹೊರಡುವ ಸಲುವಾಗಿ ಕೆಲವರು ಪೂರ್ವಸಿದ್ಧತೆ ಮಾಡಿಕೊಳ್ಳಹತ್ತಿದರು. ಮನೆಯಲ್ಲಿ

ಹೆಂಡಿರು ಮಕ್ಕಳನ್ನು ಬಿಟ್ಟು, ಇಷ್ಟೊಂದು ದಿವಸ ನಾನೆಂದೂ ಅಗಲಿದವನಲ್ಲ. ನೆನಪಾದರೆ ಎದೆ ಝುಲ್ ಅನ್ನುತ್ತದೆ ಎಂಬ ಮಾತು ಒಂದು ಕಡೆಯಿಂದ ಕೇಳಿಸುತ್ತದೆ.

ಪಾಠದಲ್ಲಿ ಕೇಳಿದ್ದು ನೆನಪು ಉಳಿಯುವುದಿಲ್ಲ. ಓದಿಕೊಂಡಿದ್ದು ತಿಳಿಯುವುದಿಲ್ಲ. ಮತ್ತಾವುದೋ ವಿಷಯ ಬಂದು ತೊಡಕಾಲು ಹೊಡೆಯುತ್ತದೆ. ಅಧ್ಯಾಪಕರು ಪಾಠ ಹೇಳುವಾಗ ತಿಳಿಯಿತೇನು ಎಂದು ಕೇಳಿದಾಗ "ಒಂದು ತಿಳಿ ಅಂದರೆ ನೂರು ತಿಳಿಯುತ್ತವೆ. ಈ ಇಳಿ ವಯಸ್ಸಿನಲ್ಲಿ ಕಲಿಯಲು ಬರಬಾರದು" ಎಂದು ಪಿಸುನುಡಿಯುತ್ತಿದ್ದರು.

ಹೆಂಗಸಿನ ಕೂಡ ಕುಸ್ತಿ ಹಿಡಿಯಬಾರದು, ಒಗೆದರೂ ಸನ್ಮಾನವಿಲ್ಲ ಬಿದ್ದರೂ ಮರ್ಯಾದೆಯಿಲ್ಲ. ಕಾಲೇಜ ಪರೀಕ್ಷೆಯಲ್ಲಿ ಫಕ್ಕನೆ ತೇರ್ಗಡೆ ಯಾಗದಿದ್ದರೆ ಗತಿಯೇನು? ಮನೆಯಲ್ಲಿ ಹೆಂಡತಿ-ಮಕ್ಕಳಿಗೆ ಮುಖ ತೋರಿಸುವುದು ಹೇಗೆ?

ಹಳ್ಳಿಯಿಂದ ಬಂದ ವಿದ್ಯಾರ್ಥಿ ಶಿಕ್ಷಕರು ಶಿಕ್ಷಣಶಾಸ್ತ್ರದ ನೂರು ಪುಟಗಳನ್ನು ಬಾಯಿಪಾಠ ಮಾಡಿಟ್ಟಿದ್ದರು. ಪಾಠದ ಆರಂಭದ ಶಬ್ದ ಹೇಳಿಕೊಟ್ಟರೆ ವಾಕ್ಯಾವಳಿ ಮುಗಿಯುವವರೆಗೆ ಬಿಟ್ಟಪ್ಪನಲ್ಲ ಶಿಕ್ಷಣದಲ್ಲಿ ನಂಬರು ಅವರಿಗಾಗಿ ಕಾದಿರಿಸಿದಂತಾಗಿದೆ. ಈ ವಿಚಾರ ನನ್ನ ಮುಂದೆ ಬಂತು. ನಾನೆಂದೆ - ನೂರು ಪುಟ ಪಾಠ ಮಾಡಿದ ಮಾತ್ರಕ್ಕೆ ಕೇಳಿದ ಪ್ರಶ್ನೆಗೆ ಸೂಕ್ತ ಉತ್ತರ ಬರೆಯಲ್ಲಿಕ್ಕೆ ಬರುವುದೆಂದು ನಿಮಗೆ ಯಾರು ಹೇಳಿದರು? ಎಂದು ನಾನು ಕೇಳಿದೆನು. "ನಿಮ್ಮ ಮಾತು ನಿಜ, ಹಾಗಾದರೆ ಆ ನಂಬರು ನಿಮಗಾಗಿ ಮಾತ್ರ ಕಾದಿದೆಯೆಂದು ಎದೆ ತಟ್ಟಿ ಹೇಳುತ್ತೇವೆ" ಎಂದರು.

ಧಾರವಾಡ ಜಿಲ್ಲೆಯ ಒಬ್ಬ ವಿದ್ಯಾರ್ಥಿಯು ವ್ಯವಹಾರದಲ್ಲಿ ಬಹು ಧೂರ್ತನಾಗಿದ್ದನು. ಸಂತೆಯ ದಿನ ಅಂದರೆ ಮಂಗಳವಾರ, ಪೇಟೆಯತ್ತ ಹೋಗಿ, ಉತ್ತಮೋತ್ತಮವಾದ ಸರ್ವೋತ್ಕೃಷ್ಟ ಮಾವಿನಹಣ್ಣುಗಳನ್ನು ಕಂಡು, ಹೇಳಿದಷ್ಟು ಬೆಲೆ ಕೊಟ್ಟು ಹಣ್ಣಿನ ಬುಟ್ಟಿಯನ್ನು ಹೊರಿಸಿಕೊಂಡು

ರಾಯರ ಮನೆಯ ಹೆಬ್ಬಾಗಿಲ ಮುಂದೆ ಇಳಿಯಿಸಿ, ಒಳಗೆ ಹಣಿಕೆ ಹಾಕಿ, ರಾಯರು ಮನೆಯಲ್ಲಿದ್ದ ವಿಷಯವನ್ನು ಖಾತ್ರಿ ಮಾಡಿಕೊಂಡು ಅವರ ಬಳಿಗೆ ಹೋದನು.

"ನಮ್ಮ ತೋಟದಿಂದ ಒಂದು ಕರಂಡಿ ಒಳ್ಳೆಯ ಮಾವಿನ ಹಣ್ಣುಗಳನ್ನು ನನ್ನ ತಂದೆ ಕಳಿಸಿದ್ದಾನೆ. ತಾವು ಅದನ್ನು ಸ್ವೀಕರಿಸಿ ತೃಪ್ತಿ ಪಟ್ಟರೆ...."

ಅಂತೂ ರಾಯರು ಸಮ್ಮತಿಸಿದರು. ಒಟ್ಟಿನಲ್ಲಿ ಮಾವಿನಹಣ್ಣಿನ ಕರಂಡಿಗೆಯನ್ನು ಒಪ್ಪಿಸಿದ ಜೋಶಿ ಅವರಿಗೆ ಮೊದಲ ನಂಬರು ಪರೀಕ್ಷೆಯಲ್ಲಿ ಖಂಡಿತ ಎಂದು ಕೆಲವರು ತೀರ್ಮಾನಿಸಿದರು.

ವಾರ್ಷಿಕ ಪರೀಕ್ಷೆಗೆ ಸರ್ಟಿಫಿಕೇಟ ಪರೀಕ್ಷೆಯೆಂದು ಹೇಳುತ್ತಾರೆ. ಆ ಪರೀಕ್ಷೆ ಸಮೀಪಿಸಿಧಂತೆ ವಸತಿಗೃಹದಲ್ಲಿ ದೀಪಗಳು ಬೆಳತನಕ ಉರಿಯುವವು. ಹಾಗೆ ನಿದ್ದೆಕೆಟ್ಟಿದ ಕಣ್ಣುಗಳು ಸಂಜೆಯ ತನಕ ಉರಿಯುವವು. "ಅನುಗಾಲವೂ ಚಿಂತೆಯು। ಮನವು ಮಾಧವನೊಳು ಮರೆಯಾಗುವ ತನಕ। ಅನುಗಾಲವೂ ಚಿಂತೆಯು" ಎಂದು ಇಳಿ ವಯಸ್ಸಿನ ವಿದ್ಯಾರ್ಥಿಯು ಕಳ್ಳದನಿಯಲ್ಲಿ ಯಾವಾಗಲೂ ಹಾಡುವನು.

ನಾನು ಮಾತ್ರ ಆ ಅವಧಿಯಲ್ಲಿ "ವಸಂತಸೇನಾ" ಎಂಬ ಸಿನೇಮಾ ನೋಡುವುದರಲ್ಲಿ ವೇಳೆ ಕಳೆಯುತ್ತಿದ್ದೆ. ವಸಂತಸೇನಾ ಪಾತ್ರವಹಿಸಿದ ಹೆಣ್ಣು ಮಗಳ ಠೀವಿ-ಗಾಂಭೀರ್ಯಗಳನ್ನು ಕಂಡರೆ, ನನಗೆ ಅದೆಂಥದೋ ಪೂಜ್ಯ ಭಾವವು ಆಳದಿಂದ ಪುಟಿದೇಳುತ್ತಿತ್ತು. ಚಲನಚಿತ್ರದಲ್ಲಿ ವಸಂತ ಸೇನಾಳನ್ನು ಕಂಡರೆ, ಪಾಂಡಿಚೇರಿಗೆ ಹೋಗಿ ಶ್ರೀ ಮಾತೆಯವರನ್ನು ಕಂಡು ಬಂದಷ್ಟು ಆನಂದವಾಗುತ್ತಿತ್ತು. ಇಡಿಯ ರಾತ್ರಿ ಗಡದು ನಿದ್ರೆ.

ವಾರ್ಷಿಕ ಪರೀಕ್ಷೆ ಆರಂಭವಾಯಿತು, ಮುಂದುವರಿಯಿತು, ಮುಗಿಯಿತು. ಅದನ್ನೆಲ್ಲ ಮುಗಿಸಿಕೊಂಡು ಚಡಚಣಕ್ಕೆ ಬಂದ ಮೇಲೆ, ತಿಂಗಳಾದ ಬಳಿಕ, ಪರೀಕ್ಷೆಯ ಪರಿಣಾಮ ತಿಳಿದು ಬಂದು, ಎದೆಯ ಡವಡವಿಕೆಯನ್ನು ಕಳೆದು ಬಿಟ್ಟಿತು.

ಪರಿಣಾಮ ಹೀಗಿತ್ತು -

೧. ಶಿಕ್ಷಣದಲ್ಲಿ ಮೊದಲ ನಂಬರು.

೨. ಕನ್ನಡದಲ್ಲಿ ಮೊದಲ ನಂಬರು.

೩. ಗಣಿತ, ವಿಜ್ಞಾನ ವಿಷಯಗಳಲ್ಲಿ ಮೊದಲ ನಂಬರು.

೪. ನಾಲ್ಕು ಜಿಲ್ಲೆಗಳಿಗೂ ಪ್ರಥಮ ಎಂಬುದು, ಒಂದು ಮೊದಲ ನಂಬರಿಗೆ ಕಾರಣವಾಯಿತು.

ಹೀಗೆ ೪ ಪ್ರಥಮ ಸ್ಥಾನಗಳನ್ನು ಪಡೆದು ನಾನು ರಿಕಾರ್ಡಬ್ರೇಕ್ ಮಾಡಿದ ವಿದ್ಯಾರ್ಥಿಯೆನಿಸಿದ್ದು ಶ್ರೀಮಾತಾರವಿಂದರ ಪರಮ ಕೃಪೆಯಿಂದ ಇಂದಿಗೂ ಹೇಳಿಕೊಳ್ಳುವಂತಾಗಿದೆ.

೩೫. ಮರೆಯಾದ ಅಸಿಸ್ಟಂಟರೊಂದಿಗೆ

ಸುಮಾರು ೧೦ ವರ್ಷಗಳ ಹಿಂದೆ, ಹಲಸಂಗಿ ಶಾಲೆಯ ಮುಖ್ಯ ಶಿಕ್ಷಕನಾಗಿ ಹೋದಾಗ ನಮ್ಮೂರವರೇ ಆದ ಶ್ರೀಪಲ್ಮಾರಿಯವರ ಕಡೆಯಿಂದ ಚಾರ್ಜು ತಕ್ಕೊಂಡಂತೆ, ಈ ಸಾರೆ ಸಹ ನಾನು ಇಂಡಿಯಿಂದ ಹಲಸಂಗಿಗೆ ಹೋಗಿ, ಅದೇ ಪಲ್ಮಾರಿ ಅವರ ಕಡೆಯಿಂದಲೆ ಚಾರ್ಜು ತೆಗೆದುಕೊಂಡು ಮುಖ್ಯ ಶಿಕ್ಷಕನಾದೆ. ಹಿಂದಿನ ಸಾಲೆ ಅಡಿಹುಡಿ ಎಂಬವರು ಸಭ್ಯರೂ ಪ್ರಾಮಾಣಿಕರೂ ನಿರಲಸಿಗಳೂ ಆಗಿದ್ದರು. ಈ ಸಾರೆ ವಡಗೇರಿ ಎಂಬವರು ಸಹಾಯಕ ಶಿಕ್ಷಕರಾಗಿ ೭ನೇ ತರಗತಿಯನ್ನು ಆಸ್ಥೆಯಿಂದ ನಿರ್ವಹಿಸುವ ಕಳಕಳಿಯುಳ್ಳವರಾಗಿದ್ದರು.

ಮುಂಬಯಿ ಸರ್ಕಾರದಲ್ಲಿ ಶ್ರೀನೇಸವಿ ಎಂಬವರು ಶಾಸಕರೋ ಮಂತ್ರಿಗಳೋ ಆಗಿದ್ದರು. ಅವರನ್ನು ಹಲಸಂಗಿಗೆ ಬರಮಾಡಿಕೊಂಡು, ಶಾಲೆಗೆ ಕಟ್ಟಡ ಕಟ್ಟಿಸಿಕೊಳ್ಳುವ ಏರ್ಪಾಡು ಮಾಡಿಕೊಳ್ಳಲಾಯಿತು. ಆ ಪುಣ್ಯಫಲದಿಂದ ೨ ಕೋಣೆಗಳು ಶಾಲೆಯ ಕೆಲಸ ನಡೆಸುವುದಕ್ಕೆ ಅನುಕೂಲವಾದವು.

ಹಲಸಂಗಿಯವರಾದ ವಾಸು ಎಂಬುವರು ಧೂಳಖೇಡ ಎಂಬ ಹಳ್ಳಿಯ ಶಾಲೆಯಲ್ಲಿ ೨೦ ವರ್ಷ ಶಿಕ್ಷಕರಾಗಿ ಕೆಲಸ ಮಾಡಿ, ಹೊಲ ಮನೆಗಳ ಸಲುವಾಗಿ ಹಲಸಂಗಿಗೆ ಬರಬೇಕೆಂದು ಆಶಿಸಿದರು. ಅವರು ವಯಸ್ಸಿನಿಂದ ನನಗಿಂತ ಹಿರಿಯರು. ಶಿಕ್ಷಣ ಕಾರ್ಯಕ್ಕೆ ನನಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದರು. ಅವರ ಸಂಬಳವೂ ನನಗಿಂತ ಹೆಚ್ಚು ಇತ್ತು

ಎಂದು ಹೇಳುವ ಕಾರಣವೇ ಇಲ್ಲ. ಆದರೂ ಅವರು ಹಲಸಂಗಿ ಶಾಲೆಗೆ ವರ್ಗ ಮಾಡುವುದಾದರೆ ನಾನು ಸಿಂಪಿ ಅವರ ಕೈಯಲ್ಲಿ ಸಹಾಯಕ ಶಿಕ್ಷಕನಾಗಿ ಕೆಲಸ ಮಾಡುವೆನೆಂದು ಬರಕೊಟ್ಟರು, ತಿಂಗಳೆರಡು ತಿಂಗಳಲ್ಲಿ ಅವರೂ ಹಲಸಂಗಿಗೆ ಬಂದರು.

ಶ್ರೀವಡಗೇರಿಯವರು ಪರಿಶ್ರಮಪಟ್ಟು ಪಾಠ ಹೇಳುವುದಕ್ಕೆ ಅಲಸುವವರಲ್ಲ. ಅದರಂತೆ ಶ್ರೀವಾಸು ಮಾಸ್ತರರು ಆರಂಭದಿಂದ ೫ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಪಾಠ ಹೇಳುವುದಕ್ಕೆ ಉತ್ತಮವಾದ ಚೊಕ್ಕ ಟಿಪ್ಪಣೆ ತೆಗೆದಿರಿಸಿಕೊಂಡಿದ್ದರು. ಆದ್ದರಿಂದ ಸಹಜವಾಗಿ ಹುಡುಗರಿಗೆ ವಿಷಯ ಜ್ಞಾನವಾಗುತ್ತಿತ್ತು. ಒಬ್ಬರು ಕಿರಿ ಅಸಿಸ್ಟಂಟರು, ಇನ್ನೊಬ್ಬರು ವಿಶಾಲ ಅನುಭವ ಪಡೆದ ಸಹಜ ದುಡಿಮೆಯ ಕ್ರಮವರಿತ ತಜ್ಞ ಅಸಿಸ್ಟಂಟರು. ಆದ್ದರಿಂದ ನಮ್ಮ ಶಾಲೆಯ ಕೆಲಸಕ್ಕೆ ಯಾವ ತಡೆಯೂ ಒದಗದೆ ಮುಂದೋಡುತ್ತಿತ್ತು.

ಆ ಬಳಿಕ ಅಸಿಸ್ಟಂಟರಾಗಿ ಬಂದವರೆಂದರೆ ನಾರಾಯಣಪುರ ಅವರು ಧಾರವಾಡ ಕಡೆಯ ಒಂದು ಹಳ್ಳಿಯವರು. ಜಿಲ್ಲಾ ಶಿಕ್ಷಣಾಧಿಕಾರಿಗಳೊಬ್ಬರ ಮಾವಂದಿರು ತಾವೆಂದು ಹೇಳಿಕೊಳ್ಳುತ್ತಿದ್ದರು. ಅವರ ಕುಂಟುಕಾಲ ನೋಡಿ, ಹಲಸಂಗಿಯ ಜನರು ಅವರಿಗೆ ಡೊಗ್ಗಾಲಕೃಷ್ಣನೆಂದು ಕರೆದರು. ಅವರು ಅವಿವಾಹಿತರು, ಕಾಶಿ, ರಾಮೇಶ್ವರ, ತಿರುಪತಿ-ಗೋಕರ್ಣ ಮೊದಲಾದ ತೀರ್ಥಕ್ಷೇತ್ರ ಮಾಡಿಕೊಂಡು ಬಂದ ಶ್ರೇಷ್ಠ ಬ್ರಾಹ್ಮಣ ತಾನೆಂದು ಬಾಯಬಿಚ್ಚಿ ಹೇಳುತ್ತಿದ್ದರು. ಅವರ ಸೇವೆ ಚಾಕರಿಗಾಗಿ ಒಬ್ಬ ಬೆನ್ನು ಸತ್ತ ಹೆಂಗಸು ಸಿಕ್ಕಳು. ಹಲಸಂಗಿಯ ತರುಣರು, ಅವರಿಗೆ ಸೂಜಿ ದಾರಿನ ಗುರುಗಳೆಂದು ಕರೆದರು.

ಮನೆಯ ಮುಂದಿನ ಕಟ್ಟೆಯಲ್ಲಿ ಕುಳಿತು-ಹಲಸಂಗಿ ಗ್ರಾಮದ ಬ್ರಾಹ್ಮಣದ ಸಮಾಜದವರು ಕೆಳ ತರಗತಿಯವರೆಂದೂ ಏನು ಮಾಡಿದರೂ ಅವರು ತನ್ನ ಸಮಾನ ಆಗಲಾರರೆಂದೂ ಕೂಗಿ ಸಾರಿ ಹೇಳುತ್ತಿದ್ದರು. ತಾನು ಮಾತ್ರ ಅವಿವಾಹಿತ ಮತ್ತು ತೀರ್ಥಯಾತ್ರೆ ಮಾಡಿಬಂದವನಾಗಿರುವುದೇ ಅದಕ್ಕೆ ಕಾರಣವೆನ್ನುತ್ತಿದ್ದರು. ಆ ದಿಶೆಯಲ್ಲಿ ಅವರ ಬಾಯಿ ತೀರ

ಕೆಳಮಟ್ಟದ ಭಾಷೆಯನ್ನೇ ಬಳಸುತ್ತಿತ್ತು. ಗ್ರಾಮದ ಪ್ರತಿಷ್ಠಿತ ಸ್ಥಾನದಲ್ಲಿದ್ದ ಯಶವಂತರಾಯ ಎಂಬುವರನ್ನು ಏಶ್ಯಾ ಎಂದು ಸಂಬೋಧಿಸುವುದೂ ಅದೇ ಹೆಸರಿನ ಅಗಸರವನನ್ನು ಯಶವಂತರಾಯ ಎಂದೂ ಕರೆಯುವುದು ತಮ್ಮ ದೊಡ್ಡಸ್ತಿಕೆಯ ಲಕ್ಷಣವೆಂದು ನಾರಾಯಣಪುರ ಅವರು ಬಗೆಯುತ್ತಿದ್ದರು.

ಪಲಸಂಗಿಯ ನೆರೆಯ ಗ್ರಾಮವೊಂದರಲ್ಲಿ ಕುಲಕರ್ಣಿಯವರು ತಮ್ಮ ಮಗನ ಲಗ್ನವನ್ನು ಹಮ್ಮಿದ್ದಾಗ ನಮಗೆಲ್ಲ ಆಮಂತ್ರಣ ಪತ್ರಗಳು ಬಂದವು. ಸಮೀಪದ ಹಳ್ಳಿಯಾದರಿಂದ, ಶಾಲೆಗೆ ಸೂಟಿಯಿದ್ದುದರಿಂದ ನಾವೆಲ್ಲ ಲಗ್ನಕ್ಕೆ ಹೋದೆವು. ಲಗ್ನದ ಮನೆಯಲ್ಲಿ ಕೆಲವು ಬ್ರಾಹ್ಮಣ ತರುಣರು ಕೊಡ ಹೊತ್ತು ನೀರು ತರುತ್ತಿದ್ದರು. ಅವರೊಳಗಿನ ಒಬ್ಬ ತರುಣನನ್ನು ತೋರಿಸಿ ನಾರಾಯಣಪುರ ಹೇಳಿದರು - ಏ ಲಕ್ಷ್ಮಣ್ಯಾ, ತುಸು ತಡೆ, ಆತನು ವಾಡಿಕೆಯಾಗಿ ನಿಂತುಕೊಂಡಾಗ - "ಈತ ನಮ್ಮ ವಿದ್ಯಾರ್ಥಿ, ಈಗ ದೊಡ್ಡವನಾಗಿದ್ದಾನೆ" ಎಂದು ನಮಗೆ ಪರಿಚಯ ಮಾಡಿಕೊಡುವಷ್ಟರಲ್ಲಿ, ಆ ಲಕ್ಷ್ಮಣ್ಯನು ಎಡಗೈಯೊಳಗಿನ ಕೊಡವನ್ನು ಕೆಳಗಿಟ್ಟು, ಬಲಗೈಯಲ್ಲಿ ಹಿಡಿದ ಬೀಡಿಯನ್ನು ಬಾಯಲ್ಲಿ ಹಿಡಿದು, ಜೋರಾಗಿ ಕುಡಿದು 'ಅಹುದು, ಅಹುದು, ನಾನು ಈ ಮಾಸ್ತರರ ವಿದ್ಯಾರ್ಥಿ ನಾನು ನಿಜ. ಇಂಥವರು ನನ್ನನ್ನು ಕಲಿಸದೆ ಇನ್ನಾರಾದರೂ ಕಲಿಸಿದ್ದರೆ ತಹಶೀಲದಾರನಾಗುತ್ತಿದ್ದೆ. ಇಂಥವರು ಕಲಿಸಿದರೆಂದು ನಾನು ನೀರು ಹೊರಬೇಕಾಗಿದೆ' - ಎಂದು ಕೊಡ ಎತ್ತಿಕೊಂಡು ಬಾವಿಯತ್ತ ಓಡಿದನು.

ನಾರಾಯಣಪುರ ನಕ್ಕು ತಮಗಾದ ಅವಮಾನವನ್ನು ಮುಚ್ಚಿಕೊಂಡರಲ್ಲದೆ "ಈತ ಚಿಕ್ಕಂದಿನಿಂದಲೂ ಇದೇ ಸ್ವಭಾವದವನು" ಎಂದು ಮಾತು ಮುಗಿಸಿದರು. "ವರ್ಣಮಾತ್ರಂ ಕಲಿಸಿದಾತಂ ಗುರು" ಎಂಬ ಮಾತಿಗೆ ನಿಜವಾದ ಅರ್ಥ ತಿಳಕೊಂಡವರು ತೀರ ಕಡಿಮೆ. ಯಾಕೆಂದರೆ ನಾನೂ ಅದೇ ವರ್ಗಕ್ಕೆ ಸೇರಿದವನಲ್ಲವೇ?

ಈ ಸಂದರ್ಭದಲ್ಲಿ ಇನ್ನೊಂದು ಪ್ರಸಂಗವನ್ನು ಹೇಳಬೇಕು- ಶ್ರೀಗಿರಿಗೌಡ ಎಂಬವರು ಅಸಿಸ್ಟಂಟರಾಗಿ ಕೆಲಸ ಮಾಡುತ್ತಿದ್ದರು. ಅವರು

೪ನೇ ತರಗತಿಗೆ ಪಾಠ ಹೇಳುತ್ತಿದ್ದರು. ನಮ್ಮ ಶಾಲೆಯೆಂದರೆ ಊರ ದಕ್ಷಿಣ ನಿಟ್ಟಿನಲ್ಲಿರುವ ೨ ಕೋಣೆಗಳು. ನಾನು ಒಂದು ಕೋಣೆಯಲ್ಲಿ ಕೆಲಸ ಮಾಡುತ್ತಿದ್ದೆ. ಗಿರಿಗೌಡರು ಇನ್ನೊಂದು ಕೋಣೆಯಲ್ಲಿ, ನಮ್ಮ ಕೋಣೆಗಳ ಬಾಗಿಲುಗಳು ತೆರೆದಿದ್ದು ದೂರದಲ್ಲಿ ಬರುವ ವಾಹನಗಳೆಲ್ಲ ಸಹಜವಾಗಿ ಕಾಣಿಸುತ್ತಿದ್ದವು.

ಜಿಲ್ಲಾ ಸ್ಕೂಲ್ ಬೋರ್ಡಿನ ಸಾಹೇಬರಾಗಿದ್ದ ಸಂಗನಾಳ ಮಠ ಅವರು, ಸೈಕಲ್ ಮೇಲೆ ಬಂದವರೇ ಶಾಲೆಯ ಆವರಣದಲ್ಲಿ ಕಾಲಿಟ್ಟರು. ಅದನ್ನು ಕಂಡ ಗಿರಿಗೌಡರು ಸಾಹೇಬರಿಗೆ ಮೊದಲು ಚಹದ ವ್ಯವಸ್ಥೆ ಮಾಡಬೇಕೆಂದು ವರ್ಗ ಬಿಟ್ಟು ಎಲ್ಲಿಯೋ ಓಡಿದರು. ಆ ಗಲವಿಲಿ ನನ್ನ ಕಿವಿಗೆ ಬೀಳಲು ಹೊರಬಂದೆ. ಸಾಹೇಬರು ಕಾಣಿಸಿದರು. ಶರಣೆಂದು ಕೈಮುಗಿದೆ. ಅವರು ಗಿರಿಗೌಡರ ಕ್ಲಾಸನ್ನು ಹೊಕ್ಕರು, ಸುತ್ತಲೂ ಕಣ್ಣರಳಿಸಿ ನೋಡಿ ಕೇಳಿದರು - ವಿಷಯ ಏನು ನಡೆದಿತ್ತು ?

"ಸುಖವಳಿದು ಕಷ್ಟವಾಯ್ತೆಂದಳಲದಿರು" ಎಂಬ ಕವಿತೆ ಕಲಿಸುತ್ತಿದ್ದರು ಎಂದು ವಿದ್ಯಾರ್ಥಿಗಳು ಹೇಳಿದರು.

"ಈ ಕವನ ರಚಿಸಿದವರಾರು?" ಇದು ಸಾಹೇಬರು ಕೇಳಿದ ಪ್ರಶ್ನೆ.

ಯಾರಿಂದಲೂ ಉತ್ತರ ಬರಲಿಲ್ಲ! ಮಾಸ್ತರ್ ಎಂದು ಕೂಗಿದರು. ಸಾಹೇಬರು. ಅವರು ಹೊರಗಿನಿಂದ ಓಡುತ್ತ ಬಂದು ಸಾಹೇಬರ ಬದಿಯಲ್ಲಿ ನಿಂತು ಕೈಮುಗಿದರು. ಸಾಹೇಬರು ಹೇಳಿದರು -

"ಈಗ ಕಲಿಸುತ್ತಿರುವ ಕವಿತೆ ರಚಿಸಿದವರು ಯಾರು ಎಂಬುದನ್ನು ಯಾವ ವಿದ್ಯಾರ್ಥಿಯೂ ಹೇಳಲಿಲ್ಲ. ಈಗ ನೀವೇ ಹೇಳಿರಿ ನಿಮ್ಮ ವಿದ್ಯಾರ್ಥಿಗಳಿಗೆ" ಎಂದರು.

ಗಿರಿಗೌಡರು ಥಟ್ಟನೆ ನುಡಿದರು - "ಗೊತ್ತಿಲ್ಲವೇ ಈ ಕವಿತೆ ಬೇಂದ್ರೆ ರಚಿಸಿದ್ದು".

ಸಾಹೇಬರು ಗಹಗಹಿಸಿ ನಕ್ಕು ನನ್ನ ಕಡೆಗೆ ನೋಡಿ ಹಣೆಹಣೆ ಬಡಕೊಂಡರು ಬಳಿಕ ನುಡಿದರು - ಸಿಂಪಿ ಲಿಂಗಣ್ಣನವರ ಸಹಾಯಕ ಶಿಕ್ಷಕರೂ ಹೀಗೆ ಉತ್ತರ ಕೊಡಬೇಕೇ?

ನಾನು ನುಡಿದೆ - ಅಂಥ ಶಿಕ್ಷಕರನ್ನು ಆಯ್ಕೆ ಮಾಡಿದವರು ಜಿಲ್ಲಾ ಸ್ಕೂಲ್ ಬೋರ್ಡಿನವರು. ಅವರನ್ನು ಮೂವತ್ತು ವರುಷ ಸಂಬಾಳಿಸಿ ಸಂಬಳ ಕೊಡುವವರು ಎ.ಓ. ಸಾಹೇಬರು. ನಮ್ಮಲ್ಲಿಗೆ ಬಂದು ಆರು ತಿಂಗಳು ಸಹ ಕಳೆದಿಲ್ಲ. ಅವರನ್ನು ಹೇಗೆ ಸುಧಾರಿಸಬಲ್ಲನು ಸಿಂಪಿ ಲಿಂಗಣ್ಣ?

ಸಾಹೇಬರು ಅಡ್ಡಬಾಯಿ ಹಾಕಿ ಕೇಳಿದರು-

ನಮ್ಮ ಶಾಲೆಗಳಲ್ಲೆಲ್ಲ ನೂರಕ್ಕೆ ನೂರರಷ್ಟು ಜನ ಶಿಕ್ಷಕರು ಇಂಥವರೇ ಇದ್ದಾರೆ. ಯಾರು ತಿದ್ದಬಲ್ಲರು ಅವರನ್ನು? ಅನ್ನುತ್ತ ನಮ್ಮ ಕೋಣೆಯನ್ನು ಪ್ರವೇಶಿಸಿ, ಒಂದಿಷ್ಟು ಚಹ ತೆಗೆದುಕೊಂಡು, ಮುಂದಿನ ಯಾವುದೋ ಹಳ್ಳಿಗೆ ಹೋಗಬೇಕಾಗಿದೆಯೆಂದು ಎದ್ದರು, ಕೈ ಮುಗಿದರು. ನಾನೂ ಅದಕ್ಕೆ ಪ್ರತಿಯಾಗಿ ಕೈಮುಗಿದೆ.

ಮಕರಸಂಕ್ರಮಣದ ಮುನ್ನಾ ದಿವಸ ಹೆಂಡತಿ ಮೈಯಲ್ಲಿ ಸ್ವಸ್ಥವಿರಲಿಲ್ಲ. ಆದ್ದರಿಂದ ಸಂಕ್ರಾಂತಿಗಾಗಿ ಹಬ್ಬದಡಿಗೆಯ ಹವ್ಯಾಸಕ್ಕೆ ಬೀಳಬೇಡ ಎಂದು ಆಕೆಗೆ ಸೂಚಿಸಲು, ಆಕೆ ಮರುನುಡಿದಳು, ಏನೆಂದರೆ-

"ಹಿರೇ ಮಗಳ ಚಿಂತೆ ನಮಗೆ ಬೇಡ. ಆಕೆ ಅತ್ತೆಯ ಮನೆಯಲ್ಲಿದ್ದಾಳೆ. ಉಳಿದ ಮಕ್ಕಳು ಹಬ್ಬದಿವಸ ವಿಶೇಷ ಊಟವಿಲ್ಲದೆ ಇರಬೇಕೇ?"

ತಲೆಗೆ ಅಡ್ಡಪದರು ಹಾಕಿ ಪಾತ್ರೆಪಳಗಳನ್ನು ಸಾವರಿಸಹತ್ತಿದಳು. ಮನೆಯ ಎಮ್ಮೆ ಅಂದು ದೊಡ್ಡ ತಂಬಿಗೆಯ ತುಂಬ ಹಾಲು ಹಿಂಡಿತ್ತು. ಖೀರು ಮಾಡೋಣ, ಗಾಣಿಗರ ಮನೆಗೆ ಹೇಳಿ ಕಳಿಸಿದ್ದೇನೆ ಬೆಣ್ಣೆ ಕಾಸಿಡಿರೆಂದು ನಿಳಿವೆ ತುಪ್ಪ ಬರುತ್ತದೆ. ಜವೆ ಗೋದಿಯ ಹಿಟ್ಟಿದೆ. ನಾದಿ

ಮೆತ್ತಗಿನ ಚಪಾತಿ ಮಾಡಿದರೆ ಸಾಕು. ಅನ್ನ ಸಾರು, ಬಾಯಾಡಿಸಿಕೊಳ್ಳಲು ಬದನಿಕಾಯಿ ಪಲ್ಲೆ.

ಇದು ಅಂದಿನಡಿಗೆಯ ಪರಿವಿಡಿ. ಈರಣ್ಣ, ಈಶ್ವರ, ಸೂರ್ಯಕಾಂತ ಇವರನ್ನು ಅಕ್ಕ ಭವತಾರಿಣಿ ಬಚ್ಚಲಿಗೆ ಕರೆದೊಯ್ದು ಜಳಕ ಮಾಡಿಸಿದಳು.

ಅಂದಿನ ಊಟ ದಿನಕ್ಕಿಂತ ತುಸು ತಡವಾಗಿ ಮುಗಿಯುವುದೆಂದು ತಿಳಿದೇ ಇತ್ತು. ಹಾಲು ಕುಡಿದು ಗಟ್ಟಿಯಾದ ಖೀರು ಸಿದ್ಧವಾಯಿತು. ಅದರಲ್ಲಿ ಮನೂಕಿ, ಯಾಲಕ್ಕಿ ಹಾಕಿ ಮತ್ತಿಷ್ಟು ಗಮಗಮಿಸುವಂತೆ ಮಾಡಲಾಯಿತು.

ಒಂದು ಗಂಟೆಯ ಸುಮಾರಿಗೆ ಮಕ್ಕಳನ್ನೆಲ್ಲ ಕರಕೊಂಡು ಊಟಕ್ಕೆ ಕುಳಿತೆ. ತಾಬಾಣದಲ್ಲಿ ಚಪಾತಿ ಮುರಿದಿಟ್ಟರು, ಬದಿಗೆ ಖೀರು ಸುರವಿದರು. ಬಾಯಾಡಿಸುವ ಬದನೀಕಾಯಿ ಪಲ್ಲೆ ಒತ್ತಟ್ಟಿಗೆ ಕಾಣಿಸಿತು, ಚಪಾತಿ ತುತ್ತು ಮಾಡಿ ಖೀರಿನಲ್ಲಿ ಅದ್ದಿ ಬಾಯಿಗಿಟ್ಟರೆ ಚಿಮಣಿ ಎಣ್ಣೆಯ ವಾಸನೆ! ಥೂ! ಥೂ!! ಇದೆಂಥ ಖೀರು? ಹಾಲು ಕುದಿಸಿದ ಬಗೋಣಿ ಸರಿಯಾಗಿ ತೊಳೆದವೋ ಇಲ್ಲವೋ? - ಎನ್ನುತ್ತ ಎಲ್ಲರೂ ಪರಿತಪಿಸುತ್ತಲೇ ಬದನೀಕಾಯಿ ಪಲ್ಲೆಯೊಡನೆ ಚಪಾತಿ ತಿಂದು, ಅನ್ನಸಾರು ಸುರಿದು ಕೈ ತೊಳಕೊಂಡು ಈಚೆಗೆ ಬಂದೆವು.

ಇದೆಂಥ ಸಂಕ್ರಾಂತಿ ಇದು? ಹೀಗೇಕಾಯಿತು?

ಹೆಂಡತಿಗಾದ ಕಾಯಿಲೆಯೆಂದರೆ ಕಾಮಣಿ, ನಾಲ್ಕು ತಿಂಗಳ ಬಸುರಿ ಬೇರೆ ಏನು ಅಪಥ್ಯವಾಯಿತೋ ಸಂಜೆಯೊಳಗಾಗಿ ಎದೆ-ಹೊಟ್ಟೆಗಳಲ್ಲಿ ಉರುಪು ಉಲ್ಬಣಿಸಿತು, ಭತಗುಣಕಿಯಿಂದ ಅಭ್ಯಂಕರ ಡಾಕ್ಟರರನ್ನು ಕರೆಯಿಸಿ ಉಪಚರಿಸಲು ಕೇಳಿಕೊಂಡೆವು. ಅವರು ಹೇಳಿದಂತೆ ಚಿಕಿತ್ಸೆ ನಡೆಯಿತು.

ಹೊತ್ತು ಮುಳುಗಿ ರಾತ್ರಿಯಾದಂತೆ ಹೊಟ್ಟೆ-ಎದೆಗಳು ತೀರ ತೊಂದರೆಗೀಡು ಮಾಡಿದವು. ಅಷ್ಟರಲ್ಲಿ ಗರ್ಭಪಾತವೂ ಆಯಿತು,

ಚಡಚಣಕ್ಕೆ ಹೇಳಿಕಳಿಸಿತು. ಅತ್ತೆ, ಅತ್ತೆಯ ಬಳಗ, ಅತ್ತಿಗೆ, ಅತ್ತಿಗೆಯ ಬಳಗ ಎಲ್ಲರೂ ಸೇರಿದರು. ಬೆಳಗಾಗ ಬಂದಂತೆ ನಿರಾಶೆ ಕಂಗೆಡಿಸಿತು. ಸೂರ್ಯೋದಯ ಆಗುವ ಹೊತ್ತಿಗೆ ಹೆಂಡತಿ ದೇವಸನ್ನಿಧಿಯನ್ನು ಸೇರಿದ್ದಳು.

ಅದೇ ವರುಷ ಆಗಸ್ಟದಲ್ಲಿ ಆಕೆ ಪಾಂಡಿಚೇರಿಗೆ ಹೋಗಿ ಮಾತಾರವಿಂದರ ದರ್ಶನ ಮತ್ತು ಆಶೀರ್ವಾದ ಪಡೆದುಕೊಂಡು ಬಂದಿದ್ದಳು. ಆಕೆಯನ್ನು ಇಷ್ಟೊಂದು ಶೀಘ್ರವಾಗಿ ತಾಯಿ ತನ್ನ ಸನ್ನಿಧಿಗೆ ಕರೆದೊಯ್ಯುವಳೆಂದು ಯಾರೂ ತಿಳಿದಿರಲಿಲ್ಲ. ಇನ್ನೇನು?

ಅಳುವವರು ಅತ್ತರು, ಕರೆಯುವವರು ಕರೆದರು, ಸೊನ್ನಲಗಿಯಿಂದ ಭುವನೇಶ್ವರಿ ಬಂದು ಬಡಕೊಂಡಳು, ಹೊಡಕೊಂಡಳು, ಮಕ್ಕಳೆಲ್ಲ ಗಾಬರಿಯಾಗಿ ನಿಂತರು. ನಾಲ್ಕು ವರುಷ ಇನ್ನೂ ತುಂಬಿರದ ಮಗು ಈಶ್ವರ ಕೇಳಿದನು - ನಮ್ಮ ಮನೆಯಲ್ಲಿ ಇಷ್ಟು ಜನ ಯಾಕೆ ನೆರೆದಿದೆ?

ಆ ಮಾತಿನ ದನಿ ಅರ್ಥಗಳು, ನಮ್ಮೆಲ್ಲರ ಕರುಳುಗಳನ್ನೆಲ್ಲ ಕತ್ತರಿಸಿ ಹಾಕಿದಂತಾಯಿತು. ಆದರೆ ಸತ್ತವರಿಗಾಗಿ ಅತ್ತರೆ ಮುಂದಿನ ಸಾಗಾಟಕ್ಕೆ ತೀವ್ರ ತಡೆಯಾಗುವದೆಂದು ಶ್ರೀಮಾತೆ ಹೇಳಿದ ಮಾತನ್ನು ಲಕ್ಷಿಸಿ ಒತ್ತಿ ಬಂದ ದುಃಖವನ್ನು ತಮ್ಮಣಗೊಳಿಸಿಕೊಳ್ಳತೊಡಗಿದೆವು.

ಶಾಲೆಯ ಅಸಿಸ್ಟಂಟರು ವರ್ಗವಾಗಿ ಹೋಗುವಂತೆ, ಮನೆಯ ಅಸಿಸ್ಟಂಟರು ವರ್ಗವಾಗಿ ಹೋದಳೆನ್ನುವುದಕ್ಕಿಂತ, ಕೆಲಸ ಬಿಟ್ಟುಕೊಟ್ಟೇ ಹೋದಳೆಂದು ಭಾವಿಸುವುದೇ ಸರಿಯೆನಿಸಿತು. ಆದರೆ ಯಾವುದು ಸರಿಯೋ ಯಾವುದು ಬೆಸವೊ? ತಿಳಕೊಳ್ಳುವ ಶಕ್ತಿ ಯಾರಿಗಿದೆ?

ಪಾಂಡಿಚೇರಿಯ ಯಾತ್ರೆ ಮಾಡಿ ಬಂದ ಸಂತಳೆಂದೋ ಬಸುರಿ ಸತ್ತಳೆಂದೋ ಆಕೆಯ ಕಲೇಪರವನ್ನು ಹುಗಿಯದೆ ಬೆಂಕಿಯಲ್ಲಿಟ್ಟು ಬಂದುದಾಯಿತು. ಇಷ್ಟೊಂದು ದೊಡ್ಡ ಹೊಡೆತ ಅಕಸ್ಮಾತ್ತಾಗಿ ಬಿದ್ದು ನಮ್ಮನ್ನೆಲ್ಲ ಜರ್ಜರಿತಗೊಳಿಸಿತಾದರೂ ಮಕ್ಕಳನ್ನು ಬದುಕಿಸುವ ಸಲುವಾಗಿ,

ತಾನು ಬದುಕ ಬೇಕಾಗಿದೆಯೆಂದು ನೆವ ಹೇಳುತ್ತ ಮುಂದಿನ ದಿನ ಮಾನಗಳನ್ನು ಕಳೆಯುವ ಎತ್ತಗಡೆ ನಡೆಸಿದೆನು.

ಚಿಕ್ಕವರಾದ ಈಶ್ವರ ಮತ್ತು ಸೂರ್ಯಕಾಂತ ಅವರನ್ನೂ, ಅವರನ್ನು ಎತ್ತಿ ಆಡಿಸಬಲ್ಲ ಭವತಾರಿಣಿಯನ್ನೂ ಚಡಚಣಕ್ಕೆ ಅವರಜ್ಜಿ ಕರೆದೊಯ್ದಳು, ಭುವನೇಶ್ವರಿ ಸೊಲ್ಲಾಪುರಕ್ಕೆ ಹೊರಟಳು. ತಳಕ್ಕೆ ಉಳಿದವರು ನಾನು ಮತ್ತು ಈರಣ್ಣ. ಶಾಲೆ-ಪೋಸ್ಟ್‌ಗಳನ್ನು ನೋಡಿಕೊಳ್ಳಬೇಕಲ್ಲದೆ ಕೂಳಿನ ವ್ಯವಸ್ಥೆ ಮಾಡಿಕೊಳ್ಳಬೇಕು. ಇದ್ದಕ್ಕಿದ್ದ ಹಾಗೆ ಈರಣ್ಣನಿಗೆ ಜ್ವರ ಬಂದವು. ಅದನ್ನೆಲ್ಲ ನೋಡಿ ನನಗೆ ಚಳಿ ಬಂದವು. ಇಬ್ಬರೂ ಹಾಸಿಗೆ ಹಿಡಿದಾಗ ೩-೪ ಜನ ಹೆಣ್ಣು ಮಕ್ಕಳು ನಮ್ಮನ್ನು ಮಾತಾಡಿಸುವ ಸಲುವಾಗಿ ವಿಜಾಪುರದಿಂದ ಬಂದರು. ಅವರೊಡನೆ ಬನಹಟ್ಟಿಯ ಗಂಗವ್ವನೂ ಇದ್ದಳು. ಆಕೆ ನಮ್ಮ ಸ್ಥಿತಿಯನ್ನರಿತು ನಿಂತೇ ಬಿಡುವಳೆಂದು ಭಾವಿಸಿದ್ದೆ. ಆದರೆ ಸರಿಯರೊಡನೆ ಹೊರಟೇಬಿಟ್ಟಳು. ನಿರುಪಾಯನಾಗಿ ನಿಂತು ಬಿಡಲು ನಾನು ಕೇಳಲಿಲ್ಲ.

ಮುಂದಿನ ದಾರಿಯೇನು? ಚಡಚಣವೆಂದು ಹೇಳಬಹುದು. ಆದರೆ ಚಡಚಣಕ್ಕೆ ಹೋಗುವುದು ಸುಲಭವಲ್ಲ. ತತ್ಕಾಲಕ್ಕೆ ವರ್ಗ ಆಗಲಾರದು. ಜೀವನಿತ್ರರನ್ನು ಕರಕೊಂಡು ಹೋಗಿ ಎ.ಓ. ಸಾಹೇಬರನ್ನು ಭೆಟ್ಟಿಯಾದೆ. ಆದರೆ ಅವರು ೨ ತಿಂಗಳು ಕಳೆಯಲೆಂದರು.

ಚಡಚಣದ ೧ನೇ ಅಸಿಸ್ಟಂಟರನ್ನು ವರ್ಗಮಾಡಿ ಅವರ ಸ್ಥಳದಲ್ಲಿ ನನ್ನನ್ನು ಹಾಕಿದರು. ತರುವಾಯ ತಿಂಗಳೆರಡು ತಿಂಗಳು ಕಳೆಯುವಷ್ಟರಲ್ಲಿ ಮುಖ್ಯ ಗುರುಗಳನ್ನು ವರ್ಗಾಯಿಸಿ ನನಗೆ ಆ ಸ್ಥಳ ಸಿಗುವಂತೆ ಮಾಡಿದರು. ಯಾಕೆಂದರೆ ಅವರಿಬ್ಬರು ನನಗಿಂತ ಸೀನಿಯರ ಆಗಿದ್ದರು.

ಅತ್ತಿಗೆ ಹಾಗೂ ಆಕೆಯ ಕಿರಿಯ ಮಗಳು ಭಾಗೀರಥಿಯನ್ನು ಮುಂದೆ ಕುಳ್ಳಿರಿಸಿಕೊಂಡು ಕೇಳಿದೆನು - ಸೀದಾ ಸಾಮಾನು ತಂದುಕೊಡುವೆ, ನನಗಿಷ್ಟು ಅಡಿಗೆ ಮಾಡಿಕೊಡಿರಿ ಎಂದು ಬಿಚ್ಚಿ ಹೇಳಿದೆನು. ಅತ್ತಿಗೆ, ಮಗ ಶಂಕರನನ್ನು ಕೇಳೋಣ ಎಂದು ಹೇಳಿದಳು. ಆದರೆ ನನ್ನ ವಾಸ್ತವ್ಯ ಇನ್ನು ಕೇಶೆಟ್ಟಿ ಅವರ ಮನೆಯಲ್ಲಿ ಉಳಿಯುವುದು ಒಳ್ಳೆಯದಲ್ಲ ಎನಿಸಿತು. ಆ

ಮಾತನ್ನು ಹಿತಚಿಂತಕರನೇಕರು ಸ್ಪಷ್ಟವಾಗಿ ಹೇಳಿದರು - ನಿಮ್ಮ ವ್ಯವಸ್ಥೆಯನ್ನು ನೀವು ಮಾಡಿಕೊಳ್ಳಿರಿ ಎಂದು.

ನಮ್ಮ ವ್ಯವಸ್ಥೆ ನಾವು ಮಾಡಿಕೊಳ್ಳುವದೆಂದರೆ ಏನೆಂಬುದು ನನಗೆ ಹೊಳೆಯಲೇ ಇಲ್ಲ. ಆ ಮಾತನ್ನು ಹೇಳಿಕೊಟ್ಟವರು ಒಬ್ಬ ಹಿರಿಯರು, ಹಿಂದೆ ಮುಂದೆ ನೋಡದೆ ಪುನರ್ವಿವಾಹವಾಗಬೇಕು. ಆದರೆ ಒಮ್ಮೆಲೆ ಐವರು ಮಕ್ಕಳ ತಾಯಾಗಿ ಬರಲು ಒಪ್ಪುವವರಾರು? ಬನಹಟ್ಟಿಯ ಗಂಗಮ್ಮ ಅಂದು ನಿಂತು ಬಿಟ್ಟಿದ್ದರೆ, ಪ್ರಶ್ನೆಯೇ ಇರಲಿಲ್ಲ. ಈಗಲಾದರೂ ಆಕೆಯನ್ನು ಒಪ್ಪಿಸಬಹುದು. ಆದರೆ ಮಾಡಿಮಟ್ಟಿ ಕಷ್ಟಸೋಸಬಲ್ಲ ಜೀವ ಅಲ್ಲ ಅದು. ಆದ್ದರಿಂದ ಆ ವಿಚಾರವನ್ನು ತಲೆಯೊಳಗಿಂದ ತೆಗೆದುಹಾಕಿದೆ.

ಚಡಚಣದಲ್ಲಿ ಇನ್ನೊಂದು ಕೇಶೆಟ್ಟಿ ಮನೆತನದ ಬಾಲವಿಧವೆ ಮಾತ್ರ ಸಿಗುವಂತೆ ಯತ್ನಿಸುವೆನೆಂದು ನಡೆಪಥದ ಮಾವನವರೊಬ್ಬರು ಆಶ್ವಾಸನ ಕೊಟ್ಟರು. ಅದೇ ಆಗಬೇಕಾಗಿತ್ತು, ಆಗಿಬಿಟ್ಟಿತು. ಅದಕ್ಕೆ ವೈದ್ಯರಾದ ಆದ್ಯ ಅನಂತಾಚಾರ್ಯರು ಸಮ್ಮತಿಸಿದಂತೆ, ಉರುವಕೊಂಡ ಜಗದ್ಗುರುಗಳೂ ಒತ್ತಾಯಿಸಿದರು.

ಮುಂದಿನ ಮಾತು ಮುಂದೆ ಯಾವ ಸಮಸ್ಯೆ ಬಂದರೂ ಹತ್ತೆಂಟು ವರುಷ ಕಳೆದ ಮೇಲಲ್ಲವೇ ಬರುವುದು! ಎದೆಯಲ್ಲಿ ಧೈರ್ಯ ತಂದುಕೊಂಡೆ. ತಲೆಗೆ ನಾಚಿಕೆ ಸುತ್ತಿಕೊಂಡೆ, ಸದ್ಯಕ್ಕೇನೂ ಗಾಡಿ ಸಾಗಲೆಂದು "ಗಂಡ ಇದ್ದೂ ರಂಡ ಮುಂಡಿ ಮನೆಯಿದ್ದೂ ಬಯಲು ಭಿಕಾರಿ" ಎನ್ನುವ ಲೋಕೋಕ್ತಿಗೆ ಉದಾಹರಣೆಯಾಗಿ ಸಾಗಿದೆ.

ತಾಲೂಕಿನಲ್ಲಿಯೇ ದೊಡ್ಡದಾದ ಬ್ರ್ಯಾಂಚ್ ಪೋಸ್ಟು ಆಫೀಸು ಅದು ನನ್ನ ಕಡೆಗೇ.

೩೬. ಅನ್ನದ ಮೇಲೆ ಹೆಸರು

ಅನ್ನದ ಮೇಲೆ ಅದನ್ನು ತಿನ್ನುವವನ ಹೆಸರು ಬರೆದಿರುತ್ತದೆಂದು ಹಿರಿಯರು ಹೇಳುತ್ತ ಬಂದಿದ್ದಾರೆ. ಆದರೆ ನನಗೆ ಇನ್ನೂ ಒಂದು ಹೆಚ್ಚಿನ ವಿಷಯ ತಿಳಿದಿದೆಯೆಂದು ಹೇಳಬಯಸುತ್ತೇನೆ ಏನೆಂದರೆ -

ಅನ್ನದ ಮೇಲೆ ಅದನ್ನು ತಿನ್ನುವವನ ಹೆಸರು ಅಷ್ಟೇ ಬರೆದಿದ್ದರೆ ಅದರ ಕೆಳಗೆ ತಿನ್ನುವ ದಿನಾಂಕವನ್ನೂ ಬರೆದಿರುತ್ತದೆ. ಆ ವಿಷಯ ನನ್ನ ಅನುಭವಕ್ಕೆ ಹಲವು ಸಾರೆ ಬಂದಿದೆ.

ಹತ್ತೆಂಟು ವರ್ಷಗಳ ಹಿಂದಿನ ಮಾತು. ರೇಲುಮಾರ್ಗದಿಂದ ರಾಯಚೂರಿಗೆ ಹೊರಟಿದ್ದೆ. ಸಾಯಂಕಾಲದ ಹೊತ್ತಿಗೆ ಪ್ರವಾಸ ಮುಗಿಯುತ್ತಿತ್ತು. ನಾನು ಕುಳಿತ ಬೋಗಿಯಿಂದ ಹಲವರು ಇಳಿದಿಳಿದು ಹೋದರು ಮತ್ತು ಹಲವು ಜನ ಹತ್ತಿದರು. ಬಹಳ ದೂರದಿಂದ ಕೂಡಿ ಬಂದವರಾಗಿ ನಾವಿಬ್ಬರೂ ಪರಸ್ಪರ ಮಾತುಕತೆಗೆ ತೊಡಗಿದೆವು.

ನನ್ನದು ಚಡಚಣವಾದರೆ ಅವರದು ಭತಗುಣಕಿ. ಭತಗುಣಕಿಯ ಪರಿಚಯ ನನಗೆ ಸಾಕಷ್ಟಿತ್ತು ಆದ್ದರಿಂದ ಕೇಳಿದೆ -

"ನಿಮ್ಮ ಅಡ್ಡ ಹೆಸರೇನು?"

ಅವರು ಹೇಳಿದರು - ಭೈರಶೆಟ್ಟಿಯೆಂದು

ಭೈರಶೆಟ್ಟಿ ಮನೆತನದ ಒಬ್ಬಿಬ್ಬರ ಹೆಸರು ನನ್ನ ನೆನಪಿಗೆ ಬಂತು. ಹೇಳಿಕೊಟ್ಟೆ ಅವರು ಹೇಳಿದರು -

"ಭೀಮರಾಯ ನನ್ನ ಕಕ್ಕ ಈರಪ್ಪ ನನ್ನ ತಂದೆ. ನನ್ನ ಹೆಸರು ಸಿದ್ದರಾಮಪ್ಪ, ನನ್ನ ತಂದೆ ಹೇಳುತ್ತಿದ್ದರು - ಜೇವರಗಿಯವರ ಮನೆಯಲ್ಲಿ ನಿಂಗಣ ಮಾಸ್ತರರೆಂಬುವರು ಇದ್ದರು. ಅವರು ಕುಸ್ತಿಯಾಳಿನಂತೆ ಕಾಣುತ್ತಿದ್ದರು ಎಂದು. ಕಕ್ಕ ಭೀಮರಾಯನೂ ಬಹಳ ಸಾರೆ ಹೇಳಿದ್ದನ್ನು ಕೇಳಿದ್ದೇನೆ."

ಹುಟಗಿಯಲ್ಲಿ ದೊಡ್ಡ ರೈಲು ಹತ್ತಿದ ನಾವಿಬ್ಬರೂ ರಾಯಚೂರಿನವರೆಗೆ ಕೂಡಿ ಹೋಗುವುದು ಅನಿವಾರ್ಯವಾಯಿತು.

ಆ ಸಿದ್ದರಾಮಪ್ಪನ ಪ್ರವಾಸ ರಾಯಚೂರಿಗೂ ಮುಂದೆ ಹೋಗಿ ಮಾಂಚಾಲಿಗೆ ಮುಗಿಯುತ್ತಿತ್ತೆಂದು ತಿಳಿದು ಬಂತು. ರಾಯಚೂರು ಇನ್ನೂ ಹತ್ತು ಹದಿನೈದು ಮೈಲು ದೂರದಲ್ಲಿತ್ತು, ಹೊತ್ತು ಇಳಿದಿತ್ತು. ಬಾಯಿ ಸುಳು ಸುಳು ಎನ್ನುವ ಸಮಯ. ಆದರೆ ನನ್ನ ಹತ್ತಿರ ಇರುವುದು ಬಾಯಿ ಒಂದೇ.

ಮಧ್ಯಾಹ್ನದ ಊಟವಂತೂ ಸಾಕುಸಾಕು ಎನ್ನುವಂತಾಗಿತ್ತು. ಸಾಯಂಕಾಲಕ್ಕೆ ಹೇಗೂ ಮಿತ್ರರು ಮನೆಗೆ ಹೋಗುತ್ತೇನೆಂದು ಇಳಿಹೊತ್ತಿನ ಸಲುವಾಗಿ ಯಾವ ಯೋಚನೆಯನ್ನೂ ಮಾಡಿರಲಿಲ್ಲ.

ಸಿದ್ದರಾಮಪ್ಪ ಮಾತ್ರ ಯಾವುದೋ ನಿಲ್ದಾಣದಲ್ಲಿಳಿದು ಕೈಕಾಲುಮುಖ ತೊಳಕೊಂಡುತಂಬಿಗೆನೀರಿನೊಡನೆ ಬಂದು ಗಾಡಿಯೇರಿದನು.

ಸೂಟಕೇಸಿನಲ್ಲಿ ಬಯತಿಟ್ಟ ಗಂಟು ಕೆಳಗೆ ತೆಗೆದುಕೊಂಡು ಬಿಚ್ಚಿದನು.

ತೋಟದಲ್ಲಿ ಬೆಳೆದ ಜವೆಗೋದಿಯಿಂದ ಮಾಡಿದ ಮೆತ್ತಗಿನ ಚಪಾತಿ, ಮೇಲೆ ಸೇಂಗಾದ ಹಿಂಡಿ, ಮೊಸರು ಕಲಿಸಿದ ಅನ್ನ, ಎರಡು ಬಾಳೆಹಣ್ಣು ನನ್ನ ಕಡೆಗೆ ಚಾಚಿದನು.

ನಾನು ಬೇಡವೆಂದರೂ ಕೇಳಲಿಲ್ಲ. ಅಂತೂ ಅರ್ಧ ತಾಸಿನವರೆಗೆ ಕೈಗೂಬಾಯಿಗೂ ಜಗಳ ನಡೆಯಿತು. ಕೊನೆಯಲ್ಲಿ ಕೈ ಸೋಲದೆ ಬಾಯಿ ಮಾತ್ರ ಸೋತಿತು. ಆ ಕದನವಿರಾಮದ ಚಿಹ್ನವಾಗಿ ಅರ್ಧ ತಂಬಿಗೆ ನೀರು ಕುಡಿದದ್ದಾಯಿತು.

ಮರಿಯೂಟವಾದ ಬಳಿಕ ನಡೆದ ಮಾತುಕತೆ ತೀರ ಹತ್ತಿರದ್ದಾಯಿತು. ಚಡಚಣದಿಂದ ನೀವು ಇಂಡಿ ಸ್ಟೇಶನ್‌ಕ್ಕೆ ಹೋಗುವಾಗ ಭೈರಶೆಟ್ಟಿಯವರ ತೋಟ ಕಾಣಿಸುತ್ತದೆ. ಅಲ್ಲಿ ಒಮ್ಮೆ ಇಳಿದು, ನೀವು ನಿಮ್ಮ ತೋಟ, ಮನೆ, ಒಕ್ಕಲುತನ ನೋಡಿಕೊಂಡು ತರುವಾಯದ ಬಸ್ಸಿನಿಂದ ಚಡಚಣಕ್ಕೆ ಹೋಗಬಹುದು ಎಂದು ಮಾತು ಮುಗಿಸುವ ಹೊತ್ತಿಗೆ ರಾಯಚೂರು ನಿಲ್ದಾಣ ಬಂತು. ನಾನು ಕೆಳಗಿಳಿದೆ. ಸಿದ್ದರಾಮಪ್ಪ ಕೈಮುಗಿದು ಬೀಳ್ಕೊಟ್ಟನು.

ಮುಂದೆ ೨ ವರ್ಷಗಳ ತರುವಾಯ, ಭತಗುಣಕಿಗೆ ಬರಬೇಕೆಂದು ಅವಸರದ ಕರೆ, ಮಿತ್ರರಾದ ಅಕ್ಕಿ ವಕೀಲರಿಂದ ಬಂತು. ನಾನೂ ಹೊರಟೆ. ಬಸ್ಸಿನಿಂದ ಇಳಿದು ಒಳದಾರಿಯಿಂದ ೨ ಮೈಲು ನಡೆಕೊಂಡು ಹೋದರೆ ಭತಗುಣಕಿಯನ್ನು ತಲುಪುವೆವು. ನಾನೆಷ್ಟು ಅವಸರದಿಂದ ನಡೆದರೂ ವಕೀಲರ ಭೆಟ್ಟಿಯಾಗಲಿಲ್ಲ. ನನ್ನ ದಾರಿ ಕಾಯ್ದು ಹಲಸಂಗಿಗೆ ಹೋಗಿ ಬಿಟ್ಟರೆಂದು ತಿಳಿಯಿತು. ಆಯಿತು, ಬಂದ ಹಾದಿಗೆ ಸುಂಕವಿಲ್ಲವೆಂದರೂ ಬಸ್ಸಿನ ಬಾಡಿಗೆ ಕೊಡಲೇಬೇಕಿತ್ತಲ್ಲವೇ?

ಸ್ಥಳೀಯ ಮಿತ್ರರು ತಂದು ಕೊಟ್ಟ ಚಹವನ್ನು ಮಾತ್ರ ಅವಸರವಸರವಾಗಿ ಕುಡಿದು ನನ್ನ ದಾರಿ ಹಿಡಿದೆ. ಹೊತ್ತು ತಲೆಯ ಮೇಲೆ ಏರಿತ್ತು. ೨ ಮೈಲು ಸಾಗುವಷ್ಟರಲ್ಲಿ ಬಸ್ಸು ಸಾಗುವ ದಾರಿ ಅಡ್ಡ ಮಲಗಿತ್ತು. ಆದರೆ ನನಗೆ ತುಂಬ ನೀರಡಿಕೆಯಾಗಿತ್ತು. ರಾಜಮಾರ್ಗ ಹಿಡಿದು ಚಡಚಣದತ್ತ ಮುಖಮಾಡಿ ಅರ್ಧ ಮೈಲು ಸಾಗಿದ್ದೇನೋ ಇಲ್ಲವೋ ದಟ್ಟ ನೆರಳಿನಿಂದ ತಂಪಾದ ಗಾಳಿ ಸುಳಿದುಬಂದ ಕಡೆಗೆ ನೋಡಿದೆ. ಅದೊಂದು ತೋಟ, ಬಾವಿಯಲ್ಲಿ ಕುಡಿಯುವ ನೀರು ಸಿಗುವುದು ನಿಶ್ಚಿತವೆಂದು ಅತ್ತ ಸಾಗಿದೆ.

ಬಾವಿ ಕಂಡು ಹಣಿಕೆ ಹಾಕಿದೆ ಆದರೆ ನೀರಿರಲಿಲ್ಲ. ೩-೪ ತಾಸು ನಡೆದು ಪಂಪು, ಉಸಿರುಗಟ್ಟಿ ನಿಂತಿತ್ತು. ಪಂಪಿನಿಂದ ನೀರು ಜಿಗಿಯುವ ಸ್ಥಳಕ್ಕೆ ಹೋಗಿ ನೋಡಿದರೆ, ಕಾಲ ಮೇಲೆ ಚೆಲ್ಲಕೊಳ್ಳುವಷ್ಟು ನೀರು ಮಾತ್ರ ಸಿಕ್ಕಿತು. ೩-೪ ನಿಮಿಷ ನೀರಾಟವಾಡುವಷ್ಟರಲ್ಲಿ ಮನೆಯೊಳಗಿನಿಂದ ಒಬ್ಬ ತಾಯಿ ಬಂದು ಕೇಳಿದಳು -

"ನನಗೆ ಕುಡಿಯಲು ನೀರು ಬೇಕಿತ್ತು. ಚಡಚಣಕ್ಕೆ ಹೊರಟಿದ್ದೇನೆ" ಎಂದೆ.

ಮರುಕ್ಷಣದಲ್ಲಿ ಆ ತಾಯಿ, ಲಕ್ಷ್ಮೀದೇವಿಯಂತೆ ಕೈಗಳಲ್ಲಿ ನೀರಿನ ಕಲಶ ಹಿಡಿದುಕೊಂಡು ಹೊರಬಂದಳು. ಕೈಕಾಲು ತೊಳಕೊಂಡೆ. ಮುಖ ಒರಿಸಿಕೊಂಡು ಅವರು ಹರವಿದ ಕಂಬಳಿಯ ಬದಿಗೆ ಕುಳಿತುಕೊಂಡೆ. ಆ ದೇವಿ ಈ ಸಾರೆ ಅನ್ನಪೂರ್ಣೆಯಂತೆ ಕಾಣಿಸಿಕೊಂಡಳು. ಒಂದು ತಂಬಿಗೆಯಲ್ಲಿ ಕುಡಿಯುವ ನೀರು, ಮೇಲೆ ಬಟ್ಟಲು ಮಡಗಿತ್ತು. ಇನ್ನೊಂದು ತಂಬಿಗೆಯಲ್ಲಿ ಸಕ್ಕರೆ ಬೆರಸಿದ ಉಗುರು ಬೆಚ್ಚಗಿನ ಹಾಲು, ಹತ್ತೆಂಟು ಬಾಳೇಹಣ್ಣು ನಾನು ಅಚ್ಚರಿಗೊಂಡೆ. ನಾನು ಯಾರೆಂಬುದನ್ನು ತಿಳಕೊಂಡಿದ್ದರೋ ಏನೋ ಎಂದು ಅವಾಕ್ಕಾದೆ.

ಆ ಗೃಹಲಕ್ಷ್ಮಿಯನ್ನು ಕಂಡು ನನ್ನ ಹಸಿವೆ ನೀರಡಿಕೆ ಎರಡೂ ಹಾರಿ ಹೋದವೆನ್ನಬೇಕು. ಆದರೆ ಆ ತಾಯಿ ತನ್ನ ಕೈಗೂಸಿಗೆ ರಂಬಿಸಿ ಹಾಲುಣಿಸುವಂತೆ, ಬಾಳೆಹಣ್ಣು, ಹಾಲು ಆಗುಮಾಡುವಂತೆ ಅಲುಪರೆದರು. ಬಳಿಕ ಬಾಯಿ ತೊಳಕೊಂಡು ನೀರು ಕುಡಿದು ಕಟ್ಟೆಯ ಬದಿಗೆ ಕಾಲು ಇಳಿಬಿಟ್ಟುಕೊಂಡು ಕುಳಿತೆ.

"ಚಡಚಣದವರೆಂದಿರಲ್ಲ - ಏನು ನಿಮ್ಮ ಹೆಸರು" ಎಂದು ಕೇಳಿದರು ಆ ತಾಯಿ.

ನಾನು ಹೇಳಿದೆ "ನನ್ನ ಹೆಸರು ಸಿಂಪಿ ಲಿಂಗಣ್ಣ"

ಆ ಮಾತು ಮುಗಿಯುವ ಮೊದಲೇ ಅವರು ಏನೋ ನೆನಪಾದಂತೆ ಅಹಾ! ಅದೇ ಲಿಂಗಣ್ಣ ನೀವು? ಎಂದು ಉದ್ಗಾರ ತೆಗೆದರು. ಅಷ್ಟರಿಂದ ನನ್ನ ಪೆಚ್ಚುಮುಖವು ಪ್ರಸನ್ನವಾಗಲಿಲ್ಲ. ಅವರು ತಮ್ಮ ಮಾತು ಮುಂದುವರೆಸಿದರು.

- ನಮ್ಮ ಇಬ್ಬರು ಗಂಡಸುಮಕ್ಕಳು ವಿಜಾಪುರಕ್ಕೆ ಶಾಲೆ ಕಲಿಯಲು ಹೊರಟರು. ಆಗ ನಾವು ಜೋರಾಪುರದಲ್ಲಿ ಮನೆ ಬಾಡಿಗೆ ಹಿಡಿದೆವು.

ಹಯನಿನ ಸಲುವಾಗಿ ಒಂದು ಎಮ್ಮೆ ಮಣಕು ಒಯ್ಯಿದ್ದೆವು. ಹಿಂಡಿದ್ದ ಹಾಲೆಲ್ಲ ಖರ್ಚಾಗುತ್ತಿರಲಿಲ್ಲವೆಂದು ತುಸು ಹಾಲು ಮಾರಲು ಸಿದ್ಧರಾದೆವು. ಅದೇ ಆ ಓಣಿಯಲ್ಲಿದ್ದ ಚಡಚಣದ ಗುರಮ್ಮ ಅಜ್ಜಿಯವರು ನಮ್ಮ ಹಾಲಿಗೆ ಒರವೀ ಗಿರಾಕಿಯಾದರು. ಎಮ್ಮೆ ಹಿಂಡುವುದಕ್ಕಿಂತಲೂ ಮುಂಚಿತವಾಗಿ ಒತ್ತಟ್ಟಿಗೆ ಕುಳಿತು, ತಮ್ಮ ಮನೆತನದ ಸುದ್ದಿ ಸಂಗತಿಗಳನ್ನು ಹೇಳುತ್ತಿದ್ದರು. ಆಕೆಯ ಮಾತು ಕೇಳಿದರೆ ಹೊಟ್ಟೆಯೊಳಗಿನ ಹರಳು ಕರಗಬೇಕು.

ನನಗೆ ಆಶ್ಚರ್ಯವಾಯಿತು.

"ಅವರು ತಮ್ಮ ಮೈದುನನ ಕಥೆಯನ್ನು ಕಣ್ಣಿಗೆ ಕಟ್ಟುವಂತೆ ದಿನಕ್ಕೊಂದು ಪರಿಯಾಗಿ ಹೇಳುತ್ತಿದ್ದರು. ಮೈದುನನ ಮೈಕಟ್ಟು, ಪ್ರಾಯ, ಚೆಲುವಿಕೆ, ಮಾಸ್ತರಿಕೆ, ಕಥೆ ಹೇಳುವುದು, ಹಾಡು ಕಟ್ಟುವುದು ಮೊದಲಾದ ವಿಷಯಗಳನ್ನು ಗೆರೆಗೆರೆ ಎಳೆದು ಚಿತ್ರ ಬರೆದಂತೆ ಹೇಳುತ್ತಿದ್ದರು. ಈಗ ನಿಮ್ಮನ್ನು ನೋಡಿದ ಕೂಡಲೇ ಆಕೆಯ ಮಾತುಗಳೆಲ್ಲ ಕಿವಿಯಲ್ಲಿ ಜಣಜಣಿಸಿದವು. ನಿಮ್ಮನ್ನು ನೋಡುವ ಪ್ರಸಂಗವು ಈ ಹೊತ್ತು ತಾನಾಗಿ ಬಂದದ್ದು ಬಹಳ ಸಂತೋಷದ ವಿಷಯ. ಊಟದ ವೇಳೆ ಆಗಿ ಹೋಗಿದೆ. ಅರ್ಧ ತಾಸಿನಲ್ಲಿ ಉಣಿಸಿ ಕಳಿಸುತ್ತಿದ್ದೇನೆ ತಡೆಯಿರಿ" ಎಂದು ಅಂಗಲಾಚಿದಳು, ಆ ತಾಯಿದೇವಿ.

ನಾನು ಅಷ್ಟೇ ವಿನಯದಿಂದ ನುಡಿದೆನು -

"ನಿಮ್ಮ ಆತಿಥ್ಯದಿಂದ ನನ್ನ ಹೊಟ್ಟೆ ತುಂಬಿತು, ನೀರಡಿಕೆ ಹಿಂಗಿತು, ಮನವನ್ನು ಲವಲವಿಕೆ ತಳೆಯಿತು. ಇದಕ್ಕಿಂತ ಮಿಗಿಲಾದ ಊಟ ಇನ್ನಾವುದಿದೆ? ಓಹೋ! ಈ ತೋಟದ ಯಜಮಾನರೆಲ್ಲಿದ್ದಾರೆ, ಅವರ ಹೆಸರೇನು?" ಎಂದು ಕೇಳಿದೆ.

"ಏನೋ ಕೆಲಸವಿದ್ದುದರಿಂದ ಅಂಜುಟಗಿ ಹಳ್ಳಿಗೆ ಹೋಗಿದ್ದಾರೆ. ಇಷ್ಟರಲ್ಲಿ ಬಂದಾರು. ಅವರ ಹೆಸರು ಸಿದ್ದರಾಮದೇವರು."

ಆದನ್ನು ಕೇಳುತ್ತಲೇ ರಾಯಚೂರು ಪ್ರವಾಸದ ಕಥೆಯೆಲ್ಲ ಮತ್ತೆ

ಘಟಿಸಿದಂತಾಯಿತು. ಅದನ್ನೆಲ್ಲ ಸಂಕ್ಷೇಪವಾಗಿ ಹೇಳಿದೆ. ನಮ್ಮ ತೋಟಕ್ಕೊಮ್ಮೆ ಬಂದು ಹೋಗಿರೆಂದು ಕೇಳಿಕೊಂಡಿದ್ದರು. ಅದು ಇಂದು ಅಯಾಚಿತವಾಗಿ ಸಾಧಿಸಿತು. ಅವರಿಗೆ ನನ್ನ ನಮಸ್ಕಾರ ಹೇಳಿರಿ. ನನ್ನ ಬಸ್ಸು ಬರುವ ವೇಳೆಯಾಯಿತು. ಹೋರಡುತ್ತೇನೆ ಎಂದು ಲಗುಬಗೆಯಿಂದ ಎದ್ದೆ.

ಆ ತಾಯಿ, ನನ್ನ ಕೈಚೀಲು ತೆಗೆದುಕೊಂಡು, ಅದರ ತುಂಬ ಬಾಳೆಗಳನ್ನು ಹಾಕಿ, "ಹೋಗಿ ಬನ್ನಿರಿ; ಮತ್ತೊಮ್ಮೆ ಬನ್ನಿರಿ ಮತ್ತೆ ಮತ್ತೆ ಬನ್ನಿರಿ" ಎಂದು ಕೈಮುಗಿದರು.

ಅಕ್ಕ ತಂಗಿಯರ ಕರುಳ ಕಕ್ಕುಲತೆಗಳನ್ನು ಹುಟ್ಟಾ ಅರಿಯದ ನನಗೆ ಶ್ರೀಮತಿ ಭೈರಶೆಟ್ಟಿ ಅವರ ಪರಿಚಯವಾಯಿತು. ಕಣ್ಣೀರು ಉಕ್ಕಿ ಬಂದವು. ಕಣ್ಣೊರೆಸಿಕೊಳ್ಳುತ್ತ ನಾನು ಮುಂದೆಯೇ ಸಾಗಿಬಿಟ್ಟೆ. ಮರುಕ್ಷಣದಲ್ಲೇ ಬಸ್ಸು ಬಂದಿತು. ಅರ್ಧ ತಾಸಿನಲ್ಲಿ ಊರು ಸೇರಿದೆ.

ಈ ಸಂದರ್ಭಕ್ಕೆ ಪೂರಕವಾಗಬಲ್ಲ ಇನ್ನೊಂದು ಸಂಗತಿಯನ್ನು ವಿವರಿಸದೆ ಮುಂದೆ ಸಾಗುವಂತಿಲ್ಲ. ಆ ಸಂಗತಿ ಏನೆಂದರೆ -

ಸಿಂದಗಿ ತಾಲೂಕು ಕಚೇರಿಯಲ್ಲಿ ಕರಣಿಕನಾಗಿ, ಕೆಲಸ ಮಾಡುತ್ತಿದ್ದ ನಮ್ಮಣ್ಣನ ಮಗ ಶಂಕರನಿಗೆ ಕನ್ಯ ನೋಡುವ ಸಲುವಾಗಿ, ನಾನು ಮತ್ತು ನಮ್ಮೂರಿನವರೇ ಆದ ಯೋಗಪ್ಪ ಬಗಲಿ ಅವರು, ಚಡಚಣದಿಂದ ಮೊದಲು ಸಿಂದಗಿಗೆ ಹೋದೆವು. ಆ ಬಳಿಕ ಸಿಂದಗಿಯಿಂದ ಹೊರಡುವ ೫ ಗಂಟೆಯ ಬಸ್ಸಿನಿಂದ ಗಬಾವಳಗಿಯವರೆಗೆ ಹೋದರೆ, ಅಲ್ಲಿ ನಮ್ಮ ಸಲುವಾಗಿ ಬಂಟನೂರಿನ ಎತ್ತಿನ ಬಂಡಿ ಬಂದು ಕಾಯ್ದಿರುತ್ತದೆ. ಕನ್ಯೆ ನೋಡುವುದು ಬಂಟನೂರಿನಲ್ಲಿಯೇ.

ಸಿಂದಗಿಯಿಂದ ಸರಿಯಾಗಿ ಸಂಜೆಯ ೫ ಗಂಟೆಗೆ ಬಿಟ್ಟ ಬಸ್ಸು ಹಿಡಿದು. ಸುಮಾರು ೧೦-೧೨ ಮೈಲು ಸಾಗುವಷ್ಟರಲ್ಲಿ ಬಸ್ಸು ಬ್ರೇಕಡೌನ್ ಆಯಿತು. ಅದು ತೀವ್ರ ದುರಸ್ತಿಯಾಗುವಂತಿರಲಿಲ್ಲ. ಮುಂದಿನೂರೇ ಗಬಸಾವಳಗಿ. ಅದಿನ್ನೂ ೩ ಮೈಲು ದೂರದಲ್ಲಿತ್ತು. ಅಷ್ಟು ದೂರ ನಡೆಕೊಂಡು ಹೋಗುವಷ್ಟರಲ್ಲಿ ಬಂಟೂರಿನ ಬಂಡಿ ಬಂದು ಹೋಗುವದು.

ಮಾಗಿಯ ದಿನವಾದ್ದರಿಂದ ಸುತ್ತಮುತ್ತಲಿನ ಹೊಲಗಳಲ್ಲಿ ಒಲೆಗುಣಿಗಳು ಉರಿಯತೊಡಗಿದ್ದವು. ಸುತ್ತಲೂ ಬೆಳದಿಂಗಳು ಪಸರಿಸಿತ್ತು. ಅದರಂತೆ ಚಳಿಯೂ ಅಷ್ಟೇ ಉಗ್ರವಾಗಿ ಕೊರೆಯುತ್ತಿತ್ತು. ಕೊಂಕಿದ ಬಸ್ಸಿನಲ್ಲಿ ಕುಳಿತು ಮಾಡುವದೇನು? ಮೂರು ಮೈಲು ನಡೆದರೆ ಒಂದು ಊರನ್ನಾದರೂ ಕಾಣುತ್ತೇವೆ. ಅಲ್ಲಿ ಆಸರ ಸಿಗುತ್ತದೆ ಎಂದು ಯೋಚಿಸಿ ಮುನ್ನಡೆದೆವು. ಮೂರು ಮೈಲು ದಾರಿ ಸಾಗುವುದಕ್ಕೆ ೨ ತಾಸು ವೇಳೆ ಬೇಕಾದೀತು. ಹೊರಟೇ ನಿಂತಿದ್ದೇವೆಂದರೆ ಲೆಕ್ಕ ಹಾಕಿ ಪ್ರಯೋಜನವೇನು? ದಾರಿ ಗಬಸಾವಳಗಿಯ ಮಗ್ಗುಲಲ್ಲೇ ಇತ್ತು.

ಊರೆಲ್ಲ ನಿಸ್ತಬ್ಧವಾಗಿದೆ. ಆಗಲೇ ರಾತ್ರಿ ೧೦ ಗಂಟೆಯಾಗಿದೆ. ಅಂಥ ಪ್ರಸಂಗದಲ್ಲಿ ನಮಗಾರು ಸಿಗುವರು? ಎಂದು ಅನುಮಾನದಲ್ಲಿ ಮುಂದುವರೆಯುತ್ತಿರುವಾಗ ಊರ ಹೊರಗಿನ ಜೋಪಡಿಯಿಂದ ಹೊರಬಿದ್ದವನೊಬ್ಬ ಮೂತ್ರವಿಸರ್ಜನೆಗೆ ಕುಳಿತನು. ಅನಾಯಾಸವಾಗಿ ಸಿಕ್ಕ ಆತನನ್ನು ಬಿಡಬಾರದೆಂದು ನಿಶ್ಚಯಿಸಿದೆವು.

"ಏನಪ್ಪಾ, ಈ ಊರ ಶಾಲೆಯ ಮಾಸ್ತರರ ಮನೆ ಯಾವ ಕಡೆಗಿದೆ?"

"ಮಾಸ್ತರರು ಈ ಊರಲ್ಲಿ ಮನೆಯನ್ನೇ ಮಾಡಿಲ್ಲ"

"ರಾತ್ರಿ ವಸತಿ ಅವರದೆಲ್ಲಿ?"

"ಬೀರಪ್ಪದೇವರ ಪಲ್ಲಕ್ಕಿಯಿಡುವ ಮನೆಯಲ್ಲಿ ಸಿಗಬಹುದು."

"ಅದನ್ನಿಷ್ಟು ತೋರಿಸಿ ಪುಣ್ಯಕಟ್ಟಿಕೋ ಮಾರಾಯಾ. ನಾವು ಪರಸ್ಥಳದವರು. ಈ ಊರಲ್ಲಿ ನಮಗೆ ಯಾರ ಪರಿಚಯವೂ ಇಲ್ಲ. ನೀನೇ ಒಬ್ಬ ನಮ್ಮ ಪರಿಚಯದವನೀಗ" ಎಂದು ಮೃದುವಾಗಿ ನುಡಿದೆವು.

"ಇಂಥ ಥಂಡಿಯಲ್ಲಿ ನಾನೆಲ್ಲಿ ಬರಲಿ? ಇದೇ ದಾರಿ ಹಿಡಿದು ಮುಂದಕ್ಕೆ ಹೋಗಿ ಯಾರನ್ನಾದರೂ ಕೇಳಿರಿ."

"ಯಾರನ್ನು ಕೇಳುವುದು ನಿನ್ನ ಹೊರತು ನೀನೇ ನಮ್ಮ ಪಾಲಿನ ದೇವರು" ಅಂದಾಗ ಆತ ನಮ್ಮೊಡನೆ ಬಂದು ಕೈ ಚಾಚಿ, ಅದೇ ನೋಡಿರಿ ಪಲ್ಲಕ್ಕಿ ಇಡುವ ಮನೆ. ಪೂಜಾರಿಗಳೂ ಕಟ್ಟೆಯ ಮೇಲೆ ಪವಡಿಸಿದ್ದಾರೆ ಎಂದು ಹೇಳುವ ದನಿಯಿಂದ ಪೂಜಾರಿಗಳು ಎಚ್ಚೆತ್ತರು.

ನಾವು ಕೇಳಿದೆವು - "ಈ ಊರಿನ ಮಾಸ್ತರರು ಎಲ್ಲಿ ಮಲಗಿದ್ದಾರೆ?"

"ಅವರು ಇಂದು ಈಕಡೆಗೆ ಬಂದೇ ಇಲ್ಲ" ಎಂದು ತಿಳಿಸಿದರು.

"ಹೋಗಲಿ, ಪಲ್ಲಕ್ಕಿ ಕೋಣೆಯಲ್ಲಿ ನಾವಿಬ್ಬರೂ ಮಲಗಲು ಸ್ಥಳವಿದೆಯೇ?"

"ಆ ಕೋಣೆ ತುಂಬ ಕುರಿಹಿಂಡು ಕುಳಿತಿದೆ. ಕೆಳಗೆ ಉಸಿಕಿನ ಹಾಸಿಗೆಯಿದೆ. ಹೊತ್ತು ಹೊರಟ ಮೇಲೆಯೇ ಸ್ಥಳ ಸಿಗುವುದು"

"ಅಲ್ಲಿಯವರೆಗೆ ನಾವೇನು ಮಾಡಬೇಕರಿ ಪೂಜಾರಿ? ಕುರಿಹಿಂಡಿನಲ್ಲಿಯೇ ನಾವು ಸೇರಿ ಮುದ್ದಿಯಾಗಿ ಬಿದ್ದು ಬೆಳಗಾಗುತ್ತಲೇ ಎದ್ದು ಹೋಗುವೆವು" ಅಂದಾಗ

"ನೋಡಿ ನಿಮಗೆ ಅನುಕೂಲವಾಗುವಂತೆ ಮಾಡಿಕೊಳ್ಳಿರಿ" ಎಂದವರೇ ಕದಗಳೇ ಇಲ್ಲದ ಪಲ್ಲಕ್ಕಿ ಕೋಣೆಯನ್ನು ತೋರಿಸಿದರು.

ನಾವು ಕಣ್ಣಾಡಿಸುತ್ತ ಕಾಲಾಡಿಸುತ್ತ ಕೋಣೆಯನ್ನು ಸೇರಿ ಕುಳಿತಂತೆ ಮಾಡಿ ಅಲ್ಲೇ ಒರಗಿದೆವು. ಕಿರ್ಲೋಸ್ಕರ ನೇಗಿಲಿನಂತೆ ಹೊಳು ಮಯ್ಯಲ್ಲಿ ಬಿದ್ದೆವು.

"ಮೈಗೆ ಬಿಸಿ ಮುಟ್ಟಿತು. ಕುರಿ ಹಿಂಡಿನಿಂದ ಮೂಗಿಗೆ ದುರ್ವಾಸನೆ ಬಡಿದರೂ ಚಳಿ ಮಾತ್ರ ಆಗಿರಲಿಲ್ಲ. ಬಹಳ ಹೊತ್ತಿನವರೆಗೆ ನಮಗೆ ನಿದ್ರೆಯೇ ಹತ್ತಲಿಲ್ಲ. ಬೆಳಗಾಗದ ರಾತ್ರಿ ಉಂಟೆ ಎಂಬ ತತ್ವಜ್ಞಾನ ಮಾತ್ರ ಹೆಜ್ಜೆಹೆಜ್ಜೆಗೆ ನಮ್ಮ ನೆನಪಿಗೆ ಬರುತ್ತಿತ್ತು."

ಬೆಳಗಿನ ಉಲುವು ಕಿವಿಗೆ ಬೀಳಹತ್ತಿತ್ತು. ಬೆಳಗು ಮಾತ್ರ ಕಣ್ಣಿಗೆ ಬೀಳಲೊಲ್ಲದು. ಓಣಿಯಲ್ಲಿ ಯಾರೋ ಮಾತಾಡುತ್ತ ಹೊರಡುವುದು ತಿಳಿಯಿತು.

"ಬನ್ರಪಾ ಪೂಜಾರಿ, ರಾತ್ರಿ ನಮ್ಮೂರ ಕಡೆಯಿಂದ ಯಾರೋ ಇಬ್ಬರು ಬಂದಿದ್ದರಂತೆ ಅವರೆಲ್ಲಿದ್ದಾರೆ?"

ಆ ಮಾತು ಪೂಜಾರಿಗೆ ಕೇಳಿಸುವ ಮೊದಲೇ ನಮಗೆ ಕೇಳಿಸಿತು ಹೊರಬಂದೆವು. "ನಮಸ್ಕಾರ ಗುರುಗಳಿಗೆ" ಎಂಬ ನುಡಿ ಕೇಳಿಸಿತು.

"ನಾನಿಲ್ಲಿಯ ಶಾಲೆಯ ಶಿಕ್ಷಕ, ಭತಗುಣಕಿಯವ, ನಿಮ್ಮ ಶಿಷ್ಯನೇ ಅಹುದು" ಎಂದರು. ಆ ಮಾಹಿತಿಯೆಲ್ಲ ಅವರಿಗೆ ಹೇಗೆ ಲಭ್ಯವಾಯಿತೋ ಗೊತ್ತಾಗಲಿಲ್ಲ.

"ತುಂಬಿದ ಎರಡು ತಂಬಿಗೆ ತಂದಿದ್ದೇನೆ. ಬಯಲಿಗೆ ಹೋಗಿ ಬನ್ನಿರಿ. ನಾವೆಲ್ಲರೂ ಕೂಡಿ ಗೌಡರ ಮನೆಗೆ ಹೋಗೋಣ."

"ಕಲ್ಲಪ್ಪಗೌಡರು, ಅವರು ಕಣ್ಣಿಲ್ಲದ ಕುರುಡರು. ಆದರೆ ನಿಮ್ಮ ಪರಿಚಯವನ್ನೆಲ್ಲ ಹೇಳುವರು?" ಎಂದರು ಆ ಶಿಕ್ಷಕರು.

ಮಾಸ್ತರರು ಹೇಳಿಕೊಟ್ಟ ಕ್ರಮದಂತೆ ಕೈಕಾಲಿಗೆ ಹೋಗಿ ಬಂದೆವು. ಮಾಸ್ತರರನ್ನೂ ಬೆಂಬಳಿಸಿ ಗೌಡರ ಮನೆಗೆ ಹೋದೆವು. ಅಂಗಳದಲ್ಲಿ ಬಿಸಿ ನೀರು, ಸಬಕಾರ ಹಲ್ಲುಪುಡಿ, ಪಾವುಡ ಎಲ್ಲ ಸಿದ್ದವಾಗಿದ್ದವು. ಅವಸರದಿಂದ ಕೆಲಸ ಮುಗಿಸಿ ಮಾರ್ಗದರ್ಶನದಲ್ಲಿ ಗೌಡರು ಕುಳಿತುಕೊಳ್ಳುವ ಡೇಲಜಿಗೆ ಹೋಗಿ ಕೈಮುಗಿದು, "ನಮಸ್ಕಾರಗಳು ಗೌಡರಿಗೆ" ಎಂದೆವು.

ಕಲ್ಲಪ್ಪಗೌಡರು ಕಣ್ಣಿಲ್ಲದ ಕಣ್ಣಿನಿಂದ ನಮ್ಮನ್ನು ನೋಡುತ್ತ ವಾತ್ಸಲ್ಯದಿಂದ ನುಡಿದರು -

"ಲಿಂಗಣ್ಣನವರೇ, ನಿಮ್ಮ ಪರಿಚಯ ನನಗೆ ಬಹಳ ದಿನಗಳಿಂದಲೂ ಆದೆ. ಓದುವ ಶಕ್ತಿಯಿಲ್ಲದಿದ್ದರೂ 'ನವಕರ್ನಾಟಕ' ಮತ್ತು ಶಿವಾನುಭವ

ಪತ್ರಿಕೆಗಳನ್ನು ಯಾರಿಂದಲಾದರೂ ಓದಿಸಿ ಕೇಳುವೆನು. ನಿಮ್ಮ ಲೇಖನಗಳನ್ನು ಮೊದಲಿಗೆ ಕೇಳುವೆನು. ನನ್ನಣ್ಣಾ, ನನ್ನೂರಿಗೆ ಬಂದೆ, ನನ್ನ ಮನೆಗೆ ಬಂದ್ಮೆ ರಾತ್ರಿ ಊಟವಿಲ್ಲದೆ ನೀವು ಹಸಿದಿರಬೇಕು. ಈಗ ಹೊಟ್ಟೆ ತುಂಬ ಉಪಹಾರ ತೆಗೆದುಕೊಳ್ಳಿರಿ ತಾಜಾ ಹಾಲು ಇದೆ. ಮನೆ ನಿಮ್ಮದ್ದು ನಾಚಬೇಡಿರಿ" ಎಂದು ಅಂಗಲಾಚಿದರು.

ಮೂರಿಂಚು ದಪ್ಪವಾದ ಗಡೇದ ಕರದಂಟು, ಗೌಡರ ಮನೆಯಲ್ಲಿ ಸಿದ್ದವಾದದ್ದು ಅದಕ್ಕೆ ಯಾವ ಕೊರತೆಯಾದೀತು? ಹಾಲಂತೂ ಕಾಳೆಮ್ಮೆ ಕರೆದ ಹಯನು. ಅದರಲ್ಲಿ ಬೆರೆಸಲಿಟ್ಟ ಸಕ್ಕರೆಯ ಪೊಟ್ಟಣ. ಇಷ್ಟೆಲ್ಲ ಇದ್ದರೂ ಬಾಳೇ ಹಣ್ಣುತರಿಸುವುದನ್ನು ಮರೆತಿರಲಿಲ್ಲ.

"ಕಲ್ಲಪ್ಪ ಗೌಡರೇ, ನಿಮ್ಮ ವಿಷಯವೆಲ್ಲ ತಿಳಿಯಿತು. ನಮ್ಮ ವಿಷಯವೆಂದರೆ ನಾವು ಭಂಟನೂರಿಗೆ ಹೊರಟಿದ್ದೇವೆ, ಕನ್ಯೆ ನೋಡಲಿಕ್ಕೆ, ರಾತ್ರಿ ಬಸ್ಸು ಬ್ರೇಕ್ ಡೌನಾಗಿರದಿದ್ದರೆ ಇಷ್ಟು ಹೊತ್ತಿಗೆ ನಾವು ಮರಳಿ ಸಿಂದಗಿಗೆ ಹೋಗುತ್ತಿದ್ದವು. ಆದರೆ ಋಣಾನುಬಂಧವನ್ನು ತಪ್ಪಿಸಲು ಯಾರಿಗೆ ಸಾಧ್ಯ? ಹಸಿದವನಿಗೆ ಉಪವಾಸವಲ್ಲ, ಅನ್ನವಿದೆಯೆಂಬುದನ್ನು ಕಲ್ಲಪ್ಪಗೌಡರಲ್ಲಿ ಕಲಿತೆವು."

ಉಪಹಾರ ಮುಗಿಸಿ ಕೈ ತೊಳೆಯುವಷ್ಟರಲ್ಲಿ ಗೌಡರ ಗಾಡಿ ನಮಗಾಗಿ ಸಿದ್ಧವಾಗಿ ಭಂಟನೂರಿನತ್ತ ಮುಖ ಮಾಡಿ ನಿಂತಿತ್ತು. ಕಲ್ಲಪ್ಪಗೌಡರು -

"ನಾಳೆ ಬರುವಾಗ ಮನೆಗೆ ಬಂದು ಹೋಗಿರಿ ಮರೆಯಬೇಡಿರಿ" ಎಂದು ಹೇಳುವ ಹೊತ್ತಿಗೆ, ಭಂಟನೂರಿನಿಂದ ಎತ್ತಿನ ಬಂಡಿಯೊಂದು ಬಂದು ಬಿಟ್ಟಿತು. ಆ ವಿಷಯವನ್ನು ಕಲ್ಲಪ್ಪ ಗೌಡರಿಗೆ ವಿಶದಪಡಿಸಿ ಹೋಗಿಬರಲು ಅಪ್ಪಣೆ ಪಡೆದುಕೊಂಡೆವು.

ವಾಡಿಕೆಯಂತೆ ಬೀಗರ ಮನೆಗೆ ಹೋದ ಬಳಿಕ ಸ್ನಾನ, ಪೂಜೆ ಉಪಹಾರ ಮೊದಲಾದವು ಕ್ರಮವಾಗಿ ಮುಗಿದವು. ಕನ್ಯೆ ನೋಡಿದೆವು

ಮನಸ್ಸಿಗೆ ತಕ್ಕ ಕನ್ಯೆಯೆಂದು ಗೌಡರು ನುಡಿದರು. ಇನ್ನು ವಧುವರರು ಮಾತ್ರ ಪರಸ್ಪರರನ್ನು ಕಾಣುವುದೊಂದೇ ಬಾಕಿ ಉಳಿಯುವುದು.

ಅನ್ನದ ಮೇಲೆ ತಿನ್ನುವವರ ಹೆಸರು ಬರೆದಿರುವದನ್ನು ಕಲ್ಲಪ್ಪ ಗೌಡರಂಥ ಕುರುಡರೂ ಓದಿಕೊಳ್ಳಬಹುದಾಗಿದೆ. ಹೆಸರಿನೊಂದಿಗೆ ದಿನಾಂಕವನ್ನೂ ಅನ್ನದ ಮೇಲೆ ಬರೆಯದೆ ಬಿಟ್ಟಿಲ್ಲ. ಆ ಹೆಸರಿನ ಅಕ್ಷರ, ಆ ದಿನಾಂಕದ ಅಂಕಿ ಮಾತ್ರ ಎಲ್ಲರಿಗೂ ತಿಳಿಯುವಂಥದಲ್ಲ. ಯಾವಾಗಲೂ ತಿಳಿಯುವಂಥದೂ ಅಲ್ಲವೆಂದು ಹೇಳಿಬಿಟ್ಟರೆ ಸಾಕಲ್ಲವೇ?

೩೭. ದಿನದಿನಕೆ ಬೆಳೆದ ಸಂಸಾರ

ಚೊಚ್ಚಲಮಗಳು ಕೊಟ್ಟ ಮನೆಯಲ್ಲಿ, ಮರುಚಲ ಮಗಳು ಕೊಡುವ ಮನೆಯಲ್ಲಿ, ಮೂವರು ಗಂಡುಮಕ್ಕಳು ನನ್ನ ಬಳಿಯಲ್ಲಿ, ಆ ಮೂವರಿಗೆ ಒಬ್ಬ ತಂಗಿ ಹುಟ್ಟಿದಳು.

ಅಕ್ಕನ ಬಗಲಲ್ಲಿ ಬಂದ ತಂಗಿ, ಅಕ್ಕನ ಹಾದಿಯನ್ನೇ ತುಳಿದಳು, ಆಕೆಯ ಹೆಜ್ಜೆಯನ್ನೇ ಅನುಸರಿಸಿದಳು. ನನಗೆ ಅತ್ತಿಗೆಯಾದವಳು ಹೆಂಡತಿಗೆ ಅಕ್ಕನಾಗದೆ, ಅತ್ತೆಯೇ ಆದಳು. ಬಡವರ ಸೊಸೆಯನ್ನು ಬೆದರಿಸುವವರೆಲ್ಲ ಅತ್ತೆಗಳೇ ಆಗಬಲ್ಲರಂತೆ.

ಇಂಥದರಲ್ಲಿ ಸಮಾಜ ಶಿಕ್ಷಣ ಸುಪರ್‌ವೈಝರ್ ಎಂದು ನನ್ನ ಆಯ್ಕೆ ಆಯಿತು. ರಾತ್ರಿ ಶಾಲೆಯ ಸಾಹೇಬನಾಗಿ ಸುಮಾರು ಅರ್ಧ ತಾಲೂಕಿನ ಹಳ್ಳಿಗಳನ್ನು ಸಂದರ್ಶಿಸುವದೇ ನನ್ನ ಕೆಲಸ. ನನಗೊಬ್ಬ ಸಿಪಾಯಿಯನ್ನೂ ಒದಗಿಸಿದರು. ಅಲ್ಲದೆ ಚಡಚಣವನ್ನೇ ಹೆಡ್ ಆಫೀಸ್ ಮಾಡಿಕೊಳ್ಳುವುದಕ್ಕೆ ಸಮ್ಮತಿ ನೀಡಿರೆಂದು ಬರಕೊಂಡೆ. ಆ ಸಮ್ಮತಿ ಬರೆದು ಬರದಿದ್ದರೂ ಬೇಡವೆಂದಂತೆಲ್ಲ ಎಂಬ ಕಾರಣದಿಂದ ಚಡಚಣದಲ್ಲಿಯೇ ನಿಂತು ಸುಮಾರು ೧ ೧/೨ ವರುಷ ಕೆಲಸ ನಿರ್ವಹಿಸಿದೆನು. ಹಗಲು ಹೊತ್ತು ಮಕ್ಕಳೆಲ್ಲ ಕಣ್ಣಮುಂದೆ ರಾತ್ರಿಚರನಾಗಿ ಬೆಳಗಾಗುವ ಹೊತ್ತಿಗೆ ಊರಿಗೆ ಮನೆಗೆ ಬರುತ್ತಿದ್ದೆ.

ಆ ಸಂದರ್ಭದಲ್ಲಿ ಸೂರ್ಯಕಾಂತನಿಗೆ ವಿಷಮಜ್ವರ ಬಂದವು. ಅಂದಿನ ಪದ್ಧತಿಯ ಪ್ರಕಾರ ಆರೈಕೆ ಚಿಕಿತ್ಸೆ ನಡೆಸಿದರೂ ಅವನು

ಬದುಕಲಿಲ್ಲ. ತಿರುಗಿ ಕೇಳಿದರೆ ಅವರಣ್ಣ ಈಶ್ವರನಿಗೆ ಅಂಥವೇ ಜ್ವರ ಬಂದವು. ಶ್ರೀ ಮಾತಾರವಿಂದರನ್ನು ಸ್ಮರಿಸುತ್ತ ಅವರ ಆರೈಕೆ ಮಾಡುತ್ತ ೨ ವಾರ ಅವನ ಹತ್ತಿರವೇ ಕುಳಿತೆ. ಅವನಿಗೆ ತಾಯಿ ಒದಗಿಸಬಹುದಾದ ಎಲ್ಲ ವ್ಯವಸ್ಥೆಗಳನ್ನೂ ನಾನು ಕೈ ಮುಟ್ಟಿ ಒದಗಿಸಿದೆ.

ಅತ್ತಿಗೆ ಹೊಸ ಹೆಂಡತಿಯ ಕಡೆಗೆ ಬೆರಳು ಮಾಡಿ ತೋರಿಸಿದಳು. ಹೊಸ ಹೆಂಡತಿಗೆ ಮನೆಕೆಲಸ, ಅಡಿಗೆ, ಒಗೆಯೋಣ ಮಾಡುವುದರಲ್ಲಿಯೇ ಹೊತ್ತು ಸಾಲುತ್ತಿರಲಿಲ್ಲ. ಅಂತು ಇಂತು ದಿನ ಹಾಕತೊಡಗುವ ಸಂದರ್ಭ ತಪ್ಪಿ ಊಟ, ಶಾಲೆ, ಮನೆಗಳಲ್ಲಿ ತಮ್ಮ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳುವದರಲ್ಲಿ ಮಕ್ಕಳು ಕ್ರಮೇಣ ಸಮರ್ಥರಾದರು. ಅವರ ರಕ್ಷಣೆಯನ್ನು ನಾನು ಯಾವ ದೃಷ್ಟಿಯಿಂದ ಮತ್ತು ಯಾವ ಭಾವನೆಯಿಂದ ನಿರ್ವಹಿಸುತ್ತಿದ್ದೆನೆಂಬುದನ್ನು ಬೇರೆ ಕಡೆ ಸ್ಪಷ್ಟಪಡಿಸಿದ್ದೇನೆ.

ತಿಂಗಳಿಗೆ ೫೦ ರೂ.ನಷ್ಟು ಸಂಬಳದ ಶಿಕ್ಷಕನು, ಇನ್ನೂರಷ್ಟು ಸಂಬಳ ತೆಗೆದುಕೊಳ್ಳುವ ಸುಪರವೈಝರನಾಗಿ ರಾತ್ರಿರಾಜನಂತೆ ಹಾಡಿ ಕುಣಿದು ದಣಿಯುವ ಹೊತ್ತಿಗೆ ಮತ್ತೆ ಚಡಚಣದ ಗಂಡುಮಕ್ಕಳ ಶಾಲೆಗೆ ಮುಖ್ಯ ಶಿಕ್ಷಕ ಸ್ಥಾನಕ್ಕೆ ಇಳಿದೆ. ಮನೆಯ ತೊಂದರೆಗಳ ಸಲುವಾಗಿ ನನಗೂ ಆ ಕೆಲಸ ಸಾಕಾಗಿತ್ತು.

ಚಡಚಣಕ್ಕೆ ವರ್ಗವಾಗಿ ನಾನು ಬರುವ ಹೊತ್ತಿಗೆ ನಾನು ಕಂಡು ಬಂದುದೇನೆಂದರೆ ಜನರಲ್ಲಿ ನಾಡು ನುಡಿಗಳ ಬಗ್ಗೆ ಪ್ರೇಮವನ್ನು ಹುಟ್ಟಿಸಿ, ರಾಷ್ಟ್ರೀಯ ಭಾವನೆ ಒಲಿದು ಬರುವಂತೆ ಮಾಡುವದು ಮತ್ತು ಜಾಗೃತ ಭಾರತವು ಮನುಷ್ಯ ಕುಲಕ್ಕಾಗಿ ಸಲ್ಲಿಸುವ ಸೇವೆಗಳು ಎರಡೆಂದು ಕಂಡು ಬಂತು. ನಾಡಹಬ್ಬದ ಆಚರಣೆ ಮತ್ತು ಮಾತಾರವಿಂದರ ಸಾಮೂಹಿಕ ಪೂಜೆ ಪ್ರಾರ್ಥನೆ ಇವು ಅನಿವಾರ್ಯವೆಂದು ಕಂಡುಬಂದಿತು.

ಶ್ರೀ ಗುರುಪಾದಪ್ಪ ಜೇರಂಕಲಗಿ ಅವರು ಪಾಂಡಿಚೇರಿಯ ಸಂಪರ್ಕವನ್ನು ವಿಶೇಷವಾಗಿ ಗಳಿಸಿಕೊಂಡಿದ್ದರು. ಅವರ ನೆರವು ಸಹಾನು ಭೂತಿಗಳು ನಮಗೆ ವಿಪುಲವಾಗಿ ಸಿಗುತ್ತಿದ್ದವು. ಆದರೆ ಅವರು ಕೆಲವೇ

ದಿನಗಳಲ್ಲಿ ದೇಹವಿಟ್ಟರು. ಆದರೂ ಅವರು ಸೂಕ್ಷ್ಮ ಶರೀರದಲ್ಲಿ ನಮ್ಮ ಬಳಿಯಲ್ಲಿಯೇ ಇದ್ದರೆಂದು ಹೇಳಬಹುದು.

ಚಡಚಣದ ಶ್ರೀ ಸಂಗಮೇಶ್ವರ ಮಾಧ್ಯಮಿಕ ಶಾಲೆಗೆ ಹೆಡ್ ಮಾಸ್ತರರಿಗಾಗಿ ಶ್ರೀ ಎಂ.ಆರ್. ಜಹಗೀರದಾರರು ಬಂದ ಮುಹೂರ್ತವು ಅಪೂರ್ವವಾಗಿತ್ತೇನೋ. ಅವರು ಹೈಸ್ಕೂಲಿನ ಮುಖ್ಯಾಧ್ಯಾಪಕರಾದರೆ, ನಾನು ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ. ಅವರು ಬಿ.ಎಡ್. ಪರೀಕ್ಷೆಯಲ್ಲಿ ಮೇಲ್ತರಗತಿಯ ಸ್ಥಾನ ಪಡೆದು ಸುವರ್ಣ ಪದಕ ಗಳಿಸಿದ್ದರು. ನಾನು ಟ್ರೇನಿಂಗ್ ಕಾಲೇಜಿನ ೨ನೇ ವರ್ಷದ ಪರೀಕ್ಷೆಯಲ್ಲಿ ನಾಲ್ಕು ಜಿಲ್ಲೆಗಳಿಗೆ ಮೊದಲ ನಂಬರು ಪಡೆದು ತೇರ್ಗಡೆಯಾದಂತೆ ನಾಲ್ಕೂ ಪ್ರಥಮ ಬಹುಮಾನಗಳನ್ನು ಪಡೆದು ರಿಕಾರ್ಡ್‌ಬ್ರೆಕ್ ಮಾಡಿದ ಸಂಗತಿ ಈಗಾಗಲೇ ಹೇಳಿದ್ದೇನೆ.

ಸುಮಾರು ೩೫ ವರ್ಷಗಳ ಹಿಂದೆ ಶ್ರೀ ಜಹಗೀರದಾರ ಮಾಸ್ತರರ ಪ್ರಥಮ ದರ್ಶನವಾದ ಬಳಿಕ ಪರಿಚಯ, ಸಂಭಾಷಣೆ, ಸಹವಾಸ, ಸಖ್ಯಗಳು ಕಾಣಿಸಿಕೊಂಡವು. ಸಖ್ಯದಿಂದ ಒಕ್ಕಟ್ಟು, ಒಕ್ಕಟ್ಟಿನಿಂದ ಮಹಾಕೃತಿ ಎರಡೂ ಕೂಡಿಯೇ ಸಾಧಿಸಿದವು.

ನನ್ನ ಜೀವನದಲ್ಲಿ ಸಿಕ್ಕ ಕುಲರಸಿಕರೆಂದರೆ ಹಲಸಂಗಿ ಚೆನ್ನಮಲ್ಲಪ್ಪ ಮತ್ತು ಅಗರಖೇಡದ ಎಂ.ಆರ್. ಜಹಗೀರದಾರ ಮಾತಿನ ಮಾಧುರ್ಯವನ್ನು ಗ್ರಹಿಸಿ ಅದು ಇಮ್ಮಡಿ ನಾಲ್ವಡಿಯಾಗಿ ಚಿಮ್ಮಿ ಬರುವಂತೆ ಮಾಡುವ ಕೌಶಲ್ಯವೂ ಅವರಲ್ಲಿತ್ತು. ಇತ್ತೀಚಿನ ಅವರ ನಿವೃತ್ತ ಜೀವನದಲ್ಲಿ ಬಹುತರವಾಗಿ ದಿನಾಲು ತಾಸೆರಡು ತಾಸು ಕುಳಿತು. ನಿರರ್ಗಳವಾಗಿ ಹರಟುತ್ತಿದ್ದವು. ಆ ಹರಟೆಗಳಿಗೆ ಬಯಲಾಟದ ಅಡ್ಡ ಸೋಗಿನಿಂದ ಸುಪ್ರಮಾನಸದ ಅನುಭಾವ ರಹಸ್ಯಗಳವರೆಗೆ ವಸ್ತುಗಳೋ ವಿಷಯಗಳೋ ಆಗುತ್ತಿದ್ದವು.

ಚಡಚಣದಲ್ಲಿ ಯಾವ ಚಿಕ್ಕ ದೊಡ್ಡ ಉತ್ಸವ ನಡೆದರೂ ಅಲ್ಲಿ ನಾವಿಬ್ಬರೂ ಇರತಕ್ಕವರೇ. ಆದರೆ ಕರೆಯದೆ ಹೋದವರಲ್ಲ.

ಉತ್ಸವಕಾರರು ಕರೆಯುವದನ್ನೂ ಮರೆತರವರಲ್ಲ. ನಮ್ಮಿಬ್ಬರ ಜತೆಯೆಂದರೆ ಗಿಡ್ಡಾ ಮುಕಾರಾ ಎಂಬ ದರೋಡೆಕಾರರಿದ್ದಂತೆ. ಆದರೆ ಚಡಚಣದಲ್ಲಿ ಒಂದು ಕೋಳಿಯೋ ಒಂದು ತಂಬಿಗೆಯೋ ಕಳವಾದರೆ ಅವರೇ ಅದಕ್ಕೆ ಕಾರಣರೆಂದು ಜನರು ತಿಳಿದುಕೊಂಡಿದ್ದರು.

ಗ್ರಾಮಸ್ಥರು ಅವರಿಬ್ಬರನ್ನೂ ಕರೆಸಿ, ಚಾವಡಿಯಲ್ಲಿ ಬಿಗಿಸಿ ಗಟ್ಟಿಗರಾದ ಓಲೇಕಾರರಿಂದ ಬಡಿಸುತ್ತಿದ್ದರು. ಆಗ ಅವರು ಹೇಳುತ್ತಿದ್ದರು - ಬೇಕಾದಷ್ಟು ಬಡಿಯಿರಿ ನಮಗೆ ಪೆಟ್ಟೇ ಹತ್ತುವದಿಲ್ಲ. ನಮ್ಮ ಮೈಯನ್ನು ಉಕ್ಕಿನಿಂದ ಮಾಡಿದ್ದಾರೆ.

ಮತ್ತೇನು ಹೇಳುತ್ತಿದ್ದರೆಂದರೆ -

ಈ ಗಿಡ್ಡಾ ಮುಕಾರಾ ಅಂದರೆ ದೊಡ್ಡ ದೊಡ್ಡ ದರೋಡೆ ಮಾಡಿ ದಕ್ಕಿಸಿಕೊಳ್ಳುವಂಥವರು. ಕೋಳಿ, ತಂಬಿಗೆ, ಕೆರವು ಇಂಥ ಚಿಲ್ಲರೆ ಕಳವು ಮಾಡುವವರಲ್ಲ ತಿಳಿಯಿತೇ?

ಸಿಂಪಿ ಲಿಂಗಣ್ಣ ಮತ್ತು ಎಂ.ಆರ್. ಜಹಗೀರದಾರರ ಭಾಷಣಗಳೆಂದರೆ ಜನಪದ ಸಾಹಿತ್ಯದಿಂದ, ಶ್ರೀ ಅರವಿಂದ ಯೋಗಸಮನ್ವಯದವರೆಗಿನ ಅವಕಾಶದಲ್ಲಿ ಸುತ್ತಿ ಸುಳಿದು ಬರುವಂತೆ ಮಾಡುತ್ತಿದ್ದವು. ತೀರ ಪುಟ್ಟ ಸಮಾರಂಭಗಳ ಸಲುವಾಗಿ, ನಮ್ಮನ್ನು ಕರೆದೊಯ್ಯಬೇಕೇ? ಬೆಳೆಯುವ ತರುಣರನ್ನು ಪ್ರೋತ್ಸಾಹಿಸುವದೂ ಶ್ರೇಷ್ಠವಾದ ಸದ್ಗುಣವೇ ಆಗಿದೆ.

ಎರಡು ವರ್ಷಗಳ ಹಿಂದೆ ತೀರಿಕೊಂಡ ಜಹಗೀರದಾರರು ನನಗಿಂತ ಕಿರಿಯರು. ಇಪ್ಪತ್ತು ವರ್ಷಗಳಿಂದ ಚಿಕ್ಕವರು. ಇದ್ದಕ್ಕಿದ್ದ ಹಾಗೆ ಇಬ್ಬರಿಗೂ ಮೊಳಕಾಲ ಸಂಧಿವಾತ ಹಿಡಕೊಂಡಿತು, ಕುಳಿತುಕೊಳ್ಳುವಾಗ, (ನಿಂತವರು) ಕುಳಿತವರು ಎದ್ದು ನಿಲ್ಲುವಾಗ ಕೈಯೂರಿ ಬಾಗಿ ನಿಲ್ಲಬೇಕಾಗುತ್ತಿತ್ತು ಆ ಆಸನ ಹಾಕುವಾಗ ಇಬ್ಬರಲ್ಲಿಯೂ ಮೇಲಾಟ ನಡೆಯುತ್ತಿತ್ತು.

ನಾನು ಸಭೆಯಲ್ಲಿ ಮಾತನಾಡುವಾಗ ಹಲವು ಸಾರೆ ಹೇಳುವ ಪ್ರಸಂಗ ಬಂದಿದೆ. ಏನೆಂದರೆ -

ಎಲ್ಲರಂಥವನಲ್ಲ ನನಗಂಡಾ। ಬಲ್ಲಿದನು ಪುಂಡ।
ಎಲ್ಲರಂಥವನಲ್ಲ ನನಗಂಡಾ।
ಎಲ್ಲಿಯೂ ಪೋಗದಂಗ ಮಾಡಿಟ್ಟ
ಕಾಲ್ ಮುರಿದು ಬಿಟ್ಟಾ ॥

ಇಲ್ಲಿ ಗಂಡನೆಂಬ ಶಬ್ದಕ್ಕೆ ಗುರು ಎಂಬ ಅರ್ಥವಿರಿಸಿಕೊಳ್ಳಬೇಕು.

ಶ್ರೀ ಮಾತಾರವಿಂದರ ಪೂಜೆ ಪ್ರಾರ್ಥನೆಗಳನ್ನು ಸಾಮೂಹಿಕವಾಗಿ ಮಾಡಿದ್ದು ಹತ್ತಿಪ್ಪತ್ತು ವರ್ಷ. ಅವುಗಳಲ್ಲಿ ಎರಡು ವಿಧ. ದೈನಿಕ ಹಾಗೂ ಸಾಪ್ತಾಹಿಕ. ಇವೆರಡೇ ಅಲ್ಲದೆ ಅವರ ದರ್ಶನ ದಿನಾಂಕಗಳಲ್ಲಿ (ಅಂದರೆ ಆಗಸ್ಟ್ ೧೫, ನವೆಂಬರ್ ೨೪, ಫೆಬ್ರವರಿ ೨೧) ಆಚರಿಸುವ ವಿಶಿಷ್ಟ ಪೂಜೆ ಪ್ರಾರ್ಥನೆಗಳು ಸ್ಮರಣೀಯವಾಗಿವೆ. ಆ ಅಪೂರ್ವ ಪ್ರಾರ್ಥನೆಗಳು ಇಟ್ಟುಕೊಂಡ ಗುರಿಯೆಂದರೆ -

ಶರೀರ, ಪ್ರಾಣ, ಮನಗಳೆಂಬ ಮೂರು ಪ್ರಕೃತಿಗಳನ್ನು ನಿಸ್ತಬ್ದಗೊಳಿಸಿ ಅವುಗಳನ್ನು ಧರಿಸಿದ ಪುರುಷರನ್ನು ಜಾಗೃತಗೊಳಿಸುವುದು. ಪ್ರಕೃತಿಗಳು ನಿಸ್ತಬ್ದವಾಗುವುದೇ ಸಾಧನೆ. ಅವು ನಿಸ್ತಬ್ಧವಾದಾಗಲೇ ಅಂತಃಪುರುಷನು ಜಾಗೃತನಾಗುತ್ತಾನೆಂದೇನಲ್ಲ. ಅವನು ಸದಾ ಜಾಗೃತ ಪುರುಷನೇ ಆಗಿದ್ದಾನೆ.

ಅತ್ತಿಗೆ, ಹೆತ್ತಮ್ಮನ ಸಮಾನವಿದ್ದಂತೆ ಎಂದು ಯಾಕೆ ಹೇಳಿದರೋ ನನಗೆ ತಿಳಿದಿಲ್ಲ. ಆಕೆಯ ಸುಸಂಸ್ಕೃತ ಮಗ ಹಾಗೂ ಮೊಮ್ಮಕ್ಕಳಿಗೂ ಹಲವು ಸಾರೆ, ಹೆತ್ತಮ್ಮ ಅತ್ತಿಗೆಯಾಗಿ ಪರಿಣಮಿಸುತ್ತಿದ್ದಳು. ಆಕೆ ಗೋವೆಯ ನಾಣ್ಯವಿದ್ದಂತೆ. ತೂಕದಲ್ಲಿ ಹೆಚ್ಚಿಗಿರಬಹುದು. ಅದರಂತೆ ಬೆಲೆಯಲ್ಲಿಯೂ ಹೆಚ್ಚಾಗಿರಬಹುದು. ಅಲ್ಲ, ನಿಜವಾಗಿ ಹೆಚ್ಚೇ ಆಗಿದ್ದಳು. ಒಂದೊಂದು ಜಟಿಲ ಸಮಸ್ಯೆ ಬಂದಾಗ ಗೋವೆಯ ನಾಣ್ಯವು ಬ್ರಿಟಿಷರ ರಾಜ್ಯದಲ್ಲಿಯೂ ನಡೆಯುತ್ತಿರಲಿಲ್ಲ. ನಿಜಾಮ ರಾಜ್ಯದಲ್ಲಿಯೂ ಬಳಕೆಯಾಗುತ್ತಿರಲಿಲ್ಲ.

ನಾವೆಲ್ಲರೂ ಅದೆಷ್ಟು ದೊಡ್ಡಸ್ತಿಕೆಗಳಿಸಿದರೂ ಆಕೆಯ ದೃಷ್ಟಿಯಲ್ಲಿ ಕಃಪಾರ್ಥವೆಂದೇ ಹೇಳಬೇಕು. ಆದರೆ? ಆದರೆ ಏಕೆ, ಅದನ್ನಷ್ಟು ಇಲ್ಲಿ ಬಿಚ್ಚಿ ಹೇಳಬೇಕು.

ಆಕೆಯ ತಮ್ಮ ಈರಪ್ಪ ಫಕರಿಯ ಬಾಯಿಗೆ ಆಕೆ ಹತ್ತುತ್ತಿರಲಿಲ್ಲ. ಅದಕ್ಕೆ ಕಾರಣವನ್ನು ಆಕೆಯ ಬಾಯಿಂದಲೇ ಕೇಳಬೇಕು. "ಫಕರೀ ಈರಪ್ಪನ ನಾಲಿಗೆಗೆ ಕಪ್ಪು ಕಲೆಯಿದೆ. ಆತನ ಬಾಯಿಯಿಂದ ಬಂದ ಶಬ್ದಗಳಂತೆ ಆಗಿಯೇ ಬಿಡುತ್ತದೆ" ಇಂಥ ಸಂದರ್ಭದಲ್ಲಿ ನನ್ನ ದ್ವಿತೀಯ ಹೆಂಡತಿ, ಆಕೆಯ ಮಕ್ಕಳು ಎಂದರೆ ಆಕೆಯ ದೃಷ್ಟಿಯಲ್ಲಿ ಏನೋ ಬೆಲೆಯಿಲ್ಲದ ಪ್ರಾಣಿಗಳೋ ವಸ್ತುಗಳೋ ಆಗಿದ್ದವೆಂದು ಹೇಳದೆ ಗತಿಯಿಲ್ಲ. ಅಡಿಗೆ, ಮನೆಗೆಲಸಗಳೆಂದರೆ ಆಕೆಗೆ ತಲೆಬೇನೆ. ಬಾಯಿಪಾಠವಾಗಿ ಮಾತು ಹೇಳುವ ಕಲೆ ಅವಗತವಾಗಿತ್ತು. ನವರಸಗಳನ್ನು ನವ್ಯ ರಸಗಳನ್ನಾಗಿಸಿ ಕೇಳುವವರ ಕಿವಿಗಂಟಿಸುವ ಬಾಯ ಚಾಪಲ ಆಕೆಗೆ ಹುಟ್ಟಿನಿಂದ ಬಂದಿತ್ತು.

ಹೊಸಬರಾದರೂ ಬಂದು ನನ್ನ ಹೆಂಡತಿಯನ್ನು ತೋರಿಸುತ್ತ ಈಕೆ ಯಾರು ಎಂದು ಕೇಳಿದರೆ ಕೇಳಿಸದಂತೆ, ಮತ್ತೊಮ್ಮೆ ಕೇಳಿದರೆ ಮತ್ತೇನೋ ಯೋಚಿಸುವಂತೆ ಮುಖ ತಿರುಹುವಳು. ಇದು ಆಕೆಯ ವಾಡಿಕೆಯ ರೀತಿ. ಒಮ್ಮೊಮ್ಮೆ ಆ ರೀತಿಗೂ ಭಿನ್ನವಾಗಿ ಮರುನುಡಿಕೊಡವಳು.

'ಈಕೆ ಯಾರು ಹೊಸದಾಗಿ ಇದ್ದಾರಲ್ಲ?' ಎಂದು ಕೇಳಿದಾಗ, ಹೊಸದಾಗಿ ಏನೂ ಅಲ್ಲ. ಹಳೆಯ ಮಾತಾಗಿದೆ ಈಕೆ ನಮ್ಮ ಮಾಸ್ತರನ ಹೆಂಡತಿ ಎಂದು ಉದ್ಗರಿಸುವಳು, ಕೇಳಿದವರಿಗೂ ಏನೋ ಅನಿಸಿರಬೇಕು ಹೇಗೋ ಅನಿಸಿರಬೇಕು. ಜಗವೆಲ್ಲ ಅಳುತಿರಲಿ ನಾನೊಬ್ಬಳೇ ನಗುವೆ ಎನ್ನುವ ಮಾರ್ಗದಲ್ಲಿಯೂ ಆಕೆಯ ನಂಬರು ಮೇಲು ಸಾಲಿನಲ್ಲಿ ಶೋಭಿಸುತ್ತಿತ್ತು. ಮಳೆಗಾಲದ ಮಳೆಯಂತಿದ್ದವು ಆಕೆಯ ಅಳು ನಗುಗಳು. ಆಕೆಯ ಹೃದಯ, ಕ್ರೌರ್ಯದಲ್ಲಿ ಕಠೋರವಾಗಿದ್ದಷ್ಟೇ ಆತ್ಮೀಯತೆಯಲ್ಲಿ ಪ್ರೇಮದಷ್ಟು ಆಹ್ಲಾದಕರವಾಗಿತ್ತು. ಅವಳು ಮಹಾಕಾಳಿ ಮಾತೆಯ ಚಿಕ್ಕಪ್ರತಿನಿಧಿ.

೩೮. ಯಾರದೋ ಅವರಿಗೆ

ನಾನು ಶಿಕ್ಷಕನಾಗಿ ಮೂವತ್ತು ವರ್ಷ ಕಳೆದು ಹೋದರೂ ಒಂದೆರಡು ಅಪೇಕ್ಷೆಗಳು ಅಪೇಕ್ಷೆಗಳಾಗಿಯೇ ಉಳಿದವು. ಬರಿ ೧೫ ರೂ. ಕೊಟ್ಟರೆ ದೊರೆಯಬಹುದಾದ ರಿಸ್ಟ್ ವಾಚ ಕೊಳ್ಳಬೇಕೆಂದು ಅಪೇಕ್ಷಿಸಿದರೂ ಅಷ್ಟು ಹಣ ಕೂಡಲಿಲ್ಲ. ಚಳಿಗಾಲಕ್ಕೆ ಒಂದು ಉಣ್ಣೆಯ ಕೋಟ ಬೇಡ, ಸಾಧಾರಣ ಕೋಟು ಹೊಲಿಸಬೇಕೆಂದರೂ ಆಗಲಿಲ್ಲ. ಗ್ರೂಫ್ ಮಾಸ್ತರನಾಗಿ ೪-೬ ಹಳ್ಳಿಗಳ ಶಿಕ್ಷಕರಿಗೆ ಸಂಬಳ ವಿತರಣೆ ಮಾಡುವ ಕೆಲಸ ಪ್ರತಿ ತಿಂಗಳೂ ನಿರ್ವಹಿಸುವ ಪ್ರಸಂಗವಿತ್ತು. ಆದರೆ, ನನ್ನವೇ ಆಗಿ ಕೆಲವು ನೂರು ರೂ.ಗಳಾದರೂ ನನ್ನ ಕೈಗೆ ಬಂದವೆನ್ನಬೇಕೇ? ಛೇಛೇ! ಹಣ ನನ್ನನ್ನು ಕಂಡು, ಅಷ್ಟು ದೂರದಲ್ಲಿಯೇ ನಿಂತು ಮಾಯವಾಗುತ್ತಿತ್ತು.

ಚಡಚಣದಲ್ಲಿ ಮಾಧ್ಯಮಿಕ ಶಿಕ್ಷಣ ಸಿಗುವ ಏರ್ಪಾಡು ಆಗಿದ್ದರಿಂದ ನನ್ನ ಹಿರೇಮಗ ವೀರೇಂದ್ರನು ಎಸ್.ಎಸ್.ಎಲ್.ಸಿ. ಪರೀಕ್ಷೆಗಾಗಿ ಜೊತೆಯವರೊಡನೆ ವಿಜಾಪುರಕ್ಕೆ ಹೋಗಿ ಬಂದನು. ಪರೀಕ್ಷೆಯ ಪರಿಣಾಮ ಮುಂದೆ ತಿಳಿಯುವುದಿತ್ತು. ಆ ವಿಷಯದ ನೆನಪಾದ ಕೂಡಲೇ ನನ್ನೆದೆ ನಡುಗುತ್ತಿತ್ತು. ಪರೀಕ್ಷೆಯಲ್ಲಿ ತೇರ್ಗಡೆಯಾದ ಸುದ್ದಿ ಬಂದರೆ, ಆತನ ಮುಂದಿನ ಶಿಕ್ಷಣಕ್ಕಾಗಿ ಏನು ವ್ಯವಸ್ಥೆ ಮಾಡುವುದು, ತಿಳಿಯದೆ ಹೋಗುತ್ತಿತ್ತು.

ಪರೀಕ್ಷೆಯ ಪರಿಣಾಮ ತಿಳಿಯುವುದಿದೆಯೆಂದಾಗ ಮುನ್ನಾದಿನವೇ ಒಂದು ಸಂಗತಿ ತಿಳಿಯಿತು. ಅದೇನೆಂದರೆ ಮುಂಬಯಿ ಸರ್ಕಾರದಿಂದ

ನನ್ನ "ಸ್ವರ್ಗದೋಲೆಗಳು" ಪುಸ್ತಕಕ್ಕೆ ಒಂದು ಸಾವಿರ ಬಹುಮಾನ ದೊರೆತಿದೆ. ಏನು ಹರ್ಷ! ಎಷ್ಟು ಆನಂದ!! ಮುಂದಿನ ವಾರಗಳಲ್ಲಿ ಬಾದಾಮಿಯ ಬಿಂದು ಮಾಧವ ಕುಲಕರ್ಣಿಯವರ ಜೊತೆಯಲ್ಲಿ ಮುಂಬಯಿಗೆ ಹೋಗಿ, ಮುಖ್ಯಮಂತ್ರಿ ಖೇರ ಅವರ ಹಸ್ತದಿಂದ ೧ ಸಾವಿರ ರೂ. ಬಹುಮಾನ ಸ್ವೀಕರಿಸಿದ್ದಾಯಿತು. ಬರುಹೋಗುವ ದಾರಿ ವೆಚ್ಚವೂ ಸಿಕ್ಕಿತು. ನನ್ನ ಕೈಯಲ್ಲಿ ನನ್ನ ಕಿಸೆಯಲ್ಲಿ ಸಾವಿರ ರೂ. ಬಂದದ್ದು ಜನ್ಮದಲ್ಲಿಯೇ ಹೊಸ ಸಂಗತಿ.

ಸಾವಿರ ರೂ. ದೊರೆತವೇ? ನನಗೆ?? ಅಲ್ಲ ಅಲ್ಲ ಹಿರೆಯ ಮಗ ವೀರೇಂದ್ರನ ಸಲುವಾಗಿ ಕಳಿಸಿದ್ದಾರೆ. ಯಾರು? ನನ್ನ ಮನೆಯೊಡತಿಯಾದ ಶ್ರೀಮಾತೆ. ಚಡಚಣವನ್ನು ತಲಪಿದ ಬಳಿಕ, ವೀರೇಂದ್ರನನ್ನು ಹತ್ತಿರ ಕರೆದು - "ಇಗಾ, ನಿನ್ನ ಸಲುವಾಗಿ ಬಂದ ರೂ.ಗಳನ್ನು ನಾನು ತಂದವನು ಮಾತ್ರ ಎಸ್.ಎಸ್.ಎಲ್.ಸಿ. ಅಂತೂ ಮುಗಿಯಿತು. ವಿಜಾಪುರಕ್ಕೆ ಹೊರಡು, ಅಲ್ಲಿಯ ಕಾಲೇಜಿನಲ್ಲಿ ಹೆಸರು ಹಚ್ಚಿಸು, ಸದ್ಯಕ್ಕೆ ೪ ವರುಷ ಸಾಕಾಗುವಷ್ಟು ಹಣ ಬಂದಂತಾಗಿದೆ. ಅವು ತೀರುವಷ್ಟರಲ್ಲಿ ಮತ್ತೆ ಕಳಿಸುವರು" ಎಂದು ನುಡಿದು ಹಣವನ್ನು ಆತನಿಗೆ ಒಪ್ಪಿಸಿದೆನು. ಅವನ ಶಿಕ್ಷಣವು ನಿರಾತಂಕವಾಗಿ ಮುಂದುವರಿಯಿತು.

ಸಾವಿರ ರೂ. ಮುಗಿಯುವಷ್ಟರಲ್ಲಿ ದಿಲ್ಲಿಯಿಂದ ಮತ್ತೆ ಸಾವಿರ ರೂ. ಬಂದವು. ಅಂದಿನ ರಾಜ್ಯಪಾಲ ರಾಜೇಂದ್ರ ಪ್ರಸಾದರಿಂದ, ಪ್ರಪ್ರಥಮವಾಗಿ ಆದರ್ಶ ಶಿಕ್ಷಕ ಎಂಬ ಪ್ರಶಸ್ತಿ ಪಡೆದುದಕ್ಕೆ, ಆಗೋ ಮತ್ತೆ ಐನೂರು ಹೊರಟವೆ - "ಗರತಿಯ ಬಾಳು ಎಂಬ ನನ್ನ ಗ್ರಂಥಕ್ಕೆ ರಾಜ್ಯ ಸರ್ಕಾರ ಬಹುಮಾನ ಕೊಡಮಾಡಿತು. ಹೀಗೆ ವೀರೇಂದ್ರನು ಬಿ.ಎ. ಆನರ್ಸ ಪದವೀಧರನಾಗುವವರೆಗೆ ಹಣ ಕಾಲಕಾಲಕ್ಕೆ ಬಂತು: ಅದು ಏತಕ್ಕಾಗಿ ಬಂತೋ ಅದಕ್ಕಾಗಿಯೇ ಖರ್ಚು ಮಾಡಬೇಕೆಂದು, ನಾನು ನಿಷ್ಠುರವಾಗಿ ವರ್ತಿಸಿಸುದ್ದೇಶ ಸಾಧನೆಗೆ ಸೈಗೊಟ್ಟೆನು.

ಈರಣ್ಣ ಹಾಗೂ ಅವನ ಬೆನ್ನ ಮೇಲೆ ಹುಟ್ಟಿದ ಈಶ್ವರ ಇವರಿಬ್ಬರ ಲಗ್ನವು ಅವರ ಸೋದರಮಾವನ ಮನೆಯಲ್ಲಿ ಜರುಗಿತು. ಕೇಶಟ್ಟಿ ಸಿದ್ದಪ್ಪ

ತನ್ನ ಮಗಳು ಸೋಲಬವ್ವನನ್ನು ಈರಣ್ಣನಿಗೆ ಕೊಟ್ಟು, ನನ್ನ ಹಿರೇಮಗಳು ಭುವನೇಶ್ವರಿಯ ಹಿರೇ ಮಗಳನ್ನು ಈಶ್ವರನಿಗೆ ತಂದುಕೊಂಡು ತಮ್ಮ ಮನೆಯ ಮುಂದೆ ಅಕ್ಕೀಕಾಳು ಹಾಕಿಕೊಟ್ಟರು. ನಿಶ್ಚಿತಗೊಂಡ ದಿನ ಮಧ್ಯಾಹ್ನ ೧೧ ಗಂಟೆಗೇ ಅಕ್ಕಿಕಾಳು ಬಿದ್ದವು, ಆಮೇಲೆ ಆಪ್ತ-ಬಂಧು ಗಳೊಡನೆ ಊಟ ಮುಗಿಸಿ ಈರಣ್ಣನು ಧಾರವಾಡದ ದಾರಿ ಹಿಡಿದನು. ಹೋಗುವಾಗ ತನ್ನ ಕೈಬೆರಳಿನಲ್ಲಿದ್ದ ಬಂಗಾರದ ಉಂಗರವನ್ನು ನನಗೊಪ್ಪಿಸಿದನು, ನಾನದನ್ನು ಕೈಬೆರಳಿಗೆ ಸೇರಿಸಿಕೊಂಡೆ."

ಅಂದು ಸಂಜೆಯಾಗುವಷ್ಟರಲ್ಲಿ ಮೋಡ ಕವಿದು ಮಳೆ ಸುರಿಯಿತು. ರಾತ್ರಿ ಉಂಡು ಮಲಗುವ ಹೊತ್ತಿಗೆ ಹಳ್ಳಕ್ಕೆ ನೀರು ಬಂದವು. ನಾನು ವಾಡಿಕೆಯಂತೆ ಮುಂಜಾನೆ ಹಳ್ಳದಾಚೆಯ ಬಾವಿಗೆ ಹೋಗಿ ಜಳಕಮಾಡಿ ಬರುತ್ತಿದ್ದೆ. ಆದರೆ ಹಳ್ಳಕ್ಕೆ ನೀರು ಬಂದಿದ್ದರಿಂದ ನಾಲ್ಕೆಂಟು ಬಟ್ಟೆಗಳನ್ನು ಕಟ್ಟಿಕೊಂಡು ಹೊರಬಿದ್ದೆ. ಸಂಗಮೇಶ್ವರ ದೇವಾಲಯದ ಅಡಿಯಲ್ಲಿರುವ ಹಾಗು ಕಲ್ಲಿನ ಬಳಿಗೆ ಹೋಗಿ, ಬಟ್ಟೆಗಳನ್ನೆಲ್ಲ ತೋಯಿಸಿಟ್ಟು, ಕುಸಿ ಹಾಕಿ, ಬಳಿಕ ಸಾಬೂನು ಹಚ್ಚಿ ನೆನೆಯ ಬಿಟ್ಟೆನು. ಆ ಬಳಿಕ ತಂಬಿಗೆಯನ್ನು ಸ್ವಚ್ಛವಾಗಿ ಬೆಳಗಿ ತೊಳದಿಡುವಷ್ಟರಲ್ಲಿ ಕೈಬೆರಳು ಬತ್ತಲೆ ಕಾಣಿಸಿದವು. ಉಂಗುರವನ್ನು ಎಲ್ಲಿಟ್ಟೆ ಎಂದು ಯೋಚಿಸಿದೆ. ನಾನು ಎಲ್ಲಿಯೂ ಇಟ್ಟಿರಲಿಲ್ಲ. ಅದು ತಾನೇ ಎಲ್ಲಿಯೋ ಬಿದ್ದು ಹೋಯಿತೆಂದು ತಿಳಿಯಿತು. ದೊಡ್ಡ ಉಂಗುರ, ತೂಕಕ್ಕೆ ೨ ತೊಲಿಯಷ್ಟು ಸ್ವಂತದಲ್ಲ. ಈರಣ್ಣನ ಉಂಗುರ ಕಳೆದು ಬಿಟ್ಟೆನಲ್ಲ! ತನ್ನೊಡನೆ ಒಯ್ದರೆ, ಎಲ್ಲಿಯಾದರೂ ಕಳಕೊಂಡೇನು ಎಂದೆಣಿಸಿ, ನನ್ನ ಮುಖಾಂತರ ಕಳೆಯುವಂತೆ ಮಾಡಿದನೇನೋ ಎಂದು ಚಿಂತಿಸಿದೆ. ಮನೆಯಲ್ಲಿ ಯಾರಿಗೂ ಹೇಳಬಾರದು, ಕಳಕೊಂಡು ಅದದ್ದೇ ಸಾಕು ಹುಚ್ಚು ಬಾರಿಗೆ.

"ಹೇಗೆ ಕಳಕೊಂಡೆ? ಮೈಯಲ್ಲಿ ಎಚ್ಚರವಿರಲಿಲ್ಲವೇ" - ಎಂದು ಅನಿಸಿಕೊಳುವುದು ಬೇಡ ಎಂದು ಜಳಕ ತೀರಿಸಿಕೊಂಡು, ಒಗೆದ ಬಟ್ಟೆಗಳನ್ನೆಲ್ಲ ಮಡಿಚಿ ಗಳಿಗೆ ಮಾಡಿಕೊಂಡು ಮನೆಗೆ ಬಂದು, ಓರಣದಿಂದ ತೂಗುಕೋಲಿನ ಮೇಲೆ ಒಣಗಲು ಹಾಕಿದೆನು. ನಾನು ಹಳ್ಳದಿಂದ ಹೊರಡುವಷ್ಟರಲ್ಲಿ ೩-೪ ಜನ ಹೆಣ್ಣುಮಕ್ಕಳು ಬಟ್ಟೆ ಒಗೆಯಲು ಬಂದೇ ಬಿಟ್ಟಿದ್ದರು.

ಮನೆಯ ಮಂಡಲಿಯೆಲ್ಲ ಸಂಭ್ರಮದಲ್ಲಿತ್ತು, ನಾನು ಆಗಿಷ್ಟು ಈಗಿಷ್ಟು ಅದರಲ್ಲಿ ಭಾಗಿಯಾಗುತ್ತಿದ್ದೆ. ಆದರೆ ಅಷ್ಟರಲ್ಲಿ ಉಂಗುರದ ನೆನಪಾಗಲು ಎದೆ ಧಸ್ಸೆನ್ನುವದು, ಮನಸ್ಸಿಗೆ ಧೈರ್ಯ ಹೇಳುವೆನು. ಹೀಗೆ ಹಗಲು ಕಳೆಯಿತು, ರಾತ್ರಿಯೂ ಕಳೆಯಿತು, ಬೆಳಗಾಯಿತು, ಬೆಳಕಾಯಿತು, ಸ್ನಾನಕ್ಕೆ ಹೋಗಬೇಕಲ್ಲವೇ?

ಬಾವಿಯತ್ತ ಸಾಗುವುದಕ್ಕೆ ಹಳ್ಳ ದಾಟಿದೆ. ಏಕೋ ಮನಸ್ಸು ಕೇಳಿತು "ಈ ಹೊತ್ತೂ ಅದೇ ಹಾಸುಗಲ್ಲಿನ ಬಳಿಯಲ್ಲಿ ಜಳಕ ಮಾಡಿ ಬರಬಾರದೇಕೇ?" ಆ ಸೂಚನೆಯನ್ನು ಗ್ರಹಿಸಿ, ಮರಳಿ ಹಾಸುಗಲ್ಲಿನ ದಾರಿ ಹಿಡಿದೆ. ನನ್ನ ಬಟ್ಟೆಗಳನ್ನೆಲ್ಲ ಒತ್ತಟ್ಟಿಗಿರಿಸಿ, ತಂಬಿಗೆಯನ್ನು ಬೆಳಗಬೇಕೆಂದು ದಂಡೆಗೆ ಬಿದ್ದ ಮಳಲಿಗೆ ಕೈಹಾಕಿದೆ. ಒಂದೆರಡು ಸಾರೆ ಕೆದರುವಷ್ಟರಲ್ಲಿ ಉದ್ದವಾದ ಮಳೆಹುಳದಂತೆ ಏನೋ ಕಾಣಿಸಿತು. ಮುಟ್ಟಿನೋಡಿದೆ ಉಂಗುರ. ಆ ಆಕಾರ ತಳೆದಿತ್ತು ಮತ್ತೆ ಸಿಕ್ಕಿತಲ್ಲಾ ಎಂದು ಅಚ್ಚರಿಗೊಂಡು, ಚಿಂತೆಯು ಮುಮ್ಮಾರುಹಾರಿ ದೂರ ನಿಂತಿತು. ಆ ಉಂಗುರವನ್ನು ಕೈಬೆರಳಿಗೆ ಸೇರಿಸಿ, ಜಳಕ ಮಾಡಿ ಬಟ್ಟೆ ಹಿಡಕೊಂಡು ಹಿಗ್ಗು-ಉಕ್ಕಿ ಬರುತ್ತಿರಲು ಮನೆಗೆ ಬಂದೆ, ಮೊದಲು ದರ್ಶನ ಅತ್ತಿಗೆಯದು ಕೇಳಿದೆ.

"ನಿನ್ನೆ ನನ್ನ ಮುಖದಲ್ಲಿ ಬೇಸರದ ಕಳೆಯೇನಾದರೂ ಕಾಣಿಸಿತೇ?"

"ಇಲ್ಲ ಬೇಸರದ ಕಳೆ ಏಕೆ ಕಾಣಿಸಬೇಕು? ಮದುವೆಯ ಗಲವಿಲಿಯಲ್ಲಿ ತುಸು ಬಾಡಿರಬಹುದು"

ಆ ಬಳಿಕ ಅಡಿಗೆ ಮನೆಯಲ್ಲಿದ್ದ ಬಳಗವನ್ನೆಲ್ಲ ಹೊರಗೆ ಕರೆದು, ಉಂಗುರ ಕಳಕೊಂಡ ವ್ಯಥೆಯನ್ನು ಅದು ಇಂದು ಅದೇ ಸ್ಥಳದಲ್ಲಿ ತಾನಾಗಿ ಕೈ ಸಿಕ್ಕಿತೆಂಬ ಕಥೆಯನ್ನು ಹೇಳಿದೆ. ಕೇಳಿ ಅವರಿಗೆಲ್ಲ ಆಶ್ಚರ್ಯವಾಯಿತು. "ಉಂಗುರ ಕಳಕೊಂಡ ಕಥೆಯನ್ನು ನಿನ್ನೆ ನೀನು ಹೇಳಲೇ ಇಲ್ಲವಲ್ಲಾ! ಗಟ್ಟಿಗ ನೀನು" ಅಂದರು.

ಅದು ಈರಣ್ಣನ ಬದುಕು. ಅದನ್ನು ಹೆರವಾದರೂ ಕಳೆಯಲಾರರು. ಅದರ ವಿನಿಯೋಗ ಈರಣ್ಣನಿಂದಲೇ ಆಗಬೇಕು ಅದರ ಒಡೆಯ ಈರಣ್ಣ ಅಲ್ಲವೇ?

೩೯. ಕಣ್ಮರೆಯಾದ ಕಾಲ್ಮರೆ

ಶ್ರೀಬಂಥನಾಳ ಶಿವಯೋಗಿಗಳ ಅಕ್ಕರೆಯ ಕರೆಗಾಗಿ ಬಂಥನಾಳಕ್ಕೆ ಹೋಗಿದ್ದೆ. ಚಡಚಣದಿಂದ ಇಂಡಿ ಮತ್ತು ಇಂಡಿಯಿಂದ ತಾಂಬೆ ಹೀಗೆ ಬಸ್ ಪ್ರಯಾಣ ಮುಗಿಸಿ ತಾಂಬೆಯಿಂದ ಬಂಥನಾಳದವರೆಗೆ ೪-೫ ಮೈಲು ನಡೆಯುತ್ತಲೇ ಹೋಗಿಬಿಟ್ಟೆ.

ಅಷ್ಟರಲ್ಲಿ ಮಧ್ಯಾಹ್ನದ ಕಾರ್ಯಕ್ರಮ ಆರಂಭವಾಗಿತ್ತು. ದುಧನಿ ಸ್ವಾಮಿಗಳು ಅಧ್ಯಕ್ಷರು. ಅವರ ಬಲಬದಿಯಲ್ಲಿ ನಿಯೋಜಕರಾಗಿ ಶಿವಯೋಗಿಗಳು ಆಸೀನರಾಗಿದ್ದರು. ನಾನು ಸಭಾ ಮಂದಿರವನ್ನೇರಿ ಹೋಗಿ, ಕ್ರಮವಾಗಿ ಶಿವಯೋಗಿಗಳಿಗೂ ಅಧ್ಯಕ್ಷರಿಗೂ ತಲೆವಾಗಿ ಅಲ್ಲೇ ಕೆಳಗೆ ಅವರ ಮುಂಬದಿಯಲ್ಲಿ ಕುಳಿತುಬಿಟ್ಟೆ.

ಶ್ರೋತೃವರ್ಗ ಕಿಕ್ಕಿರಿದಿತ್ತು. ಸಭೆಯ ರಂಗಸ್ಥಳದಲ್ಲಿ ಸಣ್ಣದೊಡ್ಡ ಸ್ವಾಮಿಗಳು, ಕಾವಿಬಟ್ಟೆ ಧರಿಸಿ ಸಾಲಾಗಿ ಇರಿಸಿರುವ ಕುರ್ಚಿಗಳ ಮೇಲೆ ಕುಳಿತಿದ್ದರು.

ನಾನು ಕೆಳಗೆ ಕುಳಿತುದನ್ನು ಕಂಡು, ಶಿವಯೋಗಿಗಳು ಯಾರನ್ನೋ ಹತ್ತಿರ ಕರೆದು, ಸಭಾರಂಗದ ಬಲಬದಿಯ ಸೆರಗಿನಲ್ಲಿ ನನಗಾಗಿ ಕುರ್ಚಿ ಹಾಕಿಕೊಡಲು ಸೂಚಿಸಿದರು. ನಾನದಕ್ಕೆ ಒಪ್ಪಲಿಲ್ಲ. ಈಗಾಗಲೆ ಕುಳಿತ ರೀತಿಯಲ್ಲಿ ತಮ್ಮ ಪಾದ ಸನ್ನಿಧಿಯಲ್ಲಿ ಕುಳಿತುಕೊಳ್ಳುವುದೇ ನನಗೆ ಒಳ್ಳೆಯದು. ತಮ್ಮಿಂದ ದೂರದಲ್ಲಿ ಕುರ್ಚಿಯ ಮೇಲೆ ಆಸೀನನಾಗುವುದಕ್ಕಿಂತ

ತಮ್ಮ ಸನ್ನಿಧಿಯಲ್ಲಿ ಚಪಗಾಲು ಹಾಕಿ ಕುಳಿತುಕೊಳ್ಳುವುದರಲ್ಲಿ ಮಹದರ್ಷವಿದೆ ಎಂದೆನು.

"ನೀವು ಅತಿಥಿಯಾಗಿ ಬಂದವರಲ್ಲವೇ? ಕುಳಿತುಕೊಳ್ಳಲು ಆಸನ ಹಾಕಿಸುವ ಹೊಣೆ ನಮ್ಮದು. ಅತಿಥಿಯನ್ನು ಸನ್ಮಾನಿಸುವುದು ನಮ್ಮ ಧರ್ಮ" ಎಂದರು ಸ್ವಾಮಿಗಳು.

"ಅತಿಥಿಯೇ ನಾನಾದರೆ ಅಧ್ಯಕ್ಷರ ಇಲ್ಲವೆ ನಿರ್ವಾಹಕರ ಬದಿಯಲ್ಲಿ ಕುಳ್ಳಿರಿಸಬೇಕು. ಸಾಲಿನ ಕೊನೆಯಲ್ಲಿ ಬೇಡ, ಅದು ನನಗಾಗಿ ಅಲ್ಲ, ತಮಗಾಗಿ" ಎಂದೆ.

ನನ್ನ ಮಾತಿನ ಮರ್ಮವನ್ನರಿತ ಶಿವಯೋಗಿಗಳು ತಮ್ಮ ಬಲಬದಿಯಲ್ಲಿ ಒಂದು ಕುರ್ಚಿ ಹಾಕಿಸಿಕೊಟ್ಟರು ಕುಳಿತೆ, ಮಾತನಾಡುವ ಸರತಿ ಬಂತು ೧೦ ನಿಮಿಷದಲ್ಲಿ ಮುಗಿಸಬೇಕು ಎಂದರು ಅಧ್ಯಕ್ಷರು, ನಾನು ಶ್ರೀಗಳ ಮುಖದತ್ತ ಕಣ್ಣೆರುಹಿ ನನ್ನ ಭಾಷಣ ಆರಂಭಿಸಿದೆ. ಮೊದಲ ವಾಕ್ಯದಿಂದಲೇ ಶ್ರೋತೃವರ್ಗವೆಲ್ಲ ಕೈತಟ್ಟಿ ಸೆಟೆದು ಕುಳಿತರು. ಹಾಂ ಹಾಂ ಅನ್ನುವಷ್ಟರಲ್ಲಿ, ನನ್ನ ಅವಧಿ ಮುಗಿಯ ಬಂತೆಂದು ಹೇಳಿದೆ.

"ಇನ್ನೂ ೧೦ ನಿಮಿಷ ಸಾಗಲೆಂದು" ಶ್ರೀಗಳು ಸನ್ನೆ ಮಾಡಿದರು.

ಹೀಗೆ ಭಾಷಣದ ಬಾಲವು ೪೦ ಮಿನೀಟು ಬೆಳೆದೇ ಬೆಳೆಯಿತು. ಭಾಷಣವು ಮುಗಿಯಲಿಲ್ಲ, ಮುಗಿಸಲ್ಪಟ್ಟಿತು.

ಅಧ್ಯಕ್ಷರು ಸಮಾರೋಪ ಭಾಷಣ ಮಾಡುವ ಕಾಲಕ್ಕೆ ನನ್ನ ಭಾಷಣದೊಳಗಿನ ಒಂದು ವಿಷಯದ ತಪ್ಪು ವರದಿ ಮಾಡಿದರು. ನಾನದನ್ನು ಎದ್ದು ನಿಂತು ಪ್ರತಿಭಟಿಸಿದೆ. ಅವರು ತಮ್ಮದೇ ನಿಜವೆಂದರು, ನಾನು ನನ್ನದೇ ಸರಿ ಎಂದೆನು. ಆ ವಿಷಯವನ್ನು ಶ್ರೋತೃಗಳು ಹೇಗೆ ತೀರ್ಮಾನಿಸಿದರೆಂಬುದನ್ನು ಇಲ್ಲಿ ಹೇಳುವ ಅಗತ್ಯವಿಲ್ಲ.

ನಿರ್ವಾಹಕರ ಆಶೀರ್ವಚನ ಆರಂಭವಾಯಿತು. ಆ ಅವಧಿಯಲ್ಲಿ ಅವರು "ಇದು ಜಾತ್ರೆ, ಜನ ಜಾತ್ರೆಗೆ ಬಂದವರು, ಸ್ಥಳದ ಕೊರತೆಯಿಂದ

ಸಿಕ್ಕಲ್ಲಿ ಒರಗುವರು, ತಲೆಯ ಹತ್ತಿರ ಒಂದು ಕೈಚೀಲ, ಕಾಲಬದಿಯಲ್ಲಿ ಕಾಲ್ಮರಿ ಬಿದ್ದಿರುತ್ತವೆ. ನೀವಾರೂ ಅದನ್ನು ಮುಟ್ಟಬಾರದು, ಕಣ್ತೆರೆದು ನೋಡಬಾರದು ತಿಳಿಯಿತೇ? ಒಟ್ಟಿನಲ್ಲಿ ಕಳವಿನ ಸುದ್ದಿ ಏಳಬಾರದು ಗೊತ್ತಾಯಿತೇ? ಹಾಗಾದರೆ ಚಪ್ಪಾಳೆ ಹಾಕಿ ಸಮ್ಮತಿಯನ್ನು ಸೂಚಿಸಿರಿ" ಎಂದರು ಸ್ವಾಮಿಗಳು.

ಕೂಡಲೇ - "ವೃಷಭೇಂದ್ರ ಸ್ವಾಮಿ ಮಹರಾಜಕೀ ಜಯ್" ಎನ್ನುತ್ತ ಜೋರಾಗಿ ಕೈತಟ್ಟಿದರು. ಅದರಿಂದ ಶಿವಯೋಗಿಗಳು ಹರ್ಷಿತರಾದರು, ತಮ್ಮ ಸೂಚನೆ ಮಾನ್ಯವಾಯಿತೆಂದು ಪ್ರಸನ್ನರಾದರು.

ಸಭೆಯಲ್ಲಿ ಸೇರಿದವರು ತಂತಮ್ಮ ಸ್ಥಾನಗಳನ್ನು ಅರಸುತ್ತ ಹೋಗಿ ಬಿಟ್ಟರು. ನಾನು ಶಿವಯೋಗಿಗಳ ಬಿಡಾರವಾದ್ದ ಕಮರೀ ಮಠದಲ್ಲಿ ತಂಗಿದೆನು. ಬೆಳಗಿನ ೫ ಗಂಟೆಯ ರೈಲಿನಲ್ಲಿ ಇಂಡಿರೋಡಕ್ಕೆ ಹೋಗ ಬೇಕಾಗಿದೆಯೆಂದು ಸ್ವಾಮಿಗಳಿಗೆ ಹೇಳಿದೆ. ಅವರು ಫಲಪುಷ್ಪಗಳನ್ನಿತ್ತು ಆಶೀರ್ವದಿಸಿ ವಿಶ್ರಾಂತಿಧಾಮಕ್ಕೆ ತೆರಳಿದರು. ನಾನೂ ನನ್ನ ತಂಗುದಾಣಕ್ಕೆ ಹೋದೆನು.

ಸಾಕಷ್ಟು ನಿದ್ದೆಯಾಗಿ ಎಚ್ಚರಿಯುವಷ್ಟರಲ್ಲಿ ಬೆಳಗಿನ ಜಾವವಾಯಿ ತೆನ್ನುವುದು ತಿಳಿಯಿತು. ನನ್ನ ತಾಣದಿಂದ ಕೆಳಗಿಳಿದು ಬಂದು ಕಾಲ್ಮರೆ ಬಯತಿಟ್ಟ ಸ್ಥಳ, ಹಲವು ಕಾಲ್ಮರೆ ಕೂಡಿದ ಸ್ಥಳ ಹೀಗೆ ಹಲವಾರು ಸ್ಥಳಗಳಿಗೆ ಹೋಗಿ ಕಾಲ್ಮರೆ ಹುಡುಕುವ ಯತ್ನ ಮಾಡುತ್ತಿದ್ದೆ. ಅಷ್ಟರಲ್ಲಿ ಶ್ರೀಗಳು ಎದ್ದಿದ್ದೇರಸೋ, ಯೋಗಾಸನ ಸಿದ್ಧತೆ ನಡೆಯಿಸಿದ್ದರೆಂದು ತೋರುತ್ತದೆ ಕೇಳಿದರು -

"ಯಾರು? ಲಿಗಂಣ್ಣನವರೇನು? ಕಾಲ್ಮರೆ ಹುಡುಕುತ್ತಿರುವಿರಾ"

ಅಹುದು ಎನ್ನುತ್ತಲೆ ನನ್ನ ಕೆಲಸ ಮುಂದುವರಿಸಿದೆ. ಆದರೆ ಕಣ್ಮರೆಯಾದ ಕಾಲ್ಮರೆ ಸಿಗಲಿಲ್ಲ. ಸಿಗುವಂತೆಯೂ ಇಲ್ಲವೆಂದು ಭಾವಿಸಿದೆ.

ಶ್ರೀ ಶಿವಯೋಗಿಗಳಂತೂ ನನಗಿಂತ ಮುಂಚೆಯೇ ಭಾವಿಸಿದ್ದರು ಕಣ್ಮರೆಯಾದ ಕಾಲ್ಮರೆ ಸಿಗುವುದಿಲ್ಲ. ೩-೪ ತಾಸುಗಳ ಹಿಂದೆಯೇ ಗುರೂಪದೇಶ ಕೇಳಿದ ಶಿಷ್ಯರಲ್ಲಿ ಯಾರು ಅದನ್ನು ಉಲ್ಲಂಘಿಸಿದರೋ ತಿಳಿಯಲಿಲ್ಲ.

ಕಮರಿ ಮಠದ ಹೆಬ್ಬಾಗಿಲಿನಿಂದ ರೇಲ್ವೆ ನಿಲ್ದಾಣದವರೆಗೆ ಖಡೀಕಲ್ಲು ಹರವಿದ್ದರು. ಅವು ಹೆಜ್ಜೆಹೆಜ್ಜೆಗೂ ಚುಚ್ಚುತ್ತಿದ್ದವು. ಕಾಲ್ಮರೆ ಕಳೆದರೂ ಕಳೆಯಲಿ, ಆದರೆ ಈ ಚುಚ್ಚುವ ಖಡೀಕಲ್ಲು ಸೌಮ್ಯವಾದರೆ ಸಾಕು ಎಂದು ಪ್ರಾರ್ಥಿಸುತ್ತಿದ್ದೆ.

ಅಷ್ಟರಲ್ಲಿ ಒಬ್ಬ ಶಿಷ್ಯನು ಓಡಿ ಬಂದು ನನ್ನನ್ನು ನಿಲ್ಲಿಸಿ, ಶ್ರೀಗಳು ಈ ಅಲ್ಪಾಶೀರ್ವಾದವನ್ನು ಸ್ವೀಕರಿಸಲು ತಿಳಿಸಿದ್ದಾರೆಂದು ನುಡಿದನು. ಕಣ್ತೆರೆದುನೋಡಿದರೆ ಅದು ಆರತಿಯ ತಾಟು! ಅದರ ತುಂಬ ಭಕ್ತರು ನೀಡಿದ ದಕ್ಷಿಣೆಯ ಪುಡಿಕಾಸು, ತಿಜೋರಿಯ ಸೇವಕ ಇರಲಿಲ್ಲವೆಂದು ಈ ಚಿಲ್ಲರೆ ಆಶೀರ್ವಾದ ದಯೆಪಾಲಿಸಿದ್ದಾರೆ, ಆದ್ದರಿಂದ ನೀವು ಬೇಡವೆನ್ನದೆ ಸ್ವೀಕರಿಸಿ ಎಂದು ನುಡಿದ, ನನ್ನುಡಿಯಲ್ಲಿ ಆ ಹಣವನ್ನೆಲ್ಲ ಸುರಿದು ಹೋಗಿಬಿಟ್ಟನು.

ನಾನು ಮೆಲ್ಲನೆ ನಿಲ್ದಾಣಕ್ಕೆ ಹೋಗಿ, ಉಡಿಯೊಳಗಿನ ಚಿಲ್ಲರೆ ಎಣಿಸಿದರೆ ೭-೮ ರೂಪಾಯಿಗಳಷ್ಟಿದೆಯೆಂದು ತಿಳಿಯಿತು. ಸೆಕೆಂಡ್ ಹ್ಯಾಂಡ್ ಕಾಲ್ಮರೆಯ ಬೆಲೆ ಇಷ್ಟೇ ಅಲ್ಲವೇ? ಎನ್ನುತ್ತ ತಿಕೀಟು ಖರೀದಿಸಿ, ಗಾಡಿ ಬಂದು ನಿಂತಾಗ ಹತ್ತಿ ನಿಂತವನು ಇಂಡಿರೋಡ ನಿಲ್ದಾಣದಲ್ಲಿಯೇ ಕೆಳಗಿಳಿದು ಚಡಚಣಕ್ಕೆ ಹೋಗುವ ಬಸ್ಸಿನತ್ತ ನಡೆದೆ.

ಇಂಥದೇ ಇನ್ನೊಂದು ಮಾದರಿಯನ್ನು ಹೇಳಿಕೊಡದಿದ್ದರೆ ವಿಷಯಕ್ಕೆ ಪೂರ್ಣತೆ ಬರಲಾರದು.

ಒಮ್ಮೆ ನನ್ನ ಹಿರಿಯ ಮಗಳಾದ ಭುವನೇಶ್ವರಿಯೊಡನೆ ಪುಟಪರ್ತಿಗೆ ಹೋಗಿ ಸಾಯಿಬಾಬಾ ಅವರನ್ನೂ, ಅವರ ಆಶ್ರಮವನ್ನೂ ಕಂಡುಬಂದೆವು. ಹುಟಗಿಯಿಂದ ಹೊರಟ ಗಾಡಿಯಲ್ಲಿ ಗುಂಟಕಲ್ಲಿಗೆ ಬಂದು ಅಲ್ಲಿ

ಬೆಂಗಳೂರು ಗಾಡಿಯನ್ನು ಹತ್ತಿದರೆ ಒಂದು ಚಿಕ್ಕ ನಿಲ್ದಾಣ ಬರುವದು. ಅಲ್ಲಿಳಿದು ಸುಮಾರು ೩-೪ ಮೈಲು ಎತ್ತಿನ ಬಂಡಿಯಲ್ಲಿ ಪ್ರವಾಸ ಮಾಡಬೇಕಾಗುವದು.

ಮಾಡಿದ ಪ್ರವಾಸ, ನೋಡಿದ ನಿರೀಕ್ಷೆ, ದೊರೆತ ದರ್ಶನ, ಸಿಕ್ಕ ತೃಪ್ತಿ ಮೊದಲಾದವುಗಳನ್ನು ವಿವರಿಸುವುದಿಲ್ಲ. ಇಲ್ಲಿ ಹೇಳಬೇಕಾದ ವಿಷಯವೇ ಬೇರೆ.

ವಾಡಿಕೆಯಂತೆ ಆ ಚಿಕ್ಕ ನಿಲ್ದಾಣಕ್ಕೆ ಹೋಗಿ, ರಾತ್ರಿ ೧೦ ಗಂಟೆಯ ಸುಮಾರಿಗೆ ಬಂಡಿ ಹತ್ತಿ ಗುಂಟಕಲ್ಲಿಗೆ ಹೋಗುವುದು, ಆ ಬಳಿಕ ಮದ್ರಾಸ-ಮುಂಬಯಿ ಮೇಲಗಾಡಿಯಲ್ಲಿ ಸೊಲ್ಲಾಪುರಕ್ಕೆ ಹೋದರೆ ನಮ್ಮ ಪ್ರವಾಸ ಮುಗಿಯವದು.

ಪುಟಪರ್ತಿಯಿಂದ ಗುಂಟಕಲ್ಲಿಗೆ ಹೋಗುವುದಕ್ಕೆ ೨-೩ ತಾಸು ಸಾಕೆನಿಸುತ್ತದೆ. ಗಾಡಿಯಲ್ಲಿ ಸ್ಥಳ ಸಿಕ್ಕಿತು. ನಿದ್ದೆಗೂ ಅಪ್ಪಣೆ ಸಿಕ್ಕಿತು. ಇನ್ನೇನು? ಇದ್ದ ಕೈಚೀಲು-ಕಾಲ್ಮರೆಗಳನ್ನೂ ತಲೆದಿಂಬು ಮಾಡಿಕೊಂಡು, ಮಲಗಿದರೆ ನಿಶ್ಚಿಂತವಾದ ನಿದ್ದೆಯಾಗುವುದೆಂದು ನನ್ನ ಅನುಭವ. ಆದರೆ ಮಗಳು ಭುವನೇಶ್ವರಿ ಬೇಡವೆಂದಳು. ಕಾಲ್ಮರಿಗಳನ್ನು ಬಿಟ್ಟಲ್ಲಿಯೇ ಬಿದ್ದಿರಲಿ ನನಗೆ ನಿದ್ರೆಯೇ ಹತ್ತುವದಿಲ್ಲವೆಂದಾಗ ಕಳೆಯುವ ಹೆದರಿಕೆಯೇನು? ಎಂದು ಭವನೇಶ್ವರಿಯು ತನ್ನ ಸೂಕ್ತ ಸಲಹೆಯನ್ನು ಹೇಳಿಕೊಟ್ಟಿದ್ದರಿಂದ ನಾನು ಕಾಲ್ಮರೆಗಳನ್ನು ತಲೆದಿಂಬಿಗೆ ಇರಿಸಿಕೊಳ್ಳಲಿಲ್ಲ.

ಕ್ಷಣಾರ್ಧದಲ್ಲಿ ನಿದ್ದೆ ಹತ್ತಿತು. ಭುವನೇಶ್ವರಿ ಮಾತ್ರ ಪಿಳಿಪಿಳಿ ಕಣ್ಣು ಬಿಡುತ್ತ ಕುಳಿತಿದ್ದಳು. ದೊಡ್ಡ ಗಾಡಿ, ದೊಡ್ಡ ದೊಡ್ಡ ಹೆಜ್ಜೆ ಹಾಕುತ್ತ, ಗುಂಟುಕಲ್ಲಿಗೆ ಬಂತು "ಏಳು ಏಳು ಅಪ್ಪಾ, ಗುಂಟಕಲ್ಲು ಬಂತು, ಇಲ್ಲಿಳಿದು ಸೊಲ್ಲಾಪುರ ಗಾಡಿ ಹಿಡಿಯಬೇಕು, ಗಾಡಿ ಬರುವಷ್ಟರಲ್ಲಿ ತಿಕೀಟು ಖರೀದಿಸಬೇಕು" ಎಂದು ಸೂಚ್ಯವಾಗಿ ಹೇಳಿದಳು. ಆದರೆ ಕಾಲ್ಮರೆ ಕಾಣೆಯಾಗಿದ್ದವು. ಎಚ್ಚರವಿರುವೆನೆಂದು ಹೇಳಿ ನಿದ್ದೆ ಮಾಡುತ್ತಿದ್ದ ಭುವನಕ್ಕನ ಕಣ್ತಪ್ಪಿಸಿ ನಮ್ಮಂಥ ಒಬ್ಬ ಪ್ರವಾಸಿ ಕಾಲ್ಮರಿ ಒಯ್ದನೆಂದು ತೋರುತ್ತದೆ.

ಗಾಡಿಯಿಂದ ಕೆಳಗಿಳಿದು ಹೆಜ್ಜೆಯಿಟ್ಟರೆ, ಅಂಗಾಲು ಮುಳ್ಳಾವಿಗೆಯ ಅನುಭವ ಪಡೆಯಿತು. ಅಲ್ಲಿಂದ, ಸೊಲ್ಲಾಪುರಕ್ಕೆ ಹೋಗುವ ಗಾಡಿ ನಿಲ್ಲುವ ಸ್ಥಳವನ್ನು ಕೇಳಿಕೊಂಡು, ಅಲ್ಲಿ ಭುವನೇಶ್ವರಿಯನ್ನು ಕುಳ್ಳಿರಿಸಿ, ಸಾಮಾನು ಕಾಯಬೇಕೆಂದು ಎಚ್ಚರಿಕೆ ಹೇಳಿ ತಿಕೀಟು ತರುವ ಆಫೀಸು ಹುಡುಕುತ್ತ ತೆರಳಿದೆ.

ರಾತ್ರಿಯ ಕಾಲ, ಬೆಳಕಿನ ವ್ಯವಸ್ಥೆ ಸಾಕಷ್ಟಿದ್ದರೂ ಖಡೀಕಲ್ಲಿನ ಹಾಸಿಗೆ ಮೃದುವಾಗಿಲ್ಲದ ಪೆಟ್ಟಿಗೊಮ್ಮೆ ಉಧೋಉಧೋ ಎನ್ನುವ ಜೋಗಣಿಯ ಹಾಗೆ ನಾನು ಹೆಜ್ಜೆಹೆಜ್ಜೆಗೂ ಶಿವನಾಮದ ಹೆಜ್ಜೇನು ಸವಿಯುತ್ತ ತಿಕೀಟು ಮಾರುವ ಆಫೀಸಿನವರೆಗೆ ಸಾಗಿದೆ. ಅಲ್ಲಿಯ ಜನಸಮ್ಮರ್ದ ನೋಡಿ ಕಕ್ಕಾವಿಕ್ಕಿಯಾದೆ. ಎಲ್ಲರಂತೆ ನಾನೂ ಸಾಲಿನಲ್ಲಿ ನಿಂತೆ. ನನ್ನ ಸರತಿ ಬರುವಷ್ಟರಲ್ಲಿ ಮುಂದಿನ ಗಾಡಿ ಬಂದು ಬಿಟ್ಟರೆ ಭುವನೇಶ್ವರಿಯನ್ನು ಕಾಣುವುದು ಇನ್ನೆಲ್ಲಿ? ಎಂಬ ಡವಡವಿಕೆ ಎದೆಯಲ್ಲಿ ಮಿಡಿಯುತ್ತಿತ್ತು.

ಊರಿಗೆ ಬಂದವಳು ನೀರಿಗೊಮ್ಮೆ ಬರಲೇ ಬೇಕಲ್ಲವೇ? ಸಾಲಿನಲ್ಲಿ ನಿಂತ ಬಳಿಕ ತಿಕೀಟು ಕಿಂಡಿಯ ಬಳಿಗೆ ಬರಲೇಬೇಕಲ್ಲವೇ? ಬಂದೆ, ನಿಂತೆ, ಅಂಗಿಯ ಮೇಲು ಕಿಸೆಯಿಂದ ಹಣ ತೆಗೆದು ಹಿಡಿದು ಸೊಲ್ಲಾಪುರಕ್ಕೆ ಹೋಗಬೇಕು ೩ನೇ ತರಗತಿಯ ಎರಡು ತಿಕೀಟು ಕೊಡಿರಿ ಎಂದೆ.

ನಾನು ವಿನಂತಿಸಿಕೊಂಡಂತೆ ೨ ತಿಕೀಟುಗಳನ್ನು ಮತ್ತು ಹೊರಳಿ ಬರಬೇಕಾದ ಹಣವನ್ನೂ ನನ್ನ ಕೈಗಿಟ್ಟು ಎತ್ತಿರಿಸ್ನು ಎಂದರು. ನಾನು ಅವರಪ್ಪಣೆಯನ್ನು ಅಕ್ಷರಶಃ ಪಾಲಿಸಿದೆ. ಎರಡು ತಿಕೀಟುಗಳನ್ನು ಮೊದಲು ನೋಡಿಕೊಂಡೆ. ನಿಸ್ಸಂಶಯವಾಗಿ ಸರಿಯೆನಿಸಿತು.

ಕೈಗಂಬವು ತನ್ನ ಕೈಯಿಳಿಸಿ ಗಾಡಿ ಬಂದುದನ್ನು ಹೇಳಿಕೊಟ್ಟಿತು, ಆದ್ದರಿಂದ ನಡಿಗೆಯಲ್ಲಿ ತತ್ತರಿಸಿದೆ. ಒತ್ತರಿಸುವುದು ಅನಿವಾರ್ಯವಾಯಿತು. ಭುವನೇಶ್ವರಿ ಕುಳಿತ ಸ್ಥಳ ತಿಕೀಟು ಆಫೀಸಿನಿಂದ ಕನಿಷ್ಟ ೧ ಫರ್ಲಾಂಗ್ ದೂರದಲ್ಲಿತ್ತು. ಅಷ್ಟು ದಾರಿಯನ್ನು ಮುಳ್ಳಾವಿಗೆಯ ಮೇಲೆ ಹೆಜ್ಜೆಯಿಟ್ಟಂತೆ ಸಾಗಬೇಕು.

ಅಷ್ಟರಲ್ಲಿ ಒಂದು ವಿಷಯ ನೆನಪಿಗೆ ಬಂತು, ತಿಕೀಟು ಮಾಸ್ತರನು ನನಗೆ ಬರಬೇಕಾದ ಹಣವನ್ನೆಲ್ಲ ಪೂರ್ತಿಯಾಗಿ ಕೊಟ್ಟನೋ ಏನಾದರೂ ಉಳಿಸಿಕೊಂಡನೋ ನೋಡುವುದು ಯಾವಾಗ? ಅಂಥ ಗಲವಿಲಿಯಲ್ಲಿ, ಅರೆಕೊರೆ ಬೆಳಕಿನಲ್ಲಿ, ಮನಸ್ಸಿನ ಎಳೆತದಲ್ಲಿ ಹಣ ಎಣಿಸಿಕೊಳ್ಳುವುದು ಸಾಧ್ಯವೇ? ಲೆಕ್ಕಹೊಂದದಿದ್ದರೆ ಮರಳಿಹೋಗಿ ತಿಕೀಟು ಆಫೀಸಿನಿಂದ ಪಡೆಯಲು ಸಾಧ್ಯವೇ ಎಂಬುದೊಂದು ತಿಳಿಯದಾಯಿತು.

ಮನಸ್ಸು ಹುಚ್ಚು ಹುಡದಿ ಹಾಕುತ್ತಿರುವಾಗಲೇ ಅಚ್ಚವಚ್ಚರಿಕೆಯಿಂದ ಕಿಸೆಯೊಳಗಿನ ಹಣ ತೆಗೆದು ಎಣಿಸತೊಡಗಿದೆ, ಒಮ್ಮೆ ಅಲ್ಲ, ಇಮ್ಮೆ ಅಲ್ಲ ನಾಲ್ಕಾರುಸಾರೆ ಎಣಿಸಿದರೂ ೧೦. ರೂ. ಹೆಚ್ಚಿದೆಯೆಂದು ತೋರಿತು. ತಿಕೀಟು ಮಾಸ್ತರನು ನನಗೆ ಎರಡು ಸೊಲ್ಲಾಪುರ ತಿಕೀಟು ಕೊಟ್ಟ ಬಳಿಕ, ಮರಳಿ ಕೊಡಬೇಕಾದ ಹಣವನ್ನು ಚೆನ್ನಾಗಿ ಲೆಕ್ಕ ಮಾಡದೆ ಕೊಟ್ಟನೇನೋ ಎಂಬ ಸಂಶಯಬಂತು.

೧೦ ರೂ. ಹೆಚ್ಚಿಗೆ ಬಂದಿದ್ದವು. ೧೦ ರೂ. ಒಂದು ನೋಟೇ ಕಣ್ತಪ್ಪಿ ಬಂದಂತೆ ತೋರುತ್ತದೆ. ಅದನ್ನು ಮರಳಿಕೊಟ್ಟು ಬರುವ ವಿಚಾರವೇನೋ ಸುಳಿಯಿತು. ಆದರೆ ಅಷ್ಟರಲ್ಲಿ ನಮ್ಮ ಗಾಡಿ ಬಂದರೆ ನಮ್ಮ ಗತಿಯೇನು? ಭುವನೇಶ್ವರಿಗೆ ಮುಂದಿನ ದಾರಿ ಎಂಥದು?

ತಿಕೀಟು ಮಾಸ್ತರನ ಕಣ್ಣುತಪ್ಪಿ ೧೦ ರೂ. ನೋಟು ನನಗೆ ಬಂದದ್ದು ನಿಜ. ನನ್ನ ಕಾಲ್ಮರೆ ಕಣ್ಮರೆಯಾಗಿ ಹೋದಂತೆ ಆತನ ನೋಟು ಕಣ್ಮರೆಯೋ ಮಣ್ಮರೆಯೋ ಆದಂತಾಯಿತು.

ಲಚ್ಯಾಣ ಜಾತ್ರೆಯಲ್ಲಿ ಕಳೆದ ಕಾಲ್ಮರೆಗಳು ಹಳೆಯವಾಗಿದ್ದಂತೆ, ಪುಟಪರ್ತಿ ಯಾತ್ರೆಯಲ್ಲಿ ಕಳವಾದ ಕಾಲ್ಮರೆಗಳೂ ಹಳೆಯವೇ ಆಗಿದ್ದವು. ಎರಡುಸಾರೆ, ಕಳೆದದ್ದು ನಿಜ, ಆದರೆ ಅವು ಸೆಕೆಂಡ್ ಹ್ಯಾಂಡ್ ಕಾಲ್ಮರೆಗಳು, ಒಮ್ಮೆ ಅವುಗಳ ಬೆಲೆ ೭-೮ ರೂ. ಆಯಿತು. ಇನ್ನೊಮ್ಮೆ ಅವುಗಳ ಬೆಲೆ ೧೦ ರೂ. ಆಯಿತು.

ಯಾವನು ಕಸುಗೊಂಡಿದ್ದನೋ ಅವನೇ ಕೊಟ್ಟುರಂಬಿಸಿದನೆಂದು ತೋರುತ್ತದೆ. ಹಾಗೆ ತಿಳಿಯುವುದೇ ವಾಸ್ತವಿಕವಲ್ಲವೇ?

೪೦. ಅಸ್ವಾಸ್ಥ್ಯಗಳೊಡನೆ ಸೆಣಸಾಟ

ವೈಯಕ್ತಿಕ ಅಸ್ವಾಸ್ಥ್ಯಗಳೊಡನೆ ಹೋರಾಟವು ಏಕಮುಖವಾಗಿ ನಡೆದರೆ ಕೌಟುಂಬಿಕ ಅಸ್ವಾಸ್ಥ್ಯಗಳೊಡನೆ ನಡೆಯುವ ಹೋರಾಟವು ಬಹು ಮುಖವಾಗಿರುತ್ತದೆ. ಆ ಹೋರಾಟಗಳಲ್ಲಿ ಗೆಲವು ಗಳಿಸಿದ ವಿವರಗಳನ್ನು ಮಾತ್ರ ಇಲ್ಲಿ ವಿವರಿಸುತ್ತೇನೆ. ಸೋಲಿಗೀಡಾದ ಪ್ರಸಂಗಗಳು ನಮಗಿಲ್ಲಿ ಅಪ್ರಸ್ತುತ.

ಈಶ್ವರನಿಗೆ (೧೯೫೦) ಅಂಟಿದ ವಿಷಮಜ್ವರದ ವಿಷಯವೆಂದರೆ ನನಗೆ ಕಳ್ಳರು ಬಡಿದ ದಾರಿಯಾಗಿತ್ತು. ಅದೇ ಹೋರಾಟದಲ್ಲಿ ೨ ವಾರಗಳ ಹಿಂದೆ ಕಿರಿಯ ಮಗ ಸೂರ್ಯಕಾಂತನನ್ನು ಕಳಕೊಂಡಿದ್ದು ಇರಿಗಾಯವು ಇನ್ನೂ ಹಸಿಯಾಗಿರುವಾಗಲೇ ಈಶ್ವರನು ಅದೇ ಜಾಡ್ಯಕ್ಕೀಡಾದನು. ಅದೂ ವಿಷಮ ಜ್ವರವೆಂದು ತಿಳಿದ ಕೂಡಲೇ, ಬಚ್ಚಲಕ್ಕಿಳಿದು ಕೈಕಾಲು ತೊಳಕೊಳ್ಳ ನಿಂತ ನನ್ನ ಸುತ್ತಲು, ಉಗ್ರಗಾಮಿಗಳ ತಂಡ ಏರಿ ಬರುವಂತೆ ಕಂಡು ಮೈ ನಿಮಿರಿತು. ಆಗ ಶ್ರೀಮಾತೆಯವರ ಒಂದು ಸೂಚನೆ ಫಕ್ಕನೆ ನೆನಪಿಗೆ ಬಂತು. ಏನಂದರೆ -

"ಅಸ್ವಾಸ್ಥ್ಯವು ದಾಳಿಮಾಡುವ ಲಕ್ಷಣ ಕಂಡಕೂಡಲೇ ನಿಮ್ಮ ಪ್ರಾಣ ಶಕ್ತಿಯ ಅಂಟಿನಿಂದ ನಿಮ್ಮ ಸುತ್ತಲು ಲಕ್ಷ್ಮಣರೇಖೆಯನ್ನು ನಿರ್ಮಿಸಿಕೊಂಡು ಬಿಡಿರಿ. ಅದರಿಂದ ಆ ದಾಳಿಗಳು ಹಿಂಜರಿದು ನಿಲ್ಲುತ್ತವೆ."

ಉಗ್ರವಾಗಿ ಏರಿಬರುವಂತೆ ತೋರಿದ ಚಳಿಯು ಅಲ್ಲಿಯದಲ್ಲೇ ಕುಸಿಯಿತು. ದೇವರ ಕೋಣೆಗೆ ಹೋಗಿ ದೀಪಹಚ್ಚಿ, ಊದಕಡ್ಡಿ ಬೆಳಗಿ

ಮಗುವಿನ ಬಳಿಗೆ ಹೋಗಿ, ಮುಖ-ಹೊಟ್ಟೆ-ಬೆನ್ನಗಳ ಮೇಲೆ ಕೈಯಾಡಿಸಿದೆ. ಆಗಿನಿಂದ ೫-೬ ದಿನ ಸತತವಾಗಿ ಆತನ ಹತ್ತರ ಕುಳಿತು, ದೇವ ಜನನಿಯನ್ನು ಪ್ರಾರ್ಥಿಸತೊಡಗಿದೆ -

"ಪೂಜ್ಯ ಮಾತೇ, ಈ ಮಗುವನ್ನು ನಾನು ನಿನ್ನಿಂದ ಬೇಡಿ ಇಸಗೊಂಡಿದ್ದೇನೆ. ಇದು ನನ್ನದಾಗಿಯೇ ಉಳಿಯಲಿ."

ಔಷಧಿ, ಪಥ್ಯದೂಟ, ಉತ್ಸಾಹದ ವಾತಾವರಣಗಳನ್ನು ಕಾಯ್ದು ಕೊಳ್ಳುವ ಕೆಲಸವನ್ನು ಮುಂದುವರಿಸಿದೆ.

ಒಡಗತೆಗಳನ್ನು ಹೇಳಿ ಅವುಗಳಲ್ಲಿ ಹುದುಗಿರುವ ಕವಿತ್ವವನ್ನು ತೋರಿಸಿಕೊಟ್ಟೆ. ಅದೇ ಪ್ರಕಟವಾದ "ತಿಮ್ಮನ ತಲೆ" ಪುಸ್ತಕದೊಳಗಿನ ಸಂಭಾಷಣೆಗಳನ್ನು ಓದಿಹೇಳಿ ಅವನನ್ನು ನಗಿಸಿದ್ದಲ್ಲದೆ, ಮಾತಿನಲ್ಲಿ ಹುದುಗಿದ ಸ್ವಾರಸ್ಯವನ್ನು ಬಿಚ್ಚಿ ಹೇಳಿದೆ.

ಅದರಿಂದಾದ ಆನಂದವನ್ನು ಅರಿತು ಈಶ್ವರನು ಜಿಗಿದೆದ್ದು ಕುಳಿತುಕೊಳ್ಳುವನು. ಯಾವ ವಿಷಯವನ್ನೇ ಆಗಲಿ ಬೇಸರು ಬರುವ ಮುನ್ನವೇ ಕೊನೆಗಾಣಿಸಿ ಬೇರೊಂದರ ಕಡೆಗೆ ಗಮನಿಸುವಂತೆ ಮಾಡುತ್ತಿದ್ದೆ. ಆಡಾಡುತ್ತ ಮೂಲಾಕ್ಷರಗಳ ಪರಿಚಯ ಮಾಡಿಕೊಟ್ಟೆ. ಅವುಗಳನ್ನು ಗುರುತಿಸಲು ರೂಢಿ ಮಾಡಿಕೊಟ್ಟೆ.

"ಬಾಲಬೋಧಿನಿ"ಯನ್ನು ಓದಿ, ತಾನು ಅರಿತ ಅಕ್ಷರ ದೃಢೀಕರಣ ಮಾಡಿಸುವ ಗೊಡವೆಗೆ ಹೋಗದೆ, "ತಿಮ್ಮನ ತಲೆ"ಯೊಳಗಿನ ಸಂಭಾಷಣೆ ಗಳನ್ನೇ ಓದಕೊಟ್ಟೆನು, ಅದರಿಂದ ಮನಸ್ಸಿಗೆ ವಿನೋದ ಮತ್ತು ಬುದ್ಧಿಗೆ ಚಾಲನೆ ಸಿಕ್ಕಿತು. ಅಷ್ಟೇ ಅಲ್ಲ ಅವೆರಡರಿಂದ ಅವನ ಅಸ್ವಾಸ್ಥ್ಯವು ಬಾಡಿ ಸೊಪ್ಪೆಯಾಗತೊಡಗಿತು.

ಆ ನಮ್ಮ ಸಹವಾಸದ ಫಲದಿಂದೆ ಆತನಲ್ಲಿ ವಿನೋದ ವೃತ್ತಿ ಅಂಕುರಿಸಿತು. ಆ ಸಮಯಕ್ಕೆ ಆತನು ಹೇಳಿದ ಸಂಭಾಷಣೆಗಳು ಕೆಳಗೆ ಕಾಣಿಸಿದಂತಿವೆ.

೧) ನಿನ್ನ ಕಿಸೆಯಲ್ಲಿ ಏನಿದೆಯೋ, ಸದಾ ಕೈಹಾಕುತ್ತೀ? ಎಂಬುದು ಪ್ರಶ್ನೆ.

"ಏನಿಲ್ಲ ಕಣೋ ಕಿಸೆಯಲ್ಲಿ ಬರೇ ಎರಡು ತೂತುಗಳಿವೆ" ಎಂದು ಅವುಗಳಲ್ಲಿ ಬೊಟ್ಟು ಸೇರಿಸಿ ಕಿಸೆಯನ್ನು ತಿರುಹಿಸಿದನು. ಗೆಳೆಯನಿಗೆ ಬರಿ ತೂತುಗಳೇ ಕಾಣಿಸಿದವು.

೨) ಬೇಸಿಗೆ ಬಿಸಿಲಿನ ತಾಪಕ್ಕಂಜಿ ಎಲ್ಲರೂ ಮರದ ಕೆಳಗೇ ಓಡುತ್ತಾರೆ. ನೆರಳು ಸಹ ಬೇಗೆ ತಡೆಯಲಾರದೆ ಮರದ ಕೆಳಗೇ ಹೋಗಿ ಆಶ್ರಯ ಪಡೆಯುತ್ತದೆ ಇದು ಆತನ ಕಲ್ಪನೆ.

೧೯೬೨-೬೩ನೇ ವರ್ಷ ಇರಬಹುದು ಕು. ವೀರೇಂದ್ರನು ಎಂ.ಎ. ಕೊನೆ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಬರೆದುಕೊಟ್ಟು ಚಡಚಣಕ್ಕೆ ನೇರವಾಗಿ ಬಂದನು. ಆಗ ಭುವನೇಶ್ವರಿ ನನ್ನ ಬಳಿಯಲ್ಲಿಯೇ ಇದ್ದಳು. ೪-೬ ದಿನಗಳಲ್ಲಿ ಆತನ ಮೈಮೇಲೆ ಕಡಲೆ ಬೇಳೆಯಗಲಿನ ಗುಳ್ಳೆಗಳು ಏಳತೊಡಗಿದವು. ಆಗ ನಮ್ಮೂರಿನ ಸರ್ಕಾರಿ ಆಸ್ಪತ್ರೆಯಲ್ಲಿದ್ದ ಡಾ|| ಕಥವಟೆ ಅವರನ್ನು ಕರೆತಂದು ತೋರಿಸಿದೆವು. ಅವರು ವಾಡಿಕೆಯಂತೆ ಚುಚ್ಚುಮದ್ದು, ಗುಳಿಗೆಗಳನ್ನು ಕೊಟ್ಟರಲ್ಲದೆ. ಇಡಿಯ ಮನೆಯನ್ನೇ ತೊಳೆಯುವ ಲೋಷನ್ ಕೊಟ್ಟು ಕಳಿಸಿದರು.

ಆ ದಿಶೆಯಲ್ಲಿ ೪-೬ ದಿನ ಕಳೆದವು. ಆದರೆ ಮೈ ತುಂಬ ಎದ್ದ ಗುಳ್ಳೆಗಳೇನೂ ಬಾಡಲಿಲ್ಲ. ತಿರುಗಿ ಕೇಳಿದರೆ, ಹುಣಸೀಕಪ್ಪಿನಗಲದ ಗುಳ್ಳೆಗಳ ಹೊಸ ಬೆಳೆ ಮೈತುಂಬ ಕಾಣಿಸಿಕೊಳ್ಳತೊಡಗಿತು. ಡಾ|| ಕಥವಟೆಯವರು ದಿನಾಲು ಬರುವಂತೆ ನೋಡಬಂದರಲ್ಲದೆ ವಿಶೇಷ ಸಂಶೋಧನವನ್ನೂ ನಡೆಸಿದರು. ಆ ಕ್ರಮದಂತೆ ೪-೬ ದಿವಸ ಚಿಕಿತ್ಸೆ ಒದಗಿಸಿ ನೋಡೋಣ ಪರಿಣಾಮವನ್ನು ಎಂದು ನುಡಿದರು.

"ಮಾಡಿ ನೋಡುವ ಕ್ರಮದ ವಿಷಯ" ಕೇಳಿ ಭುವನೇಶ್ವರಿ ಗಾಬರಿಯಾದಳು. ಇಂಥ ಗುಳ್ಳೆಗಳ ಬಗೆಗೆ ಸಂಪೂರ್ಣ ತಿಳುವಳಿಕೆಯಿದ್ದರೆ ಮುಂದೆ ಚಿಕಿತ್ಸೆ ನಡೆಸಿರಿ. ಪ್ರಯೋಗ ಮಾಡಿ ನೋಡುವ ಉಪಾಯ ನಮ್ಮ ಎದೆಯೊಡಿಸುತ್ತದೆ. ರೋಗಿಯ ಅವಸ್ಥೆಯನ್ನು ನೀವು ನಿರೀಕ್ಷಿಸಿದಂತೆ

ಉಪಾಯ ಮಾಡಿ ಪರಿಣಾಮ ಕಂಡಂತೆ ವಿವರ ಬರೆದುಕೊಡಿರಿ. ಆತನನ್ನು ಸೊಲ್ಲಾಪುರಕ್ಕೆ ಕರೆದೊಯ್ದು ಆತನ ಚಿಕಿತ್ಸೆಯನ್ನು ತೀವ್ರ ಮುಂದುವರಿಸಬೇಕು ಎಂದು ಭುವನೇಶ್ವರಿಯು ಸ್ಪಷ್ಟ ನುಡಿಗಳಲ್ಲಿ ವಿನಂತಿಸಲು, ಡಾಕ್ಟರರು ಆಕೆಯ ವಿಚಾರವನ್ನು ಅನುಮೋದಿಸಿ ರಿಪೋರ್ಟ್ ಬರಕೊಟ್ಟು ಸೊಲ್ಲಾಪುರಕ್ಕೆ ವೀರೇಂದ್ರನನ್ನು ಕರೆದೊಯ್ಯಲು ಅನುಮತಿಸಿದರು.

ಅಂದು ಮೊಹರಂ ಹಬ್ಬದ ಕೊನೆಯ ದಿವಸ. ಡೋಲಿಗಳೆಲ್ಲ ಹೊಳೆಗೆ ಹೊರಟಿದ್ದವು. ಆ ಉತ್ಸವದ ವಾದನಗಳೆಂದರೆ ಹಲಗೆ-ಟಮಟೆಗಳು. ಡೋಲಿ ಹೊರಟ ಆ ದೃಶ್ಯ ನೋಡಿ, ವಾದ್ಯದ ಸಪ್ಪಳ ಕೇಳಿದರೆ ನನ್ನೆದೆ ನಡುಗುತ್ತಿತ್ತು. ಡೋಲಿ ಹೊಳೆಗೆ ಹೋಗುವುದೆಂದರೆ ಅದರ ಕೊನೆಗಾಲ. ಅಂಥ ಕೊನೆಗಾಲದ ದಿವಸ ನನ್ನ ಅಕ್ಕರೆಯ ಹಿರಿಯ ಮಗನನ್ನು ಟ್ರಕ್ಕಿನಲ್ಲಿ ಮಲಗಿಸಿಕೊಂಡು ಸೊಲ್ಲಾಪುರದ ಆಸ್ಪತ್ರೆಗೆ ಹೊರಟಿರುವುದು ಅಶುಭ ಲಕ್ಷಣವಾಗಿಯೇ ಕಂಡಿತು. ನಮಗಾಗಿ ಯಾವ ಅಮಂಗಲ ಕಾದಿದೆಯೋ ಎಂದು ಕ್ಷಣಕ್ಷಣಕ್ಕೂ ಯೋಚಿಸುತ್ತಿದ್ದೆ. ಯೋಚಿಸುತ್ತಲೇ ಶ್ರೀ ಮಾತಾರವಿಂದರನ್ನು ಪ್ರಾರ್ಥಿಸುತ್ತಿದ್ದೆ. ಪಾಂಡಿಚೇರಿಯ ಯಾತ್ರೆ ಮಾಡಿ ಬಂದ ಯುವಸಂತ ಈರಣ್ಣನನ್ನು ಶ್ರೀಮಾತೆಯವರ ಪದಭೃಂಗಗಳಂತಿರುವ ಭುವನೇಶ್ವರಿ ಮತ್ತು ನಾನು ಚಿಕಿತ್ಸೆಗಾಗಿ ಕೊಂಡೊಯ್ಯುತ್ತಿರುವೆವಲ್ಲ!

ನಿಮ್ಮ ಕೂಸಿನ ಕೂಸನ್ನು ರಕ್ಷಿಸುವ ಭಾರ ನಿಮ್ಮದೇ ಎಂದು, ಅರ್ಪಣ ಭಾವದೊಡನೆ ಟ್ರಕ್ಕು ಸೊಲ್ಲಾಪುರದ ದಾರಿ ಹಿಡಿಯಿತು. ನಮಗೆ ನೆರವು ನೀಡುವುದಕ್ಕಾಗಿ ಅಳಿಯನಾದ ಕೇಶೆಟ್ಟಿ ರೇವಪ್ಪ ಹಾಗೂ ೨ನೇ ಮಗ ಈಶ್ವರ ಇಬ್ಬರೂ ಹೊರಟರು.

ನಡುರಾತ್ರಿಯಲ್ಲಿ ಸೊನ್ನಲಿಗೆಯನ್ನು ತಲಪಿ, ತ್ವಚರೋಗಕ್ಕೆ ಸಂಬಂಧಿಸಿದ ಜಾಡ್ಯಕ್ಕೆ ಚಿಕಿತ್ಸೆ ನಡೆಯುವ ಒಂದು ದವಾಖಾನೆಯನ್ನು ಹುಡುಕಿಕೊಂಡು ಹೋದೆವು. ಬೇಸಗೆ ಪ್ರಖರವಾಗುತ್ತ ಹೊರಟ ದಿನಮಾನಗಳು. ಆ ಚಿಕಿತ್ಸಾಲಯದ ಅಧಿಕಾರಿಗಳೆಂದರೆ, ಡಾ॥ ಕಲ್ಯಾಣಿ ಅವರು ಬಂದು ರೋಗಿಯನ್ನು ಸ್ವೀಕರಿಸಿ, ನಮಗೆ ತಂಗಲು ಅನುಕೂಲ ಮಾಡಿಕೊಟ್ಟು ಹೋದರು.

ಅಲ್ಲಿ ರೋಗಿಯ ಹೊರತು ಇನ್ನಾರೂ ಇರಕೂಡದಾಗಿತ್ತು. ಆದರೆ ಡಾಕ್ಟರರ ವಿಶೇಷ ಪ್ರಯತ್ನದಿಂದ, ನಾವೂ ಅಲ್ಲಿಯೇ ಒತ್ತಟ್ಟಿಗೆ ತಂಗಿದೆವು.

ಮುಂಜಾವಿನ ಕಾರ್ಯಕ್ರಮಗಳೆಲ್ಲ ಅಲ್ಲಿಯೇ ನಡೆಯುವವು. ಉಪಹಾರ, ಚಹಗಳು ಸಮೀಪದಲ್ಲಿಯೇ ದೊರೆಯುತ್ತಿದ್ದವು. ಎರಡು ಹೊತ್ತು ಊಟಕ್ಕೆ ಭುವನೇಶ್ವರಿಯ ಮನೆಗೆ ಹೋಗಿ, ಊಟ ತೀರಿಸಿಕೊಂಡು ಬರುವಾಗ, ಈರಣ್ಣನ ಸಲುವಾಗಿ ಒಂದಿಷ್ಟು ಬುತ್ತಿ ತರುತ್ತಿದ್ದೆವು. ಮಗಳ ಮನೆಯೆಂದರೂ ಒಂದಿಷ್ಟು ಸಂಕೋಚ ಹಣಿಕೆ ಹಾಕುತ್ತಿತ್ತು.

ಈರಣ್ಣ ನಿದ್ರಿಸುತ್ತಿರುವಾಗ ನಾನು ಪತ್ರಿಕೆಯನ್ನೋ, ಪುಸ್ತಕವನ್ನೋ ನೋಡುತ್ತಿದ್ದೆ. ಅವನಿಗೆ ಎಚ್ಚರಾಯಿತೆಂದರೆ, ಕಂಡುಂಡ ಮಾತು, ಕಂಡುಣ್ಣ ಬೇಕಾದ ಮಾತು, ಕಂಡುಂಡವರ ಸಾಹಸದ ಕಥೆ, ಮೊದಲಾದ ವಿಷಯಗಳನ್ನು ನಾನರಿತಷ್ಟು ಕೇಳಿಸಿ, ಅವನ ಮನಸ್ಸು ಪ್ರಸನ್ನಗೊಳ್ಳುವಂತೆ ಮಾಡುತ್ತಿದ್ದೆ. ಅವನು ಪ್ರಸನ್ನಗೊಳ್ಳುವುದನ್ನು ಕಂಡು ಹರ್ಷಿಸುತ್ತಿದ್ದೆ.

ಮಧ್ಯಾಹ್ನದ ಕಡುಬಿಸಿಲು ಹೊತ್ತಿನಲ್ಲಿ, ಆತನು ಮಲಗಿದ ಕಾಟಿನ ಮಗ್ಗುಲಿಗಿದ್ದ ಕಿಡಿಕೆಗೆ ಒದ್ದೆಯರಿವೆ ಹಾಕಿ ತಂಗಾಳಿ ಸುಳಿಯುವಂತೆ ಮಾಡುತ್ತಿದ್ದೆ. ನನ್ನೊಂದಿಗೆ ಈಶ್ವರನು ಇದ್ದೇಇದ್ದನು. ಪ್ರತಿಯೊಂದು ಕೆಲಸದಲ್ಲಿ ಸಹಕಾರ ನೀಡುತ್ತಿದ್ದನು.

ಡಾ|| ಕಲ್ಯಾಣಿ ಅವರಿಗೆ ಆ ಜಾಡ್ಯ ಅಪರಿಚಿತವೆನಿಸಿತಂತೆ. ಅದಕ್ಕಾಗಿ ಅವರು ಹಲವಾರು ಹೆಬ್ಬೊತ್ತಿಗೆಗಳನ್ನು ದೊರಕಿಸಿ ಓದಿ ಆ ಜಾಡ್ಯದ ಜಾತಿಯನ್ನು ಕಂಡುಹಿಡಿದು ಉಪಚರಿಸುತ್ತ ಬಂದರು.

ಮೊದಲಸಾರಿ ಹೊರಬಿದ್ದ ಗುಳ್ಳೆಗಳೆಲ್ಲ ಮಾಯ್ದು ತ್ವಚೆಯೆಲ್ಲ ನುಣುಪಾಯಿತನ್ನುವಷ್ಟರಲ್ಲಿ ಮತ್ತೊಂದು ಅಂಥದೇ ಬೆಳೆ ಮೈತುಂಬ ಕಾಣಿಸಿಕೊಳ್ಳುವುದು. ಆಗ ಇನ್ನೊಂದು ಬಗೆಯ ಉಪಚಾರ ಅದರಿಂದ ತ್ವಚೆ ನುಣುಪಾಯಿತೆನ್ನುವಷ್ಟರಲ್ಲಿ ಹೊಸ ಬೆಳೆ ಮತ್ತೆ.

ಹೀಗೆ ಆ ಚಿಕಿತ್ಸಾಲಯದಲ್ಲಿ ೪೦ ದಿನ ಕಳೆದರೂ ಮುಗಿಯುವ ಲಕ್ಷಣ ಸನಿಹದಲ್ಲಿ ಇದ್ದಂತೆ ತೋರಲಿಲ್ಲ. ಸೊಲ್ಲಾಪುರದಲ್ಲಿ ಶ್ರೀದಾತಾರ ಎಂಬವರು ಮುನಸೀಪಾಲಟಿಯಲ್ಲಿ ಹಿರಿಯ ಆರೋಗ್ಯಾಧಿಕಾರಿಗಳಾಗಿದ್ದರು. ಅವರು ಕವಿ ಬೇಂದ್ರೆ ಅವರ ಪರಮ ಸ್ನೇಹಿತರು. ನಾನು ಬೇಂದ್ರೆ ಅವರ ಹಳೆಯ ಸ್ನೇಹಿತರಲ್ಲಿ ಒಬ್ಬನೆಂದು ಹೇಳಿ, ನನ್ನ ಒಬ್ಬ ಗೆಳೆಯರು ಶ್ರೀದಾತಾರ ಅವರನ್ನು ನಾವಿದ್ದ ಚಿಕಿತ್ಸಾಲಯಕ್ಕೆ ಕರೆತಂದರು.

ಅವರು ರೋಗಿಯ ಪರಿಸ್ಥಿತಿಯನ್ನು ಅನುಲಕ್ಷಿಸಿ, ಸೊಲ್ಲಾಪುರದ ಪ್ರಖ್ಯಾತ ಡಾಕ್ಟರರಾದ ಮೆಹತಾ ಅವರನ್ನು ನಾಳೆ ಕರೆತರುವೆನೆಂದು ಹೇಳಿದಂತೆ, ಅವರು ಮರುದಿನ ಡಾ|| ಮೆಹತಾ ಅವರನ್ನು ಕರೆತಂದು, ರೋಗಿಯನ್ನು ಪರೀಕ್ಷಿಸಿ ಹೇಳಿದರು.

ಡಾ|| ಕಲ್ಯಾಣಿ ಅವರು, ರೋಗಿಯ ಜಾಡ್ಯ ಅಡ್ಡದಾರಿ ಹಿಡಿಯದಂತೆ ೪೦ ದಿನ ಎಚ್ಚರಿಕೆ ವಹಿಸಿದ್ದು ಶ್ಲಾಘನೀಯ. ಇನ್ನು ನಾನು ಹೇಳುವ ಒಂದು ಉಪಾಯ ಮಾಡಿದರೆ, ಮೂರೇ ದಿನಗಳಲ್ಲಿ ರೋಗಿ ತನ್ನೂರಿಗೆ ಹೋಗಬಹುದು ಎಂದು ನುಡಿದು ಉಪಾಯವನ್ನು ಸೂಚಿಸಿದರು.

ಅಂದೇ ಸಾಯಂಕಾಲ ಎಂ.ಎ. ಪರೀಕ್ಷೆಯ ಪರಿಣಾಮ ತಿಳಿಯಿತು ಕ್ಲಾಸು ಬರದಿದ್ದರೂ ವೀರೇಂದ್ರನು ತೇರ್ಗಡೆ ಮಾತ್ರ ಆಗಿದ್ದನು. ನಾವೆಲ್ಲ ಆ ಪರಿಣಾಮವನ್ನು ಕೇಳಿ ಹಿಗ್ಗಿದರೂ ಕ್ಲಾಸು ಬಂದಿದ್ದರೆ ಚೆನ್ನಾಗಿತ್ತೆಂದು ಒಳಗೊಳಗೇ ಮಿಡುಕಿದೆವು. ಪರೀಕ್ಷೆಯ ಪರಿಣಾಮವನ್ನು ಡಾಕ್ಟರಿಗೆ ತಿಳಿಸಿದಾಗ ಅವರು ಹರ್ಷಿತರಾದರು ಮತ್ತು ಪರಮತಜ್ಞ ಡಾಕ್ಟರರು ಸೂಚಿಸಿದ ಉಪಾಯ ಮಾಡುಲು ಆರಂಭಿಸಿದರು. ಅದರ ಪರಿಣಾಮವು ಮರುದಿನವೇ ಕಂಡುಬಂದು ಇನ್ನೆರಡು ದಿನ ಬಿಟ್ಟು ನೀವೆಲ್ಲರೂ ಸ್ವಗ್ರಾಮಕ್ಕೆ ತೆರಳಬಹುದೆಂದೂ ಹೇಳಿದರು.

ಎಸ್.ಟಿ. ಬಸ್ಸಿನಲ್ಲಿ ರೋಗಿಯನ್ನು ಕುಳ್ಳಿರಿಸಿ ಕರೆತರುವಾಗ ಅದುರಿ, ಪುಟಿದು ಅವನ ಬರಕಿಯಲ್ಲಿ ತುಸು ನೋವಾಯಿತು. ಇನ್ನೊಂದು ದಿನ

ಬಿಟ್ಟು ಬರಬೇಕಾಗಿತ್ತು ಎಂದು ಒಬ್ಬಿಬ್ಬರು ಹಿತಚಿಂತಕರು ಹೇಳಿದರು. ಅಂತೂ ಊರು ತಲುಪುತ್ತಲೇ ಕುಂಬಾರ-ಘೋಂಡಪ್ಪನೆಂಬ ನರನಾಡೀ ಚಿಕಿತ್ಸಕನನ್ನು ಕರೆತಂದು ತಿಕ್ಕಿದಾಗ ಕೂಡಲೇ ನೋವು ಕಡಿಮೆಯಾಯಿತು. ರಾತ್ರಿ ನಿದ್ರೆಯನ್ನೂ ಚೆನ್ನಾಗಿ ಮಾಡಿದನು. ನಾವು ಮರಳಿ ಮನೆ ಸೇರುವುದಕ್ಕೆ ೪೫ ದಿನ ಹಿಡಿದವು.

ಖರ್ಚಿನ ಸಲುವಾಗಿ ಹಣ ಹೇಗೆ ಶೇಖರಿಸಬೇಕು ಎನ್ನುವುದು ತಿಳಿಯದೆ ನನಗೆ ಹಣ ಕೊಡಬೇಕಾಗಿದ್ದ ಹಲವು ಮಿತ್ರರಿಗೆ ಪತ್ರ ಬರೆದೆನು, ಅವುಗಳಲ್ಲಿ ಒಂದೆರಡು ಮಾತ್ರ ಹುಸಿ ಹೋಗಿರಬಹುದು. ಸಕಾಲಕ್ಕೆ ಸಾಕಷ್ಟು ಹಣ ಒದಗಿಸಿ, ವೀರೇಂದ್ರನ ಜಡ್ಡು ವಾಸಿಯಾಗುವಂತೆ ಮಾಡಿದ ಆ ಪುಣ್ಯಶಕ್ತಿಯಾವುದೆನ್ನುವುದು ನನಗೆ ಗೊತ್ತಿದೆ. ಅದನ್ನಿಲ್ಲಿ ಹೇಳುವ ಅಗತ್ಯವಿಲ್ಲ.

೪೧. ಹುಡುಗಾಟಿಕೆಯ ಹೆಜ್ಜೆಗಳು

ಹುಡಿಯಲ್ಲಿ ಆಡುವವರು ಹುಡುಗರೆನಿಸುತ್ತಾರೆ. ಆ ವಯಸ್ಸಿನಲ್ಲಿ ಹಲವಾರು ಕುಚೇಷ್ಟೆಗಳನ್ನು ಮಾಡುವುದು ವಾಡಿಕೆಯೇ ಆಗಿದೆ. ಪ್ರತಿಯೊಬ್ಬರು ಹುಡುಗತನದಲ್ಲಿ ಮಾಡಿದ ಹುಡುಗಾಟಿಕೆಗಳು ದಿನಕಳೆದಂತೆ ಹುಡಿಗೂಡಿ ಹೋಗುವುದೇ ಹೆಚ್ಚು. ಹುಡಿಯಲ್ಲಿ ಬಿದ್ದ ಹೆಜ್ಜೆಗಳ ಹಾಗೆ, ಅವು ಕೆಲವೊಂದು ಕಾಲ ಕಳೆಯುವಷ್ಟರಲ್ಲಿ ಅಡಗಿ ಹೋಗುತ್ತವೆ. ಹೆಜ್ಜೆಗಳು ಅಳುಕಿದರೂ ಹುಡುಗಾಟಿಕೆ ಮಾತ್ರ ಕಲ್ಲಿನಲ್ಲಿ ಕಡೆದು ತೆಗೆದ ಹೆಜ್ಜೆಗಳು ಬಹುಕಾಲದವರೆಗೂ ಕಾಣಸಿಗುತ್ತದೆ.

ನನ್ನ ಹುಡುಗತನದಲ್ಲಿ ಆಡಿದ ಮಾಡಿದ ಹುಡುಗಾಟಿಕೆಗಳು ಕಲ್ಲಿನಲ್ಲಿ ಕಡೆದು ತೆಗೆದ ಹೆಜ್ಜೆಗಳಂತೆ ಈವರೆಗೂ ಢಾಳವಾಗಿ ಮೂಡಿನಿಂತಿವೆ. ಮೇಲಿನ ಧೂಳಿಯನ್ನು ತುಸು ಊದಿಯೋ ಜಾಡಿಸಿಯೋ ನೋಡಿವರೆ ಆ ಹೆಜ್ಜೆಗಳು ನಿಚ್ಚಳವಾಗಿ ಕಾಣಸಿಗುತ್ತವೆ. ಅಂಥ ಕೆಲವು ಹುಡುಗಾಟಿಕೆಗಳನ್ನು ಇಲ್ಲಿ ಮಾದರಿಗಾಗಿ ಹೇಳಬೇಕೆನ್ನುತ್ತೇನೆ. ಹುಡುಗಾಟಿಕೆಯೆನ್ನುವುದು ಒಬ್ಬಾತನ ಕೈವಾಡದಿಂದಲೇ ಸಾಧಿಸಲಾರದು.

೧

೨೦ನೇ ಶತಮಾನದ ೪ನೇ ದಶಕದ ಕೊನೆಯ ಭಾಗ ಇರಬಹುದು. ಮೂವರೋ ನಾಲ್ವರೋ ಗೆಳೆಯರು ದಿನಾಲು ಒತ್ತಟ್ಟಿಗೆ ಕೂಡುತ್ತಿದ್ದೆವು. ತಾಸೆರಡು ತಾಸು ಚರ್ಚೆ, ಸುದ್ದಿ, ವ್ಯಕ್ತಿ ವಿಷಯ ಇವುಗಳನ್ನು ಕುರಿತು

ಸಾಕಷ್ಟು ಮಾತಾಡುತ್ತಿದ್ದೆವು. ಚೆನ್ನಮಲ್ಲಪ್ಪನಿಗೆ ಒಂದು ವಿಧದ ಮಾವ, ನನಗೊಂದು ವಿಧದಲ್ಲಿ ಮಾವನಾದ ಸರಸಂಬಿ ಮಲ್ಲಪ್ಪನವರು ಊರಲ್ಲಿದ್ದರೆ, ಆ ಸ್ಥಳಕ್ಕೆ ಒಮ್ಮೆಯಾದರೂ ಬಂದು ಅಳಿಯರಾದ ನಮ್ಮಿಂದ ಏನಾದರೂ ಅನ್ನಿಸಿಕೊಂಡು, ಎಲೆ ಅಡಿಕೆ ತಿನ್ನಕೊಟ್ಟು ಹೋಗುತ್ತಿದ್ದರು.

ಮಾವನವರ ವಯಸ್ಸು ಅಯ್ವತ್ತು ತುಂಬಿ ಅರವತ್ತರಲ್ಲಿ ಬಿದ್ದಿತ್ತು. ಆದರೂ ಅವರ ಜೀವ ಒಗರು ಹೋಗಿದ್ದಿಲ್ಲ. ಆದರೆ ಮೀಸೆಗಳು ಮಾತ್ರ ಇಡಿಯಾಗಿ ಬೆಳ್ಳಗಾಗಿ ಬಿಟ್ಟಿದ್ದವು. ಅದನ್ನವರು ಸರ್ವಥಾ ಯಾರಿಗೂ ತೋರಗೊಡುತ್ತಿರಲಿಲ್ಲ. ಯಾವ ಉಪಾಯ ಮಾಡುತ್ತಿದ್ದರು ಹಾಗಾದರೆ? ಮೀಸೆಗಳಿಗೆ ಕಪ್ಪು ಕಲ್ಪ ಹಚ್ಚುತ್ತಿದ್ದರು. ಒಂದೇ ಒಂದು ದಿನ ತಪ್ಪಿದರೂ, ಮರುದಿನ ಆ ಕಪ್ಪು ನಿಲ್ಲದೆ ಬೊಡ್ಡಿಯಲ್ಲಿ ಬೆಳೆದು ಬಂದ ಕೂದಲ ಭಾಗವು ತಾನು ಕಪ್ಪಾಗಲಿಲ್ಲೆಂದು ಸಾರಿ ಹೇಳುತ್ತಿದ್ದವು.

ಆ ವಿಷಯವನ್ನು ಮಾವನವರಿಗೆ ಕನ್ನಡಿ ಹಿಡಿದು ತೋರುವಂತೆ, ಏನಾದರೂ ಚೇಷ್ಟೆ ಮಾಡಬೇಕೆಂದು ನಾನು ಮತ್ತು ಕಾಪಸೆ ನಿರ್ಧರಿಸಿದೆವು. ಕಾಪಸೆ ಚಿತ್ರಗಾರ, ಅವನಲ್ಲಿ ಕಪ್ಪು ಬಿಳುಪು ಮೊದಲಾದ ಜಲ ವರ್ಣಗಳಿದ್ದವು. ಅವುಗಳಲ್ಲಿ ಬಿಳಿಯದನ್ನು ಆಯ್ಕೆ ಮಾಡಿಕೊಂಡು ಅಣಿಗೊಳಿಸಿದೆವು.

ಚೆನ್ನಮಲ್ಲಪ್ಪನಿಗೆ ಆ ವಿಷಯವನ್ನು ತಿಳಿಸಿ, ನಮ್ಮ ಕುಚೇಷ್ಟೆಗೆ ಸಹಕರಿಸಬೇಕೆಂದು ಕೇಳಿಕೊಂಡೆವು. ಅವರೂ ಒಪ್ಪಿದರು. ಅವರ ಮೀಸೆ ಕಪ್ಪು ಕ್ಷೌರ ಮಾಡಿಸಿಕೊಂಡಿದ್ದರಿಂದ ಗಡ್ಡ ಕಾಣುತ್ತಿರಲಿಲ್ಲ. ಮೀಸೆಗಳಿಗೆ ಬಿಳಿ ಬಣ್ಣ ಸವರಿ ಒಂದು ಸಹ ಕಪ್ಪು ಕೂದಲು ಕಾಣದಂತೆ ಮಾಡಿದೆವು ಮರುಗಳಿಗೆಯಲ್ಲಿ ಆ ಬಣ್ಣ ಆರಿತು.

ಬಳಿಕ ಚೆನ್ನಮಲ್ಲಪ್ಪನವರಿಗೆ ಹಾಳತವಾಗುವಂಥ ಯಾರದೋ ಫಾರಸಿಕೋಟು ತಂದು ತೊಡಿಸಿದೆವು. ಅದೇ ವಿಧವಾಗಿ ದೊಡ್ಡದೊಂದು ಬಿಳಿ ರುಮಾಲ ತಂದು ಮೈಸೂರು ಭಾಗದವರ ಪದ್ಧತಿಯಂತೆ ಸುತ್ತಿದೆವು, ಕೈಯಲ್ಲೊಂದು ಬೆತ್ತ ಕೊಟ್ಟು, ಒಂದು ಆರಾಮ ಕುರ್ಚಿಯ ಮೇಲೆ

ಅವರನ್ನು ಕುಳ್ಳಿರಿಸಿ, ಮುಂದಿನ ಹಾಸಿಗೆಯಲ್ಲಿ ನಾವು ವಿನಯದಿಂದ, ಅತಿ ದೂರವೆನಿಸದಂತೆ ತೀರ ಹತ್ತಿರವೆನಿಸದಂತೆ ಚಪಗಾಲು ಹಾಕಿಕೊಂಡು ಕುಳಿತೆವು. ಮುಂದೆ ಕುಳಿತವರಿಗೆಲ್ಲ ಮೂರು ಬೆರಳುಗಳಿಂದ ಥಾಳವಾಗಿ ವಿಭೂತಿ ಹಚ್ಚಿಕೊಳ್ಳುವಂತೆ ಅಣಿಗೊಳಿಸಿದೆವು. ಬಳಿಕ ಯಾರನ್ನೋ ಸರಸಂಬಿಯವರ ಮನೆಗೆ ಕಳಿಸಿದೆವು, ಮಾವನನ್ನು ಕರೆಯಲಿಕ್ಕೆ.

ದಿನಾಲು ಕರೆಯದೆ ಬರುವ ಮನುಷ್ಯ ಅಂದು ಕರಿಯಹೋದ ಬಳಿಕ ಬರಲು ತಡಮಾಡುವನೇ? ಮರುಕ್ಷಣದಲ್ಲಿ ಬಂದೇಬಿಟ್ಟನು.

"ಯಾರು ಈ ಸ್ವಾಮಿಗಳು" ಎಂದು ನನಗೆ ತೀರ ಕೆಳದನಿಯಲ್ಲಿ ಕೇಳಿದನು. "ಇವರು ಮೈಸೂರು ಕಡೆಯ ದೊಡ್ಡ ಮಠವೊಂದರ ಸ್ವಾಮಿಗಳು ಚೆನ್ನಮಲ್ಲಪ್ಪನವರನ್ನು ಕಾಣಬೇಕೆಂದು ಬಂದಿದ್ದಾರೆ" ಎಂದು ನಾನು ತಿಳಿಸಿದೆನು.

ಮಾಮಾ ಎದ್ದು ಬಾಗಿ ನಿಂತು ಸ್ವಾಮಿಗಳ ಪಾದಕ್ಕೆರಗಿ, ಶಿವಶಿವ ಎನ್ನುತ್ತ ಸರಿದು ಬಂದನು.

ಇನ್ನು ಸ್ವಾಮಿಗಳನ್ನು ಮಾತಾಡಿಸಬೇಕಲ್ಲವೇ?

"ನಿಮ್ಮ ಮಠದಲ್ಲಿ ಯಾವ ದಿವಸ ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸುವಿರಿ?" ಎಂದು ಕಾಪಸೆ ಕೇಳಿದನು.

ಸ್ವಾಮಿಗಳ ವೇಷದಲ್ಲಿದ್ದ ಚೆನ್ನಮಲ್ಲಪ್ಪ ತೀರಮೆಲ್ಲಗೆ ಅಂದರೆ, ದನಿಯ ಗುರುತು ಹತ್ತದಂತೆ ನುಡಿದರು - ಒಳ್ಳೆಯ ಗಂಭೀರವಾಗಿ -

"ಸಾವಿರ ವಿದ್ಯಾರ್ಥಿಗಳಿಗೆ ದಿನಾಲು ಎರಡು ಹೊತ್ತು ಊಟಕೊಡುವ ಪ್ರಸಾದ ನಿಲಯವಿದೆ. ಶಾಲೆ, ಕಾಲೇಜು, ವಸತಿಗೃಹ, ವಾಚನಾಲಯ ಇದೆ."

"ತಾವು ಈ ಭಾಗಕ್ಕೆ ಬಂದುದರ ಉದ್ದೇಶವೇನು" ಎಂದು ನಾನು ಪ್ರಶ್ನಿಸಿದೆ.

"ಸಿಕ್ಕರೆ ದೇಣಿಗೆ, ಕಾಣಿಕೆ, ನೀಡಿದರೆ ಭಿಕ್ಷೆ ತೆಗೆದುಕೊಂಡು ಹೋಗುವ ಉದ್ದೇಶವಿದೆ. ಹೆಚ್ಚಿನ ಆಶೆಯಿಲ್ಲ" ಎಂದು ಸ್ವಾಮಿಗಳು ಮರುನುಡಿದರು, ಅದೇ ಗಾಂಭೀರ್ಯದಿಂದ.

ಆ ಬಳಿಕ ಹಲವು ವಿಷಯಗಳನ್ನು ಕುರಿತ ಮಾತುಕತೆಗಳು ಮುಗಿದ ಬಳಿಕ - "ತಮ್ಮ ಕಡೆಗೆ ಮಳೆ-ಬೆಳೆ, ಹವೆ-ಆರೋಗ್ಯ ಚೆನ್ನಾಗಿ ಇವೆಯೇ" ಎಂದು ಇನ್ನಾರೋ ಕೇಳಿದರು.

"ತಮ್ಮ ಭಾಗದಲ್ಲಿ ಮೀಸೆಯ ಪಯರು ಕಟಾವಕ್ಕೆ ಬಂದಿರುವವೇ" ಎಂದು ನಾನು ಕೇಳುವುದೇ ತಡ, ಚನ್ನಮಲ್ಲಪ್ಪ ಖೊಕ್ಕನೆ ನಕ್ಕರು. ಅದರೊಡನೆ ಒಂದಿಷ್ಟು ದನಿಯೂ ಹೊರಬಂತು, ಆಗ ಮಾವನವರಿಗೆ ತುಸು ಸಂಶಯ ಬಂದಿತು.

"ಚಹ ತರಿಸಲಾ ಸ್ವಾಮಿಗಳಿಗೆ" ಎಂದವನೇ ಎದ್ದುಬಿಟ್ಟನು.

ನಾವಿಬ್ಬರೂ ಹೋಗಿ ಮಾವನವರನ್ನು ಹಿಡಿದು ತಂದು ಕುಳ್ಳಿರಿಸಿದೆವು.

ಚೆನ್ನಮಲ್ಲಪ್ಪನವರು ತಮ್ಮ ಮೀಸೆಗೆ ಹಚ್ಚಿದ ಬಿಳಿಕಂಡು ಒರೆಸಿಹಾಕಿ, ರುಮಾಲು, ಕೋಟು ಕಳಚಿದರು, ಆಗ ಮಾವ ಅಂದರು - ಆಹಾಹಾ!

"ನಿಮ್ಮದು ಕರಿಕಲಪು, ಸ್ವಾಮಿಗಳದು ಬಿಳಿ ಕಲಪು ಮಾವಾ" ಎನ್ನುವಷ್ಟರಲ್ಲಿ ಮಾವ ಹೇಳಿದರು ಅವಸರದಿಂದ -

"ಬಿಟ್ಟೆ ಬಿಟ್ಟೆ ಇನ್ನೊಂದೂ ಕಲಪು ಹಚ್ಚುವುದಿಲ್ಲ, ಆಯಿತೇ? ಇದನ್ನೇ ಬಿಡಿಸುವ ಸಲುವಾಗಿಯೇ ಈ ಆಟ ಹೂಡಿದ್ದೀರಿ. ಇನ್ನೇಕೆ ಆ ದಾರಿಗೆ ಹೋಗಲಿ?" ಎಂದವರೇ ಮನೆಗೆ ಓಡಿಹೋಗಿ, ಮುಖ ಮೀಸೆ ಸ್ವಚ್ಛ ಗೊಳಿಸಿಕೊಂಡು ಬಂದರು. ಆಗ ಒಕ್ಕೊರಲಿನಿಂದ ನಾವೆಂದೆವು-

"ಈಗ ನೀವು ನಮ್ಮೆಲ್ಲರಿಗೂ ನಿಜವಾದ ಮಾವನವರು" ಎನ್ನುತ್ತ ಕೈಮುಗಿದು ನಿಂತೆವು.

೧೯೧೭ನೇ ವರುಷ ನಾನು ೫ನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿ. ನಮ್ಮದೊಂದು ಬಳಗವೇ ಇತ್ತು.

ನಮ್ಮೂರ ವಿರಕ್ತ ಮಠದಲ್ಲಿ ಚೆನ್ನಬಸವ ಪುರಾಣ ಬಲು ಅದ್ದೂರಿಯಿಂದ ಹೇಳಲಾಗುತ್ತಿತ್ತು. ನಿಡಗುಂದಿಯ ಶಾಸ್ತ್ರಿಗಳು ಪುರಾಣಿಕರಾಗಿ ಬಂದಿದ್ದರು. ಬಸರಕೋಡದಿಂದ ಬಂದ ಬಸಯ್ಯನವರು ಪುರಾಣವನ್ನು ರಾಗದಿಂದ ಓದುತ್ತಿದ್ದರು. ಪುರಾಣ ಕೇಳುವುದಕ್ಕೆ ಲೆಕ್ಕವಿಲ್ಲದಷ್ಟು ಜನರು ಬರುತ್ತಿದ್ದರು. ಸ್ಥಳವೇ ಸಾಲದಾಯಿತು.

ಪುರಾಣ ಹೇಳುವ ಕಾಲಕ್ಕೆ ಒಬ್ಬ ಹಿರಿಯ ಮನುಷ್ಯ ಪುರಾಣಿಕರ ಎದುರಿಗಿರುವ ಕಂಬಕ್ಕೆ ಆತುಗೊಂಡು, ಚಪಗಾಲು ಹಾಕಿಕೊಂಡು ಕುಳಿತು, ಪುರಾಣಿಕರ ಅಭಿಪ್ರಾಯ ತಿಳಿಯಿತೆನ್ನುವಂತೆ ಗೋಣು ಹಾಕುವುದೇ ಅವರ ಕೆಲಸ, ಅವರಿಗೆ ಬಸವಣ್ಣ ಅನ್ನುತ್ತಿದ್ದರು.

ಹಾಗೆ ಬಸವಣ್ಣನಾದ ಮುತ್ತಯ್ಯ ದೂರದ ಓಣಿಯಿಂದ ನಡೆದು ಬರುತ್ತಿದ್ದನು. ಎಡಕೈಯಲ್ಲಿ ಒಂದು ದೇಶೀ ಕಂದೀಲು, ಬಲಗೈಯಲ್ಲಿ ಒಂದು ಬಡಿಗೆ, ಅದರ ಮೇಲ್ಭಾಗದಲ್ಲಿ ಹಿತ್ತಾಳಿಯಿಂದ ಎರಕ ಹೊಯ್ದ ಗೋಮುಖ ಹೊಳೆಯುತ್ತಿತ್ತು. ಅದೇ ನಮ್ಮ ಬಳಗವನ್ನೆಲ್ಲ ಆಕರ್ಷಿಸಿತ್ತು. ಆ ಬಡಿಗೆಯನ್ನು ಹೇಗಾದರೂ ಮಾಡಿ, ಎತ್ತಿಹಾಕಬೇಕೆಂದು ನಾವೆಲ್ಲರೂ ಉಪಾಯ ಮಾಡುತ್ತ ಬಂದಿದ್ದೆವು. ಆದರೆ ಅದು ಸಾಧಿಸಿರಲಿಲ್ಲ. ನಮ್ಮ ಪ್ರಯತ್ನಕ್ಕೆ ಫಲವೆಂದರೆ ಛೀ ಹಾಕಿಸಿಕೊಳ್ಳುವುದು, ಆ ಮುದುಕನಿಂದ, ಕೂಡಿದ ಜನರು ಅದಕ್ಕೆ ಸಹಕರಿಸಿ ನಮ್ಮನ್ನು ಹೊರಗಟ್ಟಿದರು.

ನಾವು ಹೊರಗೆ ಬಂದು ಷಡಕ್ಷರೀ ದೇವರ ಗುಡಿಯ ಮುಂದಿರುವ ಕಟ್ಟೆಯ ಮೇಲೆ ಕುಳಿತುಕೊಂಡೆವು. ಬಡಿಗೆ ನಮಗೆ ಸಿಗುವಂತೆ ಕಾಣುವುದಿಲ್ಲ. ಪುರಾಣ ಮುಗಿದ ಬಳಿಕ ಹಂಚುವ ಪ್ರಸಾದವನ್ನಾದರೂ ತೆಗೆದುಕೊಂಡು ತಿನ್ನುತ್ತ ಹೋದರಾಯಿತು ಎಂದು ನಿರ್ಧರಿಸಿದೆವು.

ಅಂದು ಪುರಾಣದ ಗತಿಯೋ ಕಾಂಡವೋ ಎಂಬ ಉತ್ಸವವಾಗಿದ್ದರಿಂದ

ನೂರಾರು ತೆಂಗಿನ ಕಾಯಿಗಳು ಪುರಾಣಿಕರ ಮಂಚದ ಮುಂದೆ ಒಟ್ಟಲಾಗಿದ್ದವು. ಅಷ್ಟು ತೆಂಗುಗಳಲ್ಲಿ ಒಂದನ್ನಾದರೂ, ನಾವು ಆಶೀರ್ವಾದ ರೂಪದಲ್ಲಿ ಪಡೆದೆವೆಂದರೆ ಎಲ್ಲರಿಗೂ ಸಾಕಾಗುವಷ್ಟು ಕೊಬ್ಬರಿ ಸಿಗುತ್ತದೆ. ಯಾರು ಆ ಕೆಲಸ ಮಾಡುವಿರಿ ಎಂದು ಒಬ್ಬನು ಪ್ರಶ್ನೆಯೆತ್ತಿದನು. ನಾನೊಲ್ಲೆ ನೀನೊಲ್ಲೆ ಎನ್ನುತ್ತ ಕೊನೆಯಲ್ಲಿ ಆ ಕೆಲಸಕ್ಕೆ ಇನ್ನೊಂದು ಕುಳವನ್ನು ಸಜ್ಜುಗೊಳಿಸಿದೆವು.

ಅವನ ತಲೆಗೆ ರೊಡ್ಡಗ್ಗೆಯಿಂದ ರುಮಾಲು ಸುತ್ತಿಸಿದೆವು. ಗುಡಿಯೊಳಗಿನ ವಿಭೂತಿ ತಂದು ಡಾಳವಾಗಿ ಹಣೆಗೆ ಬರೆದೆವು. ಆತನನ್ನು ಯಾರೂ ಗುರುತಿಸದಂತೆ ಆಯಿತು.

ಪುರಾಣ ಮುಗಿದು ಮಂಗಳಾರತಿ ಆಗುವಾಗ, ಅಲ್ಲಿ ಒಟ್ಟಲಾಗಿದ್ದ ತೆಂಗುಗಳನ್ನೆಲ್ಲ ಒಡೆದು, ಜುಟ್ಟಿನ ಭಾಗ, ಬೋಳು ಭಾಗ ಎಂದು ಗುಂಪುಗಳನ್ನಾಗಿ ಮಾಡಿದರು. ಆ ಪುರಾಣಿಕರು ಜುಟ್ಟಿನ ಭಾಗದಲ್ಲಿ ಒಂದೊಂದು ಪತ್ರಿಯದಳವನ್ನು ಇರಿಸಿ, ಎರಡೂ ಕೈ ಮುಚ್ಚಿ ಹಳಕು ನೀಡಿ ಆಶೀರ್ವದಿಸತೊಡಗಿದರು. ಐನೇಯವನೋ ಆರನೇಯವನೋ ಆಗಿ ನಮ್ಮ ಪ್ರತಿನಿಧಿ ಮಾನಿಂಗನು ಅಲ್ಲಿ ಹೋಗಿ ಪುರಾಣಿಕರ ಮುಂದೆ ಪ್ರಸಾದಕ್ಕಾಗಿ ಉಡಿ ಒಡ್ಡಿಕೊಂಡು ನಿಲ್ಲಲ್ಲು ತೆಂಗಿನ ಹಳಕು ಉಡಿಯಲ್ಲಿ ಬಿತ್ತು. ಅದನ್ನು ದೂರದಿಂದ ನೋಡುತ್ತ ನಿಂತ ನಮಗೆ ಹಿಡಿಸದಷ್ಟು ಹಿಗ್ಗು ಉಂಟಾಯಿತು ಮತ್ತೆ ಷಡಕ್ಷರಿ ದೇವರಕಟ್ಟೆಗೆ ಬಂದು, ಕೊಬ್ಬರಿಯನ್ನೆಲ್ಲ ತಿಂದು ಆಗು ಮಾಡಿದೆವು. ಪುರಾಣ ನಡೆದ ಪಡಸಾಲೆಯಲ್ಲಿ ಹಣಿಕಿ ಹಾಕಿದರೆ, ಬಹುತರ ಜನರೆಲ್ಲ ಹೋಗಿಬಿಟ್ಟಿದ್ದರು.

ಜೇಡರ ಶ್ರೀಶೈಲನು ಪುರಾಣಿಕರನ್ನು ವಂದಿಸಿ, ಆಶೀರ್ವಾದ ಯಾಚಿಸಿದನು, ತೆಂಗು ಎಂದು ಹೇಳಿದನು. ಆದರೆ ಅಲ್ಲಿನ ಜುಟ್ಟಿನ ತೆಂಗು ಒಂದೂ ಇರಲಿಲ್ಲ. ಮರೆತು ಯಾರಿಗೆ ಕೊಟ್ಟೆನೋ ಅನ್ನುತ್ತ ನಿರ್ವಾಹವಿಲ್ಲದೆ ಬೋಳು ಹಳಕನ್ನು ಪ್ರತಿಯೊಂದಿಗೆ ಅವನ ಉಡಿಯಲ್ಲಿ ಹಾಕಿ ಕಳಿಸಿದರು.

ಅದನ್ನು ಕಂಡು ನಾವೆಲ್ಲರೂ ನಕ್ಕಿದ್ದೇ ನಕ್ಕಿದ್ದು. ಯಾರೋ ಸಿಟ್ಟು ಮಾಡಿದರು ನಮಗೆ - "ಯಾಕೆ ಹಲ್ಲು ಕಿಸಿಯುವಿರೋ?" ಎಂದು.

ಅಷ್ಟರಲ್ಲಿ ನಮ್ಮ ಬಳಗ ಹೆಬ್ಬಾಗಿಲಿನ ಹೊರಗೆ ಬಂದಿತ್ತು.

"ಆಗಾ! ಬಡಿಗೆಯ ಅಜ್ಜ!! ಎಡಗೈಯಲ್ಲಿ ಕಂದೀಲಿದೆ, ಬಲಗೈ ಬಡಿಗೆ ಕಸುಗೊಂಡು ಓಡಬೇಕು" ಎಂದು ಮಾತಾಡಿಕೊಂಡೆವು. ಬಳಗವೆಲ್ಲ ಬಿಡಿಬಿಡಿಯಾಗಿ ಹರಿದು ಹಂಚಿಹೋಯಿತು.

ನಮ್ಮವರಲ್ಲಿ ಒಬ್ಬನು ಹೋಗಿ, ಆತನ ಕೈಯೊಳಗಿನ ಬಡಿಗೆ ಬೀಳುವಂತೆ ತೊಡಕಾಲು ಹೊಡೆದನು. ಆದರೆ ಬಿದ್ದ ಬಡಿಗೆಯನ್ನು ಎತ್ತಿಕೊಂಡು ಓಡಿ ಹೋಗಬಲ್ಲ ಹುಡುಗರಾರೂ ಅಲ್ಲಿ ಕಾಣಲಿಲ್ಲ. ಅಂತೂ ಪ್ರಯತ್ನ ಸಫಲವಾಗಲಿಲ್ಲ.

"ಇನ್ನೊಮ್ಮೆ ಯತ್ನ ಮಾಡು" ಎಂಬ ಪಾಠ ಓದಿದ್ದೆವು, ಆ ಯತ್ನ ಅಂದಿನ ಮಟ್ಟಿಗಂತೂ ಸಾಧ್ಯವಾಗಲಿಲ್ಲ.

"ಕಡೆಗೆ ಏಳನೆ ಸಾರೆ ಜೇಡವು ಜಾಲ ಮುಗಿಸಿತು ಗೆಳೆಯನೇ" ಎಂದು ಸಮೂಹಗಾನ ಮಾಡುತ್ತ ನಮ್ಮನಮ್ಮ ಓಣಿ ಬಂದಾಗ ಹೊರಳಿದೆವು. ಮನೆಯವರು ತುಸು ಸಿಟ್ಟು ಮಾಡಿದರೇ ಹೊರತು, ಹೊಡೆಯಲಿಲ್ಲ. ಅದೊಂದು ಪುಣ್ಯ, ಪುರಾಣಕ್ಕೆ ಹೋಗಿದ್ದರ ಫಲ! ಅಲ್ಲವೇ ?

ನಮ್ಮ ಸಿಂಪಿ ಅವರ ಮನೆತನವೊಂದರಲ್ಲಿ, ಸಾಯಂಕಾಲಕ್ಕೆ ಕಡುಬಿನ ಊಟಕ್ಕೆ ಹೋಗಿದ್ದೆ. ನಮ್ಮ ಮನೆಯವರು ನನ್ನನ್ನೇ ಕಳಿಸಿದ್ದರು. ಅದು ಗಟ್ಟಿಗಡುಬಿನ ಊಟ. ಕನ್ಯೆ ಕೊಟ್ಟು-ಕೊಂಡುವರ ಸಂಕೇತವೆಂದು ತೋರುತ್ತದೆ.

೩

ಸಜ್ಜಿಗೆಯ ಕಡಬು ಮಾಡಿದ್ದರು, ಅದರ ಜೊತೆಗೆ ಬೆಲ್ಲದ ನೀರು - ಗುಳವಾಣಿ ಅನ್ನುತ್ತಿದ್ದರು. ಅದರಲ್ಲಿ ಒಂದೇ ಒಂದು ಹನಿತುಪ್ಪ "ಜಯನಮಃ ಪಾರ್ವತೀಪತಿ ಶಿವ ಹರಹರ ಮಹಾದೇವ" ಎಂದು ಉಗ್ಗಡಿಸಿ ಊಟ ಆರಂಭಿಸಿದೆವು. ಆ ಪಂಕ್ತಿಯಲ್ಲಿ ನನ್ನೆದುರಿಗೆ

ದಾಸಮ್ಮನೆಂಬ ೬-೮ ವರುಷದ ಹುಡಿಗೆ ಕುಳಿತಿದ್ದಳು. ಆ ಮನೆತನವು ಅತಿ ಊಟದ್ದೆಂದು ಖ್ಯಾತವಾಗಿತ್ತು.

ದಾನಮ್ಮ ದೊಡ್ಡತುತ್ತು ಮಾಡಿ, ಬಾಯಲ್ಲಿಟ್ಟು ಕಣ್ಣುಮುಚ್ಚಿ ಬಾಯಾಡಿಸಿ ನುಂಗಿದ ಮೇಲೆ, ಮತ್ತೊಂದು ತುತ್ತಿಗಾಗಿ ತಾಬಾಣದಲ್ಲಿ ಕೈಯಿಕ್ಕುತ್ತಿದ್ದಳು. ನನ್ನ ಮಟ್ಟಿಗೆ ಊಟ ಬೇಡವಾಯಿತು. ಚೆಲ್ಲುವುದೂ ಸರಿಯೆನಿಸಲಿಲ್ಲ. ನನ್ನ ತಟ್ಟೆಯಲ್ಲಿದ್ದ ಕಡುಬಿನ ಮುದ್ದೆಯನ್ನು ಆ ದಾಸಮ್ಮನಿಗೆ ಗೊತ್ತಾಗದಂತೆ ಆಕೆಯ ತಟ್ಟೆಯಲ್ಲಿ ಹಾಕುತ್ತ ಕುಳಿತೆ. ಹಾಗೆ ಹಾಕುವಾಗ ಒಮ್ಮೆ ಫಕ್ಕನೆ ಕಣ್ಣ ತೆರೆದು ನೋಡಿ ದಾಸಮ್ಮ ಅಡರಾಸಿ ಅಳತೊಡಗಿದವಳು, ಎದ್ದೇ ಹೋದಳು.

ಮರುದಿನ ಅವರ ತಾಯಿ ದಾಸಮ್ಮನನ್ನು ಕರಕೊಂಡು ಬಂದು ನಮ್ಮಣ್ಣನ ಮುಂದೆ ಫಿರ್ಯಾದಿ ಹೇಳಿದಳು - "ಎಂಜಲು ಕಡಬು ಹಾಕಬೇಕೇ ನಿಮ್ಮ ತಮ್ಮ ಅದಕ್ಕಾಗಿ ಮಗಳು ಊಟ ಬಿಟ್ಟು ಎದ್ದು ಅಳುತ್ತ ಮನೆಗೆ ಬಂದಳು, ಮನೆಯಲ್ಲಿ ಮುಸುರೆ ಕೈ ತೊಳಕೊಂಡಳು."

"ಯಾಕೋ ಹೀಗೇಕೆ ಮಾಡಿದೆ" ಎಂದು ಜಬರಿಸಿ ಕೇಳಿದನು ನಮ್ಮಣ್ಣ. ಆ ಬಳಿಕ ಹಿಡಿಸರಳಿನ ಏಟು ನಿಶ್ಚಯವೆಂದು ತಿಳಿಯಿತು.

"ಎಂಜಲು ಕಡಬು ನನ್ನ ಮಗಳಿಗೆ ನೀನೇಕೆ ನೀಡಿದಿಯಪ್ಪಾ ನಿಂಗಪ್ಪಾ" ಎಂದು ಆ ತಾಯಿ ಗಟ್ಟಿಗಟ್ಟಿಸಿ ನನ್ನನ್ನು ಕೇಳತೊಡಗಿದಳು. ಕೇಳಿ ಕೇಳಿ ಬೇಸತ್ತ ನಾನು ಒಂದು ಕಾರಣವನ್ನು ಹೇಳಿದೆ, ಏನಂದರೆ-

"ಆಕೆ ನಮ್ಮವ್ವನಾಗಬೇಕು. ನಮ್ಮ ಕಕ್ಕನ ಹೆಂಡತಿ ಆಗತಕ್ಕವಳು. ನಮ್ಮವ್ವ ಅಲ್ಲವೇ? ಅವ್ವನಿಗೆ ಮಗನ ತುತ್ತು ಎಂಜಲದ್ದಾಗುವದೇ" ಎಂದು ನಾನೇ ಆಕೆಗೆ ಮರಳಿ ಪ್ರಶ್ನಿಸಿದೆ.

ಆ ತಾಯಿ ಬೇಸತ್ತು "ಅವ್ವನಂತೆ ಅವ್ವ ಈತನಿಗೆ, ಎಂಜಲ ತಿನಿಸುವುದರಷ್ಟೇ ಅವ್ವ ಈತನಿಗೆ" ಎಂದು ವಟಗುಡುತ್ತ ಮಗಳನ್ನು ಎಳಕೊಂಡು ತನ್ನ ಮನೆಗೆ ಹೋಗಿಬಿಟ್ಟಳು.

ನಾನು ಬಲು ಪಾರಾದೆ ಎಂದುಕೊಂಡೆ.

ಚಡಚಣದ ಪೋಲಿಸ ಪಾಟೀಲರಾದ ರಾಮನಗೌಡರ ಒಬ್ಬನೇ ಒಬ್ಬ ಮಗ ಬಾಬೂರಾಯನು ನನ್ನ ಸಹಪಾಠಿ, ನಾವಿಬ್ಬರೂ ೭ನೇ ತರಗತಿಯಲ್ಲಿ ಓದುತ್ತಿದ್ದವು. ನಮಗೆ ಪಾಠ ಹೇಳುವ ಶಿಕ್ಷಕರು, ಆ ಗೌಡರ ಮನೆಯ ಒಂದು ಭಾಗದಲ್ಲಿ ವಾಸ್ತವ್ಯ ಮಾಡಿದ್ದರು. ಗುರುಗಳ ಊಟ ಇನ್ನೂ ಆಗಿದ್ದಿಲ್ಲ. ನಾನು ಉಂಡ ಕೂಡಲೇ ಗೌಡರ ಮನೆಯತ್ತ ಸಾಗಿದೆ.

ದೂರದಲ್ಲಿ ಬಾಬುರಾಯ ಕಾಣಿಸಿದನು, ಕೂಗಿದೆ. ನಿಂತುಕೊಂಡನು, ನಾನು ಹತ್ತಿರ ಹೋಗಿ ಕೇಳಿದೆ - 'ಎಲ್ಲಿಗೆ ಹೊರಟೆ?'

"ಊಟ ಮುಗಿದ ಕೂಡಲೇ ನಿತ್ಯದಂತೆ ಬಯಲ ಕಡೆಗೆ ಹೋಗುವುದು"

"ಕೆಟ್ಟ ಉರಿ ಬಿಸಿಲು, ಮಾರಾಯಾ, ಬಿಟ್ಟರೆ ನಡೆಯವದಿಲ್ಲವೇ" ಎಂದು ಕೇಳಿದೆ.

ಅವನು ಏನು ಹೇಳಲಿಲ್ಲ, "ನೀನೂ ನನ್ನೊಡನೆ ಬಾ" ಎಂದನು.

"ಬಿಸಿಲು ಬಹಳವಿದೆ, ಅದು ತಗ್ಗಿದ ಬಳಿಕ ಇಬ್ಬರೂ ಜೋಡಿಯಾಗಿ ಹೋಗೋಣ" ಎಂದೆ.

"ದೂರ ಹೋಗುವುದು ಬೇಡ. ಇಲ್ಲೇ ಕಟುಕರ ಹೊಲದಲ್ಲಿ ಕುಳಿತು ಬಂದರಾಯಿತು. ಬಿಸಿಲು ನಮಗೇನು ಮಾಡುವದು" ಎಂದನು ಬಾಬುರಾಯ.

ಮಿತ್ರನ ಮಾತು ನಡೆಸಿಕೊಡಬೇಕೆಂದು - "ತಂಬಿಗೆ ತೋರಿಸು ದೊಡ್ಡದೋ ಸಣ್ಣದೋ ನೋಡುತ್ತೇನೆ" ಎನ್ನಲು, ಬಾಬುರಾಯ ತಂಬಿಗೆಯೆತ್ತಿ ಹಿಡಿದು ತೋರಿಸಿದನು. ಅದು ಸಾಕಷ್ಟು ದೊಡ್ಡದಿತ್ತು.

"ಆಗಲಿ, ನಾನೂ ಬರುವೆ, ಆದರೆ ತಂಬಿಗೆ ಮಾತ್ರ ನನ್ನ ಕೈಯಲ್ಲಿ ಬೇಕು" ಎಂದೆ.

ತಂಬಿಗೆಯನ್ನು ನನಗೊಪ್ಪಿಸಿದನು ಬಾಬೂರಾಯ-ಚಿಕ್ಕಗೌಡ.

ಇಬ್ಬರೂ ಮಾತಾಡುತ್ತ ಫತ್ತೇಸ ಹೊಲವನ್ನು ಪ್ರವೇಶಿಸಿದೆವು. ಮರೆಯೆಂಬುದೇನೂ ಇರಲಿಲ್ಲ. ಮರೆ ಹುಡುಕುತ್ತ ಇಬ್ಬರೂ ಅಗಲಿದೆವು. ಹತ್ತು ಮಾರು ಹೋಗುವಷ್ಟರಲ್ಲಿ ಅಲ್ಲೊಂದು ಎಕ್ಕೆಯ ಗಿಡ ಕಾಣಿಸಿತು. ನಾನಲ್ಲಿಗೆ ಹೋಗಿ ಮರೆಮಾಡಿಕೊಂಡು ಕುಳಿತೆ. ಚಿಕ್ಕಗೌಡನೂ ಬೇರೊಂದು ಎಕ್ಕೆಯ ಗಿಡವನ್ನು ಆಶ್ರಯಿಸಿದನು.

ನನ್ನ ಕೆಲಸ ತೀವ್ರ ಮುಗಿಯಿತು, ನೀರು ಮುಟ್ಟಿ ಎದ್ದೆ. ಯಾವುದೋ ಗುಂಗಿನಲ್ಲಿದ್ದ ನಾನು, ನೀರನ್ನೆಲ್ಲ ಚೆಲ್ಲಿಕೊಟ್ಟು ತಂಬಿಗೆ ಬರಿದು ಮಾಡಿಕೊಂಡು ಹೊರಟುಬಿಟ್ಟೆ, ಬಾಬುರಾಯ ತಂಬಿಗೆ ಕೇಳಿದನು, ನಾನು ಹೇಳಿದೆ "ನೀರೆಲ್ಲ ಆಮುವಲ್ಲಾ!"

ಬಾಯಿಗೆ ಬಂದ ಹಾಗೆ ಬಯ್ಯತೊಡಗಿದನು ಚಿಕ್ಕಗೌಡ.

ನನಗೆ ಅದರಿಂದ ಸಿಟ್ಟು ಬರಲಿಲ್ಲ, ಒಳಿತಾಗಿ ನಕ್ಕುಬಿಟ್ಟೆ.

ಅದನ್ನು ಕಂಡು ಚಿಕ್ಕಗೌಡನ ತಲೆ ಮತ್ತೂ ತಿರುಗಿತು. ದ್ವಿಗುಣ ಚೌಗುಣದಲ್ಲಿ ಬಯ್ಯತೊಡಗಿದನು. ಬಯ್ದು ಬಯ್ದು ಬಾಯಿ ಆರಿತೇನೋ ಬಾಯಿಯೇ ಆರಿದ ಬಳಿಕ ಅದೇಷ್ಟು ಆದೀತು? ಎಂದೆ ಅವನಿಗೆ ಕೇಳಿಸುವಂತೆ.

ಅವಸರದಿಂದ ಅವರ ಮನೆಗೆ ಹೋದೆ. ಅವರ ತಾಯಿಯವರಿಂದ ತಂಬಿಗೆಯಲ್ಲಿ ನೀರು ಹಾಕಿಸಿಕೊಂಡು, ದಾರಿಕಾಯುತ್ತ ನಿಂತ ಗೌಡನ ಬಳಿಗೆ ಹೋಗಿ ತಂಬಿಗೆ ಒಪ್ಪಿಸಿದೆ, ಚಿಕ್ಕಗೌಡ ಕೆಟ್ಟಗಣ್ಣಿನಿಂದ ನೋಡತೊಡಗಿದನು.

ನನಗೆ ನಗೆ ಬರಹತ್ತಿತು. ಮತ್ತೆ ಮೂಕನನ್ನು ಕಂಡು ಮೂಗು ತುರಿಸಿ ಕೊಂಡಾಗ ಆತನು ಕಕ್ಕಾಪಿಕ್ಕಿ ಆಗುವಂತೆ, ಬಾಬುರಾಯನ ಮುಖಚರ್ಯೆ ತುಸು ಬದಲಾಯಿತು.

"ನೀರು ಸಾಕೇ? ಇನ್ನೊಂದು ತಂಬಿಗೆ ತುಂಬಿಕೊಂಡು ಬರಬೇಕೋ?" ಎಂದು ಕೇಳಿದೆ.

ಅಷ್ಟರಲ್ಲಿ ಚಿಕ್ಕಗೌಡರು ತಣ್ಣಗಾಗಿದ್ದರು. ಮತ್ತೆ ನಗನಗುತ್ತ, ಮಾತಾಡುತ್ತ ಮನೆಗೆ ಬಂದೆವು. ಕೈಕಾಲು ತೊಳಕೊಂಡು ಪುಸ್ತಕಗಂಟು ಬಿಚ್ಚಿದೆವು. ಓದುವ ಕ್ರಿಯೆ ಹೀಗೆ ಆರಂಭವಾಯಿತು.

ಇಂಥ ಹುಡುಗಾಟಿಕೆ ಜೀವನದಲ್ಲಿ ನೂರಾರು ನಡೆದಿರಬಹುದು. ಇಲ್ಲಿ ನಮಗೆ ಅವೆಲ್ಲವುಗಳ ಅಗತ್ಯವಿಲ್ಲ.

ನಗುವವನೇ ಬೇರೆ, ನಗೆಗೀಡಾದವನೇ ಬೇರೆ ಆದಾಗ, ಬೆಕ್ಕಿಗೆ ಆಟ, ಇಲಿಗೆ ಪ್ರಾಣ ಸಂಕಟವೆನ್ನುವಂತಾಗುತ್ತದೆ. ಇಂಥ ಪ್ರಸಂಗದಲ್ಲಿ ಇಲಿಯನ್ನು ಕಾಪಾಡಬೇಕೋ ಸಾಯಗೊಡಬೇಕೋ? ಬೆಕ್ಕನ್ನು ಬೆದರಿಸಿ ದೂರ ಓಡಿಸಬೇಕೋ ಇದ್ದಲ್ಲಿಯೇ ಬಡಿಗೆ ಬೀಸಿ ನೆಲಕ್ಕೆ ಕೆಡುಹಬೇಕೋ?

ಷಡ್ರಸಗಳಲ್ಲಿ ಸಿಹಿ ಅತಿಪ್ರಿಯವಾದಂತೆ, ನವರಸಗಳಲ್ಲಿ ಹಾಸ್ಯವು ಅತಿ ಪ್ರಿಯವಾದ ರಸ. ಆದರೆ ಹಾಸ್ಯವು ನಕ್ಕು ನಗಿಸುವಂಥದಿರಬೇಕು ಅಳಿಸುವ ನಗೆ ಹೇಸಿನಗೆ, ಲೇಸು ನಗೆಯೇ ಬಾಳಿಗೆ ಪೌಷ್ಟಿಕ.

ಅಳುತ್ತ ಬಂದವನು ನಗುತ್ತ ಹೋಗುವನು ಎಂದು ಚೇಳಿನ ಔಷಧಿ ಮಾರುವವನು ತನ್ನ ಔಷಧಿಯ ಹಿರಿಮೆಯನ್ನು ಹೇಳುವುದುಂಟು.

ಕಡಿಸಿಕೊಂಡು ಖಾತ್ರಿ ಮಾಡಿಕೊಳ್ಳುವುದಕ್ಕಿಂತ, ಕಡಿದಾಗ ಔಷಧಿ ಹಚ್ಚಿ ಖಾತ್ರಿ ಮಾಡಿಕೊಳ್ಳುವುದೇ ಸೂಕ್ತ ಉಪಾಯವಲ್ಲವೇ?

ಶ್ರೀ ಅರವಿಂದರು ಹೇಳುವಂತೆ - ದುಃಖದ ಪ್ರಸಂಗವನ್ನು ಹಾಸ್ಯದತ್ತ ಹೊರಳಿಸುವುದೇ ಹಾಸ್ಯಯೋಗವೆನಿಸುತ್ತದೆ.

ಪರಮಾತ್ಮನನ್ನು ಒಲಿಸುವುದಕ್ಕೂ ನಗೆಮುಖ ಬೇಕು ಅಳು ಮುಖವನ್ನು ಕಂಡು ಹಡೆದ ತಾಯಿ ಸಹ ಬೇಸರ ಪಡುವಳು, "ಹರುಷದಿಂದ ಭಜಿಸು" ನಿತ್ಯ ಸುಖವು ತಪ್ಪದು ಎಂದಿದ್ದಾರೆ ಅನುಭಾವಿಗಳು. ಹರ್ಷವೂ ಹಾಸ್ಯದ ಬಳಗಕ್ಕೆ ಸೇರಿದ್ದೆಂದು ಹೇಳುವವರಲ್ಲಿ ನಾನೂ ಒಬ್ಬನು.

೪೨. ನಿವೃತ್ತ ಶಿಕ್ಷಕ

ಮೂವತ್ತೈದು ವರ್ಷಗಳಿಂದ ನಿರ್ವಹಿಸುತ್ತ ಬಂದ ಶಿಕ್ಷಕವೃತ್ತಿ ಮುಗಿಯಲು ಬಂದಿತು. ೧೯೫೯ನೇ ವರ್ಷದ ಡಿಸೆಂಬರ ತಿಂಗಳಲ್ಲಿ ತಿಳಿಯಿತು ನನಗೆ, ಆದರ್ಶ ಶಿಕ್ಷಕ ಎಂಬ ಪ್ರಶಸ್ತಿ ದೊರೆಯಲಿದೆ ಎಂದು. ಅದು ಕರ್ನಾಟಕಕ್ಕೆ ಮೊದಲನೇ ಬಾರಿ ಸಿಗಲಿದೆ. ಆ ಉತ್ಸವಕ್ಕಾಗಿ ದಿಲ್ಲಿಯವರೆಗೆ ಹೋಗಬೇಕಾಗುತ್ತದೆ ಮತ್ತು ಅಲ್ಲಿಂದ ಬಂದ ಬಳಿಕ ತಿಂಗಳೊಪ್ಪತ್ತಿನಲ್ಲಿ ನಿವೃತ್ತನಾಗಬೇಕಾಗುತ್ತದೆ. ಆ ಬಳಿಕ ನಾನು ಶಾಲೆಯ ಶಿಕ್ಷಕನಲ್ಲ. ಸಮಾಜದ ಶಿಕ್ಷಕನಾಗಬಹುದು. ಸಮಾಜಕ್ಕೆ, ನಾನು ಶಿಕ್ಷಕನಾಗಿ ಏನು ಕಲಿಸಬೇಕಾಗಿದೆ? ಹೆರರಿಗೆ ಎಷ್ಟು ಕೊಡಮಾಡಿದರೂ ತೀರದಷ್ಟು ಬಂಡವಲು ಯಾವುದಿದೆ?

ಶಿಕ್ಷಕ ವೃತ್ತಿಯ ಆರಂಭದ ದಶಕದಲ್ಲಿಯೇ ಒಂದು ಮಾಸಪತ್ರಿಕೆಯನ್ನು 'ಮಕರಂದ' ಎಂಬ ಹೆಸರಿನಲ್ಲಿ ತೆಗೆಯಬೇಕೆಂದು, ಅದರ ರೂಪರೇಷೆಗಳನ್ನಲ್ಲದೆ ಮುಂಬಲ-ಬೆಂಬಲಗಳನ್ನೆಲ್ಲ ಕಾಣಿಸಿ ಶ್ರೀಮಾತೆಯವರಿಗೆ ಬರಕೊಂಡೆ. ಅವರಿಂದ ಉತ್ತರ ಬರುವುದಕ್ಕೆ ತುಸು ತಡವೇ ಆಯಿತು. ಆ ಉತ್ತರವು ನನ್ನ ಮುಂಗಾಲ್‌ಪುಟಿಗೆಗೆ ತಡೆಯೂ ಆಯಿತು. ಅರವಿಂದಾಶ್ರಮದ ಸೆಕ್ರೆಟರಿ ಎಂ.ಪಿ. ಪಂಡಿತ ಅವರಿಂದ ಬರೆಯಿಸಿದ ಉತ್ತರದಲ್ಲಿ ಶ್ರೀ ಮಾತೆಯವರು ಗೂಢ ಅಭಿಪ್ರಾಯ ಗಾಢವಾಗಿದ್ದರೂ ತಿಳಿಯಾಗಿ ತಳತಳಿಸಿತು ಏನಂದರೆ -

"ನಿಮ್ಮ ಆರ್ಥಿಕ ಸ್ಥಿತಿ ಅನುಕೂಲವಿಲ್ಲ, ಆ ಕೆಲಸ ಸದ್ಯಕ್ಕೇ ಬೇಡ"

"ಸದ್ಯಕ್ಕೆ ಬೇಡ" ಎನ್ನುವ ವಾಕ್ಯದಲ್ಲಿ ಜೀವ ತುಂಬಿದೆ. ಸದ್ಯ ಎನ್ನುವುದು ಸರಿಸಿಟ್ಟರೆ ಮುಂಬರುವ ಕಾಲಕ್ಕಾದರೂ ಆ ಕೆಲಸ ಬೇಕು ಎಂದು ಅರ್ಥಯಿಸಿದ ನಾನು ನನಗಾಗಿ ಆ ಜಗನ್ಮಾತೆ ಯೋಚನೆ ಮಾಡಿ, ಅಭಿಪ್ರಾಯ ತಿಳಿಸಿದ್ದಕ್ಕೆ ನಾನು ಧನ್ಯನೆಂದು ತಿಳಕೊಂಡೆ. ಮುಂದೆ ಅನುಕೂಲವಾದ ಕಾಲ ಬರುವುದೆಂದು ಸೂಚಿಸಿದ್ದಕ್ಕೆ ನಾನು ಕೃತಾರ್ಥನಾದೆ. ಆ ದಿಶೆಯಲ್ಲಿ ನನ್ನ ನಿವೃತ್ತ ಜೀವನ ಸಾಗಬಹುದೇನೋ ಎಂದೆನಿಸಿತು.

ನಿವೃತ್ತಿಯೆಂದರೆ, ಕೆಲಸದಿಂದ ಬಿಡುಗಡೆ, ಸಂಬಳವಿಲ್ಲ ಎನ್ನುವದಷ್ಟೇ ಬಲ್ಲೆವು. ಆದರೆ ನನ್ನ ನಿವೃತ್ತಿಯ ಅಥವಾ ನನ್ನಂಥವರ ನಿವೃತ್ತಿಯ ಅರ್ಥವೇ ಬೇರೆ. ಸಂಬಳವಿಲ್ಲ ಅಹುದು, ಸಂಬಳವಷ್ಟೇ ಇಲ್ಲವೆಂದು ತಿಳಕೊಳ್ಳದೆ, ನಿವೃತ್ತಿ ವೇತನವೂ ಇಲ್ಲವೆಂದು ಭಾವಿಸಬೇಕು. ನಾನು ಹೇಳಿಕೇಳಿ, ಮುಂಬಯಿ ಕರ್ನಾಟಕಕ್ಕೆ ಸೇರಿದ ನಾಲ್ಕು ಜಿಲ್ಲೆಗಳಲ್ಲಿ ಬಳಕೆಯಲ್ಲಿರುವ ಸ್ಕೂಲ್ ಬೋರ್ಡ್ ಕಮೀಟಿಯವರ ಆಳು ನಾನು. ನಾಲ್ಕೂ ಜಿಲ್ಲೆಗಳಲ್ಲಿ ನನ್ನಂಥ ಆಳುಗಳು ವಿಪುಲವಾಗಿದ್ದರು. ಅವರು ನಿವೃತ್ತರಾದರೆ, ಅವರಿಗೆ ನಿವೃತ್ತಿ ವೇತನದಲ್ಲಿ, ಯಾವುದೋ ಒಂದು ಫಂಡು ಮಾತ್ರ ಸ್ವೀಕರಿಸಿ, ಮನೆಯ ಹಾದಿ ಹಿಡಿಯಬೇಕು. ನನಗೆ ಬಂದ ಫಂಡು ಉದಾಹರಣೆಗಾಗಿ ಹೇಳಬೇಕೆಂದರೆ ೩೭ ನೂರು ರೂ. ಮಾತ್ರ. ಅಷ್ಟರಿಂದ ನಿವೃತ್ತ ಜೀವನವನ್ನು ನೂಕಬೇಕು. ಆದಕಾರಣ ನಾನು ಹೇಳುವದೇನಂದರೆ-

೧೯೬೦ನೇ ಫೆಬ್ರವರಿ ೧೦ನೇ ತಾರೀಖಿನಿಂದ ನಾನು ಕೂಲಿಗೇಡಿ, ಕೂಳಗೇಡಿ, ಆಗುವುದಕ್ಕೆ ಸಿದ್ಧನಾಗಬೇಕು. ಆದರೆ ನಮ್ಮಂಥವರ ಸಲುವಾಗಿ ಹೇಳಿದಂತಿರುವ ಒಂದು ವಾಕ್ಯವಿದೆ. ಅದೇ ನನ್ನ ತಾರಕಮಂತ್ರವಾಯಿತು.

"ಕೊಟ್ಟು ರಕ್ಷಿಪನಿದಕೆ ಸಂದೇಹಬೇಡ"

ಅಹುದು ಹಾಗೆಯೇ ಆಯಿತು. ತಲ್ಲಣಗೊಳ್ಳುವಷ್ಟರಲ್ಲಿ ತಣಿಸಿ ಹೋಗಬಲ್ಲ ಪ್ರಾಮಾಣಿಕ ಶಕ್ತಿ ಅದು. ಆ ಕಥೆಯು ಮುಂದಿನ ವಿವರದಲ್ಲಿ ಅನುಷಂಗಿಕವಾಗಿ ಬಂದುಬಿಡುತ್ತದೆ.

ಶ್ರೀ ಅರವಿಂದ ಗ್ರಂಥಾಲಯ ಎಂಬ ಪ್ರಕಾಶನದಿಂದ ವರುಷಕ್ಕೆ

ನಾಲ್ಕು ಪುಸ್ತಕಗಳನ್ನು ಪ್ರಕಟಿಸುವುದು. ಅವುಗಳ ಒಟ್ಟು ಪುಟಗಳ ಸಂಖ್ಯೆ ೫ ನೂರಕ್ಕಿಂತ ಕಡಿಮೆಯಾಗಬಾರದು. ನಾಲ್ಕು ಪುಸ್ತಕಗಳಲ್ಲಿ ೨ ವೈಚಾರಿಕ, ೨ ಸಾಹಿತ್ಯಕ ವಿಚಾರದಲ್ಲಿ ಭಾವೈಕ್ಯವನ್ನು ಹುಟ್ಟಿಸಿ, ಓದುವ ಅಭಿರುಚಿಯನ್ನು ಬೆಳೆಸಬೇಕು. ನಮ್ಮದು ಜಾತ್ಯತೀತ ಪಂಥ ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೫ ಮಾತ್ರ.

ಈ ಉದ್ದೇಶವನ್ನು ಸಫಲಗೊಳಿಸುವುದಕ್ಕೆ ಕೆಳಗೆ ಕಾಣಿಸಿದ ಮೂರು ಜನ ಮಹನೀಯರಿಗೆ ಸಲಹೆ ಕೇಳಿಕೊಳ್ಳಬೇಕು -

೧) ಶ್ರೀ ಎಂ.ಪಿ. ಪಂಡಿತ ಶ್ರೀ ಅರವಿಂದ ಆಶ್ರಮ ಪಾಂಡಿಚೇರಿ.

೨) ಶ್ರೀ ಕುಮಾರ ಸ್ವಾಮಿಗಳು ತಪೋವನ, ಧಾರವಾಡ.

೩) ದೃಷ್ಟಾರ ಕವಿ ದ.ರಾ. ಬೇಂದ್ರೆ, ದಯಾನಂದ ಕಾಲೇಜ ಸೊಲ್ಲಾಪುರ

ಈ ವಿವರವನ್ನೆಲ್ಲ ಶ್ರೀ ಮಾತೆಯವರಿಗೆ ಬರೆದುಕೊಂಡು ಗ್ರಂಥ ಮಾಲೆಯನ್ನು ಆರಂಭಿಸುವುದಕ್ಕೆ ಒಪ್ಪಿಗೆಯೊಡನೆ ಮಹಾಶೀರ್ವಾದಗಳನ್ನು ದಯೆಪಾಲಿಸಬೇಕು - ಎಂದು ಪ್ರಾರ್ಥಿಸಿಕೊಂಡೆನು.

ಎರಡು ವಾರ ಕಳೆದವೋ ಇಲ್ಲವೋ ಅಷ್ಟರಲ್ಲಿ ಶ್ರೀಮಾತೆಯವರ ಒಪ್ಪಿಗೆ ಹಾಗೂ ಆಶೀರ್ವಾದ ಎರಡೂ ಬಂದವು. ಇನ್ನೇನು? “ನಮಸ್ಕಾರ” ಎಂಬ ನನ್ನ ಗದ್ಯಕವನ ಸಂಕಲನವೇ ಪ್ರಥಮ ಪುಸ್ತಕವಾಗಿ ಹೊರಡಿಸುವ ಎತ್ತಗಡೆ ನಡೆಯಿತು.

ಶ್ರೀ ಸಂಗಬಸವ ಶಿವಯೋಗಿಗಳು, ಬಂಥನಾಳ

ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಶಿವಾನಂದಮಠ ಗದಗ

ಶ್ರೀ ಕಿರೀಟ ಮಠದ ಮೃತ್ಯುಂಜಯ ಸ್ವಾಮಿಗಳು, ಸೊಲ್ಲಾಪುರ

ಈ ಮೂವರೂ ಮಹಾನುಭಾವರು ಎರಡೆರಡು ನೂರು ರೂ. ಕೊಟ್ಟು ಕಳುಹಿಸಿ ನಮ್ಮ ಕಾರ್ಯಕ್ಕೆ ಹಸಿರು ಬಾವುಟ ತೋರಿಸಿದರು.

ಶ್ರೀ ಶೇ.ಗೋ. ಕುಲಕರ್ಣಿ ಅವರ ಸಾಧನಾ ಪ್ರೆಸ್ಸಿನಲ್ಲಿ ಮುದ್ರಿಸುವದು ಮುದ್ರಣ ವೆಚ್ಚ ಮತ್ತು ಇವೆರಡೂ ವೆಚ್ಚಗಳು ಸುಗಮ ಗೊಳ್ಳುವುದಕ್ಕೆ ಹಣ ಕೈಗೆ ಬಂದಂತಾಯಿತು. ಚಡಚಣದಲ್ಲಿ ಒಂದು ನೂರು ರೂ. ಸಹಾಯ ಧನವಿತ್ತು ಹತ್ತೆಂಟು ಜನ ಆಜೀವಸದಸ್ಯರಾದರು. ೫ ರೂ. ವಾರ್ಷಿಕ ವರ್ಗಣಿ ನೀಡಿ ಚಂದಾದಾರರೂ ಆದರು ಹತ್ತಿಪ್ಪತ್ತು ಜನ.

ಮುದ್ರಣಗೊಂಡು 'ನಮಸ್ಕಾರ' ಪುಸ್ತಕ ಪ್ರತಿಗಳು ಎಸ್.ಟಿ. ಪಾರ್ಸಲನಿಂದ ನೇರವಾಗಿ ಚಡಚಣಕ್ಕೆ ಬಂದವು. ಪತ್ತಾರ ಗಂಗವ್ವನ ಅಂಗಡಿ ಬಾಡಿಗೆ ಹಿಡಿದು ಪ್ರಕಾಶನದ ಆಫೀಸು ಮಾಡಿಕೊಂಡೆ. ಆಫೀಸಿನಲ್ಲಿ ಎಲ್ಲ ಕೆಲಸಗಳನ್ನು ಬಹುತರವಾಗಿ ನಾನೇ ನಿರ್ವಹಿಸುತ್ತಿದ್ದೆ. ಅದೊಂದು ಏಕಪಾತ್ರಾಭಿನಯ.

ಮುಂದಿನ ಪುಸ್ತಕ 'ಬಿಲ್ವದಳ'. ದಿ. ಕಾಪಸೆ ರೇವಪ್ಪನವರ ಸಣ್ಣ ಕತೆಗಳ ಸಂಕಲನವೆಂದು ಮೊದಲು ಪ್ರಕಟನೆಯ ಕೊನೆಯ ಪುಟದಲ್ಲಿ ಪ್ರಕಟಗೊಳಿಸಿದೆ. ಮುದ್ರಿತ ಪುಸ್ತಕಗಳ ಗಂಟುಗಳನ್ನು ಕಂಡು, ಇವನ್ನೆಲ್ಲ ಹೇಗೆ ಖರ್ಚು ಮಾಡುವುದು?

ಪುಸ್ತಕ ಅಂಗಡಿಯವರಿಗೆ ಕೊಟ್ಟರೆ ಹಣವಂತೂ ಬರುವದಿಲ್ಲ. ತಿರುಗಿ ಕೇಳಿದರೆ ಪುಸ್ತಕಗಳೂ ಬರಲಿಕ್ಕಿಲ್ಲ. ಆಗ ಒಂದು ಲೋಕೋಕ್ತಿ ಮನಸ್ಸಿನ ಪರದೆಯ ಮುಂದೆ ಬಂದು ಡೊಂಬರಾಟವನ್ನು ಆಡತೊಡಗಿತು. ಆ ಲೋಕೋಕ್ತಿ ಹೊಸದೇನೂ ಅಲ್ಲ.

ಇಟ್ಟು ಮರುಗುವ ನಾಯಿ
ಕೊಟ್ಟು ಕೊರಗುವ ನಾಯಿ
ತಿಥಿಮಿತಿಯಿಲ್ಲದೆ ತಿರುಗುವ ನಾಯಿ

ಈ ಮೂರು ಸ್ಟೇಜುಗಳು ನನ್ನಂಥ ಪ್ರಕಾಶಕರಿಗೆ ಹಾಕಿ ಕೊಟ್ಟ ಉಂಬಳಿಯೇ ಆಗಿದೆ. ನಾನು 'ನಮಸ್ಕಾರ'ಗಳ ಗಂಟಿಗೆ ನಮಸ್ಕಾರ ಮಾಡಿ, ಚಂದಾದಾರನನ್ನು ಕೂಡಿಸುವುದಕ್ಕೆ ಅರ್ಥಾತ್ ಪ್ರತಿಗಳನ್ನು ಖರ್ಚು ಮಾಡುವುದಕ್ಕೆ ಚಿಕ್ಕ ಸಂಚಾರವನ್ನು ಕೈಗೊಂಡೆನು. ನಾನು ಪ್ರವೇಶಿಸಿದ

ನಗರದ ಅಥವಾ ಗ್ರಾಮದ ಪರಿಚಿತ ಮಿತ್ರರೊಬ್ಬರನ್ನು ಸಹಾಯಕ್ಕೆ ಕರೆದು ಕೊಂಡು, ಹತ್ತೆಂಟು ಜನ ಸುಶಿಕ್ಷಿತರನ್ನು ಕಂಡು, ನಮ್ಮ ಉದ್ದೇಶ ತಿಳಿಸಿ, ಚಂದಾದಾರರಾಗಿ ಈ ಗ್ರಾಮೀಣ ಪ್ರಕಾಶವನ್ನು ಪ್ರೋತ್ಸಾಹಿಸಬೇಕು ಎಂದು ವಿನಂತಿಸುವುದು. ಅಂಥ ಪ್ರಸಂಗದಲ್ಲಿ ಇಟ್ಟುಕೊಳ್ಳಬೇಕಾದ ಒಂದು ಭಾವನೆಯನ್ನು ಶ್ರೀ ಅರವಿಂದ "ಶ್ರೀ ಮಾತೆ" ಎಂಬ ಪುಸ್ತಕದಿಂದ ಕಲಿತು ಕೊಂಡಿದ್ದೆನು. ಅದೇನೆಂದರೆ -

"ಯಾರ ಬಳಿಗೆ ಹಣ ಕೇಳಲು ಹೋಗುವಿಯೋ ಅವರ ಬಳಿ ನಿಂತು, ನನ್ನ ತಾಯಿ ನಿಮ್ಮ ಬಳಿಯಲ್ಲಿ ತನ್ನದಾದ ಅದೆಷ್ಟೋ ಹಣ ಇಟ್ಟಿದ್ದಾಳಂತೆ. ಈಗ ಆ ನಿಧಿಯೊಳಗಿಂದ ಈಗ ೫ ರೂ. ಇಸಗೊಂಡು ಬರಲು ನನ್ನನ್ನು ಕಳಿಸಿದ್ದಾಳೆ."

ಈ ಭಾವನೆಯಿಂದ ನನ್ನ ಬೇಡುವ ನುಡಿಗಳೆಲ್ಲ ವಿಚಿತ್ರ ಶಕ್ತಿ ತುಂಬಿ ಕೊಂಡಿತು. ಆ ಬೇಡಿಕೆ ಬಹುತರ ಯಶಸ್ವಿಯಾಗುವುದೇ ಖಂಡಿತ. ಒಂದು ವೇಳೆ ಯಶಸ್ವಿಯಾಗದಿದ್ದರೆ ಅವರ ಪರಿಣಾಮ ಶ್ರೀ ಮಾತೆಗೆಂದು ಭಾವಿಸುತ್ತಿದ್ದೆ. ಹೀಗೆ ನನ್ನ ಕಾರ್ಯಕ್ಷೇತ್ರವು ಇಂಡಿ, ಸಿಂದಗಿ, ವಿಜಾಪುರ, ಹುನುಗುಂದ, ಇಳಕಲ್ಲಗಳಲ್ಲಿ ಆರಂಭವಾಯಿತು ಮತ್ತು ಸಾಕಷ್ಟು ಯಶಸ್ವಿಯೂ ಆಯಿತು. ಮುಂದುವರಿಯಲು ಯಾರೋ ಬೆನ್ನು ಚಪ್ಪರಿಸಿದಂತೆ ಆಯಿತು.

ವಾರ್ಷಿಕ ಚಂದಾ ಹಣಕ್ಕೆ ಪ್ರಕಾಶನದ ಗ್ರಂಥಗಳನ್ನು ಕೊಡುವುದು ಒಂದು ಕೆಲಸವಾದರೆ, ಈ ಮೊದಲು ಧಾರವಾಡ, ಹುಬ್ಬಳ್ಳಿಗಳಲ್ಲಿ ಪ್ರಕಾಶಗೊಂಡ ಕೆಲವು ಪ್ರತಿಗಳು ನನ್ನ ಬಳಿಯಲ್ಲಿದ್ದವು. ಅವುಗಳನ್ನು ಮಾರುವುದೂ ಇನ್ನೊಂದು ಕೆಲಸವಾಗಿತ್ತು. ಪ್ರಕಾಶನದ ಕೆಲಸವನ್ನು ನಿಸ್ತರಿಸುವ ಶ್ರಮಕ್ಕಾಗಿ ನಾನು ಪ್ರತಿ ತಿಂಗಳು ೫೦ ರೂ. ಮಾತ್ರ ತೆಗೆದು ಕೊಳ್ಳುತ್ತಿದ್ದೆ. ಅದಕ್ಕೆ ಹಿಂದಿನ ಪುಸ್ತಕಗಳ ಮಾರಾಟದ ಹಣ ಸೇರಿ ನನ್ನ ಮನೆತನಕ್ಕೆ ಖರ್ಚಾಗುತ್ತಿತ್ತು.

ನಮ್ಮ ಪ್ರಕಟನೆಗಳಿಗೆ ಆರಂಭದಿಂದಲೂ ಮುಖಪುಟಕ್ಕೆ ಚಿತ್ರ

ಒದಗಿಸುವ ಕೆಲಸವನ್ನು ವಿಜಾಪುರದ ಕಲಾವಿದ ವಿಶ್ವನಾಥ ಬುರಾಣಪುರ ಅವರು ನಿರ್ವಹಿಸುತ್ತ ಬಂದಿದ್ದನ್ನು ಸ್ಮರಿಸಲೇಬೇಕು.

ಒಂದು ಸುತ್ತಿನ ಪ್ರಸಾರ ಕಾರ್ಯದ ಪ್ರವಾಸವನ್ನು ಮುಗಿಸಿಕೊಂಡು ಬಂದೆನೆಂದರೆ, ಮುಂದಿನ ಪುಸ್ತಕಕ್ಕೆ ಬೇಕಾಗುವ ವಿಷಯಗಳನ್ನು ಅಣಿಗೊಳಿಸುವುದು ಮತ್ತು ಆ ತರುವಾಯದ ಪುಸ್ತಕವನ್ನು ರಚಿಸುವುದು ಹಾಗೂ ಮುದ್ರಣ ಮಾಡಿಸುವುದು. ದಿ. ಕಾಪಸೆಯವರ 'ಬಿಲ್ವದಳ'ದ ತರುವಾಯ, ದಿ. ಮಧುರಚೆನ್ನರ ಆಧ್ಯಾತ್ಮಿಕ ಪ್ರಬಂಧ ಸಂಗ್ರಹವನ್ನು 'ಪೂರ್ಣಯೋಗದ ಪಥದಲ್ಲಿ' ಎಂಬ ಹೆಸರಿನಿಂದ ಪ್ರಕಟಿಸಲಾಯಿತು.

ಗ್ರಂಥಮಾಲೆಯ ಬಾಳಬಟ್ಟಲು ಯಾವುದೋ ಸಂಧಿಯಲ್ಲಿ ತಡೆಗಟ್ಟಿ ನಿಂತಾಗ ಅಗಲಿದ ಮಿತ್ರರಾದ ಚೆನ್ನಮಲ್ಲಪ್ಪ, ಧೂಲಾ, ಕಾಪಸೆ ಅವರ ಸುಪ್ತಸಹಾಯವನ್ನು ಯಾಚಿಸುತ್ತಿದ್ದೆ. ಆ ಸಹಾಯವು ಸುಪ್ತವಾಗಿದ್ದಂತೆ ಸೂಕ್ತವಾಗಿಯೂ ಅಳವಟ್ಟಿತ್ತೆಂದು ಹೇಳಬಲ್ಲೆನು.

ಗೊತ್ತಿದ್ದ ಸಂಗತಿಯಿಂದ ಗೊತ್ತಿಲ್ಲದ ಸಂಗತಿಗೆ ಸಾಗು, ಎಂದು ಶೈಕ್ಷಣಿಕ ತತ್ತ್ವವು ಭೋಧಿಸುವಂತೆ, ನಮ್ಮ ಗ್ರಂಥಮಾಲೆಯಲ್ಲಿ ಬರುವ ಪುಸ್ತಕವನ್ನು ನಾಟಕ, ಹರಟೆ, ಕಥೆ, ಹಾಡು ಮೊದಲಾದ ಯಾವ ರೂಪದಲ್ಲಿ ಅಳವಡಿಸಿದರೂ ಅದರ ಹೆಜ್ಜೆ ಪೂರ್ಣಯೋಗದತ್ತ ಸಾಗುವಂತಿರಬೇಕೆಂದು ಆಸಕ್ತಿ ತಳೆಯುತ್ತಿದ್ದೆ. ವಾಚಕನು ಯಾವ ಸ್ಥಾನದಲ್ಲಿ ನಿಂತಿದ್ದರೂ ಅವನ ಮುಂದುವರಿಕೆ ೨೦ನೇ ಶತಮಾನದ ಜಾಗೃತ ವಿವೇಚನೆಯತ್ತಲೆ ಕೊಂಡೊಯ್ಯಬೇಕೆಂದು ಅಡಿಗಡಿಗೂ ಆಲೋಚಿಸುತ್ತಿದ್ದೆ.

ನಮ್ಮ ಪ್ರಕಾಶನಗಳಿಗೆ ಪ್ರಕಾಶಕರೆಂದರೆ ಶ್ರೀ ವೀರೇಂದ್ರ ಸಿಂಪಿ ಎಂ.ಎ. ಅವರಿಗೆ ಗೌರವ ಪ್ರಕಾಶಕರೆಂದರೆ ಒಪ್ಪುವದು. ಯಾಕೆಂದರೆ ಪ್ರತಿಫಲವಾಗಲಿ, ಹೊಣೆಗಾರಿಕೆಯಾಗಲಿ ಅವರಿಗಿರಲೇ ಇಲ್ಲ. ಆದರೆ ಅವರು ಅಭಿಮಾನ - ಆಸ್ಥೆಗಳ ಮೂಲ ಧನದಿಂದ ಪ್ರಕಾಶನಕ್ಕೆ ಉತ್ತರೋತ್ತರವನ್ನು ಸಾಧಿಸಿಕೊಡುವುದಕ್ಕೆ ತುಂಬ ಪ್ರಯತ್ನಿಸಿದ್ದು ಸತ್ಯವಷ್ಟೇ ಅಲ್ಲ, ಸೂಕ್ತವೂ ಆಗಿದೆ.

ಗ್ರಾಹಕರ ಸಂಖ್ಯೆ ಗದಗ, ಕಲಬುರ್ಗಿ, ಧಾರವಾಡ, ರಾಯಚೂರು, ಬೀದರ್ ಜಿಲ್ಲೆಗಳಲ್ಲಿಯೂ ತನ್ನ ಕೈಕಾಲು ಚಾಚಿತು. ಅದಕ್ಕೆ ಮುಖ್ಯವಾದ ಎದೆಗುಂಡಿಗೆಯೆಂದರೆ ವಿಜಾಪುರ ಜಿಲ್ಲೆಯೇ ಸೈ.

ನಿವೃತ್ತಿಯ ಅವಧಿಗೆ ಬಂದಾಗ ಸಹ ಆ ಸಂಬಳದಿಂದ ತೃಪ್ತ ಜೀವನ ಸಿಗುವುದು ತೀರ ಅಲ್ಪ ಪ್ರಮಾಣದಿಂದ. ಅದು ಎತ್ತಿಕೊಟ್ಟ ಜೋಳವಾಳಿಯೆನಿಸುತ್ತಿತ್ತು. ಈಗ ನನಗೆ ಒಡೆತನದ ಪಟ್ಟ ಬಂದಂತಾಯಿತು. ಅರಸನೂ ಕೈಯೋಗರರೆ ತಾನುರುಹನು ಎನ್ನುವಂತೆ ಒಡೆತನ ಪಟ್ಟ ನನ್ನದು ಒಡೆತನದ ಗದ್ದುಗೆಗಿಂತ ಹೊಣೆಗಾರಿಕೆಯ ಚಪಗಾಲು ಹೆಚ್ಚಿನದೆನಿಸಿತು.

ಎಂ.ಎ. ಮುಗಿದ ಬಳಿಕ ನನ್ನ ಹಿರೆಮಗ ವೀರೇಂದ್ರನು ಬೀದರ ಭೂಮರಡ್ಡಿ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕನಾಗಿ ಸೇರಿದನು. ಅವನ ಈಸು ಗುಂಬಳದ ಮೇಲೆ ಕೈಯಿಟ್ಟು ಈಶ್ವರ, ಈಶ್ವರನನ್ನು ಹಿಂಬಾಲಿಸಿ ಮಹಾದೇವಿ, ಸರೋಜಿನಿ, ರಾಜೀವ ಮೊದಲಾದವರು, ಎಷ್ಟೇ ಆಗಲಿ, ಮುಂದುವರಿಯಲು ಊರುಗೋಲು ಸಿಕ್ಕಂತಾಯಿತು.

ಈರಣ್ಣ ಈಶ್ವರ ಇವರಿಬ್ಬರ ಅಕ್ಕಿಕಾಳು. ಬಿದ್ದ ಬಳಿಕ ಸಾಯಬೇಕೆನ್ನುತ್ತೇನೆ ಎಂಬುದು ನನ್ನತ್ತಿಗೆಯ ಆಶೆ. ಲಗ್ನದ ತರುವಾಯ ಸಾಯಬೇಕೆನ್ನುವ ಆ ಜೀವ ಅಲ್ಲಿಯವರೆಗೆ ಯಾರಾರ ಕುತ್ತಿಗೆ ಹಿಸುಕುವ ಶೌರ್ಯ ತೋರುವದೋ ಎಂದು ಯೋಚಿಸಿದವರೂ ಇದ್ದಾರೆ. ಈ ದ್ವಿ-ವಿಧದ ಮಾತುಗಳಿಗೂ ಬೆಲೆ ಅಷ್ಟಷ್ಟೇ, ನಮ್ಮ ನಿರ್ಧಾರವನ್ನು ನಿಯತಿಯು ನಡೆಸಿಯೇ ಕೊಡುವದು ಎಂದು ಭಾವಿಸುವುದು ಸರಿಯಲ್ಲ.

ನಮ್ಮ ಮನೆತನದ ಮರಕ್ಕೆ ಎರಡು ಕೊಂಬೆಗಳು. ಆ ಕೊಂಬೆಗಳಿಗೆ ಬೊಡ್ಡಿಯೂ ಒಂದೇ, ನೆಲವೂ ಒಂದೇ. ನಮಗಿದ್ದ ಆಸ್ತಿಯೆಂದರೆ ಒಂದು ಮನೆ ಮಾತ್ರ. ಮನೆಯೆಂದರೆ ಹಳೆ ಮನೆ, ತೀರ ಹಳೆಮನೆ, ಶ್ರೀ ಶಿವರಾಮ ಕಾರಂತರ ಭಾಷೆಯಲ್ಲಿ ಹೇಳಬೇಕಾದರೆ, ಇನ್ನೂರು ವರುಷಗಳ ಹಿಂದೆ ಕಟ್ಟಿಸಿದ್ದು. ಅದರಲ್ಲಿಯೂ ಎರಡು ವಿಭಾಗಗಳಿದ್ದವು. ಹೇರಿಕೆಯನ್ನು ಹೊತ್ತು ಆಶ್ರಯ ನೀಡುತ್ತಿರುವ ಭಾಗ ಮತ್ತು ಹೇರಿಕೆ-ಗೀರಿಕೆಯಿಲ್ಲದೆ

ಬಟ್ಟಬಯಲಲ್ಲಿ ನಿಂತು, ತಾನೊಂದು ದೊಡ್ಡಿಯೆನಿಸಿದ ಭಾಗ. ಇಷ್ಟು ಆಸ್ತಿಯನ್ನು ಇಬ್ಬರಲ್ಲಿ ಹಂಚಿ ಹಾಕಬೇಕೆಂದು ಕೆಲವು ಹಿತಚಿಂತಕರು ಯೋಚಿಸಿದರು. ಏಕೋ ನನಗದು ಸರಿಯೆನಿಸಲಿಲ್ಲ. ಇಡಿಯ ಮನೆಗೆ ಪಂಚರ ಬೆಲೆ ಎಷ್ಟಾಗುವುದೋ ನೋಡಿಕೊಂಡು ಅದನ್ನು ಒಬ್ಬರು ಒಪ್ಪಿಸಿಕೊಂಡು ಅದರರ್ಧ ಬೆಲೆಯನ್ನು ಇನ್ನೊಬ್ಬರಿಗೆ ಕೊಟ್ಟರೆ ಸರಿಯಾದ ಹಂಚಿಕೆಯೆನಿಸುವದು.

ಇಡಿಯ ಮನೆಯನ್ನು ಅಣ್ಣನ ಮೊಮ್ಮಕ್ಕಳು ಒಪ್ಪಿಸಿಕೊಂಡು ನನಗೆ ಅರ್ಧಬೆಲೆ ಕೊಟ್ಟು ಬಿಡಲಿ, ನಾನು ಹೊರಬೀಳುತ್ತೇನೆ ಎಂದು ನಾನು ನುಡಿದೆ. ಅದಕ್ಕೆ ಉತ್ತರ ಕೊಡುವುದಕ್ಕೆ ಪಂಚರು ನುಡಿದದ್ದೇನೆಂದರೆ - "ನಿನ್ನ ಮೊಮ್ಮಕ್ಕಳು ಇನ್ನೂ ಕಲಿಯುವ ಹಂತದಲ್ಲಿರುವುದರಿಂದ ಅವರಿಗೆ ಜಾಗದ ಅವಶ್ಯಕತೆಗಿಂತ ಹಣದ ಅಗತ್ಯ ಹೆಚ್ಚಿಗಿದೆ. ಅದ್ದರಿಂದ ೫ ೧/೨ ಸಾವಿರ ರೂ. ನೀವೇ ಅವರಿಗೊಪ್ಪಿಸಿ ಇಡಿಯ ಮನೆಯನ್ನು ನೀವು ತೆಗೆದುಕೊಳ್ಳಿರಿ."

ಪಂಚರ ಯೋಚನೆಯಲ್ಲಿಯೂ ಸತ್ಯವಿತ್ತು. ನಾನು ಅನಿವಾರ್ಯ ಪ್ರಸಂಗವೆಂದು ಅವರ ನಿರ್ಣಯವನ್ನು ಒಪ್ಪಿಕೊಂಡು ೫ ೧/೨ ಸಾವಿರ ರೂ. ಕೊಟ್ಟು ಮನೆಯ ಒಡೆತನ ಪಡೆದೆ. ಆದರೆ ಅದು ಎಳೆಗರು, ಅದನ್ನು ಎತ್ತಾಗಿಸುವುದಕ್ಕೆ ಬೇಕಾಗುವ ದಿನಗಳೇಸೋ, ಖರ್ಚು ಮಾಡುವ ಹಣಗಳೇಸೋ ಯಾರು ಹೇಳುವರು ಮುಂಚಿತವಾಗಿ.

ಆ ವ್ಯವಹಾರದ ಬಗ್ಗೆ ಕಾಗದ ಪತ್ರಗಳಾದವು. ಪಾವತಿ ಕೊಡು ಕೊಳ್ಳುವ ಕ್ರಮ ಮುಗಿಯಿತು. ಎಲ್ಲ ಮುಗಿಯಿತು. ಆದರೆ ಅದೇಕೋ ಅವರೊಡನೆ ಯಾವ ಸಂಬಂಧವೂ ಉಳಿಯದೇ ಹೋಯಿತು. ಪರಸ್ಪರ ಸುಖದ ವಾರ್ತೆಯನ್ನು ದೂರದಿಂದಲೇ ಕೇಳುತ್ತ ಸಮಾಧಾನಪಟ್ಟು ಕೊಳ್ಳುತ್ತಿದ್ದೇವೆ.

ನಾನು ಮಾತ್ರ ಪ್ರಕಾಶನ ಕಾರ್ಯದಲ್ಲಿಯೇ ತೊಡಗಿಕೊಂಡು ಮಕ್ಕಳ ಶಿಕ್ಷಣ, ಉದ್ಯೋಗ, ಮದುವೆ ಮೊದಲಾದ ಚಿಂತನಗಳನ್ನು ಸಾಧ್ಯವಾದಷ್ಟು

ಮಾಡುತ್ತ ಮುಂದುವರಿದೆ. ೩೫ ವರ್ಷಗಳ ಶಿಕ್ಷಕ ವೃತ್ತಿ, ೨೫ ವರ್ಷಗಳ ಪ್ರಕಾಶನ ವೃತ್ತಿ ಅದೊಂದು ವಿಧದ ಸಮಾಧಾನ, ಇದೊಂದು ವಿಧದ ತೃಪ್ತಿ, ಯಾವ ವೃತ್ತಿಯಾದರೂ ಅದರಲ್ಲಿ ಸಿಹಿ ಕಹಿಗಳು ಇರತಕ್ಕವೇ. ಆದರೆ ಒಂದಕ್ಕೊಂದು ವಿರೋಧಿಯಾದ ರುಚಿಗಳೆಂದು ಭಾವಿಸುವವರೇ ಹೆಚ್ಚು. ನಾನು ಸಹ ಅದೇ ವರ್ಗಕ್ಕೆ ಸೇರಿದವನು. ಸಿಹಿಕಹಿಗಳೆಂದರೆ ಷಡ್ರಸಗಳಲ್ಲಿಯ ಎರಡು ರಸಗಳು, ಯಾವುದು ಹೆಚ್ಚು ಯಾವುದು ಕಡಿಮೆ ಎಂಬುದನ್ನು ಅಭಿರುಚಿಯುಳ್ಳವರೇ ಬಲ್ಲರು.

ಶ್ರೀ ಅರವಿಂದ ಗ್ರಂಥಾಲಯ ಎಂಬ ಚಿಕ್ಕ ಪ್ರಕಾಶನದ ಕಮ್ಮಟದಲ್ಲಿ ಹಲವಾರು ಹೊಸ ಲೇಖಕರು ಕಾಣಿಸಿಕೊಂಡರು. ಗ್ರಂಥಕರ್ತರಾಗಿಯೂ ಗೆಲುವು ಗಳಿಸಿದರು. ನಾನು ಅವರ ಹೆಸರು ಹೇಳುತ್ತಿರುವಂತೆ, ಅವರೂ ನನ್ನ ಹೆಸರು ಹೇಳಿಕೊಳ್ಳುತ್ತಿರಬಹುದು. ಅಂಥ ನಮ್ಮ ಬಳಗವು ಈ ದೃಶ್ಯ ಲೋಕದಲ್ಲಿ ಕಾಣಿಸಿಗುವಂತೆ ಅದೃಶ್ಯಲೋಕದಲ್ಲಿಯೂ ಅಡಗಿ ಕೊಂಡಿದ್ದಾರೆ. ಆದರೆ ಅವರು ಸತ್ತಿಲ್ಲ, ಹೆಸರಿನಿಂದ ಉಳಿದಿದ್ದಾರೆ. ಅದಕ್ಕಿಂತ ಅವರು ಬದುಕಿ ಉಳಿದು ಹೆಸರಾಗಿದ್ದಾರೆ.

ನನ್ನ ಹಿರಿಯ ಮಗಳು ಭುವನೇಶ್ವರಿ ಸಣ್ಣಕತೆ, ಕಾದಂಬರಿ ಬರೆದು ಕೊಟ್ಟಿದ್ದಾಳೆ ನಮ್ಮ ಪ್ರಕಾಶನಕ್ಕೆ.

ನನ್ನ ಹಿರಿಯ ಮಗ ವೀರೇಂದ್ರನು, ಲಲಿತ ಪ್ರಬಂಧಗಳನ್ನು ಬರೆಯುವುದರಲ್ಲೂ ಎತ್ತಿದ ಕೈ ಆಗಿದ್ದಾನೆ. "ಯೋಗಾರಂಭ" ಎಂಬ ಗ್ರಂಥವನ್ನು ಇಂಗ್ಲಿಷಿನಿಂದ ಕನ್ನಡಿಸಿದ್ದಾನೆ. ಅದು ಶ್ರೀ ಅರವಿಂದ ಮಹರ್ಷಿಗಳ ಮಹತ್ವದ ಚಿಕ್ಕ ಗ್ರಂಥ.

ನನ್ನ ದ್ವಿತೀಯ ಪುತ್ರ ಈಶ್ವರನು ಬರೆದ ಅರ್ಥಶಾಸ್ತ್ರವನ್ನು ಕುರಿತ ಗ್ರಂಥ ನಮ್ಮ ಪ್ರಕಾಶನದಿಂದಲೇ ಪ್ರಕಟಿಸಲ್ಪಟ್ಟಿದೆ.

ದಿ|| ಎಂ.ಆರ್. ಜಹಗೀರದಾರ ನಿವೃತ್ತ ಮುಖ್ಯಾಧ್ಯಾಪಕ ಎಸ್.ಎಸ್. ಹೈಸ್ಕೂಲ್ ಚಡಚಣ ಅವರು ಶ್ರೀ ಅರವಿಂದ ಹಾಗೂ

ಮಾತೆಯವರ ಪುಸ್ತಕಗಳನ್ನು ಕನ್ನಡಿಸಿದ್ದಾರೆ ಮತ್ತು ನನ್ನ ೪-೬ ಗ್ರಂಥಗಳಿಗೆ ಪಾಂಡಿತ್ಯಪೂರ್ಣ ಮುನ್ನುಡಿಗಳನ್ನು ಬರೆದೊಪ್ಪಿಸಿದ್ದಾರೆ.

ಶ್ರೀ ಗೈಬುಗಲಗಲಿ ಅವರು ಚಡಚಣದಲ್ಲಿ ಸಬ್‌ಪೋಸ್ಟ್ ಮಾಸ್ತರರಾಗಿದ್ದಾಗ "ಭಾಗ್ಯದ ಬದುಕು" ಎಂಬ ಕೃತಿಯನ್ನು ಹಿಂದಿಯಿಂದ ಕನ್ನಡಿಸಿ ಕೊಟ್ಟಿದ್ದಾರೆ. ಅದರ ಮೂಲ ಇಂಗ್ಲಿಷಿನಲ್ಲಿದೆ.

ಶ್ರೀ ಮ.ರೇ. ಹಲಸಂಗಿ ಅವರ ಜಾನಪದ ಜೀವನಕ್ಕೆ ಸಂಬಂಧಿಸಿದ ೨ ಗ್ರಂಥಗಳನ್ನು ನಮ್ಮ ಪ್ರಕಾಶನಕ್ಕೆ ಒದಗಿಸಿದ್ದಾರೆ.

ಇದೆಲ್ಲ ಹೊಸಬೆಳೆ, ಹೊಸ ಕಳೆಯಾದರೂ ಬದುಕಿದ ಹಾಗೂ ಗತಿಸಿದ ಹಳೆ - ಹೊಸ ಸ್ನೇಹಿತರ ಒಲುಮೆಯಿಂದ ನಮ್ಮ ಪ್ರಕಾಶನವು, ಗ್ರಾಮೀಣ ಪ್ರಕಾಶನವಾದರೂ ಇಡಿಯ ಕನ್ನಾಡಿಲ್ಲಿ ಒಂದು ವೈಶಿಷ್ಟ್ಯವನ್ನು ಪಡೆಯುವಂತಿದೆ, ಪಡೆದಂತೆಯೂ ಇದೆ.

ಶ್ರೀಮಾತೆಯವರಿಂದ ಆಶೀರ್ವಾದ ಪಡೆದು ಆರಂಭಗೊಂಡರೂ ನನ್ನ ಅಸಹಾಯಕತೆಯ ಕಾರಣದಿಂದ ಮಂಗಲ ಹಾಡಿದಂತೆ ತೋರಿದರೂ ಅದು ಚಿಗಿತು ಬರುವ ಗಿಣ್ಣುಗಳು ಕಾಂಡದ ತುಂಬ ಕಾಣಿಸಿಕೊಳ್ಳುತ್ತಿದೆ. ಆ ಕೆಲಸವನ್ನು ನನ್ನ ಮಕ್ಕಳಲ್ಲಿ ಯಾರೂ ಮುಂದುವರಿಸುವರೋ ತಿಳಿಯದು. ಈವರೆಗಂತೂ ಈ ಪ್ರಕಾಶನವನ್ನು ಕುರಿತು ಹೇಳಿದ ಮಾತನ್ನು ಶಾಂತ ಕವಿಗಳ ಚುಟುಕಿನಲ್ಲಿ ಕೇಳಿ ತಿಳಕೊಳ್ಳಬೇಕಾಗಿದೆ.

ನಿನ್ನ ವಸ್ತುವಂ ನೋಡು ನೋಡು।
ನಿನ್ನ ವಸ್ತುವಂ ನೋಡು
ಮಮತೆಯ ಮಾಡು
ಸಲೆಕಾಪಾಡು ಗೆಳೆಯಾ।
ನಿನ್ನ ವಸ್ತುವಂ ನೋಡು ನೋಡು॥

ನಿವೃತ್ತ ಶಿಕ್ಷಕ

೪೩. ಮಕ್ಕಳ ಹೆಸರು ಮತ್ತು ಕಾರಣ

ನನಗಾದ ಮಕ್ಕಳ ಪಸಲು ೨ ಹೊಲಗಳಿಂದ ಬಂದುದು.

ಮುಂಚಿನ ಬೆಳೆಗಳಲ್ಲಿ ೩ ಗಂಡು, ೨ ಹೆಣ್ಣು.

ಹಿಂಚಿನ ಬೆಳೆಗಳಲ್ಲಿಯೂ ೩ ಗಂಡು, ೨ ಹೆಣ್ಣು.

ಸೊಲಬವ್ವನ ಹೊಟ್ಟೆಯಿಂದ ಹುಟ್ಟಿದವರಲ್ಲಿ ಚೊಚ್ಚಿಲ ಮಗಳು ಹುಟ್ಟಿದ್ದು. ೧೯೩೩ರಲ್ಲಿ ಆ ಮಗುವಿಗೆ ಭುವನೇಶ್ವರಿ ಎಂಬ ಹೆಸರಿಡಲಾಯಿತು. ಹಂಪೆ ವಿದ್ಯಾರಣ್ಯ ಎಂದರೆ ನನಗೆ ಎಲ್ಲಿಯಿಲ್ಲದ ಉಬ್ಬು. ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರೆನಿಸಿದ ವಿದ್ಯಾರಣ್ಯರು ಅದೆಷ್ಟೋ ಕಾಲ ತಪಶ್ಚರ್ಯ ಮಾಡಿದ ಫಲವಾಗಿ ಒಲಿದು ಬಂದ ದೇವತೆಯೆಂದರೆ ಭುವನೇಶ್ವರಿ. ಆ ಹೆಸರು ಕೇಳಿದರೆ, ನನ್ನ ಮೈಯಲ್ಲಿ ಮಿಂಚಿನ ಹೊಳೆ ತುಳುಕಾಡುವ ಅಂದಿನ ಕಾಲದಲ್ಲಿ ಹುಟ್ಟಿದ ಮಗಳಿಗೆ ಭುವನೇಶ್ವರಿಯೆಂದೇ ಹೆಸರಿಡುವುದು ವಾಸ್ತವಿಕವೆನಿಸಿತು. ಭುವನೇಶ್ವರಿ ಮೂರು ಮಕ್ಕಳ ತಾಯಿ, ೨ ಹೆಣ್ಣು, ಒಂದು ಗಂಡು.

ಮರುಚಲ ಮಗಳು ಹುಟ್ಟಿದ್ದು ೧೯೩೬ ಇಸವಿಯ ಸುಮಾರಿಗೆ. ಅದೇ ಕಾಲಕ್ಕೆ ನಾವು ಗೆಳೆಯರು ರಾಮಕೃಷ್ಣ ಪರಮಹಂಸರ ಶತಮಾನೋತ್ಸವವನ್ನು ಆಚರಿಸಿದ ಸಂದರ್ಭ. ಪರಮಹಂಸರ ನಾಟಕದಲ್ಲಿ ನಾನು ಭವತಾರಿಣಿಯಾಗಿ ಶ್ರೀ ರಾಮಕೃಷ್ಣರಿಗೆ ಬಹು ಸಂಭ್ರಮದಿಂದ ದರ್ಶನವಿತ್ತೆ. ಆ ಹೆಸರು ನಾಲಿಗೆಗೂ ರುಚಿ, ಹೃದಯಕ್ಕೂ ರುಚಿ

ಅನಿಸಿದ್ದರಿಂದ ಆ ಪ್ರಖ್ಯಾತ ದೇವಿಯ ಹೆಸರನ್ನೇ ಮಗಳಿಗೆ ಇಡ ಹೇಳಿದೆನು. ಮಗಳು ಭವತಾರಿಣಿ ನಿಜವಾಗಿ ಭವತಾರಿಣಿಯಾಗಿಯೇ ಕಾಣಿಸುತ್ತಿದ್ದಳು. ಆರುಮಕ್ಕಳ ತಾಯಿಯಾಗಿ ಅವರನ್ನೆಲ್ಲ ಅಗಲಿ ಹೋಗಿದ್ದಾಳೆ. ೪ ಗಂಡು ೨ ಹೆಣ್ಣುಮಕ್ಕಳು.

ಮೂರನೇ ಹೆರಿಗೆಯಿಂದ ಒಂದು ಗಂಡು ಮಗು ಹುಟ್ಟಿತು. ಅದಕ್ಕೆ ಚೊಚ್ಚಿಲಗಂಡು ಎಂದು ಕರೆದೆವು. ಆತನಿಗೆ ಏನೆಂದು ಹೆಸರಿಡುವುದು? ಬಹು ಯೋಚನೆ ಮಾಡಿದ ಬಳಿಕ ವೀರೇಂದ್ರ ಎಂಬ ಹೆಸರಿಡುವುದೆಂದು ನಿರ್ಧರಿಸಲಾಯಿತು.

ನಮ್ಮ ಮನೆದೇವರು ವೀರಭದ್ರ ಮತ್ತು ಗತಿಸಿದ ಅಣ್ಣನ ಹೆಸರೂ ವೀರಪ್ಪ. ಅಷ್ಟರಲ್ಲಿ ಅರವಿಂದ ಮಹರ್ಷಿಗಳ ಸಂಪರ್ಕವುಂಟಾಗಿದ್ದರಿಂದ ಅವರ ತಮ್ಮನ ಹೆಸರಿನೊಳಗಿನ ಇಂದ್ರ ಎಂಬ ಶಬ್ದ ಸೇರಿಸಿ, ವೀರೇಂದ್ರ ಮಾಡಿ ಆತನನ್ನು ಕರೆದೆವು. ಆ ಹೆಸರಿನಲ್ಲೇ ನಮ್ಮ ಮನೆತನದ ಸಂಪರ್ಕಗಳೆಲ್ಲ ಸಮಾವೇಶಗೊಂಡವೆಂದು ಸಮಾಧಾನವೆನಿಸಿತು. ಬೀದರದ ಭೂಮರಡ್ಡಿ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕ, ಇಬ್ಬರು ಮಕ್ಕಳ ತಂದೆ ರೇಖಾ, ಪ್ರವೀಣ ಅವರ ಹೆಸರು.

ನಾಲ್ಕನೇ ಹೆರಿಗೆಯಲ್ಲಿ ೨ನೇ ಗಂಡು ಹುಟ್ಟಿದ್ದು ೧೯೪೩ರಲ್ಲಿ ಅವನ ಜನ್ಮನಾಮ ಈಶ್ವರನೆಂದು ಹೊರಟಿತು. ಸೂಚ್ಯವಾಗಿ ಬಂದ ಆ ಶಬ್ದಕ್ಕಿರುವ ಹಿನ್ನೆಲೆಯನ್ನು ಅರ್ಥಯಿಸಿ ಉತ್ಸಾಹಗೊಳ್ಳುತ್ತಿದ್ದೆ. ಎಲ್ಲ ಪ್ರಾಣಿ ಮಾತ್ರದಲ್ಲಿಯೂ ಈಶ್ವರ ತತ್ವವು ಹಾಸುಹೊಕ್ಕಾಗಿದೆ. ಜಗತ್ತಿನ ಎಲ್ಲ ವಸ್ತುಗಳಲ್ಲಿಯೂ ಈಶ್ವರನು ವಾಸಿಸಿರುತ್ತಾನೆ ಎಂಬ ವಾಕ್ಯಗಳಿಂದ ನನ್ನ ಮನಸ್ಸು ಸ್ಥಿಮಿತಗೊಳ್ಳುವುದರಿಂದ ಮಗುವಿಗೆ ಈಶ್ವರ ಎಂದು ಹೆಸರಿಡಲಾಯಿತು ಚೊಚ್ಚಿಲು ಮರುಚಲಗಳು ಹೆಣ್ಣಾಗಿ ಹುಟ್ಟಿದ್ದರಿಂದ ತುಸು ನಿರುತ್ಸಾಹಗೊಂಡಿರುವಾಗ ವೀರೇಂದ್ರನು ಹುಟ್ಟಿ ಆ ನಿರುತ್ಸಾಹವನ್ನು ಸಂಪೂರ್ಣವಾಗಿ ಕಳೆಯಲಿಲ್ಲ. ಆದ್ದರಿಂದ ತುಂಬ ಆಕರ್ಷಣೀಯವಾದ ಆ ಮಗುವಿನಲ್ಲಿ ಈಶ್ವರಾಂಶವು ಹೆಚ್ಚು ಪ್ರಮಾಣದಲ್ಲಿದೆ ಎಂದು ಭಾವಿಸಿ, ಆ ಹೆಸರು ವಾಸ್ತವಿಕವೆಂದು ನಿರ್ಣಯಿಸಲಾಯಿತು. ಮುದ್ದೇಬಿಹಾಳ

ಕಾಲೇಜಿನಲ್ಲಿ ಪ್ರಾಚಾರ್ಯ, ಎರಡು ಮಕ್ಕಳ ತಂದೆ ಪ್ರಸಾದ ಮತ್ತು ರೋಹಿಣಿ ಮಕ್ಕಳ ಹೆಸರುಗಳು.

ಅಯ್ದನೇ ಹೆರಿಗೆಯಲ್ಲಿ ೩ನೇ ಗಂಡು ೧೯೪೩ರಲ್ಲಿ ಹುಟ್ಟಿತೆಂದು ನೆನಪು. ಅವನು ಹೊಟ್ಟೆಯಲ್ಲಿದ್ದಾಗ ಸೂರ್ಯನ ವಿಷಯವಾಗಿ ಹೆಚ್ಚಿನ ಆಸಕ್ತಿ ಹುಟ್ಟಿತ್ತೆಂದು ಹೇಳಬಹುದು. ಸೂರ್ಯನಮಸ್ಕಾರ, ವ್ಯಾಯಾಮ ನನಗೆ ಅತಿಪ್ರಿಯವಾದದ್ದು, ಜಗತ್ತಿನಲ್ಲಿ ಕವಿ ನೆರಳಿಲ್ಲದೆ ಯಾವುದಾದರೂ ವಸ್ತುವಿದ್ದರೆ ಅದು ರವಿಯೇ ಸೈ. ಶ್ರೀ ಕೃಷ್ಣನ ಬಾಯಿಂದ ಮೊಟ್ಟಮೊದಲು ಗೀತೆಯನ್ನು ಆಲಿಸಿದವನು ಸೂರ್ಯನಂತೆ. ಅಂದಿನಿಂದ ಇಂದಿನವರೆಗೆ ಫಲಾಪೇಕ್ಷೆಯಿಲ್ಲದೆ ಕರ್ತವ್ಯ ಕರ್ಮ ಮಾಡುತ್ತ ಬಂದಿದ್ದರಿಂದ ಅವನು ಅಷ್ಟು ತೇಜಸ್ವಿಯಾಗಿದ್ದಾನೆ. ಅಂಥವನ ಹೆಸರು ನನ್ನ ಮಗುವಿಗೆ ಇಡಲೇ ಬೇಕೆಂದು ಯೋಚಿಸಿ, ಅವನನ್ನು ಸೂರ್ಯನೆಂದು ಕರೆದವು. ಸದ್ಗುಣ ಸಂಪನ್ನವಾದ ಆ ಮಗು ೪ ವರ್ಷ ಮಾತ್ರ ಬದುಕಿ ತನ್ನ ನಾಡಿಗೆ ತೆರಳಿದನು.

ಇನ್ನು ಹಿಂಚಿನ ಬೆಳೆಗಾಲದ ಪಸಲು.

ಚೊಚ್ಚಿಲ ಮಗಳು ಮಹಾದೇವಿ, ಅಕ್ಕಮಹಾದೇವಿಯ ಚರಿತ್ರೆಗೆ ಬೆರಗಾದ ನಾವು ಆ ಮಗಳಿಗೆ ಮಹಾದೇವಿಯೆಂದೇ ಹೆಸರಿರಲಿ ಎಂದೆನು. ಅಕ್ಕಮಹಾದೇವಿ ಕದಳಿ ಬನವನ್ನು ಪ್ರವೇಶಿಸಿದವಳು ಮರಳಿ ಬರಲಿಲ್ಲ. ಇಡಿಯ ಜನ್ಮವೂ ಸಾಧನೆಯಲ್ಲಿಯೇ ಕಳೆಯಿತು. ಲೋಕಸೇವೆ, ಜನೋದ್ಧಾರ ಮಾಡುವ ಕೆಲಸ ಉಳಿದೇ ಬಿಟ್ಟಿತು. ಅದನ್ನು ಪೂರಯಿಸುವ ಸಲುವಾಗಿ ಮಹಾದೇವಿಯಕ್ಕ ಹುಟ್ಟಿಬರುವುದು ಅನಿವಾರ್ಯ ಅನಿಸಿತು ನನಗೆ. ಆ ಭರವಸೆ ಸತ್ಯವಾಗುವ ಕಾಲ ಬಂದಾಗ ಬರಲಿ, ಅಲ್ಲಿಯವರೆಗೆ ನಮ್ಮ ಮಗಳೇ ಅಕ್ಕಮಹಾದೇವಿ ಎಂದು ತಿಳಿಯುವ ಸಲುವಾಗಿ ಆ ಹೆಸರು ಇಡಲಾಯಿತು. ಮಗಳು ಮಹಾದೇವಿ ೨ ಸಾರೆ ಪಾಂಡಿಚೇರಿಯ ಯಾತ್ರೆ ಮಾಡಿ ಶ್ರೀಮಾತೆಯ ಸ್ಪರ್ಶವನ್ನು ಗಳಿಸಿಕೊಂಡವಳೀಕೆ, ಮೂರು ಮಕ್ಕಳ ತಾಯಿ, ೧ ಗಂಡು ೨ ಹೆಣ್ಣು.

ಮರುಚಲ ಮಗಳು ಸರೋಜಿನಿ, ಮಹಾದೇವಿಗಿಂತ ೨ ವರ್ಷ ಚಿಕ್ಕವಳು, ನೋಡುವುದಕ್ಕೆ ಕೋಮಲ ಎತ್ತಿಕೊಳ್ಳುವುದಕ್ಕೆ ಸೂಕ್ಷ್ಮ ಆಗಿರುವ ಈ ಕೂಸು ನಿಜವಾದ ಸರೋಜಿನಿಯೇ ಸೈ. ಸರೋಜಿನಿನಾಯಡು ಕವಿ ಕೋಗಿಲೆಯೆನಿಸಿದವಳು. ನಮ್ಮ ಈ ಬಡವರ ಮನೆಯಲ್ಲಿ ಮೈದಾಳಿ ಬಂದ ಈ ಪುಷ್ಪವು ಕವಿಯಾಗಿರದಿದ್ದರೂ ಕೋಗಿಲೆಯಾಗಿ ಕೂಗಿ, ಮನೆಯವರನ್ನೆಲ್ಲ ಸಂತಸದಲ್ಲಿ ಮೀಯಿಸಲೆಂಬ ಆಕಾಂಕ್ಷೆಯಿಂದ ಆಕೆಗೆ ಸರೋಜಿನಿ ಎಂಬ ಹೆಸರಡಿಲಾಗಿದೆ. ಆಕೆಯ ಶರೀರ-ದನಿಗಳಂತೆ ಮನಸ್ಸೂ ಕೋಮಲ. ಆಕೆ ಈಗ ಕಲಬುರ್ಗಿಯ ಭೈರಾಮಡಗಿ ಎಂಬ ಶ್ರೀಮಂತ ಮನೆತನದ ಸೊಸೆಯಾಗಿ ೨ ಮಕ್ಕಳ ತಾಯಿಯಾಗಿದ್ದಾಳೆ. ೧ ಗಂಡು, ೧ ಹೆಣ್ಣು. ಹೀಗೆ ಎರಡು ಮೂರನೇ ಹೆರಿಗೆಯಲ್ಲಿ ತನ್ನ ಅಣ್ಣಂದಿರಿಗೆ ಸಂಪೂರ್ಣವಾಗಿ ಒಪ್ಪುವ ಮೈಕಟ್ಟು, ವಿದ್ಯೆ, ಸಂಗಳಿಸಿ ಚೊಚ್ಚಿಲ ಗಂಡು ಹುಟ್ಟಿತು. ಅವನು ಜನ್ಮ ತಳೆಯುವ ಮೊದಲೇ ಒಬ್ಬ ಮಹನೀಯರು ಕನಸಿನಲ್ಲಿ ಬಂದಂತಾಗಿ, ರಾಜೀವ ಬಂದ ರಾಜೀವ ಎಂದು ಕೈಮಾಡಿ ಹೇಳಿದಂತಾಯಿತು. ರಾಜ, ರಾಜೇಶ್ವರ, ರಾಜಶೇಖರ ಮೊದಲಾದ ಹಳೆಯ ರೂಪಗಳನ್ನು ತೊಡೆದು ಹಾಕಿ ರಾಜೀವ ಎಂಬ ಅಚ್ಚ ಹಾಗೂ ಸುಗಮ ಹೆಸರಿಡಲಾಗಿದೆ ಎಂ.ಎ. ಮುಗಿಸಿದ ಈತನು ಚಡಚಣದ ಎಸ್.ಎಸ್. ಕಾಲೇಜಿನಲ್ಲಿ ಅರ್ಥಶಾಸ್ತ್ರದ ಅಧ್ಯಾಪಕನಾಗಿದ್ದಾನೆ ಮತ್ತು ೨ ಮಕ್ಕಳ ತಂದೆ ಆಗಿದ್ದಾನೆ. ಹೆಸರು ಪ್ರಫುಲ್ಲ ಮತ್ತು ಹರ್ಷ.

ನಾಲ್ಕನೇ ಹೆರಿಗೆಯಲ್ಲಿ ಮರುಚಲಗಂಡು ಅರಣದೋಯದರುಣ ದ್ಯುತಿಯನ್ನು ಮುಂದೆ ಮಾಡಿಕೊಂಡು ಬಂದಿದ್ದರಿಂದ ಹಾಗೂ ಅಂದಿನಿಂದ ಆರಂಭವಾಗುವ ಹೆಸರುಳ್ಳವರು ವಿಖ್ಯಾತ ಜೀವಿಗಳಾಗುವರೆಂದು ಪ್ರತೀತಿಯಿರುವುದರಿಂದ ಆತನಿಗೆ ಅರುಣ ಎಂದು ನಾಮಕರಣ ಮಾಡಲಾಯಿತು. ಬಿ.ಇ. ಪದವಿ ಗಳಿಸಿದ ಇಂಜಿನೀಯರ್, ಕಳೆದ ವರ್ಷ (೧೯೮೭) ಲಗ್ನವಾಯಿತು. ಈಗವನು ಒಬ್ಬ ಗಂಡು ಮಗುವಿನ ತಂದೆ. ಮಗುವಿನ ಹೆಸರು ವಾರೀಂದ್ರ ಎಂದು ಇಡಲಾಗಿದೆ. ಶ್ರೀ ಅರವಿಂದ ಮಹರ್ಷಿಗಳಿಗೆ ಆಧ್ಯಾತ್ಮಿಕ ದಾರಿಗೆ ತಂದು ಹಚ್ಚುವ ಕೆಲಸ ಮಾಡಿದ

ವಾರೀಂದ್ರ ಕುಮಾರ ಎಂಬ ಬಂಧುವಿದ್ದನು. ಆ ಹೆಸರೇ ಈಗ ಅರುಣನ ಮಗನಿಗೆ ಇಡಲಾಗಿದೆ.

ಐದನೇ ಹೆರಿಗೆಯಲ್ಲಿ ೩ನೇ ಗಂಡು, ೨ ಸಾವಿರ ವರುಷಗಳ ಹಿಂದೆ ಉತ್ತರ ಭಾರತದಲ್ಲಿ ಜಗದ್ವಿಖ್ಯಾತ ರಾಜನಾಗಿ, ಆಮೇಲೆ ಅತ್ಯುಚ್ಚಮಟ್ಟದ ಧರ್ಮಸಾಧಕನಾಗಿ ಹೋದ ಅಶೋಕನನ್ನು ಪ್ರಿಯದರ್ಶಿ ಅಶೋಕನೆನ್ನುತ್ತಿದ್ದುದು ಸರ್ವಶ್ರುತವಷ್ಟೇ? ಅದರೊಳಗಿನ ಪ್ರಿಯದರ್ಶಿ ಎಂಬುದನ್ನು ಮಾತ್ರ ಇರಿಸಿಕೊಂಡು. ಆ ಹೆಸರು ಪಡೆದವನೇ ಪ್ರಿಯದರ್ಶಿ. ಅವನೇ ನನಗೆ ೫ನೇ ಮಗ. ಬಿ.ಇ. ಮುಗಿಸಿ ಪಾಲಿಟೆಕ್ನಿಕ್ ಕಾಲೇಜಿನ ಅಧ್ಯಾಪಕನಾಗಿದ್ದಾನೆ. ಬಾಗಲಕೋಟೆ ನಗರವಾಸಿ.

೪೪. ಜನಪದ ಸಾಹಿತ್ಯ ಜೀವನಗಳ ಸೊಗಡು

ನಾನು ವಾಸಿಸಿದ್ದು ಹಳ್ಳಿಯಲ್ಲಿ, ಹುಟ್ಟಿದ್ದು ಬಡವರ ಮನೆಯಲ್ಲಿ, ನಾವಿರುವ ಓಣಿ ತಳವಾರದು. ತಾಯಿ ಮಾತ್ರ ವಿಜಾಪುರದಾಕೆ. ಹೆಸರು ಸಾವಿತ್ರಿ. ಮನೆಯಲ್ಲಿ ಕರಡಿಮಜಲಿನ ತರಬೇತಿ ನಡೆಯುವದು. ಸಾಯಂಕಾಲ ಭಜನೆ ಪದ ಕೇಳಲು ಸಿಕ್ಕುವವು. ಅಪ್ಪನು ಶಿವಯೋಗಿ ಆದರೆ ದಕ್ಷಬ್ರಹ್ಮನ ಪಾತ್ರವನ್ನು ಸಫಲವಾಗಿ ನಿರ್ವಹಿಸಬಲ್ಲನು. ಬಯಲಾಟದ ಅಟ್ಟದ ಮೇಲೆ ಕಂಡ ದಕ್ಷಬ್ರಹ್ಮನೆನಿಸಿದಂತೆ ದಿನನಿತ್ಯದ ವ್ಯವಹಾರಗಳಲ್ಲಿಯೂ ನಮ್ಮ ತಂದೆ ದಕ್ಷನೆಂದೇ ಸಂಬೋಧಿಸಲ್ಪಡುತ್ತಿದ್ದನು. ಅವನು ಬಣ್ಣಗಾರಿಕೆಯ ಕೊಡ ಹೊತ್ತಾಗಲೂ ಬಾಯಲ್ಲಿ ಗುಣುಗುಣು ಮಂತ್ರ ನಡೆಯುವುದೇ. ಅದರಲ್ಲಿ ಬೆರಳುಗಳಿಂದ ಕೊಡದಮೇಲೆ ತಾಳ ಕಟ್ಟುವುದೇ.

ಗಣೇಶನನ್ನು ಕಳಿಸಿಕೊಡುವ ಸಮಾರಂಭವು ಬಹು ವಿಜೃಂಭಣೆಯಿಂದ ನಡೆಯುತ್ತಿದ್ದ ಆ ಕಾಲ, ಕರಡಿಮಜಲಿನ ವಾದ್ಯ, ಕೊರವರ ಜೋಡು ಸನಾದಿಸ್ವರಮೇಳ ಬಯಲು ಲಾವಣಿಕಾರರ ಗತ್ತಿನ ಹೆಜ್ಜೆ ಇವೆಲ್ಲವುಗಳ ಸಮಾಗಮವನ್ನು ಆ ಕಾಲಕ್ಕೆ ಒತ್ತಟ್ಟಿಗೆ ನೋಡಲು ಸಿಗುತ್ತಿತ್ತು.

ಊರಿನ ಚೌಕದಲ್ಲಿ ಉತ್ಸವವು ಅರ್ಧತಾಸು ತಡೆದು ನಿಂತು, ಕರಡಿ ಮಜಲಿನವರ ಬಯಲುಗತ್ತು ಕೇಳಿಸುವರು, ತರುವಾಯ ಸಾಮಾಜಿಕರಿಗೆ ಬಯಲು ಲಾವಣಿ ಕೇಳಿಸಲಾಗುತ್ತಿತ್ತು.

ಅಷ್ಟೂರ ಮಾತಿದು ನಿಷ್ಠೂರ ಹೇಳತೀನಿ
ಬಿಟ್ಟಿಲ್ಲ ತುಂಬಿತ್ತು ಜಗವೆಲ್ಲಾ ।
ಹೊಟ್ಟಿಯಂಥ ವೈರಿ ಯಾವೂದಿಲ್ಲಾ
ರೊಟ್ಟಿಯಂಥ ಮೈತರು ಇಲ್ಲ ॥

ಊರತುಂಬ ಸಣ್ಣದೊಡ್ಡ ಸರ್ವರಿಗೆಲ್ಲಾ ಹೇಳತೀನಿ
ನಿನ್ನಕಡಿಸನ್ನ ಮೊದಲ ಮಾಡಿಕೊಂಡುಕೇರಾ ।
ಬಾರಾ ತೇರಾ ವರ್ಷದಾಗ ಆಗಬೇಕುಂತಾರ ದೊಡ್ಡ ಹಿರಿಯರಾ।
ಕೂಲೀಗ್ಹೋಗುದು ಬಿಟ್ಟು । ಕಟ್ಟೀಗಿ ಕುಂತು । ಮಾಡ್ತಾರ ಕಾರಭಾರಾ ॥

ಲಾವಣಿ ಮುಗಿದ ಮೇಲೆ ಒಂದು ಖ್ಯಾಲಿ

ನೀರಜಾಕ್ಷೀ ಬಾರಸ್ಯಾತಕೋ ಪ್ರಿಯಾ ।
ಕರೆತಾರೇ ಮುಗಿಯುವೆನು ಕಯ್ಯಾ ॥

ಎಂದು ಕುಣಿತದಲ್ಲಿ ಹಾಡಿ ಮುಗಿದ ಬಳಿಕ, ಸನಾದಿಯವರ ಬಾಯಲ್ಲಿ ಕೊಡುವುದಕ್ಕಾಗಿ ಸುಗಮಧಾಟಿಯ ಪಲ್ಲವಿ ಹಾಡುವ ವಾಡಿಕೆ.

ಮಾತಾಡಬಾರದೇನೋ ಮಾರಮಣಾನೇ
ಮಾತಾಡಬಾರದೇನೋ
ಮಾತಾಡದಿದ್ದರೆ ನಾ ತಾಳಲಾರೆನೋ ॥

"ನೀರಜಾಕ್ಷೀ ಬಾರಸ್ಯಾತಕೊ ಪ್ರಿಯಾ" ಎಂಬ ಪಲ್ಲವಿಯ ಧಾಟಿ ಹಿಡಿದು, ಸನಾದಿಯವನು ಊದಲು ಆರಂಭಿಸುತ್ತಲೆ, ಡೊಳ್ಳಿನವರು ತಾಳಿನವರು ಎದ್ದವರೇ ಆವೇಶದಿಂದ ಮುಕ್ತಾಯ ಪೆಟ್ಟು ಕೊಡುವರು. ಆಗ ಕರಡಿಯವನು ವೀರಗಾಲು ಹಾಕಿ, ಗುಡುಗುಡಿಸಿ, - 'ಧಿತ್ತಾಕಿ ಧಿನ್ನಾ ದಿಡದಿಡದಾ! ಧಿತ್ತಾಕಿ ಧಿನ್ನಾ ದಿಡದಿಡದಾ! ಧಿತ್ತಾಕಿ ಧಿನ್ನಾದಿಡದಿಡದಾ' ಎಂಬ ಮುಕ್ತಾಯ ಹಾಕಿ, ತಾಳಿನವನನ್ನು ದುಗುಡದಲ್ಲಿ ನೂಕುವನು. ಆಗ ಮಜಲಿನ ಉತ್ಸಾಹ ಕುಣಿತವು ನೋಡತಕ್ಕಂಥದಾಗಿರುತ್ತದೆ.

ಅಂದಿನ ಕಾಲದ ಹಳ್ಳಿಗಳೆಂದರೆ, ಕಥಾಗೋಷ್ಠಿಯ ಬೀಡು ಆಗಿದ್ದವು, ಒಡಪು ಹೇಳಿ ಬುದ್ಧಿ ಕೆಣಕುವ ಮೋಡಿ ಆಗಿದ್ದವು. ಹೆಜ್ಜೆ ಹೆಜ್ಜೆಗೊಂದು ಗಾದೆ ಮಾತು ಕೇಳಿಸುತ್ತಿತ್ತು. ಮಾತು ಮಾತಿಗೊಂದು ಪಲ್ಲವಿಸುತ್ತಿತ್ತು.

ಆಯವ್ವ ನಿನ್ನ ನಾಲೀಗಿ ಮ್ಯಾಲ ನೂರೊಂದು ಭೇಗಳ ಕಟ್ಟ್ಯಾವ ।
ಆಯವ್ವ ನಿನ್ನ ತಲೀಯಮಾಲ ಮರಗವ್ವದುರಗವ್ವ ನಟ್ಟಾವ ॥

ಬುಡಬುಡಕ್ಯಾನ ಮಾತು ಬುಡತನಕ ಸುಳ್ಳು
ಖರೆ ಹೇಳುವವ ಖರೆಖರೆ ಮುಂಡ್ಯಾ
ಸುಳ್ಳು ಹೇಳುವವ ಸುಡುಗಾಡ ಸಿದ್ದ ॥

ಮೊದಲಾದ ಪ್ರಾಸ ಗೀತಗಳು ಶಿಶುಗೀತಗಳಾಗಿ ಪರಿಣಮಿಸಿದ್ದವು.

ಶೈಶವ, ಬಾಲ್ಯ, ತಾರುಣ್ಯ, ಯುವಾವಸ್ಥೆ ಅವು ಕ್ರಮವಾಗಿ ನಾಲ್ಕು ಯುಗಗಳಿದ್ದ ಹಾಗೆ. ಶೈಶವ ಸತ್ಯಯುಗದ ಕುರುಹು, ಅಲ್ಲಿ ಅಂತರಾತ್ಮನ ಆಳಿಕೆ ಗೋಚರಿಸುವದು. ಬಾಲ್ಯ ತ್ರೇತಾಯುಗವಿದ್ದಂತೆ, ಅಲ್ಲಿ ಬುದ್ಧಿಯ ಸರ್ವಾಧಿಕಾರ. ತಾರುಣ್ಯ ದ್ವಾಪರಯುಗದ ಪ್ರತಿನಿಧಿ, ಪ್ರಾಣಪ್ರಾಣಗಳ ಸೆಣಸಾಟ ನಡೆಯುವದು. ಬುದ್ಧಿ ಹೇಳುವವರ ಕೂಡ ಗುದ್ದಾಡುವ ಸಂದರ್ಭ. ಇನ್ನು ಯುವಾವಸ್ಥೆ ಕಲಿಯುಗದ ಕೌದಿ, ನೀತಿಗೂ ಕಿವಿಗೊಡದೆ, ಏಟಿಗೂ ಹೇವಬಿಡದೆ ಹತ್ತು ಆಡಿದರೆ ತನ್ನ ಎತ್ತಿಗಾಡಿದರೆಂದೂ, ನೂರು ಆಡಿದರೆ ತನ್ನ ಹೋರಿಗಾಡಿದರೆಂದೂ ಭಾವಿಸಬಲ್ಲ ಸುಮ್ಮಾನದ ಕಾಲ.

ಈ ಚತುರ್ಯುಗಗಳು ಜನಪದಕ್ಕೆ ಆಯಾ ಕಾಲದ ಹವಾಮಾನಕ್ಕೆ ತಕ್ಕ ಹಾಗೆ ತಿನಿಸು ನೀಡಿ, ಹೊದಿಕೆ ಹೊದಿಸುವದು. ಸಾಹಿತ್ಯವಿದ್ದಲ್ಲಿ ಜೀವನ, ಜೀವನವಿದ್ದಲ್ಲಿ ಸಾಹಿತ್ಯ. ಹಾಗಿಲ್ಲದ ಜೀವನವಾಗಲಿ ಸಾಹಿತ್ಯವಾಗಲಿ ಒಂದೇ ಕಡೆಯಲ್ಲಿ ಮುದ್ರಿತವಾದ ನಾಣ್ಯವಿದ್ದಂತೆ. ಅದು ಎಲ್ಲಿಯೂ ನಡೆಯದು. ಕೊನೆಗೆ ಅಕ್ಕಸಾಲೆಯ ಕಡೆಗೆ ಹೋಗಿ ಕರಗಿ ಬೇರೆ ಆಕಾರ ತಳೆಯಬೇಕು.

ಜನಪದ ಜೀವನದಲ್ಲಿ ಸಾಹಿತ್ಯವು ಹಾಸುಹೊಕ್ಕಾದಂತೆ ಸಾಹಿತ್ಯದಲ್ಲಿ ಜನಪದ ಜೀವನವು ಬಣ್ಣವಾಗಿ ಕಂಗೊಳಿಸುತ್ತದೆ. ಜೀವನಕ್ಕೆ ಸಾಹಿತ್ಯವು ಒಮ್ಮೆ ನೆರಳಾದರೆ, ಸಾಹಿತ್ಯಕ್ಕೆ ಜೀವನವು ಇನ್ನೊಮ್ಮೆ ಛಾಯೆ ಆಗುತ್ತದೆ. ಒಬ್ಬ ಸೂರ್ಯನಿಗೆ ಒಂದೇ ಪ್ರತಿಬಿಂಬವೆನ್ನುವುದು ಲೆಕ್ಕಾಚಾರವಾಯಿತು. ಆದರೆ ಅದೇ ಒಬ್ಬ ಸೂರ್ಯನು ನೂರಾರು ಕನ್ನಡಿಗಳಲ್ಲಿಯೂ ಪ್ರತಿಬಿಂಬಿಸುತ್ತಾನೆ.

ಜೀವನಕ್ಕೆ ಸಾಹಿತ್ಯವು ಸಂಗಾತಿಯಾಗಿದೆ. ಸಾಹಿತ್ಯವು ಒಮ್ಮೆ ಹಾಡುತ್ತದೆ, ಇನ್ನೊಮ್ಮೆ ಕಥಿಸುತ್ತದೆ, ಮತ್ತೊಮ್ಮೆ ಸಮಸ್ಯೆಯಾಗಿ ನಿಲ್ಲುತ್ತದೆ. ಮಗುದೊಮ್ಮೆ ಕುಣಿಕುಣಿದು ಕೇಕೆ ಹಾಕುತ್ತದೆ.

ನಗುವಾಗ ಹೇಳುವ ಹಾಡುಗಳಿದ್ದಂತೆ, ಹಾಡಿಹಾಡಿಕೊಂಡು ಅಳುವ ಹಾಡುಗಳಿವೆ. ಬಿಕ್ಕಿಗನಿಗೂ ಹಾಡು ಬೇಕು, ಬೆಕ್ಕಸಿಗನಿಗೂ ಹಾಡು ಬೇಕು.

ಗಂಡ ಹೇಳಿದ ಮಾತ ಕೊಂಡಾವನಾರವ್ವ
ಗಂಡನಿನ ಮ್ಯಾಲ ಬಲು ಜೀವ ॥
ಎಂದು ಭಿಕ್ಷುಕರು ಮನೆಯೊಡತಿಯನ್ನು ಒಲಿಸಿಕೊಳ್ಳುವಂತೆ
ಅರರೇ, ಎನ್ನಯ ಸಮಾನರಾರು
ಧರಣೀತಳದೊಳಗೇ ॥

ಎಂದು ಸಿರಿವಂತಿಕೆಯು ಹೆಡಕು ಎತ್ತರಿಸಿ ಕೋಳಿಯಂತೆ ಕೂಗು ಹಾಕುತ್ತದೆ.

ನಮ್ಮನ್ಯಾಗ ನಾವಿದ್ದೆವು । ನಿಮ್ಮನ್ಯಾಗ ನೀವಿದ್ದಿರಿ
ಯಾಕ ಕರೆಸಿದಿರಿ । ಯಾಕ ಕರೆಸಿದಿರಿ ಟಕ್‌ಟಕ್

ಎನ್ನುತ್ತ ಜಾತಗಾರನು ತಲೆವಾಗಿಲಲ್ಲಿ ಬಂದು ನಿಂತು, ಮನೆಯವರ ಲಕ್ಷ್ಯವನ್ನೆಲ್ಲಾ ಸೆಳೆದು, ಒಂದು ತುತ್ತು ರೊಟ್ಟಿ, ಇಲ್ಲವೆ ಒಂದು ಹಿಡಿ ಜೋಳ ನೀಡಿಸಿಕೊಂಡು ಮುಂದಿನ ಮನೆಗೆ ಸಾಗುವನು.

ಅಲ್ಲಿಯವರನ್ನು ಎಚ್ಚರಿಸುವ ಬಗೆಯೇ ಬೇರೆ -
ಜಲ್ದಿ ನೋಡಿಕೋರೋ ನೀ ಬಂದೀ ಎಲ್ಲಿ?
ಮುಂದ ಹೋಗೂದೆಲ್ಲಿ?

ಇಂಥ ಘನ ಸಮಸ್ಯೆಯನ್ನು ಕಿವಿಯಿಂದ ಈಂಟಿಸಿ, ತಲೆಯಲ್ಲಿ ತುಂಬುವನು. ಅದು ಬಹು ದಿನವೋ ಬಹುಕಾಲವೋ ನೆಲೆಯಾಗಿ ನಿಂತು ಕೈತಿರುಹಿ ನಮ್ಮನ್ನು ಕೇಳುತ್ತದೆ -

ನೀವೆಲ್ಲಿ ಆಡಿಬಂದ್ರೀ?
ನೀವೆಲ್ಲಿ ಹೋಗಿಬಂದ್ರೀ?
ನೀವೇನು ಮಾಡಿಬಂದ್ರೀ?
ಏನೇನು ಕೊಂಡು ತಿಂದ್ರೀ?
ಹಾದ್ಯಾಗ ಏನು ಕಂಡ್ರೀ?
ಇನ್ನೇನು ಮಾಡಬಂದ್ರೀ?

ನಿಜವಾದ ಜೀವನವು ಇಂಥ ಸಾಹಿತ್ಯವು ಗಮನಿಸದೆ ಇರಲು ಸಾಧ್ಯವೇ ಇಲ್ಲ.

ಇಲ್ಲಿ ಕೇಳಿರಿ ಈ ಸಂವಾದವನ್ನು -

ಮಿಂಡೀಹುಡಿಗಿ ನಿನ್ನ ಗಂಡ
ಏನ್ ಮಾಡ್ತಾನ?
ಕಂಡುಕೊಂಡ ವಿದ್ಯಾನೆಲ್ಲ
ಹೇಳಿತಿಳಸತಾನ ॥

ಮಕ್ಕಳ ಸ್ಕೂಲ್ ಮನೇಲಲ್ಲವೇ - ಎಂದು ಕೈಲಾಸಂ ಹೇಳಿದರೆ ಮಿಂಡೆ ಹುಡಿಗೆಯರಿಗೂ ಮನೆ ಶಾಲೆಯಾಗಬಲ್ಲದು. ಅದೇಕೆ, ಆಗದೇ ಬಿಟ್ಟಿಲ್ಲ. ಅತ್ತ ನಾವು ಲಕ್ಷಿಸಿಯೇ ಇಲ್ಲ.

ಈ ಕೆಳಗಿನ ಹಾಡು ಶ್ರೀಮಂತರು ಹಾಡಿದ್ದೋ ಬಡವರು ಹಾಡಿದ್ದೋ? ಸುಖಿಗಳು ಮಾತ್ರ ಹಾಡಿದ್ದೋ, ದುಃಖಿಗಳೆಲ್ಲ ದೂರ ದೂಡಿದ್ದೋ? ಹೇಳಲು ಸಾಧ್ಯವೇ?

ಜಾತ್ರೀಗಿ ಹೋಗೂಣಂತ। ಜಾತ್ರೀಗಿ ಹೋಗೂಣಂತ ॥
ಜಾತ್ರೀಗ್ಹೋಗೂಣಂತ ಮಾಡಗಿಲಮಿಂಚಿ ।
ನೀಎಳ್ಳ ಹಚ್ಚಿ ಬುತ್ತಿ ಕಟ್ಟಿ ಸಜ್ಜೆರೊಟ್ಟಿ ॥
ಹುಳಿಬಾನದ ಗಂಟು ಅದು ಬ್ಯಾರೀ
ಅದು ನಾಳೀಗಿ ಮಾಡೂದು ನ್ಯಾರೀ ॥

ಜಾತ್ರೆಗೆ ಹೋಗುವ ಉತ್ಸಾಹದಲ್ಲಿ ಅಷ್ಟೇ ಅಲ್ಲ, ಹೆಂಡತಿಯೊಂದಿಗೆ ಜಾತ್ರೆ ಮಾಡುವ ಮಹೋತ್ಸವದಲ್ಲಿ ಆಡಿದ ಮಾತುಗಳಾದರೂ ಅವು

ಅಡಿಗೆಯ ವೈವಿಧ್ಯವನ್ನು ಹೇಳಿಕೊಡುತ್ತವೆ. ತಾಳಿಕೆ-ಬಾಳಿಕೆಗಳನ್ನು ಸೂಚಿಸುತ್ತವೆ.

ಹೆಂಡತಿಯೊಡನೆ ಜಾತ್ರೆಗೆ ಹೊರಡುವುದಾಗಲಿ, ಹೊಲಕ್ಕೆ ಹೊರಡುವುದಾಗಲಿ ಸೊಗಸಿನ ವಿಷಯ. ಆ ವಿಷಯವನ್ನು ಹಾಡಿನಲ್ಲಿ ಬೆರೆಸಿದ್ದಾನೆ, ಆವಾಗ ಅದು ವಿಷವಿದ್ದುದು ವಿಷಯಾ ಆಗುತ್ತದೆ.

ರೊಟ್ಟೀ ಮಾಡ ಬೆಳ್ಳಾಗ
ಕೆತ್ತಿತಗೀ ತೆಳ್ಳಾಗ
ಬ್ಯಾಳೀಗ್ಹಾಕು ಕುಳ್ಳ್ಯಾಗ
ಚಟ್ನಿ ಕುಟ್ಟು ಒಳ್ಳಾಗ ।
ಹಾಕ ಬಳ್ಳೊಳ್ಳಿ ॥

ಹೊಲದ ಪ್ರವಾಸ, ಹೆಂಡತಿಯ ಜೊತೆ ರೊಟ್ಟಿ, ಬೇಳೆ, ಬಳ್ಳೊಳ್ಳಿ ಚಟಣಿಯ ಸೊಗಸು ಇವುಗಳ ಮೇಳನವು ಸಾಹಿತ್ಯಕ್ಕೆ ಸೊಬಗು ನೀಡಿದಂತೆ ಜೀವನಕ್ಕೆ ಬೆಡಗೂ ನೀಡುತ್ತದೆ.

ಬಹುಜನರು ಸತ್ತ ಮೇಲೆ ಸುಖಕಾಣುವ ಜೀವವಿಮೆಯನ್ನೇ ಇಳಿಸುತ್ತಾರೆ. ಇಲ್ಲಿ ಸುಖ, ಅಲ್ಲಿ ಲೇಸು ನೀಡುವ ಜೀವನವನ್ನು ಒಲ್ಲಗಳೆಯುತ್ತಾರೆ. ಆದರೆ ಸಾಮಾನ್ಯನ ಅಥವಾ ಬಡವನ ಬಾಳು ಒಂದು ಒಗಟನಂತಿರುತ್ತದೆ.

ಇಲ್ಲಿಯೂ ಬುಳುಬುಳು। ಅಲ್ಲಿಯೂ ಬುಳುಬುಳು
ಕಲ್ಯಾಣದ ತನಕ ಬುಳುಬುಳು ॥

ನಾನು ಜೀವನವನ್ನಾಗಲಿ ಸಾಹಿತ್ಯವನ್ನಾಗಲಿ ಒಂಟಿಒಗೆತನವೆಂದು ತಿಳಿದಿಲ್ಲ. ಸಾಹಿತ್ಯವಿಲ್ಲದ ಜೀವನ ನನಗೆ ಬೇಡವಾದಂತೆ, ಜೀವನಕ್ಕಾಗದ ಸಾಹಿತ್ಯವೂ ಬೇಡವಾಗಿದೆ.

ಜನಪದ ಸಾಹಿತ್ಯದ ಸೇವೆಯೆಂದು, ಜನಪದ ಜೀವನವನ್ನು ತಳ್ಳಿ ಹಾಕುತ್ತಿರುವೆವೋ ಎಂಬ ಸಂಶಯ ಬರುತ್ತಿದೆ. ಆದ್ದರಿಂದ ಜನಪದಕ್ಕೆ

ಒಪ್ಪುವ ಸಾಹಿತ್ಯವು ನನಗೆ ಪ್ರಿಯವಾಗಿರುವಂತೆ ಸಾಹಿತ್ಯವನ್ನು ಅಪ್ಪುವ ಜನಪದವು ನನಗೆ ಅತಿಪ್ರಿಯವಾಗಿದೆ. ಜನಪದವೋ ಧ್ರುವಪದವೋ? ಶಾಶ್ವತಸ್ವರೂಪವೇ ಧ್ರುವಪದವಾದಂತೆ ಜನಪದವೂ ಆಗಬೇಕಾಗಿದೆ.

ಮೈಮನ ಮಾತುಗಳೆಲ್ಲ ನಮ್ಮ ಜನಪದವನ್ನು ಪ್ರತಿನಿಧಿಸುವಂತಾಗ ಬೇಕೆಂದು ನಾನು ಭಾವಿಸಿದ್ದೇನೆ. ನಮ್ಮ ಜನಪದ ಆದ್ಯಗುರು, ಈ ಮೈಮನ ಮಾತುಗಳನ್ನು ತಾನು ಅಳವಡಿಸಿಕೊಂಡಿದ್ದಾನೆ. ಆ ಆದ್ಯಗುರು ಸತ್‌ಪುರುಷ ನಾಗುವ ಮೊದಲು ಪ್ರಕೃತಿಗಳಿಗೆ ದೀಕ್ಷೆ ನೀಡಬೇಕು. ಅದರಿಂದ ಒಂದೇ ಬೆಳಕು ಕೊಡುವ ಎರಡು ಬತ್ತಿಗಳಂತೆ ಆಗುತ್ತೇವೆ.

ಜನಪದ ಹಾಡುಗಳನ್ನು ಹಾಡಿ ತೋರಿಸುವುದು, ಜನಪದ ವಾದ್ಯಗಳನ್ನು ಬಾರಿಸಿ ತೋರಿಸುವುದು ಕಲೆಯೆನಿಸುವದು. ಜನಪದ ಸಾಹಿತ್ಯವನ್ನು ಪ್ರೀತಿಸಿ ಸಂಗ್ರಹಿಸುವುದು ಕ್ಷೇತ್ರಜ್ಞತೆಯೆನಿಸುತ್ತದೆ. ಜನಪದವನ್ನೇ ಉಂಡು ಕುಡಿದು ಉಸಿರಾಡಿಸುತ್ತಿರುವ ಜೀವಕ್ಕೊಂದು ತಣಿವು ನೀಡುವ ಸಾಹಿತ್ಯ ಬೇಕೆನ್ನುವುದು ವಾಸ್ತವಿಕ. ಮೈಲಾರಲಿಂಗನ ಗುಡಿಯ ಕಡೆಗೆ ಒಯ್ಯುವ ದಾರಿ ನೇರವಾಗಿರುವಾಗ, ದ್ರಾವಿಡ ಪ್ರಾಣಾಯಾಮದಂತೆ ಸುತ್ತುವರಿಸುವ ದಾರಿ ಏಕೆ ಹಿಡಿಯಬೇಕು? ಸುತ್ತುವರಿದು ಬರುವಾಗ ಕಾಲಕೆಳಗಿನ ಹಾದಿಯೇ ಜಾರಿದರೆ ಗತಿಯೇನು?

ಕೊಳ್ಳಿ ಬೆಂಕಿಯ ಕಡ್ಡಿಯನ್ನು ಆಸ್ಥೆ ವಹಿಸಿ ಜೋರಿನಿಂದ ಅಲುಗಾಡಿಸಿದರೆ ಅಲ್ಲಿ ಜ್ವಲಿತ ರೇಖೆ ಕಾಣಿಸುತ್ತದೆ. ಅದು ನಿಜವಾದ ಜ್ವಲಿತ ರೇಖೆಯಲ್ಲ ಎನ್ನುವುದು ಹದಿನಾರಾಣೆ ಸತ್ಯ, ಜೀವನವೇ ಅನಿತ್ಯವಾಗಿರುವಾಗ, ಸಾಹಿತ್ಯದ ನಿತ್ಯತೆಯನ್ನು ಅರಸುವುದು ವಿವೇಕವಲ್ಲವೆಂದು ಬಲ್ಲವರು ಹೇಳುತ್ತಾರೆ. ಅದು ಅಗತ್ಯವೆಂದು ಬಗೆದು ಸಾಹಿತ್ಯದ ಮಂಗಳ ಸೂತ್ರವನ್ನು ಕಳಚಿಹಾಕಬಾರದೆಂದು ನನ್ನ ಅಭಿಪ್ರಾಯ.

ಜನಪದ ಜೀವನ ಹಾಗೂ ಸಾಹಿತ್ಯದಲ್ಲಿ ಹೊಂದಾಣಿಕೆ ಮಾಡಿಕೊಂಡಿರುವದರಿಂದ ಹಳೆ ಸ್ನೇಹಿತರು - ಹೇಗಿದ್ದೀರಿ - ಎಂದು ಕೇಳಿದಾಗ "ಹೀಗಿದ್ದೇನೆ ನೋಡಿಕೊಳ್ಳಿರಿ" ಎಂದು ಗಟ್ಟಿಸಿ ಹೇಳುವ ಧೈರ್ಯ

ನನಗೆ ಬಂದಿದೆ. ನನ್ನ ಭಾರಕೇಂದ್ರ ತಲೆಗೂ ಮೇಲಿರುವ ಅವಕಾಶದಲ್ಲಿ ಹುದುಗಿದೆಯೆಂಬ ಅರಿವು ನನಗಿರುವುದರಿಂದ ನಾನು ಸೆಟೆದು ನಿಲ್ಲುವೆನಲ್ಲದೆ ಬಾಗಿ ನಿಲ್ಲುವದಿಲ್ಲ. ಬಾಗುವುದು ವಿನಯದ ಲಕ್ಷಣವೇನೋ ಅಹುದು, ಆದರೆ ಅದು ಬಲಹೀನತೆಯ ಕುರುಹು ಆಗಬಾರದು.

ಸಾಹಿತ್ಯವೇ ಇರಲಿ, ಜೀವನವೇ ಇರಲಿ ಅದಕ್ಕೆ ಜನಪದದ ಸಂಪರ್ಕ ದೊರೆತರೆ ಅಲ್ಲಿ ಸುಳಿದಾಡುವ ಸೊಗಡಿನ ಸೊಂಪೇ ಬೇರೆ. ಅದನ್ನು ಗಾಳಿಗೆ ತೂರುವಂತೆ ಮಾಡುವುದು ಸರಿಯಲ್ಲ. ಆ ಸೊಗಡು ನಮ್ಮ ಸುತ್ತಮುತ್ತಲು ಸದಾ ಸುಳಿದಾಡುವಂತೆ ಸಂಗಳಿಸಬೇಕು.

"ಕಾಲು ಮುರಕೊಂಡು ಲಕ್ಷ್ಮೀ ಬಿದ್ದಾಳ ಊರ ತುಂಬಿತ್ತ"

ಎಂದು ಕವಿ ಹೈದ್ರಾಬಾದಿನ ಶ್ರೀಮಂತಿಕೆಯನ್ನು ಕುರಿತು ಹೇಳಿದ್ದಾನೆ. ಅಲ್ಲಿ ಲಕ್ಷ್ಮೀ ಕಾಲುಮುರಿದುಕೊಂಡು ಬಿದ್ದಿದ್ದಾಳಂತೆ, ಏಕೆ? ಎಲ್ಲಿಗೂ ಎದ್ದು ಹೋಗಬಾರದೆಂದು, ಜನಪದ ಜೀವನ ಮತ್ತು ಸಾಹಿತ್ಯಗಳ ಸೊಗಡು, ಆ ಲಕ್ಷ್ಮಿಯಂತೆ ನಮ್ಮಲ್ಲಿ ಕಾಲುಮುರಿದುಕೊಂಡು ಬಿದ್ದಿರುವಳೋ ಎನ್ನುವಂತಾಗಬೇಕು. ಅದರಿಂದ ಆ ಸೊಗಡು ಪರಿಸರದವರಿಗೂ, ನೆರೆಹೊರೆಯವರಿಗೂ ಹಂಚಿಕೊಡಬಹುದು ಹಾಗೆ ಮಾಡುವುದರಲ್ಲಿ ನಿಜವಾದ ಸಾರ್ಥಕತೆಯಿದೆ.

ತಿರಕೊಂಡು ತಂದವನು ಕರಕೊಂಡು ತಿನ್ನುವ ಉದಾರ ಗುಣವನ್ನೇ ಅಳವಡಿಸಿಕೊಳ್ಳಬೇಕಲ್ಲದೆ, ತಿರಕೊಳ್ಳವವರಿಂದಲೂ ಹರಕೊಂಡು ತಿನ್ನುವ ಭಿಕನಾಶಿ ಆಗಬಾರದೆಂದು ಈ ನಿಯತಿ ಆಶಿಸಿದೆ. ಆದ್ದರಿಂದ ಕವಿ ಗಟ್ಟಿಸಿಯೇ ಹೇಳಿದ್ದಾನೆ -

ಹುಟ್ಟಿ ಬಂದ ಬಳಿಕ ಹುಶ್ಯಾರ ಇರಬೇಕು
ದೇಹ ಆಗೂದು ಆ ಶಿವನ ಪಾಲಾ ॥

ಜನಪದ ಸಾಹಿತ್ಯವು ಶಿಷ್ಟ ಸಾಹಿತ್ಯಕ್ಕೆ ಸೇರಿದ್ದಲ್ಲ. ಅದು ಜನಪದ ಸಾಹಿತ್ಯವಾಗಿಯೇ ಉಳಿಯಬೇಕೆನ್ನುತ್ತದೆ. ಶಿಷ್ಟ ಸಾಹಿತ್ಯಕ್ಕೆ ಮಾತ್ರ ಎಂದೂ

ಸೇರುವಂಥದಲ್ಲ. ಶಿಷ್ಟ ಸಾಹಿತ್ಯದ ಸಮಾನಾಂತರ ಸಾಹಿತ್ಯವೆನಿಸಿದಾಗ ಅದು ವಿಶಿಷ್ಟ ಸಾಹಿತ್ಯವೆನಿಸಬಹುದು. ಆ ಸಾಹಿತ್ಯಗಳಿಗೆ ಅವುಗಳನ್ನೇ ಆಗಿಸುವ ಗುಣಧರ್ಮಗಳಿವೆ. ಅವುಗಳನ್ನು ಕಳಕೊಳ್ಳಬಾರದು. ಏಕತ್ವದಲ್ಲಿ ಬಹುತ್ವವನ್ನು, ಬಹುತ್ವದಲ್ಲಿ ಏಕತ್ವವನ್ನು ಕಾಣುವುದೇ ನಿಜವಾದ ಜಾಣತನವಾಗಿದೆ.

ದೃಷ್ಟಾರರಾದ ಶ್ರೀ ಬೇಂದ್ರೆ ಅವರು ಬರೆದ ಈ ಕೆಳಗಿನ ಕವಿತೆಯನ್ನು ಓದಿದರೆ ಜೀವನ ಮತ್ತು ಸಾಹಿತ್ಯಗಳಲ್ಲಿ ಅದೆಂಥ ನಂಟನ್ನು ಅಳವಡಿಸಿ ಕೊಳ್ಳಬೇಕೆಂಬುದು ತಿಳಿದು ಬರುತ್ತದೆ.

ವೈರಿಗೆ ಅನ್ನವು ಸಿಕ್ಕದ ಹಾಗೆ
ಸುಡಬೇಕು। ಬೆಳೆ ಸುಡಬೇಕು ।
ನವಬೀಜದ ಹೊಸ ಬಿತ್ತಿಗೆಗಾಗಿ
ಬಿಡಬೇಕು। ನೆಲ ಬಿಡಬೇಕು।
ಬಂದ ಬೆಳೆಯು ತುಸು ಕಳೆಯದ ಹಾಗೆ
ಇಡಬೇಕು। ಕಾವಿಡಬೇಕು ॥

ಒಬ್ಬಗೆ ಬಂದುದು ಎಲ್ಲರಿಗುಂಟು
ಕೊಡಬೇಕು। ಹಿಡಿ ಕೊಡಬೇಕು।
ಕೊಟ್ಟ ದೇವನಿಗೆ ಕೊಡುವೆನು ಎಂದು
ತೊಡಬೇಕು। ಪಣ ತೊಡಬೇಕು।
ದೇವದೇವನಿಗೆ ಗೆಳೆಯನು ಆಗಿ
ನೆಡಬೇಕು। ಗುಡಿ ನೆಡಬೇಕು ॥

ಈ ಜಾನಪದ ಮಂತ್ರವು ನಮ್ಮನ್ನು ಶ್ರೇಷ್ಠ ಸಾಹಿತ್ಯಪ್ರಿಯರನ್ನಾಗಿ ಮಾರ್ಪಡಿಸಬಲ್ಲದು. ಅಲ್ಲದೆ ಉಚ್ಚ ಜೀವನಾಸಕ್ತರನ್ನಾಗಿಯೂ ಬೇರ್ಪಡಿಸಬಲ್ಲದು. ಸಂಸಾರ ವೇದವೆನಿಸಿದ ನಮ್ಮ ತಾಯಂದಿರ ತ್ರಿಪದಿಗಳೂ ವೇದಕ್ಕೆ ಸಮಾನವೆನಿಸುವ ಗಾದೆಗಳೂ ನಮ್ಮ ಸಂಸ್ಕೃತಿಯನ್ನು ಉತ್ತಮಗೊಳಿಸಿದ ಹಾಗೂ ಅತ್ಯುತ್ತಮಗೊಳಿಸಬಲ್ಲ ಸಾಮರ್ಥ್ಯವನ್ನು ಪಡೆದಿವೆ. ಆದ್ದರಿಂದ ಅವು ನಮ್ಮ ಜೀವನ ಮತ್ತು ಸಾಹಿತ್ಯ ಎರಡನ್ನು ಏಕಕಾಲದಲ್ಲಿ ಮೇಲೆತ್ತಬಹುದಾಗಿದೆ. ಈ ಸಾಧನೆಗೆ ಜೀವನವನ್ನು ಮೀಸಲಿಡುವ ಹಂಬಲವೇ ನನ್ನದಾಗಿದೆ.

೪೫. ಶ್ರೀಮಾತಾರವಿಂದರ ದರ್ಶನ

ದರ್ಶನವೆಂದರೆ ಸಂದರ್ಶನವೂ ಅಹುದು, ತತ್ತ್ವಜ್ಞಾನವು ಅಹುದು. ಅರವಿಂದ ಘೋಷರಾಗಿ ರಾಷ್ಟ್ರೀಯ ಕಾರ್ಯಗಳಲ್ಲಿ ಭಾಗವಹಿಸುತ್ತ ಬಂದ, ರಾಷ್ಟ್ರ ಸೇವಕ ಅರವಿಂದರ ಜೀವನವನ್ನು ಕುರಿತು, ಆಗಿಷ್ಟು ಈಗಿಷ್ಟು ಕೇಳುತ್ತ ಬಂದಿದ್ದೆವು. ಶ್ರೀ ಶಂ.ಬಾ. ಜೋಶಿ ಅವರು ಮೊಟ್ಟಮೊದಲು ಕನ್ನಡದಲ್ಲಿ ಅರವಿಂದ ಘೋಷರ ಚರಿತ್ರೆಯನ್ನು ಬರೆದು ಕನ್ನಡಿಗರ ಕೈಗೆ ಕೊಟ್ಟರು.

ಮುಲಕೀ ಪರೀಕ್ಷೆ ಮುಗಿದ ಮೇಲೆ ರಾಮತೀರ್ಥ-ವಿವೇಕಾನಂದರ ಚರಿತ್ರೆ ಹಾಗೂ ಅವರ ಹೊಸ ದೃಷ್ಟಿಯ ವಿಚಾರಗಳನ್ನೋದಿ, ಹೊಸ ಜೀವನವನ್ನೇ ಪಡೆದೆನೆಂದು ಹೇಳಬಹುದಾಗಿದೆ. ವಿವೇಕಾನಂದರು ಹೇಳಿದ 'ನನ್ನ ಆಚಾರ್ಯ'ರ ವಿಷಯ ಕುತೂಹಲಕಾರಿಯಾಗಿದ್ದರಿಂದ ಆ ಆಚಾರ್ಯರಾದ ಶ್ರೀರಾಮಕೃಷ್ಣ ಪರಮಹಂಸರನ್ನು ಕುರಿತು ಗ್ರಂಥಗಳನ್ನು ಓದತೊಡಗಿದೆ. ಕನ್ನಡ, ಮರಾಠಿ, ಹಿಂದಿ, ಬಂಗಾಲಿ ಭಾಷೆಗಳಲ್ಲಿ ಪ್ರಕಟವಾದ ಅಂಥ ಪುಸ್ತಕಗಳನ್ನು ಓದುತ್ತ ಬಂದಂತೆ, ಶ್ರೀ ಅರವಿಂದರತ್ತ ಗಮನಿಸಿದೆನೆಂದು ತೋರುತ್ತದೆ.

ವಿವೇಕಾನಂದ ಸ್ವಾಮಿಗಳು ರಾಮಕೃಷ್ಣ ಪರಮಹಂಸರನ್ನು ಮತ್ತು ಅರವಿಂದ ಮಹರ್ಷಿಗಳನ್ನು ಜೋಡಿಸುವ ಕೊಂಡಿಯಾಗಿದ್ದರೆಂದು ಹೇಳಬಹುದು. ಸರ್ವಧರ್ಮ ಸಮನ್ವಯ ತತ್ವದ ಹಾಲು ಕುಡಿದು, ವಿವೇಕಾನಂದರು ಸರ್ವಯೋಗಸಮನ್ವಯದ ಬೆಳ್ಳಿಯಬೊಟ್ಟು ಮಾಡಿ

ತೋರಿಸಿದವರು. ಶ್ರೀ ಅರವಿಂದರ ವಿಚಾರಗಳು ಬೀಜರೂಪತೊಟ್ಟು, ವಿವೇಕಾನಂದರಲ್ಲಿ ಹುದುಗಿದ್ದವು.

ಸಾಮಾನ್ಯವಾಗಿ ಜನರು ತಿಳಕೊಂಡಿದ್ದು ಬೇರೆ, ಮೂಲತಃ ಇದ್ದಿದ್ದು ಬೇರೆ. ಪರಮಹಂಸರು, ವಿಶ್ವಕವಿಗಳು, ಮಹಾತ್ಮರು, ವಿವೇಕಾನಂದರು, ಶ್ರೀ ಅರವಿಂದರು ಏಕಕಾಲದಲ್ಲಿ ಭಾರತಾಕಾಶವನ್ನು ಬೆಳಗುತ್ತಿದ್ದ ನಕ್ಷತ್ರಗಳೇ ಆಗಿದ್ದರು. ಜಾಗೃತ ಭಾರತವು ನಿರ್ವಹಿಸಬೇಕಾದ ವಿಧಾನಗಳನ್ನು ಒಂದು ನಕ್ಷೆಯಲ್ಲಿ ತೋರಿಸಿಕೊಡಲಿಕ್ಕೆ ಅವರೆಲ್ಲರೂ ಬಂದರೇನೋ.

ಈ ನಕ್ಷತ್ರ ಪುಂಜಗಳಲ್ಲಿ ಪರಮಹಂಸರ ವಯಸ್ಸು ೩೫ ಆಗಿದ್ದರೆ ಕವಿ ರವೀಂದ್ರರು ಅವರಿಗಿಂತ ಚಿಕ್ಕವರಾಗಿ ಥಳಥಳಿಸಿದರು. ಮೋಹನದಾಸ ಗಾಂಧಿ, ವಿವೇಕಾನಂದರು ಒಂದು ಓರಗೆಯವರು. ತುಸು ಕೆಳಗಿನ ಆಕಾಶದಲ್ಲಿ ಮಿಣುಕುತ್ತಿದ್ದರು. ಅವರ ವಯಸ್ಸು ೧೨-೧೩ ಇರಬಹುದು. ಆ ಬಳಿಕ ಕ್ಷಿತಿಜದ ಹತ್ತಿರಕ್ಕೆ ಬೆಳ್ಳಿ ಚಿಕ್ಕೆ ಮತ್ತು ಉಷಾದೇವಿಯರನ್ನು ಕಾಣಬಹುದಾಗಿತ್ತು. ಗಾಂಧಿ ಅವರು ಅರವಿಂದರಿಗಿಂತ ಮೂರೇ ವರುಷಗಳಿಂದ ಹಿರಿಯರು. ಉಭಯರೂ ಮೂರೇ ವರುಷಗಳ ಅಂತರದಲ್ಲಿ ದೇಹವಿಟ್ಟರು. ಅವರಿಬ್ಬರ ದೇಶಸೇವಾವಧಿ ಸಮಾನವಾಗಿತ್ತು. ೬೭ ವರ್ಷಗಳ ಸೇವೆ ಅವರದೆಂದು ಹೇಳಬಹುದು.

ಇಡಿಯ ಜೀವನದಲ್ಲಿ ಗಳಿಸಿದ ಸಾಕ್ಷಾತ್ಕಾರ ಅನುಭವಗಳನ್ನು ಪರಮಹಂಸರು ಒಂದೇ ಒಂದು ಕ್ಷಣದಲ್ಲಿ ಪರಮಶಿಷ್ಯ ವಿವೇಕಾನಂದರಿಗೆ ಧಾರೆಯೆರೆದರು. ಆ ಬಳಿಕ ವಿವೇಕಾನಂದರು, ತಾವು ಗತಿಸಿದ ಬಳಿಕ ಸೂಕ್ಷ್ಮ ಶರೀರದಲ್ಲಿ ಅರವಿಂದರ ಬಳಿಗೆ ಅಂದರೆ ಅಲಿಪುರ ಕಾರಾಗೃಹಕ್ಕೆ ಹೋಗಿ, ಅವರ ಸನ್ನಿಧಿಯಲ್ಲಿ ತಮ್ಮ ಆತ್ಮಜ್ಞಾನಾನುಭವಗಳೆನ್ನೆಲ್ಲ ೩ ವಾರಗಳವರೆಗೆ ದಿನಾಲು ತಪ್ಪದೆ ಬಂದು, ಶ್ರುತಪಡಿಸಿದರೆಂದು ಶ್ರೀ ಅರವಿಂದರು ಹೇಳುತ್ತಾರೆ.

ಇದನ್ನೆಲ್ಲ ಕೇಳಿದರೆ, ಈ ಎಲ್ಲ ಬಹು ಪ್ರತಿಭಾಸಂಪನ್ನರೂ ಒಂದೇ ಒಂದು ಉದ್ದೇಶಕ್ಕಾಗಿ ಜನ್ಮ ತಳೆದರೆಂದು ಹೇಳಬಹುದು. ಅವರು ಆಡಿದ್ದು

ಒಂದೇ ನಾಟಕವೆನ್ನದೆ ಗತಿಯಿಲ್ಲ. ಆದರೆ ಅವರೆಲ್ಲರೂ ನಾಯಕ ಪಾತ್ರವನ್ನೇ ಅಭಿನಯಿಸಿದರು. ಅವರ ಪ್ರತಿನಾಯಕರೆಲ್ಲರೂ ತೆರೆಯ ಮರೆಯಲ್ಲಿಯೇ ಉಳಿದು, ತಮ್ಮ ಪಾತ್ರವನ್ನು ಪೂರಯಿಸಿದರು.

ಇಷ್ಟೊಂದು ಮಹತ್ ಪರಂಪರೆಯ ನೆಲೆಯಲ್ಲಿ ಬಂದ ಶ್ರೀ ಅರವಿಂದರನ್ನು ಕಾಣದಿರುವುದು ಲಾಂಛನಾಸ್ಪದವಾದ ವಿಷಯ. ಆದರೆ ಅವರ ದರ್ಶನ ಸುಲಭವಲ್ಲ, ಅವರು ಬ್ರಿಟಿಶ ಸರ್ಕಾರದ ಕಡು ವೈರಿಯೆನಿಸಿ ಪಾಂಡಿಚೇರಿಗೆ ಹೋಗಿ ಫ್ರೆಂಚ್ ಸರ್ಕಾರದ ಆಶ್ರಯ, ಸಹಾನುಭೂತಿಗಳನ್ನು ಪಡೆದವರು. ಬ್ರಿಟಿಷ್ ಸರ್ಕಾರವು ನಮ್ಮನ್ನು ಇಲ್ಲಿಂದ ಹೊರಗೆ ಬಿಡಬೇಕು, ಅಲ್ಲಿ ಫ್ರೆಂಚ್ ಸರ್ಕಾರವು ಒಳಗೆ ಬರಮಾಡಿಕೊಳ್ಳಬೇಕು. ಇದೆಲ್ಲ ಹೊರಗಿನ ಬೇಲಿ, ಒಳಗೀಲಿಗಳು ಅಸಂಖ್ಯವಾಗಿದ್ದವು ಅವುಗಳನ್ನೆಲ್ಲ ಸುವ್ಯವಸ್ಥಿತವಾಗಿ ದಾಟಿ ಹೋದಾಗ ಶ್ರೀ ಅರವಿಂದರ ಸಂದರ್ಶನ ಸಿಕ್ಕುತ್ತದೆ.

ದರ್ಶನ ಪಡೆಯಬೇಕೆನ್ನುವರು ಆಶ್ರಮದಿಂದ ಅಪ್ಪಣೆ ಪಡೆಯಬೇಕಾಗುತ್ತಿತ್ತು. ಅದಕ್ಕಾಗಿ ಬರಕೊಂಡವರಿಗೆಲ್ಲ ಅಪ್ಪಣೆ ಸಿಕ್ಕೇ ತೀರುವದು ಎಂಬ ಭರವಸೆಯಿರಲಿಲ್ಲ. ಅವರು ದರ್ಶನ ನೀಡುವುದು ವರ್ಷದಲ್ಲಿ ೩-೪ ಸಲ ಮಾತ್ರ. ಹೇಗೆಂದರೆ -

ಆಗಸ್ಟ್ ೧೫ನೇ ದಿನಾಂಕ ಶ್ರೀ ಅರವಿಂದರ ಜನ್ಮತೊಟ್ಟ ದಿವಸ

ನವಂಬರ ೨೪ ಮಹರ್ಷಿಗಳು ಸಿದ್ಧಿ ಪಡೆದ ದಿನಾಂಕ

ಫೆಬ್ರವರಿ ೨೧ ಶ್ರೀ ಮಾತೆಯವರು ಜನ್ಮಿಸಿದ ದಿನಾಂಕ

ಏಪ್ರಿಲ್ ೨೪ ಶ್ರೀ ಮಾತೆಯವರು ಭಾರತದಲ್ಲಿ ಸ್ಥಿರವಾಗಿ ನಿಂತ ದಿನಾಂಕ.

ಹೊರಗಿನಿಂದ ಭಕ್ತರಿಗೂ ಆಶ್ರಮದಲ್ಲಿ ನೆಲೆನಿಂತ ಶಿಷ್ಯರಿಗೂ ಅವರ ದರ್ಶನ ವರ್ಷದಲ್ಲಿ ನಾಲ್ಕೇ ಸಾರೆ ಸಿಗುತ್ತಿತ್ತು.

ನಮ್ಮ ಗೆಳೆಯರಲ್ಲಿ ಒಬ್ಬಿಬ್ಬರು ಇಷ್ಟರಲ್ಲಿ ದರ್ಶನ ಪಡೆದು ಬಂದಿದ್ದರು. ಅವರ ಪ್ರವಾಸದ ಅನುಭವ ಹಾಗೂ ಮಹಾಮಹಿಮರನ್ನು

ಕುರಿತ ಅನುಭಾವ ಎರಡೂ ಸಮಗೆ ಸಹಜವಾಗಿ ಲಭಿಸಿದವು. ೧೯೪೩ನೇ ವರ್ಷದ ಆಗಸ್ಟ್ ೧೫ರ ದರ್ಶನಕ್ಕಾಗಿ ಒಂದು ತಿಂಗಳು ಇರುವಾಗಲೇ ಬರಕೊಳ್ಳಲಾಯಿತು. ೨ ವಾರಗಳಲ್ಲಿ ಉತ್ತರವೂ ಬಂತು.

ಚಡಚಣದಿಂದ ಹಲಸಂಗಿಯಿಂದ ಹೊರಡುವ ೬-೮ ದರ್ಶನಾರ್ಥಿಗಳು ಜೊತೆಯಾಗಿ ಹೊರಡುವುದು ಒಳ್ಳೆಯದಾಗಿ ತೋರಿತು.

ಆಶ್ರಮದಲ್ಲಿ ೩ ದಿನ ನಿಂತರೆ, ಹೋಗಿ ಬರಲಿಕ್ಕೆ ೩ ದಿನ ಹೀಗೆ ೬ ದಿನಗಳ ರಜೆ ಪಡೆದುಕೊಂಡೆ. ಅಂದಿನ ಕಾಲದಲ್ಲಿ ಪಾಂಡಿಚೇರಿ ಪ್ರವಾಸಕ್ಕೆ ೬೦-೭೦ ರೂ. ಸಾಕಾಗುತ್ತಿತ್ತು. ಅಷ್ಟು ಸಂಗ್ರಹಿಸಲು ನಾನು ಇಡಿಯ ವರುಷ ಜಾಗ್ರತೆ ವಹಿಸಬೇಕಾಗುತ್ತಿತ್ತು. ತಿಂಗಳಿಗೆ ೬ ರೂ.ಗಳಂತೆ ಉಳಿತಾಯವಾದರೆ, ಒಂದು ಸಾರೆಯ ಪ್ರವಾಸದ ವೆಚ್ಚ ಸಂಗಳಿಸುವದು.

ದೂರದ ದಾರಿಯಾಗಿರುವುದರಿಂದ ಮತ್ತು ೩-೪ ದಿನ ತಡೆಯ ಬೇಕಾದ್ದರಿಂದ ಡಸಲಾಪ್-ತಾಳಿಕೆಯ ಆಹಾರವನ್ನೇ ಅಣಿಗೊಳಿಸಬೇಕಾಗು ವದು. ಹಾಲಿನಲ್ಲಿ ಮಾಡಿದ ಸಜ್ಜೆಯ ಹಾಗೂ ಗೋದಿಯ ರೊಟ್ಟಿ ಮತ್ತು ಮಾದಲಿ ಸಕ್ಕರೆ ಬೆರೆಸಿದ್ದು, ಸೇಂಗಾ-ಕೊಬ್ಬರಿಗಳ ಚಟನಿ, ದಳೇದ ಉಂಡಿ ಮಾಡಿಸಿದರೆ ಪ್ರವಾಸದಲ್ಲಿ ತೊಂದರೆ ಆಗುವದಿಲ್ಲ.

ನಾವು ಚಡಚಣದಿಂದ ಇಂಡಿ ರೋಡ ಸ್ಟೇಶನಿಗೆ ಮಧ್ಯಾಹ್ನ ೩ ಗಂಟೆಯ ಬಸ್ಸಿನಲ್ಲಿ ಹೋಗಿ, ಸೊಲ್ಲಾಪುರದತ್ತ ಸಾಗುವ ಗಾಡಿಯಲ್ಲಿ ಕುಳಿತು, ಹುಟಗಿಗೆ ಇಳಿಯುವುದು. ಆ ಬಳಿಕ ಸಾಯಂಕಾಲದಲ್ಲಿ ಬರುವ ಮುಂಬೈ-ಮದ್ರಾಸ ಮೇಲ್ ಗಾಡಿ ಹತ್ತಿದರೆ ಮದ್ರಾಸದವರೆಗೆ ನಿಶ್ಚಿಂತೆ. ಮರುದಿನ ಮಧ್ಯಾಹ್ನ ೨ ಗಂಟೆಯ ಸುಮಾರಿಗೆ ಮದ್ರಾಸವನ್ನು ತಲುಪುವೆವು ಅಲ್ಲಿಂದ ಮುಂದೆ ರೈಲು ಪ್ರವಾಸ ಮಾಡುವುದಕ್ಕಿಂತ, ಬಸ್ಸಿನಲ್ಲಿ ಪ್ರವಾಸ ಮಾಡುವುದರಿಂದ ವೇಳೆಯ ಉಳಿತಾಯ ಸಾಕಷ್ಟಾಗುವದು, ತುಸು ಹಣದ ಉಳಿತಾಯವೂ ಆಗುವದು.

ಮದ್ರಾಸಿನಿಂದ ಪಾಂಡಿಚೇರಿಗೆ ರೈಲಿನಲ್ಲಿ ಹೊರಟರೆ, ಮರುದಿನ ಬೆಳಗಿಗೆ ಪಾಂಡಿಚೇರಿಯನ್ನು ತಲುಪುವೆವು. ಬಸ್ಸಿನಲ್ಲಿ ಸಾಗಿದರೆ ಅಂದೇ

ಸಂಜೆಯ ೮ ಗಂಟೆಗೆ ನಮ್ಮ ಸ್ಥಳವನ್ನು ತಲುಪುವೆವು. ಪಾಂಡಿಚೇರಿಯನ್ನು ತಲಪಿದ ಕೂಡಲೇ ನಮ್ಮ ಹೆಸರು ವಿಳಾಸಗಳನ್ನು ಬರಕೊಂಡು, ಇಳಕೊಳ್ಳುವ ಸ್ಥಳದ ಹೆಸರಿನಲ್ಲಿ ನಂಬರು ಕೊಡುವರು. ಊಟ ದೊರೆಯುವುದು ಸುಗಮಗೊಳ್ಳುವ ಸಲುವಾಗಿ ಒಂದು ಪರಿಚಯ ಪತ್ರವನ್ನು ಕೊಡುವರು. ನಮ್ಮ ನಮ್ಮ ಸ್ಥಳ ತಲಪಿದ ಬಳಿಕ, ಕೈಕಾಲಿಗೆ ಹೋಗಿ ಬಂದು ನಲ್ಲಿಯ ಕೆಳಗೆ ಸ್ನಾನ ಮಾಡುವುದು, ಬಟ್ಟೆಗಳನ್ನು ತೊಳೆಯುವುದು, ತರುವಾಯ ಊಟದ ಮನೆಗೆ ಹೋಗಿ, ಊಟ ತೀರಿಸಿಕೊಂಡು ರಿಕ್ಷೆಯಲ್ಲಿ ಅಥವಾ ಕಾಲನಡಿಗೆಯಲ್ಲಿ ಇಳಿದ ಸ್ಥಳಕ್ಕೆ ಬಂದು ನಮಗಾಗಿ ಕೊಟ್ಟ ಚಿಕ್ಕ ಹೊರಸಲಿನ ಮೇಲೆ ಮಲಗಿಕೊಂಡು ಬಿಡುವುದು.

ಪ್ರತಿದಿನ ಬೆಳಗಿನ ೬ ಗಂಟೆಗೆ ಶ್ರೀ ಮಾತೆಯವರು ಬಾಲ್ಕನಿ ದರ್ಶನ ಕೊಡುವರು. ಅದನ್ನು ಬಹುತರವಾಗಿ ಯಾರೂ ತಪ್ಪಿಸಿಕೊಳ್ಳುವದಿಲ್ಲ. ಅಷ್ಟರಲ್ಲಿ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು, ಬಾಲ್ಕನಿಯ ಎದುರಿಗೆ ಅಡ್ಡಬಿದ್ದ ಸಿಮೆಂಟು ರಸ್ತೆಯಲ್ಲಿ ಸಾವಿರಾರು ಜನರು ನಿಂತು ಶ್ರೀಮಾತೆಯವರ ದರ್ಶನಕ್ಕಾಗಿ ಪ್ರತೀಕ್ಷಿಸುತ್ತ ನಿಂತಿರುತ್ತಾರೆ.

ಸರಿಯಾಗಿ ಸೂರ್ಯೋದಯ ಸಮಯಕ್ಕೆ ಅಥವಾ ತರುವಾಯ ಹಿಂಚುಮುಂಚಾಗಿ ಶ್ರೀ ಮಾತೆಯವರು ಒಳಗಿನಿಂದ ಬಂದು, ಬಾಲ್ಕನಿಯಲ್ಲಿ ನಿಂತುಕೊಂಡು, ಎಲ್ಲರನ್ನು ಸಾವಧಾನದಿಂದ ಇಡಿಯಾಗಿ ನೋಡುವರು. ಬಳಿಕ ಕ್ಷಣ ನಿಂತು, ದಿವ್ಯ ನಗೆ ನಕ್ಕು ಎಲ್ಲರನ್ನು ಪ್ರಸನ್ನಗೊಳಿಸುವರು. ಅದೊಂದು ಅಚ್ಚಉಚ್ಚ ಕ್ರಮವೆನಿಸುತ್ತದೆ. ಪ್ರತಿಯೊಬ್ಬರು ಯಾವುದೋ ಶಕ್ತಿ ಸ್ಪರ್ಶಿಸಿದಂತೆ ಉತ್ಸಾಹಗೊಂಡು ತಂತಮ್ಮ ಬಿಡಾರಕ್ಕೋ ಮುಂಜಾವಿನ ಊಟಕ್ಕೋ ತೆರಳುವರು.

ಅಂದು ಶುಕ್ರವಾರ, ನನ್ನ ಮಟ್ಟಿಗೆ ಶುಭವ ತರುವ ವಾರವಾಗಿ ಪರಿಣಮಿಸಿದ್ದನ್ನು ಮರೆಯಲಾರೆ.

ರವಿವಾರವೇ ಶ್ರೀ ಅರವಿಂದರ ಮಹಾದರ್ಶನ, ಮೊಟ್ಟ ಮೊದಲಿನ ಮಾತೃದರ್ಶನ ಶುಕ್ರವಾರವಾದಂತೆ ಶ್ರೀ ಅರವಿಂದರ ಮಹಾದರ್ಶನ ರವಿವಾರ ಸಂಗಳಿಸಿತ್ತು.

ಅಲ್ಲಿ ಕಂಡ ಅಚ್ಚುಕಟ್ಟುತನ, ಗಂಭೀರ ಮೌನ, ದೈವೀವಾತಾವರಣ ಇನ್ನೆಲ್ಲಿಯೂ ಕಾಣಸಿಗದು. ಅದು ಮನುಷ್ಯಲೋಕದ ಪರಿಸರವಲ್ಲ. ದೇವತೆಗಳಿಗೂ ಸಾಧ್ಯವಿಲ್ಲದ ಸಂಪರ್ಕ. ಅಂತೆಯೇ ಗುಜರಾತದ ಶ್ರೇಷ್ಠ ಕವಿ ಹಾಡಿದ ಹಾಡಿನಲ್ಲಿ ಅತಿಶಯೋಕ್ತಿಯೇನೂ ಕಂಡುಬರುವುದಿಲ್ಲ. ಆ ಹಾಡಿನಲ್ಲಿ ಸೇರಿದ ಕೆಲವು ಸಾಲುಗಳು ಸತ್ಯಸಂಗತಿಯನ್ನು ಪ್ರತಿನಿಧಿಸುತ್ತವೆ ಹಾಗೂ ಪ್ರತಿಧ್ವನಿಸುತ್ತದೆ.

ದರುಶನದಿಂ ಸಂಶಯ ಸುಡುವವರು
ಸ್ಪರ್ಶದಿ ಶ್ರದ್ಧೆಯನೆಲೆಗೊಳಿಸುವರು
ಪದರಜದಿಂ ಪಾವನಗೊಳಿಸುವರು
ತ್ರಿಲೋಕತಾರಕರು

ಆಗುವೆವೆಂದು ಎದೆತಟ್ಟಿ ಹೇಳುವ ಶ್ರದ್ಧೆ ನಮ್ಮಲ್ಲಿ ಮೂಡಿ ನಿಲ್ಲುತ್ತದೆ. ಅಂಥ ಅದ್ಭುತ ದಿವ್ಯಶಕ್ತಿಯನ್ನು ಗಳಿಸಿದ ಮಾತಾರವಿಂದರು ತ್ರಿಲೋಕ ತಾರಕರೇ ಸೈ ಮುಂದೆ ಏನಾಗುವುದೆಂಬುದನ್ನು ನಾನೇನು ಹೇಳಬಲ್ಲೆ. ಅದನ್ನು ಅನುಭವಿಸಿದ ಕವಿಯೇ ಹೇಳಲು ಸುಸಮರ್ಥನು.

ಭವ್ಯರಿವರ ದರ್ಶನ ಗೈದವರು
ಪ್ರೇಮಾಮೃತ ಸಾಗರ ಕುಡಿದವರು
ಸುರವಾಂಛಿತ ಸಂಧಿಯ ಪಡೆದವರು
ಅಸೀಮಹರ್ಷಿತರು

ಹೀಗೆ ನಮ್ಮ ಮನ-ಪ್ರಾಣ-ದೇಹಗಳೆಲ್ಲ ಅರವಿಂದಮಯವಾಗಿ ಬಿಡುವವೆಂದು ಹೇಳುವುದು ವಾಸ್ತವಿಕವೇ ಆಗಿದೆ. ದೃಷ್ಟಾರ ಕವಿ ಬೇಂದ್ರೆ ಅವರು ಈ ಮಾತನ್ನು ಕವನವೊಂದರಲ್ಲಿ ಹುದುಗಿಸಿದ್ದನ್ನು ಈ ಆತ್ಮವೃತ್ತದ ಆರಂಭದಲ್ಲಿಯೇ ಉಲ್ಲೇಖಿಸಿದೆ.

೨-೩ ದಿನಗಳ ಆಶ್ರಮ-ವಾಸ್ತವ್ಯದಲ್ಲಿ ಅತ್ಯುಚ್ಚ ತೀರ್ಥಕ್ಷೇತ್ರಗಳ ಕಲ್ಪನೆ ಮೂಡುವದು.

ಇನ್ನು ಅಲ್ಲಿ ದೊರೆಯುವ ಊಟವು ಹಿತವಾಗಿ ಮಿತವಾಗಿ ನಮ್ಮ ಸ್ವಾಸ್ಥ್ಯವನ್ನು ತಿದ್ದಿತೀಡಿ, ನುಣುಪುಗೊಳಿಸುವ ಮೋಡಿ ಇನ್ನೆಲ್ಲಿಯೂ

ಕಾಣಸಿಗದು. ಬನ್ನಿ ನನ್ನೊಡನೆ ಊಟದ ಮನೆಗೆ. ಅಲ್ಲಿಯ ವ್ಯವಸ್ಥೆ, ಸ್ವಚ್ಛತೆ, ಊಟದ ಕ್ರಮ ನೋಡಿದರೆ ಈ ಜನ್ಮದಲ್ಲಿ ಹೀಗೆ ಊಟ ಮಾಡುವುದನ್ನು ಕಲಿತುಕೊಂಡರೂ ಸಾಕು ಅದೊಂದು ದೊಡ್ಡ ಸಿದ್ಧಿಯಾಗಿಯೇ ಪರಿಣಮಿಸುತ್ತದೆ.

ಆಶ್ರಮದ ಪ್ರಮುಖ ಕಟ್ಟಡದಿಂದ ಸುಮಾರು ಅರ್ಧಫರ್ಲಾಂಗಿನ ಮೇಲೆ ಊಟದ ಮನೆಯಿದೆ. ಅದರ ಹೆಬ್ಬಾಗಿಲು ತೆಗೆದರೆ, ವಿಸ್ತಾರವಾದ ಅಂಗಳ, ಹಸಿರು ಹುಲ್ಲಿನಿಂದಲೂ ಬಣ್ಣಬಣ್ಣದ ಹೂಗಳಿಂದಲೂ ಪರಿಮಳಿಸುತ್ತದೆ. ಅಂಗಳದಲ್ಲಿ ಹತ್ತು ಹೆಜ್ಜೆ ನಡೆದು ಮೆಟ್ಟುಗಟ್ಟೆಯ ಬದಿಯಲ್ಲಿ ಕಾಲ್ಮರೆ ಕಳೆದು ಮೇಲೆ ಹತ್ತಿದರೆ ಊಟಕ್ಕೆ ಕುಳಿತುಕೊಳ್ಳುವ ಒಂದು ಕೋಣೆ ಕಾಣಿಸುತ್ತದೆ.

ಹೆಬ್ಬಾಗಿಲಿನಿಂದಲೂ, ಊಟಕ್ಕೆ ಹೊರಟವರ ಸಾಲು ಮೆಲ್ಲಗೆ ಹೆಜ್ಜೆಯಿಡುತ್ತ ಸಾಗಿದ್ದು ಕಂಡು ಬರುತ್ತದೆ. ನಾವು ಆ ಸಾಲಿನಲ್ಲಿ ಸೇರಿಕೊಂಡು ನಾಲ್ಕು ಹೆಜ್ಜೆ ಸಾಗಿ ಮೇಲೆ ಮುಖವೆತ್ತುವಷ್ಟರಲ್ಲಿ ದೊಡ್ಡ ಫಲಕದ ಮೇಲಿನ ಒಂದು ಬರಹವು ಓದಲು ಸಿಗುತ್ತದೆ.

"ತಾಯಿಯವರು ಯಾವಾಗಲೂ ನಿಮ್ಮನ್ನು ನೋಡುತ್ತಾರೆಂಬ ಮಾತನ್ನು ನೆನಪಿನಲ್ಲಿಟ್ಟುಕೊಂಡು ಸಾಗಿರಿ. ಯಾಕೆಂದರೆ, ಅವರು ನಿಮ್ಮನ್ನು ನಿಜವಾಗಿ ಯಾವಾಗಲೂ ನೋಡುತ್ತಲೇ ಇರುತ್ತಾರೆ."

ಎಂಬ ಬರಹದ ಕೆಳಗೆ ಶ್ರೀ ಅರವಿಂದರು ಎಂಬ ಸಹಿಯಿದೆ.

ಅದನ್ನೋದಿ ಅತ್ಯಗಾಧ ಪಟ್ಟು ಕೋಣೆಯನ್ನು ಪ್ರವೇಶಿಸುತ್ತೇವೆ. ಅಲ್ಲಿ ತಾಟು-ಬಟ್ಟಲು, ಅನ್ನದ ಬಟ್ಟಲು, ಕಾಯಿಪಲ್ಲೆಯ ದೊಡ್ಡ ಬೋಗೋಣಿ, ಹಾಲಿನ ತಪ್ಪೇಲಿ, ಬಾಳೆಹಣ್ಣಿನ ಬಟ್ಟಲು, ನಿಂಬಿಯ ಹೋಳುಗಳು, ಊಟದ ಚಮಚೆಗಳು ಸಾಲ್ಗೊಡಿದು ಇಡಲ್ಪಟ್ಟಿವೆ.

ಮೊದಲು ಊಟಕ್ಕಾಗಿ ಒಂದು ತಾಟು ಕೈಗೆತ್ತಿಕೊಂಡು ಮುಂದಡಿಯಿಟ್ಟರೆ ನಾವು ತೋರಿಸಿದ ಬಟ್ಟಲಿನಲ್ಲಿ ಅನ್ನ ತುಂಬಿ ನಮ್ಮ ತಾಟಿನಲ್ಲಿ ಬಡಿಸುತ್ತಾರೆ.

ಕಾಯಿಪಲ್ಲೆ ಬೋಗೋಣಿಯಿಂದ ಒಂದು ಮಾಪುಹಾಕಿ ಬಟ್ಟಲವನ್ನು ತಾಬಾಣದಲ್ಲಿ ಇಡುತ್ತಾರೆ. ಹಾಲ ಬೋಗೋಣಿಯ ಬಳಿ ನಿಂತವರು ಹಾಲು ಬೇಕೋ ಮೊಸರು ಬೇಕೋ ಎಂದು ಕೇಳುತ್ತಾರೆ. ತೋರಿಸಿದ ಜೀನಸನ್ನು ಗೊತ್ತು ಮಾಡಿದ ಮಾಪಿನಿಂದ ಒಂದು ಬಟ್ಟಲಲ್ಲಿ ಹಾಕಿ ತಾಬಾಣದಲ್ಲಿ ಇಡುತ್ತಾರೆ. ಮುಂದಿನವರು ಬಾಳೆಹಣ್ಣು, ನಿಂಬೆಯ ಹೋಳು, ಸಕ್ಕರೆ ಹಾಕಿದರೆ, ತಾಟು ಪೂರ್ತಿಯಾದ ಹಾಗೆ. ಅದನ್ನೆತ್ತಿಕೊಂಡು ತಂದು, ಸುಸಜ್ಜಿತ ದೊಡ್ಡ ಕೋಣೆಯನ್ನು ಕಾಲಿಡುವೆವು. ಅಲ್ಲಿಯೇ ಕುಳಿತು ಊಟ ಮಾಡುವುದು.

ಗೋಡೆಯಗುಂಟ ಹಾಸಿದ ಚಿಟ್ಟಚಾಪೆ, ಮುಂದೆ ಅಡ್ಡಣಿಗೆಯಂಥ ಚಿಕ್ಕ ಟೇಬಲು, ಅದರ ಮೇಲೆ ಸ್ವಚ್ಛವಾದ ವಸ್ತ್ರ ಹಾಸಿದೆ, ಟೇಬಲ ಮೇಲೆ ಊಟದ ತಾಟು ಇಟ್ಟು, ಎದುರಿನ ಕೋಣೆಗೆ ಹೋಗಿ ಒಂದು ಚೆಂಬುವಿನಲ್ಲಿ ಫಿಲ್ಟರ್ ಮಾಡಿಟ್ಟ ನೀರನ್ನು ಹೂಜಿಯಿಂದ ಹಾಕಿಕೊಂಡು ಅನ್ನದ ತಾಟಿನ ಬಳಿ ಬಂದು ಚಪಗಾಲುಹಾಕಿ ಚಮಚೆಯಿಂದ ಊಟ ಮಾಡುವುದು. ಅಷ್ಟು ಅನ್ನ, ಬ್ರೆಡ್ಡು, ಕಾಯಿಪಲ್ಲೆ, ಬಾಳೆಹಣ್ಣು ನಮಗೆ ಸರಿದೋರಿದಂತೆ ಹೊಂದಿಗೆ ಮಾಡಿಕೊಂಡು ಊಟ ಮುಗಿಸಬೇಕು.

ಬಳಿಕ ಆ ತಾಟು ಬಟ್ಟಲು ನೀರಿನ ಚಂಬು ತೆಗೆದುಕೊಂಡು ತೊಳೆಯುವ ಅಂಗಳದತ್ತ ಸಾಗಬೇಕು. ಅಲ್ಲಿ ಒಂದು ಡಬ್ಬಿಯಲ್ಲಿ ನಿಂಬಿಹಣ್ಣಿನ ಸಿಪ್ಪೆ, ಇನ್ನೊಂದರಲ್ಲಿ ಬಾಳೆಹಣ್ಣಿನ ಸಿಪ್ಪೆ ಜೋಕೆಯಿಂದ ಹಾಕಿ, ಚಮಚೆ-ಚೆಂಬುಗಳನ್ನು ತೊಳೆಯುವುದಕ್ಕಾಗಿಯೇ ಇಟ್ಟು ನೀರಕಡಾಯಿ ಯಲ್ಲಿ ಇಳಿಬಿಡುವುದು. ಆಮೇಲೆ ಉಳಿದ ತಾಟು, ದೊಡ್ಡ ಕಡಾಯಿ ನೀರಲ್ಲಿ ಹಾಕಿದರೆ ತೀರಿತು, ಕೈತೊಳೆಯುವ ನಲ್ಲಿಯ ಬಳಿ ಬರುವೆವು.

ತಾಟು-ಬಟ್ಟಲು, ಚಮಚೆ, ಚಂಬುಗಳನ್ನು ಸಬಕಾರ ನೀರನಲ್ಲಿ, ಪೊಟೇಸಿಯಂ ಪರಮಾಂಗನೇಟ್ ಹಾಕಿದ ನೀರಿನಲ್ಲಿ ತೊಳೆದು, ತಿಳಿನೀರಿನಲ್ಲಿ ಒದ್ದೆಯಿಂದ ತಿಕ್ಕಿ ತೊಳೆದು, ಆಚೆಯ ಪಡಸಾಲೆಗೆ ಕಳಿಸುವರು. ಅಲ್ಲಿ ೪-೬ ಜನ ಸಾಧಕರು, ಒಗೆಸಿದ ಬಟ್ಟೆಗಳಿಂದ ಆ ತಾಟು-ಬಟ್ಟಲು ಮೊದಲಾದವುಗಳನ್ನು ಒರೆಸಿದರೆ ಹಸಿಹೋಗುವದರಿಂದ

ಒತ್ತಟ್ಟಿಗೆ ಡಬ್ಬುಹಾಕಿದರೆ ಅವು ಮುಂದಿನ ಪಂಕ್ತಿಯವರಿಗಾಗಿ ಬಡಿಸುವ ಮನೆಯತ್ತ ಸಾಗಿಸುವರು.

ಎರಡೇ ತಾಸಿನಲ್ಲಿ ಸಾವಿರಾರು ಜನರು ಸದ್ದು-ಗದ್ದಲವಿಲ್ಲದ ಗಾಢ ಮೌನದಿಂದ ಊಟ ಮುಗಿಸುತ್ತಾರೆ. ಅಗಳು ಅನ್ನ ಚೆಲ್ಲಿದ್ದಾಗಲಿ, ನೊಣ ಹಾರಿ ಬಂದು ಕುಳಿತಿದ್ದಾಗಲಿ ಕಾಣಸಿಗುವುದಿಲ್ಲ.

ತಿನ್ನಗೊಡುವ ಬಾಳೆಹಣ್ಣುಗಳನ್ನು ಸಹ ಪೊಟ್ಯಾಸಿಯಂಪರಮಾಂಗನೇಟ ಹಾಕಿದ ನೀರನಿಂದ ತೊಳೆದು, ಅರಿವೆಯಿಂದ ಒರೆಸಿಡುವ ಕೆಲಸ ಒತ್ತಟ್ಟಿಗೆ ನಡೆಯುತ್ತದೆ.

ಪರದೇಶದಿಂದ ಬಂದವರಿಗಾಗಲಿ, ಪರನಾಡಿನವರಿಗಾಗಲಿ, ಅಡಿಗೆ ಊಟದ ಪದ್ಧತಿ ಅನ್ಯವೆನಿಸುವದಿಲ್ಲ. ಅಲ್ಲಿಯ ಆಹಾರವನ್ನು ಯಾವ ಧರ್ಮದವನೂ ತಿರಸ್ಕರಿಸಲಾರನು, ನಿಷಿದ್ಧಗೊಳಿಸಲಾರನು.

ಅಂತೆಯೇ ನಾನೆನ್ನುವುದು ಅವರಂತೆ ಊಟ ಮಾಡಲು ಬಂದರೆ ಸಾಕು. ನಮಗೆ ಸದ್ಯಕ್ಕೆ ಇನ್ನಾವ ಸಾಧನವಾಗಲಿ ಮೋಕ್ಷವಾಗಲಿ ಬೇಡವೆನಿಸುತ್ತದೆ. ಹತ್ತು ವರ್ಷ ತೀರ್ಥಯಾತ್ರೆ ಕೈಕೊಂಡರೂ ಕಾಣಸಿಗದ ಇಂಥ ಮೌನ, ವಿನಯ, ಸ್ವಚ್ಛತೆ, ಕರ್ತವ್ಯ ದಕ್ಷತೆಗಳನ್ನು ಕಾಣಲಾರೆವು. ಒಂದು ಕಡೆಗೆ ಹುಗ್ಗಿಯ ಜಾರಿಕೆ, ಇನ್ನೊಂದು ಕಡೆಗೆ ಪತ್ರಾವಳಿಯ ಹಾರಿಕೆ ಕಂಡು ಬರುತ್ತವಲ್ಲದೆ ಚೆಲ್ಲಿದ ಮುಸುರೆ, ಮುಸುಕುವ ನೊಣ ಇವಿಲ್ಲದ ಪ್ರಸ್ತವಾಗಲಿ, ಅನ್ನ ಸಂತರ್ಪಣೆಯಾಗಲಿ ಶ್ರೀ ಅರವಿಂದ ಆಶ್ರಮವನ್ನು ಬಿಟ್ಟರೆ ಇನ್ನೆಲ್ಲಿಯೂ ಕಣ್ಣಿಗೆ ಬೀಳದು.

ಸಾಯಂಕಾಲವಾಗುತ್ತಲೆ ಎಲ್ಲ ಸಾಧಕರು ಆಟದ ಬಯಲಲ್ಲಿ ನೆರೆಯುವರು. ಸಮವಸ್ತ್ರಗಳನ್ನು ಧರಿಸಿ, ತಮ್ಮ ಗುಂಪುಗಳನ್ನು ತಾವೇ ಆರಿಸಿಕೊಂಡು ಸಾಮೂಹಿಕ ಮೀಟಿಂಗಿನಲ್ಲಿ ಭಾಗವಹಿಸುವರು. ಅದೆಲ್ಲ ಮುಗಿದ ಬಳಿಕ ದೀಪ ಆರಿಸಿ ಧ್ಯಾನ ಮಾಡುವರು. ಆ ಕಾಲಕ್ಕೆ ಅನೇಕ ಶಿಷ್ಯರು, ದರ್ಶನಾರ್ತಿಗಳು ಅಲ್ಲಿದ್ದು ಆ ಧ್ಯಾನದಲ್ಲಿ ಭಾಗವಹಿಸಬಹುದಾಗಿದೆ.

ಧ್ಯಾನ ಮುಗಿಯುತ್ತಲೆ ಎಲ್ಲೆಲ್ಲಿಯೂ ಬೆಳಕು ಸುರಿದಾಗ ಶ್ರೀ ತಾಯಿಯವರು ಸ್ವಹಸ್ತದಿಂದ ಕೊಡುವ ತಿಂಡಿ-ಪೊಟ್ಟಣಗಳನ್ನು ಸಾಲುಹಿಡಿದು ಬಂದು, ತೆಗೆದುಕೊಂಡು ಹೋಗುವರು. ಹಂಚುವಿಕೆಯ ಕಾಲದಲ್ಲಿ ತಗಲು ಕೆಲಸ ಮಾಡುವ ಹುಡುಗಬುದ್ಧಿಯವರಿರುವುದು ಸಹಜ, ಆದರೂ ಅದು ತಾಯಿಯವರಿಗೆ ಗೊತ್ತಾಗದೆ ಇರುವದಿಲ್ಲ.

ಒಮ್ಮೆ ಪೊಟ್ಟಣ ಹಂಚುತ್ತಿರುವಾಗ ಸಾಲಿನಲ್ಲಿ ಬಂದ ಬಾಲಕನು ಅವನ್ನು ಸ್ವೀಕರಿಸಿ, ಹೇಗೋ ಮತ್ತೆ ಹಿಂದಿನ ಸಾಲಿನಲ್ಲಿ ಸೇರಿ, ೨ನೇ ಸಾರೆ ಪೊಟ್ಟಣಕ್ಕೆ ಕೈಚಾಚುತ್ತಿದ್ದನು. ಆಗ ತಾಯಿಯವರು ಕೊಟ್ಟೇ ಕಳಿಸುತ್ತಿದ್ದರು. ಆದರೆ ಒಂದು ಮುಗುಳು ನಗೆ ನಗುವರು.

ಅದೇ ಬಾಲಕನು ಇನ್ನೊಂದು ದಿನ ಸಾಲಿನಲ್ಲಿ ಬಂದು ಪೊಟ್ಟಣ ಇಸಗೊಂಡನು. ಅದೇ ಕ್ಷಣಕ್ಕೆ ಮಾತೆಯವರು ಮತ್ತೊಂದು ಪೊಟ್ಟಣ ಆತನ ಕೈಗಿಟ್ಟು ಕಳಿಸಿದರು. ಅದನ್ನು ಕಂಡು ಒಬ್ಬ ಸಾಧಕರು ತಾಯಿಯವರಿಗೆ ಕೇಳಿದರು -

"ಅವನಿಗೆ ೨ ಪೊಟ್ಟಣ ಕೊಟ್ಟಿರಲ್ಲಾ!"

ಆ ಮಾತಿಗೆ ಮಾತೆಯವರು ಮರುನುಡಿದರು -

"ಕೊಟ್ಟಿರದಿದ್ದರೆ ಸಾಲುತಪ್ಪಿಸಿ ಮತ್ತೊಮ್ಮೆ ಪೊಟ್ಟಣ ಪಡೆಯುತ್ತಲೇ ಇದ್ದನು."

ಆಟದ ಬಯಲಲ್ಲಿ ಶ್ರೀಮಾತೆ ಕುಳಿತುಕೊಳ್ಳುವ ಕುರ್ಚಿಯ ಹಿಂದೆ, ಗೋಡೆಯ ಮೇಲೆ ಸಿಮೆಂಟಿನಿಂದ ಮಾಡೆಲ್ ಮಾಡಿ, ಗಡದು ಹಸುರಿನ ಬಣ್ಣ ಕೊಟ್ಟಿದ್ದಾರೆ. ಅದು ಮಾತೆಯವರ ಭಾರತ ದೇಶ. ಅದರಲ್ಲಿ ಅಫಘಾನಿಸ್ತಾನ, ಪಾಕಿಸ್ತಾನ, ಬಲುಚಿಸ್ತಾನ, ಬ್ರಹ್ಮದೇಶದ ಭಾಗ ಇವೆಲ್ಲ ಸೇರಿವೆ. ಮಾತೆಯವರ ಅಖಂಡ ಭಾರತದ ಕಲ್ಪನೆ ಅತ್ಯಾಶ್ಚರ್ಯಕರವಾಗಿದೆ.

ನಾನು ಪ್ರತಿವರ್ಷ ಆಗಸ್ಟ್ ೧೫ಕ್ಕೆ ಅಥವಾ ನವಂಬರ ೨೪ಕ್ಕೆ ದರ್ಶನಕ್ಕೆ ಹೋಗುವ ಪರಿಪಾಠವಿರಿಸಿಕೊಂಡೆ. ಪ್ರತಿಸಾರೆ ನನ್ನೊಡನೆ ಒಬ್ಬ

ಮಗನನ್ನೋ ಮಗಳನ್ನೋ ಜೊತೆಗೆ ಕರೆದೊಯ್ಯುತ್ತಿದ್ದೆ. ಅಂದು ರೈಲ್ವೆ ಬಸ್ಸುಗಳ ಚಾರ್ಜು ಇನ್ನೂ ಮೇಲೇರಿರಲಿಲ್ಲ. ಆದರೂ ಇಬ್ಬರಿಗೂ ಕೂಡಿ ೧೫೦ ರೂ. ಬೇಕಾಗುತ್ತಿದ್ದವು. ಇಡಿಯ ವರುಷ ಪ್ರಯತ್ನಿಸಿ ಅಷ್ಟು ಹಣ ಉಳಿಸುತ್ತಿದ್ದೆ. ಕೈಗಡ ಇಸಗೊಳ್ಳುವುದಕ್ಕೆ ನನಗೆ ಹೇಸಿಕೆಯೆನಿಸುತ್ತಿತ್ತು. ಸಾಲವಂತೂ ಎಂದಿಗೂ ಬೇಡವಾಗಿತ್ತು.

ಮಕ್ಕಳಲ್ಲಿ ಭುವನೇಶ್ವರಿ ಮತ್ತು ಈಶ್ವರ ಅವರು ಶ್ರೀ ಅರವಿಂದರನ್ನು ಕಂಡವರಾಗಿದ್ದಾರೆ. ಈರಣ್ಣ, ಮಹಾದೇವಿ ಮೊದಲಾದವರು ಮಾತೆಯವರೊಬ್ಬರನ್ನೇ ಕಂಡು ತೃಪ್ತರಾಗಬೇಕಾಯಿತು.

ಒಂದು ಸಾರೆ ಪಾಂಡಿಚೇರಿಯಿಂದ ಬರುವಾಗ ಅರುಣಾಚಲಕ್ಕಿಳಿದು ಬರಲು ಮಾತೆಯವರ ಅಪ್ಪಣೆ ಸಿಕ್ಕಿತು. ಆ ದಾರಿಯಿಂದ ಸಾಗಿದೆವು ಅರುಣಾಚಲಕ್ಕೆ ನಿಲ್ದಾಣದಲ್ಲಿಳಿದು ಆಶ್ರಮಕ್ಕೆ ತೆರಳಿದೆವು. ಅವರು ಸಮಾಧಿ ಸ್ಥಿತಿಯಲ್ಲಿದ್ದರು. ದರ್ಶನಾರ್ಥಿಗಳು ಸುತ್ತಲು ಕಿಕ್ಕಿರಿದು ನಿಂತಿದ್ದರು. ನಾವೂ ಅದರಲ್ಲಿ ಸ್ಥಳ ಮಾಡಿಕೊಂಡೆವು. ಸಮಾಧಿ ಸ್ಥಿತಿಯೆಂದರೇನು ಎಂಬುದನ್ನು ಕಂಡಂತಾಯಿತು. ಸಮಾಧಿ ಸ್ಥಿತಿಯಲ್ಲಿ ಅವರದು ಶೂನ್ಯದೃಷ್ಟಿಯಾಗಿತ್ತು.

ರಮಣಮಹರ್ಷಿಗಳ ವಿಷಯಕ್ಕೆ ನನಗೊಬ್ಬ ಗೆಳೆಯರು ಹೇಳಿದ್ದರು. ಅವರು ನಮ್ಮತ್ತ ನೋಡಿದಾಗ ನಮ್ಮಂತರಾತ್ಮವನ್ನು ಸ್ಪರ್ಶಿಸುವರು, ಆ ಮಾತು ನೆನಪಿಟ್ಟುಕೊಂಡು ಸಮಾಧಿಸ್ಥಿತಿಯಿಂದ ಇಳಿದು ಬರುವವರೆಗೂ ನಿಂತುಕೊಂಡೆವು. ಬಹಳ ತಡವಾಗಿಯಾದರೂ ಅವರು ಕಣ್ತೆರೆದು ಯಾರಾರನ್ನೋ ನೋಡುತ್ತ ನನ್ನ ಕಡೆಗೆ ನೋಡಹತ್ತಿದರು. ನನ್ನಂತರಂಗವನ್ನು ಅವರೆದುರಿಗೆ ತೆರೆದೇ ಇಟ್ಟೆ. ೧೫-೨೦ ನಿಮಿಷ ಕಣ್ಣಲ್ಲಿ ಕಣ್ಣಿಟ್ಟು ನೋಡಿದರು.

ಆ ಬಳಿಕ ಮಹರ್ಷಿಗಳು ದಿನ ಪದ್ಧತಿಯಂತೆ ಸಾಮೂಹಿಕ ಊಟಕ್ಕೆದ್ದರು. ನಮಗೂ ಕರೆ ಬಂತು. "ಕರೆ ಬಂದಿತಣ್ಣಾ ನೆರೆ ಬಂದಿತಣ್ಣಾ" ಎನ್ನುತ್ತ ಆ ಪಂಕ್ತಿಯಲ್ಲಿ ಕುಳಿತು ಅನ್ನ ಸಾರು, ಮಜ್ಜಿಗೆಯ ಊಟ ಮುಗಿಸಿ ನಿಲ್ದಾಣದತ್ತ ಮರಳಿದೆವು. ಶ್ರೀಮಾತಾರವಿಂದರ ದರ್ಶನದೊಂದಿಗೆ ಶ್ರೀರಮಣಮಹರ್ಷಿಗಳ ದರ್ಶನವೂ ಸಂಗಳಿಸಿದ್ದು ಹೆಚ್ಚು ಸಾರ್ಥಕವಾಯಿತು.

೪೬. ಕನ್ನಡಕ್ಕೆ ಮಾತಾರವಿಂದರ ಸಾಹಿತ್ಯ ಸಂಪರ್ಕ

ಪಾಂಡಿಚೇರಿಗೆ ಹೋಗಿ ಮೊದಲ ಸಾರೆ ಶ್ರೀಮಾತಾರವಿಂದರ ದರ್ಶನ ಪಡೆಕೊಂಡು ಬಂದ ನನ್ನಂತರಂಗವು ಅಗಾಧವಾದ ಬದಲಾವಣೆಯನ್ನು ಹೊಂದಿತು. ಆ ಬದಲಾವಣೆಯು ನೀಡಿದ ಹೊಸ ದೃಷ್ಟಿಯು ಸೃಷ್ಟಿಯ ಅನೇಕ ಸೋಜಿಗಗಳನ್ನು ಕಾಣತೊಡಗಿತು. ಅದರ ಪರಿಣಾಮದಿಂದ ಬರೆದ ಮೊಟ್ಟಮೊದಲನೇ ಕೃತಿಯೆಂದರೆ 'ನಮಸ್ಕಾರ' ಎಂಬ ಗದ್ಯ ಗೀತೆಗಳ ಸಂಕಲನ. ಅದರ ವಿಷಯ, ರಚನೆ, ಶೈಲಿಗಳೆಲ್ಲ ತೀರ ನವೀನತರದವಾಗಿ ಗೋಚರಿಸಿದವು. ಅದು ಓದುಗರ ಹೃದಯವನ್ನು ಸೋಂಕಿ, ಭಕ್ತಿಯ ಸೆಲೆಯನ್ನು ಮೇಲೆತ್ತುವ ಕಾರ್ಯಮಾಡುವದೆಂಬುದನ್ನು ಹಲವಾರು ಸ್ನೇಹಿತ ಸಾಹಿತಿಗಳು ತಮ್ಮ ಅನುಭವವನ್ನು ಅಭಿಪ್ರಾಯವೆಂದು ಪತ್ರ ಬರೆದು, ಪತ್ರಿಕೆಗಳಲ್ಲಿ ವಿಮರ್ಶಿಸಿ ತೃಪ್ತರಾಗಿದ್ದಾರೆ. ಅದು ನನ್ನನ್ನು ಪರಿತೃಪ್ತಿಗೊಳಿಸದೆ ಬಿಡಲಿಲ್ಲ.

ಪಾಂಡಿಚೇರಿ ಪ್ರವಾಸವನ್ನು ಕುರಿತು 'ಪುಣ್ಯಧಾಮ ಪಾಂಡಿಚೇರಿ' ಎಂಬ ಲೇಖನವನ್ನು 'ಪ್ರಪಂಚ' ವಾರಪತ್ರಿಕೆಯಲ್ಲಿ ಪ್ರಕಟಿಸಿದ್ದನ್ನು ಆಶ್ರಮದ ಸೆಕ್ರೆಟರಿಗಳಾದ ಶ್ರೀ ಎಂ.ಪಿ. ಪಂಡಿತರು ಓದಿ ಹರ್ಷಿತರಾಗಿ ತುಂಬು ಹೃದಯದಿಂದ ಒಂದು ಸಲಹೆ ನೀಡಿದರು -

"ಈ ಲೇಖನವನ್ನು ಇಂಗ್ಲಿಷಿನಲ್ಲಿ ತರ್ಜುಮೆ ಮಾಡಿಸಿ, ಯಾವ ಇಂಗ್ಲಿಷ ಪತ್ರಿಕೆಗೆ ಕಳಿಸಿದರೂ ಅದು ಮನ್ನಣೆ ಪಡೆಯುತ್ತದೆ."

ಆದರೆ ಗ್ರಾಮವಾಸಿಯಾದ ನನಗೆ ಅದನ್ನು ನೆರವೇರಿಸುವುದಕ್ಕೆ ಸಾಧ್ಯವಾಗಲಿಲ್ಲ.

ನಮಸ್ಕಾರದಲ್ಲಿ ಬಂದ - 'ಏನು ಆ ದೃಷ್ಟಿ' ಎಂಬ ಲೇಖನವನ್ನು ಹಿಂದಿಯಲ್ಲಿ ಮತ್ತು ಇಂಗ್ಲಿಷಿನಲ್ಲಿ ಭಾಷಾಂತರಿಸಿ ಆಶ್ರಮದಿಂದ ಪ್ರಕಟಿತಗೊಳ್ಳುವ ಪತ್ರಿಕೆಗಳಲ್ಲಿ ಪ್ರಕಟವಾಗುವಂತೆ ಮಾಡಿದವರು, ಆಶ್ರಮದ ಅಂತೇವಾಸಿಗಳಾದ ಶ್ರೀಶಂಕರಗೌಡ ಪಾಟೀಲರು. ಅದನ್ನು ಕಂಡು ಓದಿ, ಓದಿಸಿ ಕೇಳಿ ಧನ್ಯನಾದೆನು. ಮೂಕನು ಮಾತುಗಾರ, ಕುಂಟನು ಜಿಗಿದಾಟಗಾರ ಆಗುವಂಥ ಕೃಪೆ ಅದೆಂಥ ಕೃಪೆ - ಎಂಬುದರ ಮನವರಿಕೆ ಆಯಿತು.

ಆ ತರುವಾಯ ಬರೆದ ಚಿಕ್ಕ ಗ್ರಂಥವೆಂದರೆ, "ಭಾರತದ ಭವ್ಯ ಸಿದ್ಧತೆ" ಆ ಪುಸ್ತಕಕ್ಕೆ ಶ್ರೀ ಬೇಂದ್ರೆ ಅವರು ಕನ್ನಡಿಸಿದ "ಭಾರತದ ನವಜನ್ಮ" ವೇ ಪ್ರೇರಣೆ ನೀಡಿತು. ಅದು ಗೆಳೆಯರಿಂದ ಪ್ರಕಟನೆಗೊಂಡ ಶ್ರೀ ಅರವಿಂದರ ಮೊದಲ ಕೃತಿ ಎಂದು ಹೇಳಬೇಕು, "ಭಾರತದ ನವಜನ್ಮ" ವಿಚಾರಗಳನ್ನು ಅಲ್ಲಲ್ಲಿ ಮೈಲುಗಲ್ಲುಗಳನ್ನಾಗಿಸಿ, ನಡುವಿನ ಅಂತರವನ್ನು ಭಾರತ ಐತಿಹಾಸದ ಸಂಗತಿಗಳನ್ನು ಉದಾಹರಿಸಿದೆನು.

ಕನ್ನಡ ಪ್ರಾಥಮಿಕ ಶಾಲೆಯ ಶಿಕ್ಷಕನಿಗಿರುವ ಇತಿಹಾಸದ ಜ್ಞಾನವು ಇರುವುದಾದರೂ ಎಷ್ಟು? ಅಷ್ಟರಿಂದಲೇ ಭಾರತದ ಭವ್ಯಸಿದ್ಧತೆ ನಿಚ್ಚಳವಾಗಿ ಮೂಡಿಬರುವಂತೆ ಬರೆಯುವ ಶಕ್ತಿ ನನಗೆ ಅದೆಲ್ಲಿಂದ ಬಂತೋ ಇಂದಿಗೂ ತಿಳಿದಿಲ್ಲ.

ಇತಿಹಾಸ ವಿಷಯವನ್ನು ಪ್ರಧಾನವಾಗಿಟ್ಟುಕೊಂಡು ತೇರ್ಗಡೆ ಹೊಂದಿದ ಎಂ.ಎ. ಪದವೀಧರರು ಅದನ್ನು ಮನಸಾರೆ ಪ್ರಶಂಸಿಸಿದರೆಂದು ಮಾತ್ರ ಹೇಳಬಲ್ಲೆ. ಅಂದಿನಿಂದ ೩೦ ವರ್ಷದವರೆಗೆ ಭಾರತ ಇತಿಹಾಸವು ಅದಾವ ಗುರಿಯನ್ನು ಸಾಧಿಸುವ ಸಲುವಾಗಿ, ಹೋರಾಡುತ್ತ ಎರಿಬಂದ ಎಡರುಗಳನ್ನು ಕೊಚ್ಚಿಹಾಕುತ್ತ ಹೊರಟಿದೆ ಎಂಬುದನ್ನು ಸ್ಥೂಲವಾಗಿಯಾದರೂ ಸ್ಪಷ್ಟ ತಿಳಿಯಬಹುದಾಗಿದೆ. ಅದನ್ನು ತಮ್ಮ ಕಲ್ಪನಾ ಗ್ರಂಥಮಾಲೆ

ಹುಬ್ಬಳ್ಳಿಯಲ್ಲಿ, ಶ್ರೀ ಹಿರೇಮಲ್ಲೂರ ಈಶ್ವರನ್ ಅವರು ಪ್ರಕಟಿಸಿ ಕನ್ನಡಿಗರ ಕೈಗೆ ಕೊಟ್ಟರು, ಕನ್ನಡಿಗರ ಕಣ್ಣಿಗಿಟ್ಟರು. ಅದರಿಂದ ನನ್ನೆದೆಯು ಉಲ್ಲಾಸದಿಂದ ಗುಣಗುಣಿಸತೊಡಗಿತು.

ನಿದ್ದೆಯಲ್ಲಿ ಬಿದ್ದೇಕೆ ಆತ್ಮವೇ ಏಳು ಆಳದಿಂದ
ಏಳು ಏಳು ಜಗದಗ್ನಿ ಲಿಂಗವೇ ದೇವಕಿರಣದಿಂದ

ಎಂಬ ಉದಯರಾಗದಿಂದ ಯಾವ ತಾಯಿ ಹಾಡುತ್ತಿದ್ದಾಳೋ ಎಂಬುದು ನನ್ನದು ನನಗೇ ತಿಳಿಯದಂತಾಯಿತು. ಬರಬೇಕಾದದ್ದು ಬರುವ ಕಾಲಕ್ಕೆ ಮಾತ್ರ ಬರುವುದೆಂದು ತಿಳಕೊಂಡರೆ ಸಾಲದು. ನಮಗೆ ಬರಬೇಕಾದದ್ದು ಒಂದು ನಿಮಿಷ ಸಹ ತಡಮಾಡದೆ ಬರುವದು ಎಂಬ ಭರವಸೆಯನ್ನು ಗಟ್ಟಿಗೊಳಿಸಬೇಕು.

೧೯೪೭ನೇ ಆಗಸ್ಟ್ ೧೫ನೇ ದಿನಾಂಕ, ಅನೇಕ ಶತಮಾನಗಳಿಂದ ಭಾರತವು ಹೊತ್ತ ಘೋರವಾದ ಪಾರತಂತ್ರ್ಯವನ್ನು ಕಳಚಿಹಾಕಿ, ಸ್ವತಂತ್ರವಾದ ದಿನವಾದಂತೆ, ಅದು ಶ್ರೀ ಅರವಿಂದರ ೭೫ನೇ ಹುಟ್ಟು ಹಬ್ಬವೂ ಆಗಿದೆ. ಈ ಎರಡೂ ವಿಷಯಗಳಿಗೆ ನನ್ನದೂ ಒಂದು ವಿಷಯವನ್ನು ಜೋಡಿಸಬಹುದಾಗಿದೆ. ಅಂದು ನಾನು ಬರೆದ 'ಶ್ರೀ ಅರವಿಂದರು' ಎಂಬ ಚರಿತ್ರ ಗ್ರಂಥವು ಆಶ್ರಮದಲ್ಲಿಯೇ ಪ್ರಕಟಗೊಂಡಿತು. ಪ್ರಥಮ ಸ್ವಾತಂತ್ರ್ಯದಿನಾಚರಣೆಯಾದಂತೆ ಶ್ರೀ ಅರವಿಂದರ ೭೫ನೇ ಹುಟ್ಟು ಹಬ್ಬವಾದಂತೆ, ನನ್ನ ೪೨ನೇ ವಯಸ್ಸಿಗೆ ಶ್ರೀ ಅರವಿಂದ ಸಾಹಿತ್ಯ ಸಮಾರಾಧನೆಯನ್ನು ನಾನು ಆರಂಭಿಸಿದೆನೆಂದು ಹೇಳುವುದಕ್ಕೆ ಅಭಿಮಾನವೆನಿಸುತ್ತದೆ. ಆ ಗ್ರಂಥವು ಇಂಥ ಬರಡು ನಾಡಿನಲ್ಲಿ ಮೂರು ಸಾರಿ ಪುನರ್ಮುದ್ರಣ ಹೊಂದಿದೆ. ಪ್ರತಿ ಪುನಃ ಮುದ್ರಣ ಕಾಲಕ್ಕೆ ತೂಕದಲ್ಲಿ ಗಾತ್ರದಲ್ಲಿ ಅದು ಹೆಚ್ಚುವರಿಯಾಗುತ್ತಲೇ ಬಂತು.

೨ನೇ ಮುದ್ರಣವನ್ನು ಆಶ್ರಮವೇ ನಿರ್ವಹಿಸಿತು. ೩ನೇದು ಸಹ ಅದೇ ಹೆಜ್ಜೆಯನ್ನೇ ಅನುಕರಿಸಿತು. ಹೇಗೆಂದರೆ ಶ್ರೀ ಅರವಿಂದರ ಶತಮಾನೋತ್ಸವವನ್ನು ಕನ್ನಾಡು ಆಚರಿಸುವ ಕಾಲಕ್ಕೆ ಅಂದಿನ ಸರ್ಕಾರವು

ನನಗೆ ಕೊಟ್ಟ ಮೊತ್ತದ ಕೆಲವು ಭಾಗವೇ ಮುದ್ರಣ ವೆಚ್ಚ ನೋಡಿಕೊಂಡಿತು.

ಶ್ರೀ ಅರವಿಂದರ ತರುವಾಯ ಶ್ರೀಮಾತೆಯವರ ಚರಿತ್ರೆ 'ಶ್ರೀ ತಾಯಿಯವರು' ಎಂಬ ಹೆಸರಿನಿಂದ ಪ್ರಕಟವಾದಂತೆ, 'ಸುಪ್ರಮಾನಸದ ಶ್ರೀಮಾತೆ' ಎಂಬುದು ಇತ್ತೀಚಿನ ವರ್ಷಗಳಲ್ಲಿ ಪ್ರಕಟಗೊಂಡಿದೆ. ನಮ್ಮ ಶ್ರೀ ಅರವಿಂದ ಗ್ರಂಥಾಲಯದ ಪ್ರಕಟನೆಯಾಗಿಯೇ ಪ್ರಕಟಗೊಂಡಿದ್ದು ವಿಶೇಷವೆನ್ನಬೇಕು.

'ಶ್ರೀ ಅರವಿಂದರು' ಚರಿತ್ರ ಗ್ರಂಥದ ತರುವಾಯ ಬರೆದು ಪ್ರಕಟಿಸಿದ ಶ್ರೀಮಾತಾರವಿಂದರ ಚಿಕ್ಕ ಚಿಕ್ಕ ಅರೆಂಟು ಕೃತಿಗಳು ಕ್ರಮವಾಗಿ ಪ್ರಕಟಗೊಂಡವು.

'ಧರ್ಮ ಮತ್ತು ರಾಷ್ಟ್ರೀಯತ್ವ' ಎಂಬ ಕೃತಿ ಶ್ರೀ ಅರವಿಂದರದಾದರೂ ಬಹಳ ಹಿಂದಿನದು. ೧೯೦೯ನೇ ಇಸವಿಗಿಂತ ಮುಂಚಿನದು. ಅರವಿಂದರು ಅಲಿಪುರ ಜೇಲಿನಿಂದ ಹೊರಬಂದಾಗ ದೇಶದ ಪರಿಸರವೆಲ್ಲ ತಣ್ಣಗಾಗಿ ಬಿಟ್ಟಿತ್ತು. ಆಗ ಅವರು ಪ್ರಕಟಿಸಿದ ವಾರಪತ್ರಿಕೆಗಳಲ್ಲಿ ಕ್ರಮವಾಗಿ ಬಂದ ವಿಷಯಗಳ ಸಂಕಲನವೇ - 'ಧರ್ಮ ಮತ್ತು ರಾಷ್ಟ್ರೀಯತ್ವ' ಎಂಬ ಹೆಸರಿನಿಂದ ಪ್ರಕಟವಾಯಿತು. ಅದು ಬಂಗಾಲಿ ಭಾಷೆಯಲ್ಲಿ ಮೊದಲು ಪ್ರಕಟವಾಗಿ, ಆ ತರುವಾಯ ಹಿಂದಿಯಲ್ಲಿಯೂ ಅನುವಾದವಾಗಿ ಪ್ರಕಟಿಸಲಾಯಿತು. ಅವೆರಡರ ಅವಲೋಕನದಿಂದ ಕನ್ನಡದಲ್ಲಿ ಬರೆದದ್ದೇ "ಧರ್ಮ ಮತ್ತು ರಾಷ್ಟ್ರೀಯತ್ವ"

ನಾನು ಕನ್ನಡಿಸಿದ್ದೆಂದು ಹೇಳುತ್ತಿರುವುದು ಉದ್ದೇಶಪೂರಿತ ಆಗಿದೆ. ಬಂಗಾಲಿಯಿಂದಾಗಲಿ ಹಿಂದಿಯಿಂದಾಗಲಿ ಅನುವಾದಿಸುವುದು ಬೇರೆ. ಅನ್ಯ ಭಾಷೆಗಳಲ್ಲಿ ವಿವರಿಸಿದ ವಿಷಯವನ್ನು ಸಾದ್ಯಂತ ಸಾವಧಾನವಾಗಿ ಗ್ರಹಿಸುವುದು ಮೊದಲ ಕೆಲಸ. ಆ ಬಳಿಕ ಆ ವಿಷಯವನ್ನು ಕನ್ನಡದ ಪಡಿಯಚ್ಚಿನಲ್ಲಿ ಮೂಡಿಸುವುದು, ಕನ್ನಡಿಗರಿಗೆ ಕನ್ನಡದ ಕೈಯಲ್ಲಿ ಹೇಳುವುದು ಅಂದರೆ ಬರೆಯುವುದು ಈ ರೀತಿಯಲ್ಲಿ ಹಲವಾರು ಚಿಕ್ಕ

ಕೃತಿಗಳನ್ನು ಕನ್ನಡಿಸಿದೆ. ಅವು ನಮ್ಮ ಮಂಡಲದಿಂದ ಪ್ರಕಟಗೊಳ್ಳುತ್ತ ಬಂದವು. ಇದಕ್ಕೆ ದಿ. ಮಧುರಚೆನ್ನರು ನೀಡಿದ ಕಣ್ಣರಿಕೆ ಅಥವಾ ಮೇಲ್ವಿಚಾರಣೆ ಇದ್ದೇ ಇತ್ತು.

ಉತ್ತರ ಪಾರಾ ಉಪನ್ಯಾಸ ಅಲಿಗಡ ಜೇಲಿನಿಂದ ಹೊರಬಿದ್ದ ಶ್ರೀ ಅರವಿಂದರು ಮೊಟ್ಟ ಮೊದಲು ನೀಡಿದ ಭಾಷಣ, ಸ್ಥಳ ಉತ್ತರಪಾರಾ.

ಯೋಗದೀಕ್ಷೆ - ಇದು ಅನಿಲಬರಣರಾಯರ ಚಿಕ್ಕ ಕೃತಿ. ಅವರು ಮೂಲತಃ ಸುಭಾಸಚಂದ್ರರ ಅನುಯಾಯಿಗಳಾಗಿ ಸೆರಮನೆ ಕಂಡವರು. ಅಲ್ಲಿಂದ ಹೊರಬೀಳುತ್ತಲೇ ಬಂಗಾಲಕ್ಕೆ ಹೋಗದೆ ಪಾಂಡಿಚೇರಿಗೆ ತೆರಳಿ ಶ್ರೀ ಅರವಿಂದರ ದರ್ಶನ ಪಡೆದರು. ಅದರಂತೆ ಮಾತೆಯವರನ್ನು ಕಂಡರು. ಸೆರೆಮನೆಯಲ್ಲಿದ್ದಾಗಲೇ ಯೋಗದ ಬಗೆಗೆ ಕುತೂಹಲ ಹುಟ್ಟಲು ಅರವಿಂದರಿಗೆ ಪತ್ರ ಬರೆದು, ಸಂದೇಹ ನಿವಾರಣೆ ಮಾಡಿಕೊಳ್ಳಲು ತೊಡಗಿದ್ದರು. ಅದೇ ಕಾರಣದಿಂದ ಪಾಂಡಿಚೇರಿಗೆ ಹೋದರು, ತಾತ್ಪೂರ್ತಿಕವಾಗಿ ನಿಂತರು. ಕೊನೆಗೆ ಅಂತೇ ವಾಸಿಗಳಾಗಿ ಅಲ್ಲಿಯೇ ಉಳಿದರು. ಆತ್ಮನ ಹಾಡುಗಳು ಎಂಬ ಅನುಭವ ಪೂರಿತ ಚಿಕ್ಕಚಿಕ್ಕ ಪ್ರಬಂಧಗಳನ್ನು ಇಂಗ್ಲಿಷಿನಲ್ಲಿ ಬರೆದಿದ್ದಾರೆ. 'ಯೋಗದೀಕ್ಷೆ'ಯನ್ನು ನಾನು ನನ್ನ ಪದ್ಧತಿಯಂತೆ ಕನ್ನಡಿಸಿ ಪ್ರಕಟಿಸಿದ್ದು ಅರವಿಂದಮಂಡಲ - ಹಲಸಂಗಿಯದು ಮತ್ತು ಚಡಚಣದ್ದು.

ಪೂರ್ಣಯೋಗ - ಇದು ನಲಿನೀಕಾಂತಗುಪ್ತರು ಬಂಗಾಲದಲ್ಲಿ ಬರೆದ ಕೃತಿ. ಶ್ರೀ ಅರವಿಂದರು ಇಂಗ್ಲಿಷಿನಲ್ಲಿ ಬರೆದ 'ಯೋಗ ಸಮನ್ವಯ' ಬೃಹತ್ ಕೃತಿಯ ಸಾರಾಂಶ ಹೆಸರು ಪೂರ್ಣಯೋಗ. ಶ್ರೀ ಅರವಿಂದರು ತಮ್ಮ ಯೋಗಕ್ಕೆ 'ಪೂರ್ಣಯೋಗ' ಎಂದು ಹೆಸರು ಕೊಟ್ಟಿದ್ದಾರೆ. ಅದು ಮೊದಲು ಬಂಗಾಲಿ-ಹಿಂದಿಗಳಲ್ಲಿ ಪ್ರಕಟವಾಯಿತು. ಆಮೇಲೆ ನನ್ನ ಕೆಲಸ ಕನ್ನಡಿಸುವುದು ಹಾಗೂ ಪ್ರಕಟಿಸುವುದು.

ಉತ್ತರ ಪಾರಾ ಉಪನ್ಯಾಸವನ್ನು ಇಂಗ್ಲಿಷಿನಿಂದ ಭಾಷಾಂತರಿಸಿ, ನನ್ನೊಬ್ಬ ಸ್ನೇಹಿತರು ಶ್ರೀ ಎಂ.ಪಿ. ಪಂಡಿತ ಅವರ ಕಡೆಗೆ ಒಯ್ದು

ತೋರಿಸಿದರು. ಆಶ್ರಮ ಸೆಕ್ರೆಟರಿಗಳಾದ ಅವರು ಕನ್ನಡಿಗರಾದ್ದರಿಂದ ಸಹಜವಾಗಿ ಆ ಹಸ್ತಪ್ರತಿಯನ್ನು ಓದಿ ಮುಗಿಸಿದರು, ಚೆನ್ನಾಗಿದೆ ಎಂದರು ಮುದ್ರಿಸಬಹುದೇ ಎಂದರು ಆ ನನ್ನ ಸ್ನೇಹಿತರು.

"ಈಗಾಗಲೇ ಉತ್ತರಪಾರಾ ಉಪನ್ಯಾಸ ಕನ್ನಡದಲ್ಲಿ ಸಿಂಪಿ ಲಿಂಗಣ್ಣ ಬರೆದದ್ದು ಪ್ರಕಟವಾಗಿದೆಯಲ್ಲ?" ಎಂದರು.

"ಅಹುದು ಆದರೆ ಅದು ದೇಶಭಾಷೆಗಳಿಂದ ಕನ್ನಡಕ್ಕೆ ಬಂದದ್ದು. ನನ್ನದು ನೇರವಾಗಿ ಇಂಗ್ಲಿಷಿನಿಂದ ಕನ್ನಡಕ್ಕೆ ಬಂದದ್ದು"

"ಲಿಂಗಣ್ಣನವರ ಕೃತಿ ದೇಶಭಾಷೆಯಿಂದ ಕನ್ನಡಕ್ಕೆ ಇಳಿದದ್ದು ನಿಜ. ಆದರೆ ಅದನ್ನೋದಿದವರಿಗೆ ಮೂಲದಲ್ಲಿಯೇ ಓದಿದೆವೆಂದು ಅನಿಸುತ್ತದೆ" ಎಂದರು ಸೆಕ್ರೆಟರಿಯವರು.

ಕೊನೆಯದಾಗಿ ಆ ಸ್ನೇಹಿತರು, ಸೆಕ್ರೆಟರಿಯವರ ಸಮ್ಮತಿ ಪಡೆದು, ತಮ್ಮ ಅನುವಾದವನ್ನು ಒಂದು ಪತ್ರಿಕೆಯಲ್ಲಿ ಇಡಿಯಾಗಿ ಪ್ರಕಟಿಸಿದರು.

ಶ್ರೀಮಾತೆಯವರ ರಚನೆ 'ಸುಂದರ ಕಥೆಗಳು' ಅದೂ ಕನ್ನಡಕ್ಕೆ ತಂದ ಕೃತಿಯೇ ಸೈ. ಕನ್ನಡದಲ್ಲಿ ಅದು ಎರಡು ಮುದ್ರಣಗಳನ್ನು ಪಡೆದಿದೆ, ಕನ್ನಡಿಸಿದ್ದು ಸಿಂಪಿಲಿಂಗಣ್ಣ.

ಶ್ರೀಮಾತೆಯವರು ಹೇಳಿದ ಚಿಕ್ಕಚಿಕ್ಕ ವಾಕ್ಯಗಳಲ್ಲಿ ಒಡೆದು ಕಾಣಿಸುವ ಸುಮಾರು ೮೦ ವಾಣಿಗಳ ಸಂಗ್ರಹ 'ಮಾತೃವಾಣಿ'. ಆದರೆ ಆ ವಾಣಿಗಳನ್ನು ಇದ್ದಕ್ಕಿದ್ದ ಹಾಗೆ ಗದ್ಯರೂಪದಲ್ಲಿ ಕನ್ನಡಿಸಿದೆ, ಅವುಗಳಗೆ ಪದ್ಯ ರೂಪ ಕೊಟ್ಟೆ. ಹಾಗೆ ಮಾಡುವುದರಿಂದ ಆ ವಾಣಿಗಳನ್ನು ಹಾಡಿ ನೆನಪಿಸಿರಿಸಿಕೊಳ್ಳುವುದಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಅಲ್ಲಿ ಸಂಕಲನಗೊಂಡ ಅಷ್ಟೇ ವಾಣಿಗಳಿಂದ ಪ್ರತಿಯೊಬ್ಬನು ತನ್ನದೇ ಆದ ಜೀವನ ಮಂದಿರವನ್ನು ರಚಿಸಿಕೊಳ್ಳಲು ಸಾಧ್ಯವೆಂದು ನನಗೆ ಅನಿಸಿದ್ದರಿಂದ ಆ ಗದ್ಯವಾಣಿಗಳನ್ನು ಆಯಾ ಪ್ರಸಂಗಗಳಲ್ಲಿ ಉಪಯೋಗಿಸಿ ಒಂದು ಪ್ರಸ್ತಾವನೆ ಬರೆದೆ. ಅದನ್ನೋದಿದವರಿಗೆ ಮಾತೃವಾಣಿಯ ಪ್ರಯೋಜನವನ್ನು ಯಾವ ವಿಧದಲ್ಲಿ ಪಡೆಯಬಹುದು ಎಂಬುದನ್ನು ಕಲ್ಪಿಸಲು ದಾರಿಯಾಗುತ್ತದೆ.

ಶ್ರೀಮಾತಾರವಿಂದರ ಚೆಂಬೆಳಕಿನಲ್ಲಿ ನಾನು ಹಲವಾರು ಮಹಾಮಹಿಮರ ಜೀವನ ಚರಿತ್ರೆಗಳನ್ನು ಓದಿಕೊಂಡಿದ್ದೇನೆ. ನಾನು ಕಂಡ ರೀತಿಯಲ್ಲಿ ಅವರನ್ನು ಬಣ್ಣಿಸಿದ್ದೇನೆ, ನುಣ್ಣಿಸಿದ್ದೇನೆ. ಭಕ್ತಿ ಭಂಡಾರಿಯೆನಿಸಿದ ಬಸವಣ್ಣ, ಜ್ಞಾನ ಭಾಂಡಾರಿಯೆನಿಸಿದ ವಿದ್ಯಾರಣ್ಯ ಈ ಉಭಯರ ಜೀವನವನ್ನು ಒರೆದು, ಅರೆದು ಬರೆದಿದ್ದೇನೆ. ಆ ಬರಹಗಳನ್ನು ಓದಿಕೊಂಡವರಿಗೆ ಕೂಡಲೇ ಅನಿಸಿಬಿಡುತ್ತದೆ ಈ ಜೀವನವು ಚೆಂಬೆಳಕಿನಲ್ಲಿ ಕಂಡಿದ್ದಾಗಿದೆ.

ರಾಮತೀರ್ಥಸ್ವಾಮಿಗಳ ಚರಿತ್ರೆ - ತೀರ್ಥರಾಮರು ರಾಮತೀರ್ಥರಾದದ್ದು ಹೇಗೆ? ಎಂಬ ವಿವರವೇ 'ರಾಮತೀರ್ಥರ ತೀರ್ಥ'

ವಿವೇಕಾನಂದ ಸ್ವಾಮಿಗಳ ಬೋಧೆ ಚರಿತ್ರೆಗಳ ಚಿಂತನ ಮನನಗಳ ಸತತಾಭ್ಯಾಸದಿಂದ 'ಸಿಡಿಲು ಸನ್ಯಾಸಿ' ಮೈದೋರಿದೆ.

ಅದರಂತೆ, ಶ್ರೀ ರಾಮಕೃಷ್ಣ ಪರಮಹಂಸರ ಚರಿತ್ರೆ-ಸಂಬೋಧೆಗಳ ಸಂಪರ್ಕದಿಂದ 'ಮಹಾಮನು' ರಾಮಕೃಷ್ಣ ಪರಮಹಂಸರು, ರೂಪುದೊಟ್ಟು ಪ್ರಕಟಗೊಂಡಿದೆ.

ರವೀಂದ್ರನಾಥರು ವಿಶ್ವಕವಿಗಳಾಗಿ ಕಂಗೊಳಿಸುವುದಕ್ಕೆ ನಾನು ಅವರನ್ನು ಅದೇ ಚೆಂಬೆಳಕಿನಲ್ಲಿಯೇ ಕಂಡಿದ್ದೇ ಕಾರಣವೆನ್ನಬಹುದು.

ಮ. ಗಾಂಧಿ ಅವರು 'ಶತದಳ'ವಾಗಿ ಕುಡಿಬಿಟ್ಟರು.

ಯುಗಾಂತರದ ಈ ಯುಗಪುರುಷರು 'ರತ್ನದ ರಸದಾಕಾರಂಜಿಯು ಪುಟಪುಟನೆ ಪುಟಿಯುವುದನ್ನು ಶ್ರೀಮಾತಾರವಿಂದರ ಚೆಂಬೆಳಕಿನ ಹಿನ್ನೆಲೆಯಲ್ಲಿ ತೋರ್ಪಡಿಸಲು ಪ್ರಯತ್ನಿಸಿದ್ದೇನೆ.'

ಈ ಚರಿತ್ರೆಗಳನ್ನು ಅವಲೋಕಿಸಿದವರು, ಶ್ರೀ ಅರವಿಂದರ ಹಾಗೂ ಮಾತೆಯವರ ಚರಿತ್ರೆ-ವಿಚಾರ ಸರಣಿಗಳತ್ತ ಒಲಿಯದಿರಲು ಸಾಧ್ಯವೇ ಇಲ್ಲ. ಅವರದು ಯುಗಾಂತರದ ಕಾಲ, ಇವರದು ಮನ್ವಂತರದ ಕಾಲ. ಯುಗಾಂತರ ಕಾಲವು ಅನುಭಾವದ ಹಸಿವೆಯನ್ನು ಹುಟ್ಟಿಸಿದರೆ, ಮನ್ವಂತರದ ಕಾಲವು ದೇವಕ್ಷೀರವನ್ನುಣಿಸಿ ತಣಿಸುವದು.

ನಾವು ಹೋಗುವದೆಲ್ಲಿಗೆ ಎಂಬುದನ್ನು ತಿಳಕೊಳ್ಳುವುದು ಅತ್ಯವಶ್ಯಕ ಸಂಗತಿಯಾದಂತೆ, ನಾವು ಎಲ್ಲಿಂದ ಹೊರಟಿದ್ದೇವೆ ಎನ್ನುವುದೂ ತಿಳಿಯದಿದ್ದರೆ ದಾರಿ ಅಷ್ಟೊಂದು ಸುಗಮವಾಗದೇ ಇರದು. ಜನಪದ ಸಾಹಿತ್ಯದ ಪ್ರತಿನಿಧಿಗಳೇ ನಾವಾಗಿದ್ದರೂ ಶಿಷ್ಟ ಸಾಹಿತ್ಯಕ್ಕೆಳಸದೆ, ಹಾಗೂ ಅದನ್ನು ಬಳಸದೆ ಇರಲಿಕ್ಕಾಗದು. ಜನಪದ ಸಾಹಿತ್ಯಕ್ಕೆ ಶಿಷ್ಟಸಾಹಿತ್ಯವೊಂದೇ ಸಾಲದು, ಅದಕ್ಕೆ ವಿಶಿಷ್ಟ ಸಾಹಿತ್ಯದ ಪೌಷ್ಟಿಕವೂ ಬೇಕು, ಬೇಕೇ ಬೇಕು.

ಮಗು ಮಾನವನ ತಂದೆಯೆನಿಸುತ್ತಾನೆ. ಅದರಂತೆ ಮಾನವನು ಮಗುವಿನ ತಂದೆಯೆನಿಸುವುದೂ ಸಾಧ್ಯ. ಆಲದ ಮರದ ಕೆಳಗೆ ಬಿದ್ದ ಸಾಸಿವೆಕಾಳು ಗಾತ್ರದ ಬೀಜವು ತಲೆಯೆತ್ತಿ ಹೆಡೆಯೆತ್ತಿ ಮರಕ್ಕೆ ಕೇಳುತ್ತದಂತೆ-

"ಓ ಮರವೇ, ನಾನು ನಿನ್ನ ಮಗುವೋ ತಂದೆಯೋ?"

ಆ ವಿಧವಾಗಿ ಜನಪದ ಬೀಜದಲ್ಲಿ ಆಲದಮರ ಹುದುಗಿರುತ್ತದೆಂದು ತಿಳಿಸಿಕೊಡುವುದೇ ವಿಶಿಷ್ಟ ಸಾಹಿತ್ಯದ ಕೆಲಸ. ಅದು ಧರ್ಮವೂ ಆಗಿದೆ. ಅದಕ್ಕೆ ಬಹಳ ಹಿಂದಿನ ಮಾತು -

ಸ್ವಾತಂತ್ರ್ಯ ಚಳುವಳಿಯು ಇನ್ನೂ ಹೆಚ್ಚು ಮಾಗಿರಲಾರದ ಕಾಲ. ಆಗ ನನಗೆ ಗದುಗಿನ ಮಿತ್ರರೊಬ್ಬರು ಕೇಳಿದರು - "ನಮಗೆ ಸ್ವರಾಜ್ಯ ದೊರೆತುದೇಕೆ" ಎಂದು ವಿಷಯವಾಗಿ ಒಂದು ಪ್ರಬಂಧವನ್ನು ಬರೆದುಕೊಟ್ಟರೆ ಅದನ್ನು ನಾವು ಪ್ರಕಟಗೊಳಿಸಬೇಕೆನ್ನುತ್ತೇವೆ. ಆ ಅಜಾದ್ ಹಿಂದ್ ಸೇವಕಸಂಘದ ಮಿತ್ರರಾರೆಂದರೆ ಶ್ರೀ ಕೌತಾಳವೀರಪ್ಪನವರು. ನನ್ನಂತೆ ಅವರೂ ಶಿಕ್ಷಕರು, ಆದರೆ ಪತ್ರಿಕಾಪ್ರಿಯರು, ನಾನೂ ಹಾಗೆಯೇ ಆದ್ದರಿಂದ ಇಬ್ಬರ ಕುಲಗೋತ್ರಗಳು ಕೂಡಿದವು, ನಂಟುತನ ಕೂಡಿತು.

ಮುಂದಿನ ೨ ತಿಂಗಳಲ್ಲಿ ಅವರು ಕೇಳಿದ ಪ್ರಬಂಧವನ್ನು ಬರೆದುಕೊಟ್ಟೆ, ಆ ಸೇವಕ ಸಂಘದವರೂ ಪ್ರಕಟಿಸಿದರು.

ನಾನು, ನನ್ನ ಪ್ರಬಂಧದಲ್ಲಿ ಸ್ವಾತಂತ್ರ್ಯ ಚಳುವಳಿಯ ಬೀಜಾರೋಹಣ, ವಂದೇ ಮಾತರಂ, ಸ್ವದೇಶಿ, ರಾಷ್ಟ್ರೀಯ ಶಿಕ್ಷಣ, ಮೊದಲಾದ ನಾಟಿಗೆಗಳು ಕಾಣಿಸಿಕೊಂಡಿದ್ದಕ್ಕೆ ಶ್ರೀ ಅರವಿಂದರ ಹಾಗೂ ಅವರ ಅನುಯಾಯಿಗಳ ತ್ಯಾಗಪ್ರಯತ್ನಗಳ ಫಲವೆಂದು ನಾನು ಪ್ರತಿಪಾದಿಸಿದೆ. ಸ್ವತಂತ್ರ ರಾಷ್ಟ್ರದ ಬೀಜ ಬಿತ್ತಿದವರು ಶ್ರೀ ಅರವಿಂದರು. ಆ ಮೊಳಕೆ ಬೆಳೆಸಿ ಕಾಪಾಡಿಕೊಂಡು ಪಸಲು ಗಳಿಸಿದವರು ಗಾಂಧಿಯವರು ಎಂದು ಸಾಧಿಸಿದ್ದೆ. ಅದು ಅವರ ಮನಸ್ಸಿಗೂ ಸೂಕ್ತವೆನಿಸಿತು. ಆ ಬಳಿಕ, ನಾಲ್ಕಾರು ವರ್ಷ ಗತಿಸಿದ ಮೇಲೆ ಶ್ರೀ ಕೌತಾಳರು ಹೇಳಿದ ಸಂಗತಿಯನ್ನು ಈ ಕೆಳಗೆ ಕಾಣಿಸಿದ್ದೇನೆ.

ಗದುಗಿನ ಒಬ್ಬ ತರುಣನು, ವಿದ್ಯಾರ್ಥಿಯಾಗಿ ಲಂಡನ್ನಿನಲ್ಲಿದ್ದನು. ಆತನ ಸಹಪಾಠಿಗಳು ಆಗೀಗ ಸಭೆಗಳನ್ನು ಮಾಡಿ ಸೂಕ್ತ ವಿಷಯವನ್ನು ತಿಳಕೊಳ್ಳುತ್ತಿದ್ದರು. ಆಗ ಚಳುವಳಿಯ ಸುಗ್ಗೀಕಾಲ, ವಿದ್ಯಾರ್ಥಿಗಳು ಆ ವಿಷಯವನ್ನು ಪತ್ರಿಕೆಗಳಲ್ಲಿ ಓದುತ್ತಿದ್ದರು. ಗದುಗಿನಿಂದ ಬಂದ ತರುಣ ಸಹಪಾಠಿಯ ಬಾಯಿಂದ ಸ್ವಾತಂತ್ರ್ಯ ಚಳುವಳಿಯ ಕುರಿತು ಅರಿತು ಕೊಳ್ಳಬೇಕೆಂದು ಸಹಪಾಠಿಗಳು ಆಶಿಸಿದರು ಮತ್ತು ಗದುಗಿನ ಆ ತರುಣನಿಗೆ ತಮ್ಮ ಅಪೇಕ್ಷೆಯನ್ನು ತಿಳಿಸಿದರು.

ಗದುಗಿನ ತರುಣನು, ತಿಂಗಳೊಪ್ಪತ್ತು ಅವಕಾಶ ಕೊಟ್ಟರೆ, ಆ ವಿಷಯ ಕುರಿತು ಮಾತಾಡುವೆನು ಎಂದನು. ಅವನು ಗದಗಿನಲ್ಲಿ 'ನಮಗೆ ಸ್ವರಾಜ್ಯ ದೊರೆತುದು ಏಕೆ?' ಎಂಬ ಪುಸ್ತಕವನ್ನು ಓದಿದ್ದನು. ಅದನ್ನು ಕಳಿಸಿಕೊಡಲು ಶ್ರೀ ಕೌತಾಳರಿಗೆ ಪತ್ರ ಬರೆಯಲು ಅವರು ೨ ಪತ್ರಿಕೆಗಳನ್ನು ಅಂಚೆಯ ಮೂಲಕ ಇಂಗ್ಲೆಂಡಿಗೆ ಕಳಿಸಿದರು.

ಅವು ಗದುಗಿನ ತರುಣನ ಕೈ ಸೇರಿದವು. ಆ ವಿಷಯವನ್ನು ಮತ್ತೊಮ್ಮೆ ಅವಲೋಕನ ಮಾಡಿ ಸಹಪಾಠಿಗಳ ಸಭೆಯಲ್ಲಿ ವಿಶದಪಡಿಸಿದನು. ಆ ಭಾಷಣ ಕೇಳಿ, ಆ ವಿದ್ಯಾರ್ಥಿಗಳು ಅಚ್ಚರಿಗೊಂಡರು. ಪತ್ರಿಕೆಗಳಲ್ಲಿ ಓದಿದ್ದಕ್ಕೂ, ಆ ಭಾಷಣದಲ್ಲಿ ಕೇಳಿದ ವಿಷಯಕ್ಕೂ ಮಹದಂತರವೆನಿಸಿತು. ಗದುಗಿನ ತರುಣ ಸಹಪಾಠಿಯನ್ನು ಬಾಯಿತುಂಬ ಅಭಿನಂದಿಸಿದರು. ಅಲ್ಲದೆ, ಗದುಗಿನಿಂದ ಬಂದ ೨ ಪುಸ್ತಕದ ಎರಡು ಪ್ರತಿಗಳನ್ನು ಲಂಡನ್ನಿನ

ದೊಡ್ಡ ಲೈಬ್ರರಿಯಲ್ಲಿಟ್ಟರು. ಆ ಪುಸ್ತಕಾಲಯದಲ್ಲಿ ಸ್ಥಳ ದೊರಕಿಸಿದ ಕನ್ನಡ ಪುಸ್ತಕವೆಂದರೆ ನಮಗೆ ಸ್ವರಾಜ್ಯ ದೊರೆತುದೇಕೆ? ಆಗಿತ್ತು.

ಶ್ರೀ ರಾಮತೀರ್ಥಸ್ವಾಮಿಗಳ ಚರಿತ್ರೆ ಅಲ್ಲದೆ, ಅವರ ಉಪನ್ಯಾಸ ಸಂಗ್ರಹದ ೩ ಗ್ರಂಥಗಳನ್ನು, ಅವರು ಉಸುರಿದ ದೃಷ್ಟಾಂತ ಕಥೆಗಳನ್ನೂ ಪುಸ್ತಕ ರೂಪದಲ್ಲಿ ಪ್ರಕಟಪಡಿಸಿದ್ದೇನೆ. 'ಸುಖದ ನೆಲೆ', 'ಮನೆಯಲ್ಲೆ ಮುಕ್ತಿಯ ದಾರಿ', 'ಭಾರತ ಸಮಸ್ಯೆ' ಇವು ಸ್ವಾಮಿಗಳು ಮಾಡಿದ ಉಪನ್ಯಾಸ ಸಂಗ್ರಹಗಳಾಗಿವೆ. 'ಬಿಚ್ಚುಮೊಗ್ಗೆ'ಯೆನ್ನುವುದು ಅವರ ದೃಷ್ಟಾಂತ ಕಥೆಗಳ ಸಂಗ್ರಹವಾಗಿದೆ. 'ರಾಮತೀರ್ಥರ ಪತ್ರಗಳು' ಎಂಬ ಅತ್ಯಮೌಲ್ಯ ಕೃತಿಯೂ ನಮ್ಮ ಪ್ರಕಟನೆಗಳಲ್ಲಿ ಒಂದಾಗಿದೆ.

ಸುಖದ ನೆಲೆ, ಮನೆಯಲ್ಲೇ ಮುಕ್ತಿಯ ದಾರಿ ಎಂಬ ಉಪನ್ಯಾಸ ಸಂಕಲನಗಳನ್ನು ಓದಿದ ಶ್ರೀ ಕೋ. ಚೆನ್ನಬಸಪ್ಪನವರಂಥ ಮೇಧಾವಿಗಳು ಪಡುವ ಅಭಿಪ್ರಾಯಗಳನ್ನು ಒಂದೇ ಮಾತಿನಲ್ಲಿ ಹೇಳಬಹುದಾದರೆ, 'ಶ್ರೀ ರಾಮತೀರ್ಥ ಸ್ವಾಮಿಗಳೇ ಕನ್ನಡದಲ್ಲಿ ಬರೆದಂತಿವೆ'.

ಜನಪದ ಸಾಹಿತ್ಯವನ್ನು ಸಂಕಲನ ರೂಪದಲ್ಲಿ ಕನ್ನಡಿಗರ ಕೈಗೆ ಮೊಟ್ಟ ಮೊದಲು ಕೊಟ್ಟ ಮೂವರಲ್ಲಿ ನಾನೂ ಒಬ್ಬನೆಂಬುದು ನಾಡಿಗೆಲ್ಲ ತಿಳಿದ ವಿಷಯ. ತ್ರಿಪದಿಗಳ ಸಂಗ್ರಹ - ಗರತಿಯ ಹಾಡು, ಸಂಸಾರ ವೇದವೆನಿಸಿದೆ ಗಂಡು ಮಕ್ಕಳ ಸಾಹಿತ್ಯದ ಪ್ರಮುಖ ಪ್ರಕಾರವಾದ ಲಾವಣಿಗಳನ್ನು 'ಜೀವನ ಸಂಗೀತ' ಎಂಬ ಸಂಕಲನದಲ್ಲಿ ಕಾಣಬಹುದು. ದಿ. ಧೂಲಾ ಅವರೊಡನೆ ಮಾಡಿದ ಆ ಕೆಲಸ ವಿಶಿಷ್ಟ ಮಾದರಿಯಾಗಿದೆ ಇನ್ನು ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಜನಪದ ಕಥೆಗಳನ್ನು ಸಂಗ್ರಹಿಸಿ ಅದಕ್ಕೊಪ್ಪುವ ಮುನ್ನುಡಿಯನ್ನು ತೊಡಿಸಿ 'ಉತ್ತರ ಕರ್ನಾಟಕದ ಕಥೆಗಳು' ಎಂಬ ಹೆಸರಿನಿಂದ ಕೇಂದ್ರ ಸಾಹಿತ್ಯ ಅಕಾಡೆಮಿ ಅವರಿಗೆ ಪ್ರಕಟಿಸಲು ಕೊಟ್ಟೆ.

ಅದು ೨ನೇ ಮುದ್ರಣವನ್ನು ಕಂಡಿತಲ್ಲದೆ, ತೆಲುಗು ಭಾಷೆಗೂ ಅನುವಾದವಾಗಿದೆ.

ಜನಪದ ಸಾಹಿತ್ಯದ ಆದ್ಯ ಸಂಕಲನಗಳಲ್ಲದೆ ಅವುಗಳನ್ನು ಕುರಿತು ಬರೆದ ವಿವೇಚನೆಗಳೂ ಪುಸ್ತಕ ರೂಪದಿಂದ ಪ್ರಕಟಗೊಂಡಿವೆ. ಗರತಿಯ ಬಾಳು, ಜನಾಂಗದ ಜೀವಾಳ, ಹೆಡಿಗೆ ಜಾತ್ರೆ, ಗರತಿಯ ಬಾಳಸಂಹಿತೆ ಇತ್ಯಾದಿ.

ಇವುಗಳಲ್ಲಿ ಮೊದಲಿನ ೨ ಗ್ರಂಥಗಳಿಗೆ ಕರ್ನಾಟಕ ಸರ್ಕಾರ ಮತ್ತು ರಾಜ್ಯ ಸಾಹಿತ್ಯ ಅಕ್ಯಾಡೆಮಿ ಅವರಿಂದ ಬಹುಮಾನ ದೊರೆತಿವೆ. ನಾಲ್ಕನೇ ಗ್ರಂಥಕ್ಕೆ ರಾಜ್ಯ ಅಕ್ಯಾಡೆಮಿ ಅವರಿಂದ ಮುದ್ರಣವೆಚ್ಚ ದೊರೆತಿದೆ.

ಜನಪದ ಸಾಹಿತ್ಯವನ್ನು ಕುರಿತು ನಾನು ಆಗೀಗ ಬರೆದ ಲೇಖನಗಳ ಸಂಖ್ಯೆ ೩೬-೪೦ ಇದ್ದು, ಪುಸ್ತಕ ರೂಪದಲ್ಲಿ ಪ್ರಕಟಿಸುವುದಾದರೆ ಒಂದು ಸಾವಿರ ಪುಟಗಳ ಬೃಹತ್ ಗ್ರಂಥವಾಗಬಹುದು. 'ಉಳ್ಳವರು ಶಿವಾಲಯ ಮಾಡಿದರು, ನಾನೇನು ಮಾಡಲಯ್ಯ ಬಡವ ನಾನಯ್ಯ' ಎಂದು ವಿನಮ್ರವಾಗಿ ಹೇಳಿಕೊಳ್ಳುತ್ತೇನೆ.

೪೭. ಮಕ್ಕಳು ಸಾಧಿಸಿದ ಶಿಕ್ಷಣ ಮತ್ತು ಸಾಹಿತ್ಯ

೧. ಭುವನೇಶ್ವರಿ ಸಿದ್ಧರಾಮಪ್ಪ ಬಾಗಲಕೋಟೆ ಸೊಲ್ಲಾಪುರ, ಕನ್ನಡ ಶಾಲೆಯ ಶಿಕ್ಷಕಿ - ಈಕೆ ಓದಿದ್ದು ಮುಲ್ಕೀ ಪರೀಕ್ಷೆಯವರೆಗೆ. ಬಳಿಕ ಧಾರವಾಡದ ವನಿತಾ ಟ್ರೇ.ಕಾ.ದಲ್ಲಿ ತರಬೇತಿ ಪಡೆದು ಶಿಕ್ಷಕಳಾದಳು. ಕನ್ನಡ ಹೆಣ್ಣುಮಕ್ಕಳ ಶಾಲೆಯಲ್ಲಿ ಅದು ಆಕೆಗೆ ಹಾಗೂ ಮನೆತನಕ್ಕೆ ಉದರನಿರ್ವಾಹದ ದಾರಿಯಾಯಿತು. ಆರಂಭದಲ್ಲಿ ಚಡಚಣ ಗ್ರಾಮದಲ್ಲಿದ್ದುಕೊಂಡು ಶಿಕ್ಷಕ ವೃತ್ತಿಯನ್ನು ಆರಂಭಿಸಿದಳು. ಆ ಬಳಿಕ ಸೊಲ್ಲಾಪುರ ಮುನಸೀಪಾಲಟಿಯು ಹೆಣ್ಣುಮಕ್ಕಳ ಶಾಲೆಯುಲ್ಲಿ ಕೆಲಸವನ್ನು ಮುಂದುವರಿಸಿದ್ದಾಳೆ.

ಅನುಷಂಗಿಕವಾಗಿ ಕನ್ನಡದಲ್ಲಿ ಬರುವ ಆಧುನಿಕ ಸಾಹಿತ್ಯವನ್ನು ಅಭ್ಯಸಿಸಿ, ಸಣ್ಣಕತೆಗಳನ್ನು ಬರೆಯತೊಡಗಿದಳು. 'ತಾಯಿ ಕಾಣದ ಜೀವ' ಮತ್ತು 'ಕರುಳಿನ ಕರೆ' ಈ ಎರಡೂ ಆಕೆಯ ಸಣ್ಣ ಕತೆಗಳ ಸಂಕಲನ. ಅವು ನಾಡ ಸಾಹಿತಿಗಳಿಂದ ಮನ್ನಣೆ ಪಡೆದಿವೆ. ಆಕೆ ಬರೆದ ಕಾದಂಬರಿ ಒಂದೇ ಒಂದು. ಅದರ ಹೆಸರು - ಅತ್ತಿಗೆ ಮೈದುನ. ಅದು ಹೆಣ್ಣಿನ ಜೀವನವನ್ನು ಇದ್ದಕ್ಕಿದ್ದ ಹಾಗೆ ಚಿತ್ರಿಸಿ ಓದುಗರ ಹೃದಯವನ್ನು ಮಿಡಿಸುತ್ತದೆ ಆದರೆ ಇತ್ತೀಚಿನ ಹಲವಾರು ವರ್ಷಗಳಿಂದ ಅಸ್ವಾಸ್ಥ್ಯಕ್ಕೆ ಈಡಾಗಿದ್ದಾಳೆ. ಬರೆಯುವ ಕೆಲಸ ಮುಂದುವರಿಸಿಲ್ಲ. ಆದರೆ ಕನ್ನಡ ಹಳೆಯ ಸಾಹಿತ್ಯ, ವಚನಾವಾಙ್ಮಯ ಮತ್ತು ಶ್ರೀಮಾತಾರವಿಂದರ ಅಮೋಘ ವಿಚಾರಗಳನ್ನು

ಅಳವಡಿಸಿಕೊಂಡು ಆಂತರಿಕ ಜೀವನವನ್ನು ಪ್ರಫುಲ್ಲಗೊಳಿಸುವ ಸಾಧನೆ ನಡೆಸಿದ್ದಾಳೆ. ಈಗ ಆಕೆಯ ವಯಸ್ಸು ೫೫ ಮೀರಿದೆ. ೨ ಹೆಣ್ಣು ೧ ಗಂಡು ಮಕ್ಕಳ ತಾಯಿಯಾಗಿ ಮಿತಸಂತಾನಕ್ಕೆ ಮಾದರಿ ಆಗಿದ್ದಾಳೆ.

೨. ಭವತಾರಿಣಿ ರೇವಪ್ಪ ಕೇಶೆಟ್ಟಿ ಚಡಚಣ ಈಕೆ ಮರುಚಲ ಮಗಳು ಕಲಿತದ್ದು ಕನ್ನಡ ೬ನೇ ತರಗತಿಯವರೆಗೆ ಮಾತ್ರ. ಆದರೆ ಅದ್ಭುತವಾದ ಓದಾಳಿ ಆಗಿದ್ದಳು. ೬ ಮಕ್ಕಳ ತಾಯಿ. ತೀರ ಚಿಕ್ಕಂದಿ ನಲ್ಲಿಯೇ ಜನಪದ ಕಥೆಗಳನ್ನು ಹೇಳುವುದರಲ್ಲಿ ಪ್ರವೀಣಳೆನಿಸಿಕೊಂಡಳು. ನೂರಾರು ಜನಪದ ಕಥೆಗಳನ್ನು ಬಲ್ಲವಳು. ಅಷ್ಟೇ ಹಾಡುಗಳನ್ನು ಹೇಳುವವಳೂ ಆಗಿದ್ದಳು. ಆಕೆ ಕ್ಯಾನ್ಸರ ರೋಗದಿಂದ ಬಳಲಿ ೩ ವರ್ಷಗಳ ಹಿಂದೆ ಗತಿಸಿದಳು. ಆಕೆಯ ಕಥೆ ಕೇಳುವುದಕ್ಕೆ ಓಣಿಯೊಳಗಿನ ನೂರಾರು ಜನ ಹೆಣ್ಣುಮಕ್ಕಳಂತೆ ಗಂಡು ಮಕ್ಕಳೂ ಸೇರುತ್ತಿದ್ದುದು ಅಚ್ಚರಿಯ ಸಂಗತಿ.

೩. ವೀರೇಂದ್ರ ಸಿಂಪಿ ಎಂ.ಎ. ಇಂಗ್ಲಿಷ್ ಪ್ರವಾಚಕ ಬೀದರದ ಭೂಮರೆಡ್ಡಿ ಕಾಲೇಜ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ. ಲಲಿತ ಪ್ರಬಂಧ ರಚಿಸುವುದರಲ್ಲಿ ಚೆನ್ನಾಗಿ ಪಳಗಿದ್ದಾನೆ. ಇಂಗ್ಲಿಷ್ ಸಾಹಿತ್ಯವನ್ನು ಸಾಕಷ್ಟು ಅಳವಡಿಸಿಕೊಂಡು ಅದಕ್ಕೆ ಸಮಾಂತರವಾಗಿ ಕನ್ನಡ ಸಾಹಿತ್ಯವನ್ನೂ ಅಭ್ಯಸಿಸಿದ್ದಾನೆ. ಕಾಗದ ಚೂರು, ಭಾವಮೈದುನ ಇವು ಆತನ ಲಲಿತ ಪ್ರಬಂಧಗಳ ಸಂಕಲನಗಳಾಗಿವೆ. 'ಸ್ವಚ್ಛಂದಮನದ ಸುಳಿದಾಟ' ಎಂಬ ಪ್ರಬಂಧ ಸಂಕಲನವು ಕ.ವಿ. ವಿದ್ಯಾಲಯ ಬಿ.ಎ. ಭಾಗ ೧ ವರ್ಗಕ್ಕೆ ಪಠ್ಯ ಪುಸ್ತಕವಾಗಿತ್ತು. ಇಂಡೀ ತಾಲೂಕಿನ ಸಮಗ್ರ ಪರಿಚಯ ಬರೆದು ಕನ್ನಡಕ್ಕೆ ನೀಡಿದ್ದಾನೆ. ಲಲಿತ ಪ್ರಬಂಧಗಳನ್ನು ಕುರಿತು, ಅಧಿಕಾರವಾಣಿಯಿಂದ ಮಾತಾಡಬಲ್ಲ ಹಾಗೂ ಬರೆಯಬಲ್ಲ ಮೇಲ್ತರಗತಿಗೆ ಏರಿ ನಿಂತಿದ್ದಾನೆ. ನಮ್ಮ ಗ್ರಂಥಾಲಯದ ಪ್ರಕಾಶನಗಳಿಗೆ ಪ್ರಕಾಶಕನಾಗಿ, ಅದು ಸಾರ್ವಜನಿಕರಿಂದ ಮನ್ನಣೆ ಪಡೆಯುವಂತೆ ಮಾಡಿದ್ದಾನೆ. ಈತನಿಗೆ ಇಬ್ಬರು ಮಕ್ಕಳು - ಒಂದು ಹೆಣ್ಣು, ಒಂದು ಗಂಡು.

೪. ಈಶ್ವರ ಸಿಂಪಿ 'ಅರ್ಥಶಾಸ್ತ್ರ ಪ್ರವಾಚಕ' ಮುದ್ದೇಬಿಹಾಳ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ. ಈಗ ಪ್ರಾಚಾರ್ಯನೂ ಆಗಿದ್ದಾನೆ.

ವಿದ್ಯಾರ್ಥಿ ದೆಶೆಯಲ್ಲಿದ್ದಾಗಲೇ ಕವನ ಬರೆಯುವ ದಾರಿಯಲ್ಲಿ ಪಳಗಿ ಪ್ರೊ. ಜಿ.ಎಸ್. ಶಿವರುದ್ರಪ್ಪನವರನ್ನು ಆಕರ್ಷಿಸಿದ್ದುಂಟು. ಅವನಿಗೂ ಇಬ್ಬರೇ ಮಕ್ಕಳು. ಒಂದು ಗಂಡು ಒಂದು ಹೆಣ್ಣು. ಕನ್ನಡದಲ್ಲಿ ಬರುವ ನಿತ್ಯ ನೂತನ ಕೃತಿಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿ, ಅವುಗಳ ರಹಸ್ಯವನ್ನು ಗ್ರಹಿಸಿದ್ದಾನೆ. 'ನಗೆಬಾಟಿಕೆ' ಎಂಬ ಹಾಸ್ಯ ಚುಟಿಕೆಗಳನ್ನು ಅದೇ ಕಾಲೇಜಿನ ಗ್ರಂಥಾಲಯಾಧಿಕಾರಿ ಶ್ರೀ ಕನಮಡಿ ಎಂಬ ಸ್ನೇಹಿತರೊಡನೆ ಬರೆದು ಪ್ರಕಟಿಸಿದ್ದಾನೆ. ಅದು ಸಹಜವಾಗಿಯೇ ರಸಿಕರನ್ನು ಆಕರ್ಷಿಸುವುದು ಎಂಬ ಭರವಸೆಯನ್ನು ಹುಟ್ಟಿಸಿದ್ದಾನೆ. ಶ್ರೀ ಪೂಜ್ಯಗಂಗಮ್ಮ ತಾಯಿ ಚಿನಿವಾರ ಅವರನ್ನು ಸನ್ಮಾನಿಸುವ ಕಾಲಕ್ಕೆ ಪ್ರಕಟಗೊಂಡ ಸನ್ಮಾನ ಗ್ರಂಥದಲ್ಲಿ ಅಗ್ರಸ್ಥಾನ ಗಳಿಸಿದ ಅಷ್ಟಷಟ್ಪದಿ ಕವನವೊಂದರಿಂದ ಅವನ ಕಾವ್ಯಶಕ್ತಿಯನ್ನು ಅರಿಯ ಬಹುದಾಗಿದೆ.

೫. ಮಹಾದೇವಿ ಜೀವರಾಜ ಲೋಣಿ, ವಿಜಾಪುರ, ಈಕೆ ಎಸ್.ಎಸ್.ಎಲ್.ಸಿ.ವರೆಗೆ ಅಭ್ಯಸಿಸಿದ್ದಾಳೆ. ಅವಳ ಪತಿ ವಿಜಾಪುರದ ಮರಾಠಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮನೆಯಲ್ಲಿ ಶಿಸ್ತು, ಓರಣ, ಪಾಕಪ್ರಾವೀಣ್ಯ ನೆರೆಹೊರೆಯವರು ಕಲಿಯುವಂತಿವೆ. ಆಕೆಗೆ ಮೂವರು ಮಕ್ಕಳು ೧ ಗಂಡು, ೨ ಹೆಣ್ಣು.

೬. ಸರೋಜಿನ ಸುಭಾಸ ಭೈರಾಮಡಗಿ ಬಿ.ಎ. ಕಲಬುರ್ಗಿ ಅನುಕೂಲಸ್ಥರ ಮನೆತನಕ್ಕೆ ಒಪ್ಪುವ ಸೊಸೆಯಾಗಿದ್ದಾಳೆ. ಇಬ್ಬರೇ ಮಕ್ಕಳು ಒಂದು ಗಂಡು ಒಂದು ಹೆಣ್ಣು. ನೌಕರಿ ದೊರಕಿಸಬಹುದಾಗಿತ್ತು. ಆದರೆ ಅದು ಆಕೆಗೂ, ಆಕೆಯ ಮನೆತನಕ್ಕೂ ಬೇಕಾಗಿರಲಿಲ್ಲ. ಸುಕುಮಾರ ಶರೀರದ ಹಾಗೂ ಕೋಮಲ ಮನದ ಸರೋಜಿನಿ ಸೌಮ್ಯ ಸ್ವಭಾವದ ಹಾಗೂ ನಗೆಮುಖದ ಒಳ್ಳೆಯ ಗೃಹಿಣಿಯಾಗಿದ್ದಾಳೆ.

೭. ರಾಜೀವ ಸಿಂಪಿ ಎಂ.ಎ. ಈತನ ಮುಖ್ಯ ವಿಷಯ ಅರ್ಥಶಾಸ್ತ್ರ ಚಡಚಣದ ಶ್ರೀ ಸಂಗಮೇಶ್ವರ ಕಾಲೇಜಿನಲ್ಲಿ ಅರ್ಥಶಾಸ್ತ್ರ ಕಲಿಸುವ ಪ್ರಾಧ್ಯಾಪಕನಾಗಿ ನನ್ನ ಬಳಿಯಲ್ಲಿಯೇ ಉಳಿದಿದ್ದಾನೆ. ಆತನಿಗೂ ಇಬ್ಬರೇ ಮಕ್ಕಳು ಎರಡೂ ಗಂಡು. ಸಾಹಿತ್ಯದಲ್ಲಿ ಅಭಿರುಚಿಯಿಲ್ಲವೆಂದರೂ ಅದನ್ನು

ಪ್ರೀತಿಸುವ ಮನವನ್ನು, ಹೃದಯವನ್ನು ಪಡೆದಿದ್ದಾನೆ. ನಾನು ಶಬ್ದಾರ್ಥ ಶಾಸ್ತ್ರದ ತಂದೆ, ಅವನು ದ್ರವ್ಯಾರ್ಥಶಾಸ್ತ್ರವನ್ನು ಅಭ್ಯಸಿಸಿದ ೩ನೇ ಮಗ ಅರ್ಥಶಾಸ್ತ್ರವನ್ನು ತನ್ನ ಜೀವನಕ್ಕೂ ಮನೆತನಕ್ಕೂ ಅದೆಷ್ಟು ಹೊಂದಾಣಿಕೆ ಮಾಡಿಕೊಳ್ಳುವನೆಂಬುದನ್ನು ನೋಡಬೇಕಾಗಿದೆ.

೮. ಅರುಣ ಸಿಂಪಿ ಬಿ.ಇ. ಇಂಜಿನೀಯರ್ ಆಗಿ ಜೀವನವನ್ನು ಆರಂಭಿಸಿದ್ದಾನೆ. ತನ್ನ ವಿಷಯದಲ್ಲಿ ತುಂಬ ನಿಷ್ಣಾತನು. ತೀರ ಚಿಕ್ಕಂದಿನಿಂದಲೂ ತನ್ನ ಚುರುಕುತನದಿಂದ ಮತ್ತು ಜಾಣತನದಿಂದ ಸಹಪಾಠಿಗಳ ಸ್ನೇಹಕ್ಕೆ ಪಾತ್ರನಾಗಿದ್ದಾನೆ. ಕಲಿಸಿದ ಶಿಕ್ಷಕರಿಗಂತೂ ಅಕ್ಕರೆಯ ಸಕ್ಕರೆಯೇ ಆಗಿದ್ದಾನೆ. ಸೌಮ್ಯ ಸ್ವಭಾವದ ಪ್ರತಿಮೂರ್ತಿ. ಈತನು ಸದ್ಯಕ್ಕೆ ಒಂದು ಗಂಡು ಮಗುವಿನ ತಂದೆಯಾಗಿದ್ದಾನೆ. ತನ್ನ ಕಾಗದ ಪತ್ರ, ತಾನು ಉಪಯೋಗಿಸುವ ವಸ್ತುಗಳನ್ನು ಅಚ್ಚುಕಟ್ಟಾಗಿ ಇರಿಸುವುದರಲ್ಲಿ ಮತ್ತು ಹಿತಮಿತವಾಗಿ ಬಳಸುವುದರಲ್ಲಿ ಪಾರಂಗತನಾಗಿದ್ದಾನೆ.

೯. ಪ್ರಿಯದರ್ಶಿ ಸಿಂಪಿ ಬಿ.ಇ. ಸದ್ಯಕ್ಕೆ ಬಾಗಲಕೋಟೆಯ ಪಾಲಿಟೆಕ್ನಿಕ್ ಕಾಲೇಜವೊಂದರಲ್ಲಿ ಪ್ರಾಧ್ಯಾಪಕನಾಗಿ ಕೆಲಸ ನಿರ್ವಹಿಸುತ್ತಿದ್ದಾನೆ. ಮದುವೆ ಆಗಿದೆ. ಅವನಿಗೆ ಇಬ್ಬರು ಹೆಣ್ಣು ಮಕ್ಕಳು. ವಿನೋದ ಪ್ರವೃತ್ತಿ ಅವನ ರಕ್ತಗತವಾಗಿದೆ. ತೆರೆದ ಹೃದಯವನ್ನು ಸೂಚಿಸುವ ಮುಖವು ಅವನಿಗೆ ನೂರಾರು ಮಿತ್ರರನ್ನು ಗಳಿಸಿಕೊಟ್ಟಿದೆ.

ಈ ಎಲ್ಲ ಗಂಡು, ಹೆಣ್ಣುಮಕ್ಕಳ ಅಭ್ಯುದಯ ಹಾಗೂ ಶಾಂತ ಜೀವನವನ್ನು ಕಂಡು ನಾನು ಹಲವಾರು ಸಾರೆ ಪರಿತೃಪ್ತನಾಗಿ ಹಾಡುತ್ತಿರುವ ಹಾಡು ಯಾವುದೆಂದರೆ

ಎನ್ನ ವಂಶಗಳೆಲ್ಲ ಪಾವನವಾದವು ಇನ್ನೇನಿನ್ನೇನು?
ಚಿನ್ಮಯ ಪುರಂದರ ವಿಠಲಯ್ಯ ದೊರಕಿದ ಇನ್ನೇನಿನ್ನೇನು?

೪೮. ಚತುರ್ಮುಖ ಬ್ರಹ್ಮ

ಬ್ರಹ್ಮನಿಗೆ ನಾಲ್ಕು ಮುಖಗಳಿರುವಂತೆ, ಭಿಕ್ಷುಕ ವೃತ್ತಿಗೂ ನಾಲ್ಕು ಮುಖಗಳಿರುತ್ತವೆಂದು ತೋರುತ್ತದೆ. "ಚತುರ್ಮುಖಘೋಡಾಕೊ ಜೀನ್ ಲಗಾವೋ" ಎಂಬ ಹಿಂದೀ ಲೋಕೋಕ್ತಿಯೇ ಆ ಮಾತಿಗೆ ಸಾಕ್ಷಿ.

ನಾನು ನನ್ನ ಜೀವನಾವಕಾಶದಲ್ಲಿ ಪಡೆದ ನಾಲ್ಕು ಮುಖಗಳಿಂದ ಬ್ರಹ್ಮನೆನಿಸಿದರೂ ಶ್ರೀಮಂತನೆನಿಸಲು ಸಾಧ್ಯವಾಗಲಿಲ್ಲ. ಶಿಕ್ಷಕ, ಸಾಹಿತಿ, ಪ್ರಕಾಶಕ, ಭಾಷಣಕಾರ ಎಂಬ ವೃತ್ತಿಗಳು ನನ್ನ ಚತುರ್ಮುಖಗಳನ್ನು ಪ್ರತಿನಿಧಿಸುತ್ತವೆ.

ಶಿಕ್ಷಕನಾಗಿ ೩೫ ವರ್ಷಗಳ ಅಖಂಡ ಸೇವೆ ಸಲ್ಲಿಸಿದ್ದು ನಿಜ. ಅದಕ್ಕೆ ಸಂಬಳ ರೂಪದ ಪ್ರತಿಫಲವು ತೃಪ್ತಿಕರವಾಗಿರಲಿಲ್ಲ. ಆದರೆ 'ಆದರ್ಶ ಶಿಕ್ಷಕ' ಎಂಬ ಪ್ರಶಸ್ತಿಯನ್ನು ರಾಷ್ಟ್ರಪತಿ ರಾಜೇಂದ್ರಪ್ರಸಾದರಿಂದ ಪ್ರಪ್ರಥಮವಾಗಿ ಸಂಗಳಿಸಿದ್ದು ನಿಜ. ಆ ಪ್ರಶಸ್ತಿ ನನ್ನ ಸಾಮಾನ್ಯ ಬಾಳಿಗೆ ಅದೆಷ್ಟು ಹಾಳತವಾಗಿದೆಯೋ ನನಗಿನ್ನೂ ತಿಳಿದುಬಂದಿಲ್ಲ.

ಬ್ರಹ್ಮ ಸ್ವರೂಪಿಯಾದ ನನ್ನ ಎರಡನೇ ಮುಖವೆಂದರೆ ಸಾಹಿತ್ಯ ಬರೆದೆ, ಬರೆದೆ, ಬರೆದೇ ಬರೆದೆ. ಅದರಿಂದ ನನಗೆ ಬಂದ ಅನುಭವವೆಂದರೆ

"ಯಾಕಪ್ಪಾ ಸಾಹಿತಿ, ಬರೆದು ಬರೆದು
ವ್ಯರ್ಥ ಯಾಕ ಸಾಯಿತಿ?
ನೀ ಬರೆದ ತಪ್ಪಿಗಾಗಿ ನಮಗೂ
ಓದಿ ಸಾಯಂತೀ?"

ಆದರೇನು ನನ್ನ ಸಾಹಿತ್ಯ ವೃತ್ತಿ ವ್ಯರ್ಥವಾಗಿಲ್ಲವೆನ್ನುವುದಕ್ಕೆ ಒಂದೇ ಒಂದು ಸಂಗತಿ ಚಿರಸಾಕ್ಷಿಯಾಗಿದೆ. ವಿಜಾಪುರ ನಗರದ ಪ್ರಮುಖ ಗೃಹಸ್ಥರು, ನಾಡಿನ ಪ್ರಖ್ಯಾತ ಸ್ವಾಮಿಗಳು ಸೇರಿ ನನ್ನನ್ನು ೪೦ ವರ್ಷಗಳ ಹಿಂದೆಯೇ - 'ಅಧ್ಯಾತ್ಮ ಸಾಹಿತ್ಯ ಪ್ರವರ್ತಕ' ಎಂಬ ಪದವಿಯನ್ನು ನನಗೆ ಅಂಟಿಸಿದ್ದಾರೆ. ಹಣೆ ಮಾಸಿರಬಹುದು. ಆ ಪದವಿ ಅಳುಕಿ ಹೋಗಿಲ್ಲ, ಆರಿಯೂ ಹೋಗಿಲ್ಲ. ಏತಕ್ಕಾಗಿ?

ನಾನು ಪ್ರಕಾಶಕನೆನ್ನುವುದಕ್ಕೆ ನಮ್ಮ ಶ್ರೀ ಅರವಿಂದ ಗ್ರಂಥಾಲಯವು ಕಾಲು ಶತಮಾನದಲ್ಲಿ ಪ್ರಕಟಿಸಿದ ೮೦ ಪುಸ್ತಕಗಳೇ ಸಾಕ್ಷಿಯಾಗಿ ನಿಂತಿವೆ. ಅಧಿಕೃತ ಪ್ರಕಾಶಕರು ವೀರೇಂದ್ರ ಸಿಂಪಿ ಅಹುದು. ಗುಡಿಯಲ್ಲಿ ಸ್ಥಿರಗೊಂಡ ಮೂರ್ತಿಗೆ ಪಲ್ಲಕ್ಕಿಯನ್ನೇರಿ ಮೆರೆಯುವ ಇನ್ನೊಂದು ಮೂರ್ತಿಯಿರುವದಿಲ್ಲವೇ ಉತ್ಸವ ಮೂರ್ತಿ? ಅಂಥ ಪ್ರಕಾಶಕ ನಾನು.

ಹಳೆಯ ಮಿತ್ರರು ಬರಕೊಟ್ಟ ಗ್ರಂಥಗಳನ್ನು ಪ್ರಕಟಗೊಳಿಸಿದಂತೆ, ಹೊಸ ಹೊಸ ಲೇಖಕರನ್ನು ಕಂಡುಹಿಡಿದು ಅವರಿಂದ ನನಗೆ ಸಮ್ಮತವಾದ ಪುಸ್ತಕ ಬರೆಯಿಸಿ ಪ್ರಕಟಿಸಿದ್ದು ಸುಳ್ಳಲ್ಲ. ನೂರಾರು ಗ್ರಂಥಗಳಿಗೆ ಸೃಷ್ಟಾರನಾಗಿದ್ದಂತೆ ಹಲವಾರು ಹೊಸ ಲೇಖಕರನ್ನು ಬಯಲಿಗೆ ತಂದ ಲೇಖಕ ಸೃಷ್ಟಾರನೂ ಆಗಿದ್ದೇನೆ.

ಭಾಷಣಕಾರನಾಗಿ ಹಲವು ದಾರಿಗಳಲ್ಲಿ ನಡೆದಿದ್ದೇನೆ. ಅಷ್ಟೇ ದಾರಿಗಳನ್ನು ತುಳಿದು ಸಾಗಿದ್ದೇನೆ. "ನಗುನಗುತ ಉಪ್ಪು ಗಂಜಿಯನ್ನು ಗಂಡನಿಗೆ ಒದಗಿಸುವ ಪುಟ್ಟನಂಜಿಯೂ ಆಗಿದ್ದೇನೆ. ಅದಕ್ಕೆ ನಾನು ಗಿಟ್ಟಿಸಿರುವ" "ಬೆಡಗಿನ ನುಡಿಗಾರ" ಎನ್ನುವ ಬಿರುದೇ ಅಗ್ಗಳಿಕೆಯಾಗಿದೆ.

ದಯವೇ ಧರ್ಮದ ಮೂಲವೆನ್ನುವುದು ನಿಜ. ಆದರೆ, ಆ ದಯೆ ನಿರರ್ಗಳವಾಗಿ ಹರಿದು ಬರುವುದಕ್ಕೆ ಆ ಪರಂಜ್ಯೋತಿಯ ಕೃಪೆಯನ್ನೇ ಗಳಿಸಬೇಕಾಗುವದು. ಅದು ಕರೆದರೆ ಬರುವಂಥದಲ್ಲ. ಕೈಹಿಡಿದರೆ ಬರುವಂಥ ತಂಬಿಗೆ, ತಂ-ಬಿಗೆ, ಅಂತರಂಗವು ಮೇಲಿನ ಪರಂಜ್ಯೋತಿಗೆ ಕೇಳಿಸುವಂತೆ ಕೂಗಬೇಕು -

"ಕೂಗು ಕೂಗು ಮನವೇ। ಮಾತೆಯ
ಕೂಗವ ರೀತಿಯಲಿ"

ಎಂದು ಶ್ರೀರಾಮಕೃಷ್ಣ ಪರಮಹಂಸರು ಆ ಚಿಕಿತ್ಸೆಯ ಕ್ರಮವನ್ನು ಹೇಳಿಕೊಟ್ಟಿದ್ದಾರೆ. ಭಸವಣ್ಣನವರು ಪಥ್ಯವನ್ನೂ ಹೇಳಿಕೊಟ್ಟಿದ್ದಾರೆ. ಆ ಅನುಪಾನ ಪದ್ಧತಿಯನ್ನು ಮುಂದುವರಿಸಿಕೊಂಡು ಹೋದರೆ, ಎದೆಗೂಸಿಗೂ ಪರಂಜ್ಯೋತಿಗೂ ಇರುವ ಮಹದಂತರವನ್ನು ಕಡಿಮೆ ಮಾಡಬಲ್ಲ ಒಂದು ಶಕ್ತಿ ಆವಿರ್ಭವಿಸುತ್ತದೆ. ಅದೇ ಆನಂದಶಕ್ತಿ.

ಆ ಆನಂದಶಕ್ತಿಯು ಕಾರ್ಯಗತವಾದಂತೆ, ಮುಖದ ಮೇಲೆ ಆನಂದದ ಕಳೆ ಕಂಗೊಳಿಸುತ್ತದೆ. ಆವಾಗ 'ಹರುಷದಿಂದ ಭಜಿಸು, ನಿತ್ಯ ಸುಖವು ತಪ್ಪದು' ಎಂಬ ಮಾತಿನ ಮನವರಿಕೆಯಾಗುತ್ತದೆ. ಆಗ ದಯಾ ಧರ್ಮಕ್ಕೆ ಸಾರ್ಥಕ್ಯವುಂಟಾಗುತ್ತದೆ. ಅದನ್ನು ಕರಗತ ಮಾಡಿಕೊಳ್ಳುವುದಕ್ಕೆ ಬೆಡಗಿನ ನುಡಿಗಳೇ ಕಾರಣವೆನ್ನುವುದು ನಿಚ್ಚಳವಾಗುತ್ತದೆ.

ಶ್ರೀ ಅರವಿಂದರು ಹೇಳುತ್ತಾರೆ, ಏನಂದರೆ -

"ಮುಖಾಗ್ರದಲ್ಲಿ ಕಾಣುವ ಶಕ್ತಿಯು, ತಾನು ನಿರ್ವಹಿಸಬೇಕಾಗಿರುವ ಕಾರ್ಯಕ್ಕೆ ಅನುಗುಣವಾಗಿ, ಖಚಿತವಾಗಿ ಇರಬೇಕಾದಷ್ಟೇ ಇರುತ್ತದೆ. ಅದು ಮಾಡಬೇಕಾದ ಪ್ರಯತ್ನ, ಸಾಧಿಸಬೇಕಾದ ಯಶಸ್ಸು, ವಿಧಿನಿಯಮಿಸಿದ ಲಕ್ಷ್ಯ ಇವುಗಳಿಗೆ ಎಷ್ಟು ಅಗತ್ಯವೋ ಅಷ್ಟು ಶಕ್ತಿ ಮಾತ್ರ ಮುಖಾಗ್ರದಲ್ಲಿ ಕಾಣುತ್ತದೆ."

ಮುಖವೆಂದರೆ ಪುಸ್ತಕಕ್ಕಿರುವ ಪರಿವಿಡಿಯೇ, ಆ ಪರಿವಿಡಿಯನ್ನು ಓದಿಕೊಂಡರೆ, ಸಮಗ್ರ ಪುಸ್ತಕದಲ್ಲಿ ವಿವೇಚಿಸಿದ ವಿಷಯಗಳ ಕಲ್ಪನೆ ಉಂಟಾಗುತ್ತದೆ. ಶಿಕ್ಷಣ, ಸಾಹಿತ್ಯ, ನಿರ್ವಹಣೆಯ ಹೊಲಬು, ಸೂಕ್ತ ವಿವರಣಾಶಕ್ತಿ ಇವು ಬೀಜರೂಪದಲ್ಲಿ ಎಲ್ಲರಲ್ಲಿಯೂ ಇರುತವೆ. ಆದರೆ, ಬೀಜ ಬಿತ್ತಿದರೆ ಮಾತ್ರ ಮೊಳಕೆ ಕಾಣಿಸಬಲ್ಲದು. ಬುಟ್ಟಿಯಲ್ಲಿಟ್ಟು ಬೀಜ ಆ ಕ್ರಿಯೆ ಪರಿಣಾಮ ಸಾಧಿಸದು. ನೋಡುವ ಕಣ್ಣು ಇದೆ, ಪ್ರತಿಬಿಂಬಿಸುವ ಕನ್ನಡಿಯೂ ಇದೆ. ಆದರೆ ಕಗ್ಗತ್ತಲೆ ಆವರಿಸಿದ್ದರೆ, ಕಣ್ಣು ಕನ್ನಡಿಗಳಿದ್ದು ಪ್ರಯೋಜನವೇನು.

ನಾನು ೩ನೇ ತರಗತಿಯಲ್ಲಿ ಓದುತ್ತಿದ್ದಾಗ ಒಂದು ಷಟ್ಪದಿಯಲ್ಲಿ ನೀತಿಯನ್ನು ಬೋಧಿಸುತ್ತಿತ್ತು, ಅದು ಹೇಗೆಂದರೆ-

ಸುಳ್ಳನಾಡಲು ಬೇಡ ನೀ ಮೈ-
ಗಳ್ಳನಾಗಲು ಬೇಡ

ಅದೇ ನೀತಿಯನ್ನು ಬಸವಣ್ಣನವರು ಬೆಸಸುವ ನೀತಿಯ ವಚನವನ್ನು ಯಾರು ಕೇಳಿಲ್ಲ? ಕಳಬೇಡ, ಕೊಲಬೇಡ ಇತ್ಯಾದಿ. ತನ್ನ ಬಿಟ್ಟು ಅನ್ಯರಿಗೆ ಬೋಧಿಸುವುದಕ್ಕೂ, ಅನ್ಯರನ್ನು ಬದಿಗಿರಿಸಿ ತನಗೇ ಬೋಧಿಸಿಕೊಳ್ಳುವುದಕ್ಕೂ ಇರುವ ಅಂತರ ಅಳೆಯಬಲ್ಲವರಾರು?

ಮೇಲಿನ ಷಟ್ಪದಿಯ ತುಣುಕು ವಿದ್ಯಾರ್ಥಿಗಳಿಗೆ ಹೇಳಿದ ಬುದ್ಧಿಮಾತು. ಆದರೆ ಬಸವಣ್ಣನವರು ಅದೇ ಮಾತನ್ನು ತನಗಾಗಿಯೋ ತಮ್ಮವರಿಗಾಗಿಯೋ ಹೇಳಿಕೊಂಡಿದ್ದು - "ನಾವೂ ಕಳ್ಳರೇ, ಕಳ್ಳತನವು ನಮ್ಮನ್ನು ಸಂಪೂರ್ಣವಾಗಿ ಬಿಟ್ಟು ತೊಲಗಿಲ್ಲ" ಎಂಬ ತಿಳುವಳಿಕೆ ಅದರಲ್ಲಿ ಮೂಲಭೂತವಾಗಿದೆ. ಅಂತೆಯೇ ಅವರು ಹೇಳಿದರು -

"ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ,
ಅವನು ಕೂಡಲ ಸಂಗಮದೇವನಲ್ಲದೆ
ಇನ್ನಾರೂ ಇರಲಾರರು"

ತಾನು ಕಳ್ಳನೆಂದು ನಿಚ್ಚಳವಾಗಿ ಒಪ್ಪಿಕೊಂಡು, ಕೂಡಲ ಸಂಗಮದೇವನು ಆ ಮಾನದಿಂದ ಬಲುಗಳ್ಳ ಎಂದು ವಿಡಂಬಿಸಲಿಕ್ಕೆ ಹಿಂದೆ ಮುಂದೆ ನೋಡಿಲ್ಲ. ಕಳವಿಗೆ ಹೋಗಿ ಸಿಕ್ಕು ಬಿದ್ದವ ಕಳ್ಳ, ಅದನ್ನು ದಕ್ಕಿಸಿಕೊಡುವ ಪ್ರಾಮಾಣಿಕ ಅನ್ನಬೇಕಾಗುತ್ತದೆ -

ಇದ್ದು ಸತ್ತವರು ಅನಂತಕೋಟಿ
ಸತ್ತು ಇದ್ದವರಾರಯ್ಯ?
ಇದ್ದು ಸತ್ತವ ಮಾನವ
ಸತ್ತು ಇದ್ದವ ಶರಣ

ಆದ್ದರಿಂದ ಸತ್ತರೂ ಇರಬಲ್ಲ ಸಾಧನೆ ನಡೆಸುವ ಸಲುವಾಗಿಯೇ ಈ ನೂರು ವರುಷ ಅವಧಿಯ ತರಬೇತಿ ಕೇಂದ್ರಕ್ಕೆ ಬಂದಿದ್ದೇವೆ. ಆದ್ದರಿಂದ ನಮ್ಮನ್ನು ನಾವು ಕೇಳಿಕೊಳ್ಳೋಣ -

ನಿಲ್ಲು ನಿಲ್ಲೆಲೆ ಜೀವ ನಿನ್ನನೇಕಾಂತದಲಿ
ದೇವನಿದಿರಲಿ ಮಾತನೊಂದ ಕೇಳ್ವೆ
ನಿರ್ವಿಚಾರದಿ ಭವವ ಘೋರಾಂಧಕಾರದೊಳು
ನೀನೆತ್ತ ಪೋದಪೆಯೋ ನಿಂತುನೋಡೈ
ಪುರುಷ ರೂಪವಧರಿಸಿ ಧರೆಯೊಳಾದರದಿ ನೀ-
ನಾವ ಕರ್ತವ್ಯಕಾಗಿರುವೆ ತಿಳಿಯೈ ॥

೪೯. ನನ್ನ ಬರವಣಿಗೆಯ ನೀತಿ-ರೀತಿಗಳು

ನಾನು ಲೇಖನ ಕಲೆಯನ್ನು ಅಭ್ಯಸಿಸಿದವನಲ್ಲ. ನನ್ನ ತಲೆಯಲ್ಲಿ ಮೂಡಿದ ವಿಷಯವನ್ನು ಯಾವ ರೂಪದಲ್ಲಿ, ಯಾವ ಕ್ರಮದಿಂದ ನಿರೂಪಿಸಿದರೆ, ಪರಿಣಾಮಕಾರಿಯಾಗುವದು ಎಂಬುದನ್ನು ಮಾತ್ರ ಯೋಚಿಸುತ್ತೇನೆ. ಆದ್ದರಿಂದ ನನ್ನ ಬರವಣಿಗೆಯ ಮೊತ್ತದಲ್ಲಿ ಹೊಸ ಕ್ರಮಗಳು ಗೋಚರಿಸುತ್ತವೆ.

ನನ್ನ 'ಅಸ್ತವ್ಯಸ್ತ'ವು ಒಂದು ಹೊಸ ಹೆಜ್ಜೆಯಾದರೆ, 'ಬಾಳಬೇಸಾಯ'ವು ಬೇರೊಂದು ಹೊಸ ನಡಿಗೆಯಾಗಿದೆ. ಚಾರಿತ್ರಿಕ ವಿಷಯಗಳನ್ನು ಹೇಳುವುದಕ್ಕೆ ಹಳೆಯ ಸಂಪ್ರದಾಯಗಳತ್ತ ಗಮನಿಸದೆ. ವ್ಯಕ್ತಿಯ ಜೀವನದಲ್ಲಿ ಅದಾವ ಸಂಗತಿಯು ಚೂಪವಾಗಿದೆಯೋ ಅದನ್ನು ಬಾಣದಂತೆ ಹೂಡಿ ಎಸೆಯುತ್ತೇನೆ. ಆ ಕ್ರಮವನ್ನು ಕೆಳಗೆ ಕಾಣಿಸಿದ ಕೃತಿಗಳಲ್ಲಿ ಕಾಣಬಹುದು. - 'ಸಿಡಿಲು ಸನ್ಯಾಸಿ', 'ಮಹಾಮನು', 'ರಾಮತೀರ್ಥರ ತೀರ್ಥ', 'ಕನ್ನಡ ಕುಲದೀಪ ಬಸವಣ್ಣ' ಮೊದಲಾದವು.

ನಾನು ಕಂಡ ವಿವೇಕಾನಂದರೇ ಬೇರೆ. ನಾನು ಉಂಡ ಬಸವಣ್ಣನವರೇ ಬೇರೆ. ಶ್ರೀ ರಾಮಕೃಷ್ಣ ಪರಮಹಂಸರು ನನ್ನ ದೃಷ್ಟಿಗೆ ಮಹಾಮನುವಾಗಿ ತೋರಿದರು. ತೀರ್ಥರಾಮರು ರಾಮತೀರ್ಥರಾದ ಸಂಗತಿಯ ನಿರೂಪಣೆಯೇ ನಾನು ಕಂಡ ರಾಮತೀರ್ಥರು.

'ಕರೆಯದೆ ಬಂದವರು' ಎಂಬುದು, ಕನ್ನಾಡಿನಲ್ಲಿ ಆಗಿಹೋದ ಮಹಾಮಹಿಮ ಜೀವಪಿಂಡಗಳು ಅಂತಃಪುರುಷನ ಆಸ್ಥಾನವನ್ನು ಪ್ರವೇಶಿಸಿ

ಅಲ್ಲಿ ಕಾಣಸಿಕ್ಕ ಪರಮ ರೂಪವನ್ನು ರೇಖಿಸುವುದೇ ನನ್ನ ಲೇಖನ ಕಲೆ. ಸಂಪ್ರದಾಯವಾದಿಗಳು ತಕ್ಷಣಕ್ಕೆ ಮೂಗು ಮುರಿಯಬಹುದು, ದಿನಕಳೆದು ವಿಷಯ ಮಾಗಿದಂತೆ, ಪರಂಪರೆಯ ಸಂಪ್ರದಾಯಕ್ಕಿಂತ ಪರಿಣಾಮಕಾರಿಯಾಗುವ ರೀತಿಯನ್ನು ಅನುಸರಿಸಿದರೆ ಅದಕ್ಕೊಂದು ಮಾಸದ ಕೆಚ್ಚು ಬರುವುದೆಂದು ನಾನು ತಿಳಿದಿದ್ದೇನೆ.

ನನ್ನ ವಿದ್ಯಾಭ್ಯಾಸದ ಬಂಡವಲು ತುಸು ಆದರೇನು? ಅಷ್ಟರಿಂದ ಸ್ವರ್ಗಸಾಹಿತ್ಯದ ಬೊಕ್ಕಸವೇ ಕೈಗೆ ನಿಲುಕವಂತಾಗಬಹುದು.

'ಲಿಂಗಣ್ಣ ಕೈಗೆ ಸಿಕ್ಕಿದ್ದನ್ನೆಲ್ಲ ಓದುವವನಲ್ಲ, ಆದರೆ, ಓದಬೇಕಾದುದನ್ನು ಓದದೆ ಬಿಟ್ಟಿಲ್ಲ' ಎನ್ನುತ್ತಾರೆ ಪಾಟೀಲ ಪುಟ್ಟಪ್ಪ. ಅವರ ಆ ಹೇಳಿಕೆಯಲ್ಲಿ ಅದೆಷ್ಟು ಸತ್ಯಾಂಶವಿದೆ ಎಂಬುದನ್ನು ಯಾರೂ ಗುರುತಿಸಬಹುದು. ಆದರೆ ನನಗೆ ಗೊತ್ತು. ಆ ಮಾತು ಇಡಿಯಾಗಿಯೇ ಸತ್ಯವಾಗಿದೆ. ನಾನು ಹಲವು ಸಾರೆ ಹೇಳಿದ್ದೇನೆ -

'ನಾನೊಂದು ಪಶು, ಜ್ಞಾನಾರಣ್ಯದಲ್ಲಿ ಬೆಳೆದುನಿಂತು ಹುಲ್ಲುಗಾವಲಿಗೆ ಹೋಗಿ, ನನ್ನ ಮನಸೆಳೆದ ಹಾಗೂ ಮೈಗೆ ಹಿತವಾದ ಹುಲ್ಲನ್ನು ಮಾತ್ರ ಹೊಟ್ಟೆ ತುಂಬ ತಿಂದು ಮನೆಗೆ ಬರುವುದು ನಿತ್ಯಕ್ರಮ. ಅಷ್ಟು ಮಾಡಿದರೆ ಸಾಕಿದವನಿಗೆ ಒಂದು ತಂಬಿಗೆ ಹಾಲು, ಹೊಟ್ಟೆಯ ಕರುಳಾದ ಕರುವಿಗೆ ತೃಪ್ತಿಯಾಗುವಂತೆ ಮೊಲೆಯುಣಿಸು ಸಾಧಿಸಿದರೆ ನಾನು ಧನ್ಯ, ನನ್ನ ಉದ್ದೇಶವು ಹದಿನಾರಾಣೆ ಸಫಲವಾಯಿತೆಂದು ತಿಳಿಯುತ್ತೇನೆ.'

ಆದರೆ ಗಟ್ಟಿಗರೂ, ಧೂರ್ತರೂ, ಕೆಲವೊಂದು ಹವ್ಯಾಸಿಗಳೂ ಅದೇ ಹುಲ್ಲುಗಾವಲಿಗೆ ಹೋಗಿ, ಅದನ್ನು ಕೊಯ್ದು ಎತ್ತಲಾರದ ಹೊರೆಕಟ್ಟಿ, ಅದರಲ್ಲಿ ಕಸ-ಕಣೆಗಿಲ ಬೆರಸಿ ಊರಲ್ಲಿ • ತಂದು ಹೆಚ್ಚಿನ ಬೆಲೆಗೆ ಮಾರಿಕೊಂಡು ಕಿಸೆ ತುಂಬಿ ಕೊಳ್ಳುವರು. ಕ್ರಮೇಣ ಶ್ರೀಮಂತರೂ, ಗಣ್ಯಧೀಮಂತರೂ ಆಗಬಹುದು, ಅಥವಾ ಆಗಲಿಕ್ಕೂ ಇಲ್ಲ. ಆ ಮಾತು ಬೇರೆ.

ಶಿಷ್ಟ ಸಾಹಿತ್ಯದ ವೈಶಿಷ್ಟ್ಯದ ಕಲ್ಪನೆ ಬಂದ ಬಳಿಕ, ಜಾನಪದ

ಸಾಹಿತ್ಯದ ನರುಗಂಪಿಗೆ ನಾನು ಮಾರುಹೋಗಿ ಅದರ ಒಂದಗುಳ ಬಾಯಲ್ಲಿಟ್ಟುಕೊಂಡೆ. ಅದೊಂದು ನಿಸರ್ಗದತ್ತ ಪೌಷ್ಟಿಕಾನ್ನ, ಹೊಟ್ಟೆಗಲ್ಲ, ನೆತ್ತಿಗೆ, ನೆತ್ತಿಗೂ ಅಲ್ಲ ಹೃದಯಕ್ಕೆ. ಮಾನವನ ಬೀಜಾಣುವು ಹೃದಯದಲ್ಲಿ ಹುದುಗಿ ಕೊಂಡಿದೆ ಏತರಿಂದ? ಹೆಮ್ಮೆಯಿಂದ, ಹೊಟ್ಟೆಯುರಿಯಿಂದ. ಗರ್ವ, ಮಾತ್ಸರ್ಯಗಳು ಹೆರರನ್ನು ಹಾನಿಗೀಡು ಮಾಡುವುದಕ್ಕಿಂತ, ತನ್ನನ್ನೇ ಗಾಸಿಗೊಳಿಸುವ ಕ್ರಮದಲ್ಲಿ ಸಂಪೂರ್ಣ ಯಶಸ್ವಿಯಾಗಿವೆಯೆಂದು ಹೇಳಬಹುದಾಗಿದೆ. ಆ ಕವಚವನ್ನು ಜೋಕೆವಿಡಿದು, ನೋಡಿ, ಜನಪದ ಒಳಗಿನ ಅಂತಃಪುರುಷನನ್ನು ನಿಚ್ಚಳಗೊಳಿಸುವ ಕೆಲಸ ಜನಪದ ಸಾಹಿತ್ಯ ಮಾಡಿದ್ದಷ್ಟು ಇನ್ನೊಂದು ಸಾಹಿತ್ಯ ಮಾಡಲಾರದು. ಜನಪದ ಸಾಹಿತ್ಯ ಕೈಗೆಟಕುವ ಸಹಜಸ್ಥಿತಿಯ ಔಷಧಿ ಆದರೆ ಶಿಷ್ಟ ಸಾಹಿತ್ಯವು ಕಂಪನಿಯವರ ಅಂಗಡಿಯಲ್ಲಿ ಸಿಗುವ ತೀವ್ರ ಹಾಗೂ ತಾತ್ಕಾಲಿಕ ಪರಿಣಾಮವನ್ನುಂಟು ಮಾಡಬಲ್ಲದೆಂದು ಹೇಳಿದರೂ ಆ ಸ್ವಾಸ್ಥ್ಯವು ಶಾಶ್ವತವಾದೀತೆಂದು ಯಾರೂ ಹೇಳಲಾರರು.

ಜನಪದ ಸಾಹಿತ್ಯದಲ್ಲಿ ಮೂರು ವಿಭಾಗಗಳನ್ನು ಮಾಡಬಹುದು. ಅಕ್ಷರಗಳಲ್ಲಿ ಮೂರು ಗುಂಪು ಮಾಡುವಂತೆ. ಸ್ವರ, ವ್ಯಂಜನ ಮತ್ತು ಆಯೋಗವಾಹ ಎಂದು ಜನಪದ ಜೀವಿಗಳಲ್ಲಿಯೂ ಮೂರು ವಿಧ, ಹೆಣ್ಣು, ಗಂಡು ಮತ್ತು ಬಾಲಕ ಎಂದು. ಹೆಣ್ಣು ಅಕ್ಷರಗಳಲ್ಲಿ ಸ್ವರವಿದ್ದ ಹಾಗೆ ಗಂಡು ವ್ಯಂಜನ, ಬಾಲಕ ಆಯೋಗವಾಹ ಇದ್ದ ಹಾಗೆ.

ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರವೇ ಸ್ವರ, ಸ್ವರದ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರವೇ ವ್ಯಂಜನ, ಈ ಇತ್ತೆರದ ಅಕ್ಷರಗಳಿಂದ ಭಿನ್ನವಾದದ್ದೇ ಆಯೋಗವಾಹ.

ಇನ್ನೊಂದು ವಿಧದಲ್ಲಿ ಹೆಣ್ಣುಮಕ್ಕಳು ಕುಡಿಯುವ ನೀರು ಗಂಡು ಮಕ್ಕಳು ಬಳಸುವ ನೀರು ಕುಡಿಯುವ ನೀರಲ್ಲಿ ಕಿರಿಬೆರಳೆದ್ದಿದರೂ ಅದನ್ನು ಚೆಲ್ಲಬೇಕಾಗುತ್ತದೆ. ಬಳಸುವ ನೀರಲ್ಲಿ ಕಾಲೆದ್ದಿದರೂ ಅದನ್ನು ಚೆಲ್ಲುವ ಕಾರಣವಿಲ್ಲ.

ಜನಪದ ಸಾಹಿತ್ಯದಲ್ಲಿ ಹೆಣ್ಣುಮಕ್ಕಳಿಂದ ರಚಿತವಾದ ಸಾಹಿತ್ಯ, ಗಂಡುಮಕ್ಕಳಿಂದ ರಚಿತವಾದ ಸಾಹಿತ್ಯ ಎಂದು ಎರಡು ವಿಧಗಳು. ಹೆಣ್ಣುಮಕ್ಕಳ ರಚನೆಗೆ ಉದಾಹರಣೆಯೆಂದರೆ ಬೀಸುಕುಟ್ಟುವ ಹಾಡುಗಳು. ಸಂಸಾರವೇದ ಅನಿಸಿಕೊಂಡಿವೆ. ಎಷ್ಟಾದರೂ ಅವುಗಳಿಗೆ ಕುಡಿಯುವ ನೀರಿನ ಹುಟ್ಟುಗುಣ

ತಂದೀನ ನೆನೆದರ ತಂಗೂಳ ಬಿಸಿಯಾಯ್ತು
ತಾಯಿ ನನ್ನ ಹಡೆದವ್ವನ ನೆನೆದರ
ಮಾಸೀದ ತಲೆಯು ಮಡಿಯಾಯ್ತು ॥

ಇದು ಸಂಸಾರವೇದಕ್ಕೆ ಸೇರಿದ ಒಂದು ವಿಮರ್ಶೆ.

ಗಂಡಸರ ಹಾಡುಗಳಲ್ಲಿ ಲಾವಣಿಗಳು ಮುಖ್ಯ. ಹಂತಿಯ ಹಾಡು, ಹೋಳಿಯ ಹಾಡು, ಭಜನೆ ಪದಗಳು ಇತ್ಯಾದಿ ಬಳಸುವ ನೀರು ಜಾತಿಗೆ ಸೇರಿದ ಗಂಡಸರ ಜನಪದ ಸಾಹಿತ್ಯದ ಒಗರೇ ಬೇರೆ.

ಸಣ್ಣ ಶಾಲಿಯುಟ್ಟ ಓಣಿಗುಂಟ
ಪೋರಿಯೆಷ್ಟು ಮಾಡುತಿ ಮುರಕ
ನೀರ್ ತರಿಪಂಗ ನಿರಗಿ ಒದ್ದು ನಾರಿ ನಡೆವುದು ನಾಜೂಕಾ
ಆನಿ ನಡಿದಂಗ ಮಾಡಿ ಸಿಂಗಾರ
ಮೈಮ್ಯಾಲ ಬಂಗಾರ ಬಿದ್ದಂಗ ಬೆಳಕ ॥

ಸ್ವರಕ್ಕೂ ಸೇರದೆ ವ್ಯಂಜನಕ್ಕೂ ಸೇರದೆ ಆಯೋಗವಾಹದಂತೆ ಕಡೆಗುಳಿವ ಬಾಲಕವರ್ಗದ ಜನಪದ ಸಾಹಿತ್ಯದ ಮೆರುಗೇ ಬೇರೆ.

ಗುಡುಗುಡು ಮುತ್ಯಾಬಂದ ।
ಸಜ್ಜೀ ರೊಟ್ಟಿ ತಂದಾ ।
ಮಾಡದಾಗ ಇಟ್ಟಾ । ಬೇಡಿದಾಗ ಕೊಟ್ಟ ॥

ಅಕ್ಕಾ ಅಕ್ಕಾ ಭಾವೀನೋಡ ।
ಭಾವೀ ಮ್ಯಾಲಿನ ಗಿಡಾ ನೋಡ
ಗಿಡದ ಮ್ಯಾಲಿನ ಕಾಯೀ ನೋಡ
ಕಾಯಿ ತಿಂದವರ ಬಾಯೀ ನೋಡ ॥

ಇಂಥ ವೈವಿಧ್ಯಮಯ ಜನಪದ ಸಾಹಿತ್ಯವನ್ನು ವಿವೇಚಿಸುವುದಕ್ಕೆ ಯಾವ ಲೇಖನ ಕಲೆ ಸಹಾಯಕವಾದೀತು? ನನಗಂತೂ ತಿಳಿದಿಲ್ಲ. ಆದ್ದರಿಂದ ನನ್ನ ಪದ್ಧತಿಯ ಪ್ರಕಾರ, ಪರಿಣಾಮಕಾರಿಯಾಗಿ ಹೇಳಿ, ತಿಳಿಯುವಂತೆ ಮಾಡಬಲ್ಲ ಒಂದು ರೀತಿಯನ್ನು ಹುಡುಕಿಕೊಳ್ಳುವುದೇ ಸೂಕ್ತವೆನಿಸಿದೆ ನನಗೆ.

ಜನಪದ ಸಾಹಿತ್ಯದಲ್ಲಿ ತ್ರಿಪದಿಗಳು, ಲಾವಣಿಗಳು ತಮ್ಮದೇ ಆದ ರೀತಿಯಲ್ಲಿ ಹೊಸಕಾಲದಲ್ಲಿ ಹೊಸ ಹೆಜ್ಜೆ ಹಾಕುತ್ತಲೇ ಬಂದಿವೆ. ಅವುಗಳಿಗೆ ಧಾಟಿ ಹಚ್ಚುವುದಕ್ಕೆ ಸಂಗೀತರತ್ನರೇ ಬೇಕೆನ್ನುವಂತೆಯೂ ಇಲ್ಲ. ಒಗಟು ಒಡೆದು ಗಾದೆಗಳು ಸ್ವಯಂಪ್ರೇರಿತವಾದ ಕಲೆಗಳನ್ನು ತೊಟ್ಟು ನಮ್ಮೆದುರಿಗೆ ಬಂದು ನಿಂತಿವೆ. ಸರ್ವಜ್ಞನ ವಚನವೆನಿಸುವ ಸಾಹಿತ್ಯವೂ ತ್ರಿಪದಿರೂಪದಲ್ಲಿದೆ. ಹೋಳೀ ಹಾಡು, ಹಂತೀಹಾಡು ಸಹ ತ್ರಿಪದಿಗಳೇ ಆಗಿವೆ. ವಾಮನ ರೂಪದಲ್ಲಿದ್ದಾಗ ಮೂರೇ ಪಾದಗಳಿಂದ ಸಮಗ್ರ ಸ್ಥಾನವೇ ಇಲ್ಲದಂತಾಗುತ್ತದೆ.

ಹೆಂಗಸರ ಹಾಡುಗಳಲ್ಲಿ ಸಂಸಾರ ವೇದವನ್ನು ನಾವು ಕಂಡಿದ್ದು ಇತ್ತೀಚಿನ ದಿನಮಾನಗಳಲ್ಲಿ. ಆದರೆ ಗಾದೆ ವೇದಕ್ಕೆ ಸಮಾನವೆಂದು ತೂಗಿ ಹೇಳಿದವರು ಅದೆಷ್ಟು ಶತಮಾನಗಳ ಹಿಂದೆಯಿದ್ದರೋ ಲೆಕ್ಕ ಹಚ್ಚಬೇಕಾಗಿದ್ದೆ. ಇಂದಿನ ಈ ಇಪ್ಪತ್ತನೇ ಶತಮಾನವು, ನಮಗಾಗಿ ನವ ಮನ್ವಂತರವನ್ನು ತಂದಿಳಿಸಿದೆ. ಅದರಲ್ಲಿ ಸುಪ್ರಮಾನಸ ತತ್ತ್ವವು ಕಿರೀಟಕ್ಕಿಟ್ಟ ತುರಾಯಿ ಆಗಿದೆ. ಆದರೇನು? ಅದೊಂದು ಅಡುಗೆಯಲ್ಲಿ ಬಳಸಲೇ ಬೇಕಾದ ಉಪ್ಪಿನ ಜಾತಿಯೆಂದು ತೋರುತ್ತದೆ. ಈವರೆಗೆ ಉಪ್ಪಿಲ್ಲದ ಅಡಿಗೆಯುಣ್ಣುತ್ತ ಬಂದ ರೂಢಿ ನಮ್ಮ ಮೈಗೂಡಿದೆ. ೧೨ನೇ ಶತಮಾನದಲ್ಲಿ ಶಿವಶರಣರು ಹೂಡಿಧ ಹೂಟಕ್ಕೂ, ೨೦ನೇ ಶತಮಾನದಲ್ಲಿ ಗಾಂಧಿ ಆಡಿದ ಆಟಕ್ಕೂ 'ಸುಪ್ರಮಾನಸ' ಉಪ್ಪು ಸೇರಿಸಲು ಸಾಧ್ಯವಾಗಿದ್ದರೆ ಪರಿಣಾಮ ಫಲಿತಾಂಶಗಳು ಬೇರೆಯಾಗಿಯೇ ನಮ್ಮುಡಿಯಲ್ಲಿ ಬೀಳುತ್ತಿದ್ದವೇನೋ.

೧೨ನೇ ಶತಮಾನದ್ದು ಬೆಳಸಿಯ ಸುಗ್ಗಿ ೨೦ನೇ ಶತಮಾನದಲ್ಲಿ ಅದೇ ಬೆಳಸಿಮಾಗಿ ಮುತ್ತಿನ ಜೋಳವಾಗಿ ಮಾರ್ಪಟ್ಟಿದೆ. ಅಂದು ಬೆಳಸಿ

ತಿಂದು, ಸುಪುಷ್ಟರಾದ ಕಥೆ ಸಂಪೂರ್ಣ ಸತ್ಯ. ಆದರೆ ಜೋಳದ ಬೆಳೆ ಸಾರ್ವತ್ರಿಕವಾಗಿ ಕೈಗೆ ಬರಬೇಕಾಗಿದೆ. ತೆನೆ ಬರುವ ಕಾಲಕ್ಕೆ ಅಂದರೆ ಒಕ್ಕಲಿಗನ ತಲೆ ತಿನ್ನುವ ಕಾಲ. ಈ ನಡುಗಾಲವನ್ನು ದಾಟಿದಾಗ ನಾವು ಅದೆಂಥ ಮುಂಬೆಳಗು ಕಾಣುವೆವೋ? ಅದೆಂಥ ಚೆಂಬೆಳಕು ಕಂಗೊಳಿಸುವದೋ ಈಗಲೇ ಹೇಳಲು ಸಾಧ್ಯವಿಲ್ಲ. ಇಚ್ಛಾಶಕ್ತಿಯಿಂದ ಆವರೆಗೆ ಬದುಕುವ ಹೂಣಿಕೆ ತೊಡಬೇಕಾಗಿದೆ. ಆಗ ಈ ಮನ್ವಂತರದ ಅಗಾಧ ಪರಿಣಾಮವು ನಮ್ಮ ಕಣ್ಣನ್ನು ಕುಕ್ಕಿಸಬಹುದು. ಈಗದನ್ನು ಕಲ್ಪಿಸಲಿಕ್ಕೂ ದಿವ್ಯದೃಷ್ಟಿ ಬೇಕಾದೀತು. ಅದಕ್ಕೆ ಬೇಕಾದ ಅರ್ಹತೆಯೆಂದರೆ ಪರಮಾತ್ಮನ ಸ್ನೇಹ, ಸ್ನೇಹಭಕ್ತಿ, ಅದು ಅರ್ಜುನನಲ್ಲಿತ್ತು. ಅಂತೆಯೇ ಆತನು ವಿಶ್ವರೂಪದರ್ಶನ ಪಡೆಯುವುದಕ್ಕೆ ಬೇಕಾಗುವ ದಿವ್ಯದೃಷ್ಟಿಯನ್ನು ಆಯಾಚಿತವಾಗಿ ಗಳಿಸಿದನಲ್ಲವೇ?

'ಇಂದಿನ ಶರಣರು ಹಿಂದೆ ಇರಲಿಲ್ಲವೇನಯ್ಯ? ಮುಂದೆಯೂ ಇರಲಾರರೇನಯ್ಯ' ಎಂದು ಬಸವಣ್ಣನವರು ಹೇಳಿದರು, ಅದರಂತೆ -

'ಈ ಜಗತ್ತಿನಲ್ಲಿ ಯಾವ ಯಾವ ಕಾಲಕ್ಕೆ ಯಾವ ಯಾವ ವಸ್ತುಗಳ ಅಗತ್ಯವಿತ್ತೋ ಅದನ್ನು ಪೂರಯಿಸುವುದಕ್ಕೆ ನಾವೆಲ್ಲರೂ ಕೂಡಿ ಈ ಲೋಕಕ್ಕೆ ಹಲವಾರು ಸಾರೆ ಬಂದಿದ್ದೇವೆ' ಎಂದು ಶ್ರೀಮಾತೆಯವರು ಹೇಳಿದ್ದುಂಟು.

ಹೀಗೆ ೧೨ನೇ ಮತ್ತು ೨೦ನೇ ಶತಮಾನಗಳಲ್ಲಿ ಬಂದವರು ಒಂದೇ ಗುಂಪಿನವರೆಂದು ಹೇಳಬಹುದಲ್ಲದೇ? ಇಂದು ಅತ್ಯಾಶ್ಚರ್ಯಕ್ಕೆ ಈಡು ಮಾಡುವ ಅನೇಕ ಸೂಕ್ತಿಗಳು ೧೨ನೇ ಶತಮಾನದಲ್ಲಿಯೂ ಬೇರೊಂದು ರೂದಪಲ್ಲಿ ಬಂದಿದ್ದವೆಂದು ಹೇಳಬಹುದು.

ಊರೆಲ್ಲ ನೆಂಟರು ಕೇರೆಲ್ಲ ಬಳಗವು
ಧಾರುಣಿಯಲ್ಲ ದೈವತವು । ಆಗಿರಲು
ಯಾರನ್ನು ಬಿಡಲೋ ಸರ್ವಜ್ಞ ॥

ಈ ತ್ರಿಪದಿಯನ್ನು ದನಗಾಯಿಗಳೂ ಬಲ್ಲರು. ಆದರೆ ಅದರಲ್ಲಿ ಹುದುಗಿರುವ ಹುರುಳನ್ನು ಹಿಸುಕಿ ನೋಡುವರೆಷ್ಟು ಜನ? ಹೇಳಬಹುದೇ?

'ಧಾರುಣಿಯೆಲ್ಲ ದೈವತವಾಗಿ ಕಾಣುವುದು' ಈಶಾವಾಸ್ಯಮಿದಂ ಸರ್ವಂ ಎಂದು, ಅದೇ ಮಾತನ್ನು ಉಪನಿಷತ್ತು ಹೇಳುತ್ತದೆ. ಪ್ರತಿಯೊಂದು ವಸ್ತುವು ಪರಮಾತ್ಮನ ವಾಸಸ್ಥಳವೆಂದು ಬೇರೊಂದು ಉಪನಿಷತ್ತು ಸಾರಿದೆ.

ಸರ್ವಜ್ಞನು ಆ ಸ್ಥಿತಿಯನ್ನು ಪಡೆಯುವುದಕ್ಕೆ ಯಾವ ಸಾಧನೆಯನ್ನು ಅನುಸರಿಸಿದನೋ ತಿಳಿಯದು. ಆ ವಿಧಾನವನ್ನು ಶ್ರೀ ಅರವಿಂದರು ಇಂದು ಒಂದು ಪ್ರಾರ್ಥನಾ ರೂಪದಲ್ಲಿ ಹೇಳುತ್ತಾರೆ -

ಓಂ ಶ್ರೀ ಅರವಿಂದೋ ಮೀರಾ,
ಓಪನ್ ಮಾಯ್‌ಮಾಯಿಂಡ್ ಟು ಯುವರ್ ಲೈಟ್
ಓಪನ್ ಮಾಯ್ ಹಾರ್ಟ್ ಟು ಯುವರ್ ಲವ್ಹ್
ಓಪನ್ ಮೈ ಲೈಫ್ ಟು ಯುವರ್ ಪಾವರ್
ಇನ್ ಆಲ್ ಥಿಂಗ್ಸ್ ಐಯಾಂ ಮೇ ಸೀ ದಿ ಡಿವ್ಹಾಯ್ನ

ಧಾರುಣಿಯೆಲ್ಲ ದೈವತವಾಗಿ ಕಾಣುವುದಕ್ಕೆ ಇಂದು ನಮಗೊಂದು ಸಾಧನಾ ಮಾರ್ಗವು ಸಿಕ್ಕಿದೆ -

ನನ್ನ ಮನಸ್ಸನ್ನು ನಿನ್ನ ಜ್ಞಾನಜ್ಯೋತಿಯತ್ತ, ನನ್ನ ಹೃದಯವನ್ನು ನಿನ್ನ ದಿವ್ಯ ಪ್ರೇಮದತ್ತ, ಎನ್ನ ಪ್ರಾಣವನ್ನು ನಿನ್ನ ಅಜೇಯ ಬಲದತ್ತ ತೆರೆದಿರಿಸು.

ಅದರಿಂದಾಗುವ ಪರಿಣಾಮನೆಂದರೆ, ಎಲ್ಲ ವಸ್ತುಗಳಲ್ಲಿಯೂ ನಾನು ನಿನ್ನನ್ನು ಕಾಣುವೆನು.

ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ, ಸಾಹಿತ್ಯ ಎಲ್ಲರಿಗೂ ಇಲ್ಲ ಜನಪದ ಸಾಹಿತ್ಯವೇ ಇರಲಿ, ವಿಶಿಷ್ಟ ಸಾಹಿತ್ಯವೇ ಇರಲಿ ಸಾಹಿತ್ಯವು ಎಲ್ಲರಿಗೂ ಲಭ್ಯವಾಗಬೇಕಾದರೆ, ಸಾಹಿತ್ಯವನ್ನು ವಿಶಿಷ್ಟ ರೀತಿಯಿಂದ ಕಾಣುವದಕ್ಕೆ ರೂಢಿಸಬೇಕು, ಅದು ಸಾಧನೆಯಾಗಬೇಕು.

ಆಗ 'ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ' ಎನ್ನುವ ವಿಲಗವು ನಮ್ಮನ್ನು ಬಿಟ್ಟು ತೊಲಗುತ್ತದೆ.

೫೦. ಬಹು ದಶಕಗಳ ಸ್ನೇಹಿತರು

ನನ್ನೆಣಿಕೆಯಲ್ಲಿ ಸ್ನೇಹಿತನೆಂದರೆ ತಾಯಿಯ ವಾತ್ಸಲ್ಯ ಮತ್ತು ಕೈಹಿಡಿದವಳ ನಲುಮೆ ಇವುಗಳ ಓಗರ. ನನ್ನ ಜೀವಮಾನದಲ್ಲಿ ಸಂಗಳಿಸಿದ ಸ್ನೇಹಿತರು ಅನಿಮಿತ್ತ ಬಂಧುಗಳೇ ಆಗಿದ್ದಾರೆ. ಹತ್ತಲ್ಲ, ಇಪ್ಪತ್ತಲ್ಲ, ನಲ್ವತ್ತು ಅರವತ್ತು ವರ್ಷಗಳವರೆಗೆ ಸ್ನೇಹವು ಬತ್ತದ ತೊರೆಯಾಗಿ ಬಂದುದೇ ಅದರ ತಾಳಿಕೆ-ಬಾಳಿಕೆಯ ಗುಣಧರ್ಮವನ್ನು ಹೇಳಿಕೊಡುತ್ತದೆ. ತಾಯಿಯಲ್ಲಿ ಹೆಂಡತಿಯಲ್ಲಿ ಮರ್ಯಾದೆಗಾಗಿ ಬಚ್ಚಿಡಬೇಕಾದ ಸಂಗತಿಗಳು ಕೆಲವು ಇರುವುದುಂಟು. ಆದರೆ ಸ್ನೇಹಿತರಲ್ಲಿ ಬಚ್ಚಿಡಬೇಕಾದ ವಿಷಯವೇ ಇರಲಾರದು. ಒಂದು ವೇಳೆ ಅದು ಇದ್ದುದೇ ಆದರೆ, ಅದು ಸ್ನೇಹಾಂಶದ ಕೊರತೆಯನ್ನೇ ತೋರಿಸಿಕೊಡುತ್ತದೆನ್ನುವುದು ನಿರ್ವಿವಾದ.

ಹೆಂಡತಿಯ ಮಟ್ಟಿಗಿದ್ದ ಕುಟುಂಬ ವ್ಯಾಪ್ತಿಯು, ಮನೆತನವನ್ನು ವ್ಯಾಪಿಸಿಯೂ, ಕುಟುಂಬವೇ ಅನಿಸುವಂತೆ, ಮಿತ್ರವೃಂದದಲ್ಲಿ ಅದು ದಾಂಗುಡಿಯಿಟ್ಟಾಗ ಅದು ನಾಡಕುಟುಂಬವೋ ದೇಶ ಕುಟುಂಬವೋ ಅನಿಸಬಲ್ಲದು. ಅದು ವಿಶ್ವ ಕುಟುಂಬದತ್ತ ಸಾಗಿದ ದಾರಿಯಲ್ಲದೆ ಮತ್ತೇನು?

ಸಖ್ಯಕ್ಕೆ ಸಮಾನ ಶೀಲವೇ ಮುಖ್ಯವಲ್ಲದೆ ಜಾತಿ, ಶಿಕ್ಷಣ, ಅಧಿಕಾರಗಳು ಮುಖ್ಯವೆನಿಸಲಾರವು. ಸಮಾನಶೀಲತೆಯ ಮುಂದೆ ಅದು ಮರೆಗೋಡುತ್ತವೆ. ಸ್ನೇಹವೇ ಬಾಂಧವ್ಯದ ತಳಹದಿಯಾಗುತ್ತದೆ. ಪ್ರಯೋಜನಕ್ಕಾಗಿ ಸ್ನೇಹಸಂಪಾದನೆ ಆಭಾಸ ಮಾತ್ರ. ಸ್ವಾಸ್ಥ್ಯ ಸಂಪಾದನೆಗೆ

ಔಷಧಿಗಿಂತ ಪಥ್ಯವೇ ಹೆಚ್ಚು ಪ್ರಯೋಜನಕಾರಿ, ಅಪಥ್ಯಕ್ಕಿಂತ ಉಪವಾಸವೇ ಒಳ್ಳೆಯದೆಂದು ಹೇಳಬಹುದು. ಅಪಥ್ಯವು ಔಷಧಿಯಲ್ಲಿ ನಂಜು ಹುಟ್ಟಿಸುತ್ತದೆ. ಆದರೆ ಲಂಘನವು ಪರಮೌಷಧಿಯಾಗಿ ಪರಿಣಮಿಸುತ್ತದೆ. ನಿರ್ವಾಜ ಸ್ನೇಹವು ಸ್ವಯಂ ಸ್ವಾಸ್ಥ್ಯವಾಗಿದೆ. ನನ್ನ ಬಾಳಿಗೆ ನಿರ್ವಾಜ್ಯ ಸ್ನೇಹವನ್ನು ಒದಗಿಸಿ ಅದನ್ನು ಪರ್ಯಾಯವಾಗಿ ಅಣಿಗೊಳಿಸಿದ ಸ್ನೇಹಿತರ ಹೆಸರುಗಳನ್ನು ಕೊಟ್ಟಿದ್ದೇನೆ.

೧. ಡಿ.ಸಿ.ವಿ. ಗಿಡ್ನವರ ೧೯೨೫-೧೯೮೬ವರೆಗೆ ೬೩ ವರ್ಷಗಳ ಸ್ನೇಹ. ಊರು ಯಮಕನ ಮರಡಿ (ಬೆಳಗಾವಿ ಜಿಲ್ಲೆ) ತಹಶೀಲದಾರ, ಎ.ಸಿ. ಅಧಿಕಾರಿಗಳು.

೨. ದಿ.ಯಂಕಂಚಿ ರಾಮಣ್ಣ ಕಪ್ಪಡ ವ್ಯಾಪಾರಿ, ಚಡಚಣ ಜಿ ವಿಜಾಪುರ, ನಾಟ್ಯರಂಗ ಹವ್ಯಾಸ, ೧೯೨೮-೧೯೮೦ - ೬೦ ವರ್ಷ.

೩. ದಿ.ಬಿ.ಡಿ. ಅಕ್ಕಿ ವಿಜಾಪುರ ಬಿ.ಎ. ಎಲ್.ಎಲ್.ಬಿ. ಲಕ್ಷಾಧೀಶರು ಸಾಹಿತ್ಯ ಕಲಾ ಅಧ್ಯಾತ್ಮ ಪ್ರೇಮಿ ೧೯೨೨-೧೯೮೫ - ೬೪ ವರ್ಷ.

೪. ದಿ. ಚೆನ್ನಮಲ್ಲಪ್ಪ ಹಲಸಂಗಿ (ಮಧುರಚೆನ್ನ) ವರಕವಿ, ಶ್ರೇಷ್ಠ ಅಧ್ಯಾತ್ಮಿ ೧೯೧೨-೧೯೫೩ - ೪೧ ವರ್ಷ.

೫. ದಿ.ದ.ರಾ. ಬೇಂದ್ರೆ ಎಂ.ಎ. ಅಂಬಿಕಾತನಯದತ್ತ, ಧಾರವಾಡ, ದೃಷ್ಟಾರ ಕವಿ, ಪರಮ ಆಧ್ಯಾತ್ಮಿ ೧೯೨೫-೧೯೮೫, ೬೦ ವರ್ಷ.

೬. ದಿ. ವಿನೀತರಾಮಚಂದ್ರ ಬಿ.ಎ. ಧಾರವಾಡ ಕವಿ ಹಾಗೂ ಪ್ರದೀಪ ಸಂಪಾದಕರು ಸಾಹಿತಿ ಆಧ್ಯಾತ್ಮಿ ೧೯೨೫-೧೯೮೦ - ೬೦ ವರ್ಷ.

೭. ದಿ. ಪ್ರಾಧ್ಯಾಪಕ ಎಸ್.ಎಸ್. ಮಾಳವಾಡ ಧಾರವಾಡ ಶ್ರೇಷ್ಠ ವಿಮರ್ಶಕ ಹಾಗೂ ಸಾಧಕರು, ೧೯೩೭-೧೯೮೬, ೫೦ ವರುಷ.

೮. ದಿ.ಎಂ.ಆರ್. ಜಹಗೀರದಾರ ಎಂ.ಎ. ಬಿ.ಟಿ., ಅಗರಖೇಡ, ಆಧ್ಯಾತ್ಮ ಸಾಧಕರು, ಅಗ್ರಗಣ್ಯ ಶಿಕ್ಷಕರು, ೧೯೫೩-೧೯೮೮ - ೫೩ ವರುಷ.

೯. ದಿ. ಗುರುಪಾದಪ್ಪಣ್ಣ ಜೇಕಂಕಲಗಿ - ವ್ಯಾಪಾರಿಗಳು ಹಾಗೂ ಸಾಧಕರು, ೧೯೨೧-೧೯೪೮ - ೨೭ ವರುಷ.

೧೦. ಕಾಪಸೆ ರೇವಪ್ಪ ಹಲಸಂಗಿ ಕಲಾವಿದ ಹಾಗೂ ಸಾಹಿತಿ - ೧೯೨೩-೧೯೪೧ - ೧೮ ವರ್ಷ.

೧೧. ಪ್ರಾ। ರಂ. ಶ್ರೀ ಮುಗಳಿ ಎಂ.ಎ., ಬಿ.ಟಿ. ಬೆಂಗಳೂರು, ವಿಮರ್ಶಕ, ಸಾಹಿತಿ ೧೯೨೬ - ಈವರೆಗೆ ೬೨ ವರುಷ

೧೨. ಶ್ರೀ ಎಂ.ಪಿ. ಪಂಡಿತ ಸೆಕ್ರೆಟರಿ ಶ್ರೀ ಅರವಿಂದ ಆಶ್ರಮ ಪಾಂಡಿಚೇರಿ ೧೯೪೨ - ಈವರೆಗೆ ೪೬ ವರುಷ.

೧೩. ಪ್ರಿನ್ಸಿಪಾಲ ಎನ್.ಜಿ. ಕರೂರ ಬಿ.ಎಡ್. ಕಾಲೇಜ, ವಿಜಾಪುರ ೧೯೪೨-ಈವರೆಗೆ, ೪೬ ವರುಷ.

೧೪. ಶ್ರೀಯಳಸಂಗಿ ಕಲ್ಲಣ್ಣ ಸಾಲೊಟಗಿ, ಕ.ಜಾನಪದ ಅಕಾಡೆಮಿ ಸದಸ್ಯ, ೧೯೪೨-ಈವರೆಗೆ - ೪೬ ವರುಷ.

೧೫. ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ ಬೀದರ ಶಿಕ್ಷಕರು ಲೇಖಕರು, ೧೯೬೩ - ಈವರೆಗೆ, ೨೫ ವರುಷ.

೧೬. ಶ್ರೀ ಎನ್. ಸೀತಾರಾಮಪ್ಪ ನೆಹರು ಯುವಕ ಕೇಂದ್ರ ಬೀದರ, ಮಾಜಿ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ೧೯೭೫ - ಈವರೆಗೆ ೧೩ ವರುಷ.

೧೭. ಪ್ರಾಧ್ಯಾಪಕ ಎಚ್.ಟಿ. ಸಾಸನೂರ ವಿಜಾಪುರ ವಿಮರ್ಶಕ, ಸಾಹಿತಿ, ೧೯೨೮ - ಈವರೆಗೆ - ೬೦ ವರುಷ.

೧೮. ಶ್ರೀ ಹಣಮಂತಪ್ಪ ಪಾಟೀಲ ಎಂ.ಎ. ಎಲ್.ಎಲ್.ಬಿ 'ಜನಪರ' ಸಂಪಾದಕ, ಬೀದರ ೧೯೬೩ - ಈವರೆಗೆ ೨೫ ವರ್ಷ.

೧೯. ಶ್ರೀ ರೇ.ಗು. ನಿಂಬರಗಿ ನಿವೃತ್ತ ಶಿಕ್ಷಕರು ಬೆನಕನಹಳ್ಳಿ, ಸ್ನೇಹಜೀವಿ ೧೯೩೧ - ಈವರೆಗೆ

೧೯. ಪ್ರೊ|| ಎಸ್.ಎಸ್. ಭೂಸರೆಡ್ಡಿ ಕ.ವಿ. ವಿದ್ಯಾಲಯ ಧಾರವಾಡ, ೧೯೬೮ - ಈವರೆಗೆ

೨೦. ಶ್ರೀ ತ್ರ್ಯಂಬಕರಾವ ಘಂಟೋಜಿ, ವ್ಯಾಪಾರಿಗಳು ಕಲಬುರ್ಗಿ ಸಾಧಕರು ೧೯೬೦ - ಈವರೆಗೆ.

ಮೇಲ್ಕಾಣಿಸಿದ ಸ್ನೇಹಿತರೊಡನೆ ನನ್ನ ಸ್ನೇಹವಾಗಲಿ ನನ್ನೊಡನೆ ಅವರ ಸ್ನೇಹವಾಗಲಿ ತ್ರಿಕರಣ ಪೂರ್ವಕವಾದದ್ದು. ಅಷ್ಟೇ ಸ್ನೇಹವಲ್ಲದೆ ಇನ್ನಾವು ಉದ್ದೇಶವೂ ಇರಲಿಲ್ಲ. ಇಲ್ಲಿ ಮನ ಒಂದಾಗಿದ್ದರಿಂದ ಮನೆಯೂ ಒಂದಾಯಿತು. ಮನೆ ಒಂದಾಗಿದ್ದರಿಂದ ಮನೆಯವರೂ ಒಂದಾದೆವು. ಮನೆತನ ಕುಟುಂಬದಿಂದ ವಿಶ್ವ ಕುಟುಂಬದ ದಾರಿಯಲ್ಲಿ ನಡೆದೆವು. ನಿರೀಕ್ಷಿಸಿದಷ್ಟು ಪ್ರತಿಫಲ ಅಲ್ಲ, ಗೆಲುವು ಪಡೆದೆವೆಂದು ಹೇಳಲಿಕ್ಕಾಗದಿದ್ದರೂ ಅದರ ದರ್ಶನ ಮಾತ್ರ ಆಯಿತೆಂದು ಅನುಮಾನವಿಲ್ಲದೆ ಹೇಳಬಹುದು.

ನೂರು ವರ್ಷಗಳ ತರಬೇತಿ ಕೇಂದ್ರದಲ್ಲಿ ಒಂದು ತರಗತಿಯಲ್ಲಿ ನಾವು ಸಹಪಾಟಿಗಳಾಗಿರುವುದೇ ಒಂದು ಗೆಲುವಿನ ಕುರುಹು. ಕುಸ್ತಿಯಲ್ಲಿ ಗೆಲ್ಲುವುದಕ್ಕಿಂತ ಕುಸ್ತಿಯಲ್ಲಿ ಸಹಭಾಗಿಯಾಗಿದ್ದೇ ಮಹಾನ್ ಭಾಗ್ಯವೆಂದು ತಿಳಿದಿದ್ದೇನೆ. ಅಂಥ ಸಂದರ್ಭವೊದಗಿದಾಗಲೇ ಗೆಲುವಿನ ತತ್ತಿ ಕಾಣಿಸಿ ಕೊಂಡಿತೆಂದು ಹೇಳಬಹುದು. ತತ್ತಿ ಮರಿಯಾಗಬೇಕಾಗಿದೆ, ಮರಿಯಾಗ ಗೊಡಬೇಕಾಗಿದೆ, ಅಷ್ಟೇ.

ಪರಿಶುದ್ಧ ಮನದ ಪರಮ ಮಿತ್ರರು ಅದೆಷ್ಟು ದೂರದಲ್ಲಿದ್ದರೂ ಹತ್ತಿರವೇ ಇದ್ದ ಹಾಗೆ. ಆದರೆ ಸಂಬಂಧವಿರಬೇಕು, ಸಂಪರ್ಕವಿರಬೇಕು. ನವವಿಧ ಭಕ್ತಿಗಳಲ್ಲಿಯೇ ಸ್ನೇಹಭಕ್ತಿಗೆ ಒಂದು ವೈಶಿಷ್ಟ್ಯವಿದೆ. ಅಂಥ ಭಕ್ತಿ ಅರ್ಜುನನದು ಅಂತೆಯೇ ಅವನಿಗೆ ಶ್ರೀ ಕೃಷ್ಣನು ಸ್ನೇಹಿತನಾದನ್ನು ಆ ಪರಮಾತ್ಮನು ತಾನಾಗಿ ಒಲಿದು ಬಂದು ಅರ್ಜುನನಿಗೆ ವಿಶ್ವರೂಪ ತೋರಿಸಲು ಅನುವಾದನು. ಇಡಿಯ ಜೀವನ ವೇದಗಳನ್ನು ಪಾರಾಯಣ ಮಾಡಿದವರಿಗೂ ದುಲಣುವಾದ ಹಲವಾರು ವರ್ಷತಪಸ್ಸು ಮಾಡಿದ ಸಾಧಕರಿಗೂ ಸಮನಿಸಿದ ವಿಶ್ವರೂಪ ದರ್ಶನದ ಅರ್ಹತೆ ಅರ್ಜುನನಿಗೆ

ಏಕೆ ಬಂತು? ಅವನು ಶ್ರೀ ಕೃಷ್ಣನನ್ನು ಪರಮಾತ್ಮನೆಂದು ಬಗೆದಿದ್ದನು. ಪರಮಮಿತ್ರನೆಂದು ಭಾವಿಸಿದ್ದನು. ಮಹಾಪ್ರಖರತರವಾದ ವಿಶ್ವರೂಪವನ್ನು ನೋಡುವುದಕ್ಕೆ ಸಮರ್ಥ ನೇತ್ರಗಳನ್ನು ಸಹ ಅರ್ಜುನನಿಗೆ ಕೇಳದಿದ್ದರೂ ಶ್ರೀ ಕೃಷ್ಣನು ಕೊಡ ಮಾಡಿದನು. ಇದು ಸ್ನೇಹ ಸ್ನೇಹಿತರ ಸಂಬಂಧದ ಸಿದ್ಧಿಯಲ್ಲವೇ? ಸಹ ಮತದ ಸ್ನೇಹ ಜೀವಿಗಳು ಕನಿಷ್ಠ ೧೨ ಜನ ಕೂಡಿ, ಏಕೋಭಾವವನ್ನು ಅಣಿಗೊಳಿಸಿ ಕೊಂಡರೆ, ಅದು ಸಫಲಗೊಳ್ಳದೆ ಇರಲಾರದೆಂದು ಶ್ರೀಮಾತೆಯವರು ಹೇಳುತ್ತಾರೆ. ನಾನು ಗಳಿಸಿಕೊಂಡ ಸ್ನೇಹಿತರ ಏಕೋಭಾವದ ಸಹಾನುಭೂತಿ - ಸಾನುಭೂತಿಗಳಿಂದ ಸಾಧ್ಯವಾದ ಸಿದ್ಧಿಯು ಗಮನೀಯವಾಗಿದೆ. ಗಣನೀಯವೂ ಆಗಿದೆ. ಅದು ಏಕೋಭಾವದ ಫಲ. ಆ ಫಲವೇ ದೇವರು ಕೊಟ್ಟ ವರವೆನಿಸುತ್ತದೆ.

ಸ್ನೇಹದಲ್ಲಿ ಸ್ನೇಹವೇ ಕೂಡಿದರೆ, ಸ್ನೇಹವೇ ಉಂಟಾಗುವಂತೆ ಮತ್ತು ಸ್ನೇಹದಲ್ಲಿ ಸ್ನೇಹವನ್ನೇ ಕಳೆದರೆ ಸ್ನೇಹವೇ ಉಳಿಯುತ್ತದೆ. ಈ ಸೂತ್ರವನ್ನು ಸುಸೂತ್ರವಾಗಿ ಅಳವಡಿಸಿಕೊಳ್ಳುವದರ ಸಲುವಾಗಿಯೇ ಸ್ನೇಹಿತರ ಸಾಂಗತ್ಯವುಂಟಾಗಿದೆ. ಈ ಜಗತ್ತಿನಲ್ಲಿ ಇರಬೇಕಾದುದೆಲ್ಲವೂ ಇದೆ. ಆದರೆ ಅದು ಇರಬೇಕಾದ ಸ್ಥಳದಲ್ಲಿ ಇಲ್ಲ ಅದನ್ನು ಸರಿಪಡಿಸಿ ಅಳವಡಿಸಿ ಕೊಳ್ಳುವುದೇ ಸ್ನೇಹದ ಗುರಿ, ಸ್ನೇಹಕ್ಕೆ ಸ್ನೇಹವೇ ಸಿದ್ಧಿ.

ಕನ್ನಡದಲ್ಲಿ ಲೇಖಕ-ಪ್ರಕಾಶಕ-ಮಾರಾಟಗಾರ-ಓದುಗರ ನಡುವೆ ಗಾಢ ಸಂಬಂಧವನ್ನು ಏರ್ಪಡಿಸಿ, ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಬೆಳೆಸಿ, ಓದುಗರಿಗೆ ಒಳ್ಳೆಯ ಪುಸ್ತಕಗಳು ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು, ಕನ್ನಡ ಪುಸ್ತಕೋದ್ಯಮವನ್ನು ಜನಪರವಾಗಿ ಬೆಳೆಸುವುದು - ಇದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಮುಖ ಧ್ಯೇಯೋದ್ದೇಶಗಳಲ್ಲಿ ಒಂದು. ಈಗಾಗಲೆ ಪ್ರಕಟವಾಗಿ ಮನ್ನಣೆಗಳಿಸಿ, ಈಗ ಲಭ್ಯವಿಲ್ಲದಿರುವ ಪುಸ್ತಕಗಳನ್ನು 'ಜನಪ್ರಿಯ ಪುಸ್ತಕ ಮಾಲೆ'ಯಲ್ಲಿ ಪ್ರಕಟಿಸಿ ಸುಲಭ ಬೆಲೆಗೆ ಪ್ರಾಧಿಕಾರವು ಓದುಗರ ಕೈಯಲ್ಲಿಡುತ್ತಿದೆ. ನಿನ್ನೆ-ಇಂದುಗಳ ನಡುವಣ ಒಂದು ಸೇತುವೆ 'ಜನಪ್ರಿಯ ಪುಸ್ತಕ ಮಾಲೆ'.